ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಸಾಹಿತ್ಯ–ಸಾಂಸ್ಕೃತಿಕ ನಕಾಶೆಯ ವಿಭಿನ್ನ ಆಯಾಮಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ
ಮಹಾಪ್ರಬಂಧ

ಸಂಶೋಧನಾ ವಿದ್ಯಾರ್ಥಿ
ಜಾಧವ ಅಪ್ಪು ಜಗನು
(ನೋಂದಣಿ ಸಂಖ್ಯೆ: **KVMB-00143**)

ಮಾರ್ಗದರ್ಶಕರು
ಡಾ. ಡಿ. ಮಂಗಳಾ ಪ್ರಿಯದರ್ಶಿನಿ
ಪ್ರಾಂಶುಪಾಲರು (ನಿ)
ವಿದ್ಯಾವರ್ಧಕ ಸಂಘ ಪ್ರಥಮ ದರ್ಜೆ ಕಾಲೇಜು,
ಬಸವೇಶ್ವರ ನಗರ, ಬೆಂಗಳೂರು

ಮಾನ್ಯತಾ ಸಂಸ್ಥೆ :
ಕಾವ್ಯಮಂಡಲ
ಬೆಂಗಳೂರು

2017

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಸಾಹಿತ್ಯ–ಸಾಂಸ್ಕೃತಿಕ ನಕಾಶೆಯ ವಿಭಿನ್ನ ಆಯಾಮಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ
ಮಹಾಪ್ರಬಂಧ

ಸಂಶೋಧನಾ ವಿದ್ಯಾರ್ಥಿ
ಜಾಧವ ಅಪ್ಪು ಜಗನು
(ನೋಂದಣಿ ಸಂಖ್ಯೆ: **KVMB-00143**)

ಮಾರ್ಗದರ್ಶಕರು
ಡಾ. ಡಿ. ಮಂಗಳಾ ಪ್ರಿಯದರ್ಶಿನಿ
ಪ್ರಾಂಶುಪಾಲರು (ನಿ)
ವಿದ್ಯಾವರ್ಧಕ ಸಂಘ ಪ್ರಥಮ ದರ್ಜೆ ಕಾಲೇಜು,
ಬಸವೇಶ್ವರ ನಗರ, ಬೆಂಗಳೂರು

ಮಾನ್ಯತಾ ಸಂಸ್ಥೆ :
ಕಾವ್ಯಮಂಡಲ
ಬೆಂಗಳೂರು

2017

ಘೋಷಣಾ ಪತ್ರ

ಕನ್ನಡ ಸಾಹಿತ್ಯ-ಸಾಂಸ್ಕೃತಿಕ ನಕಾಶೆಯ ವಿಭಿನ್ನ ಆಯಾಮಗಳು ಎಂಬ ಶೀರ್ಷಿಕೆಯ ಸಂಶೋಧನಾ ಪ್ರಬಂಧವನ್ನು ಡಾ.ಡಿ.ಮಂಗಳಾ ಪ್ರಿಯದರ್ಶಿನಿ, ಪ್ರಾಂಶುಪಾಲರು ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟವಾಗಿಲ್ಲ ಎಂದು ದೃಢೀಕರಿಸುತ್ತೇನೆ.

ಸ್ಥಳ : ಬೆಂಗಳೂರು
ದಿನಾಂಕ : 29.11.2017

ಜಾಧವ ಅಪ್ಪು ಜಗನು
ಸಂಶೋಧನಾ ವಿದ್ಯಾರ್ಥಿ
ಕಾವ್ಯಮಂಡಲ,
ಬೆಂಗಳೂರು

ಮಾರ್ಗದರ್ಶಕರ ಪ್ರಮಾಣಪತ್ರ

ಜಾಧವ ಅಪ್ಪು ಜಗನು ಅವರು ನನ್ನ ಮಾರ್ಗದರ್ಶನದಲ್ಲಿ **ಕನ್ನಡ ಸಾಹಿತ್ಯ–ಸಾಂಸ್ಕೃತಿಕ ನಕಾಶೆಯ ವಿಭಿನ್ನ ಆಯಾಮಗಳು** ಎಂಬ ಸಂಶೋಧನಾ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಶೋಧನಾ ಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೇ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಬೆಂಗಳೂರು
ದಿನಾಂಕ : 29.11.2017

B. ಮಂಗಳ (signature)

ಡಾ. ಡಿ. ಮಂಗಳಾ ಪ್ರಿಯದರ್ಶಿನಿ
ಪ್ರಾಂಶುಪಾಲರು (ನಿ)
ವಿದ್ಯಾವರ್ಧಕ ಸಂಘ, ಪ್ರಥಮ ದರ್ಜೆ ಕಾಲೇಜು,
ಬಸವೇಶ್ವರ ನಗರ, ಬೆಂಗಳೂರು

ಪರಿವಿಡಿ

	ಅಧ್ಯಾಯಗಳು	ಪು. ಸಂ.
ಅಧ್ಯಾಯ ೧.	ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ	೧–೧೦
ಅಧ್ಯಾಯ ೨.	ಕನ್ನಡ ಸಾಹಿತ್ಯ – ಸಾಂಸ್ಕೃತಿಕ ನಕ್ಷೆ	೧೧–೫೯
ಅಧ್ಯಾಯ ೩.	ಕರ್ನಾಟಕದ ಭಾಷಿಕ ನಕ್ಷೆಗಳು	೬೦–೧೧೦
ಅಧ್ಯಾಯ ೪.	ಕರ್ನಾಟಕದ ಧಾರ್ಮಿಕ ನಕ್ಷೆ	೧೧೧–೨೦೫
ಅಧ್ಯಾಯ ೫.	ಜನಪದ ಸಾಹಿತ್ಯ ಮತ್ತು ಕರ್ನಾಟಕದ ಸಾಂಸ್ಕೃತಿಕ ನಕ್ಷೆ	೨೦೬–೨೫೦
ಅಧ್ಯಾಯ ೬.	ಸಮಾರೋಪ	೨೫೧–೨೫೪
ಅಧ್ಯಾಯ ೭.	ಫಲಿತಗಳು	೨೫೫–೨೫೬
	ಅನುಬಂಧಗಳು	೨೫೭–೨೫೮
	ನಕಾಶೆ	
	ಪರಾಮರ್ಶನ ಗ್ರಂಥಗಳು	೨೫೯–೨೬೫

ಅಧ್ಯಾಯ ೧
ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ದೇವರು, ಪೂಜೆ–ಪುನಸ್ಕಾರ, ಹಬ್ಬ, ಉತ್ಸವ ಮೊದಲಾದ ಶಬ್ದಗಳು ಮನುಷ್ಯನ ದೈನಂದಿನ ಜೀವನದ ಅವಿಭಾಜ್ಯ ಅಂಗಗಳಾಗಿವೆ.. ವರ್ಷದಲ್ಲಿಯ ಮೂರುನೂರಾ ಅರವತ್ತೈದು ದಿನಗಳೂ ಒಂದಿಲ್ಲೊಂದು ರೀತಿಯಲ್ಲಿ ದೇವತೆಗಳಿಗೊ ಅಥವಾ ದೇವತಾ ಸಂಬಂಧಿಯಾದ ವಿಚಾರಗಳಿಗೊ ಸಂಬಂಧಿಸಿರುತ್ತವೆ. ಹಿಂದೂ ಧರ್ಮ ಶಾಸ್ತ್ರದಲ್ಲಿ ಮೂವತ್ತೂರು ಕೋಟಿ ದೇವತೆಗಳನ್ನು ಹೆಸರಿಸಲಾಗಿದೆ. ದೇವತೆಗಳಿಗೂ ಮನುಷ್ಯ ಜೀವನಕ್ಕೂ ಒಂದು ಬಗೆಯ ಅವಿನಾಭಾವ ಸಂಬಂಧವು ಅನಾದಿ ಕಾಲದಿಂದಲೂ ಬೆಳೆದುಕೊಂಡು ಬಂದಿದೆ. ದೇವರ ನಿರ್ಮಾಣ ಹೇಗೆ ಆಯಿತು? ದೇವರ ಕಲ್ಪನೆ ಜನರ ಮನಸ್ಸಿನಲ್ಲಿ ಹೇಗೆ ಅಂಕುರಿಸಿತು? ಎಂಬ ಹಲವಾರು ಪ್ರಶ್ನೆಗಳು ಮನಸ್ಸಿನಲ್ಲಿ ಉದ್ಭವಿಸುವುದು ಸಹಜವಾಗಿದೆ. ಸಂಸ್ಕೃತಿಯ ಆರಂಭವೇ ದೇವತೆಗಳ ಮೂಲಕ ಆಗಿದೆ ಎಂಬುದು ಮಾನವನ ಇತಿಹಾಸದಿಂದ ತಿಳಿದು ಬರುತ್ತದೆ. ದೇವತೆಗಳ ಪೂರ್ವೋತ್ತರಗಳ ಅಧ್ಯಯನದಿಂದ ಸಂಸ್ಕೃತಿಯ ಪ್ರತಿಯೊಂದು ಮಗ್ಗಲುಗಳು ನಮಗೆ ಸ್ಪಷ್ಟವಾಗಿ ಗೋಚರಿಸತೊಡಗುತ್ತವೆ. ಅದರ ಮೂಲಕ ಸಂಸ್ಕೃತಿಯ ಸಮಗ್ರ ರೂಪವು ಸ್ಪಷ್ಟಗೊಳ್ಳುತ್ತದೆ.

ದೇವತೆಗಳ ಬಗೆಗೆ ಶಂ. ಬಾ. ಜೋಶಿಯವರು ಹೀಗೆ ಉಲ್ಲೇಖಿಸುತ್ತಾರೆ. "ಜನರ ಆಸೆ ಆಕಾಂಕ್ಷೆಗಳೇ ಮೈವೆತ್ತು ಅವರವರ ದೈವಗಳಾಗಿರುವುದು ಗೋಚರಿಸುತ್ತದೆ. ಒಂದು ಜನಾಂಗದ ದೇವತೆಗಳು ನಮ್ಮ ಸಂಸ್ಕೃತಿಯೊಳಗಿದ್ದ ದೇವತೆಗಳ ಮೂಲಕ ಆ ಜನರ ಆಸೆ ಆಕಾಂಕ್ಷೆಗಳ ಮೇಲೆ ಬೆಳಕು ಚೆಲ್ಲುತ್ತವೆ. ದೇವತಾ ಕಥೆಗಳಲ್ಲಿ, ಅವುಗಳ ರೂಪಗಳಲ್ಲಿ ನಮ್ಮ ಬದುಕಿನ ತಳಹದಿ ಸಿಗುತ್ತದೆ. ಒಂದು ಜನಾಂಗದ ಸಾಂಸ್ಕೃತಿಕ ಇತಿಹಾಸವು ಆ ಜನಾಂಗದ ದೇವತಾ ಕಥೆಗಳ ಹುಟ್ಟು ಬೆಳವಣಿಗೆಯೊಳಗಿಂದ ಉದಯಗೊಂಡಿದೆ. ದೇವತಾ ವಿಚಾರಗಳ ಬದಲಾವಣೆಗಳಿಂದ ಜನಾಂಗದ ವೈಚಾರಿಕ ಭೂಮಿಕೆಗಳು ಬದಲಾಗುತ್ತವೆ ಮತ್ತು ಬದಲಾವಣೆಗೊಂಡ ದೇವತಾ ರೂಪದಲ್ಲಿ ಅವು ಅಭಿವ್ಯಕ್ತವಾಗತೊಡಗುತ್ತವೆ. ಏಕೆಂದರೆ ಒಂದೊಂದು ಕಾಲದ ದೇವತೆಗಳು ಆ ಕಾಲದ ಜನರ ಜೀವನ ದರ್ಶನದ ಬಾಹ್ಯ ಪ್ರತಿಮಾ ಸಂಕೇತಗಳೇ ಆಗಿರುತ್ತವೆ. ಆರಾಧಿಸುವ ಪ್ರತಿಮೆ ಮತ್ತು ಸಂಕೇತಗಳ ಅರ್ಥ ಹಾಗೂ ಪ್ರತ್ಯಕ್ಷವಾದ ಆಚರಣೆಯಲ್ಲಿ ಅಡಕವಾಗಿರುವ ಅರ್ಥ ಇವುಗಳಲ್ಲಿ ಅಂತರವು ಹೆಚ್ಚುತ್ತಾ ಹೋದಂತೆ ವೈಚಾರಿಕ ಕ್ರಾಂತಿಯ ಅವಶ್ಯಕತೆ ಕಾಣಿಸತೊಡಗುತ್ತದೆ." (ಶಂ. ಬಾ. ಜೋಶಿ, ಕುಲದೇವತಾ ಸಮೀಕ್ಷೆ, ದೀವಿಗೆ ಭಾಗ–೨, ೧೯೬೫,

ಪುಟ- ೨೩೩) ಮನುಷ್ಯನ ವೈಚಾರಿಕ ಶಕ್ತಿಗನುಗುಣವಾಗಿ ದೇವತಾ ರೂಪ ಸೃಷ್ಟಿಯಾಗುತ್ತದೆ ಹಾಗೂ ಆ ದೇವತೆಗಳ ಅಭ್ಯಾಸದಿಂದ ಆ ಸಂಸ್ಕೃತಿಯ ಜೀವನ ಮೌಲ್ಯಗಳ ಸಮಗ್ರ ರೂಪವು ಸ್ಪಷ್ಟವಾಗುತ್ತದೆ ಎಂಬ ಶಂ. ಬಾ. ಅವರ ಹೇಳಿಕೆ ಮಹತ್ವಪೂರ್ಣದ್ದಾಗಿದೆ.

ದಿನ ನಿತ್ಯವೂ ನಮ್ಮ ಕಣ್ಣಿಗೆ ಗೋಚರಿಸುವ ಸೃಷ್ಟಿಯ ವೈವಿಧ್ಯತೆಯ ನಿರ್ಮಾಣದ ಹಿಂದೆ ಯಾವುದೋ ಒಂದು ಅಗಮ್ಯ ಶಕ್ತಿಯ ಕೈವಾಡವಿದೆ ಎಂಬ ಅನಿಸಿಕೆ ಸಹಜವಾಗಿದೆ. ಆ ಅಗಮ್ಯ ಶಕ್ತಿಯಿಂದಲೇ ಎಲ್ಲ ಜೀವಿಗಳ ಸೃಷ್ಟಿ, ಸಾಂಗೋಪನೆ ಹಾಗೂ ಸಂಹಾರಗಳು ನಡೆಯುತ್ತಿರುತ್ತವೆ ಎಂಬ ಶ್ರದ್ಧೆಯು ನಮ್ಮಲ್ಲಿ ಬಲವಾಗಿ ಬೇರೂರಿದೆ. ನಮ್ಮ ಜೀವನದ ಎಲ್ಲ ಆಗು ಹೋಗುಗಳು ಆ ಶಕ್ತಿಯ ಕೃಪೆಯನ್ನು ಅವಲಂಬಿಸಿವೆ. ಆದ್ದರಿಂದ ಆ ಶಕ್ತಿಯನ್ನು ಪ್ರಸನ್ನಗೊಳಿಸಲು ನಾವು ಪ್ರಯತ್ನಿಸುತ್ತೇವೆ. ಅದಕ್ಕಾಗಿಯೇ ಅನೇಕ ಪ್ರಕಾರದ ಪೂಜೆ-ಪುನಸ್ಕಾರಗಳನ್ನು ರೂಢಿಗೆ ತಂದಿದ್ದೇವೆ. ಇದೇ ಪ್ರಕಾರವಾಗಿ ದೇವತಾ ಮೂರ್ತಿಗಳು, ಮಂದಿರಗಳು, ತೀರ್ಥಕ್ಷೇತ್ರಗಳು ನಿರ್ಮಾಣವಾಗಿವೆ. ನಾವೇ ಬೆಳೆಸಿರುವ ಈ ಶ್ರದ್ಧಾ ಕೇಂದ್ರಗಳು ನಮ್ಮ ಜೀವನಕ್ಕೆ ಒಂದು ಬಗೆಯ ವಿಶಿಷ್ಟ ಅರ್ಥವನ್ನು ತಂದು ಕೊಟ್ಟಿವೆ. ನಮಗೆ ದೇವತೆಗಳು ಎಷ್ಟು ಭವ್ಯವೋ ಅಷ್ಟೇ ನಮ್ಮ ಜೀವನವೂ ಭವ್ಯವಾಗಿರುತ್ತದೆ.

ಶ್ರದ್ಧೆಯ ಆಧಾರದ ಮೇಲೆಯೇ ಮನುಷ್ಯ ಜೀವನದ ಎಲ್ಲ ಶುಭ ಕಾರ್ಯಗಳು ನೆರವೇರುತ್ತವೆ. ಶ್ರದ್ಧೆಯಿಲ್ಲದಿದ್ದರೆ ಜೀವನವು ಮರಳುಗಾಡಿನಂತೆ ರುಕ್ಷವಾಗುತ್ತದೆ. ಶ್ರದ್ಧೆಯೆಂಬ ಚಿಲುಮೆಯು ನಿರಂತರವಾಗಿ ಪ್ರವಹಿಸುತ್ತಿದ್ದರೆ ಮಾತ್ರ ಮನುಷ್ಯತ್ವದ ಚೇತನವು ಕಾಂತಿಯುಕ್ತವಾಗುತ್ತದೆ. ನಮ್ಮ ದೈನಂದಿನ ಜೀವನದಲ್ಲಿ ದೇವತೆಗಳ, ಗುರು-ಹಿರಿಯರ, ತಂದೆ-ತಾಯಿಯರ ಮೇಲಿನ ಶ್ರದ್ಧೆಗಳು ನಮ್ಮ ಅನುಭವಕ್ಕೆ ಬರುತ್ತವೆ. ಶ್ರದ್ಧೆಯೆಂಬುದು ಅತ್ಯಂತ ಆಳವೂ, ಗೂಢವೂ ಮತ್ತು ಅತ್ಯಂತ ಶಕ್ತಿಯುಳ್ಳದ್ದಾಗಿದೆ. ಶ್ರದ್ಧೆ ಎಂಬುದು ಮನುಷ್ಯ ಜೀವನದ ಅವಿಭಾಜ್ಯ ಅಂಗವಾಗಿದೆಯೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ದೇವತೆಗಳ ಅಧ್ಯಯನವು ಕುತೂಹಲ ಕೆರಳಿಸುವ ವಿಷಯವಾಗಿದ್ದು ನಮ್ಮನ್ನು ವಿಸ್ಮಯ ಲೋಕಕ್ಕೆ ಕೊಂಡೊಯ್ಯುತ್ತದೆ. ದೇವತೆಗಳ ಅಸ್ತಿತ್ವ, ದೇವತೆಗಳ ಪರಿವಾರ, ದೇವತಾರಾಧನೆಯಲ್ಲಿಯ ವೈವಿಧ್ಯತೆಗಳು, ಒಂದು ದೇವತೆಯಿಂದ ಇನ್ನೊಂದು ದೇವತೆಗೆ ಬೆಳೆದುಬಂದಿರುವ ಸಂಬಂಧಗಳು, ದೇವತೆಗಳ ವೈಭವೀಕರಣ, ದೇವತೆಗಳ ಬಗೆಗೆ ಜನರಲ್ಲಿ ಬೆಳೆದು ಬಂದಿರುವ ಆಕರ್ಷಣೆ, ಶ್ರದ್ಧಾಭಾವ ಮೊದಲಾದ ವಿಷಯಗಳ ಬಗೆಗಿನ ವಿವರಗಳನ್ನು ಅರಿತುಕೊಳ್ಳುವುದರಿಂದ ನಮ್ಮ ಜೀವನದ ಮೌಲ್ಯವನ್ನು ಸಂಪಾದಿಸಿದಂತಾಗುತ್ತದೆ. ದೇವತೆಗಳ

ಬಗೆಗಿನ ಕುತೂಹಲ, ದೇವತೆಗಳ ಪೂರ್ವೋತ್ತರಗಳನ್ನು ತಿಳಿದುಕೊಳ್ಳಬೇಕೆಂಬ ಆಸಕ್ತಿಯೇ ಈ ಅಧ್ಯಯನದ ವಿಷಯದ ಆಯ್ಕೆಗೆ ಪ್ರಚೋದನೆ ನೀಡಿದೆ.

ದೇವತೆಗಳ ವಿಷಯದ ಬಗೆಗೆ ಸಾಕಷ್ಟು ಅಧ್ಯಯನಗಳಾಗಿವೆ. ಆದರೆ ದೇವತೆಗಳನ್ನು ತೌಲನಿಕ ನೆಲೆಯಲ್ಲಿ ಇಟ್ಟುಕೊಂಡು ಸಮಗ್ರ ಅಧ್ಯಯನ ಮಾಡಿರುವುದು ಬರುವುದಿಲ್ಲ. ಆದುದರಿಂದ "ಕನ್ನಡ ಸಾಹಿತ್ಯ-ಸಾಂಸ್ಕೃತಿಕ ನಕಾಶೆಯ ವಿಭಿನ್ನ ಆಯಾಮಗಳು" ಎಂಬ ವಿಷಯವನ್ನು ಈ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ತೌಲನಿಕ ಅಧ್ಯಯನವು ಎರಡು ಸಂಸ್ಕೃತಿಗಳ ಸೌಹಾರ್ದ ಹಾಗೂ ಆರೋಗ್ಯಕರ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ದೇವತೆಗಳ ಅಧ್ಯಯನವು ಸಂಸ್ಕೃತಿಯ ತಳಹದಿಯಾಗಿರುವುದರಿಂದ ದೇವತೆಗಳ ಅಭ್ಯಾಸದ ಜೊತೆಗೆ ಕೆಲವೊಂದು ಸಂಸ್ಕೃತಿಗಳ ಸಮಗ್ರ ಅಭ್ಯಾಸವನ್ನೂ ಮಾಡಿದಂತಾಗುತ್ತದೆ. ಕರ್ನಾಟಕ-ಮಹಾರಾಷ್ಟ್ರ, ತಮಿಳುನಾಡು, ಕೇರಳ, ಆಂಧ್ರಪ್ರದೇಶಗಳ ಸಂಸ್ಕೃತಿಯ ಸಮಗ್ರ ಅಭ್ಯಾಸ ಮಾಡುವ ಉದ್ದೇಶದಿಂದ ಕನ್ನಡ ಸಾಹಿತ್ಯ ಸಾಂಸ್ಕೃತಿಕ ನಕಾಶೆಯ ವಿಭಿನ್ನ ಆಯಾಮಗಳು ಎಂಬ ವಿಷಯವನ್ನು ಆಯ್ದುಕೊಳ್ಳಲಾಗಿದೆ.

ಕರ್ನಾಟಕ ಮಹಾರಾಷ್ಟ್ರಗಳು ಈಗ ನೆರೆಹೊರೆಯ ರಾಜ್ಯಗಳಾಗಿವೆ. ಆದರೆ ಇಂದಿನ ಮಹಾರಾಷ್ಟ್ರವು ಪ್ರಾಚೀನ ಕಾಲದಲ್ಲಿ ಕನ್ನಡ ಅರಸು ಮನೆತನಗಳ ಆಡಳಿತದ ಪ್ರದೇಶಕ್ಕೆ ಒಳಪಟ್ಟಿತ್ತು. ಇಂದಿಗೂ ಎರಡೂ ರಾಜ್ಯಗಳ ಗಡಿಗಳು ಒಂದಕ್ಕೊಂದು ತಾಕಿಕೊಂಡಿವೆ. ಈ ರಾಜಕೀಯ ಮತ್ತು ಭೌಗೋಲಿಕ ಕಾರಣಗಳಿಂದ ಉಭಯ ರಾಜ್ಯಗಳಲ್ಲಿಯ ಜನರ ಆಚಾರ-ವಿಚಾರ, ಉಡುಗೆ-ತೊಡುಗೆ, ಹಬ್ಬ-ಹರಿದಿನಗಳಲ್ಲಿ ಸಾಕಷ್ಟು ಸಾಮ್ಯತೆ ಕಂಡುಬರುತ್ತವೆ. ಆರಾಧ್ಯ ದೇವತೆಗಳಲ್ಲಿಯೂ ಸಾಮ್ಯತೆಯಿವೆ. ಇಂದು ಮಹಾರಾಷ್ಟ್ರಕ್ಕೆ ಸೇರಿರುವ ಪಂಢರಪುರದ ವಿಠ್ಠಲ, ಕೊಲ್ಹಾಪುರದ ಮಹಾಲಕ್ಷ್ಮಿ, ತುಳಜಾಪುರದ ಅಂಬಾಭವಾನಿ, ಶ್ರೀಶೈಲದ ಮಲ್ಲಿಕಾರ್ಜುನ, ಸೊನ್ನಲಗೆಯ ಸಿದ್ದೇಶ್ವರರು ಮೂಲದಲ್ಲಿ ಕರ್ನಾಟಕದ ದೇವತೆಗಳಾಗಿದ್ದಾರೆ. ಆದರೆ ಈ ದೇವತಾ ಕ್ಷೇತ್ರಗಳು ಇಂದು ಕರ್ನಾಟಕ ಮಹಾರಾಷ್ಟ್ರಗಳ ಜನರನ್ನು ಒಂದುಗೂಡಿಸುವ ಸಾಂಸ್ಕೃತಿಕ ಕೇಂದ್ರಗಳಾಗಿ ಬೆಳೆದು ನಿಂತಿವೆ.

ದೇವತಾ ವಿಜ್ಞಾನವು ವಿಸ್ತೃತವಾದ ವಿಷಯವಾಗಿರುವುದರಿಂದ ಎಲ್ಲ ದೇವತೆಗಳನ್ನು ಅಧ್ಯಯನಕ್ಕೆ ಒಳಪಡಿಸದೆ ಕೇವಲ ವಿಠ್ಠಲ, ಹುಲಿಗೆಮ್ಮ, ಮಹಾಲಕ್ಷ್ಮಿ ದೇವತೆಗಳ ವಿಷಯವನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಅಧ್ಯಯನದ ವ್ಯಾಪ್ತಿಯು ಕೆಲವೊಂದು ದೇವತೆಗಳ ವಿಷಯಕ್ಕೆ ಮಾತ್ರ ಸೀಮಿತವಾಗಿದೆ. ಕರ್ನಾಟಕ ಮಹಾರಾಷ್ಟ್ರದ ದೇವತೆಗಳ ಅಧ್ಯಯನ ಮಾಡಬೇಕಾದರೆ

ಭಾರತೀಯ ದೇವತಾ ಇತಿಹಾಸದಲ್ಲಿ ಈ ದೇವತೆಗಳ ಸ್ಥಾನ ಮಾನವನ್ನು ತಿಳಿದುಕೊಳ್ಳುವುದು ಅವಶ್ಯವಾಗಿದೆ. ಭಾರತೀಯ ಸಂಸ್ಕೃತಿಯು ಆರ್ಯ ದ್ರಾವಿಡ ಸಂಸ್ಕೃತಿಯ ಮಿಶ್ರಣವಾಗಿದೆ. ಆದ್ದರಿಂದ ಭಾರತೀಯರು ಆರಾಧಿಸುವ ದೇವತೆಗಳೂ ಆರ್ಯ ದ್ರಾವಿಡ ಮಿಶ್ರ ದೇವತೆಗಳಾಗಿದ್ದಾರೆ. ಭಾರತದಲ್ಲಿಯ ದೇವತಾ ಆರಾಧನೆಯ ಪ್ರಾಚೀನತೆಯನ್ನು ಹೀಗೆ ವಿವರಿಸಬಹುದಾಗಿದೆ.

ಆರ್ಯರು ಭಾರತಕ್ಕೆ ಬಂದು ದ್ರಾವಿಡರನ್ನು ಸೋಲಿಸಿ ತಾವು ವಿಜಯಿಗಳಾಗಿ ಇಲ್ಲಿ ತಳವೂರಿದರು. ಅವರ ಪ್ರಭಾವದಿಂದ ಆರ್ಯೀಕರಣವಾಗತೊಡಗಿತು. ಅನಾರ್ಯರ ಮೇಲೆ ಆರ್ಯರ ಪ್ರಭಾವ ಬೆಳೆದು ಅವರು ಆರ್ಯ ಸಂಸ್ಕೃತಿಯ ರೀತಿ ನೀತಿಗಳಿಗೆ ಹೊಂದಿಕೊಂಡರು. ಆದರೆ ಆರ್ಯರು ಕೂಡ ದ್ರಾವಿಡ ಸಂಸ್ಕೃತಿಯ ಸಂಪ್ರದಾಯಗಳಿಗೆ ಶರಣು ಹೋಗಿರುವುದೂ ಅಷ್ಟೇ ಸತ್ಯದ ವಿಷಯವಾಗಿದೆ. ಆದ್ದರಿಂದ ದ್ರಾವಿಡ ಸಂಸ್ಕೃತಿಯೂ ಆರ್ಯ ಸಂಸ್ಕೃತಿಯಲ್ಲಿ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡು ಬಂದಿದೆ. ಶೈವ ಸಂಪ್ರದಾಯದಲ್ಲಿ ಶಿವನಿಗೆ ಪ್ರಾಮುಖ್ಯತೆ ಇದ್ದರೆ, ಆರ್ಯರ ಸಂಪ್ರದಾಯದಲ್ಲಿ ವಿಷ್ಣು ಮುಖ್ಯವಾಗಿದ್ದಾನೆ. ಸ್ತ್ರೀ ತತ್ವದಿಂದಲೇ ಸೃಷ್ಟಿಯ ನಿರ್ಮಾಣವಾಗಿದೆ ಎಂಬುದು ದ್ರಾವಿಡರ ಅಭಿಪ್ರಾಯವಾಗಿದ್ದರಿಂದ ದ್ರಾವಿಡರಲ್ಲಿ ಸ್ತ್ರೀ ಶಕ್ತಿಗೆ ಪ್ರಾಮುಖ್ಯತೆಯಿತ್ತು. ಆರ್ಯರಿಂದ ಪುರುಷ ತತ್ವವು ಪ್ರಾಮುಖ್ಯತೆ ಪಡೆಯಿತು. ದ್ರಾವಿಡರದು ಜಲತತ್ವ, ಆರ್ಯರದು ಅಗ್ನಿ ತತ್ವ. ಆರ್ಯ ದ್ರಾವಿಡರ ಕೊಡುಕೊಳ್ಳುವಿಕೆಯಿಂದ ಭಾರತೀಯ ಸಂಪ್ರದಾಯದಲ್ಲಿ ಒಂದು ಹೊಸ ಬಾಂಧವ್ಯವು ಬೆಳೆದು ಬಂದಿತು.

ದೇವಿಯೇ ವಿಶ್ವದ ಶಕ್ತಿ ಎಂಬುದು ಮಾತೃ ಪ್ರಧಾನ ಸಂಸ್ಕೃತಿಯ ಹಿನ್ನೆಲೆಯಾಗಿದ್ದರಿಂದ ಸ್ತ್ರೀ ದೇವತಾ ಆರಾಧನೆ ಪ್ರಾರಂಭವಾಯಿತು. ಪ್ರಕೃತಿಯು ಪುರುಷನಿಗೆ ಅಧೀನವಾಗಿದೆ ಎಂಬುದು ಪುರುಷ ಪ್ರಧಾನ ಸಂಸ್ಕೃತಿಯ ಅರಿವಾಗಿದ್ದರಿಂದ ಪುರುಷ ದೇವತೆಯ ಆರಾಧನೆ ಪ್ರಾರಂಭವಾಯಿತು. ಮೊದಲು ಯೋನಿ ಪೂಜೆ, ನಂತರ ಯೋನಿ ಸಹಿತ ಲಿಂಗ ಪೂಜೆ, ಅದರ ನಂತರ ಮೂರ್ತಿ ಪೂಜೆಗಳು ಆಚರಣೆಗೆ ಬಂದವು. ಭಾರತೀಯ ಸಂಸ್ಕೃತಿಯಲ್ಲಿ ಶಕ್ತಿದೇವತೆ, ಶಿವ, ವಿಷ್ಣು ಈ ದೇವತೆಗಳಿಗೆ ಪ್ರಾಧಾನ್ಯತೆಯಿದೆ. ಕರ್ನಾಟಕ ಮಹಾರಾಷ್ಟ್ರಗಳಲ್ಲಿ ಮಹಾಲಕ್ಷ್ಮಿ, ವಿಠ್ಠಲ ದೇವತೆಗಳ ಆರಾಧನೆ ಹೆಚ್ಚು ಪ್ರಸಿದ್ಧಿ ಪಡೆದಿದೆ.

ಜಗತ್ತು ಪ್ರಕೃತಿ ಮತ್ತು ಪುರುಷರ ಸಂಯೋಗದಿಂದ ನಿರ್ಮಾಣವಾಗಿದೆ. ಈ ಪ್ರಕೃತಿ ಪುರುಷರೆಂದರೆ ಪಾರ್ವತಿ ಮತ್ತು ಶಿವ. ದೇವರ ರೂಪವನ್ನು ಎರಡು ಪ್ರಕಾರಗಳಲ್ಲಿ

ಗುರುತಿಸುತ್ತಾರೆ. ಒಂದು ಪುರುಷ ರೂಪ, ಇನ್ನೊಂದು ಸ್ತ್ರೀ ರೂಪ. ಭವ ಅಥವಾ ಶಂಕರ ಪುರುಷ ರೂಪವಾಗಿದ್ದಾನೆ. ಭವಾನಿ ಅಥವಾ ಪಾರ್ವತಿ ಸ್ತ್ರೀ ರೂಪವಾಗಿದ್ದಾಳೆ. ಸ್ತ್ರೀಯಿಂದಲೆ ಹೊಸ ಜೀವ ಸೃಷ್ಟಿ, ಪಾಲನೆ, ಪೋಷಣೆಯಾಗುವುದರಿಂದ ಅವಳಿಗೇ ಹೆಚ್ಚು ಪ್ರಾಮುಖ್ಯತೆಯಿದೆ. ಸ್ತ್ರೀ ದೇವತೆ ಎಂದರೆ ಪಾರ್ವತಿ ಅವಳೇ ವಿಶ್ವದ ಆದಿಮಾತೆ. ಆದಿಶಕ್ತಿಯಾಗಿದ್ದಾಳೆ. ನಂತರ ಮಾನವನ ಜೀವನ ವಿಕಾಸಗೊಂಡಂತೆ ದೇವತೆಗಳ ರೂಪವೂ ಪರಿಷ್ಕೃತಗೊಂಡಿತು. ಮಾನವನ ಕಲ್ಪನೆಗೆ ತಕ್ಕಂತೆ ದೇವರ ಸಂಖ್ಯೆಯೂಬೆಳೆಯತೊಡಗಿತು. ಋಗ್ವೇದದ ನಂತರ ದೇವರ ಸಂಖ್ಯೆಯು ೨೫೦ ಕ್ಕಿಂತ ಹೆಚ್ಚಾಯಿತು. ಪುರಾಣ ಕಾಲದಲ್ಲಿ ದೇವತಾ ವಲಯವು ಇನ್ನೂ ವಿಸ್ತೃತಗೊಂಡಿತು. ಗ್ರಾಮದೇವತೆ, ಕುಲದೇವತೆ, ಇಷ್ಟದೇವತೆಗಳೂ ಇದರಲ್ಲಿ ಸೇರಿಕೊಂಡರು. ಮರಣ ಹೊಂದಿದ ಪೂರ್ವಜರು, ಭೂತಪ್ರೇತಗಳು ಎಲ್ಲರೂ ದೇವರ ಪರಿವಾರದಲ್ಲಿ ಸೇರಿಕೊಂಡರು. ನದಿ, ಸರೋವರ, ಪರ್ವತಗಳೂ ದೇವತ್ವವನ್ನು ಪಡೆದುಕೊಂಡವು. ದೇವತೆಗಳ ಸೃಷ್ಟಿಯಾದ ನಂತರ ಅವರಿಗೆ ವಾಸಸ್ಥಾನಗಳನ್ನೂ ಕಲ್ಪಿಸಲಾಯಿತು. ಹಿಂದೂಗಳ ಪ್ರಕಾರ ಸ್ವರ್ಗವು ದೇವತೆಗಳ ರಾಜ್ಯವೆಂದು ಪರಿಗಣಿಸಲಾಯಿತು. ಬ್ರಹ್ಮ, ವಿಷ್ಣು, ಮಹೇಶರು ಎಲ್ಲ ದೇವತೆಗಳಲ್ಲಿ ಪ್ರಮುಖರು. ಆದರೆ ಶಿವನು ಎಲ್ಲರಲ್ಲಿ ದೊಡ್ಡವನು. ಆದ್ದರಿಂದ ಅವನು ಮಹಾದೇವ ನಾದ. ಸೃಷ್ಟಿ, ಸ್ಥಿತಿ, ಲಯ ಇವು ವಿಶ್ವದ ಮೂಲ ಅವಸ್ಥೆಗಳು. ಬ್ರಹ್ಮ, ವಿಷ್ಣು, ಮಹೇಶರು ಈ ಮೂರು ಅವಸ್ಥೆಗಳ ಕಾರಕರು. ಅದರಲ್ಲಿ ಸಂಹಾರಕ ಕೆಲಸ ಶಿವನದೆಂದು ಗೃಹೀತವಾಗಿದೆ. ಶಿವನು ದ್ರಾವಿಡರ ಆರಾಧ್ಯ ದೇವತೆ. ಶಿವನು ಭಾರತದ ಅನೇಕ ಆರ್ಯೇತರ ಜನಾಂಗದಿಂದ ವಿಶೇಷವಾಗಿ ದ್ರಾವಿಡರಿಂದ ಪೂಜೆಗೊಳ್ಳುವ ಮುಖ್ಯ ದೇವತೆಯಾಗಿದ್ದ. ಆರ್ಯರು ಶಿವ ಪೂಜಕರನ್ನು ತಮ್ಮ ಸಂಸ್ಕೃತಿಯಲ್ಲಿ ಸಮಾವಿಷ್ಟಗೊಳಿಸುವಾಗ ಅವರ ದೇವರನ್ನೂ ಸ್ವೀಕರಿಸಬೇಕಾಯಿತು. ಆರ್ಯ ಋಷಿಗಳಿಗೆ ಶಿವನನ್ನು ದೇವನೆಂದು ಸ್ವೀಕರಿಸುವುದು ಬಹಳ ಕಷ್ಟವಾಯಿತು. ಕೊನೆಗೆ ತಮ್ಮ ಮೂಲ ರುದ್ರನ ಜೊತೆಗೆ ಶಿವನನ್ನು ಏಕಜೀವಗೊಳಿಸಿದರು. ರುದ್ರನಿಗೆ ಪಶುಪತಿಯೆಂಬ ಹೆಸರೂ ಇದೆ.

ಭಾರತೀಯ ಇತಿಹಾಸದಲ್ಲಿ ಶೈವ ಧರ್ಮವು ಅತ್ಯಂತ ಮಹತ್ವದ ಪಾತ್ರವಹಿಸಿದೆ. ಪ್ರಾಚೀನ ಕಾಲದಿಂದಲೂ ಇದು ಭಾರತದ ಬಹುಸಂಖ್ಯಾತರ ಧರ್ಮವಾಗಿದ್ದು ಈ ಧರ್ಮವನ್ನು ಭಾರತದ ಮೂಲ ಧರ್ಮವೆಂದು ಕರೆಯಬಹುದಾಗಿದೆ. ಆರ್ಯ ದ್ರಾವಿಡರ ಸಮ್ಮಿಶ್ರಣ ಹೆಚ್ಚಿದಂತೆ ದ್ರಾವಿಡರ ಶಿವನು ಆರ್ಯರ ರುದ್ರನಾದ. ರುದ್ರನೆಂದರೆ 'ಪತ್ತಿನಾಮ್ ಪತಿಃ' ಎಂದು ವೇದಗಳಲ್ಲಿ ಹೇಳಲಾಗಿದೆ. ರುದ್ರನೆಂದರೆ ಉಗ್ರನೆಂಬುದು ಆರ್ಯರ ಕಲ್ಪನೆಯಾಗಿತ್ತು. ಯಜ್ಞದಲ್ಲಿ ಅವನಿಗೆ ಸ್ಥಾನವಿರಲಿಲ್ಲ. ಆದರೂ ಅವನ ಕ್ರೋಧ ಶಮನಗೊಳಿಸಲು ಯಜ್ಞದ ಕೊನೆಯಲ್ಲಿ

'ರುದ್ರಾಯ ಪಶುಪತಿ ಯೆ ಸ್ವಾಹಾ' ಎಂದು ಹವಿಸ್ಸು ಅರ್ಪಿಸುತ್ತಿದ್ದರು. ಹೀಗೆ ವೈದಿಕರಿಂದ ಗೌಣ ಸ್ಥಾನ ಪಡೆದು ರುದ್ರನು ಮುಂದೆ ಪುರಾಣ ಕಾಲದಲ್ಲಿ ಶಿವನಾದದ್ದು ಕಂಡು ಬರುತ್ತದೆ. ರುದ್ರ ಶಬ್ದವು ಆರ್ಯ ವರ್ಗಕ್ಕೆ ಸೇರಿದ್ದಾದರೆ, ಶಿವ ಶಬ್ದವು ಪತ್ನಿ ಜನರ ಭಾಷಾ ವರ್ಗಕ್ಕೆ ಸೇರಿದೆ. ರುದ್ರನ ಉಗ್ರತೆಯನ್ನು ಕಡಿಮೆಗೊಳಿಸಲು ಆರ್ಯರು ಶಿವನೆಂಬ ಮಂಗಲಕಾರಕ ವಿಶೇಷಣವನ್ನು ಜೋಡಿಸಿ ರುದ್ರ -ಶಿವ ಎಂಬ ಜೋಡು ಶಬ್ದವನ್ನು ತಯಾರಿಸಿದರು. ರುದ್ರ-ಶಿವ ಎಂಬುದು ಎರಡು ದೇವತೆಗಳ ಭಿನ್ನ ಹೆಸರಿದ್ದರೂ ಆರ್ಯರು ಶಿವನ ರೂಪವನ್ನು ಸಂಸ್ಕಾರಗೊಳಿಸಿ ರುದ್ರನ ಜೊತೆಗೆ ಏಕಜೀವನಗೊಳಿಸಿದರು. ಋಗ್ವೇದದಲ್ಲಿ ಶಿವನಿಗೆ 'ವೃಷಭ' ಎಂದು ಕರೆಯಲಾಯಿತು. ವೃಷಭ ಎಂದರೆ ವೀರ, ದಾತಾರ ಎಂಬ ಅರ್ಥವಿದೆ. ಭಕ್ತರಿಗೆ ಬೇಡಿದ್ದನ್ನು ಕೊಡುವವ ಶಿವ, ಶಿವನು ವೀರನಾದುದರಿಂದ ಅವನ ಆರಾಧಕರು ವೀರಶೈವರೆಂದು ಕರೆಯಲ್ಪಟ್ಟರು. ೧೨ನೆಯ ಶತಮಾನದಲ್ಲಿ ಶೈವ ಧರ್ಮದಿಂದಲೇ ವೀರಶೈವ ಎಂಬ ಹೊಸ ಟಿಸಿಲು ಮೂಡಿತು. ವರ್ಗ ಸಂಘರ್ಷಗಳಿಂದ ಶೈವ ಧರ್ಮದಲ್ಲಿಯೂ ಅನೇಕ ಪಂಗಡಗಳಾದವು. ಆದರೆ ಆ ಪಂಗಡಗಳು ಶಿವ ಮತ್ತು ರುದ್ರ ಎಂಬ ಎರಡು ಶೈವ ಪ್ರಭೇದಗಳಿಗೇ ಸೇರಿದವುಗಳಾಗಿವೆ. ಶೈವ ಪಂಥದಲ್ಲಿ ಎಂಟು ಉಪಭೇದಗಳಾದವು. ಶೈವ ಪಂಥವು ನಂತರ ಬ್ರಾಹ್ಮಣರ ಗುಂಪಾಯಿತು. ರುದ್ರ ಪಂಥವು ಭಾರತದ ಬಹು ಸಂಖ್ಯಾತರ ಧರ್ಮವಾಗಿ ಇಡೀ ದೇಶವನ್ನು ವ್ಯಾಪಿಸಿತು. ಪ್ರಾಚೀನ ಭಾರತದಲ್ಲಿ ಶಿವನನ್ನು ಇಪ್ಪತ್ತೈದು ರೂಪಗಳಲ್ಲಿ ಆರಾಧಿಸುತ್ತಿದ್ದುದು ಕಂಡು ಬರುತ್ತದೆ. ಶಿವನ ಒಂದೊಂದು ರೂಪವನ್ನು ಒಂದೊಂದು ಪಂಗಡದವರು ತಮ್ಮ ಆರಾಧ್ಯ ದೈವವನ್ನಾಗಿ ಮಾಡಿಕೊಂಡಿದ್ದರು. ರುದ್ರ ಪಂಥದಲ್ಲಿ ಆರು ಮುಖ್ಯ ಪಂಥಗಳಿದ್ದು ಅನೇಕ ಉಪ ಪಂಥಗಳಿದ್ದವು. ಎಲ್ಲ ಮುಖ್ಯ ಮತ್ತು ಉಪ ಪಂಥಗಳಿಗೆ ಭೈರವನೇ ಪ್ರಧಾನ ದೇವತೆಯಾಗಿದ್ದ.

ಶಿವನ ಇಪ್ಪತ್ತೈದು ಅವತಾರಗಳಲ್ಲಿ ಮೈಲಾರವೂ ಒಂದು, ವಿಷ್ಣುವಿನ ಅವತಾರಗಳಲ್ಲಿ ರಾಮ, ಕೃಷ್ಣರ ಅವತಾರದ ಕಥೆಗಳು ಪ್ರಸಿದ್ಧಿಗೆ ಬಂದಷ್ಟು ಉಳಿದ ಅವತಾರ ಕಥೆಗಳು ಜನಪ್ರಿಯವಾಗಲಿಲ್ಲ. ಅದೇ ರೀತಿ ಶಿವನ ಕೆಲವು ಅವತಾರಗಳು ವೈದಿಕರ ಕೈಗೆ ಸಿಕ್ಕು ಜನಪ್ರಿಯವಾದವು. ಆದರೆ ಜನ ಸಾಮಾನ್ಯರ ದೇವಗಳೆನಿಸಿದಂತಹವು ವಿಶೇಷ ಪ್ರಸಿದ್ಧಿಗೆ ಬರಲಿಲ್ಲ. ಮೈಲಾರನೂ ಸಹ ಅಂತಹ ಒಂದು ಶೈವಧರ್ಮದ ದೇವತೆ ಎಂಬುದರಲ್ಲಿ ಸಂಶಯವಿಲ್ಲ. ಮೈಲಾರ ಮತ್ತು ಭೈರವನ ಅಂಶಗಳು ಧಾರ್ಮಿಕವಾಗಿ ಒಂದೇ ಆಗಿವೆ. ಮೈಲಾರನು ಮಾರ್ತಾಂಡ ಭೈರವನಾಗಿದ್ದಾನೆ. ಮಾರ್ತಾಂಡ ಭೈರವನು ಭೈರವನ ಎಂಟು ವರ್ಗಗಳಲ್ಲಿಯ ಮೂರನೆಯ ವರ್ಗದವನಾಗಿದ್ದಾನೆ. ಅವನು ಶಿವನ ಅವತಾರಿಯಾಗಿದ್ದಾನೆ. ಮಾರ್ತಾಂಡ ಭೈರವನ ಅವತಾರವೆಂದರೆ ಖಂಡೋಬಾ ಅಥವಾ ಮೈಲಾರನ ಅವತಾರವಾಗಿದೆ.

ಮೈಲಾರನು ಹರಿ- ಹರ ಶಕ್ತಿಯ ಸಂಯೋಗದಿಂದ ಹುಟ್ಟಿದವನು. ಸಮುದ್ರ ಮಂಥನದ ವೇಳೆಯಲ್ಲಿ ವಿಷ್ಣುವು ಮೋಹಿನಿಯ ರೂಪ ಧರಿಸುತ್ತಾನೆ. ಮೋಹಿನಿಯ ರೂಪಕ್ಕೆ ಮನಸೋತ ಶಿವನು ಕಾಮ ವಿಹ್ವಲನಾಗುತ್ತಾನೆ. ಅದರ ಫಲವೇ ಮೈಲಾರ ಅವತಾರಕ್ಕೆ ಕಾರಣವಾಗುತ್ತದೆ.

ಜಗದಾಂಬೆ ಪಾರ್ವತಿಯೇ ಆದಿಶಕ್ತಿ, ವಿಶ್ವದ ಜನನಿಯಾಗಿದ್ದಾಳೆ. ಅವಳು ಶಿವನ ಅರ್ಧಾಂಗಿ, ಶಿವನ ಶಕ್ತಿಯೂ ಆಗಿದ್ದಾಳೆ. ಪಾರ್ವತಿಗೆ ಎರಡು ಜನ್ಮಗಳು. ಮೊದಲು ಜನ್ಮದಲ್ಲಿ ಅವಳು ದಕ್ಷ ಕನ್ಯೆಯಾಗಿದ್ದಳು. ದಕ್ಷ ರಾಜನು ಯಜ್ಞದಲ್ಲಿ ಶಿವನಿಗೆ ಅವಮಾನ ಮಾಡಿದ್ದರಿಂದ ಪಾರ್ವತಿಯು ಯಜ್ಞಕುಂಡಕ್ಕೆ ಹಾರಿ ತನ್ನ ದೇಹವನ್ನೇ ಅರ್ಪಿಸಿದಳು. ಈ ವಾರ್ತೆ ಕೇಳಿ ಕ್ರೋಧಿತನಾದ ಶಿವನ ಪಾರ್ವತಿಯ ಕಳೇಬರವನ್ನು ಹೆಗಲ ಮೇಲೆ ಹೊತ್ತು ಸಿಟ್ಟಿನಿಂದ ಸುತ್ತತೊಡಗಿದ. ಅದರಿಂದ ಏನಾದರೂ ಅನರ್ಥ ಸಂಭವಿಸಬಹುದೆಂದು ವಿಷ್ಣುವು ತನ್ನ ಸುದರ್ಶನ ಚಕ್ರದಿಂದ ಕಳೇಬರವನ್ನು ತುಂಡರಿಸಿದ. ಪಾರ್ವತಿಯ ದೇಹದ ಅವಯವಗಳು ಕಳಚಿ ಹಲವಾರು ಕಡೆ ಬಿದ್ದವು. ಅವಳ ಅವಯವಗಳು ಬಿದ್ದ ಸ್ಥಳಗಳು ಶಕ್ತಿ ಪೀಠಗಳೆಂದು ಹೆಸರು ಪಡೆದವು. ಭಾರತದ ಶಕ್ತಿ ಪೀಠಗಳಲ್ಲಿ ಎರಡು ಪ್ರಕಾರದ ಗಣನೆಗಳಿವೆ. ಒಂದು ೧೦೮ ಶಕ್ತಿಪೀಠಗಳೆಂದು, ಮತ್ತೊಂದು ೫೨ ಶಕ್ತಿಪೀಠಗಳೆಂದು ಪರಿಗಣಿಸುತ್ತವೆ. ಈ ಶಕ್ತಿ ಪೀಠಗಳಲ್ಲಿ ಮಹಾರಾಷ್ಟ್ರದ ನಾಲ್ಕು ಸ್ಥಳಗಳು ಸಾಡೇ ತೀನ ಶಕ್ತಿ ಪೀಠಗಳೆಂದು ಪ್ರಸಿದ್ಧಿ ಪಡೆದಿವೆ. ಕೊಲ್ಹಾಪುರ, ತುಳಜಾಪುರ, ಮಾಹೂರ ಮತ್ತು ಸಪ್ತಶೃಂಗಿ ಈ ನಾಲ್ಕು ಪೀಠಗಳಲ್ಲಿ ಕೊಲ್ಹಾಪುರದ ಮಹಾಲಕ್ಷ್ಮಿಯ ಸ್ಥಾನಕ್ಕೆ ಹೆಚ್ಚು ಪ್ರಾಮುಖ್ಯತೆ ದೊರೆತಿದೆ.

ಪಾರ್ವತಿಯ ಎರಡನೆಯ ಜನ್ಮದಲ್ಲಿ ಹಿಮವಂತನ ಮಗಳಾಗಿ ಹುಟ್ಟಿದಳು. ಈ ಜನ್ಮದಲ್ಲಿ ಅವಳಿಗೆ ಮೊದಲು ಗೌರಿ ನಂತರ ಉಮಾ. ಹೀಗೆ ಎರಡು ಹೆಸರು ಪಡೆದಳು. ಈ ಜನ್ಮದಲ್ಲಿಯೂ ಶಿವನನ್ನೇ ಒರಿಸಿದಳು. ಶಿವನೂ ಅವಳನ್ನು ಅರ್ಧಾಂಗಿಯಾಗಿ ಸಮಾವಿಷ್ಟಗೊಳಿಸಿ ಅರ್ಧನಾರೀಶ್ವರನಾದ. ಪಾರ್ವತಿಯೂ ಕರುಣಾಮಯಿಯೂ, ಶಕ್ತಿರೂಪಿಣಿಯೂ ಆಗಿದ್ದಾಳೆ. ಚಂಡ, ಮುಂಡ, ಮಹಿಷಮರ್ದನ ವೇಳೆಯಲ್ಲಿ ತನ್ನ ಶಕ್ತಿಯನ್ನು ಪ್ರಕಟಿಸಿದ್ದಾಳೆ. ಅಲ್ಲದೆ ವಿಶ್ವದ ಸೃಜನತೆಯ ಮೂಲ ಪ್ರೇರಣೆಯಾಗಿದ್ದಾಳೆ. ಈ ಶಕ್ತಿಶಾಲಿನಿಯನ್ನು ಆರಾಧಿಸುವ ಪಂಥವೇ ಶಾಕ್ತಪಂಥವೆಂದು ಹೆಸರು ಪಡೆದಿದೆ ಇವಳು ಶಿವನ ಅರ್ಧಾಂಗಿಯಾಗಿದ್ದರೂ ಮೂಲ ರೂಪದಲ್ಲಿ ಶಿವನ ಜನನಿಯಾಗಿದ್ದಾಳೆ. ಬ್ರಹ್ಮ, ವಿಷ್ಣು, ಮಹೇಶರಿಗೆ ಇವಳೇ ಜನ್ಮವೆತ್ತಿದ್ದಾಳೆ. ಒಬ್ಬಳೇ ಶಕ್ತಿ ದೇವತೆಯು ಮೂರು ರೂಪಗಳನ್ನು ಧರಿಸಿ, ಮೂರು ದೇವತೆಗಳ ಪತ್ನಿಯಾದಳು. ಸತ್ವಗುಣದಿಂದ ಮಹಾಸರಸ್ವತಿಯಾಗಿ ಬ್ರಹ್ಮನ

ಮಡದಿಯಾದರೆ, ರಜೋಗುಣದಿಂದ ವಿಷ್ಣುವಿನ ಪತ್ನಿ ಲಕ್ಷ್ಮಿಯಾದಳು. ತಮೋ ಗುಣದ ಅಧಿಷ್ಠಾತ್ರಿಯಾಗಿ ಶಿವನ ಪತ್ನಿಯಾಗಿ ಕಾಳಿ ರೂಪ ಧರಿಸಿದಳು ಕೊಲ್ಹಾಪುರದ ಲಕ್ಷ್ಮಿಯು ತ್ರಿಗುಣ ಧಾರಿಣಿಯಾಗಿ, ತ್ರಿರೂಪಧಾತ್ರಿಯಾಗಿ ಕೊಲ್ಹಾಪುರದಲ್ಲಿ ನೆಲೆಸಿದ್ದಾಳೆ. ಮಹಾಲಕ್ಷ್ಮಿಯ ಪರಂಪರೆಯ ಅಧ್ಯಾಯದಲ್ಲಿ ಮಹಾಲಕ್ಷ್ಮಿಯ ಸಂಬಂಧದ ವಿಷಯವನ್ನು ವಿವರಿಸಿ ವಿಶ್ಲೇಷಿಸಲಾಗಿದೆ.

ಆರ್ಯರ ದೇವತಾ ಇತಿಹಾಸದಲ್ಲಿ ವರುಣನು ಆದಿದೇವನಾಗಿದ್ದಾನೆ. ಅವನು ವಿಶ್ವದ ಸಂಸ್ಥಾಪಕ ಮತ್ತು ಸಾರ್ವಭೌಮನಾಗಿದ್ದ. ಪೃಥ್ವಿಯ ಮೇಲೆ ಜಲನಿಯಂತ್ರಣ ಮಾಡುವವನಾಗಿದ್ದ. ನೀರಿನ ವಸ್ತ್ರವೇ ಆತನ ಉಡುಗೆಯಾಗಿತ್ತು. ಸಾಗರದ ಪೃಷ್ಠ ಭಾಗದ ಮೇಲೆಯೇ ಅವನ ಸಂಚಾರ. ಸೂರ್ಯ ಆತನ ಕಣ್ಣು, ಸ್ವರ್ಗ ಭೂಮಿಗೆ ಅವನೇ ಆಧಾರವಾಗಿದ್ದ. ಋಗ್ವೇದದ ಕಾಲದಲ್ಲಿ ಸೂರ್ಯ ವರುಣರು ಸೇರಿ ಮಿತ್ರಾವರುಣರಾದರು. ನಂತರ ಯಜ್ಞ ಕಾಲದಲ್ಲಿ ಪ್ರಜಾಪತಿ ಎಂಬ ಹೊಸ ದೇವತೆ ಅಧಿಕಾರಕ್ಕೆ ಬಂದಿದ್ದರಿಂದ ವರುಣನ ಅಧಿಕಾರ ವ್ಯಾಪ್ತಿ ಕಡಿಮೆಯಾಯಿತು. ದೇವತೆಗಳು, ಅಸುರರು ಇವನ ಮಕ್ಕಳಾದರು. ವೇದೋತ್ತರ ಕಾಲದಲ್ಲಿ ಕೇವಲ ಸಾಗರವಷ್ಟೇ ವರುಣನ ವ್ಯಾಪ್ತಿಯಲ್ಲಿ ಉಳಿಯಿತು. ವೇದ ಕಾಲದಲ್ಲಿ ವರುಣನ ಮಹತ್ವ ಕಡಿಮೆಯಾಗಿ ಅವನ ಸ್ಥಾನವು ಇಂದ್ರನಿಗೆ ದೊರಕಿತು. ಋಗ್ವೇದವು ಇಂದ್ರನ ಪ್ರಶಂಸೆಯಿಂದ ತುಂಬಿದೆ. ಆರ್ಯ ಸಂಸ್ಕೃತಿಯು ವಿಸ್ತಾರಗೊಂಡಂತೆ ಇಂದ್ರನ ಮಹತ್ವ ಹೆಚ್ಚಿತು. ಆಕಾಶ, ಗಾಳಿ, ಮಳೆ ಇವು ಅವನ ಕಾರ್ಯಗಳಾದವು. ಇಂದ್ರನು ಸ್ವರ್ಗದ ಸ್ವಾಮಿಯಾದ, ಅಮರಾವತಿಯು ಅವನ ಊರು. ಇಂದ್ರಾಣಿ, ಶಚಿ ಅವನ ಪತ್ನಿಯರು. ಬ್ರಹಸ್ಪತಿ ಅವನ ಗುರು.

ಯಜುರ್ವೇದ ಕಾಲದಲ್ಲಿ ಇಂದ್ರನು ಹಿಂದೆ ಬಿದ್ದು ವಿಷ್ಣು ಮುಂದೆ ಬಂದ. ಸಮುದ್ರ ಮಂಥನದ ವೇಳೆಯಲ್ಲಿ ಅವನ ಮಹತ್ವ ಹೆಚ್ಚಿತು. ವಿಷ್ಣುವು ವರುಣನ ಕೆಲವು ಗುಣಗಳನ್ನು ಸ್ವತಃ ಎತ್ತಿಕೊಂಡು ವೈಭವ ಪಡೆದ. ವರುಣನ ಸ್ಥಾನ ಸಮುದ್ರವಾಗಿದ್ದರೆ ವಿಷ್ಣು ಸಾಗರವನ್ನೇ ಶಯನವನ್ನಾಗಿ ಮಾಡಿಕೊಂಡ. ವರುಣನ ವಾಹನವಾದ ಮಕರವು ವಿಷ್ಣುವಿನ ಕರಣ ಕಮಂಡಲಗಳಾದವು. ವಿಷ್ಣುವಿನ ಕಂಠದಲ್ಲಿಯ ಕೌಸ್ತುಭವೂ ಸಾಗರದಿಂದ ಬಂದದ್ದು. ನಾರಾಯಣ ಶಬ್ದದ ಅರ್ಥವೇ ಜಲದಲ್ಲಿ ವಾಸ್ತವ್ಯ ಮಾಡುವವ ಎಂದಿದೆ. ಬ್ರಾಹ್ಮಣರ ಕಾಲದಲ್ಲಿ ವಿಷ್ಣುವಿನ ಸ್ಮರಣೆಯು ಹೆಚ್ಚಿ ಅವನು ವಿಶ್ವವಿಖ್ಯಾತನಾದ. ಸಮುದ್ರ ಮಂಥನದಲ್ಲಿ ಇಂದ್ರನು ವಿಷ್ಣುವಿಗೆ ಶರಣು ಹೋದ. ಗೋವರ್ಧನ ಪ್ರಸಂಗದಿಂದ ಕೃಷ್ಣನು ಇಂದ್ರನ

ಗರ್ವಭಂಗ ಮಾಡಿದ. ವೇದ ಕಾಲದಲ್ಲಿ ವಿಷ್ಣುವಿಗೆ ಉಪೇಂದ್ರ ಇಂದ್ರನ ತಮ್ಮ ಎಂದು ಕರೆದಿದ್ದರು. ನಂತರ ವಿಷ್ಣುವೇ ಇಂದ್ರನಿಗೆ ಆಜ್ಞಾಪಕನಾದ ಸ್ವಸ್ತಿಕವು ವಿಷ್ಣುವಿನ ಚಿಹ್ನೆ, ಇದು ಸಮಸ್ತ ಭುವನದ ಪ್ರತೀಕ. ಸ್ವಸ್ತಕಕ್ಕೆ ನಾಲ್ಕು ಭುಜಗಳು. ಈ ಅರ್ಥ ಸೂಚಿಸುವುದಕ್ಕಾಗಿಯೇ ವಿಷ್ಣುವೂ ಚತುರ್ಭುಜನಾದ. ಶಂಖ, ಚಕ್ರ, ಗದೆ, ಕಮಲ ಎಲ್ಲ ವಸ್ತುಗಳಿಗೂ ಸಾಂಕೇತಿಕ ಅರ್ಥವಿದೆ ಚಕ್ರದ ಹೆಸರು ಸುದರ್ಶನ. ಈ ಚಕ್ರವು ಸಂವತ್ಸರ, ವಿಶ್ವ ಮತ್ತು ಸೂರ್ಯನ ಪ್ರತೀಕವಾಗಿದೆ. ವಿಷ್ಣುವಿನ ವ್ಯಾಪಕತ್ವವು ಈ ಗೋಲಾಕಾರದ ಚಕ್ರದಿಂದಲೇ ಸೂಚಿತವಾಗುತ್ತದೆ. ಗದೆ ಇದು ರಾಜಕೀಯ ಚಿನ್ಹೆ. ಇದರ ಕೆಲಸ ದುಷ್ಟರ ಸಂಹಾರ, ಶಂಖ ಜ್ಞಾನದ ಪ್ರತೀಕ. ಕಮಲವು ಸೃಷ್ಟಿಯ ಉತ್ಪತ್ತಿಗೆ ಸಂಬಂಧಿಸಿದೆ ಏಕೋಹಂ ಬಹುಸ್ಯಾಮ್ ಪ್ರಜಾಯೆಯ ವಿಶ್ವಾತ್ಮದ ಆದಿ ಸಂಕಲ್ಪವು ಸ್ಫುರಣಗೊಂಡಿದ್ದು ಕಮಲದಿಂದ, ವಿಷ್ಣುವಿನ ಪತ್ನಿ ಲಕ್ಷ್ಮಿ ಕಮಲಜಳಾಗಿದ್ದಾಳೆ. ಕಮಲ ಶಕ್ತಿಯ ಪ್ರತೀಕ. ಲಕ್ಷ್ಮಿ ಈತನ ಪತ್ನಿ ಅಚ್ಯುತ ವಲ್ಲಭೆಯಾಗಿದ್ದಾಳೆ. ವಿಠ್ಠಲ ವಿಷ್ಣುವಿನ ಅವತಾರ. ವಿಷ್ಣುವಿನ ಅವತಾರಿಯಾದ ವಿಠ್ಠಲನ ವಿಷಯವನ್ನು ವಿಠ್ಠಲ ಪರಂಪರೆ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಇದು ಭಾರತೀಯ ದೇವತಾ ಇತಿಹಾಸದಲ್ಲಿಯ ಶಿವ, ಲಕ್ಷ್ಮಿ ವಿಷ್ಣು ದೇವತಾ ಪರಂಪರೆಯ ಉಗಮ ವಿಕಾಸದ ಸಂಕ್ಷಿಪ್ತ ಪರಿಚಯವಾಗಿದೆ.

ಕೊಲ್ಹಾಪುರದ ಗ್ರಾಮದೇವತೆಗೆ ದೇವಿಭಾಗವತದ ರಚನೆಯಿಂದ ಅದಿಶಕ್ತಿಯ ಸ್ಥಾನ ದೊರಕಿ ಜಗದ ಅಂಬೆಯಾದಳು. ಈ ಅಂಬಾ ಭವಾನಿಯು ದಕ್ಷಿಣದ ಅರಸು ಮನೆತನಗಳ ಕುಲದೇವತೆಯಾದಳು. ಮೈಲಾರನ ವಿಷಯದಲ್ಲಿ ಮಣಿಮಲ್ಲಾಸುರನ ಪುರಾಣ ಕಥೆಯು ನಿರ್ಮಾಣವಾಯಿತು. ಗಂಗಿಮಾಳವ್ವ, ತುಪ್ಪದಮಾಳವ್ವರ ಬಗೆಗೆ ಐತಿಹ್ಯಗಳು ಹುಟ್ಟಿಕೊಂಡವು. ಗೋವಳಿಗರ ದೇವನಾದ ವಿಠ್ಠಲ ಬಗೆಗೆ ಪಾಂಡುರಂಗ ಮಹಾತ್ಮ್ಯೆಯ ರಚನೆಯಾಯಿತು. ಪುರುಷ ದೈವ ಹಾಗೂ ಸ್ತ್ರೀ ದೇವತೆಗಳ ವಿಷಯದಲ್ಲಿ ಇಂತಹ ಮಾರ್ಗ ಮತ್ತು ದೇಶೀ ಕವಲುಗಳು ನಿರ್ಮಾಣವಾಗಿರುವುದನ್ನು ಕಾಣಬಹುದಾಗಿದೆ. ಕಾನಡಾ ವಿಠ್ಠಲನ ವಿಲಕ್ಷಣ ಕಥೆಗಳು, ಶಕ್ತಿ ದೇವತೆಯ ಬಗೆಗಿನ ಅವತಾರ ಕಥೆಗಳು ಹಾಗೂ ಈ ದೇವತೆಗಳ ಬಗೆಗೆ ಜನಸಾಮಾನ್ಯರಲ್ಲಿ ಪ್ರಾದೇಶಿಕ ಗಡಿ ಮೀರಿ ಬೆಳೆದಿರುವ ಭಕ್ತಿ ಕರ್ನಾಟಕ ಮಹಾರಾಷ್ಟ್ರಗಳಲ್ಲಿರುವ ನಿಕಟ ಸಂಬಂಧವನ್ನು ದೃಢೀಕರಿಸುತ್ತವೆ.

ದೇವತಾ ವಿಷಯಗಳ ಬಗೆಗಿನ ಲಿಖಿತ ಮತ್ತು ಮೌಖಿಕ ವಿಷಯಗಳನ್ನು ಸಂಗ್ರಹಿಸಿ ದೇವತಾ ಪರಂಪರೆಗಳನ್ನು ತೌಲನಿಕವಾಗಿ ಪರಿಶೀಲಿಸುವ ಕ್ರಿಯಾಶೀಲ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಅಧ್ಯಯನದ ಉದ್ದೇಶ, ಕರ್ನಾಟಕ ಮಹಾರಾಷ್ಟ್ರಗಳ ಮಹಾಲಕ್ಷ್ಮಿ ಪರಂಪರೆ,

ಹುಲಿಗೆಮ್ಮ ಪರಂಪರೆ, ವಿಠ್ಠಲ ಪರಂಪರೆ, ಆರಾಧನೆಯಲ್ಲಿಯ ಸಾಮ್ಯ ಮತ್ತು ವ್ಯತ್ಯಾಸಗಳು ಮತ್ತು ಸಮಾರೋಪ ಎಂಬುದಾಗಿ ಪ್ರಬಂಧದ ವಿಷಯವನ್ನು ವಿಂಗಡಿಸಲಾಗಿದೆ. ಮೊದಲು ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ವಿವರಿಸಲಾಗಿದೆ. ನಂತರ ಮೊದಲನೆಯ ಅಧ್ಯಾಯದಲ್ಲಿ ಕರ್ನಾಟಕ ಮಹಾರಾಷ್ಟ್ರ, ಕೇರಳ, ತಮಿಳುನಾಡು, ಆಂಧ್ರಪ್ರದೇಶಗಳ ಭಾಷಿಕ, ಸಾಹಿತ್ಯಿಕ, ಧಾರ್ಮಿಕ, ರಾಜಕೀಯ ಮತ್ತು ಸಾಮಾಜಿಕ ಸಾಮರಸ್ಯವನ್ನು ವಿವರಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಮಹಾಲಕ್ಷ್ಮಿ ಪರಂಪರೆ, ಮೂರನೆಯ ಅಧ್ಯಾಯದಲ್ಲಿ ಹುಲಿಗೆಮ್ಮ ಪರಂಪರೆ, ನಾಲ್ಕನೆಯ ಅಧ್ಯಾಯದಲ್ಲಿ ವಿಠ್ಠಲ ಪರಂಪರೆಯನ್ನು ವಿವೇಚಿಸಲಾಗಿದೆ. ಈ ಅಧ್ಯಾಯದಲ್ಲಿ ವಿಠ್ಠಲ, ಮಹಾಲಕ್ಷ್ಮಿ ಮತ್ತು ದೇವತಾ ನಾಮರೂಪ ನಿಷ್ಪತ್ತಿ, ದೇವತೆಯ ಪರಿವಾರ, ಪೌರಾಣಿಕ ಹಿನ್ನೆಲೆ, ಐತಿಹಾಸಿಕ ಹಿನ್ನೆಲೆ, ಜಾನಪದ ಹಿನ್ನೆಲೆ, ದೇವತಾ ಕ್ಷೇತ್ರಗಳು ಮೊದಲಾದ ವಿಷಯಗಳ ನೆಲೆಯಲ್ಲಿ ದೇವತಾ ಪರಂಪರೆಗಳನ್ನು ಅಭ್ಯಸಿಸುವ ಪ್ರಯತ್ನ ಮಾಡಲಾಗಿದೆ. ಮೈಲಾರ ಮತ್ತು ಭೈರವನ ಅಂಶಗಳು ಧಾರ್ಮಿಕವಾಗಿ ಒಂದೇ ಆಗಿವೆ. ಮೈಲಾರನು ಮಾರ್ತಾಂಡ ಭೈರವನಾಗಿದ್ದಾನೆ. ಮಾರ್ತಾಂಡ ಭೈರವನು ಭೈರವನ ಎಂಟು ವರ್ಗಗಳಲ್ಲಿಯ ಮೂರನೆಯ ವರ್ಗದವನಾಗಿದ್ದಾನೆ. ಅವನು ಶಿವನ ಅವತಾರಿಯಾಗಿದ್ದಾನೆ. ಮಾರ್ತಾಂಡ ಭೈರವನ ಅವತಾರವೆಂದರೆ ಖಂಡೋಬಾ ಅಥವಾ ಮೈಲಾರನ ಅವತಾರವಾಗಿದೆ. ಮೈಲಾರನು ಹರಿ- ಹರ ಶಕ್ತಿಯ ಸಂಯೋಗದಿಂದ ಹುಟ್ಟಿದವನು. ಸಮುದ್ರ ಮಂಥನದ ವೇಳೆಯಲ್ಲಿ ವಿಷ್ಣುವು ಮೋಹಿನಿಯ ರೂಪ ಧರಿಸುತ್ತಾನೆ. ಮೋಹಿನಿಯ ರೂಪಕ್ಕೆ ಮನಸೋತ ಶಿವನು ಕಾಮ ವಿಹ್ವಲನಾಗುತ್ತಾನೆ. ಅದರ ಫಲವೇ ಮೈಲಾರ ಅವತಾರಕ್ಕೆ ಕಾರಣವಾಗುತ್ತದೆ. ಮೈಲಾರನ ವಿಷಯವನ್ನು ಕುರಿತು ಅಧ್ಯಯನದಲ್ಲಿ ವಿವೇಚಿಸಲಾಗಿದೆ.

ಅಧ್ಯಾಯ ೨

ಕನ್ನಡ ಸಾಹಿತ್ಯ - ಸಾಂಸ್ಕೃತಿಕ ನಕ್ಷೆ

ಅಧ್ಯಾಯ - ೨

ಕನ್ನಡ ಸಾಹಿತ್ಯ - ಸಾಂಸ್ಕೃತಿಕ ನಕ್ಷೆ

ಕರ್ನಾಟಕ ಮತ್ತು ಮಹಾರಾಷ್ಟ್ರ ಇತ್ತ ಭೌಗೋಲಿಕವಾಗಿ ನೆರೆಹೊರೆಯ ಪ್ರದೇಶಗಳು. ಆದರೆ ಅವುಗಳ ಸಂಬಂಧ ಕೇವಲ ಭೌಗೋಳಿಕವಾಗಿಯೇ ಉಳಿಯದೆ ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕ, ಹೀಗೆ ಇತಿಹಾಸದ ಉದ್ದಕ್ಕೂ ಬೆಳದು ಬಂದಿದೆ.

ಕರ್ನಾಟಕ - ಮಹಾರಾಷ್ಟ್ರಗಳ ಸಾಂಸ್ಕೃತಿಕ ಅನುಬಂಧವು ಅತಿ ಪ್ರಾಚೀನ ಕಾಲದಿಂದ ಬಂದಿದೆ. ಆದರೆ ಈ ಪ್ರಾಚೀನತೆ ಆರಂಭವಾದದ್ದು ಯಾವಾಗ ಆಪ್ರಾಚೀನತೆ ಶೋಧಿಸಲು ಇತಿಹಾಸದಲ್ಲಿ ಎಷ್ಟು ಹಿಂದೆ ಹೋಗಬೇಕಾದೀತು ಕನ್ನಡ - ಮರಾಠಿ ಭಾಷೆಗಳು ಎಂದು ಹೇಗೆ ಅಸ್ತಿತ್ವಕ್ಕೆ ಬಂದಿರಬಹುದು ಈ ಭಾಷೆಗಳ ಜನ್ಮಪೂರ್ವ ಅವಸ್ಥೆ ಯಾವುದು? ಈ ಭಾಷೆಗಳ ಮುಂಚೆ ಬೇರೆ ಯಾವ ಭಾಷೆಗಳು ಇರಬಹುದೆ? ಭಾಷೆಗಳ ಭಿನ್ನ- ಭಿನ್ನವಾಗವುದಕ್ಕೆ ಕಾರಣಗಳಾದರೂ ಏನಿರಬಹುದು? ಭಾಷೆ ಭಿನ್ನಗಳಾದರೂ ನಮ್ಮ ಸಂಸ್ಕೃತಿ ಒಂದು ಎಂದು ನಮ್ಮ ಇತಿಹಾಸಕಾರರು ಹೇಳುತ್ತಾರೆ. ಆದರೆ ಆ ಭಾಷೆಗಳಲ್ಲಿಯ ಐಕ್ಯಭಾವನೆಯ ಸ್ವರೂಪವೇನು ಚರಿತ್ರೆಯ ಪ್ರದೀರ್ಘ ಕಾಲಪ್ರವಾಹದಲ್ಲಿ ಈ ಭಷೆಗಳು ಒಬ್ಬರೊಬ್ಬರ ಪ್ರಭಾಗಳನ್ನು ಯಾವರೀತಿ ಅಳವಡಿಸಿಕೊಂಡಿರಬಹುದು? ಮತ್ತು ಇಂಥ ಪ್ರಶ್ನೆಗಳು ಭಾಷಿಕ ಹಾಗೂ ತೌಲನಿಕ ಅಭ್ಯಾಸಕರ ಎದುರಿಗಿವೆ. ವ್ಯಕ್ತಿಗತ ಅಭಿನಿವೇಶಗಳನ್ನೂ ಹಾಗೆಯೇ ಇತಿಹಾಸದ ಉದ್ದಕ್ಕೂ ಹಲವಾರು ಕಾರಣಗಳಿಂದ ಬೆಳೆದು ಬಂದ ತಪ್ಪು ತಿಳುವಳಿಕೆಗಳನ್ನೂ ಬದಿಗಿಟ್ಟು ಕೇವಲ ವೈಜ್ಞಾನಿಕ ಹಾಗೂ ಬುದ್ಧಿಷ್ಠ ಈ ಪ್ರಶ್ನೆಗಳಿಗೆ ಉತ್ತರಗಳನ್ನು ಶೋಧಿಸುವ ಅವಶ್ಯಕತೆ ಇದೆ.

ಪ್ರಾಚೀನ ರಾಜವಂಶಗಳು :

ಕನ್ನಡ-ಮರಾಠಿ ಈ ಎರಡೂ ಭಾಷೆಗಳು ಸುಮಾರು ೨೦೦೦ ವರ್ಷಗಳಿಂದ ಭಿನ್ನ ಭಿನ್ನ ರಾಜವಂಶದ ಆಡಳಿತಗಳನ್ನು ಕಂಡಿವೆ. ರಾಜವಂಶಗಳ ಜೊತೆ ಭಿನ್ನ ಭಿನ್ನ ಭಾಷೆಗಳ ಉದಯಾಸ್ತಗಳನ್ನೂ ಅವರು ನೋಡಿರಬಹುದು. ಇಂದಿನ ಮರಾಠಿ ಪ್ರದೇಶದ ಮೇಲೆ ಚಾಲುಕ್ಯ, ರಾಷ್ಟ್ರಕೂಟ, ಶಿಲಾಹಾರ ಮೊದಲಾದ ಕನ್ನಡ ರಾಜವಂಶಗಳ ಆಳ್ವಿಕೆ ಬಹುಕಾಲದವರೆಗೆ ಇತ್ತು. ಯಾದವರ ಕಾಲವು ಮಹಾರಾಷ್ಟ್ರ ಸಂಸ್ಕೃತಿಯ ಉದಯ ಕಾಲವೆಂದು ಇತಿಹಾಸಕಾರರು ವರ್ಣಿಸಿದ್ದಾರೆ. ತಮಿಳು ಭಾಷೆ ಬಿಟ್ಟರೆ ಕನ್ನಡವೇ ಎಲ್ಲ ಭಾರತೀಯ ಭಾಷೆಗಳಲ್ಲಿ ಅತೀ ಪ್ರಾಚೀನವಾದುದು. ಕನ್ನಡ ಭಾಷೆಯ ಉಗಮ ಇಸವಿತನಕ್ಕಿಂತಲೂ ಕೆಲವು ಶತಮಾನಗಳ ಹಿಂದೆ

ಆಗಿರುವುದಾಗಿ ಕನ್ನಡದ ಸಂಶೋಧಕರು ಸ್ಪಷ್ಟಪಡಿಸಿದ್ದಾರೆ. ಮೂರನೇ ಶತಮಾನದಲ್ಲಿ ಸಾತವಾಹನರು ಆಳುತ್ತಿದ್ದಾಗ ಕನ್ನಡದ ಅಸ್ತಿತ್ವದ ಆಧಾರಗಳು ಉಪಲಬ್ಧವಾಗಿವೆ. ಸಾತವಾಹನರು ಕನ್ನಡ ಭಾಷಿಕರಾಗಿದ್ದಾರೆಂಬ ಪುರಾವೆಗಳೂ ಇವೆ. ಯಾದವರ ಕಾಲದಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರದ ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಕೊಡಕೊಳ್ಳುವ ಕಾರ್ಯ ಹೆಚ್ಚು ಗತಿಶೀಲವಾಗಿದೆ. ಖ್ಯಾತ ಮರಾಠಿ ಇತಿಹಾಸ ಸಂಶೋಧಕ ರಾಜವಾಡೆ ಅವರು ಮರಾಠಿ ಭಾಷೆಯ ಉಗಮ ೬ನೇ ಶತಮಾನದಲ್ಲಿ ಆಗಿರಬಹುದೆಂದು ಹೇಳುತ್ತಾರೆ. ಅವರ ಸಂಶೋಧನೆಯ ಮೇರೆಗೆ ಪ್ರಾರಂಭದ ಮರಾಠಿಗೂ ಮತ್ತು ೧೩ನೇ ಶತಮಾನದ ಜ್ಞಾನೇಶ್ವರರ ಮರಾಠಿಗೂ ೬೦೦-೭೦೦ ವರ್ಷಗಳ ಅಂತರವಿದೆ. ಅಂದರೆ ಈ ಕಾಲದಲ್ಲಿ ಮರಾಠಿ ಭಾಷೆ ಗ್ರಂಥನಿಷ್ಠ ಭಾಷೆಯಾಗಲು ರೂಪುಗೊಳ್ಳುತ್ತಿತ್ತು. ಈ ಕಾಲಾವಧಿಯಲ್ಲಿಯೇ ಕನ್ನಡ ಭಾಷೆಯ ಪ್ರಭಾವ ಮರಾಠಿ ಭಾಷೆಯ ಮೇಲೆ ಆಗಿರಲು ಸಾಧ್ಯ.

ಕರ್ನಾಟಕ ಹಾಗೂ ಮಹಾರಾಷ್ಟ್ರ ಇವುಗಳ ನಡುವೆ ಸುಮಾರು ೧೫೦೦ ವರ್ಷಗಳ ಆಡಳಿತಾತ್ಮಕ ಸಂಬಂಧವಿದೆ. ಕನ್ನಡದ ರಾಜಮನೆತನಗಳು ಮಹಾರಾಷ್ಟ್ರದ ಮೇಲೆ ಹದಿಮೂರನೇಯ ಶತಮಾನದವರೆಗೆ ಪ್ರಭಾವ ಬೀರಿವೆ. ಆನಂತರದ ಕಾಲದಲ್ಲಿ ಮಹಾರಾಷ್ಟ್ರದ ಪ್ರಭಾವ ಕರ್ನಾಟಕದ ಮೇಲೆ ವಿಶೇಷವಾಗಿ ಉತ್ತರ ಕರ್ನಾಟಕದ ಮೇಲೆ ಆಗಿರುವುದದನ್ನೂ ನಾವು ನೋಡಬಹುದು. ಖ್ಯಾತ ಕನ್ನಡ ಸಂಶೋಧಕ ಕಲ್ಬುರ್ಗಿಯವರು ಮಹಾರಾಷ್ಟ್ರದಲ್ಲಿ ದೊರೆತ ಕನ್ನಡ ಶಾಸನಗಳ ಆಧಾರದಿಂದ ಕರ್ನಾಟಕ ಮಹಾರಾಷ್ಟ್ರಗಳ ಸಂಬಂಧವನ್ನು ಹೆಚ್ಚು ಆಳವಾಗಿ ಮತ್ತು ಅಭ್ಯಾಸಪೂರ್ವಕ ಸ್ಪಷ್ಟಪಡಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಕನ್ನಡ ಶಾಸನಗಳೇ ಹೆಚ್ಚಾಗಿರುವುದರಿಂದ ಅವು ಗಡಿ ಪ್ರದೇಶವೆಂದೆನಿಸದೇ ಎರಡೂ ಜನಾಂಗಗಳ ಸಮಾನಸ್ತರದ ಬದುಕಿನ ಲಕ್ಷಣಗಳನ್ನು ಆಧಾರಪೂರ್ವಕವಾಗಿವೆ ಎನ್ನಲಾಗಿದೆ.

ಸಂತರ ಸಂಪ್ರದಾಯ :

ಕರ್ನಾಟಕ ಮಹಾರಾಷ್ಟ್ರದಲ್ಲಿ ಸಂತರ ಪರಂಪರೆಗೆ ಒಂದು ಮಹತ್ವದ ಸ್ಥಾನವಿದೆ. ಅಲ್ಲಮಪ್ರಭು, ಬಸವೇಶ್ವರ, ಸಿದ್ಧರಾಮ, ಅಕ್ಕಮಹಾದೇವಿ ಮೊದಲಾದ ವೀರಶೈವ ಸಂತರು ಮತ್ತು ಆನಂತರದ ಕಾಲದಲ್ಲಿಯ ಪುರಂದರದಾಸ, ಕನಕದಾಸ, ಜಗನ್ನಾಥದಾಸ ಮೊದಲಾದ ವೈಷ್ಣವದಾಸರು ಧರ್ಮರಕ್ಷಣೆಯ ಕಾರ್ಯವನ್ನು ನಿರ್ವಹಿಸಿದರು. ಅದೇ ರೀತಿ ಮಹಾರಾಷ್ಟ್ರದಲ್ಲಿ ಜ್ಞಾನೇಶ್ವರ, ನಾಮದೇವ, ಏಕನಾಥ, ರಾಮದಾಸ, ತುಕಾರಾಮ ಮುಂತಾದ ಸಂತರು ಭಾಗವತ ಧರ್ಮದ ಸಾರವನ್ನು ಸುಲಭವಾಗಿ ತಿಳಿಸಿ ಸಮಾಜದಲ್ಲಿ ಭಕ್ತಿಯ ಹೊಸ ಪ್ರವಾಹವನ್ನು

ತಂದರು. ವೀರಶೈವ ಸಂಪ್ರದಾಯ. ಮತ್ತು ವಾರಕರೀ ಸಂಪ್ರದಾಯಗಳಲ್ಲಿಯ ಸಾಮ್ಯ ಇಲ್ಲಿ ನಿಚ್ಚಳವಾಗಿ ಕಾಣುತ್ತದೆ. ಮಹಾರಾಷ್ಟ್ರದಲ್ಲಿ ಮರಾಠಿ ಭಾಷೆಯಲ್ಲಿ ಬರೆಯುವ ವೀರಶೈವ ಸಂತರು ಆಗಿ ಹೋಗಿದ್ದಾರೆ. ಎರಡೂ ಭಾಷೆಗಳಲ್ಲಿ ಬರೆಯುವ ಸಂತರೂ ಮಹಾರಾಷ್ಟ್ರದಲ್ಲಿ ಕಾಣುತ್ತಾರೆ. ಮಹಾರಾಷ್ಟ್ರದಲ್ಲಿ ಎಷ್ಟೋ ಶಿವಮಂದಿರದಲ್ಲಿ ಜಂಗಮ ಪೂಜಾರಿ ಇರುವುದು ಇಂದಿಗೂ ಕಾಣುತ್ತದೆ.

ಜ್ಞಾನೇಶ್ವರ ಗುರುಸ್ಥಾನದಲ್ಲಿದ್ದ ನಾಥಪಂಥ ಮತ್ತು ವೀರಶೈವ ಇವೆರಡೂ ಶೈವಮತಕ್ಕೆ ಸಂಬಂಧಿಸಿವೆ. ಅಲ್ಲಮಪ್ರಭು ಮತ್ತು ಗೋರಖನಾಥ ಇವರು ಗುರುಬಂಧುಗಳು. ಗೋರಖನಾಥರ ಕನ್ನಡ ವಚನಗಳು ಇಂದಿಗೂ ಉಪಲಬ್ಧಗಳಿವೆ. ಜ್ಞಾನೇಶ್ವರಿಯ ಮೇಲೆ ಕನ್ನಡದ ಪ್ರಭಾವ ಎಷ್ಟಿದೆ ಎಂಬುದರ ಕುರಿತು ಬೆಳಗಾವಿಯ ಖ್ಯಾತ ಕನ್ನಡ ಸಂಶೋಧಕ ಲೋಕಾಪುರರ ಅಭ್ಯಾಸಪೂರ್ವ ಗ್ರಂಥ ಪ್ರಸಿದ್ಧವಿದೆ. ವೀರಶೈವರ ಆಧ್ಯಾತ್ಮಿಕ ಪರಿಭಾಷೆ ಜ್ಞಾನೇಶ್ವರರಿಗೆ ಸಾಕಷ್ಟು ಪರಿಚಿತವಿತ್ತು ಜ್ಞಾನೇಶ್ವರಿಯ ಆರನೆಯ ಅಧ್ಯಾಯದಲ್ಲಿ ಜ್ಞಾನೇಶ್ವರರು ಕುಂಡಲಿನಿ ಶಕ್ತಿಯ ವರ್ಣನೆ ಮಾಡುವಾಗ ಲಿಂಗ ಸಾಮರಸ್ಯ ಎಂಬ ವೀರಶೈವರ ಸಂಜ್ಞೆಯನ್ನು ಉಪಯೋಗಿಸಿದ್ದಾರೆ. ಜ್ಞಾನದೇವರ ಪುಣ್ಯಭೂಮಿಯಾದ ಆಳಂದಿ ಜ್ಞಾನದೇವರ ಪೂರ್ವಕಾಲದಿಂದಲೂ ವೀರಶೈವರ ಶಿವಪೀಠವಾಗಿತ್ತು. ಗುರುದೇವ ರಾನಡೆ ಅವರು ಕನ್ನಡ, ಮರಾಠಿ, ಹಿಂದಿ ಸಂತರ ವಿಚಾರದಲ್ಲಿಯ ಸಾಮ್ಯವನ್ನು ಅವರ ಖ್ಯಾತ ದಾಥವೇ ಟು ಗಾಡ್ ಈ ಗ್ರಂಥದಲ್ಲಿ ಸ್ಪಷ್ಟಪಡಿಸಿದ್ದಾರೆ. ಜ್ಞಾನೇಶ್ವರಿಯ ಮೂಲಕ ಮಹಾರಾಷ್ಟ್ರದಲ್ಲಿ ನಿರ್ಮಾಣಗೊಂಡ ಆಧ್ಯಾತ್ಮಿಕ ಲೋಕ ಶಾಹಿ ಅಂದರೆ ಕರ್ನಾಟಕದಲ್ಲಿ ಬಸವಾದಿ ಸಂತರು ನಿರ್ಮಿಸಿದ ಆಧ್ಯಾತ್ಮಿಕ ಕ್ರಾಂತಿಯ ಹೊಸರೂಪ ಎಂದು ಮರಾಠಿ ಅಭ್ಯಾಸಕರು ಹೇಳಿದ್ದಾರೆ. ಶಿವಶರಣರ ವಚನ ಸಾಹಿತ್ಯ ಮತ್ತು ವಿಠಲ ಭಕ್ತರ ದಾಸ ಸಾಹಿತ್ಯ ಈ ಅನುಭಾವ ಸಾಹಿತ್ಯವೇ ಮಹಾರಾಷ್ಟ್ರ ಸಂತರ ಆದರ್ಶಗಳಾಗಿದ್ದವರು.

ಈ ಬಗ್ಗೆ ಎಲ್ಲ ಇತಿಹಾಸಕಾರರು ಒಪ್ಪಿಕೊಂಡಿದ್ದಾರೆ. ಬಸವೇಶ್ವರರ ಬತ್ತೀಸರಾಗವನ್ನು ಹಾಡಿದರೆ ಜ್ಞಾನೇಶ್ವರರ ಇಪ್ಪತ್ತು ಅಭಂಗಗಳು ಕನ್ನಡದಲ್ಲಿವೆ ಎಂದು ತಿಳಿಯಲಾಗಿದೆ. ಪುರಂದರದಾಸರು ಮತ್ತು ಏಕನಾಥರು ಸಮವಯಸ್ಕರೂ ಹಾಗೂ ಸಮಕಾಲೀನರೂ ಆಗಿದ್ದರು. ಮುಕ್ತೇಶ್ವರರು ಬರೆದ ಮರಾಠಿ ಮಹಾಭಾರತದ ಮೇಲೆ ಕುಮಾರವ್ಯಾಸ ಭಾರತದ ಪ್ರಭಾವ ಉಂಟು ಎಂದು ಇತಿಹಾಸಕಾರರು ಹೇಳುತ್ತಾರೆ. ಈ ರೀತಿ ೧೧ನೇ ಶತಮಾನದಲ್ಲಿಯ ಕನ್ನಡ ಸಾಹಿತ್ಯದ ಪ್ರಭಾವ ಮುಂದೆ ೧೩ರಿಂದ ೧೭ ಶತಮಾನದವರೆಗೆ ಮರಾಠಿ ಸಾಹಿತ್ಯದ ಮೇಲೆ ಕಾಣುತ್ತದೆ.

ಕನ್ನಡ–ಮರಾಠಿ ರಂಗಭೂಮಿ :

ಹತ್ತೊಂಬತ್ತನೆಯ ಶತಮಾನದ ಮಧ್ಯದಲ್ಲಿ ಕನ್ನಡದ ಯಕ್ಷಗಾನ, ಬಯಲಾಟಗಳು ಮಹಾರಾಷ್ಟ್ರದಲ್ಲಿ ಪ್ರಸಿದ್ಧಿ ಹೊಂದಿದ್ದವು. ಮರಾಠಿ ರಂಗಭೂಮಿಯ ಜನಕರೆಂದು ಕೀರ್ತಿ ಪಡೆದ ಅಣ್ಣಾ ಸಾಹೆಬ ಕಿರ್ಲೋಸ್ಕರರು ಕರ್ನಾಟಕದವರು. ಅವರ ನಾಟಕಗಳಿಗೆ ಕನ್ನಡ ನಾಟ್ಯ ಮತ್ತು ಸಂಗೀತಗಳೇ ಪ್ರೇರಣೆಯಾಗಿವೆ ಎಂದು ನಾಟ್ಯ ಸಮೀಕ್ಷಕರು ಒಪ್ಪುತ್ತಾರೆ. ಕಾರವಾರ ಜಿಲ್ಲೆಯಲ್ಲಿರುವ ಕೀರ್ತಿಗ್ರಾಮದ ಒಂದು ಯಕ್ಷಗಾನ ಮೇಳವು ೧೮೪೨ ರಲ್ಲಿ ಮಹಾರಾಷ್ಟ್ರದ ಸಾಂಗಲಿ ಅಧಿಪತಿ ಅಪ್ಪಾಸಾಹೆಬ ಪಟವರ್ಧನರ ಆಮಂತ್ರಣದ ಮೇರೆಗೆ ಸಾಂಗಲಿ ಸಂಸ್ಥಾನಕ್ಕೆ ಭೇಟಿ ನೀಡಿತು. ಆ ಯಕ್ಷಗಾನದ ಪ್ರಯೋಗವನ್ನು ಕಂಡು ಪಟವರ್ಧರು ತಮ್ಮ ಸಂಸ್ಥಾನದ ಶ್ರೇಷ್ಠ ಸಂಗೀತಕಾರರಾದ ವಿಷ್ಣುದಾಸ ಭಾವೆ ಅವರಿಗೆ ಈ ರೀತಿಯ ನಾಟಕ ಮರಾಠಿಯಲ್ಲಿ ಬರೆಯಲು ಆಜ್ಞಾಪಿಸಿದರು. ವಿಷ್ಣುದಾಸ ಭಾವೆ ಅವರು ಸೀತಾಸ್ವಯಂವರ ಎಂಬ ನಾಟಕ ರಚಿಸಿದರು. ಇದು ಮರಾಠಿ ರಂಗಭೂಮಿಯ ಮೊದಲನೇ ನಾಟಕ ೧೮೪೩ರಲ್ಲಿ ಪ್ರಕಟವಾಯಿತು. ಅಪರಾಳ ತಮ್ಮಣ್ಣನ ಶ್ರೀಕೃಷ್ಣಪಾರಿಜಾತ ಈ ನಾಟಕದಿಂದ ಪ್ರಭಾವಿತರಾಗಿ ಅಣ್ಣಾ ಸಾಹೆಬ ಕಿರ್ಲೋಸ್ಕರರು ಮರಾಠಿಯಲ್ಲಿ ಶ್ರೀಕೃಷ್ಣ ಪಾರಿಜಾತ ರಚಿಸಿದ್ದಾರೆ.

ಮರಾಠಿ ಶ್ರೀಕೃಷ್ಣ ಪಾರಿಜಾತದೊಡನೆ ಕನ್ನಡ ಪಾರಿಜಾತದ ತುಲನೆ ಮಾಡಿ ಪ್ರಲ್ಹಾದ ಮುದಗಲ್ಲ ಅವರು ಎರಡೂ ಭಾಷೆಗಳಲ್ಲಿಯ ರಂಗಭೂಮಿಯ ಸಂಬಂಧಗಳನ್ನು ಸ್ಪಷ್ಟಪಡಿಸಿದ್ದಾರೆ. ೧೮೭೦ರಲ್ಲಿ ಬೆಳಗಾವಿ ಸಮಾಚಾರ ಛಾಪಖಾನೆಯಲ್ಲಿ ಪ್ರಕಟವಾದ ಶ್ರೀಕೃಷ್ಣ ಪಾರಿಜಾತ ನಾಟಕಕ್ಕೆ ಮರಾಠಿ ಮುನ್ನಡಿ ಇದೆ. ಕನ್ನಡ–ಮರಾಠಿ ಸಂಬಂಧಕ್ಕೆ ಇದೊಂದು ಉತ್ತಮ ಉದಾಹರಣೆ. ಮರಾಠಿ ರಂಗಭೂಮಿಗೆ ಸಂಗೀತ ಬಂದದ್ದು ಕನ್ನಡ ನಾಟಕಗಳಿಂದಲೇ ಕನ್ನಡ ಪದಗಳ ಧಾಟಿಗಳು ಮರಾಠಿಯಲ್ಲಿ ಹೆಚ್ಚು ಪ್ರಭಾವಿತವಾಗಿ ಲೋಕಪ್ರಿಯವಾದವು. ಪ್ರಾರಂಭದಲ್ಲಿ ಮರಾಠಿ ನಾಟಕಕಾರರು ಕನ್ನಡ ಹಾಡುಗಳನ್ನೇ ಬಳಸಿಕೊಂಡರು. ಭಾನ್ನರಬುವಾ ಭೂಸಲೇ ಮರಾಠಿ ರಂಗಭೂಮಿಗೆ ಸಂಗೀತ ಗುರುಗಳಿಗೆ ದೊರೆತ ಮೇಲೆ ಕನ್ನಡ ನಾಡಿನ ಧಾಟಿಗಳೂ ಕೂಡಿ ಹಿಂದೂಸ್ಥಾನಿ ರಾಗ ತಾಳಗಳಿಗೆ ಹೊಂದಿಕೊಂಡವು. ಪಾಂಡು ನೃಪತಿ ಜನಕಜಯಾ ನಚ ಸುಂದರಿ ಕರು ಕೋಪಾ ಉಗಿಚ ಕಾ ಕಾಂತಾ ಈ ಪ್ರಸಿದ್ಧ ಮರಾಠಿ ನಾಟ್ಯ ಗೀತಗಳ ಮೂಲ ಕನ್ನಡ ಪದಗಳಲ್ಲಿದೆ. ಮುಂದೆ ಅಣ್ಣಾ ಸಾಹೇಬ ಕಿರ್ಲೋಸ್ಕರರು ಬರೆದ ಶಾಕುಂತ ಈ ಪ್ರಸಿದ್ಧ ಸಂಗೀತ ನಾಟಕದ ಬೇರುಗಳೂ ಕೂಡ ಕನ್ನಡ ನಾಟಕದಲ್ಲಿ ಕಾಣುತ್ತೇವೆ. ಚುರುಮುರಿ ಶೇಷಗಿರಿರಾವರು ಬರೆದ ಕನ್ನಡ ಶಾಕುಂತಲ ನಾಟಕದಲ್ಲಿಯ ಪದಗಳ ಧಾಟಿ ರಂಗಸಜ್ಜಿಕೆಯಿಂದ ಕಿರ್ಲೋಸ್ಕರರು ಪ್ರಭಾವಿತರಾಗಿದ್ದರು. ಕಿರ್ಲೋಸ್ಕರ ದೇವಲ ಖಾಡಿಲಕರ

ಕೊಲ್ಹಟಕರ ಈ ಪ್ರಸಿದ್ಧ ಮರಾಠಿ ನಾಟಕಕಾರರು ತಮ್ಮ ನಾಟಕಗಳಲ್ಲಿ ಕನ್ನಡ ಪದಗಳ ಧಾಟಿಗಳನ್ನು ಸೂಚಿಸಿ ತಮ್ಮ ಮರಾಠಿ ಹಾಡನ್ನು ಕಟ್ಟಿದ್ದಾರೆ. ಸ್ವಾತಂತ್ರ್ಯೋತ್ತರ ಮರಾಠಿ ರಂಗಭೂಮಿಯ ಮೇಲೆ ಆಚಾರ್ಯ ಅತ್ರೆ, ರಾಂಗಣೇಕರ, ಕನೇಟಕರ, ಇವರ ಪ್ರಭಾವವಿದೆ. ಇವರೆಲ್ಲರ ಪ್ರಸಿದ್ಧ ನಾಟಕಗಳು ಕನ್ನಡ ಅನುವಾದಗಳು. ಕನ್ನಡ ರಂಗಭೂಮಿಯ ಮೇಲೆ ಪ್ರಯೋಗಗೊಂಡಿವೆ. ಅದೇ ಪ್ರಕಾರ ಶ್ರೀರಂಗರ ಹಲವು ನಾಟಕಗಳು ಮರಾಠಿ ರಂಗಭೂಮಿಯ ಮೇಲೆ ಲೋಕಪ್ರಿಯವಾಗಿವೆ. ಇತ್ತೀಚಿಗೆ ಗಿರೀಶ ಕಾರ್ನಾಡ ಮತ್ತು ಚಂದ್ರಶೇಖರ ಕಂಬಾರರ ಬಗ್ಗೆ ಮಹಾರಾಷ್ಟ್ರದಲ್ಲಿ ತುಂಬಾ ಕುತೂಹಲ ಇದೆ. ಹಯವದನ, ತುಘಲಕ, ಸಂಗ್ಯಾಬಾಳ್ಯಾ ಮರಾಠಿ ರಂಗಭೂಮಿಯ ಮೇಲೆ ಇತ್ತೀಚೆಗೆ ಲೋಕಪ್ರಿಯವಾದ ವಾಕ ಪಾತ್ರೀ ಪ್ರಯೋಗ ಕಥಾನಕ ಈ ಪ್ರಯೋಗಗಳು ಕನ್ನಡ ರಂಗಭೂಮಿಗೂ ಪರಿಚಿತವಾಗಿವೆ. ಕನ್ನಡರಸಿಕರ ರಸಿಕತೆಗೆ ಮಾರುಹೋಗಿ ಪ್ರಭಾಕರ ಪಣಿರಿಕರ ಹಾಗೂ ಪ್ರಿಯಾ ತೆಂಡಲಕರರು ಕನ್ನಡ ಕಲಿತು ಕನ್ನಡದಲ್ಲಿ ಪ್ರಯೋಗಗಳನ್ನು ಮಾಡಿದ ಉದಾಹರಣೆಗಳು ಮರಾಠಿ ಸಂಬಂಧಗಳು ಆಂತರಿಕ ಐಕ್ಯತೆಯನ್ನು ದೃಢಪಡಿಸುತ್ತವೆ.

ಆಧುನಿಕ ಸಾಹಿತ್ಯ :

ಆಧುನಿಕ ಮರಾಠಿ ಸಾಹಿತ್ಯದ ಪ್ರಾರಂಭ ೧೮೮೫ರಲ್ಲಿ ಆಯಿತು. ಕನ್ನಡದ ಪರಿಭಾಷೆಯಲ್ಲಿ ಹೇಳುವುದಾದರೆ ೧೮೮೫ರಿಂದ ೧೯೭೦ರವರೆಗಿನ ಮರಾಠಿ ಸಾಹಿತ್ಯಕ್ಕೆ ನವೋದಯ ಕಾಲದಲ್ಲಿ ಅಂತ ಹೇಳಬಹುದು. ಹರಿ ನಾರಾಯಣ ಆಪಟೆ ಅವರ ಕಾದಂಬರಿಗಳು, ಕೇಶವಸುತರ ಕವಿತೆ, ಕಿರ್ಲೋಸ್ಕರರ ನಾಟಕ ಪ್ರಾರಂಭವಾದದ್ದು ಇದೇ ಕಾಲದಲ್ಲಿ. ಬ್ರಿಟಿಷರ ಆಗಮನದಿಂದ ಹಿಡಿದು ಭಾರತ ಸ್ವತಂತ್ರವಾಗುವವರೆಗಿನ ಮರಾಠಿ ಸಾಹಿತ್ಯದ ಮೇಲೆ ಮುಖ್ಯವಾಗಿ ಸಮಾಜದ ವಿಚಾರಗಳ ಪ್ರಭಾವ ಬೆಳೆದು ಬಂದಿದೆ. ಪ್ರಾರಂಭ ಕಾಲದಲ್ಲಿ ಜೋತಿರಾಯ ಫುಲೆ ಮತ್ತು ಲೋಕಹಿತವಾದಿ ಆಮೇಲೆ ನ್ಯಾಯಮೂರ್ತಿ ರಾಗಡೆ, ಗೋಖಲೆ, ಟಿಳಕ, ಅಗರಕರ ಇವರ ಕ್ರಾಂತಿಕಾರಕ ವಿಚಾರಗಳ ಮೇಲೆಯೇ ಆಧುನಿಕ ಮಹಾರಾಷ್ಟ್ರವು ಆಕಾರಗೊಂಡಿವೆ. ಆನಂತರದ ಕಾಲದಲ್ಲಿ ಮುಖ್ಯವಾಗಿ ಅಂಬೇಡ್ಕರ ಮರಾಠಿ ಸಾಹಿತ್ಯದಲ್ಲಿ ಹೋಗಿ ಜಾಗೃತಿ ಹಾಗೂ ಹೊಸ ಪ್ರವಾಹಗಳು ಬಂದವು. ೧೮೭೫ರಿಂದ ೧೯೩೦ರವರೆಗಿನ ಕಾಲವನ್ನು ಕನ್ನಡ ಕಾದಂಬರಿಯ ಉದಯದ ಕಾಲವೆಂದು ಆಮೂರ ಗುರುತಿಸಿದ್ದಾರೆ.

ಈ ಕಾಲದಲ್ಲಿ ಕಾದಂಬರಿಗಳ ಮೇಲೆ ಬಂಗಾಲಿ ಹಾಗೂ ಮರಾಠಿ ಕಾದಂಬರಿಗಳ ಪ್ರಭಾವ ಗುರುತಿಸಬಹುದು. ಗಳಗನಾಥರು ಮಹತ್ವದ ಮರಾಠಿ ಕಾದಂಬರಿಗಳನ್ನು ಕನ್ನಡಕ್ಕೆ

ಅನುವಾದಿಸಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ಪ್ರಾರಂಭ ಸಾಮಾನ್ಯವಾಗಿ ೧೯೧೫-೨೦ರಲ್ಲಿ ಆಗಿದೆ. ಬಿ.ಎಮ್. ಶ್ರೀಕಂಠಯ್ಯನವರ ಕಾವ್ಯದಿಂದ ನವೋದಯ ಕಾಲ ಪ್ರಾರಂಭವಾಯಿತು. ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳು ಆಗಿನ ಮುಂಬಯಿ ಪ್ರಾಂತಕ್ಕೆ ಜೋಡಿಸಿದ್ದರಿಂದ ಬೆಳಗಾವಿ, ವಿಜಯಪುರ, ಧಾರವಾಡ ಮತ್ತು ಕಾರವಾರ ಈ ಜಿಲ್ಲೆಗಳಲ್ಲಿಯ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕ ವಾತಾವರಣವು ಹೆಚ್ಚು ಕಡಿಮೆ ಮಹಾರಾಷ್ಟ್ರದ ಹಾಗೆಯೇ ಇರುವುದನ್ನು ನಾವು ಕಾಣಬಹುದು. ಕನ್ನಡದ ಮೊದಲನೆಯ ಪೀಳಿಗೆಯ ಶ್ರೇಷ್ಠ ಸಾಹಿತಿಗಳಾದ ಮಹಾಕವಿ ಕುವೆಂಪು, ಬೇಂದ್ರೆ, ಮಾಸ್ತಿ, ಕಾರಂತ, ಗೋಕಾಕ ಇವರ ಸಾಹಿತ್ಯವನ್ನು ಸಮಕಾಲೀನ ಮರಾಠಿ ಸಾಹಿತಿಗಳಾದ ಖಂಡೇಕರ, ಫಡಕೆ, ಅತ್ರೆ ಸಾನೇ ಗುರೂಜಿ ಇವರ ಸಾಹಿತ್ಯದ ಜೊತೆಗೆ ಹೋಲಿಸಿದರೆ ಎಷ್ಟೋ ಸಮಾನ ಗುಣಗಳನ್ನು ನಾವು ಪರಿಶೀಲಿಸಬಹುದು. ಕನ್ನಡ ಹಾಗೂ ಮರಾಠಿ ಭಾಷೆಯಲ್ಲಿ ನವ್ಯ ಸಾಹಿತ್ಯ ಪ್ರಾರಂಭವಾದದ್ದು ಒಂದೇ ಕಾಲದಲ್ಲಿ.

ಕನ್ನಡದಲ್ಲಿ ಅಡಿಗರ, ಹಾಗೆ ಮರಾಠಿಯಲ್ಲಿ ಮರ್ಢೇಕರರು, ಕನ್ನಡದಲ್ಲಿ ಅನಂತಮೂರ್ತಿ, ಲಂಕೇಶರು ಹಾಗೆ ಮರಾಠಿಯಲ್ಲಿ ಗಾಡಗೀಳ-ಗೋಖಲೆ ಅವರು. ಕನ್ನಡದಲ್ಲಿ ರಂಗಭೂಮಿಯ ಮೇಲಿನ ಶ್ರೀರಂಗ ಮತ್ತು ಕಾರ್ನಾಡರೆಂದರೆ ಮರಾಠಿ ರಂಗಭೂಮಿಯ ಮೇಲಿನ ವಸಂತ ಕಾನೇಟಕರ ಮತ್ತು ವಿಜಯ ತೆಂಡುಲಕರ ಎಂದು ಹೇಳಬಹುದು. ಸಮಾನ ಪ್ರಕೃತಿ. ಮತ್ತು ಪ್ರವೃತ್ತಿಯ ಈ ಲೇಖಕರು ಭಿನ್ನ ಭಾಷೆಗಳಲ್ಲಿ ಬರೆಯುತ್ತಿದ್ದರೂ ಅವರ ಆಂತರಿಕ ಪ್ರತಿಕ್ರಿಯೆಗಳು ಸಮಾನವಾಗಿಯೇ ವ್ಯಕ್ತವಾಗುತ್ತವೆ. ಕಳೆದ ಮೂರು-ನಾಲ್ಕು ದಶಕಗಳಲ್ಲಿ ಮರಾಠಿಯಲ್ಲಿ ಪ್ರಕಟವಾದ ಮಹಿಳೆಯರ ಆತ್ಮಚರಿತ್ರೆಯ ಪ್ರವಾಹ ಹಾಗೂ ದಲಿತ ಸಾಹಿತ್ಯದ ಕಹಳೆ ಈಗ ಕನ್ನಡ ಸೀಮೆಯಲ್ಲಿಯೂ ಕೇಳಿಸುತ್ತಿದೆ. ಕಳೆದ ಒಂದೆರಡು ದಶಕಗಳಿಂದ ಅನುವಾದ ಕ್ಷೇತ್ರದಲ್ಲಿಯೂ ಮರಾಠಿ ಕನ್ನಡದ ಬಾಂಧವ್ಯ ಬೆಳೆಯುತ್ತಿದೆ. ಈವರೆಗೆ ಮರಾಠಿಯಿಂದ ಕನ್ನಡಕ್ಕೆ ಅನುವಾದಗೊಂಡ ಪುಸ್ತಕಗಳ ಸಂಖ್ಯೆಯೇ ಹೆಚ್ಚಾಗಿತ್ತು. ಆದರೆ ಇತ್ತೀಚೆಗೆ ಕನ್ನಡದ ಅನುವಾದಗಳೂ ಮರಾಠಿಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪ್ರಕಟಗೊಂಡಿವೆ. ಶಿವರಾಮ ಕಾರಂತ, ಭೈರಪ್ಪ, ಅನಂತಮೂರ್ತಿ, ಕಾರ್ನಾಡ, ಕಂಬಾರ ಈ ಸಾಹಿತಿಗಳು ಮರಾಠಿಯಲ್ಲಿ ಹೆಚ್ಚು ಲೋಕಪ್ರಿಯರಾಗಿದ್ದಾರೆ.

ಇವರ ಯಾವುದೇ ಪುಸ್ತಕಕ್ಕೂ ಪ್ರಕಾಶಕರ ಬೇಡಿಕೆ ಇದೆ. ಭಾಷಿಕ ರಾಜ್ಯ ನಿರ್ಮಿತೆಯ ನಂತರ ಮಹಾರಾಷ್ಟ್ರ, ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಜೋಡಿಸುವುದರಲ್ಲಿ ಬೇಂದ್ರೆ, ಮುಗಳಿ,

ಗೋಕಾಕ ಇವರ ಕಾರ್ಯ ಮಹತ್ವದ್ದು. ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್ ಇವರೂ ಕೂಡ ಮಹಾನ್ ಸೇತುವೆಗಳಾಗಿದ್ದಾರೆ ಎಂದು ಹೇಳಬಹುದು.

ಕರ್ನಾಟಕದ ಏಕೀಕರಣಕ್ಕಿಂತ ಮೊದಲಿನಿಂದ ಮುಂಬಯಿ ಪ್ರಾಂತ್ಯದಲ್ಲಿ ಸೇರಿ ಹೋದ ಉತ್ತರ ಕರ್ನಾಟಕವು ಕನ್ನಡ–ಮರಾಠಿಯ ದ್ವೈಭಾಷಿಕ ಪ್ರದೇಶವಾಗಿ ಬೆಳೆಯಿತು. ಇಲ್ಲಿಯ ಜನ ಈ ಎರಡೂ ಭಾಷೆಯನ್ನು ಯಾವ ಮುಜುಗರವೂ ಇಲ್ಲದೆ ಬೆಳೆಸುತ್ತ ಬಂದರು ಈ ನೆಲ ಕನ್ನಡ–ಮರಾಠಿ ಎರಡೂ ಭಾಷೆಯನ್ನು ಪೋಷಿಸುತ್ತ ಬಂತು. ಪ್ರಾಯಶಃ ಭಾಷಾವಾರು ಪ್ರಾಂತ್ಯದ ರಚನೆಯ ಕಾಲಕ್ಕೆ ಈ ವಿಷಬೀಜ ಬತ್ತಿದಂತೆ ಕಾಣುತ್ತದೆ. ಆದರೂ ಸಂಸ್ಕೃತಿಯನ್ನು ಪ್ರೀತಿಸುವವರು ಭಾಷಾ ವೈಷಮ್ಯಕ್ಕೆ ಎಡೆ ಮಾಡಿಕೊಡಲಿಲ್ಲ. ಭಾಷಾ ಸೌಹಾರ್ದತೆ, ಸಾಂಸ್ಕೃತಿಕ ಸಮನ್ವಯ ಕನ್ನಡ–ಮರಾಠಿ ಭಾಷಾ ವಿನಿಮಯಕ್ಕೆ ಅವಕಾಸ ಕಲ್ಪಿಸಿದಂತಿದೆ. ಕನ್ನಡದವರು ತಮ್ಮ ನೆಲವನ್ನು ಗೋದಾವರಿ–ನರ್ಮದೆಯವರೆಗೆ ಎಳೆದರು. ಮರಾಠಿ ಜನ ತಂಜಾವೂರದವರೆಗೆ ಗೆರೆ ಕೊರೆದರು. ಇದೆಲ್ಲ ರಾಜಕೀಯ ಡೊಂಬರಾಟ.

ಅದೇನಿದ್ದರೂ ಕನ್ನಡ ದೇಸಿ ಪರಂಪರೆಯ ತನ್ನ ಪ್ರಭಾವವನ್ನು ಮರಾಠಿ ಪ್ರದೇಶದಲ್ಲೂ ಬೀರಿದ್ದು ಚಾರಿತ್ರಿಕ ಸತ್ಯ.

ದಾಸ–ಮಹಾನುಭಾವ ಸಂಪ್ರದಾಯದಲ್ಲಿ ಪುರಂದರ ಚಕ್ರಧರರಂತಹ ಕವಿಗಳಲ್ಲಿ ಆಂತರಿಕ ಸಂಬಂಧವಿರುವುದನ್ನು ಸಂಶೋಧಕರು ಗುರುತಿಸಿದ್ದಾರೆ. ಪ್ರಾಚೀನ ಕಾಲದಲ್ಲಿ ಕವಿಯಿಂದ ಅನುಭಾವ ಕವಿಗಳವರೆಗೆ ಆರ್ವಾಚೀನ ಕಾಲದಲ್ಲಿ ಗಳಗನಾಥರಿಂದ ಬೇಂದ್ರೆಯವರೆಗೆ ನಿರಂತರ ವಿನಿಮಯ ಕಾರ್ಯ ನಡೆಯಿತು. ಆಂಗ್ಲರಿಂದ ಆರಂಭಗೊಂಡ ಈ ಕೆಲಸ ಕೆಲವೊಮ್ಮೆ ಸಾಂಸ್ಥಿಕ ನೆಲೆಯಲ್ಲಿ ಇಲ್ಲವೆ ವೈಯಕ್ತಿಕ ನೆಲೆಯಲ್ಲಿ ನಡೆದದ್ದನ್ನು ಕಾಣುತ್ತೇವೆ. ಕನ್ನಡ ಪತ್ರಿಕಾ ರಂಗವೂ ಸಹ ಈ ಅನುವಾದ ಕಾರ್ಯಕ್ಕೆ ಒಳ್ಳೆಯ ಸಹಕಾರವನ್ನು ನೀಡುತ್ತಿರುವುದು ಗಮನಾರ್ಹ. ಕರ್ನಾಟಕದ ಏಕೀಕರಣದ ಕಾಲದಲ್ಲಿದ್ದ ಕೆಲ ಹಿರಿಯ ವಿದ್ವಾಂಸರು ಅನುವಾದ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಈ ಎರಡೂ ಭಾಷಿಕ ಪ್ರದೇಶವನ್ನು ಸಾಹತ್ಯಿಕ ಹಾಗೂ ಸಾಂಸ್ಕೃತಿಕವಾಗಿ ಸಮೃದ್ಧಿಗೊಳಿಸಿದರು. ಅಂಥವರಲ್ಲಿ ಗಳಗನಾಥ, ಬೇಂದ್ರೆ, ಶ್ರೀರಂಗ, ಗೌರೀಶ ಕಾಯ್ಕಿಣಿ, ಕುರ್ತಕೋಟಿಯಂತಹ ಒಂದು ದೊಡ್ಡ ಬಳಗವೇ ಇತ್ತು. ಗೋಕಾಕ, ಮುಗಳಿಯಂಥವರು ಸಾಂಗ್ಲಿಯಲ್ಲಿ ಬಂದು ಕಮಲ ಮಂಡಳವನ್ನೇ ಕಟ್ಟಿ ಕನ್ನಡ–ಮರಾಠಿಗೆ ಬೆಸುಗೆ ಹಾಕಿದರು.

ಗಳಗನಾಥರಂತೂ ಮರಾಠಿಯ ಐತಿಹಾಸಿಕ ಕಾದಂಬರಿಗಳನ್ನು ಕನ್ನಡಕ್ಕೆ ತಂದು ಕನ್ನಡಿಗರಲ್ಲಿ ಕ್ಷಾತ್ರತೇಜಸ್ಸು ಬೆಳಗಿಸಲು ಕಾರಣರಾದರು. ಬೇಂದ್ರೆಯವರು ಅನಿಲರ ಮರಾಠಿ

ಕವಿತೆ ಭಗ್ನಮೂರ್ತಿ ಕನ್ನಡಕ್ಕೆ ಭಾಷಾಂತರಿಸಿದರು. ಜ್ಞಾನೇಶ್ವರಿಯನ್ನು ಪರಿಚಯಿಸಿದರು. ಹಿರಿಯ ತಲೆಮಾರಿನವರ ಮೇಲೆ ಸಂತ ಸಾಹಿತ್ಯದ, ಅಭಿಮಾನಿಗಳ ದಟ್ಟ ಪ್ರಭಾವವನ್ನು ಗುರುತಿಸಬಹುದು. ಸಂತಕವಿ, ಶಿವಾಜಿ, ಪಂಡರಪುರದ ವಿಠಲ ಭಕ್ತಿ, ವಾರಕರೀ ಸಂಪ್ರದಾಯ– ಪ್ರಾಯಶಃ ಇವೆಲ್ಲ ಅವರ ಅನುವಾದಗಳ ಹಿಂದಿನ ಪ್ರೇರಕ ಶಕ್ತಿಯಾಗಿರಬೇಕೆಂದು ಅನಿಸುತ್ತದೆ. ಕನ್ನಡ ಸಾಹಿತ್ಯ ಲೋಕ ಮರಾಠಿಯ ಆತ್ಮಕತೆಗಳನ್ನು ದಲಿತ ಕಥೆಗಳನ್ನು ತುಂಬಾ ಆದರದಿಂದ ಸ್ವಾಗತಿಸಿತು. ಮರಾಠಿ ಆತ್ಮಕತೆಗಳು ಸಾಂಸ್ಕೃತಿಕ, ಜನಾಂಗೀಯ ಅಧ್ಯಯನಕ್ಕೆ ಮಹತ್ವ ನೀಡಿದ್ದರಿಂದ ಕನ್ನಡದಲ್ಲಿ ಆಸಕ್ತಿ ಕೆರಳಿಸಿದವು. ಕಮಲ ದೇಸಾಯಿ, ಗೌರಿ ದೇಶಪಾಂಡೆ, ಸಾನಿಯಾ ಇವರೆಲ್ಲ ವೈಚಾರಿಕವಾಗಿ ಅಷ್ಟೇ ತದಾತ್ಮದಿಂದ ಬರವಣಿಗೆಯಲ್ಲಿ ತೊಡಗಿಸಿಕೊಂಡ ಮಹತ್ವದ ಲೇಖಕರು. ಇವರೆಲ್ಲ ಕನ್ನಡಕ್ಕೆ ಬಂದರೆ ಕನ್ನಡ ಮಹಿಳಾ ಸಾಹಿತ್ಯದಲ್ಲಿ ಹೊಸ ಅಧ್ಯಾಯ ಆರಂಭಗೊಳ್ಳಬಹುದು ಎಂದೆನಿಸುತ್ತದೆ. ಮರಾಠಿ ನಾಟಕ ಲೋಕದ ಬಗೆಗೂ ಕನ್ನಡಿಗರಲ್ಲಿ ಬೇಡಿಕೆಯಿದೆ.

ಮರಾಠಿಯ ರಂಗಭೂಮಿ ಅತ್ಯಂತ ಸಮೃದ್ಧವಾದುದು. ಅದರ ಸತ್ವ ಕನ್ನಡಕ್ಕೆ ತರುವ ಕಾರ್ಯ ನಡೆಯಬೇಕಿದೆ. ರಂಗಭೂಮಿಗೆ ಸಂಬಂಧಪಟ್ಟವರು ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಬೇಕಾಗಿದೆ. ಪಾಶೀರಾವ ಕೊತವಾಲ ಆಲ್ ದಿ ಬೆಸ್ಟ್ ಇವು ಕನ್ನಡದಲ್ಲಿ ಕ್ಲಿಕ್ಕಾದ ನಾಟಕಗಳು: ಆದರೆ ಸಾಹಿತ್ಯ ಕೃತಿಯಾಗಿ ಇದರ ಬಗೆಗೆ ಅಷ್ಟೊಂದು ಚರ್ಚೆ ನಡೆದಂತಿಲ್ಲ. ಕೇಸವಸುತ, ವಿಂದಾ ಶರಂದಿಕರ, ಮಂಗೇಶ ಪಾಠಗಾಂವಕರ, ದಿಲೀಪ ಚಿತ್ರೆ ಅರುಣ ಕೊಲ್ಹಟಕರ ಈ ಕವಿಗಳನ್ನು ಕನ್ನಡಕ್ಕೆ ಪರಿಚಯಿಸಬೇಕು.

ಪ್ರಭುಲಿಂಗ ಲೀಲೆಯನ್ನು ಲೀಲಾವಿಶ್ವಂಭರ ಎಂಬ ತಲೆಬರಹದಲ್ಲಿ ಮರಾಠಿಗೆ ಅನುವಾದಗೊಂಡಿದೆ. ಮರಾಠಿ ಸಾಹಿತ್ಯ ಲೋಕದಲ್ಲಿ ಕಾರಂತ, ಬೇಂದ್ರೆ, ಭೈರಪ್ಪ ಅತ್ಯಂತ ಚಿರಪರಿಚಿತರು. ಪುಣೆಯ ಉಮಾ ಕುಲಕರ್ಣಿಯವರು ಭೈರಪ್ಪನವರು ಪ್ರಾಯಶಃ ಎಲ್ಲಾ ಕೃತಿಗಳನ್ನು ಮರಾಠಿಗೆ ತರ್ಜುಮೆ ಮಾಡಿದ್ದಾರೆ. ಭೈರಪ್ಪನವರ ವಂಶವೃಕ್ಷ ಪರ್ವ ಮಹಾರಾಷ್ಟ್ರದಲ್ಲಿ ಅತ್ಯಂತ ಜನಾನುರಾಗ ಗಳಿಸಿದ ಕೃತಿಗಳು. ಉಮಾ ಅವರು ಅನಂತಮೂರ್ತಿಯ ಕಥೆಗಳನ್ನೂ, ತೇಜಸ್ವಿಯ 'ಕರ್ವಾಲೋ'ವನ್ನು ಕಾರ್ನಾಡರ ನಾಟಕಗಳನ್ನು ಅನುವಾದಿಸಿದ್ದಾರೆ. ಮೀನಾ ನಾಂಗೀಕರ 'ಮೂಕಜ್ಜಿಯ ಕನಸುಗಳು' ತರ್ಜುಮೆ ಮಾಡಿದ್ದಾರೆ.

ಕಾರಂತರ ಬಹಳಷ್ಟು ಕಾದಂಬರಿ ಮರಾಠಿಯ ವೈಚಾರಿಕ ಲೋಕದಲ್ಲಿ ತುಂಬಾ ಪ್ರಚಲಿತ. ಕಾರ್ನಾಡರ 'ತುಘಲಕ್', 'ಹಯವದನ' ಮರಾಠಿಯಲ್ಲಿ ಯಶಸ್ವಿ ರಂಗಪ್ರಯೋಗಗೊಂಡಿವೆ. ಭೈರಪ್ಪನವರ ಕಾದಂಬರಿಗಳು, ಕಾರ್ನಾಡರ ನಾಟಕಗಳು ಅಲ್ಲಿ

ತುಂಬಾ ಚರ್ಚೆಗೊಳಗಾಗಿವೆ. ಕಾರಂತರು ಹ.ನಾ. ಆಪ್ಟೆಯವರ 'ಯಾರು ಲಕ್ಷಿಸುವರು?'. ಕನ್ನಡಕ್ಕೆ ತರ್ಜುಮೆ ಮಾಡಿದ್ದರೂ, ಕಂಬಾರರ 'ಜೋಕುಮಾರಸ್ವಾಮಿ' ಶಾಂತಿನಾಥರ 'ಮುಕ್ತಿ' 'ಅಂತರಾಳ' ಮರಾಠಿಗೆ ಅನುವಾದಿಸಲಾಗಿದೆ. ಮರಾಠಿ ಜನ ಕಾರ್ನಾಡರನ್ನು ಅವರ ನಾಟಕಗಳನ್ನು ಇಷ್ಟಪಡುತ್ತಾರೆ. ತೋರೋ ಅವರ 'ಕನ್ನಡ ಶಕುಲ್ಯಾ' ಬಹಳಷ್ಟು ಮರಾಠಿಗರ ಆಸಕ್ತಿ ಕೆರಳಿಸಿದೆ. ಪಂಡಿತ ಆವಳ್ಹಿರ ಕನ್ನಡ ಕವಿತೆಗಳನ್ನು ಮರಾಠಿಗೆ ಅನುವಾದಿಸಿದ್ದಾರೆ. ಗುರುಲಿಂಗ ಕಾಪಸೆ ಸಹ ಒಂದೊಂದು ಅನುವಾದ ಮಾಡಿದ್ದಾರೆ. ಬೆಳಗಾವಿಯ ಸಂಧ್ಯಾ ದೇಶಪಾಂಡೆಯವರು ಕಂಬಾರರ 'ಸಿರಿಸಂಪಿಗೆ' ನಾಟಕವನ್ನು 'ಚಾಫಾ' ಹೆಸರಿನಿಂದ ಅನುವಾದಿಸಿದ್ದಾರೆ. ಕಾರಂತರ 'ಬೆಟ್ಟದ ಜೇನು' 'ಅಳಿದ ಮೇಲೆ' 'ಮರಳಿ ಮಣ್ಣಿಗೆ' ಇವೆಲ್ಲ ಮರಾಠಿಗೆ ಹೋದ ಕೃತಿಗಳು. ಒಟ್ಟಾರೆ ಎರಡು ಭಾಷೆಗಳ ನಡುವೆ ಕೊಡು-ಕೊಳ್ಳುವಿಕೆ ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ನಡೆಯುತ್ತಿರುವುದು ಸಮನ್ವಯದ ದೃಷ್ಟಿಯಿಂದ ಆರೋಗ್ಯಕರ ಲಕ್ಷಣ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಕರ್ನಾಟಕ ಮತ್ತು ಮಹಾರಾಷ್ಟ್ರಗಳು ಅಕ್ಕಪಕ್ಕದ ರಾಜ್ಯಗಳು. ಕರ್ನಾಟಕದ ಭಾಷೆ ಕನ್ನಡವಾದರೆ ಮಹಾರಾಷ್ಟ್ರದ ಭಾಷೆ ಮರಾಠಿ ಎರಡೂ ರಾಜ್ಯಗಳು ಭೌಗೋಳಿಕವಾಗಿ ಈಗ ಬೇರೆ ಬೇರೆಯಾಗಿದ್ದರೂ ಅಥವಾ ತಮ್ಮ ತಮ್ಮ ಸೀಮೆಯನ್ನು ಗುರುತಿಸಿಕೊಂಡು ಪ್ರತ್ಯೇಕ ರಾಜ್ಯಗಳೆಂಬಂತೆ ತೋರುತ್ತಿದ್ದರೂ ಈ ಹಿಂದೆ ಎಷ್ಟೋ ಕಾಲದವರೆಗೆ ಇವೆರಡೂ ಕೂಡಿಯೇ ಏಕವಾಗಿದ್ದವು. ಪ್ರಾಚೀನ ಕಾಲದಲ್ಲಿ ಕರ್ನಾಟಕವೇ ಮಹಾರಾಷ್ಟ್ರವಾಗಿತ್ತೆಂಬುದನ್ನು ಲೋಕಮಾನ್ಯ ಟಿಳಕರು ಸಾರ್ವಜನಿಕ ಭಾಷಣದಲ್ಲಿಯೇ ಹೇಳಿರುವುದನ್ನು ಗಮನಿಸಬಹುದು.

ರಾಜ್ಯಗಳ ಪುನರ್ ವಿಂಗಡಣೆಯಾದ ನಂತರ ಎರಡೂ ರಾಜ್ಯಗಳು ತಮ್ಮ ತಮ್ಮ ಸೀಮೆಗಳಿಗೆ ಬೇಲಿ ಕಟ್ಟಿಕೊಂಡಿದ್ದರೂ, ಎರಡೂ ಪ್ರದೇಶಗಳ ಜನರ-ಆಚಾರ ವಿಚಾರಗಳಲ್ಲಿ, ವೇಷಭೂಷಣ, ಹಬ್ಬ-ಹರಿದಿನ, ಉತ್ಸವಗಳಿಗೆ ಬೇಲಿ ಕಟ್ಟುವುದು ಸಾಧ್ಯವಾಗಲಿಲ್ಲ. ಎಡೂ ಪ್ರದೇಶಗಳ ಜನರ ಊಟ ವ್ಯವಹಾರಗಳಲ್ಲಿ ಅಷ್ಟೇನೂ ಭಿನ್ನತೆ ಕಾಣುವುದಿಲ್ಲ. ಒಬ್ಬ ಕನ್ನಡಿಗನನ್ನು ಹಾಗೂ ಆತನ ಪಕ್ಕ ಒಬ್ಬ ಮಹಾರಾಷ್ಟ್ರದವನನ್ನು ನಿಲ್ಲಿಸಿದರೆ ಅವರಿಬ್ಬರೂ ತಮ್ಮ ತಮ್ಮ ಭಾಷೆ ಮಾತನಾಡುವವರೆಗೆ ಅವರಿಬ್ಬರೂ ಇದೇ ಭಾಷೆಯವರೆಂದು ಹೇಳುವುದು ಅಥವಾ ಗುರುತಿಸುವುದು ಅಸಾಧ್ಯ.

ಕರ್ನಾಟಕದಲ್ಲಿ ಸವದತ್ತಿ ಎಲ್ಲಮ್ಮ, ಚಿಂಚಲಿಯ ಮಾಯಕ್ಕ, ಮಂಗ ಸೂಳಿಯ ಮಲ್ಲಯ್ಯ ಇವರೆಲ್ಲರೂ ಮಹಾರಾಷ್ಟ್ರದ ಜನರಿಗೆ ಆರಾಧ್ಯ ದೈವವಾದಂತೆ ಮಹಾರಾಷ್ಟ್ರದಲ್ಲಿರುವ ಕೊಲ್ಲಾಪುರದ ಮಹಾಲಕ್ಷ್ಮೀ ಜೇಜೂರಿಯ ಖಂಡೊಬಾ, ಪಂಢರಾಪುರದ ವಿಠಲರು

ಕರ್ನಾಟಕದವರಿಗೆ ಆರಾಧ್ಯ ದೈವವಾಗಿದ್ದಾರೆ. ಖಂಡೋಬಾ ದೇವರಂತೂ ಕನ್ನಡದ ಮೈಲಾರ ದೇವರೆಂದೇ ತಿಳಿಯಲಾಗಿರುತ್ತದೆ. ಪಂಡರಾಪುರದ ವಿಠಲ, ಹಂಪಿಯಿಂದ ಹೋಗಿದ್ದಾನೆಂದು ಇತಿಹಾಸಕಾರರು ಸಿದ್ಧ ಮಾಡಿ ತೋರಿಸಿದ್ದಾರೆ. ವಿಠಲರನ್ನು ಕರ್ನಾಟಕದವನೆಂದು ಮರಾಠಿಗರೂ ಒಪ್ಪಿಕೊಂಡಿದ್ದಾರೆ. 'ಕಾನಾಡ ಹೋ ವಿಠಲ ಕರ್ನಾಟಕರೇ' ಎಂದು ವಿಠಲನ ಮೂಲವನ್ನು ಸ್ವತಹ ಜ್ಞಾನೇಶ್ವರನೇ ತನ್ನ ಅಭಂಗದಲ್ಲಿ ಹಾಡಿದ್ದಾನೆ.

ಕವಿರಾಜ ಮಾರ್ಗದಲ್ಲಿ ಕನ್ನಡ ನಾಡಿನ ವಿಸ್ತಾರವನ್ನು 'ಕಾವೇರಿಯಿಂದ ಗೋದಾವರಿಯವರೆಗೆ' ಎಂದು ಗುರುತಿಸಲಾಗಿದೆ. ಅಂದರೆ ಕವಿರಾಜ ಮಾರ್ಗದ ಪ್ರಕಾರ ಈಗೀಗ ಬಹಳಷ್ಟು ಮರಾಠಿ ಪ್ರದೇಶಗಳು ಕರ್ನಾಟಕದ ಪ್ರದೇಶಗಳಾಗಿದ್ದವು. ಕರ್ನಾಟಕದ ಶಾತವಾಹನರು, ಕದಂಬರು, ರಾಷ್ಟ್ರಕೂಟರು, ಚಾಲುಕ್ಯರು, ಶಿಲಾಹಾರರು, ಸೇವುಣ ರಾಜ ಮನೆತನಗಳು ಕಾಲಕಾಲಕ್ಕೆ ಎರಡೂ ಪ್ರದೇಶಗಳನ್ನು ಆಳಿದ್ದಾರೆ. ಪುಲಕೇಶಿ ಈಗಿರುವ ಮಹಾರಾಷ್ಟ್ರದ ಅನೇಕ ಪ್ರಾಂತ್ಯಗಳನ್ನು ಗೆದ್ದಿದ್ದ. ಅದೇ ರೀತಿ ಮುಂದೆ ಮಹಾರಾಷ್ಟ್ರದಲ್ಲಿ ರೂಪುಗೊಂಡ ರಾಜರುಗಳು ಕರ್ನಾಟಕದ ಕೆಲಪ್ರದೇಶಗಳನ್ನು ಗೆದ್ದು ಅವುಗಳನ್ನು ಆಳಿದ್ದಾರೆ. ಮರಾಠರ ಜೊತೆ ತಳುಕು ಹಾಕಿಕೊಂಡಿರುವ ಈ ದ್ರಾವಿಡರು ಕನ್ನಡಿಗರಲ್ಲದೆ ಬೇರೆ ಯಾರೂ ಇರಲು ಸಾಧ್ಯವಿಲ್ಲ. ನೀಲಗಿರಿಯಿಂದ ವಿಂದ್ಯದವರೆಗೆ ಆಗ ಕನ್ನಡ ನಾಡಿನ ಸೀಮೆ ಹಬ್ಬಿತ್ತು. ಬಲೂಚಿಸ್ಥಾನದ ಮಧ್ಯಪ್ರದೇಶದಲ್ಲಿ ಮಾತನಾಡು ಬ್ರಾಹ್ಮೀ ಭಾಷೆಯೂ ಕನ್ನಡಕ್ಕೆ ಹತ್ತಿರವಾದ ಭಾಷೆಯಾಗಿದೆ ಎಂಬುದು ನಾವು ಅಭಿಮಾನಪಡಬೇಕಾದ ಸಂಗತಿ.

ಕ್ರಿ.ಶ. ೮೧೫-೭೭ರವರೆಗೆ ಆಳಿದ ನೃಪತುಂಗನ ಸಾಮ್ರಾಜ್ಯದ ಹರಿವು 'ಕಾವೇರಿಯಿಂದ ಗೋದಾವರಿಯವರೆಗೆ' ಎಂಬುದು ಈಗಾಗಲೇ ಇತಿಹಾಸದಲ್ಲಿ ದಾಖಲೆಯಾಗಿದೆ. ನೃಪತುಂಗ ರಾಷ್ಟ್ರಕೂಟರ ಅರಸು. ಆ ಕಾಲದಲ್ಲಿ ಮಹಾರಾಷ್ಟ್ರವೆಂಬ ರಾಜ್ಯವೇ ಇರಲಿಲ್ಲ. ಇದ್ದದ್ದು ಕರ್ನಾಟಕ ಸಾಮ್ರಾಜ್ಯ. ಪುಲಿಕೇಶಿಯ ಕಾಲದಲ್ಲಿಯ ಐಹೊಳೆಯ ಶಾಸನದಲ್ಲಿ ರವಿಕೀರ್ತಿ ಎಂಬ ಮಹಾಕವಿಯು ೨ನೆಯ ಪುಲಿಕೇಶಿಯ ದಿಗ್ವಿಜಯವನ್ನು ವರ್ಣಿಸಿದ್ದಾನೆ. ಪುಲಿಕೇಶಿ ದಕ್ಷಿಣ ಭಾರತದ ಒಂದು ಪ್ರದಕ್ಷಿಣೆ ಮಾಡಿ ಅಲ್ಲಲ್ಲಿಯ ನಾಡುಗಳನ್ನು ಗೆದ್ದು ಉದಯ ಧ್ವಜವನ್ನು ಮೆರೆಸುತ್ತ ಮರಳಿ ಬಾದಾಮಿ ಪ್ರವೇಶಿಸಿದನೆಂದು ರವಿಕೀರ್ತಿ ಹೇಳುತ್ತಾನೆ. ಪುಲಿಕೇಶಿ ಮೊದಲು ದಂಡೆತ್ತಿ ಹೋದುದು ಬನವಾಸಿ ದೇಶಕ್ಕೆ ಅಲ್ಲಿಂದ ಗಂಗ, ಅಳುಪ, ಕೊಂಕಣರನ್ನು ಸೋಲಿಸಿ, ಲಾಠ ಮಾಳವ, ಗುರ್ಜರರನ್ನು ಗೆದ್ದ. ನಂತರ ನರ್ಮದಾ-ವಿಂಧ್ಯ ಪ್ರದೇಶವನ್ನು ಗೆಲ್ಲುತ್ತಾನೆ. ತರುವಾಯ ಮಹಾರಾಷ್ಟ್ರವನ್ನು ಆಡಳಿತಕ್ಕೆ ಒಳಪಡಿಸಿಕೊಂಡ. ಮುಂದೆ ಕೋಶಲ, ಕಲಿಂಗಗಳ ರಾಜರನ್ನು ಮಾಂಡಲಿಕರನ್ನಾಗಿಸಿ ಪಿಷ್ಟಪುರ ಕಾಂಚೀಪುರವನ್ನು ಗೆದ್ದು, ಪಲ್ಲವರನ್ನು ಸೋಲಿಸಿ,

ಚೋಳಕೇರಳ, ಪಾಂಡ್ಯರನ್ನು ಅಂಕೆಯಲ್ಲಿ ತಂದು ವಾತಾಪಿಪುರಕ್ಕೆ ಅಂದರೆ, ಬಾದಾಮಿಗೆ ಬಿಜಂಗೈದನೆಂದು ಶಾಸನದಲ್ಲಿ ವರ್ಣನೆಯಿದೆ.

ಮರಾಠಿ ಭಾಷೆ ರೂಪುಗೊಳ್ಳುವ ಮೊದಲೇ ಕನ್ನಡ ಭಾಷೆ ಶ್ರೀಮಂತವಾಗಿ ಬೆಳೆದಿತ್ತು. ಕಾವ್ಯಗಳು, ಮಹಾಕಾವ್ಯಗಳು ಕನ್ನಡದಲ್ಲಿ ರಚಿತಗೊಂಡು ಜನಮನವನ್ನು ಸೂರೆಗೊಂಡಿದ್ದವು. ಸ್ವಾಭಾವಿಕವಾಗಿಯೇ ಕನ್ನಡ ಭಾಷೆಯ ಪ್ರಭಾವ ಮರಾಠಿಯ ಮೇಲೆ ಆಯಿತು. ಮರಾಠಿಯ ಅನೇಕ ಕೃತಿಗಳಲ್ಲಿ ಕನ್ನಡದ ಈ ಛಾಯೆ ಇರುವುದನ್ನು ಕಾಣಬಹುದು.

ಅಚ್ಚರಿಯ ಇನ್ನೊಂದು ವಿಷಯವೆಂದರೆ ಮರಾಠಿಯ ಪ್ರಪ್ರಥಮ ಶಾಸನ ಕರ್ನಾಟಕದ ಶ್ರವಣ ಬೆಳಗೊಳದಲ್ಲಿ ಪತ್ತೆಯಾಗಿರುವುದು. ಶ್ರವಣಬೆಳಗೊಳದಲ್ಲಿ ಗೊಮ್ಮಟ ವಿಗ್ರಹದ ಅಡಿಯಲ್ಲಿ ಚಾವುಂಡರಾಯರಾಯ ಕರವೀಯಲೆ ಎಂಬ ವಾಕ್ಯವಿದೆ. ಅಲ್ಲಿಯೇ ಇರುವ ಗಂಗರಾಜೇ ಸುತ್ತಾಲೇ ಕರವಿಲೆ ಎಂಬ ಶಾಸನಕ್ಕೂ ಹೆಚ್ಚಿನ ಮಹತ್ವವಿದೆ. ಸುತ್ತಾಲೆ ಎಂಬ ಕನ್ನಡದ ಈ ಶಾಸನವೇ ಮರಾಠಿ ಭಾಷೆಯ ಅಧಿಕೃತ ಪ್ರಪ್ರಥಮ ಶಾಸನವೆನ್ನುವುದನ್ನು ಮಹಾರಾಷ್ಟ್ರದ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಈ ಶಾಸನದ ಆಧಾರದಿಂದಲೇ ೧೦ನೆಯ ಶತಮಾನದ ವೇಳೆಗೆ ಮರಾಠಿ ಭಾಷೆ ಪ್ರಚಾರದಲ್ಲಿದ್ದರೂ ಅಲ್ಲಿಯವರೆಗೂ ಮರಾಠಿ ಸಾಹಿತ್ಯ ಲಭ್ಯವಾಗಿಲ್ಲ. ಮರಾಠಿ ಸಾಹಿತ್ಯದ ಆರಂಭವೇ ೧೨ನೇ ಶತಮಾನವೆಂದು ಹೇಳಲಾಗುತ್ತಿದೆ.

೧೨೯೦ರಲ್ಲಿ ಜ್ಞಾನೇಶ್ವರಿ ಬರೆದ ಮರಾಠಿಯ ಮಹಾಕಾವ್ಯ. ಜ್ಞಾನೇಶ್ವರನ ಮೇಲೆ ಕನ್ನಡದ ಪ್ರಭಾವದ ಸಾಕಷ್ಟು ಆಗಿದ್ದನ್ನು ವಿದ್ವಾಂಸರು ಈಗಾಗಲೇ ಆಧಾರಸಹಿತವಾಗಿ ಪ್ರಕಟಿಸಿದ್ದಾರೆ. ಬೆಳಗಾವಿಯ ಲೋಕಾಪುರ ಅವರು ಜ್ಞಾನೇಶ್ವರಿ ಕಾಲಿನ ಮರಾಠಿ ಭಾಷೆವರ ಕನ್ನಡ ಪ್ರಭಾವ ಎಂಬ ಗ್ರಂಥವನ್ನೇ ಪ್ರಕಟಿಸಿದ್ದಾರೆ.

ಜ್ಞಾನೇಶ್ವರಿಯಲ್ಲಿ ಕನ್ನಡದ ಶಬ್ದಗಳಾದ ಅಕ್ಕಸಾಲಿಗ. ಅಡತರ ಅಡವಾರಾ, ಕೇಳವಣಿ ತೂಕ, ಪಾಳಿ, ಮದವಿ ಮಾತು, ಮೆರವಣಿಗೆ, ಹೆರಳು ಮುಂತಾದ ಸಾವಿರಾರು ಪದಗಳು ಸಿಗುತ್ತವೆ. ಜ್ಞಾನೇಶ್ವರನೇ ತನ್ನ ಆರಾಧ್ಯದೈವವಾದ ಪಂಢರಾಪುರದ ವಿಠಲನನ್ನು ಕಾನಡಾ ಹೋ ವಿಠಲ ಕರ್ನಾಟರೇ ಎಂದು ಕರೆದಿದ್ದಾನೆ. ಜ್ಞಾನೇಶ್ವರನ ಇನ್ನೊಂದು ಪದ ಕಾಟ್ಯಾಂಚಾ ಅಣಿವರ ವಸತಿ ಲೇನಗಾಂವ್ ಎಂಬ ಪದ ಹಾಗೂ ಪುರಂದರದಾಸರ ಮುಳ್ಳು ಕೊನೆಯ ಮೇಲೆ ಮಾರು ಕೆರೆಯ ಕಟ್ಟಿ ಎಂಬ ಪದದಲ್ಲಿರುವ ಸಾಮ್ಯವನ್ನು ಮರಾಠಿಯ ವಿದ್ವಾಂಸರಾದ ಪಂಡಿತ ಅವಳೀಕರರು ಈಗಾಗಲೇ ಗುರುತಿಸಿದ್ದಾರೆ. ಇಲ್ಲಿಯೂ ಸಹಿತ ಒಬ್ಬ ಸಂತ ಇನ್ನೊಬ್ಬ ಸಂತನಿಂದ ಪ್ರಭಾವಿತನಾಗಿದ್ದನ್ನು ಕಾಣಬಹುದು.

ಜ್ಞಾನೇಶ್ವರನು ಕನ್ನಡದಲ್ಲಿಯೂ ಪದ್ಯ ರಚಿಸಿದ್ದಾನೆಂದು ತಿಳಿದು ಬಂದಿದೆ.

ಅಕ್ಕಾ ನೀ ಕೇಳೇ ಚಿಕ್ಕನ ಮಾತು

ಕಾರೊಡಲನ ದೆಸೆಗೆ ಮರುಳಾದೆನೆ ।

ಚಲುವಾನೆ ಚಲುವಾನೆ ಪಂಡರೀರಾಯಾ

ಚಲುವಾನೆ ಎಲ್ಲಿ ದೊರಕುವನೆ ಎಲ್ಲಿ ಬರುವನೆ ।

ಪುಂಡಲೀಕನ ಭಕ್ತಿಗೆ ಬಂದಾ ।

ಪುಂಡಲೀಕನ ಭಕ್ತಿಗೆ ಬಂದಾ ।

ರುಖುಮಾದೇವಿವರ ವಿಠಲನೇ ॥ ೨ ॥

(ಸರಜೂ ಕಾಟ್ಕರ ಅವರ ಬೆಳಗಾವಿ ಸಂಸ್ಕೃತಿ ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ೨೦೧೧, ಪು. ೪೨೫)

ಮಾರಿಹಾಳರ ಅಭಿಪ್ರಾಯದಂತೆ ಈ ರೀತಿ ಜ್ಞಾನೇಸ್ವರಿ ಬರೆದ ಕನ್ನಡದ ಅನೇಕ ಅಭಂಗಗಳು ಮಹಾರಾಷ್ಟ್ರದಲ್ಲಿವೆ. ಮರಾಠಿಯ ಆದಿಕವಿಯೆಂದು ಗುರುತಿಸಲ್ಪಡುವ ಮುಕುಂದರಾಜನ ವಿವೇಕ ಸಿಂಧುವು ಕನ್ನಡದ ಅನುಭವಾಮೃತದ ಅನುವಾದದಂತೆ ಕಂಡು ಬರುತ್ತದೆ. ನಿಜಗುಣದ ವಿವೇಕ ಚಿಂತಾಮಣಿಯನ್ನು ಮರಾಠಿಯಲ್ಲಿ ಕಾಂತಲಿಂಗ ಸ್ವಾಮಿಗಳು ಅನುವಾದಿಸಿದ್ದಾರೆ. ಕನ್ನಡದಲ್ಲಿರುವ ಮೂಲಗದ್ಯಗ್ರಂಥ ಮರಾಠಿಯಲ್ಲಿ ಕಾವ್ಯವಾಗಿದೆ. ಚನ್ನಬಸವಣ್ಣನವರ ಕರಣ ಹಸುಗೆಯನ್ನು ಶಾಂತಲಿಂಗಸ್ವಾಮಿಗಳು ಮರಾಠಿಗೆ ಅನುವಾದಿಸಿದ್ದಾರೆ. ಇದರಿಂದ ಶಾಂತಲಿಂಗ ಸ್ವಾಮಿಗಳ ಮಾತೃಭಾಷೆ ಕನ್ನಡವಾಗಿರಬೇಕು ಮತ್ತು ಅವರು ಕನ್ನಡ ಹಾಗೂ ಮರಾಠಿ ಎರಡೂ ಭಾಷೆಗಳಲ್ಲಿ ಪ್ರಭುತ್ವ ಸಾಧಿಸಿರಬೇಕೆಂದುದನ್ನು ಇಲ್ಲಿ ಗಮನಿಸಬಹುದು.

ಆಧುನಿಕ ಸಾಹಿತ್ಯದಲ್ಲಿಯೂ ಕನ್ನಡ ಮರಾಠಿಯ ಮೇಲೆ ಹಾಗೂ ಮರಾಠಿ ಕನ್ನಡದ ಮೇಲೆ ಪ್ರಭಾವ ಬೀರಿವೆ. ಕನ್ನಡದ ಅನೇಕ ಕೃತಿಗಳು ಮರಾಠಿಗೆ ಮತ್ತು ಮರಾಠಿಯ ಅನೇಕ ಗ್ರಂಥಗಳು ಕನ್ನಡಕ್ಕೆ ಬಂದಿವೆ. ಮರಾಠಿ ನಾಟಕಗಳಿಗೆ ಕನ್ನಡವೇ ತವರುಮನೆ. ಕನ್ನಡದ ಲಾವಣಿ-ಗೊಂದಲಿಗರ ಹಾಡುಗಳು ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ಹೋಗಿ ಅಲ್ಲಿಂದ ಮತ್ತೆ ಕರ್ನಾಟಕಕ್ಕೆ ಬಂದಿವೆ. ಎರಡೂ ಭಾಷೆಗಳಲ್ಲಿ ಕೊಡುಕೊಳ್ಳುವಿಕೆ ಇದೆ.

ಕೆಲ ರಾಜಕೀಯ ಕಾರಣಗಳಿಂದ ಇಬ್ಬರಲ್ಲೂ ಹರಿಯುವ ಬಾಂಧವ್ಯದ ಅಂತರ್ಜಲಕ್ಕೆ ಆಗೀಗ ಚ್ಯುತಿ ಉಂಟಾಗುತ್ತಿದ್ದರೂ ಮಾನವೀಯ ಮೌಲ್ಯಗಳು ಇಂತಹ ಬೇಲಿಗಳನ್ನು ಹರಿದೊಗೆದು ಮನುಷ್ಯ ಸಂಬಂಧಗಳನ್ನು ಮತ್ತೆ ಮತ್ತೆ ಸ್ಥಾಪಿಸುತ್ತವೆ.

ಶಕ್ತಿ ದೇವತೆಗಳು ಮತ್ತು ಆಚರಣೆಗಳು :

ಗ್ರಾಮಕ್ಕೆ ಸಂಬಂಧಿಸಿದ ಎಲ್ಲ ದೇವರು ಗ್ರಾಮ್ಯದೇವರು. ಗ್ರಾಮ್ಯದೇವರಲ್ಲಿ ಸ್ತ್ರೀ ಮತ್ತು ಪುರುಷ ದೇವರೆಂಬ ಎರಡು ಪ್ರಭೇದಗಳನ್ನು ಮಾಡಬಹುದು. ಗ್ರಾಮಸ್ಥರು ಈ ಎರಡೂ ಬಗೆಯ ದೇವರುಗಳನ್ನು ಆರಾಧಿಸುತ್ತ ಬಂದಿದ್ದಾರಾದರೂ ಶೇಕಡಾ ತೊಂಬತ್ತರಷ್ಟು ಸ್ತ್ರೀ ದೇವತೆಗಳನ್ನೇ ಆರಾಧಿಸುತ್ತ ಬಂದುದು ಕಂಡುಬರುತ್ತದೆ. ಗ್ರಾಮದೇವತೆಗಳೆಂದರೆ ಸ್ತ್ರೀ ದೇವತೆಗಳೆಂದರ್ಥ. ಈ ಸ್ತ್ರೀ ದೇವತೆಗಳನ್ನೇ ಶಕ್ತಿದೇವತೆಗಳೆನ್ನುವರು. ಶಕ್ತಿದೇವತಾರಾಧನೆಯನ್ನೇ ಮಾತೃ ದೇವತಾರಾಧನೆ ಎನ್ನುವರು. ಶಕ್ತಿದೇವತೆಗೆ ತಾಯಿ, ಅಮ್ಮ, ಅವ್ವ, ಅಕ್ಕ ಎಂತಲೂ ಕರೆಯುವ ವಾಡಿಕೆ. ಪ್ರಾದೇಶಿಕವಾಗಿ ಅವಳ ಹೆಸರಿನ ಮುಂದೆ ಅಮ್ಮ, ಅವ್ವ, ಅಂಬಾ, ಮಾತಾ, ತಾಯಿ, ಮಾ, ಆಯಿ, ಮಾಯಿ ಪದಗಳನ್ನು ಸೇರಿಸಿ ಕರೆವ ರೂಢಿಯೂ ಇದೆ. ಶಕ್ತಿದೇವತೆ ಒಂದೂರಿನ ಅಧಿದೇವತೆ, ಪ್ರಧಾನದೇವತೆ. ಗ್ರಾಮೀಣರು ಇವಳನ್ನು ತಳದೇವತೆ ಎನ್ನುವರು. ಗ್ರಾಮದ ಹುಟ್ಟಿನೊಂದಿಗೆ ಇವಳ ಹುಟ್ಟೂ ಆಗಿರುವ ಸಾಧ್ಯತೆಯಿದೆ. ಗ್ರಾಮದ ಸುರಕ್ಷತೆ ಮತ್ತು ಅಭಿವೃದ್ಧಿಗಾಗಿ ಊರಿನವರೆಲ್ಲ ಒಟ್ಟಾಗಿ ಪೂಜಿಸುತ್ತ, ಆರಾಧಿಸುತ್ತ ಬಂದ ಸ್ತ್ರೀ ದೇವತೆಯೇ ಆ ಗ್ರಾಮದ ಶಕ್ತಿದೇವತೆ ಅಥವಾ ಗ್ರಾಮದೇವತೆ. ಸಾಮಾನ್ಯವಾಗಿ, ಒಂದು ಊರಿಗೆ ಒಂದು ಗ್ರಾಮದೇವತೆ ಇದ್ದೇ ಇರುತ್ತದೆ.

ಪ್ರಕೃತಿ ವಿಕೋಪಕ್ಕೆ ಹೆದರಿದ ಆದಿಮಾನವ, ಪ್ರಕೃತಿಯಲ್ಲಿ ಯಾವುದೇ ಒಂದು ಅದ್ಭುತಶಕ್ತಿಯಿದೆಯೆಂದು ಭಾವಿಸಿ, ಅದರ ಸಂತೃಪ್ತಿಗಾಗಿ ಅದನ್ನೇ ಆರಾಧಿಸಿದ. ಪುರುಷ ತಾನು ನಂಬಿ ಆರಾಧಿಸಿದ ಪ್ರಕೃತಿಯೇ ಶಕ್ತಿದೇವತೆಯಾಯಿತು. ನೆಲ, ಜಲ, ಆಕಾಶಗಳಲ್ಲೆಲ್ಲಿ ಶಕ್ತಿದೇವತೆಯನ್ನು ಕಂಡುಕೊಂಡು. ಮನ, ಮನೆ, ಮಠ, ಮಂದಿರಗಳಲ್ಲಿ ಅವಳನ್ನು ಪ್ರತಿಷ್ಠಾಪಿಸಿ ಸ್ತುತಿಸುತ್ತ ಬಂದ. ತನ್ನ ಆಸೆ–ಆಕಾಂಕೆ, ಬೇಕು–ಬೇಡಗಳನ್ನು ಅವಳ ಮುಂದಿಟ್ಟ. ರೋಗ–ರುಜಿನ ಕಷ್ಟತೊಂದರೆಗಳ ಭಯದಿಂದ ನಡುಗಿದ. ಕಾಪಾಡುತಾಯಿ ರಕ್ಷಿಸು ಕೃಪೆದೋರು ಎಂದು ಆ ತಾಯಿಯಲ್ಲಿ ಕೈಮುಗಿದು ಮೊರೆಯಿಟ್ಟ. ತನ್ನ ಹುಟ್ಟು–ಸಾವುಗಳಿಗೆ ಕಾರಣಳಾದ ಈ ಮಾತೃಶಕ್ತಿಯನ್ನು ಬಲವಾಗಿ ನಂಬಿದ ಭಯ–ಭಕ್ತಿಯಿಂದ ಪೂಜಿಸಿದ. ಈ ಮಾತೃಪೂಜೆ ಶಕ್ತಿದೇವಿ ತಾಯಿಯನ್ನು ಪ್ರಸನ್ನಗೊಳಿಸುವ ವಿಧಾನವಾಯಿತು. ಮಾತೃಪೂಜೆ ಭಾರತದಲ್ಲಿರುವಷ್ಟು ವ್ಯಾಪಕಿವಾಗಿ ಮತ್ತು ವೈವಿಧ್ಯಪೂರ್ಣವಾಗಿ ಇನ್ನಾವ ದೇಶದಲ್ಲಿಯೂ ಇದ್ದಂತಿಲ್ಲ. ಕಾಶಿಯ ವಿಶಾಲಾಕ್ಷಿ, ಹಾಗೂ ಅನ್ನಪೂರ್ಣೇಶ್ವರಿ, ಕೊಲ್ಕತ್ತೆಯ ಮಹಾಕಾಳಿ ಕಂಚಿಕಾಮಾಕ್ಷಿ, ಮಧುರೆ ಮೀನಾಕ್ಷಿ, ಕನ್ಯಾಕುಮಾರಿಯ ಕುಮಾರಿ, ಮೈಸೂರಿನ ಚಾಮುಂಡೇಶ್ವರಿ, ಕೊಲ್ಲೂರಿನ ಮೂಕಾಂಬಿಕಾ, ಶೃಂಗೇರಿಯ ಶಾರದೆ, ತಮಿಳಿನ ಮಾರಿಯಮ್ಮ, ಜಮ್ಮುವಿನ ವೈಷ್ಣದೇವಿ,

ಅಸ್ಸಾಮಿನ ಕಾಮಾಖ್ಯ, ಕರ್ನಾಟಕದ ಸವದತ್ತಿ ಯಲ್ಲಮ್ಮ, ಆಂಧ್ರದ ಬತ್ತಮ್ಮ ಮಹಾರಾಷ್ಟ್ರದ ಅಂಬಾಭವಾನಿ ಮುಂತಾದವರು ಆಯಾ ನಾಡಿನ ಪ್ರಸಿದ್ಧ ಶಕ್ತಿ ದೇವತೆಗಳೆನಿಸಿದ್ದಾರೆ ಮತ್ತು ಭಾರತದ ತುಂಬ ಈ ದೇವತೆಗಳ ಖ್ಯಾತಿ ಇದೆ, ರಾಷ್ಟ್ರಾದ್ಯಂತ ಸಹಸ್ರ ಸಹಸ್ರ ಭಕ್ತ ಜನರಿಂದ ಪೂಜೆಗೊಳ್ಳುತ್ತ ಬಂದಿವೆ. ಈ ಕೇಂದ್ರ ಶಕ್ತಿದೇವತೆಗಳ ಪ್ರಚಾರ–ಪ್ರಭಾವದಿಂದ, ಹಲವಾರು ಕಡೆಗೆ ಇದೇ ಹೆಸರಿನ ಶಕ್ತಿದೇವತೆಗಳು ಸೃಷ್ಟಿಗೊಂಡುದುಂಟು. ದಕ್ಷಿಣ ಭಾರತದಲ್ಲಿ ಉತ್ತರ ಭಾರತಕ್ಕಿಂತಲೂ ಶಕ್ತಿದೇವತೆಯ ಸಂಪ್ರದಾಯ, ಉಪಾಸನೆ–ಪೂಜಾದಿಗಳು ಹೆಚ್ಚು ಪ್ರಚಲಿತದಲ್ಲಿದ್ದಂತೆ ತೋರುತ್ತದೆ. ಕರ್ನಾಟಕದಲ್ಲಿ ಬಳ್ಳಾರಿ ದುರ್ಗವ್ವ, ಗೋಕಾಕ ದ್ಯಾಮವ್ವ ಚುಂಚನೂರ ಮಾಪುರ ತಾಯಿ, ಚಿಂಚಲಿ ಮಾಯಕ್ಕ, ಸಿರಸಿ ಮಾರಿಕಾಂಬಾ, ಸಿರಸಂಗಿ ಕಾಳಮ್ಮ, ಕೊಲ್ಲೂರ ಮೂಕಾಂಬಿಕಾ ಮುಂತಾದವು ಸುಪ್ರಸಿದ್ಧ ಶಕ್ತಿದೇವತೆಗಳು. ಆದಿಶಕ್ತಿಯ ಭಿನ್ನಭಿನ್ನ ರೂಪಧರಿಸಿದ ಈ ಎಲ್ಲ ದೇವತೆಗಳು ಜನಪದ ಸಂಪ್ರದಾಯದಲ್ಲಿ ಬೆರೆತುಹೋಗಿವೆ.

ಕರ್ನಾಟಕದ ಅನೇಕ ಜಿಲ್ಲೆಗಳ ಗ್ರಾಮಜೀವನದಲ್ಲಿಯೂ ಗ್ರಾಮ ದೇವತೆಗಳು ಹಾಸುಹೊಕ್ಕಾಗಿವೆ ಪುರಾಣ ಮೂಲದ ದೇವತೆಗಳನ್ನೊಳಗೊಂಡಂತೆ ಸಾಮಾನ್ಯ ದೇವತೆಗಳವರೆಗೆ ನೂರಾರು ಶಕ್ತಿದೇವತೆಗಳಿವೆ. ಕರೆವ್ವ, ಕಾಟವ್ವ, ಮಾರೆವ್ವ, ಮಸಣವ್ವ, ಗಾಳಿದುರ್ಗವ್ವ, ಕಾಳವ್ವ, ದುರ್ಗವ್ವ ದ್ಯಾಮವ್ವ, ತಾಯವ್ವ, ಉಡಚವ್ವ, ಶೆಟ್ಟವ್ವ, ಕನ್ನಮ್ಮ, ಉದ್ದಮ್ಮ, ಲಕ್ಕಮ್ಮ, ಬಷ್ಷವ್ವ, ಹೊಳೆಮ್ಮ, ಹೊನ್ನಮ್ಮ, ಹುಲಿಗೆಮ್ಮ, ಎಲ್ಲಮ್ಮ, ಮಾಯಮ್ಮ ಇವೇ ಮೊದಲಾದ ಶಕ್ತಿದೇವತೆಗಳಲ್ಲಿ ಎಲ್ಲಮ್ಮ, ಮಾಯಮ್ಮ ದ್ಯಾವಮ್ಮ, ಕಾಳಮ್ಮ ಮುಂತಾದ ದೇವತೆಗಳು ತಮ್ಮ ಅಸಂಖ್ಯಭಕ್ತರಿಂದ ಪ್ರಸಿದ್ಧ ಶಕ್ತಿ–ದೇವತೆಗಳೆನಿಸಿಕೊಂಡಿವೆ.

ಈ ಶಕ್ತಿದೇವತೆಗಳ ಗುಡಿಗಳು ಸಾಮಾನ್ಯವಾಗಿ ಊರಸೀಮೆಗೆ ಹತ್ತಿಕೊಂಡೇ ಇರುತ್ತವೆ. ಹಾಗಾಗಿ ಇವು ಗಡಿರಕ್ಷಕ ದೇವತೆಗಳು ಅಷ್ಟೇ ಅಲ್ಲ, ಇವು ಭಕ್ತಜನಗಳ ಊರಿನ ಬೆಳೆರಕ್ಷಣೆ, ದನಕರು ರಕ್ಷಣೆ, ಸಕಾಲಕ್ಕೆ ಮಳೆ ತರಿಸುವುದು, ಸಾಂಕ್ರಾಮಿಕ ರೋಗಗಳಿಂದ ಊರ ರಕ್ಷಣೆ, ಸಂತಾನ ನೀಡುವುದು. ಮಕ್ಕಳು–ಮರಿ ಕಾಪಾಡುವುದು. ಭೂತ–ಪ್ರೇತಾದಿಗಳು ಊರೊಳಗೆ ಪ್ರವೇಶಿಸದಂತೆ ನೋಡಿಕೊಳ್ಳುವುದು. ಇವೆಲ್ಲ ಈ ದೇವತೆಗಳ ಪ್ರಮುಖ ಕಾರ್ಯಹೊರೆ. ಇವುಗಳ ಗುಡಿಗಳು ಅತ್ಯಂತ ಸರಳವಾದವು ಮತ್ತು ಚಿಕ್ಕವು. ಮೂಲದಲ್ಲಿ ಇವುಗಳ ಗುಡಿ ಕಲ್ಲು, ಮಣ್ಣಿನಿಂದ ಕಟ್ಟಿದಂಥವು; ಹಂಚಿನ ಹೊದಿಕೆ ಹೊಂದಿದಂಥವು. ಗರ್ಭಗುಡಿ, ಪ್ರಾಕಾರ, ಪೌಳಿ, ಇವಾವೂ ಇದ್ದಂತಿಲ್ಲ. ಮೂರ್ತಿಕೂಡ ಅತ್ಯಂತ ಗುಡ್ಡೆ, ಕೇವಲ ಹುತ್ತ ದೇವತೆಯಾದುದುಂಟು ಗಿಡಗಂಟಿಯ ನೆರಳಿನಲ್ಲಿ ಇವು ಇರಬಹುದು. ನಂತರ ಶಿಲ್ಪ ಸೌಂದರ್ಯಯುಕ್ತ ಗುಡಿ, ಕಳಸ, ತೇರು, ಪಲ್ಲಕ್ಕಿ ನಿರ್ಮಾಣಗೊಂಡಿವೆ. ಇದು ಶಕ್ತಿದೇವತೆಗಳ ಸಂಸ್ಕೃತೀಕರಣದ ಸಂಕೇತ. ಇವುಗಳ

ಬಗೆಗೆ ಪುರಾಣಗಳು ಸೃಷ್ಟಿಯಾಗಿವೆ ಸ್ಥಳೀಯ ಪುರಾಣ, ಸ್ಥಳಗತೆ, ಐತಿಹ್ಯಗಳೂ ಹುಟ್ಟಿಕೊಂಡಿವೆ. ಇವುಗಳ ಜಾತ್ರೋತ್ಸವ-ವಿವಿಧ ಧಾರ್ಮಿಕ ಆಚರಣೆಗಳು, ಹೇಳಿಕೆ-ಕೇಳಿಕೆಗಳು, ಶಾಸ್ತ್ರೋಕ್ತ ಪೂಜೆ ಕೂಡ ನಡೆದಿದೆ. ಮಂಗಳವಾರ, ಶುಕ್ರವಾರ ದೇವಿ ವಾರಗಳೆನಿಸಿವೆ. ಇಷ್ಟಾದರೂ ಶಕ್ತಿದೇವತೆಗಳು ತಮ್ಮ ಜನಪದ ಸಂಪ್ರದಾಯವನ್ನು ಉಳಿಸಿಕೊಂಡುದು ಗಮನಾರ್ಹ.

ಶಕ್ತಿದೇವತೆಯ ಉಪಾಸನೆಯ ಜನಪದ-ಶಿಷ್ಟ ಸಂಸ್ಕೃತಿಗಳ ಸುಂದರವಾದ ಬೆಸುಗೆಯೇ ಹಾಗಾಗಿಯೇ ಈ ದೇವತೆಗಳ ಉತ್ಸವ ಆಚರಣೆಗಳ ಸಂದರ್ಭದಲ್ಲಿ ಎಲ್ಲವರ್ಗ, ಎಲ್ಲ ವರ್ಣದವರಲ್ಲಿ ಐಕ್ಯತೆ ಮತ್ತು ಸಮಾನತೆಯನ್ನು ಕಾಣಲು ಸಾಧ್ಯವಾಗಿದೆ. ಜನಪದರು, ಶಿಷ್ಟರು-ಪರಿಶಿಷ್ಟರು ಒಟ್ಟಾಗಿಯೇ ಈ ದೇವತೆಗಳ ಪೂಜೆ ಪುನಸ್ಕಾರ ಹಬ್ಬ-ಉತ್ಸವಗಳಲ್ಲಿ ಭಾಗವಹಿಸುತ್ತ ಬಂದುದು ಗಮನಾರ್ಹ. ಜಾತ್ರೋತ್ಸವ, ಆಚರಣೆಗಳ ಸಂದರ್ಭದಲ್ಲಿ ತಕ್ಕಮಟ್ಟಿನ ವರ್ಣ ಭೇದವನ್ನು ಗುರುತಿಸಬಹುದಾದರೂ ಒಟ್ಟು ಜಾತ್ರೋತ್ಸವವನ್ನು ಎಲ್ಲರೂ ಒಟ್ಟಾಗಿ ಮತ್ತು ಏಕತೆಯ ದೃಷ್ಟಿಯಿಂದ ಆಚರಿಸುತ್ತ ಬರುವುದನ್ನು ನೋಡಿದರೆ, ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿಯ ಸೌಹಾರ್ದತೆಗೆ ಇವು ಪ್ರತೀಕಗಳಾಗಿವೆ. ಜನಪದ ಮತ್ತು ಶಿಷ್ಟ ಪದದಲ್ಲಿಯ ಶಕ್ತಿದೇವತೆಯ ಬಗೆಗಿನ ಕಲ್ಪನೆ, ಭಾವನೆ, ನಂಬಿಕೆ ಆಚರಣೆಗಳಿಂದಾಗಿ ಸಂಸ್ಕೃತೀಕರಣ ಪ್ರಕ್ರಿಯೆ ಕೂಡ ನಡೆದುಬರುತ್ತಿರುವುದು ಅಷ್ಟೇ ಗಮನಾರ್ಹವಾದುದು.

ಶೂದ್ರವರ್ಗದ ದೇವತೆಗಳು ಮೂಲ ಆದಿಶಕ್ತಿಯ ಅವತಾರಗಳಾಗಿ, ಜನಪದ ಪರಂಪರೆಯಲ್ಲಿ ಗ್ರಾಮದೇವತೆಗಳಾಗಿ ಅಥವಾ ಶಕ್ತಿದೇವತೆಗಳಾಗಿ ಆರಾಧನೆಗೊಳ್ಳುತ್ತ ಬಂದಿವೆ. ಆದಿಶಕ್ತಿ ಪಾರ್ವತಿಯ ವಿವಿಧ ರೂಪಗಳು ಶಿಷ್ಟಪರಂಪರೆಯಲ್ಲಿಯೂ ವಿವಿಧ ಹೆಸರಿನ ಶಕ್ತಿ ದೇವತೆಗಳಾಗಿ ಕುಲದೇವತೆಗಳಾಗಿ ರೂಪುಗೊಂಡು ಪೂಜೆಗೊಳ್ಳುತ್ತಿವೆ. ಸತಿಸಹಗಮನದಿಂದ, ಆತ್ಮಹತ್ಯೆಯಿಂದ, ಅಪಘಾತದಿಂದ, ದುಷ್ಟರ ಸಂಹಾರದಿಂದ, ಊರಿನ ಹಿತದೃಷ್ಟಿಯಿಂದ ಹೋರಾಡಿ ಆತ್ಮಾರ್ಪಣಗೈದ ಅನೇಕ ವೀರಸ್ತ್ರೀಯರ ಚರಿತ್ರೆಯ ಹಾಗೂ ದೈವೀ ನಂಬಿಕೆಗಳ ನೆಲೆಯಲ್ಲಿ ಶಕ್ತಿದೇವತೆಗಳಾಗಿ ರೂಪುಗೊಂಡಿರುವ ಸಾಧ್ಯತೆಯೂ ಇದೆ. ಈ ದೇವತೆಗಳ ಸುತ್ತಪುರಾಣ, ಐತಿಹ್ಯ, ಕತೆ, ಪವಾಡಾದಿಗಳು ಸೃಷ್ಟಿಗೊಂಡು ಅವುಗಳ ಶಕ್ತಿ ಮತ್ತು ಪ್ರಭಾವ ವೃದ್ಧಿಸಿದಂತೆ ತೋರುತ್ತದೆ. ಪ್ರತಿಯೊಂದು ಸ್ಥಳದೇವತೆಗೆ ಸ್ಥಳೀಕರು ಹೇಳುವ ಕಥೆಗಳಲ್ಲಿ ಆಶ್ಚರ್ಯಕರ ವಿವರಗಳು ಸಿಕ್ಕುತ್ತವೆ. ಈ ಕಥೆಗಳನ್ನು ಗಮನಿಸಿದಾಗ, ಆ ಪ್ರದೇಶದ ವ್ಯಕ್ತಿ ಅಥವಾ ಜನಾಂಗದ ಮೂಲನೆಲೆಯಲ್ಲಿ ಆ ವಿಶಿಷ್ಟ ಶಕ್ತಿದೇವತೆಯು ಹುಟ್ಟಿದುದನ್ನು ಗುರುತಿಸಬಹುದು. ಒಂದು ಸಮುದಾಯದವರು ತಮಗಾಗಿ ಸೃಷ್ಟಿಸಿಕೊಂಡ ದೇವತೆ ಕಾಲಾಂತರದಲ್ಲಿ ಗ್ರಾಮದ ಆದಿದೈವವಾಗಿ, ಅದರ ಆರಾಧನೆ ಹೆಚ್ಚುತ್ತಾ ಸಾಗಿ, ಜನರನ್ನು ಆಕರ್ಷಿಸಿ, ಪ್ರಾದೇಶಿಕ

ಪ್ರಾಮುಖ್ಯತೆಯ ಗಣ್ಯದೇವತೆಯಾಗಿಯೂ ರೂಪುಗೊಳ್ಳುವುದುಂಟು. ಈ ದೈವದ ಪ್ರಾಮುಖ್ಯತೆಯನ್ನು ಗಮನಿಸಿದ, ಇನ್ನೊಂದು ಗ್ರಾಮದ ಜನತೆ, ಈ ದೇವಿಯನ್ನು ತಮ್ಮೂರಿನಲ್ಲಿಯೂ ಪ್ರತಿಷ್ಠಾಪಿಸಿ ಆರಾಧಿಸತೊಡಗುತ್ತಾರೆ. ಹೀಗಾಗಿ ಪ್ರತಿಯೊಂದು ಗ್ರಾಮದಲ್ಲಿಯೂ ಗ್ರಾಮದೇವತೆ ಇದ್ದಂತೆ ತೋರುತ್ತದೆ. ಅಖಂಡ ಹಿಂದೂ ಸಮಾಜದಲ್ಲಿ ಶಕ್ತಿದೇವತೆಗಳು ಸೃಷ್ಟಿಗೊಂಡ ಪರಿ ಇದು. ಈ ಶಕ್ತಿದೇವತೆ ಕಾಳಿ, ಮಾರಿ, ಮಸಣಿ, ಚಂಡಿ, ಚಾಮುಂಡಿ, ದುರ್ಗಿ, ಮಾಯಿ, ಯಾರೇ ಆಗಿರಬಹುದು, ಜನತೆಗೆ ಮಾತ್ರ, ಇವುಗಳ ಬಗೆಗಿರುವ ನಂಬಿಕೆಗಳಲ್ಲಿ ವ್ಯತ್ಯಾಸವಿಲ್ಲ ಮಾತೃದೇವತೆಯ ಪರಿಕಲ್ಪನೆಯೇ ಶಕ್ತಿದೇವತೆಗಳ ಸೃಷ್ಟಿಗೆ ಪ್ರಮುಖ ಕಾರಣವೆಂಬುದನ್ನು ಮತ್ತೆ ಹೇಳಬೇಕಿಲ್ಲ.

ಕಷ್ಟಕೊಡುವ ಮತ್ತು ಕಷ್ಟ ಪರಿಹರಿಸುವ ಎರಡೂ ಜವಾಬ್ದಾರಿ ಹೊತ್ತಿರುವವಳು ಶಕ್ತಿದೇವತೆ ಎಂಬ ಗ್ರಾಮೀಣದ ಬಲವಾದ ನಂಬಿಗೆಯ ಹಿನ್ನೆಲೆಯಲ್ಲಿಯೇ ಅವಳ ಆರಾಧನೆ ಶುರುವಾಯಿತು. ಹಬ್ಬ-ಜಾತ್ರೆ-ಉತ್ಸವಗಳು ಭಾವುಕ ಜನರು ದೇವಿಯನ್ನು ಆರಾಧಿಸುವ ಮಾಧ್ಯಮಗಳಾದವು. ಇವುಗಳಲ್ಲಿ, ಮೋಜು-ಮನೋರಂಜನೆಗಿಂತ ಹೆಚ್ಚಾಗಿ, ಧಾರ್ಮಿಕ ನಂಬುಗೆ, ಹರಕೆ; ವಿವಿಧ ಬಗೆಯ, ವಿಚಿತ್ರ ನಮೂನೆಯ ಆಚರಣೆಗಳು ಸೇರಿಕೊಂಡವು. ದೈವದ ಸಂತೃಪ್ತಿಗಾಗಿ ಪ್ರಾಣಿಬಲಿಯೂ ಸುರುವಾಯಿತು ಈ ಮೊದಲು ನರಬಲಿಯೂ ಇತ್ತು. ಶಕ್ತಿದೇವತೆಗಳ ಸುತ್ತಹೆಣೆದುಕೊಂಡ, ಇವೆಲ್ಲವುಗಳ ಅಧ್ಯಯನದಿಂದ, ನಮ್ಮ ಪ್ರಾಚೀನ ಸಂಸ್ಕೃತಿ-ಪರಂಪರೆ ಹಾಗು ಬದುಕಿನ ಮೌಲ್ಯಗಳನ್ನು ಗುರುತಿಸಿಕೊಳ್ಳಬಹುದು. ಒಟ್ಟಾರೆ ನಮ್ಮ ಸಾಂಸ್ಕೃತಿಕ ಮೌಲ್ಯಗಳ ಅಧ್ಯಯನದ ದೃಷ್ಟಿಯಿಂದ ಶಕ್ತಿದೇವತೆಗಳು ಬಹುಮುಖ್ಯ ಆಕರಗಳಾಗುತ್ತವೆ.

ಕರ್ನಾಟಕದ ಕೆಲವು ಜಿಲ್ಲೆಯಲ್ಲಿಯ ಕೆಲವು ಪ್ರಮುಖ ಶಕ್ತಿದೇವತೆಗಳ ಅಭ್ಯಾಸದ ಫಲಿತವೇ ಈ ಮುಂದೆ ವಿವರಣೆಗೊಂಡಿರುವುದನ್ನು ನೋಡಬಹುದು. ಪ್ರಸ್ತುತದಲ್ಲಿ ಪುಟಗಳ ಮಿತಿಯನ್ನು ಅನುಲಕ್ಷಿಸಿ ಅತ್ಯಂತ ಸ್ಥೂಲವಾಗಿ ಮತ್ತು ಸಂಕ್ಷಿಪ್ತವಾಗಿ ಶಕ್ತಿದೇವತೆಗಳ ವಿಶ್ಲೇಷಣೆ ಮಾಡಲಾಗಿದೆ.

ಸವದತ್ತಿ ಯಲ್ಲಮ್ಮ :

ಪುರಾಣ, ಜನಪದ, ಇತಿಹಾಸ ಈ ಮೂರರ ಮಿಶ್ರಣದಲ್ಲಿ ಎಲ್ಲಮ್ಮನ ವಿಷಯ ಮಾಹಿತಿ ಹರಡಿಕೊಂಡಿದೆ. ರೇಣುಕೆಯ ಕ್ಷೇತ್ರಗಳು ಭಾರತದ ಉದ್ದಗಲಕ್ಕೂ ಹರಡಿಕೊಂಡಿವೆ. ರೇಣುಕೆ ಸತಿಹೋದಳೆಂದು ಸ್ಥಳಪುರಾಣವಿದೆ. ಇವಳ ತಂದೆ ಕಾಶ್ಮೀರದ ರೇಣುಕ ಮಹಾರಾಜ; ಪರಶುರಾಮ ಸಂಹಾರ ಮಾಡಿದ ಕಾರ್ತವೀರ್ಯಾರ್ಜುನ ಮಹಿಷ್ಮತಿ-ನಗರವೂ ಉತ್ತರದ

ಕಡೆಯದು. ಆದುದರಿಂದ ಈ ಕತೆ–ನಡೆದುದು ಉತ್ತರ ಭಾರತದಲ್ಲಿಯೇ ಎನ್ನುವ ವಿದ್ವಾಂಸರ ಅಭಿಪ್ರಾಯವನ್ನು ಅಲ್ಲಗಳೆಯಲಾಗದು.

ಬೆಳಗಾವಿ ಜಿಲ್ಲೆಯ ಸವದತ್ತಿ ಯಲ್ಲಮ್ಮನಿಗೆ ರಾಷ್ಟ್ರಮಟ್ಟದ ಖ್ಯಾತಿಯಿದೆ. ಅಂದರೆ ಭಾರತದ ಹಲವಾರು ರಾಜ್ಯಗಳಲ್ಲಿ ಇವಳ ಭಕ್ತರಿದ್ದಾರೆ; ದಕ್ಷಿಣ ಭಾರತದಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ. ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಸೌದತ್ತಿಯ ತಳದೇವತೆ ಸ್ಥಳದೇವತೆಯಾದ ಇವಳನ್ನು ಎಲ್ಲಮ್ಮ, ರೇಣುಕೆ, ಜಗದಂಬೆ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಏಳುಕೊಳ್ಳದ ಯಲ್ಲಮ್ಮ, ಗುಡ್ಡದ ಎಲ್ಲಮ್ಮ ಅಥವಾ ಗುಡ್ಡದ ತಾಯಿ–ಇವು ಎಲ್ಲಮ್ಮನ ಉದ್ಭವ ಸ್ಥಾನವನ್ನು ಸೂಚಿಸುತ್ತವೆ. ಸೌದತ್ತಿ ಪರಿಸರದ ಈ ಏಳುಕೊಳ್ಳದ ಮತ್ತು ಗುಡ್ಡದ ಸ್ಥಳಗಳಲ್ಲಿ ಮೂಲ ಜನಾಂಗವೊಂದು ವಾಸಿಸುತ್ತಿರಬಹುದು. ಆ ಜನಾಂಗ ಸೃಷ್ಟಿಸಿಕೊಂಡ ದೇವತೆ ಇದಾಗಿರಬಹುದು. ಅದಕ್ಕಾಗಿ ಇವಳಿಗೆ ಏಳುಕೊಳ್ಳದ ಎಲ್ಲಮ್ಮ ಗುಡ್ಡದ ಎಲ್ಲಮ್ಮ ಎಂಬ ಹೆಸರುಗಳಿದ್ದಂತೆ ತೋರುತ್ತದೆ. ಈ ಪ್ರದೇಶದ ಕೊಳ್ಳ ಮತ್ತು ಗುಡ್ಡಗಳೊಂದಿಗೆ ಭಕ್ತರು ಹೊಂದಿದ ಭಾವನಾತ್ಮಕ ಸಂಬಂಧ ಈಗಲೂ ಇದೆ.

ಏಳುಕೊಳ್ಳದ ಎಲ್ಲಮ್ಮನ ಅನ್ವರ್ಥಕನಾಮ ರೇಣುಕಾದೇವಿ; ಪಾರ್ವತಿಯ ಅವತಾರ ಎಂಬ ನಂಬಿಕೆಯಿದೆ. ಈ ದೇವತೆ ಒಂದು ಊರು ಅಥವಾ ಸೀಮೆಯ ದೇವತೆಯಾಗಿ ಕಾಲಕ್ರಮೇಣ ದಕ್ಷಿಣ ಭಾರತದಲ್ಲಿ ಪ್ರಾಂತಗಳಲ್ಲಿ ಪ್ರಚಾರ ಹೊಂದಿ ಕೊನೆಯಲ್ಲಿ ರೇಣುಕೆಯಾಗಿ ಸಮಗ್ರ ಭಾರತದ ಬ್ರಾಹ್ಮಣ ಸಂಸ್ಕೃತಿಯಲ್ಲಿ ಲೀನವಾಗಿರುವುದು ಸ್ಪಷ್ಟವಾಗಿ ಎದ್ದು ಕಾಣುತ್ತದೆ. (ಜಾನಪದ ಸಾಹಿತ್ಯ ದರ್ಶನ : ಭಾಗ ೧೧; ಪು:೭: ಕ.ವಿ.ವಿ. ಧಾರವಾಡ, ೧೯೮೭) ಒಂದು ವಿಶಿಷ್ಟ ಎಲ್ಲೆಯ ದೇವತೆಯಾಗಿ ಪ್ರತಿಷ್ಠಾಪನೆಗೊಂಡ ಎಲ್ಲಮ್ಮನ ಪ್ರಭಾವ–ಶಕ್ತಿ ವಿಸ್ತಾರಗೊಂಡು, ಎಲ್ಲೆ ಮೀರಿ ಬೆಳೆದು ಕರ್ನಾಟಕ, ಗೋವೆ, ಮಹಾರಾಷ್ಟ್ರದ ಮತ್ತು ಇತರ ಭಕ್ತರನ್ನು ಪಡೆದು ಎಲ್ಲಮ್ಮನಾಗಿ ರೂಪುಗೊಂಡಿರಬೇಕು. ಎಲ್ಲ ಜಾತಿ, ಮತ, ಪಂಥದವರೂ ಇವಳ ಭಕ್ತರು ಗಂಡು–ಹೆಣ್ಣು–ಮಕ್ಕಳೂ ಇಲ್ಲಿಗೆ ಬರುತ್ತಾರೆ. ಆದರೆ ಕೆಳಜಾತಿಯ ಭಕ್ತರೇ ಅಧಿಕ. ಎಲ್ಲಮ್ಮನ ಜೋಗಪ್ಪ–ಜೋಗತಿಯರೂ ಕೆಳಸ್ತರದವರೇ, ದೇವದಾಸಿಯಾಗುವವರೂ ಕೆಳಜಾತಿಯವರೇ. ಇದು ಈಗ ತುಂಬ ಕಡಿಮೆಯಾಗಿದೆ. ಉಚ್ಚ ಜಾತಿಯ ಮದುವೆಯಾದ ಗರತಿಯರು ದೇವಿ ಮುತ್ತು ಕಟ್ಟಿಸಿಕೊಂಡು, ಗೌರವದಿಂದ ಬದುಕುತ್ತಾರೆ. ತಾಮ್ರದ ಕೊಡದ ಮೇಲೆ ಅಥವಾ ಹಡ್ಡಲಗಿಯಲ್ಲಿ ಬೆಳ್ಳಿದೇವಿ ಮೂರ್ತಿಯನ್ನು ಇಟ್ಟು ಅಲಂಕರಿಸಿ, ಎಲ್ಲಿ ಕಾಣೆ ಎಲ್ಲಿ ಕಾಣೆ ಎಲ್ಲಮ್ಮ ನಿನ್ನಂಥಾಕಿನ್ನೆಲ್ಲಿ ಕಾಣೆ... ಎಂದು ಹಾಡುತ್ತ, ಚೌಡಿಕೆಯ ಗತ್ತಿಗನುಗುಣವಾಗಿ ಕುಣಿಯುವ ಇವಳ

ಭಕ್ತರು ಸಹಸ್ರಾರು. ಹಾಗೆಯೇ 'ಉಧೋ ಉಧೋ ಎಲ್ಲಮ್ಮ ನಿನ್ನಾಳ್ಕೆ ಉಧೋ ಉಧೋ' ಎಂದು ಉದ್ಘೋಷಿಸುವವರು ಅಸಂಖ್ಯ.

ಸ್ಥಳಪುರಾಣದ ಪ್ರಕಾರ, ರೇಣುಕಾದೇವಿಯ ತನ್ನ ಗಂಡ ಜಮದಗ್ನಿಯ ನಿತ್ಯದ ಕರ್ಮಾನುಷ್ಠಾನಗಳಿಗೆ–ಸಜೀವ ಸರ್ಪದ ಸಿಂಬೆಯ ಮೇಲೆ ಮರಳಿನ ಕೊಡದಲ್ಲಿ ನೀರುತರುತ್ತಿದ್ದಳು. ಇದು ಅವಳ ಗಟ್ಟಿ ಪಾತಿವೃತ್ಯವನ್ನು ಸಂಕೇತಿಸುತ್ತದೆ. ಹೀಗಿರುವಾಗ ಒಂದು ಸಲ ರೇಣುಕೆ ನೀರು ತರುವುದು ತಡವಾಗುತ್ತದೆ. ಜಮದಗ್ನಿ ಕೋಪದಿಂದ ಅವಳ ಶಿರಚ್ಛೇದನ ಮಾಡಲು ತನ್ನ ಮಕ್ಕಳಿಗೆ ಆಜ್ಞಾಪಿಸುತ್ತಾನೆ. ಇದು ಪುರಾಣದಲ್ಲಿದೆಯಾದರೂ ಸ್ಥಳಿಕರೆಲ್ಲರೂ ಇದನ್ನು ಕತೆ ಮಾಡಿ ಹೇಳುತ್ತಾರೆ ಆದರೆ ಸ್ಥಳಿಕರು ಹೇಳುವ ಕಥೆಯ ಪ್ರಕಾರ ರೇಣುಕೆಗೆ ಕುಷ್ಠ ರೋಗಯಾಗಿದೆಯೆಂದು, ಜಮದಗ್ನಿ ಅವಳನ್ನು ಆಶ್ರಮದಿಂದ ಹೊರಹಾಕುತ್ತಾನೆ. ರೋಗಗ್ರಸ್ತ ರೇಣುಕೆ ತಿರುಗಾಡುತ್ತಿರುವಾಗ ಎಕ್ಕಯ್ಯ ಮತ್ತು ಜೋಗಯ್ಯ ಎಂಬ ಮುನಿಗಳ ದರ್ಶನವಾಗುತ್ತದೆ. ಈ ಮುನಿಗಳೂ ರೇಣುಕೆಯ ಮೇಲೆ ಕರುಣೆದೋರಿ, ತಮ್ಮಾಶ್ರಮದ ಸಮೀಪದ ನೀರಿನಹೊಂಡದಲ್ಲಿ ಅವಳಿಗೆ ಸ್ನಾನ ಮಾಡಲು ಸೂಚಿಸುತ್ತಾರೆ. ರೇಣುಕೆ ಸ್ನಾನ ಮಾಡುತ್ತಾಳೆ, ಕುಷ್ಠರೋಗ ನಿವಾರಣೆಯಾಗುತ್ತದೆ. ಧನ್ಯತಾ ಭಾವದಿಂದ ಆ ಮುನಿಗಳ ಎಕ್ಕಯ್ಯ–ಜೋಗಯ್ಯ ಹೆಸರುಗಳನ್ನು ಭಕ್ತಿಭಾವದಿಂದ ಆವೇಶ ತುಂಬಿ ಉಚ್ಚರಿಸುತ್ತ, ಆಶ್ರಮಕ್ಕೆ ಓಡಿ ಬರುತ್ತಾಳೆ. ಜಮದಗ್ನಿಯ ಕೋಪ ಇಳಿದಿರುವುದಿಲ್ಲ ರೇಣುಕೆಯ ಶಿರಚ್ಛೇದನಕ್ಕೆ ಆಜ್ಞಾಪಿಸುತ್ತಾನೆ. ಇತ್ತಕಡೆ, ಸಹಸ್ರ ಬಾಹು ಕಾರ್ತವೀರ್ಯಾರ್ಜುನನು ತನ್ನ ಸೈನ್ಯ ಸಮೇತ ಬಂದು ಜಮದಗ್ನಿಯ ಆಶ್ರಮವನ್ನು ನಾಶಪಡಿಸಿ, ಋಷಿಯನ್ನು ಕೊಂದು, ಕಾಮಧೇನುವನ್ನು ತೆಗೆದುಕೊಂಡು ಹೋಗುತ್ತಾನೆ. ರೇಣುಕೆ ದುಃಖತಪ್ತಳಾಗುತ್ತಾಳೆ. ಅವಳ ಜೇಷ್ಠಪುತ್ರ ಪರಶುರಾಮ ಕಾರ್ತವೀರ್ಯಾರ್ಜುನನ್ನು ನಾಶಪಡಿಸುತ್ತಾನೆ. ರೇಣುಕಾದೇವಿ ತನ್ನ ಗಂಡನ ಚಿತೆಯೇರಿ ಸಹಗಮನ ಮಾಡುತ್ತಾಳೆ. ಈ ಘರ್ಷಣೆಯಲ್ಲಿ ರಟ್ಟರಾಜರ ಬೆಂಬಲಿಗರಾಗಿ ಈಗಿನ ಬೆಟಸುರ ಗ್ರಾಮದ ಸ್ಥಳಿಕರು ಹೊಡೆದಾಡಿರಬೇಕು ಹೋರಾಟಗಾರರ ನಾಯಕ ಬೇಟಸೂರ. ಅದಕ್ಕಾಗಿ ಈ ಗ್ರಾಮಕ್ಕೆ ಬೆಟಸೂರ ಎಂದು ಹೆಸರು ಬಂದಿರಬೇಕು. ಸೋತ ಸೈನಿಕರಿಗೆ, ಪರಶುರಾಮ, ತನ್ನ ತಾಯಿಯ ಗುರುಗಳಾದ ಏಕನಾಥ, ಜೋಗಿನಾಥರನ್ನು ಸ್ಮರಿಸುತ್ತ ಚೌಡಿಕೆಯನ್ನು ಬಾರಿಸುತ್ತ ನನ್ನ ತಾಯಿಯ ಸೇವೆ ಮಾಡಬೇಕೆಂದು ಸೂಚಿಸುತ್ತಾನೆ. ಬೇಟಾಸೂರನ ತಲೆ, ನರಗಳಿಂದ ಚೌಡಿಕೆಯನ್ನು, ಹಲ್ಲುಗಳಿಂದ ಸರಗಳನ್ನು ಮಾಡಿದ್ದನೆಂದು ನಂಬಿಕೆ. ಪ್ರಾಯಶಃ ಇದರ ಸಾಂಕೇತಕವಾಗಿಯೇ, ಎಲ್ಲಮ್ಮನ ಭಕ್ತರು ಕವಡೆ ಸರವನ್ನು ಧರಿಸಿ, ಬುಟ್ಟಿಯಲ್ಲಿ ಅಥವಾ ಕೊಡದಲ್ಲಿ ದೇವಿಯನ್ನು ಹೊತ್ತುಕೊಂಡು, ಚೌಡಿಕೆ ಬಾರಿಸುತ್ತ 'ಏಕಯ್ಯ ಜೋಗಯ್ಯ' ಎಂದು ಸ್ಮರಿಸುತ್ತ ಭಿಕ್ಷೆ

ಬೇಡುತ್ತಿದ್ದಂತೆ ತೋರುತ್ತದೆ. (ಜಾನಪದ ಸಾಹಿತ್ಯ ದರ್ಶನ : ಭಾಗ ೧೧; ಪು:೨೮-೨೯: ಕ.ವಿ.ವಿ. ಧಾರವಾಡ, ೧೯೮೭).

ಎಲ್ಲಮ್ಮ ವಿಧವೆಯಾದುದರ ಪ್ರತೀಕವಾಗಿ, ಗುಡ್ಡದ ದೇವಸ್ಥಾನದಲ್ಲಿ ಹೊಸ್ತಿಲ ಹುಣ್ಣಿಮೆಯನ್ನು ರಂಡಿ ಹುಣ್ಣಿವೆ, ಬಣದ ಹುಣ್ಣಿಮೆಯನ್ನು ಮುತ್ತೈದೆ ಹುಣ್ಣಿವೆ ಎಂದು ಸಾಂಪ್ರದಾಯಿಕವಾಗಿ ಆಚರಿಸುತ್ತ ಬರಲಾಗಿದೆ. ಎಲ್ಲಮ್ಮ-ಅಚ್ಚ ಕನ್ನಡ ದೇಸೀ ಪದ. ಶಿಷ್ಟ ಪುರಾಣಗಳಲ್ಲಿ ಎಲ್ಲಿಯೂ ಎಲ್ಲಮ್ಮನ ಉಲ್ಲೇಖವಿಲ್ಲ ರೇಣುಕಾ ಮಾತ್ರ ಇದೆ. ರೇಣುಕೆಯೇ ಎಲ್ಲಮ್ಮ ಎಂದು ಎಲ್ಲಿಯೂ ಪ್ರಸ್ತಾಪವಾದಂತಿಲ್ಲ. ಹೀಗಾಗಿ ಪುರಾಣದ ರೇಣುಕೆಯೇ ಬೇರೆ; ಗುಡ್ಡದ ಎಲ್ಲಮ್ಮನೇ ಬೇರೆ. ಆದರೆ ರೇಣುಕೆಯೇ ಎಲ್ಲಮ್ಮ ಎಂಬ ಭಾವನೆ ಜನಪದ ಜನಾಂಗದ್ದು. ರೇಣುಕೆಯೇ ಎಲ್ಲಮ್ಮನಾಗಿ ದೈವೀಕರಣಗೊಂಡುದನ್ನೂ ಅರಿತೂ, ಅರಿಯದೆಯೋ ಜನಪದರು ಒಪ್ಪಿಕೊಂಡು ಬಿಟ್ಟಿದ್ದಾರೆಂದು ತೋರುತ್ತದೆ. ಅಂತೆಯೇ ರೇಣುಕಾ ಎಲ್ಲಮ್ಮನ ಬಗೆಗೆ ಹಾಡು, ಕಥೆ, ಸ್ಥಳಪುರಾಣ, ಸ್ಥಳೀಕರು ಕಥೆಗಳನ್ನು ಕಟ್ಟಿದ್ದಾರೆ. ಹೀಗಾಗಿ ಸವದತ್ತಿ ಗುಡ್ಡದ ಶಕ್ತಿದೇವತೆ ಎಲ್ಲಮ್ಮ ಸಂಸ್ಕೃತೀಕರಣಗೊಂಡ ದೇವತೆ ಎಂಬುದರಲ್ಲಿ ಸಂಶಯವಿಲ್ಲ.

ಎಲ್ಲಮ್ಮನ ಗುಡ್ಡಕ್ಕೆ ಹೋಗುವ ದಾರಿಯ ಪಕ್ಕದಲ್ಲಿ ಜೋಗುಳಭಾವಿ ಇದೆ. ಅದರಲ್ಲಿ ಮಿಂದರೆ ಪಾಪ ಪರಿಹಾರವಾಗುವುದೆಂಬ ನಂಬಿಕೆಯಿದೆ. ಗುಡ್ಡದಲ್ಲಿ ಎಣ್ಣೆಹೊಂಡ, ಅರಿಶಿಣ ಹೊಂಡಗಳೆಂಬ ತೀರ್ಥಗಳಿವೆ. ಇಲ್ಲಿ ಸ್ನಾನ ಮಾಡಿಯೇ ದೇವಿ ಪೂಜೆಗೆ ಹೋಗಬೇಕು. ಇಲ್ಲಿಯೇ ಜಮದಗ್ನಿ, ಪರಶುರಾಮರ ಗುಡಿಗಳಿವೆ. ನಾಥಪಂಥದ ಭೈರವನಾಥನ ಚಿಕ್ಕ ಮಠವೂ ಇದೆ. ಏಕನಾಥ, ಜೋಗಿನಾಥರೆಂಬುವರು ಈ ಮಠದ ಸನ್ಯಾಸಿಗಳಂತೆ ಈ ಮಠದಲ್ಲಿ ಕಾಲಭೈರವರನ ವಿಗ್ರಹವಿದೆ, ಮುಂದಿನ ಕೊಠಡಿಯಲ್ಲಿ ಶಿವಲಿಂಗವಿದೆ.

ಎಲ್ಲಮ್ಮನ ಜಾತ್ರೆ, ಗುಡ್ಡದ ದೇವಾಲಯದಲ್ಲಿ ಹನ್ನೆರಡೂ ತಿಂಗಳು ಇರುತ್ತದೆ. ಹೊಸ್ತಿಲ ಹುಣ್ಣಿವೆ, ಬನದಹುಣ್ಣಿವೆ ಹಾಗೂ ಭಾರತ ಹುಣ್ಣಿವೆಗಳಲ್ಲಿ ಜಾತ್ರೆ ಅತ್ಯಂತ ವೈಭವದಿಂದ ನೆರವೇರುತ್ತದೆ. ಲಕ್ಷಲಕ್ಷ ಭಕ್ತರು ಜಾತ್ರೆಯಲ್ಲಿ ಸೇರುತ್ತಾರೆ. ರಥೋತ್ಸವ ಇಲ್ಲ ಪಲ್ಲಕ್ಕಿ ಉತ್ಸವ ಮಾತ್ರ ಇದೆ. ಮಂಗಳವಾರ, ಶುಕ್ರವಾರ, ಮಹಾನವಮಿಯ ಸಂದರ್ಭದಲ್ಲೆಲ್ಲಾ ದೇವಿಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು, ದೇವಾಲಯದ ಪೌಳಿಸುತ್ತಲೂ ಮೆರೆಸುತ್ತಾರೆ. ಗೌರಿಹುಣ್ಣಿಮೆ ಸಂದರ್ಭದಲ್ಲಿ, ಅದರ ಹಿಂದಿನ ರಾತ್ರಿ ದೇವಿಗೆ ಬೆತ್ತಲೆ ಸೇವೆ ಸಲ್ಲಿಸುವ ಪದ್ಧತಿ ಇತ್ತು. ಜನಗಿಬಿಡುವ, ಮುಡಿ ಕಟ್ಟುವ, ದೀಡನಮಸ್ಕಾರ ಹಾಕುವ, ಉರುಳುಸೇವೆ ಮಾಡುವ ಸಿಡಿಯಾಡುವ, ಉಪ್ಪು ಹಾಕುವ, ಜಡೆ ಇಳಿಸುವ, ತೊಟ್ಟಿಲುಸೇವೆ ಸಲ್ಲಿಸುವ, ಮೀಸಲು ತುಪ್ಪ ನೀಡುವ ಇತ್ಯಾದಿ ದೇವಿ ಹರಕೆಗಳು ಈಗಲೂ ರೂಢಿಯಲ್ಲಿವೆ. ಹಗಲು ರಾತ್ರಿಯೆನ್ನದೆ ಜಾತ್ರೆ

ನಡೆದೇ ಇರುತ್ತದೆ. ಕೊಡ ಹೊತ್ತು ಕುಣಿಯುವ ಜೋಗಪ್ಪ ಜೋಗತಿಯರ ದೃಶ್ಯಗಳು ನಯನ ಮನೋಹರವಾಗಿರುತ್ತವೆ. ಪ್ರಾಯಶಃ ಇದೇ ಕಾರಣದಿಂದ ಗುಡ್ಡದ ಜಾತ್ರೆಯಲ್ಲಿ ಬಯಲಾಟ-ನಾಟಕ-ಸರ್ಕಸ್‌ಗಳಿರುವುದಿಲ್ಲ. ಈ ದೇವಿ ಪೂಜೆ ಶಾಸ್ತ್ರೋಕ್ತವಲ್ಲ ಸಾಂಪ್ರದಾಯಿಕವಾದುದು. ಪೂಜಾರಿಗಳು ಉಗುರಗೋಳದ ವೀರಶೈವರು. ಗಂಡು ಮಕ್ಕಳು ಮಾತ್ರ ದೇವಿ ಪೂಜೆ ಮಾಡುತ್ತಾರೆ, ಸ್ತ್ರೀಯರಿಗೆ ಗರ್ಭಗುಡಿಯಲ್ಲಿ ಪ್ರವೇಶ ಕೂಡ ಇಲ್ಲ. ದಿನಕ್ಕೆ ಎರಡು ಸಲ ಪೂಜೆ ಹಸಿರು ಮತ್ತು ಕೆಂಪು ಬಣ್ಣದ ಸೀರೆ ಅಥವಾ ಪತ್ತಲಗಳನ್ನು ಉಡಿಸುತ್ತಾರೆ ಶಿಖರಕ್ಕೆ ಖಣ, ಸೀರೆ ಹಾಕುವರು. ಅಕ್ಕಿ, ಬೇಳೆ, ಎಣ್ಣೆ, ತುಪ್ಪ, ಉತ್ತತ್ತಿ, ಕಲ್ಲುಸಕ್ಕರಿ, ಹಣ್ಣು, ಕಾಯಿ, ಕರ್ಪೂರ, ದೀಪಾರತಿ ಮುಂತಾದವರನ್ನು ಭಕ್ತರು ಪೂಜಾಸಂದರ್ಭದಲ್ಲಿ ದೇವಿಗೆ ನೀಡುವರು. ಅನ್ನ, ಬೇಳೆ, ಪಲ್ಯ ದೇವಿಗೆ ನೈವೇದ್ಯ ಮಾಡುವರು. ದೇವಿಗೆ ಭಂಡಾರ-ಕುಂಕುಮ ಜೋಗಪ್ಪ-ಜೋಗತಿಯರಿಗೆ ಮತ್ತು ಭಕ್ತಾದಿಗಳಿಗೆಲ್ಲ ಹಣೆಗೆ ಭಂಡಾರ ಬಳಿಯುವುದು ಒಂದು ವಿಶೇಷ ಪದ್ಧತಿ ಕೂಡ ಇಲ್ಲಿದೆ.

ಸಿರಸಂಗಿ ಕಾಳಮ್ಮ :

ಬೆಳಗಾವಿ ಜಿಲ್ಲೆಯ ಸವದತ್ತಿಯಿಂದ ಸುಮಾರು ೨೦ ಕಿ.ಮೀ. ದೂರದಲ್ಲಿ ಸಿರಸಂಗಿ ಗ್ರಾಮವಿದೆ. ಈ ಚಿಕ್ಕಗ್ರಾಮ ಕಾಳಿಕಾಂಬಾ ದೇವಸ್ಥಾನವಿರುವ ಅತ್ಯಂತ ಪುರಾತನಕ್ಷೇತ್ರ, ಸೌದತ್ತಿಯಲ್ಲಮ್ಮನ ನಂತರ ಸಿರಸಂಗಿ ಕ್ಷೇತ್ರದ ಕಾಳಮ್ಮ ಪ್ರಸಿದ್ಧ ಶಕ್ತಿದೇವತೆ. ಈ ದೇವಸ್ಥಾನ ಶಿರಶೃಂಗ ಮುನಿಗಳಿಂದ ಪ್ರತಿಷ್ಠಾಪನೆ ಹೊಂದಿ ೧೧ನೇ ಶತಮಾನದಲ್ಲಿ ಹೆಬ್ಬನಾಯಕನೆಂಬ ಪಾಳೆಯಗಾರನಿಂದ ಜೀರ್ಣೋದ್ಧಾರವಾಗಿದೆಯೆಂದು ಅಲ್ಲಿಯ ಶಿಲಾಲೇಖದಿಂದ ತಿಳಿದು ಬರುತ್ತದೆ. ಗುಡ್ಡದಿಂದ ಆವೃತವಾದ ಸಿರಸಂಗಿಯಿಂದ ಸುಮಾರು ಒಂದು ಫರ್ಲಾಂಗ್ ಅಂತರದಲ್ಲಿ ಕಾಳಮ್ಮನ ಗುಡಿಯಿದೆ. ಗೋವನಕೊಪ್ಪ, ಕಲ್ಲಾಪುರ ಮತ್ತು ಸಿರಸಂಗಿ ಉರುಗಳು ಕೂಡಿ ಸಿರಸಂಗಿ ಎನ್ನುವರು. ಕಾಳಮ್ಮನ ಗುಡಿಗೆ ಹೋಗುವ ಎಡಬದಿಗೆ ಕಟ್ಟೆಯನ್ನು ಕಟ್ಟಲಾದ ಬನ್ನಿಗಿಡವಿದೆ; ಕಟ್ಟೆಯ ಮೇಲೆ ಸಣ್ಣಗುಡಿಯಿದೆ, ಅದರೊಳಗಡೆಗೆ ಒಂದು ದುಂಡನೆಯ ಕರಿಕಲ್ಲು ಇದೆ. ಅದನ್ನೇ ಬನ್ನಿಮಹಾಂಕಾಳಿ ಎನ್ನುವರು. ಇದಕ್ಕೆ ಕಾಳಮ್ಮನ ಪಾದಗಟ್ಟಿ ಎಂದೂ ಕರೆವ ವಾಡಿಕೆ. ಇದೇ ಈ ದೇವಿಯ ಮೂಲ ಮೂರ್ತಿ ಅಥವಾ ಉದ್ಭವ ಮೂರ್ತಿ ಎಂಬುದು ಜನರ ಹೇಳಿಕೆ. ಆದರೆ, ಈಗಿರುವ ಗುಡಿಯಲ್ಲಿಯ ಕಾಳಮ್ಮನ ಮೂರ್ತಿಯನ್ನು ಕಪ್ಪುಶಿಲೆಯಲ್ಲಿ ಸುಂದರವಾಗಿ ಕೆತ್ತಿ ನಿರ್ಮಿಸಲಾಗಿದೆ.

ಈ ದೈವದ ಉಗಮವನ್ನು ಪುರಾಣ, ಇತಿಹಾಸ, ಶಾಸನ ಮತ್ತು ಜನಪದಗಳ ಹಿನ್ನೆಲೆಯಲ್ಲಿ ಕಂಡುಕೊಳ್ಳಬಹುದು. ಈ ವಿಚಾರದಲ್ಲಿ ಪುರಾಣದ ಕತೆಯೊಂದು ಹೀಗಿದೆ. ಕೈಲಾಸದಲ್ಲಿ ಗಣಪತಿಯು-ಶಿವ-ಪಾರ್ವತಿಯರಿಗೆ ನಿಮ್ಮಲ್ಲಿ ಯಾರು ಹೆಚ್ಚು ಸುಂದರರು ಎಂದು

ಪ್ರಶ್ನೆ ಮಾಡುತ್ತಾನೆ. ಶಿವನು ನಾನು, ಪಾರ್ವತಿಯು ನಾನು ಎಂದು ಉತ್ತರಿಸುತ್ತಾರೆ. ಸಮಸ್ಯೆಯ ಪರಿಹಾರಕ್ಕೆ ಶಿವ, ಬ್ರಹ್ಮ ವಿಷ್ಣುಗಳಿಂದಲೂ ಸಾಧ್ಯವಾಗಲಿಲ್ಲ. ತ್ರಿಮೂರ್ತಿಗಳು ತಮ್ಮ ಜನಕ ವಿಶ್ವಕರ್ಮನನ್ನು ಪ್ರಾರ್ಥಿಸಲಾಗಿ, ಪ್ರತ್ಯಕ್ಷನಾದ ವಿಶ್ವಕರ್ಮ ಸಮಸ್ಯೆಯ ನಿವಾರಣೆಗೆ ತನ್ನ ಮಗನಾದ ಶಿಲ್ಪಿಯನ್ನು ಕಳಿಸುವುದಾಗಿ ಹೇಳಿ ಮಾಯವಾದನು. ಆರು ದಿನಗಳ ತರುವಾಯ ಸಮಸ್ಯೆಗೆ ಪರಿಹಾರ ಸೂಚಿಸುವನೆಂದು ಹೇಳಿ ಶಿಲ್ಪಿಯೂ ಹೋದನು. ಏಳನೇ ದಿನ ಶಿವ-ಪಾರ್ವತಿಯರು ತಮ್ಮ ಅರಮನೆಯ ದ್ವಾರದ ಬಳಿ ಬರುತ್ತಾರೆ ಅಲ್ಲಿ ತಮ್ಮ ತಮ್ಮ ಪ್ರತಿರೂಪಗಳನ್ನು ಕಂಡು ಸಂತೋಷಪಡುತ್ತಾರೆ. ಶಿವ ಪಾರ್ವತಿಯನ್ನು ಪಾರ್ವತಿ ಶಿವನನ್ನು ಪರಸ್ಪರ ಹೊಗಳುತ್ತಾರೆ. ಅಲ್ಲದೆ ಇಬ್ಬರೂ ಶಿಲ್ಪಿಯನ್ನು ಪ್ರಶಂಸಿಸುತ್ತಾರೆ. ಶಿಲ್ಪಿ ಪ್ರತ್ಯಕ್ಷನಾಗಿ-ಜಗತ್ತಿನಲ್ಲಿ ನೀವಿಬ್ಬರೂ ಸುಂದರರೇ ಎಂಬ ತೀರ್ಪು ನೀಡುತ್ತಾನೆ. ಪ್ರಸನ್ನಗೊಂಡ ಶಿವ, ಶಿಲ್ಪಿಗೆ ಬೇಕಾದ ವರ ನೀಡುವುದಾಗಿ ಆಶ್ವಾಸನೆ ಕೊಡುತ್ತಾನೆ. ಶಿಲ್ಪಿ ತನ್ನ ಇತಿಮಿತಿಯನ್ನೇ ಮರೆತು ಜಗತ್ತಿನಲ್ಲಿ ವಿಶ್ವಕರ್ಮನು ನಿರ್ಮಿಸಿದ ವಸ್ತುಗಳಲ್ಲಿ ಯಾವ ಅಸ್ತ್ರವೂ ತಾಗದಿರುವ ವಸ್ತುವನ್ನು ಬೇಡುತ್ತಾನೆ. ಎಲ್ಲ ಬಲ್ಲ ಶಿವ ತಥಾಸ್ತು ಎಂದು ದರಿದ್ರವನ್ನು ದಯಪಾಲಿಸುತ್ತಾನೆ. ಇದರಿಂದ ಕೋಪಗೊಂಡ ಶಿಲ್ಪಿಗೂ ಶಿವನಿಗೂ ವಾಗ್ವಾದ ನಡೆಯುತ್ತದೆ. ಶಿವಕೋಪೋದ್ರಿಕ್ತನಾಗಿ ಶಿಲ್ಪಿಯನ್ನು ಆತನ ಶಿಲ್ಪಿಕುಲವನ್ನು ನಾಶ ಮಾಡುವುದಾಗಿ ಉರಿಗಣ್ಣು ತೆರೆಯಲು ಉದ್ಯುಕ್ತನಾಗುತ್ತಾನೆ. ಕೂಡಲೇ ಶಿಲ್ಪಿ ಪಾರ್ವತಿಯನ್ನು ಪ್ರಾರ್ಥಿಸುತ್ತಾನೆ. ಪಾರ್ವತಿ ಪ್ರತ್ಯಕ್ಷಳಾಗಿ ಶಿಲ್ಪಿಯನ್ನು ರಕ್ಷಿಸುತ್ತಾಳೆ. ಶಿವನ ಕೋಪ ಉಪಶಮನವಾಗುತ್ತದೆ. ಆದರೆ ನಸುತೆರೆದ ಶಿವ ಉರಿಗಣ್ಣಿನ ಜ್ವಾಲೆಯಿಂದ ಪಾರ್ವತಿಯ ಮುಖ ಕಪ್ಪಾಗುತ್ತದೆ. ಶಿಲ್ಪಿ ತನ್ನನ್ನು ತನ್ನ ಕುಲದವರನ್ನು ರಕ್ಷಿಸಿದ ಪಾರ್ವತಿಯನ್ನು ಶ್ರೀ ಕಾಳಿಕಾಂಬಾ' ಹೆಸರಿನಿಂದ ಸ್ತುತಿಸುತ್ತಾನೆ. ಹರುಷಗೊಂಡ ಪಾರ್ವತಿ ಕಲಿಯುಗದಲ್ಲಿ ನಿಮ್ಮನ್ನು ರಕ್ಷಿಸಲು ಕಾಳಿಯಾಗಿ ಅವತರಿಸುತ್ತೇನೆ, ನಿಮ್ಮ ಬಡತನವನ್ನು ನಿವಾರಿಸುತ್ತೇನೆ, ಎಂದು ವಚನ ವಿತ್ತಂತೆ, ಕಾಳಿಕಾದೇವಿಯಾಗಿ ಅವತರಿಸಿದಳಂತೆ, ಅಂದಿನಿಂದ ಶಿಲ್ಪಿಯ ವಂಶದವರು ವಿಶ್ವಕರ್ಮಬ್ರಾಹ್ಮಣರು ಕಾಳಿಕಾದೇವಿಯನ್ನು ಆರಾಧಿಸತೊಡಗಿದರಂತೆ.

ಕಾಳಮ್ಮ ದುಷ್ಟ ನಿಗ್ರಹಕ್ಕಾಗಿ ಸಿರಸಂಗಿಗೆ ಬರುವ ಮುನ್ನವೇ ಉಡಚಮ್ಮನೆಂಬ ದೇವಿ ಇಲ್ಲಿದ್ದಳಂತೆ. ಹಾಗಾಗಿ ಅವಳೇ ಸಿರಸಂಗಿಯ ಅಧಿದೇವತೆ. ಇವಳ ಗುಡಿಯಲ್ಲಿ ತನಗೂ ಆಶ್ರಯವನ್ನು ಕಾಳಮ್ಮ ಕೇಳಿದಳಂತೆ. ಒಂದು ಶರತ್ತಿನ ಮೆಲೆ ಉಡಚಮ್ಮ ಕಾಳಮ್ಮನಿಗೆ ತನ್ನ ಗುಡಿಯಲ್ಲಿ, ವಾಸಿಸಲು ಅನುಮತಿ ನೀಡಿದಳಂತೆ. ಅದು-ಭಕ್ತರದರ್ಶನ ಮೊದಲು ನನಗೆ ಆಮೇಲೆ ನಿನಗೆ ಎಂದು. ಇದಕ್ಕೆ ಕಾಳಮ್ಮ ಒಪ್ಪಿದಳು. ಹಾಗಾಗಿ ಅಂದು ಉಡಚಮ್ಮನಿಗೆ ಭಕ್ತರ ಮೊದಲ ದರ್ಶನ, ಪೂಜೆ, ನಂತರ ಕಾಳಮ್ಮನ ದರ್ಶನ ಪೂಜೆ ನಡೆಯುತ್ತಿತ್ತಂತೆ. ಆದರೆ

ಕಾಳಮ್ಮನ ಪ್ರಭಾವ ಹೆಚ್ಚಿದಂತೆ, ಉಡಚಮ್ಮನಿಗೆ-ಈ ಮೊದಲು ಸಿಗುತ್ತಿದ್ದ ದರ್ಶನ-ಪೂಜೆ ಕಡಿಮೆಯಾಗಿ, ಕೊನೆಗೆ ನಿಂತುಹೋದುವಂತೆ, ಮೊದಲು ಉಡಚಮ್ಮನ ಜಾತ್ರೆ ನಡೆಯುತ್ತಿತ್ತಂತೆ. ಬಲಿಕೊಡುವ ಪದ್ಧತಿಯೂ ಇತ್ತು. ಬೇಡಜನಾಂಗದವರೆ ಪೂಜಾರಿಗಳಿದ್ದರೆಂದು, ಹಿರಿಯರು ಹೇಳುತ್ತಾರೆ. ಜನಪದ ಸಂಪ್ರದಾಯದ ಈ ಬಗೆಯ ವಿವರಗಳೂ ಅಷ್ಟೇ ಗಮನಾರ್ಹ. ಕಾಳಮ್ಮನ ಚರಿತ್ರೆಯನ್ನು ಕಟ್ಟಿಕೊಡುವ ಜನಪದಕತೆ, ಹಾಡು, ಐತಿಹ್ಯಗಳು ಈಗಲೂ ಜನತೆಯ ಕಂಠದಲ್ಲಿ ಜೀವಂತವಾಗಿವೆ.

ಫಾಲ್ಗುಣ ಅಮಾವಾಸ್ಯೆ ಯುಗಾದಿ ಪ್ರತಿಪದೆಗೆ ಸಿರಸಂಗಿ ಕಾಳಮ್ಮನ ೫ ದಿನಗಳ ಜಾತ್ರೋತ್ಸವ ಜರುಗುತ್ತದೆ. ಈ ಸಂದರ್ಭದಲ್ಲಿ ರಥೋತ್ಸವ ಇರುವುದಿಲ್ಲ. ಗೌರಿ ಹುಣ್ಣಿಮೆಗೆ ಮಾತ್ರ ರಥೋತ್ಸವ, ಯುಗಾದಿಯಲ್ಲಿ ಪಲ್ಲಕ್ಕಿ ಉತ್ಸವ ಮಾತ್ರ ಇರುತ್ತದೆ. ಅನ್ನದ ಉಂಡೆಯನ್ನು ದೇವಿಯ ಹೆಸರಿನಲ್ಲಿ ತೂರುತ್ತಾರೆ. ಇದು ಜಾತ್ರೆಯ ವಿಶಿಷ್ಟ ಆಚರಣೆ ಅನ್ನವನ್ನು ಕುಂಕುಮದಲ್ಲಿ ಬೆರೆಸಿ ಬಂಡೆಯಾಕಾರ ಮಾಡಿರುವುದನ್ನು ನೋಡಿದರೆ, ಕುಂಕುಮ ರಕ್ತದ ಸಾಂಕೇತವೆಂದು ಗ್ರಹಿಸಿದರೆ, ಇದು ಪ್ರಾಣಿಬಲಿಯ ಸಂಕೇತ ಎನ್ನಬಹುದು. ಆದರೆ ಈಗ ಅನ್ನದ ಉಂಡೆಯನ್ನಷ್ಟೇ ತೂರುತ್ತಾರೆ. ಇದು ದೇವಿ ಪ್ರಸಾದ ಶರಣರ ದಾಸೋಹದ ಸಂಕೇತ ಇದಾಗಿರಬಹುದೆ? ದೇವಿಗೆ ಹೊಸಗೋದಿ ನಿಧಿಸಮರ್ಪಿಸುವ ಸಂಪ್ರದಾಯವೂ ಇದೆ. ಕಾಳಿಕಾದೇವಿಯ ಭಕ್ತರಾದ ಪುರವಂತರು ಒಡಪು ಹೇಳುತ್ತಾರೆ. ಲಿಂಗ ಭೇದ ಮತ್ತು ವಯೋಮಿತಿಯನ್ನು ಗಣಿಸದೆ ವಿಶ್ವಕರ್ಮರು ಮತ್ತು ಭಕ್ತರೆಲ್ಲ ನಾಲಗೆ ಕಪಾಳ, ಕೈ ಜನಿವಾರಗಳಲ್ಲಿ ಶಸ್ತ್ರ ಚುಚ್ಚಿಕೊಳ್ಳುತ್ತಾರೆ. ಶಸ್ತ್ರ ಚುಚ್ಚಿದ ಸ್ಥಳದಲ್ಲಿ ವಿಭೂತಿ ಹಚ್ಚಲಾಗುತ್ತದೆ. ನೋವು ಕಾಣಿಸಿಕೊಳ್ಳುವುದಿಲ್ಲ. ಇದು ದೇವಿ ಮಹಿಮೆ ಎಂದು ನಂಬಲಾಗಿದೆ ಭಕ್ತಿ ಭಾವದ ಮಾನಸಿಕ ಸ್ಥಿತಿಯು ಶಸ್ತ್ರ ಚುಚ್ಚಿಸಿಕೊಳ್ಳುವುದಕ್ಕೆ ಕಾರಣವಾಗಿರಬೇಕು. ಉಪವಾಸ, ಉರುಳೂಸೇವೆ, ದೀಡನಮಸ್ಕಾರ ಮುಂತಾದ ಹರಕೆಗಳನ್ನು ದೇವಿಗೆ ಸಲ್ಲಿಸುವುದುಂಟು. ಕೌಲ ಕೇಳುವ ಸಂಪ್ರದಾಯವೂ ಇಲ್ಲಿದೆ. ಒಟ್ಟಾರೆ, ಪಾರ್ವತಿಯು ಮಹಾಕಾಳಿಯ ರೌದ್ರಾವತಾರ ತಾಳಿ, ದುಷ್ಟರನ್ನು ಸಂಹರಿಸಿ, ಶಿಷ್ಟರನ್ನು ಪರಿಪಾಲಿಸಿದ್ದು ಗಮನಾರ್ಹ.

ಚಿಂಚಲಿ ಮಾಯಮ್ಮ :

ಬೆಳಗಾವಿ ಜಿಲ್ಲೆಯ ರಾಯಬಾಗದಿಂದ ಸುಮಾರು ೧೦ ಕಿ.ಮೀ. ಅಂತರದಲ್ಲಿರುವ ಚಿಂಚಲಿ ಗ್ರಾಮದ ಅತ್ಯಂದ ಪ್ರಸಿದ್ಧವಾದ ಶಕ್ತಿದೇವತೆ ಮಾಯಮ್ಮ, ಅವಳಿಂದಾಗಿಯೇ ಚಿಕ್ಕಗ್ರಾಮ ಚಿಂಚಲಿಗೆ ದೊಡ್ಡ ಮಹತ್ವವಷ್ಟೇ ಅಲ್ಲ. ಅದು ಮಾಯಮ್ಮನ ಚಿಂಚಲಿ ಎಂದೇ ಗುರುತಿಸಲ್ಪಟ್ಟಿದೆ. ಇದು ಮಾಯಮ್ಮನ ಶಕ್ತಿಕೇಂದ್ರ, ಮಾಯಮ್ಮ, ಮಾಯವ್ವ, ಮಾಯಕ್ಕ, ಮಾಯಕಾರತಿ,

ಮಹಾಕಾಳಿ, ಮಾಯಿ ಮುಂತಾದ ಹೆಸರುಗಳಿಂದ ಈ ದೇವಿಯನ್ನು ಭಕ್ತರು ಆರಾಧಿಸುತ್ತಾರೆ. ಇವಳನ್ನು ಮಾಯಕ್ಕಾಯಿ ಎಂದು ಮಹಾರಾಷ್ಟ್ರದ ಭಕ್ತರು ಪೂಜಿಸುತ್ತಾರೆ. ಉತ್ತರಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರಗಳ ಉದ್ದಗಲಕ್ಕೂ ಇವಳ ಭಕ್ತರಿದ್ದಾರೆ. ಮಾಯಕ್ಕನ ಪೂಜಾರಿಗಳು, ಅವಳೊಂದಿಗೆ ಅತ್ಯಂತ ನಿಕಟ ಸಂಬಂಧ ಹೊಂದಿರುವ ಕರ್ನಾಟಕ ಕುರುಬ ಜನಾಂಗವೇ ವೀರಣ್ಣ ದಂಡೆ ಸಂಪಾದಿತ 'ಜನಪದ ಹಾಲು ಮತ ಮಹಾಕಾವ್ಯ'ದಲ್ಲಿ ಹಾಲುಮತದವರ ದೈವ ಮಾಯವ್ವ; ಚಿಂಚಲಿ ಅವರ ಶ್ರದ್ಧಾಕ್ಷೇತ್ರವೆಂಬುದು ಸ್ಪಷ್ಟವಾಗಿದೆ. ಈ ಕಾವ್ಯದ ಪ್ರಕಾರ ದೇವೇಂದ್ರರಾಯ ಮತ್ತು ಸುಭದ್ರೆಯರ ಏಳನೇ ಹೆಣ್ಣುಮಗುವಾಗಿ ಮಾಯವ್ವ ಸ್ವರ್ಗದಲ್ಲಿ ಜನಿಸುತ್ತಾಳೆ. ಆದರೆ, ನದಿಯಲ್ಲಿ ತೆಪ್ಪ ಬಿಡುತ್ತಾರೆ. ದೀಪ ಕಣ್ಣಿಗೆ ಕಾಣುವವರೆಗೆ ತಾಯಿ-ತಂದೆ ನೋಡಿ ಮರೆಯಾಗುತ್ತಾರೆ. ನದಿಯ ದಡಕ್ಕೆ ತಪಸ್ಸಿಗೆ ಕುಳಿತಿದ್ದ ಋಷಿಗೆ ಬಂಗಾರದ ಪೆಟ್ಟಿಗೆ ದೊರೆಯುತ್ತದೆ. ಪೆಟ್ಟಿಗೆಯನ್ನು ತೆರೆದು ಋಷಿಗಳು ಹೆಣ್ಣುಕೂಸನ್ನು ಕಾಣುತ್ತಾರೆ. ಅಷ್ಟರಲ್ಲಿ ಕುರಿಗಳನ್ನು ಮೇಯಿಸುತ್ತ ಬಂದ ದಿಬ್ಬಿಯ ದಿಬರಾಯನ ಏಳುಜನ ಹೆಣ್ಣುಮಕ್ಕಳಿಗೆ ಋಷಿ ಈ ಕೂಸನ್ನು ಒಪ್ಪಿಸುತ್ತಾನೆ. ಈ ಕೂಸಿನೊಂದಿಗೆ ಕುರಿಗಳನ್ನು ಹೊಡೆದು ಕೊಂಡು ಸಾಯಂಕಾಲ ದೊಡ್ಡಿಗೆ ಹೋಗುತ್ತಾರೆ. ಇಡೀ ಕುರಿಹಿಂಡಿನ ಲಕ್ಷಣವೇ ಬದಲಾಗುತ್ತದೆ. ಬೆಳಗಾಗುವುದರಲ್ಲಿ ಆದ ಬದಲಾವಣೆ ದಿಬರಾಯನ ಗಮನಕ್ಕೆ ಬರುತ್ತದೆ. ಇದಕ್ಕೆಲ್ಲ ಕಾರಣ ತಮಗೆ ದೊರೆತ ಮಗು ಎಂಬ ಭಾವನೆಯನ್ನು ಮಕ್ಕಳು ವ್ಯಕ್ತಪಡಿಸುತ್ತಾರೆ. ಆಗ ದಿಬರಾಯ ತನ್ನ ಹೆಂಡತಿ ಶಾಂತಾಬಾಯಿಗೆ ಕರೆದು ಕೂಸನ್ನು ಜೋಪಾನಮಾಡುವ ಜವಾಬ್ದಾರಿಯನ್ನು ವಹಿಸುತ್ತ ಉಡಿಯಲ್ಲಿ ಹಾಕುತ್ತಾನೆ. ಸಂಭ್ರಮದಿಂದ ಜೋಗುಳ ಕಾರಣ ಮಾಡಿ ಮರ್ತ್ಯಕ್ಕೆ ಮಾಯವಾಗಿ ಬಂದುದರಿಂದ ಮಾಯವ್ವನೆಂಬ ಹೆಸರನ್ನು ಆಕೆಗೆ ಇಡುತ್ತಾರೆ. (ಹಾಲಕೆನೆ : ಸಂ. ಶ್ರೀರಾಮ ಇಟ್ಟಣ್ಣನವರ. ಪು : ೨೨೧ : ಕಾಳಿದಾಸ ಶಿಕ್ಷಣ ಸಂಸ್ಥೆ ವಿಜಾಪುರ, ೨೦೦೨).

ಮಾಯಕ್ಕ ಮಹಾರಾಷ್ಟ್ರದ ಮಾನದೇಶ ಕೊಂಕಣದವಳು ಕೀಲ ಮತ್ತು ಕೆಟ್ಟರೆಂಬ ರಾಕ್ಷಸರನ್ನು ಅಟ್ಟಿಸಿಕೊಂಡು ಚಿಂಚಲಿಗೆ ಬಂದಳೆಂದೂ, ಇಲ್ಲಿಯೇ ಆ ರಾಕ್ಷಸರನ್ನು ಸಂಹಾರ ಮಾಡಿ, ಚಿಂಚಲಿಯ ಅಧಿದೇವತೆ ಹಿರಿದೇವಿ ನೆಲೆಸಿರುವ ಗುಡಿಯಲ್ಲಿಯೇ ಅವಳ ಅನುಮತಿಯ ಮೇರೆಗೆ ನೆಲೆನಿಂತವಳೆಂದು ಸ್ಥಳೀಯರು ಕತೆಕಟ್ಟಿ ಹೇಳುತ್ತಾರೆ. ಚಿಂಚಲಿಯ ಮಾಯಕಾರತಿಯ ಅವತಾರವೇನ ಹೇಳಲಿ ತಮ್ಮ ಕೀಲ ಕಟ್ಟರನು ಕೊಂದಳು ನಮ್ಮಮ್ಮ ಹಿರಿದೇವಿಯ ಹತ್ತಿರ ಬಂದಳು ಎಂದು ಜನಪದ ಹಾಡಿನಲ್ಲಿಯೂ ಉಕ್ತವಾಗಿದೆ. ಹಿರಿದೇವಿಯ ಸೂಚನೆಯಂತೆ ಮೊದಲ ದರ್ಶನ-ಪೂಜೆ-ನೈವೇದ್ಯ ಹಿರಿದೇವಿಗೆ ನಂತರ ಮಾಯಕ್ಕನಿಗೆ ಸಲ್ಲಿಸುವುದು ಈಗಲೂ ನಡೆದುಕೊಂಡು ಬಂದಿದೆ. ಈಗಿರುವ ಮಾಯಕ್ಕನ ಗುಡಿಯ ಪೂರ್ವಾಭಿಮುಖದ

ಮಹಾದ್ವಾರದಿಂದ ಒಳಪ್ರವೇಶಿಸಿದ ಕೂಡಲೇ ಮೊದಲು ಹಿರಿದೇವಿ-ಬಸವಣ್ಣ ಈ ದೇವರುಗಳ ದರ್ಶನವಾಗುತ್ತದೆ. ಇವರ ಬೆನ್ನಹಿಂದೆಯೇ ಅಂದರೆ ಪಶ್ಚಿಮಾಭಿಮುಖವಾಗಿ ಇರುವ ಮಾಯಕ್ಕನ ದರ್ಶನ ನಂತರವೇ ಆಗುತ್ತದೆ. ಬಹುಶಃ ಇದನ್ನೇ ಮಾಯಕ್ಕನಿಗೆ ಬೆನ್ನಪೂಜೆ ಎನ್ನುವ ವಾಡಿಕೆ ಇದ್ದಂತೆ ತೋರುತ್ತದೆ. ಈ ಬಗೆಗೆ ಶೋಧನೆಯ ಅಗತ್ಯವಿದೆ. ಈ ದೇವಿ ಕೊಂಕಣದಿಂದ ಬಂದವಳಾದುದರಿಂದ, ಮಹಾರಾಷ್ಟ್ರದವರೇ ಹೆಚ್ಚು ನಡೆದುಕೊಳ್ಳುವುದು, ಹರಕೆ ಹೊರುವುದು, ಹಬ್ಬ-ಜಾತ್ರೆಗಳಲ್ಲಿ ಸೇರುವುದು, ಹಾಡುವುದು, ಕುಣಿಯುವುದು ಮಾಡುತ್ತಾರೆಂದು ತೋರುವುದು. ಈ ದೈವದ ಬಗೆಗಿನ ಜನಪದ ಸಾಹಿತ್ಯ ಮೂಲರೂಪದಲ್ಲಿ ಈಗಲೂ ಮರಾಠಿ ಹಾಡು, ಕತೆಗಳಲ್ಲಿ ದೊರಕುವಷ್ಟು ಕನ್ನಡ ಜನಪದದಲ್ಲಿ ದೊರೆಯುವುದು ಕಷ್ಟ ಎನ್ನುವುದುಂಟು. ಇಂದು ಮಾಯಮ್ಮನ ಹಿರಿಮೆ ಹೆಚ್ಚಾಗಿ, ಸಹಜವಾಗಿ ಹಿರಿದೇವಿಯ ಮಹತ್ವ ಕಡಿಮೆಯಾಗಿದೆ.

ಬೆಳಿಗ್ಗೆ ಮತ್ತು ಸಂಜೆಗೆ, ದಿನಕ್ಕೆ ಎರಡು ಸಲ ಈ ದೇವಿ ಪೂಜೆ. ಹಾಲು ಹಳ್ಳದಿಂದ ತಂದ ನೀರನ್ನು ಕಾಯಿಸಿ ಪೂಜೆ ಮಾಡುತ್ತಾರೆ. ಪೂಜಾಸಂದರ್ಭದಲ್ಲಿ ಡೊಳ್ಳು, ನಗಾರಿ, ನೌಬತ್ತ, ಜಾಗಟೆ ವಾದ್ಯಗಳ ಮೊರೆತ ಧೂಪಾರತಿ ಪಂಚಾರತಿ, ಏಕಾರತಿ, ಕರ್ಪೂರದಾರತಿ-ಬೆಳಗಲಾಗುತ್ತದೆ. ಕಾಯಿ ಒಡೆಯುವ ಗಂಧದ ಕಡ್ಡಿ ಬೆಳಗುವ ಸಂಪ್ರದಾಯವಿದೆ. ಕುರಿಹಾಲಿನ ನೈವೇದ್ಯವಿದೆ. ಭಾನುವಾರ ಮಾಯಕ್ಕನ ವಾರ. ಅಂದು ಭಕ್ತರು ಉಪವಾಸ ಮಾಡುತ್ತಾರೆ. ಅಂದೇ ರಾತ್ರಿ ದೇವಿಯ ಪಲ್ಲಕ್ಕಿಯಲ್ಲಿ ಉತ್ಸವ ಮೂರ್ತಿ ಇಟ್ಟು ದೇವಸ್ಥಾನಕ್ಕೆ ಮೂರು ಸಲ ಪ್ರದಕ್ಷಿಣೆ ಹಾಕುತ್ತಾರೆ. ಪಲ್ಲಕ್ಕಿಯ ಮುಂದೆ ಮಾಯಕ್ಕನ ಅಲಂಕೃತ ಕುದುರೆ ಇರುತ್ತದೆ. ಈ ದೇವಿ ಹೆಸರಿನಲ್ಲಿ ಗೂಳಿ ಬಿಡುವ ಸಂಪ್ರದಾಯವಿದೆ. ಕುರಿಗಳನ್ನು ಮೀಸಲು ಬಿಡುವರು. ಭಾರತ ಹುಣ್ಣಿಮೆಗೆ ಮಾಯಕ್ಕನ ೫ ದಿನಗಳವರೆಗೆ ದೊಡ್ಡ ಜಾತ್ರೆ ಇರುತ್ತದೆ ಅದು ತಿಂಗಳವರೆಗು ಮುಂದುವರೆಯುತ್ತದೆ. ಕಾರಹುಣ್ಣಿಮಗೆ ಕೀಲಕಟ್ಟರ ಜಾತ್ರೆ ಅದ್ಭುತವಾಗಿ ನಡೆಯುತ್ತದೆ. ಪ್ರತಿ ರವಿವಾರ ಮತ್ತು ಹುಣ್ಣಿಮೆಗೆ ಡೊಳ್ಳಿನವರು ದೇವಿಯನ್ನು ಸ್ತುತಿಸುವರು. ದೇವಿ ಮೈಮೇಲೆ ಬರುವಳೆಂಬ ನಂಬಿಕೆಯಿದೆ. ದೇವಿ ಬಂದವರು ಕೈಯಲ್ಲಿ, ಬೆತ್ತಹಿಡಿದು ವೀರಾವೇಶದಿಂದ ಕುಣಿಯುವುದುಂಟು. ಇವರು ಹೆಚ್ಚಾಗಿ ಮಹಾರಾಷ್ಟ್ರದ ಭಕ್ತರು ಕುರಿಬಲಿ ಇಲ್ಲ ಮಾಂಸಾಹಾರ ನಿಷಿದ್ಧ. ಮದುವೆಯಾದ ಈರಗಾರ ಕುರುಬನು ಹರಿತವಾದ ಖಡ್ಗದಿಂದ ತನ್ನ ಹೊಟ್ಟೆಗೆ ಇರಿದುಕೊಳ್ಳುತ್ತಾನೆ. ಪಲ್ಲಕ್ಕಿ ಮುಂದೆ ಅಲಗು ಹಾಯುವ ಈ ವೀರನಿಗೆ ಪೂಜಾರಿ ಮಾಯಕ್ಕನ ಭಂಡಾರವನ್ನು ಹಣೆಗೆ ಹೊಟ್ಟೆಗೆ ಹಚ್ಚುತ್ತಾನೆ. ದೇವಿ ದೈತ್ಯನೊಡನೆ ಹೋರಾಡುವಾಗ ಈರಗಾರ ವೀರನ ಸಹಾಯ ಪಡೆದಳೆಂಬ ನಂಬಿಕೆಯಿದೆ. ಬಿಳಿ ಅಂಗಿ ಕಚ್ಚೆಪಂಚೆ, ಕಂಬಳಿ. ಭಂಡಾರ ಚೀಲ ಕೈಯಲ್ಲಿ ಬೆಳ್ಳಿಕಡಗ, ಧರಿಸಿಕೊಂಡ ಹೆಗಡೆ ಎಂಬ ಕುರುಬ ಜನಾಂಗದವರು ಭಕ್ತಜನರಿಗೆ

ಭಂಡಾರ ಹಚ್ಚುವ ಸೇವಾ ಕಾರ್ಯವನ್ನು ಇಲ್ಲಿ ಮಾಡುತ್ತ ಬಂದಿದ್ದಾರೆ. ಭಕ್ತರೆಲ್ಲರೂ ಭಂಡಾರ ಧರಿಸುವ ವಾಡಿಕೆಯಿದೆ. ಭಂಡಾರದ ಹರಕೆ ಹಾಲುಹಳ್ಳದ ದಡದಲ್ಲಿ ಉಟ್ಟಿಗೆ ಉಡುವ ಹರಕೆ ಸಲ್ಲಿಸಲಾಗುತ್ತದೆ. ಗುಡಿಯ ಗರ್ಭಗೃಹದ ಮಲಗುವ ಗದ್ದಿಗೆಯಲ್ಲಿ ದೇವಿ ವಿಶ್ರಮಿಸಿಕೊಳ್ಳುವಳೆಂಬ ನಂಬಿಕೆಯಿದೆ. ದುರ್ಗವ್ವ-ದ್ಯಾಮವ್ವರ ಗುಡಿಗಳಲ್ಲಿಯೂ ಇದು ಕಂಡುಬರುತ್ತದೆ. ಕೀಲ ಕಟ್ಟರೆಂಬ ರಾಕ್ಷಸರನ್ನು ಮಾಯಕ್ಕ ಚಿಂಚಲಿಯಲ್ಲಿ ಸಂಹಾರ ಮಾಡಿದ್ದು, ಅವರ ಸಮಾಧಿಗಳು ಊರ ಮಧ್ಯ ಊರ ಆಚೆ ಇವೆ. ದನಗಳ ಪ್ರದರ್ಶನ-ಮಾರಾಟ, ಕೃಷಿ ಸಾಮಾಗ್ರಿಗಳ ಪ್ರದರ್ಶನ ಮಾರಾಟ, ಜೀವನಾವಶ್ಯಕ ವಸ್ತುಗಳ ಪ್ರದರ್ಶನ-ಮಾರಾಟ-ಮುಂತಾದವರೆಲ್ಲ ಜಾತ್ರೆಯಲ್ಲಿ ಲಭ್ಯವಿದ್ದುದೂ ಈ ಜಾತ್ರೆಯ ವೈಶಿಷ್ಟ್ಯ. ಹುಣ್ಣಿಮೆ ರಾತ್ರಿ ದೀವಟಿಗೆಗಳನ್ನು ಉರಿಸುತ್ತಾರೆ. ಮದ್ದುಸುಡುತ್ತಾರೆ. ಕೆಲವು ಭಕ್ತರು ಹಾಲಹಳ್ಳದಲ್ಲಿ ಸ್ನಾನ ಮಾಡಿ ಕಂಚಣಿಕೆ ಹಾಕಿಕೊಂಡು ಗುಡಿಗೆ ಬರುವುದುಂಟು. ಕೆಲವರು ಭಕ್ತರು ನಿಲುವಂಗಿ ಧರಿಸುತ್ತಾರೆ ಭಂಡಾರದ ಓಕುಳಿಯೇ ನಡೆದಿರುತ್ತದೆ.

ದ್ಯಾಮವ್ವ :

ಗ್ರಾಮಜೀವನದಲ್ಲಿ ಹಾಸುಹೊಕ್ಕಾದ ಅನೇಕ ಶಕ್ತಿದೇವತೆಗಳಲ್ಲಿ ದ್ಯಾಮವ್ವ ಕೂಡ ಒಬ್ಬಳು. ಈ ದೇವತೆಯನ್ನು ಗ್ರಾಮದೇವತೆ ಗ್ರಾಮದವ್ವ ಮತ್ತು ದ್ಯಾಮವ್ವ ಇತ್ಯಾದಿಯಾಗಿ ಹಳ್ಳಿಗರು ಕರೆಯುವ ರೂಢಿ. ಬೆಳಗಾವಿ ಜಿಲ್ಲೆಯ ಗೋಕಾಕದ ಸಮಸ್ತ ಜನತೆಯ ಪ್ರಧಾನ ದೇವತೆ ದ್ಯಾಮವ್ವ ತುಂಬ ಪ್ರಾಚೀನ ಸ್ತ್ರೀ-ಗ್ರಾಮದೇವತೆ. ಗೋಕಾಕದ ಹುಟ್ಟಿನೊಂದಿಗೆ ಈ ದೇವಿ ಹುಟ್ಟಿರುವ ಸಾಧ್ಯತೆಯಿದೆ. ತಮ್ಮ ರಕ್ಷಣೆಗಾಗಿ ಇಲ್ಲಿಯ ಜನ ಒಂದು ಕರಿಕಲ್ಲನ್ನೋ ಗುಂಡಕಲನ್ನೋ, ಬಯಲಿನಲ್ಲಿ ಅಥವಾ ಮರದಡಿಯಲ್ಲಿಟ್ಟು ಪೂಜಿಸಿ, ಅದನ್ನೇ ಗ್ರಾಮದೇವತೆ ಮಾಡಿಕೊಂಡಿರಬೇಕು. ಕೆಲವು ವರುಷಗಳ ಕೆಳಗೆ ಬಯಲಲ್ಲಿಯ ಈ ದೇವತೆಗೆ ಮರದಮೂರ್ತಿ ಮಾಡಿ, ಗೋಕಾಕದ ಅಂಬಿಗೇರ ಓಣೀಯಲ್ಲಿ, ಪ್ರತಿಷ್ಠಾಪಿಸಿದಂತೆ ತೋರುತ್ತದೆ. ಈ ದೇವಿಯ ಮೂಲರೂಪವನ್ನು ಗಮನಿಸಿದರೆ, ಇದು ಖಂಡಿತವಾಗಿಯೂ ದ್ರಾವಿಡ ದೇವತೆ. ಈ ದೇವಿಗೆ ಪೂಜೆ, ಪುರಸ್ಕಾರ, ನೈವೇದ್ಯ ಉಡಿ ತುಂಬುವುದು, ಜಾತ್ರೆ ಉತ್ಸವ, ರಥೋತ್ಸವಗಳಲ್ಲಿ ಬೆಳೆದು ಉತ್ತರ ಕರ್ನಾಟಕದ ಸ್ತ್ರೀ-ಗ್ರಾಮದೇವತೆಗಳಲ್ಲಿಯೇ ಪ್ರಸಿದ್ಧ ಮತ್ತು ವೈಶಿಷ್ಟ್ಯಪೂರ್ಣ ದೇವತೆಯೆನಿಸಿಕೊಂಡಿದೆ.

ಗೋಕಾಕದ ಮಧ್ಯಭಾಗದಲ್ಲಿರುವ ಒಂದೇ ಗುಡಿಯಲ್ಲಿ, ಒಂದೇ ಆಕಾರದ ಇಬ್ಬರು ದ್ಯಾಮವ್ವ ಪೂಜೆಗೊಳ್ಳುತ್ತ ಬಂದಿರುವುದು ಹೊರಗಿನವರಿಗೆ ಆಶ್ಚರ್ಯವನ್ನುಂಟು ಮಾಡಬಹುದೇನೊ ಒಂದೇ ಗುಡಿಯಲ್ಲಿ, ಇಬ್ಬರು ದ್ಯಾಮವ್ವ ಏಕೆ? ಮಾಲದಿನ್ನಿ ಅಡ್ಡ ಹೆಸರಿನ ವಿಶ್ವಕರ್ಮ ಸಂಪ್ರದಾಯದವರು, ಮಾರಿ ರೋಗದಿಂದ ತಮ್ಮೂರು ನಾಶವಾದ್ದರಿಂದ,

ಗೋಕಾಕ್‌ಗೆ ಬಂದರಂತೆ. ಬರುವಾಗ ತಾವೇ ಪೂಜಾರಿಗಳಾದುದರಿಂದ ತಮ್ಮ ಗ್ರಾಮದವ್ವನನ್ನು ಜತೆಯಲ್ಲಿ ಹೊತ್ತುತಂದು, ಈಗಾಗಲೇ ಇರುವ ಗೋಕಾಕದ ದ್ಯಾಮವ್ವನ ಪಕ್ಕದಲಿಯೇ ಪ್ರತಿಷ್ಠಾಪಿಸಿದರಂತೆ. ಅಂದಿನಿಂದ ಅಕ್ಕತಂಗಿ ಇಬ್ಬರು ದ್ಯಾಮವ್ವ ಗೋಕಾಕದಲ್ಲಿ ಪೂಜೆಗೊಳ್ಳುತ್ತ ಬಂದಿದ್ದಾರಂತೆ. ಇಲ್ಲಿ ಇನ್ನೊಂದು ಊಹೆಗೆ ಅವಕಾಶವಿದೆ. ಗ್ರಾಮೀಣ ಜನ ತಮಗೆ ಬಂದೊದಗಿದ ಆತಂಕ ಆಪತ್ತುಗಳ ನಿವಾರಣೆಗೆ ದೇವಿಯಲ್ಲಿ ಹರಕೆ ಹೊರುವ ಸಂಪ್ರದಾಯವಿದೆ. ವೈದ್ಯಕೀಯ ಸೌಲಭ್ಯವಿಲ್ಲದ ಕಾಲದಲ್ಲಿ ಕಲುಷಿತ ಪರಿಸರದಿಂದ ಕಾಲರಾದಂಥ ರೋಗ ಗೋಕಾಕದಲ್ಲಿ ಕಾಣಿಸಿಕೊಂಡು ಅನೇಕ ಜನ ಸಾವನ್ನಪಿರಬೇಕು. ಉಳಿದವರು ಬದುಕುವ ಆಸೆಯಿಂದ ದ್ಯಾಮವ್ವನಲ್ಲಿಗೆ ಹೋಗಿ, ಅಮ್ಮಾ-ತಾಯಿ ಈ ರೋಗದಿಂದ ನಮ್ಮನ್ನು ಕಾಪಾಡು ನಿನಗೆ ದೇವಿಮೂರ್ತಿ ಮಾಡಿಸುತ್ತೇವೆ ಎಂದು ಊರ ಜನ ಹರಕೆ-ಹೊತ್ತಿರಬೇಕು. ದೇವಿ ಅನುಗ್ರಹದಿಂದ ಅವರೆಲ್ಲ ಬದುಕಿ ಉಳಿದಿರಲೂಬಹುದು. ಬೇಡಿಕೊಂಡಂತೆ ದೇವಿಗೆ ಹೊಸದೊಂದು ಮೂರ್ತಿ ಮಾಡಿಸಿಕೊಟ್ಟಿರಬೇಕು. ಅಂದಿನಿಂದ ಎರಡೂ ಮೂರ್ತಿಗಳ ಒಂದೇ ಗುಡಿಯಲ್ಲಿ ಪೂಜೆಗೊಳ್ಳುತ್ತ ಬಂದಿರಬೇಕು. ಹರಕೆಯ ರೂಪದಲ್ಲಿ ಬಂದು ಗುಡಿ ಸೇರಿದ ದ್ಯಾವಮ್ಮ ಮೂಲದವಳ ತಂಗಿಯಲ್ಲವೆ ಅಂತೆಯೇ ಗೋಕಾಕದಲ್ಲಿ ಅಕ್ಕ-ತಂಗಿ ಇಬ್ಬರು ದ್ಯಾಮವ್ವ, ಈರ್ವರಿಗೆ ಇಬ್ಬರು ರಾಣಿಗರು ಎರಡು ಕೋಣಗಳ ಬಲಿ, ಜೋಡು ರಥಗಳು ಎರಡು ಇಂಗಳೋಬಾ ಜಾತ್ರೆಯ ಸಂದರ್ಭದಲ್ಲಿರುವುದು ಗಮನಾರ್ಹ. ಇದು ಗೋಕಾಕ ದ್ಯಾಮವ್ವ ವೈಶಿಷ್ಟ್ಯ.

ದ್ಯಾಮವ್ವನ ಸುತ್ತ ಹೆಣೆದುಕೊಂಡ ಐತಿಹ್ಯವೊಂದನ್ನು ಇಲ್ಲಿಯ ಜನ ಹೇಳುತ್ತಾರೆ. ಅದು ಬ್ರಾಹ್ಮಣ ಸುಂದರ ಕನ್ಯೆಯೊಬ್ಬಳಲ್ಲಿ ಅನುರಕ್ತನಾದ ಸಮಗಾರ ತನ್ನ ಜಾತಿಯನ್ನು ಬಚ್ಚಿಟ್ಟು ಅವಳನ್ನು ವಂಚಿಸಿ ಮದುವೆಯಾಗುತ್ತಾನೆ. ಈರ್ವರ ದಾಂಪತ್ಯದ ಫಲವಾಗಿ ಇಂಗಳೋಬಾ ಎಂಬ ಮಗುವು ಜನಿಸುತ್ತದೆ. ಒಂದು ದಿನ ತಾಯಿ ಅದರ ಜೇಬಿನಲ್ಲಿದ್ದ ಚರ್ಮದ ತುಂಡೊಂದನ್ನು ಕಾಣುತ್ತಾಳೆ. ಆಶ್ಚರ್ಯಪಟ್ಟು ಸಿಟ್ಟಿನಿಂದ ಇದೆಲ್ಲಿಂದ ಬಂತು? ಎಂದು ಮಗನನ್ನು ಗದರಿಸಿ ಕೇಳಿದಾಗ, ತಂದೆ ಚಪ್ಪಲಿಹೊಲಿಯುವಾಗ, ಒಂದು ಚರ್ಮದ ತುಂಡನ್ನು ಇಟ್ಟುಕೊಂಡು ಬಂದೆ ಎಂದು ನಿಜ ಹೇಳುತ್ತದೆ. ಇದರಿಂದ ತನ್ನ ಗಂಡ ಚಪ್ಪಲಿ ಹೊಲಿಯುವ ಸಮಗಾರ ಜಾತಿಯವನೆಂದು ಅರಿತು ತನ್ನನ್ನು ವಂಚಿಸಿ ಮದುವೆಯಾದ ಗಂಡನನ್ನೇ ಕುಡುಗೋಲಿನಿಂದ ಕೊಲ್ಲಲು ಧಾವಿಸುತ್ತಾಳೆ. ಆತ ತಪ್ಪಿಸಿಕೊಂಡು ಓಡುತ್ತಾನೆ. ಇವಳು ಬೆನ್ನಹಿಂದೆಯೇ ಆವೇಶದಿಂದ ಬರುತ್ತಿರುವುದನ್ನು ಕಂಡು ಜೀವದಾಸೆಗಾಗಿ ಅಲ್ಲಿಯೇ ಇದ್ದ ಕೋಣನ ಗುದದ್ವಾರದ ಮೂಲಕ ಅದರ ಗರ್ಭ ಪ್ರವೇಶಿಸುತ್ತಾನೆ. ಬ್ರಾಹ್ಮಣ ಕನ್ಯೆ ಕುಡು

ಗೋಲಿನಿಂದ ಕೋಣದ ಶಿರವನ್ನೇ ಸಿಗಿದು ಗಂಡನ ಮೇಲಿನ ಸೇಡು ತೀರಿಸಿಕೊಳ್ಳುತ್ತಾಳೆ. ಅಂದಿನಿಂದ ಈ ದೇವಿಗೆ ಕೋಣಬಲಿ ಇದೆಯಂತೆ ದೇವಿಗೆ ಕಡಿಯುವ ಕೋಣ ಸುಳ್ಳು ಹೇಳಿ ಮದುವೆಯಾದ ಹೊಲೆಯನ ಪ್ರತೀಕ ಸ್ವಾಭಿಮಾನಿಯಾದ ಮಡಿ ವಂತಿಕೆಯ ಹೆಣ್ಣು ತನ್ನ ಪತಿ ತನಗೇ ಮೋಸ ಮಾಡಿದನೆಂದು ತಿಳಿದಾಗ ರೌದ್ರಾವ ತಾರತಾಳಿ ಆತನನ್ನು ಕೊಂದುದು ದ್ಯಾಮವ್ವನ ಕಥಾ ಸೃಷ್ಟಿಗೆ ಕಾರಣವಾದಂತಿದೆ. ಜನಪದಲಾವಣಿ-ತ್ರಿಪದಿ ಸಾಹಿತ್ಯದಲ್ಲಿಯೂ ಈ ಕಥಾ ಸಂಗತಿ ಉಕ್ತವಾಗಿದೆ.

ಉದಗಟ್ಟಿ ಉದ್ದವ್ವ :

ಗೋಕಾಕನಿಂದ ಸುಮಾರು ೨೦ ಕಿ.ಮೀ. ಅಂತರದಲ್ಲಿರುವ ಚಿಕ್ಕ ಗ್ರಾಮ ಉದಗಟ್ಟಿ ಇಲ್ಲಿಯ ಕಲ್ಲಿನ ದೇವಾಲಯ ಶಕ್ತಿದೇವತೆ ಉದ್ದವ್ವನ ನೆಲೆ. ಗ್ರಾಮೀಣ ಪ್ರದೇಶದಲ್ಲಿ ರುದ್ರವ್ವ, ರುದ್ರಪ್ಪ ಎಂಬ ಹೆಸರುಗಳನ್ನಿಟ್ಟಿರುತ್ತಾರೆ. ಆದರೆ ನಿತ್ಯದ ರೂಢಿಯಲ್ಲಿ ತಮ್ಮ ಸೌಲಭ್ಯಕ್ಕಾಗಿ ರುದ್ರವ್ವನನ್ನು ಉದ್ದವ್ವ ಎಂತಲೂ ರುದ್ರಪ್ಪನನ್ನು ಉದ್ದಪ್ಪ ಎಂತಲೂ ಕರೆವ ವಾಡಿಕೆಯಿದೆ. ಈ ಹಿನ್ನೆಲೆಯಲ್ಲಿ ರುದ್ರವ್ವ ಉದ್ದವ್ವ ಅದರಂತೆ ತೋರುತ್ತದೆ. ಉದಗಟ್ಟಿಯ ೮೨ ವರುಷದ ವಯೋವೃದ್ಧ ಶ್ರೀ ಮುದಕಪ್ಪ ಗೋಡೇರ ಅವರ ಹೇಳಿಕೆಯಂತೆ ಉದ್ದವ್ವ ಉದ್ಭವಗೊಂಡ ದೇವತೆ. ಇನ್ನು ಉದ್ದವ್ವ ಉದ್ಭವಗೊಂಡ ಪ್ರದೇಶವೇ ಉದಗಟ್ಟಿ ಎಂದು ಸಹಜವಾಗಿಯೇ ಊಹಿಸಬಹುದು. ಸ್ವಯಂ ಉದಯವಾದ ಉದ್ದವ್ವನನ್ನು ಉದ್ದಮ್ಮ ಉದ್ದಕ್ಕ ಎಂತಲೂ ಕರೆಯುತ್ತಾರೆ. ಇವಳಿಗೆ ನಿಶ್ಚಿತ ಆಕಾರವಿಲ್ಲ ಹುತ್ತಿನ ರೂಪದಲ್ಲಿದ್ದಾಳೆ. ಯಾವುದೇ ಶಾಸ್ತ್ರೋಕ್ತವಾದ ಪೂಜಾ ವಿಧಿವಿಧಾನಗಳಿಲ್ಲ ಜನಪದ ಸಂಪ್ರದಾಯದ ಈ ದೇವತೆ ಸುಮಾರು ೮೦೦-೯೦೦ ವರುಷಗಳಷ್ಟು ಹಳೆಯದು. ಈ ದೇವಿಯ ಶಕ್ತಿಯನ್ನು ಮಹಿಮೆಯನ್ನು ಪವಾಡ ರೂಪದಲ್ಲಿ ಇಲ್ಲಿಯ ಜನ ಹೇಳುತ್ತಾರೆ. ಚಿಂಚಲಿ ಮಾಯಕ್ಕನಂತೆ ಉದಗಟ್ಟಿ ಉದ್ದಕ್ಕನ ಪವಾಡ ಸದೃಶ ಕತೆಯೂ ಇದೆ. ಉದಗಟ್ಟಿ ಹತ್ತಿರದ ನದಿಯಾಚೆಯ ಹುಣಶ್ಯಾಳ ಗೌಡರು ಉದ್ದವ್ವ ದೇವಿಯ ಪರಮಭಕ್ತರು. ದೇವಿಯ ಅನುಗ್ರಹದಿಂದ ಇವರಿಗೆ ಯಾವುದರ ಕೊರತೆಯೂ ಇರಲಿಲ್ಲ. ಆದರೆ ಸಂತಾನಭಾಗ್ಯದ ಕೊರತೆಯೋಂದಿತ್ತು. ಆದರೂ ನಿತ್ಯ ದೇವಿಯ ದರ್ಶನ ಮಾಡಿ ಕೊಂಡೇ ತಮ್ಮ ಕಾರ್ಯಚಟುವಟಿಕೆಗಳಲ್ಲಿ ತೊಡಗುವವರು. ಹೀಗಿರುವಾಗ ಒಂದು ದಿನ ಹುಣಶ್ಯಾಳ ಗ್ರಾಮದ ಶ್ರೀಮಂತ ಕುಟುಂಬವೊಂದು ಬೇರೆ ಊರಿಗೆ ಕನ್ಯೆ ನೋಡಲು ಹೊರಟಾಗ ಗೌಡರು ಎಂದಿನಂತೆ ಉದ್ದಕ್ಕನ ದರ್ಶನ ಪಡೆದುಕೊಂಡು ಮರಳಿ ಬರುತ್ತಿರುವಾಗ ಅವರಿಗೆ ಎದುರಾಗುತ್ತಾರೆ. ಬಂಜೆಗೌಡ ಎದುರಾದುದು ಶ್ರೀಮಂತನಿಗೆ ಅಪಶಕನುವಾಗುತ್ತದೆ. ಬಂಜೆಗೌಡ, ಅಪಶಕುನ ಎಂಬ ಮಾತುಗಳು ಗಾಳಿಯಲ್ಲಿ ತೇಲಿ ಬಂದು ಕುರುಬಗೌಡನ ಕಿವಿದೆರೆಗೆ

ಬೀಳುವಷ್ಟರಲ್ಲಿ ಗೌಡ ತುಂಬ ದುಃಖಿತನಾದನು. ಇದು ಉದ್ದವ್ವ ಕೊಟ್ಟ ಶಿಕ್ಷೆ, ಅವಳಿಂದಲೇ ಪರಿಹಾರವಾಗಬೇಕೆಂದು ನಿಶ್ಚಯಿಸಿ ಮಡದಿಯೊಡನೆ ಉದಗಟ್ಟಿ ದೇವಿ ದರ್ಶನಕ್ಕೆ ಬರುತ್ತಾನೆ. ಅಮ್ಮ ಜನ ನನ್ನನ್ನು ಬಂಜೆಗೌಡ ಎಂದು ಅಪಹಾಸ್ಯ ಮಾಡುತ್ತಿದ್ದಾರೆ. ಗಂಡಾಗಲಿ-ಹೆಣ್ಣಾಗಲಿ ಒಂದು ಮಗುವನ್ನು ಕರುಣಿಸು ನೀನು ನೀಡಿದ ಕಂದನನ್ನು ಬೇಕಾದರೆ ಅಂದೇ ಕಿತ್ತುಕೋ ಆದರೆ ಬಂಜೆಗೌಡ ಎನ್ನುವ ಅಪವಾದದಿಂದ ನನ್ನನ್ನು ಪಾರುಮಾಡು ಎಂದು ದೇವಿಯನ್ನು ಪ್ರಾರ್ಥಿಸುತ್ತಾನೆ. ಈತನ ಭಕ್ತಿಗೆ ಮೆಚ್ಚಿದ ಜಗನ್ಮಾತೆ- ಭಕ್ತ ನಿನಗೆ ಪುತ್ರ ಸಂತಾನ ಕೊಡುತ್ತೇನೆ ನಿನ್ನ ಮಾತಿನಂತೆ ಜನಿಸಿದ ಪುತ್ರನನ್ನು ನನಗೆ ಅರ್ಪಿಸಬೇಕು ಎಂಬ ಅಶರೀರವಾಣಿಯನ್ನಿತ್ತಳು. ವರುಷವೆಂಬುವುದರೊಳಗೆ ಗೌಡನ ಹೆಂಡತಿ ಗಂಡುಮಗುವಿಗೆ ಜನ್ಮನೀಡಿದಳು. ಇಳಿವಯಸ್ಸಿನ ಈ ದಂಪತಿಗಳಿಗೆ ಆನಂದವಾಯಿತು. ಉದ್ದವ್ವನ ಕೃಪಾಶೀರ್ವಾದ ಆ ಮಗುವಿಗೆ ಉದಯ ಎಂದು ನಾಮಕರಣ ಕೂಡ ಮಾಡಿದರು. ದೇವಿ ಮಹಾತ್ಮೆಯನ್ನು ಎಲ್ಲರೂ ಕೊಂಡಾಡಿದರು. ಮೂರು ತಿಂಗಳ ಮಗುವನ್ನು ದಂಪತಿಗಳು ದೇವಿ ದರ್ಶನಕ್ಕೆ ಕರೆತಂದರು. ದೇವಿ ಸಾನ್ನಿಧ್ಯದಲ್ಲಿ ಮಗುವನ್ನು ಮಲಗಿಸಿದರು. ಪೂಜೆಗೆ ನೀರು ತರಲು ಗೌಡ ನದಿಗೆ ಹೋದನು ಫಲಪುಷ್ಪ ತರಲು ಗೌಡತಿ ಅಂಗಡಿಗೆ ಹೋದಳು ಇತ್ತ ಉದ್ದವ್ವ ಆ ಮಗುವನ್ನು ನುಂಗಿ ಹುಣಶ್ಯಾಳ ಕಡೆಗೆ ಮುಖ ತಿರುಗಿಸಿ ಕೊಂಡು ಕುಳಿತುಬಿಟ್ಟಳಂತೆ. ಅಂದಿನಿಂದ ಅವಳಿಗೆ ಬೆನ್ನಪೂಜೆ ಸುರುವಾಯಿತಂತೆ. ಅದೇನೆ ಇರಲಿ ಮಗು ಮಾಯವಾದದರಿಂದ ಗೌಡತಿ ತುಂಬ ದುಃಖಿಸಿದಳು ಸಂಕಷ್ಟಪಟ್ಟಳು. ಗೌಡ ಮಡದಿಯನ್ನು ಸಮಾಧಾನ ಗೊಳಿಸಿದ. ದೇವಿ ದರ್ಶನ ಮುಗಿಸಿಕೊಂಡು ದಂಪತಿಗಳು ಮನೆಗೆ ಮರಳಿ ಬರುವಷ್ಟರಲ್ಲಿ ಮಗು ಉದಯ ತೊಟ್ಟಿಲಲ್ಲಿ ಆಡುತ್ತಿತ್ತಂತೆ. ಮಗುವನ್ನು ಬದುಕಿಸಿ ಯಾವುದೋ ಕಾರಣದಿಂದ ಆತ್ಮಬಲಿದಾನ ಗೈದ ಬ್ರಾಹ್ಮಣ ಕನ್ಯೆಯೊಬ್ಬಳ ತ್ಯಾಗದ ಪ್ರತೀಕದ ಹಿನ್ನೆಲೆಯಲ್ಲಿ ಇಂಥ ಕತೆಯೊಂದು ಸೃಷ್ಟಿಗೊಂಡು ಸಾಮಾನ್ಯ ವೀರಸ್ತ್ರೀಯೊಬ್ಬಳು ದೈವೀಕರಣಗೊಂಡು ಆರಾಧನಾ ಮೂರ್ತಿಯಾಗಿ ಉದಗಟ್ಟಿ ಶಕ್ತಿದೇವತೆಯಾಗಿ ರೂಪುಗೊಂಡಂತೆ ತೋರುತ್ತದೆ.

ಖಾನಗಾವಿ ಕನ್ನಮ್ಮ :

ಜಿಲ್ಲೆಯ ಗೋಕಾಕ ತಾಲ್ಲೂಕಿನ ಒಂದು ಚಿಕ್ಕ ಗ್ರಾಮ ಖಾನಗಾವಿ ಗೋಕಾಕನಿಂದ ಸುಮಾರು ಮೂವತ್ತು ಕಿ.ಮೀ. ಅಂತರದಲ್ಲಿದೆ. ಖಾನಗಾವಿ ದೇವಗೌಡನ ಹಟ್ಟಿ ಮತ್ತು ಸಭಾಪೂರ-ಮೂರು ಊರುಗಳು ಸೇರಿ ಖಾನಗಾವಿ ಎನ್ನಲಾಗುತ್ತದೆ. ಖಾನಗಾವಿಯನ್ನು ಒಳಗೊಂಡಂತೆ ಹೊಸೂರ, ಪುಡಲಕಟ್ಟಿ, ಮಿಡಕನಟ್ಟಿ, ದೇವಗೌಡನ ಹಟ್ಟಿ, ಗುದ್ನಟ್ಟಿ, ಕೇಸಪನಟ್ಟಿ, ಏಳಪಟ್ಟಿ, ಮುಂತಾದ ಎಂಟು ಊರುಗಳ ಗ್ರಾಮದೇವತೆ ಕನ್ನಮ್ಮ. ಮದುವೆಯಾಗದ

ಸ್ತ್ರೀಯೊಬ್ಬಳು ಆತ್ಮಾರ್ಪಣೆಗೊಂಡು, ಸ್ತ್ರೀದೇವತೆಯಾಗಿರಬೇಕು. ಕನ್ನಡಿಗರ ಅಮ್ಮ ಕನ್ನಮ್ಮ ಎಂದಾಗಿರಬೇಕು.

ದೇಸಗತಿ ಮನೆತನದ ಶಿವನಾಯಕರವರು ೧೮ನೇ ಶತಮಾನದಲ್ಲಿ ಖಾನಗಾವಿಯಲ್ಲಿ ಕನ್ನಮ್ಮದೇವಿ ಮೂರ್ತಿ ಮತ್ತು ಗರ್ಭಗುಡಿಯನ್ನು ಕಟ್ಟಿಸಿದರೆಂದು ದಾಖಲೆಯೊಂದು ತಿಳಿಸುತ್ತದೆ. ದೇವಿ ಮೂರ್ತಿ ಇಲ್ಲಿ ಉದ್ಭವ ಗೊಂಡಿದೆ ಎಂದು ಹೇಳಲಾಗುತ್ತದೆ. ಅದಕ್ಕೊಂದು ಸ್ವಾರಸ್ಯಕರ ಐತಿಹ್ಯವೂ ಸೃಷ್ಟಿಯಾಗಿದೆ. ಶಿವನಾಯ್ಯರವರ ಕುಲದೇವತೆ ಕೊಲ್ಲಾಪುರ ಮಹಾಲಕ್ಷ್ಮೀ ನಾಯಕ ದೇಸಗತಿ ಮನೆತನದವರು ಈ ದೇವಿಗೆ ಶ್ರದ್ದೆ-ನಿಷ್ಠೆಯಿಂದ ನಡೆದುಕೊಳ್ಳುತ್ತ ಬಂದವರು. ದೇಸಾಯರು ಪ್ರತಿ ವರುಷ ದರ್ಶನಾರ್ಥಿಗಳಾಗಿ ಅಲ್ಲಿಗೆ ಹೋಗುತ್ತಿದ್ದರು. ತಮ್ಮ ಮುಪ್ಪಿನಾವಸ್ಥೆಯಲ್ಲಿಯೂ ದೇವಿದರುಶನಕ್ಕೆ ಹೋಗಿರುತ್ತಾರೆ. ಇನ್ನೇನು ತನಗೆ ವಯಸ್ಸಾಯಿತು. ಕೊಲ್ಲಾಪುರಕ್ಕೆ ಬರಲು ಸಾಧ್ಯವಾಗುವುದಿಲ್ಲವಲ್ಲ ಎಂಬ ಆಲೋಚನೆಯಲ್ಲಿ ತೊಡಗಿರುತ್ತಾರಂತೆ. ದೇವಿ ಅವರ ಕನಸಿನಲ್ಲಿ ಬಂದು ಅಜ್ಜಾ ನೀವಿನ್ನು ಕೊಲ್ಲಾಪುರಕ್ಕೆ ಬರುವುದು ಬೇಡ, ನಾನೇ ನಿಮ್ಮ ಖನಗಾಂವಿಗೆ ಬರುತ್ತೇನೆ ಎಂದು ಕನಸಿನಲ್ಲಿ ಹೇಳಿ ಮಾಯವಾದಳಂತೆ. ಈ ಕನಸಿನ ದೇವಿಯನ್ನು ಹೊತ್ತು ಅಜ್ಜಖಾನಗಾಂವಿಗೆ ಹಿಂತಿರುಗುತ್ತಾನೆ. ಸದಾ ಮಹಾಲಕ್ಷ್ಮೀಯ ಚಿಂತೆಯಲ್ಲಿಯೇ ಇರುತ್ತಾನೆ. ಇವರ ದೇಶಗತಿ ಮನೆತನದಲ್ಲಿ ಬಹಳ ಆಕಳುಗಳಿದ್ದವಂತೆ. ಅವೆಲ್ಲ ಮೇಯಲು ಹೊಲಕ್ಕೆ ಹೋಗಿದ್ದವು. ಅದರಲ್ಲಿ ಬಂಜೆ ಆಕಳೊಂದು ಖಾನಗಾವಿ ಸಮೀಪದ ಹುತ್ತಿಗೆ ನಿತ್ಯ ಸ್ವಯಂ ಹಾಲು ಕರೆಯುತ್ತಿತ್ತಂತೆ. ಶಿವನಾಯ್ಯಜ್ಜ ಮತ್ತು ಊರುಹಿರಿಯರೆಲ್ಲ ಇದನ್ನು ಕಂಡು ವಿಸ್ಮಯಪಟ್ಟು ಭಯಭಕ್ತಿಯಿಂದ ಹುತ್ತಿಗೆ ಕೈಮುಗಿಯುವ ಸಂದರ್ಭದಲ್ಲಿ ಅಲ್ಲಿರುವ ಒಂದು ಚಿಕ್ಕ ಕಲ್ಲಿನ ಮೂರ್ತಿಯನ್ನು ಕಂಡರಂತೆ. ಇದೇ ಸಾಕ್ಷಾತ್ ಕೊಲ್ಲಾಪುರದ ಮಹಾಲಕ್ಷ್ಮಿ ಎಂದು ನೆರೆದವರೆಲ್ಲ ನಂಬಿದರು. ಸಂತೋಷಪಟ್ಟರು. ಈ ಮೂರ್ತಿ ಕೆತ್ತನೆಯದಲ್ಲವಾದರೂ ಸ್ತ್ರೀಯೊಬ್ಬಳು ಕೋಣನೇರಿ ತನ್ನ ಕೈಖಡ್ಗದಿಂದ ದುಷ್ಟರನ್ನು ಸಂಹರಿಸುತ್ತಿರುವ ದೃಶ್ಯ ಕಾಣಬರುತ್ತದೆ. ಇಂಥ ಸುಂದರವಾದ ಮೂರ್ತಿಗೆ, ಶಿವನಾಯಕಜ್ಜ ಹಾಗೂ ಊರ ಪ್ರಮುಖರೆಲ್ಲ ಸೇರಿ ಕನ್ನಮ್ಮದೇವಿ ಎಂದು ನಾಮಕರಣ ಮಾಡಿ ಖಾನಗಾವಿಯ ಶಕ್ತಿದೇವತೆಯೆಂದು ಆರಾಧಿಸತೊಡಗಿದರಂತೆ. ಶಿವನಾಯಕ ದೇಸಾಯರು ಬೇಡ ಜನಾಂಗದವರನ್ನು ದೇವಿಯ ಪೂಜಾರಿಗಳನ್ನಾಗಿ ನೇಮಿಸಿ ಅವರಿಗೆ ಇನಾಂ ಭೂಮಿಯನ್ನು ನೀಡಿದ್ದಾರೆ.

ಮಹಾನವಮಿ ಉತ್ಸವ ಅಶ್ವಿನ ಮಾಸದ ಶುಕ್ಲಪಕ್ಷದ ಪ್ರತಿಪದೆಯಿಂದ ಮೊದಲಾಗಿ ದಸರೆಯ ಒಂಭತ್ತು ದಿನಗಳವರೆಗೆ ಅವ್ಯಾಹತವಾಗಿ ನಡೆಯುತ್ತದೆ. ನವರಾತ್ರಿಯನ್ನು ಸಡಗರದಿಂದ ಆಚರಿಸುತ್ತಾರೆ. ನವರಾತ್ರಿ ಮುಖ್ಯವಾಗಿ ಶಕ್ತಿಪೂಜೆಯ ಹಬ್ಬವಲ್ಲವೆ ನಾಡಹಬ್ಬವೂ

ಹೌದು. ಈ ಹಬ್ಬವು ಕನ್ನಡಿಗರ ಹಬ್ಬವೆಂದೂ ಆಚರಿಸಲ್ಪಡುತ್ತದೆ. ಶಕ್ತಿಯ ರೂಪವಾದ ಮಹಾಲಕ್ಷ್ಮಿ ಕನ್ನಮ್ಮ ಪೂಜೆಗೊಳ್ಳುತ್ತಾಳೆ. ಮಹಾನವಮಿಯ ಒಂಬತ್ತು ದಿನಗಳವರೆಗೆ ಪ್ರತಿದಿನ ಮೂರು ಸಲ ದೇವಿ ಪೂಜೆ ಮಾಡುತ್ತಾರೆ. ಉಳಿದ ದಿನಗಳಲ್ಲಿ ದಿನಕ್ಕೊಂದು ಬಾರಿ ದೇವಿ ಪೂಜೆ. ಈ ಉದ್ಭವ ದೇವಿಮೂರ್ತಿಗೆ ನೂರಾರು ರಂಗುರಂಗಿನ ಸೀರೆ ಪತ್ತಲ ಶಾಲುಗಳನ್ನು ಉಡಿಸುತ್ತಾರೆ. ಹಸಿರುಬಳೆ ಆಭರಣಗಳನ್ನು ತೊಡಿಸುತ್ತಾರೆ. ವಿಶಿಷ್ಟ ವಿನ್ಯಾಸದಲ್ಲಿ ದೇವಿಗೆ ಸೀರೆ ಉಡಿಸುತ್ತಾರೆ. ವಿವಿಧ ರೇಖೆ ನಕ್ಷೆಗಳಿಂದ ಸೀರೆಗಳ ಮಿರಿ ಮಿರಿ ಮಿಂಚುವ ದಡಿ ನೋಡುವುದೇ ಅಂದಚೆಂದ. ಇದು ಒಂಭತ್ತು ದಿನಗಳವರೆಗೆ ಸತತವಾಗಿ ನಡೆಯುತ್ತದೆ. ಒಂಭತ್ತು ದಿನಗಳವರೆಗೆ ನಂದಾದೀಪ ಇರುತ್ತದೆ. ಈ ಮಹಾನವಮಿ ಜಾತ್ರೆಯಲ್ಲಿ ಹರಿಮರಿ ಇರುತ್ತದೆ. ಪಲ್ಲಕ್ಕಿ ಉತ್ಸವವೂ ಇರುತ್ತದೆ. ಪಲ್ಲಕ್ಕಿಯಲ್ಲಿ ಬೆಳ್ಳಿಕುದುರೆ ಇರುತ್ತದೆ. ಯುಗಾದಿಯ ಸಂದರ್ಭದಲ್ಲಿಯೂ ಎಂಟು ದಿನಗಳ ದೇವಿ ಜಾತ್ರೆ ನೆರವೇರುತ್ತದೆ.

ಹತ್ತು ವರುಷಗಳಿಗೊಮ್ಮೆ ಕನ್ನಮ್ಮ ದೇವಿಯ ದೊಡ್ಡ ಜಾತ್ರೆ ನೆರವೇರುತ್ತದೆ. ದೇವಿಯ ಬೆಳ್ಳಿಯ ಮತ್ತು ಬಂಗಾರದ ಮೂರ್ತಿಗಳಿವೆ. ತೇರಿನಲ್ಲಿ ಈ ಮೂರ್ತಿ ಇಟ್ಟಿರುತ್ತಾರೆ. ಈ ಸಂದರ್ಭದಲ್ಲಿ ಕೋಣ ಬಲಿ ಇರುತ್ತದೆ. ಕಟುಕರವ ಒಬ್ಬನೇ ಕೋಣನ ರುಂಡವನ್ನು ದೇವಿ ಎದುರಿಗೆ ಹಾರಿಸುತ್ತಾನೆ. ರುಂಡವನ್ನು ದೇವಿ ಎದುರಿಗೇ ಹೂಳುತ್ತಾರೆ. ಕೋಣಬಲಿಕೊಟ್ಟ ಮೇಲೆಯೇ ಕನ್ನಮ್ಮನ ಪಲ್ಲಕ್ಕಿ ಹೊರಡುವುದು. ಈರಗಾರರ ಗುಂಡು ಸರಪಳಿಯಿಂದ ಬೇಡಿಕೊಂಡವರು ಬೆನ್ನಿಗೆ ಚರ್ಮ ಕೀಳುವ ಹಾಗೆ ಬಡಿದುಕೊಳ್ಳುವರು ಪೆಟ್ಟು ತಗುಲಿದ ಜಾಗೆಯಲ್ಲಿ ಭಂಡಾರ ಬಳಿಯುವರು. ಈ ಈರಗಾರರ ಗುಂಡಿನ ಸರಪಳಿಯಿಂದ ಮೊದಲ ಕ್ಷತ್ರಿಯ ಮನೆತನದವರು ಒಂದೆರಡು ಬಾರಿ ಮೈಗೆ ಬಡಿದುಕೊಂಡ ಮೇಲೆ ಉಳಿದವರು ಬಡಿದುಕೊಳ್ಳಬೇಕೆಂಬ ನಿಯಮವಿದೆ. ಇವು ಮಹಾನವಮಿ ಸಂದರ್ಭದ ಐದು ವರುಷಗಳಿಗೊಮ್ಮೆ ಸೇರುವ ಜಾತ್ರೆಯಲ್ಲಿಯೂ ಇದ್ದವು. ಈಗ ಮಹಾನವಮಿ ಜಾತ್ರೆ ಒಂದೇ ದಿನ ಜರುಗುತ್ತಿದೆ ಪ್ರತಿ ವರುಷ. ಈಗ ತೇರೂ ಇರುವುದಿಲ್ಲ. ಪಲ್ಲಕ್ಕಿ ಮಾತ್ರ. ದೊಡ್ಡಜಾತ್ರೆಯಲ್ಲಿ ದುರ್ಗಾದೇವಿ ತೇರು ಮತ್ತು ಕನ್ನಮ್ಮ ತೇರು–ಎರಡು ತೇರುಗಳಿರುತ್ತವೆ. ಪ್ರತಿ ಮಹನವಮಿ ಜಾತ್ರೆಯಲ್ಲಿಯೂ ರಾಣಿಗ್ಯಾ ಇರುತ್ತಾನೆ. ವೇಷಹಾಕಿಕೊಂಡು ದೇವಿಯನ್ನು ಬಯುತ್ತಿರುತ್ತಾನೆ. ಪತ್ರಿಕಾಲು ಇದೆ. ಹೊನ್ನವರಿ ಎಲಿ, ಪತ್ರಿ, ಹೂ ಕೌಲೂ ಇದೆ. ೧೯೬೬–೬೮ರಲ್ಲಿ ಕನ್ನಮ್ಮದೇವಿಯ ದೇವಾಲಯ ಪೌಳಿ ಗೋಪುರ ಎಲ್ಲ ಕಟ್ಟಲಾಗಿದೆ. ಈ ಗುಡಿಯಲ್ಲಿ ಈಗಲೂ ಹನ್ನೆರಡು ತಿಂಗಳು ನಂದಾದೀಪ ಇರುತ್ತದೆ. ಇದಕ್ಕಾಗಿ ಪೂಜಾರಿಗಳಿಗೆ ಎಣ್ಣೆಪಟ್ಟ ಎತ್ತುತ್ತಾರೆ. ಅವರಿಗೆ ಎಣ್ಣೆಹೊಲ ಕೂಡ ಇದೆ. ಕೊಲ್ಲಾಪುರದ ಮಹಾಲಕ್ಷ್ಮಿ ಖಾನಗಾಂವಿಗೆ ವಲಸೆ ಬಂದು

ದೇಸಾಯರ ಕುಲದೇವತೆಯಾಗಿ, ಗ್ರಾಮದೇವತೆಯಾಗಿ ಪರಿವರ್ತನಗೊಂಡುದು ಶಕ್ತಿಕೇಂದ್ರದ ದೇವತೆ ಇನ್ನೊಂದು ದೇವತೆಯ ಸೃಷ್ಟಿಗೆ ಅದು ಹೇಗೆ ಕಾರಣವಾಗುತ್ತವೆಂಬುದನ್ನು ವ್ಯಕ್ತಪಡಿಸುತ್ತದೆ. ಹಾಗೆಯೇ ತುಳಜಾಪುರದ ಅಂಬಾಭವಾನಿ ಚಿಕ್ಕೋಡಿಗೆ ವಲಸೆ ಬಂದು ಕವಟಗಿಮಠರ ಅಂಬಾಬಾಯಿ ಕುಲದೇವತೆಯಾಗಿ ಎಲ್ಲರೂ ಆರಾಧಿಸುವ ದೇವಿಯಾಗಿ ರೂಪಾಂತರಗೊಂಡಿರುವುದನ್ನು ಸ್ಮರಿಸಬಹುದು. ಹಾಗೆಯೇ ಮಹಾರಾಷ್ಟ್ರದ ಕೊಂಕಣದಿಂದ ಚಿಂಚಲಿಗೆ ಬಂದ ಮಾಯಮ್ಮ ಇವರೆಲ್ಲ ವಲಸೆ ಬಂದ ಶಕ್ತಿದೇವತೆಗಳೆನ್ನಬಹುದು.

ಕಕ್ಕೇರಿ ಬಿಷ್ಟವ್ವ :

ಖಾನಾಪೂರ ತಾಲ್ಲೂಕಿನ ಕಕ್ಕೇರಿ ಗ್ರಾಮ ಬೆಳಗಾವಿಯಿಂದ ಸುಮಾರು ೬೫ ಕಿ.ಮೀ. ದೂರದಲ್ಲಿದೆ. ಕಕ್ಕೇರಿ ಬೆಳಗಾವಿ–ಹಳ್ಯಾಳ ಮಾರ್ಗ ಮಧ್ಯದಲ್ಲಿದೆ. ಬಿಷ್ಟಾದೇವಿ ಈ ಗ್ರಾಮದ ಶಕ್ತಿದೇವತೆ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ಈ ದೇವಿಯನ್ನು ಇಷ್ಟಾದೇವಿ ಎಂದೂ ಕರೆಯಬಹುದು. ಇವಳನ್ನು ಬಿಷ್ಟವ್ವ, ಬಿಷ್ಟಮ್ಮ ಬಿಷ್ಟಕ್ಕ ಇತ್ಯಾದಿ ಹೆಸರುಗಳಿಂದ ಭಕ್ತರು ಆರಾಧಿಸುತ್ತಾರೆ. ಸುಮಾರು ಮುನ್ನೂರು ವರುಷಗಳ ಪುರಾತನ ದೇವಾಲಯ ಬಿಷ್ಟವ್ವನದೆಂದು ತೋರುತ್ತದೆ. ದೇವಾಲಯ ಗಚ್ಚಿನದಿದ್ದು ಹೆಂಚಿನ ಹೊದಿಕೆಯನ್ನು ಹೊಂದಿದೆ. ಕಕ್ಕೇರಿಯ ದಕ್ಷಿಣ ದಿಕ್ಕಿಗೆ ದೇವಿಗುಡಿಯ ಬಾಗಿಲು ಇದೆ. ಈ ದೇವಿಯ ಪೂಜಾರಿಗಳು ಕ್ಷತ್ರಿಯರು ಸದ್ಯಕ್ಕೆ ಕಕ್ಕೇರಿಯಲ್ಲಿರುವ ಬಿಷ್ಟವ್ವಗುಡಿ ಮೊದಲು ದ್ಯಾಮವ್ವನ ಗುಡಿಯಾಗಿತ್ತಂತೆ. ದ್ಯಾಮವ್ವನ ಮೂರ್ತಿಯನ್ನು ಯಾವುದೋ ಊರಿನವರು ಕದ್ದೊಯ್ದ ನಂತರ ಅಲ್ಲಿ ಬಿಷ್ಟವ್ವನನ್ನೂ ಪ್ರತಿಷ್ಠಾಪಿಸಿರುವುದಾಗಿ ಇಲ್ಲಿಯ ಹಿರಿಯರ ಹೇಳಿಕೆಯಿದೆ. ಬಿಷ್ಟಮ್ಮ ಗೋಕಾಕದ ಕೌಜಲಗಿ ಗ್ರಾಮದ ದೇಸಾಯರ ಮನೆತನದವಳಂತೆ. ತನ್ನ ಶಕ್ತಿಸಾಮರ್ಥ್ಯದಿಂದ ದೈವೀಗುಣ ಹೊಂದಿ ಪೂಜ್ಯಳಾದಳಂತೆ. ಈ ಗುಡಿಗೆ ಕೌಜಲಗಿಯ ಕ್ಷತ್ರೀಯ ಸಮಾಜದವರಾದ ಅಂಬರೀಷ್ ದೇಸಾಯಿ ಮನೆತನದವರೇ ಸೋಲ್ ಟ್ರಸ್ಟ್ ಇದ್ದಾರೆ. ದೇಸಾಯಿ ಮನೆತನದ ಕುಲದೇವತೆಯಾದ, ಬಿಷ್ಟವ್ವ, ಗ್ರಾಮದೇವತೆಯಾಗಿ ರೂಪುಗೊಂಡ ಬಳಿಕ, ಅವಳ ಜಾತ್ರೆ ಪ್ರತಿವರುಷದ ಮಹಾನವಮಿಗೆ ದೊಡ್ಡ ದೊಡ್ಡಪ್ರಮಾಣದಲ್ಲಿ ಜರುಗುತ್ತದೆ. ಜಾತ್ರೆ ರಾತ್ರಿ ಕಾಲದಲ್ಲಿಯೇ ಒಳ್ಳೇ ತುರುಸಿನಿಂದ ನಡೆಯುತ್ತದೆ. ಎಲ್ಲ ಜಾತಿಯ ಜನ ದೇವಿ ಭಕ್ತರು. ಕೆಳಜಾತಿಯವರು ಕುರಿ–ಕೋಳಿಗಳ ಬಲಿಯನ್ನು ಅವಳ ಮುಂದೆ ಸ್ವತಃ ಮಾಡಿ ಮಾಂಸವನ್ನು ಮನೆಗೆ ತರುತ್ತಾರೆ. ಲಿಂಗವಂತರು ಇತರರು ದೇವಿಯ ಮುಂದೆ ಕಟ್ಟಿದ್ದ ದೊಡ್ಡ ಕಣಜದಲ್ಲಿ ಕೋಳಿ ಹಾರಿಸುತ್ತಾರೆ. ಕೆಳಜಾತಿಯ ಜನ ಕಣಜದ ಆಚೆ ಹಾರಿ ಬಂದ ಕೋಳಿಗಳನ್ನು ದೇವಿ ಪ್ರಸಾದವೆಂದು ಸ್ವೀಕರಿಸುವರು. ಕಣಜದೊಳಗಡೆ ಬಿದ್ದ ಕೋಳಿಗಳನ್ನು ಪೂಜಾರಿಗಳು

ತೆಗೆದುಕೊಳ್ಳುತ್ತಾರೆ. ಬಿಷ್ಟವ್ವನ ಜಾತ್ರೆಯೆಂದರೆ ಕೋಳಿಬ್ಯಾಟಿಯೇ ಎನ್ನುವಷ್ಟರ ಮಟ್ಟಿಗೆ ಅವಳಿಗೆ ಕುರಿ–ಕೋಳಿ ಬಲಿ. ಬಿಷ್ಟವ್ವ ದುಷ್ಟ ದೇವಿ ಎನ್ನುವ ಭಯ ಅವಳ ಭಕ್ತರಲ್ಲಿದೆ. ಆದ್ದರಿಂದ ಅವಳಿಗೆ ಶ್ರದ್ಧೇಯಿಂದ ನಡೆದುಕೊಳ್ಳುತ್ತಾರೆ. ನಿಷ್ಠಭಕ್ತರಿಗೆ ಇವಳು ಇಷ್ಟದೇವಿಯೇ ಹಾಲು, ಹಣ್ಣು, ಕಾಯಿ, ಕರ್ಪೂರ ಕೂಡ ದೇವಿಗೆ ಸಲ್ಲಿಸಬಹುದು.

ಎಕ್ಕೇರಿ ಕರೆವ್ವ :

ಸವದತ್ತಿ ತಾಲ್ಲೂಕಿನ ಮುನವಳ್ಳಿಯಿಂದ ೫ ಕಿ.ಮೀ. ಅಂತರದಲ್ಲಿ ನರಗುಂದ ರೋಡಮೇಲೆ ಮುನವಳ್ಳಿ ಹುಲಕಟ್ಟಿ ಕ್ರಾಸ್ ನಡುವೆ ಎಕ್ಕೇರಿ ಊರು ಇದೆ. ಎಕ್ಕೇರಿಯಿಂದ ೨ ಕಿ.ಮೀ. ದೂರದಲ್ಲಿ ಎಕ್ಕೇರಿ ಕರೆವ್ವನ ವಾಸಸ್ಥಳ ಇದೆ. ಇಲ್ಲಿಯೇ ಧರ್ಮರು ಎನ್ನುವ ಜಾತಿ ಜನಾಂಗದ ಈ ದೇವಿ ಪೂಜಾರಿಗಳಿರುತ್ತಾರೆ. ಇಟಗಿ ಭೀಮಾಂಬಿಕಾ ಪೂಜಾರಿಗಳೂ ಈ ಧರ್ಮರೇ. ಮುಧೋಳ, ಬಾಗಲಕೋಟೆ, ಬಸವನಬಾಗೇವಾಡಿ, ವಿಜಯಪುರ ಕಡೆಗೆ ಈ ಜನಾಂಗದವರು ಹೆಚ್ಚು ಇದ್ದಾರೆ. ಸವದತ್ತಿ ಗೊರವನಕೊಳ್ಳ ಇನಾಂದಾರರು ಈ ಜನಾಂಗದವರನ್ನು ಈ ದೇವಿ ಪೂಜಾರಿಗಳನ್ನಾಗಿ ನೇಮಿಸಿದರು ವಿಜಯನಗರ ಪತನಾನಂತರ ವಿಜಯನಗರದ ೨೦೦ ಪಾಳ್ಯೇಗಾರರಲ್ಲಿ ಇನಾಂದಾರರು ಒಬ್ಬರು. ಇವರು ಕ್ಷತ್ರಿಯರು ಬೇಡರು. ಸವದತ್ತಿ ಕಡೆಗೆ ಬಂದ ಈ ಇನಾಂದಾರರ ಏಳು ಹಳ್ಳಿಗಳನ್ನು ಇನಾಂರೂಪದಲ್ಲಿ ಪಡೆದಿದ್ದರು. ಅದರಲ್ಲಿ ಎಕ್ಕೇರಿಯೂ ಒಂದು. ಇಲ್ಲಿ ಕೇವಲ ಹದಿನಾರು ಮನೆಗಳಿವೆ. ಇಲ್ಲಿಯ ಧರ್ಮರು ಸಂಚಾರಿಗಳಾಗಿದ್ದರೂ ತುಂಬ ನಿಷ್ಠಾವಂತರು ಅದಕ್ಕಾಗಿ ಅವರಿಗೆ ಇನಾಂದಾರರು ಇಲ್ಲಿಯ ಕರೆವ್ವನ ಪೂಜೇರಿಕೆ ಕೊಟ್ಟರು ೫೦ ಎಕರೆ ಇನಾಂ ಜಮೀನು ನೀಡಿದರು. ಹಾಗೆಯೇ ಆನೆಗೊಂದಿಯಿಂದ ಇಲ್ಲಿಗೆ ಬಂದ ಹಿರೇಮಠದವರಿಗೆ ಹದಿನಾರು ಎಕರೆ ಜಮೀನು ಇನಾಂಕೊಟ್ಟರು. ದೇವಿಯಿಂದ ಬರುವ ಉತ್ಪನ್ನದಲ್ಲಿ ಅರ್ಧಭಾಗ ಪೂಜಾರಿಗೆ ಉಳಿದರ್ಧ ಭಾಗ ಇನಾಂದಾರರಿಗೆ ಬರುತ್ತದೆ.

ಕರೆವ್ವ ದೇವಿಯದು ಬಿಳಿಕಲ್ಲಿನ ಸುಂದರಮೂರ್ತಿ. ಜಾತ್ರೆಯ ಸಂದರ್ಭದಲ್ಲಿ ಮೂರ್ತಿಗೆ ಹಸಿರು ರೇಸಿಮೆ ಸೀರೆ ಉಡಿಸಿ, ಹಸಿರು ಬಳೆ ತೊಡಿಸಿ ಬಂಗಾರದ ಕಿರೀಟ ಹಾಕಿರುತ್ತಾರೆ. ವಜ್ರಾಭರಣಗಳನ್ನು ಕತ್ತು ಕಿವಿಗಳಲ್ಲಿ ಹಾಕಿರುತ್ತಾರೆ. ಕೊರಳಲ್ಲಿ ತಾಳಿ ಕೂಡ ಇರುತ್ತದೆ. ಹಣೆಯ ಮೇಲೆ ಕುಂಕುಮ ಭಂಡಾರ ಬಳಿದಿರುತ್ತಾರೆ. ಒಟ್ಟಾರೆ ಅಲಂಕೃತ ಮುತ್ತೈದೆಯ ಎಲ್ಲ ಲಕ್ಷಣಗಳು ಈ ದೇವಿಗೆ. ಇಷ್ಟೆಲ್ಲ ವೈಭವ ಪೂರ್ಣ ದೇವತೆಯಿಂದಾದರೂ ಇವಳಿಗೆ ಗುಡಿಯಿಲ್ಲ, ಬಯಲಲ್ಲಿಯೇ ಇದ್ದಾಳೆ. ಅರಿ ತೊಟ್ಟಿಲ ಬಳೆಗಳೇ ಇವಳಿಗೆ ಗುಡಿಯ ಆಕಾರದಲ್ಲಿ ನೆರಳಾಗಿ ನಿಂತಿವೆ. ಕರೆವ್ವನ ಈ ಸ್ಥಳಕ್ಕೆ ಮೆಳಿ ಎಂದೇ ಕರೆಯುತ್ತಾರೆ. ಕೇವಲ ೨೪ ಘಂಟೆಗಳಲ್ಲಿ ದೇವಿಯ

ಗುಡಿ ಕಟ್ಟಬೇಕೆಂದು ದೇವಿವಾಣಿ ಇದೆಯಂತೆ. ಅದು ಅಸಾಧ್ಯವಾದುದೆಂದು ಈವರೆಗೂ ಅವಳಿಗೆ ಗುಡಿ ಕಟ್ಟಿಲ್ಲವೆಂಬ ಅಭಿಪ್ರಾಯವಿದೆ. ಈ ದೇವಿಗೆ ಬೆಳಕಿನ ವ್ಯವಸ್ಥೆಯನ್ನು ಅವಳ ಹೇಳಿಕೆಯ ಮೇರೆಗೆ ಮಾಡಲಾಗಿಲ್ಲವಂತೆ. ಮಹಾನವಮಿಯಲ್ಲಿ ಒಂಭತ್ತು ದಿನ ನಂದಾದೀಪವನ್ನು ದೇವಿಹೆಸರಿನಲ್ಲಿ ಪೂಜಾರಿ ತನ್ನ ಮನೆಯಲ್ಲಿಯೇ ಹಾಕುತ್ತಾನೆ. ಮೂರು ವರುಷಕ್ಕೊಮ್ಮೆ ಕರೆವ್ವನ ಜಾತ್ರೆ ನೆರವೇರುತ್ತದೆ. ಪಲ್ಲಕ್ಕಿಯಲ್ಲಿ ದೇವಿಯ ಹಿತ್ತಾಳೆಯ ಉತ್ಸವ ಮೂರ್ತಿಯನ್ನಿಟ್ಟು ಮೆಳಿ ಸುತ್ತ ಪ್ರದಕ್ಷಿಣೆ ಹಾಕುತ್ತಾರೆ. ಪಲ್ಲಕ್ಕಿ ಮುಂದೆ ಜನ ಕುಣಿದು ಕುಪ್ಪಳಿಸುತ್ತಾರೆ, ಆರಾಧನೆಯ ಹಿನ್ನೆಲೆಯಲ್ಲಿ ಮಾತ್ರ. ದೇವಿಯ ಎದುರಿಗೆ ಒಂದು ಕೆರೆ ಇದೆ. ಅದರ ದಂಡೆಯ ಮೇಲೆ ಯಾವ ನಿರ್ಬಂಧವೂ ಇಲ್ಲದೆ, ಭಕ್ತಜನರಿಂದ ಕುರಿ-ಕೋಳಿ ಬಲಿ ಯಥೇಚ್ಛವಾಗಿ ನಡೆಯುತ್ತದೆ. ದೇವಿಗೆ ಬಿಟ್ಟ ಕೋಣಬಲಿಯೂ ನಡೆಯುತ್ತದೆ. ಬೇಡಿಕೊಂಡ ಭಕ್ತರೂ ಕೋಣಬಲಿ ಕೊಡುವುದುಂಟು ದೇವಿಯ ಎದುರಿಗೆ.

ಪ್ರತಿಯೊಂದು ಗ್ರಾಮದಲ್ಲಿ ಕರೆವ್ವ ಇದ್ದಾಳೆ. ತುಂಬ ಪ್ರಚಾರದಲ್ಲಿರುವ ದೇವತೆ. ಮನೆಯ ಮೂಲೆಯಲ್ಲಿ ಊರ ಆಗಸಿಯಲ್ಲಿ ದನದ ಕೊಟ್ಟಿಗೆಯಲ್ಲಿ ಗುಡ್ಡದ ಓರೆಯಲ್ಲಿ ಹೊಲದ ಬದುವಿನಲ್ಲಿ ಗಿಡದ ಬುಡದಲ್ಲಿ ಎಲ್ಲಿಯಾದರೂ ಯಾವುದಾದರೂ ಸ್ಥಳ ಅವಳದು. ಜಾತ್ರೆ ಉತ್ಸವ ಸಾಮಾನ್ಯವಾಗಿ ಈ ದೇವಿಗಿಲ್ಲ. ಕೆಲವೆಡೆ ಮಾತ್ರ ಈ ದೇವಿಯ ಸಣ್ಣಪುಟ್ಟ ಗುಡಿಗಳಿವೆ. ಮೂರ್ತಿಯೂ ಇದೆ. ಚಿಕ್ಕ ಪಲ್ಲಕ್ಕಿಯೂ ಇದೆ. ಬೈಲಹೊಂಗಲ ತಾಲ್ಲೂಕಿನ ಬಸರಕೋಡ ಗ್ರಾಮದಲ್ಲಿ ಹರಿಜನರ ಕರೆವ್ವ ಇದ್ದಾಳೆ. ಹರಿಜನರೇ ಇದರ ಪೂಜಾರಿಗಳು. ದ್ಯಾಮವ್ವ ಕಲ್ಮೇಶ್ವರ ಜಾತ್ರೆಯಲ್ಲಿ ಇವರ ಪಲ್ಲಕ್ಕಿಯ ಹಿಂದಿನಿಂದ ಅವಳ ಪಲ್ಲಕ್ಕಿಯೂ ಇರುತ್ತದೆ. ರಾಮದುರ್ಗದ ಕಟಕೋಳ ಕರೆವ್ವ ಆ ಊರಿನ ಅಧಿದೇವತೆಯಾಗಿದ್ದಾಳೆ. ಎಲ್ಲ ಜನಾಂಗದವರೂ ಇವಳಿಗೆ ನಡೆದುಕೊಳ್ಳುತ್ತಾರೆ ಜಾತ್ರೆ ಮಾತ್ರ ಇಲ್ಲ. ಗೋಕಾಕದ ಕೊಳವಿಯಲ್ಲಿಯೂ ಹರಿಜನರ ಕರೆಮ್ಮ ಇದ್ದಾಳೆ. ಜಾತ್ರೆಯೂ ಆಗುತ್ತದೆ. ಗೋಕಾಕದ ಲೋಳಸೂರ ಪರಸಿ ಹತ್ತಿರದ ಹೊಲದಲ್ಲಿಯೂ ಕರೆವ್ವನ ಕಲ್ಲಿನ ಮೂರ್ತಿ ಇದೆ. ಹರಿಜನರೇ ಇದರ ಪೂಜಾರಿಗಳು. ಮೂಡಲಗಿಯಲ್ಲಿಯೂ ಕರೆವ್ವನ ಜಾತ್ರೆ-ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಮಕ್ಕಳ ರೋಗ ರುಜಿನ ಅತ್ತರೆ ಕರೆದರೆ ಅವಳಿಗೆ ಬೇಡಿಕೊಂಡು ಅಂಗಾರ ಹಚ್ಚಬೇಕು. ಇವಳಿಗೆ ಕೋಳಿ, ಹುಂಜ, ಹೋತದ ಬಲಿ ಕೂಡ ಇದೆ. ಹಣ್ಣು, ಕಾಯಿ, ಕರ್ಪೂರ, ಹೋಳಿಗೆ ಅನ್ನ ಪಲ್ಯ.. ನೈವೇದ್ಯ ನೀಡುತ್ತಾರೆ.

ಶೆಟ್ಟೆವ್ವ :

ಇವಳು ಮನುಷ್ಯರಿಗೆ ಹಣೆ ಬರಹ ಬರೆಯುವ ದೇವಿ ಅದರಲ್ಲಿಯೂ ಗ್ರಾಮೀಣರ ಹಣೆಬರೆಹ ಬರೆಯಬಲ್ಲಳೆಂಬ ನಂಬಿಕೆ. ಇವಳನ್ನು ಶೆಟ್ಟೆವ್ವ ಶೆಟವಿ ಶಟಕವ್ವ ಶೆಟಿಗೆವ್ವ ಇತ್ಯಾದಿ

ಹೆಸರುಗಳಿಂದ ಕರೆವ ವಾಡಿಕೆ. ರಾಮದುರ್ಗ, ತಾಲ್ಲೂಕಿನ ತೊರಗಲ್ಲ ಶೆಟ್ಟೆವ್ವನದು ಶಕ್ತಿಕೇಂದ್ರ ಇಲ್ಲಿ ಶೆಟ್ಟೆವ್ವ ಮರದ ಕೆಳಗಿದ್ದಾಳೆ. ಇದು ಶೆಟ್ಟೆವ್ವನ ಮರ ಎಂದೇ ಪ್ರಸಿದ್ಧವಾಗಿದೆ. ಗೋಕಾಕದಲ್ಲಿ ಶೆಟ್ಟೆವ್ವನ ತ್ವಾಟ ಇದೆ. ಇದೇ ಅವಳ ವಾಸಸ್ಥಳ. ಬೈಲಹೊಂಗಲ ತಾಲ್ಲೂಕಿನ ಇಂಚಲ ಗ್ರಾಮದ ಶೆಟ್ಟೆವ್ವ ಕಟ್ಟೆಯ ಮೇಲಿದ್ದಾಳೆ. ಇವಳಿಗೂ ಗುಡಿ ಇಲ್ಲ. ಇವಳದು ಚಟಿಕೆ ಆಕಾರದ ಮುಖವಿದೆ. ಕೂಸು, ಬಾಣಂತಿಯರ ರಕ್ಷಣೆ ಇವಳದೆ. ಕೂಸು ಅತ್ತರೆ, ನಕ್ಕರೆ ಶೆಟ್ಟೆವ್ವ ತಾಯಿಯೇ ಕಾರಣವೆಂದು ಈಗಲೂ ನಂಬಿಕೆ ಇದೆ. ಜಿಲ್ಲೆಯ ಅನೇಕ ಕಡೆ ಮಗು ಹುಟ್ಟಿದ ಐದನೇ ದಿನ ಅದನ್ನು ಎತ್ತಿಕೊಂಡು ಹೋಗಲು ಶೆಟವಿ ಬರುವಳೆಂಬ ನಂಬಿಕೆಯಿದೆ. ಧನುರ್ವಾತದ ಸೋಂಕಿನಿಂದ ಸಾಯುವ ಮಗುವಿಗೆ ಶೆಟವಿಯೇ ಕಾರಣವೆಂದು ನಂಬಲಾಗಿದೆ. ಮಕ್ಕಳು ಬೇಕಾದ ಹೆಣ್ಣುಮಕ್ಕಳು ಶೆಟ್ಟೆವ್ವನಿಗೆ 'ತೊಟ್ಟಿಲ ಹರಕೆ' ಹೊರುತ್ತಾರೆ. ತಮಗೆ ಮಕ್ಕಳಾಗುವವರೆಗೂ ದೇವಿಯ ಚಿಕ್ಕತೊಟ್ಟಿಲೊಂದನ್ನು ಮನೆಯಲ್ಲಿ ಪೂಜಿಸುತ್ತಾರೆ. ಮಗು ಜನಿಸಿದ ಮೇಲೆ, ಪೂಜಿಸಿದ ತೊಟ್ಟಿಲದ ಜತೆಗೆ ಹೊಸದೊಂದು ತೊಟ್ಟಿಲನ್ನು ದೇವಿ ಗಿಡಕ್ಕೆ ಕಟ್ಟುತ್ತಾರೆ. ಇದೇ ತೊಟ್ಟಿಲಹರಕೆ. ಕೂಸಿಗೆ ಮೂರು ತಿಂಗಳು ಆಗುವುದರೊಳಗೇ ಶೆಟ್ಟೆವ್ವನಿಗೆ ಮಾಡಬೇಕು. ಅಲ್ಲಿಯವರೆಗೆ ಬಾಣಂತಿ, ಕೂಸು ಹೊರಗೆ ಹೋಗಕೂಡದು. ಅಷ್ಟೇ ಅಲ್ಲ ಶೆಟ್ಟೆವ್ವನಿಗೆ ಮಾಡಲಾರದೆ ಯಾವ ದೇವರಿಗೂ ಹೋಗಕೂಡದು. ತೊಟ್ಟಿಲ ಕೆಳಗೆ ತುಂಬಿದ ಚರಿಗೆಯಿಟ್ಟು ಪೂಜಿಸಿ, ಚಿಕ್ಕಮಕ್ಕಳಿಗೆ ಉಡಿತುಂಬುವ ಪದ್ಧತಿ. ಕೊನೆ ಶುಕ್ರವಾರ ಅಂದರೆ ೫ನೇ ಶುಕ್ರವಾರ ಹೀಗೆ ಮಾಡುವರು. ಇದನ್ನೇ ಶೆಟ್ಟೆವ್ವನಿಗೆ ಮಾಡುವುದು ಎನ್ನುತ್ತಾರೆ. ಹೆಣ್ಣುಮಗುವಾದರೆ, ೩ ಗಂಡು, ೨ ಹೆಣ್ಣುಮಕ್ಕಳಿಗೆ ಉಡಿತುಂಬಬೇಕು. ಗಂಡುಮಗುವಾದರೆ, ೨ ಗಂಡು ೩ ಹೆಣ್ಣುಮಕ್ಕಳಿಗೆ ಉಡಿ ತುಂಬಬೇಕು. ತೊಟ್ಟಿಲ ಕೆಳಗಿನ ಶೆಟ್ಟೆವ್ವನ ಚರಿಗೆಯಲ್ಲಿಯ ನೀರಿನಿಂದ ಮರುದಿನ ಮಗುವನ್ನು ಎರೆಯುತ್ತಾರೆ. ಇದನ್ನು ಪ್ರತಿಯೊಬ್ಬರು ಮನೆಯಲ್ಲಿ ಮಾಡುತ್ತಾರೆ. ಎಲ್ಲ ಜಾತಿಯವರೂ ಈ ಆಚರಣೆ ಮಾಡುತ್ತಾರೆ. ಹಡೆದವರು ದೇವಸ್ಥಾನಕ್ಕೆ ಹೋಗಿ, ಉಡಿತುಂಬಿ, ಕಾಯಿ ಒಡೆಸಿಕೊಂಡೇ ಬರಬೇಕು. ಮಕ್ಕಳಿಗೆ ಯಾವುದೇ ಬಾಧೆ ತಟ್ಟದಿರಲಿ ಎಂಬ ಕಾರಣದಿಂದ ಈ ದೇವಿಗೆ ಹೆಣ್ಣುಮಕ್ಕಳು ನಡೆದುಕೊಳ್ಳುತ್ತಾರೆ. ಒಟ್ಟಿನಲ್ಲಿ ಮಕ್ಕಳ ಸಲುವಾಗಿ ಬಾಣಂತಿಯರು ಮನೆಯಲ್ಲಿ ಹೆಣ್ಣುಮಕ್ಕಳು ಶೆಟ್ಟೆವ್ವನ ಮರ ಅಥವಾ ಶೆಟ್ಟೆವ್ವನ ತೋಟಕ್ಕೆ ಹೋಗಿ ಆಚರಿಸುವ ಸಾಂಪ್ರದಾಯಿಕ ಆಚರಣೆಯಿದು.

ಒಟ್ಟು ಉತ್ತರಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಶಕ್ತಿದೇವತೆಗಳ ಸೃಷ್ಟಿ, ಅವುಗಳ ಹಬ್ಬ-ಜಾತ್ರೋತ್ಸವ ಹಾಗೂ ಆಚರಣೆಗಳಲ್ಲಿ ನಮ್ಮ ಸಾಂಸ್ಕೃತಿಕ ಪರಂಪರೆಯ ಬಹುಮುಖ್ಯ ಅಂಶಗಳು ಅಡಗಿರುವುದು ಗಮನಾರ್ಹ. ಇವು ನಮ್ಮ ಸಂಸ್ಕೃತಿಯ ಮಹತ್ವದ ದಾಖಲೆಗಳು. ಗ್ರಾಮೀಣ

ಬದುಕು–ಸಂಸ್ಕೃತಿ ಇವುಗಳಲ್ಲಿ ಅಂಗರ್ತವಾಗಿದೆ, ಜೀವಂತವಾಗಿದೆ. ಸಾಮಾಜಿಕ, ಸಾಂಸ್ಕೃತಿಕ, ಕಲಾತ್ಮಕ, ಹಾಗೂ ಧಾರ್ಮಿಕ ನೆಲೆಯಲ್ಲಿಯೂ ಶಕ್ತಿದೇವತೆಗಳ ಅಧ್ಯಯನದ ಮಹತ್ವ ಇರುವುದನ್ನು ಗುರುತಿಸಬಹುದು.

ಎಲ್ಲಮ್ಮನ ಐತಿಹ್ಯಗಳು: ಕೆಲವು ವೇಳೆ ಸತ್ಯ ಘಟನೆಯೊಂದರಿಂದಲೇ ಹುಟ್ಟಿಕೊಂಡಿರಬಹುದು ಎಂದರೆ ಅದು ನಿಜವಾದ ಚರಿತ್ರೆಯನ್ನೊಳಗೊಂಡಿರಬಹುದು. ಆದರೆ ಯಾವತ್ತೂ ಅದರಲ್ಲಿ ಚರಿತ್ರೆಯೇ ಇರುತ್ತದೆಂದು ಅಪೇಕ್ಷೆ ಪಡುವುದು ಮಾತ್ರ ತಪ್ಪು. ಹೆಚ್ಚಿನ ಸಂದರ್ಭಗಳಲ್ಲಿ ಐತಿಹ್ಯದಲ್ಲಿ ಎಳ್ಳಷ್ಟೂ ಇರದೆ ಇರಲೂಬಹುದು. ಆದರೆ ಐತಿಹ್ಯ ಚರಿತ್ರೆಯ ವೇಷವನ್ನು ಮಾತ್ರ ತಪ್ಪದೇ ಧರಿಸುತ್ತದೆ. ಅಷ್ಟೇ ಅಲ್ಲ, ಅದು ಅದರ ಪ್ರದಾನ ಲಕ್ಷಣಗಳಲ್ಲಿ ಒಂದು. ಅನೇಕ ವೇಳೆ ಐತಿಹ್ಯಕ್ಕೂ ಪುರಾಣಕ್ಕೂ ಹೋಲಿಕೆಯಿರುತ್ತದೆ. ಹಲವಾರು ಸಂದರ್ಭಗಳಲ್ಲಿ ಐತಿಹ್ಯ ಮತ್ತು ಪುರಾಣಗಳ ನಡುವಿನ ಅಂತರ ತಿಳಿಯುವುದು. ಕಷ್ಟದ್ದಾಗುತ್ತದೆಂದು ಜಾನಪದ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಹೆಚ್ಚಿನ ಸಂದರ್ಭಗಳಲ್ಲಿ ಸಾಮಾನ್ಯ ಜನತೆ ಕೂಡ ಪುರಾಣವನ್ನು ಅದು ಚರಿತ್ರೆಯಲ್ಲ ಎಂದು ತಿಳಿದಿರುತ್ತದೆ. ಆದರೆ ಐತಿಹ್ಯದ ಬಗೆಗೆ ಜನಸಾಮಾನ್ಯರಲ್ಲಿ ಈ ಧೋರಣೆ ಕಂಡುಬರುವುದಿಲ್ಲ. ಆದ್ದರಿಂದ ಪುರಾಣ ಮತ್ತು ಐತಿಹ್ಯಗಳಲ್ಲಿ ಇದೊಂದು ಪ್ರಮುಖ ವ್ಯತ್ಯಾಸವೆನ್ನಬಹುದು. ಮೇಲಾಗಿ ಪುರಾಣಗಳ ದೀರ್ಘತೆ ಐತಿಹ್ಯಗಳಲ್ಲಿರುವುದಿಲ್ಲ. ಅನೇಕ ವೇಳೆ ನಂಬಿಕೆಗಳು ಐತಿಹ್ಯಗಳ ಸೃಷ್ಟಿಗೆ ಕಾರಣವಾಗಬಹುದು. ಎಲ್ಲಮ್ಮ ಸಿದ್ದರನ್ನು ನಿಗ್ರಹಿಸಿದಳು ಎಂದು ಹೇಳಲಾಗುವ ಐತಿಹ್ಯದ ಹುಟ್ಟಿಗೆ ಇಂಥ ನಂಬಿಕೆಯೊಂದು ಕಾರಣವಾಗಿದ್ದಂತೆ ತೋರುತ್ತದೆ. ಈ ವಿಷಯದ ಹೆಚ್ಚಿನ ಚರ್ಚೆಯನ್ನು ಮುಂದೆ ಕಾಣಬಹುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ನಂಬಿಕೆ ತೀರ ಚಿಕ್ಕದಾದ ಘಟಕ. ಐತಿಹ್ಯ ನಂಬಿಕೆಯಷ್ಟು ಚಿಕ್ಕದಾಗಿರುವುದಿಲ್ಲ ಅದೇ ರೀತಿ ಪುರಾಣದ ದೀರ್ಘತೆಯೂ ಐತಿಹ್ಯಕ್ಕಿರುವುದಿಲ್ಲವೆಂಬುದು ಸ್ಪಷ್ಟ.

ಇನ್ನು ಸಾಹಿತ್ಯಕ್ಕೂ ಐತಿಹ್ಯಕ್ಕೂ ತೀರ ಹತ್ತಿರದ ಸಂಬಂಧವಿದೆ. ನಮ್ಮಲ್ಲಿರುವ ಶರಣರ–ದಾಸರ ಚರಿತ್ರೆಗಳಲ್ಲಿನ ಹೆಚ್ಚಿನ ಅಂಶ ಐತಿಹ್ಯವಾಗಿದೆ. ಇತಿಹಾಸ ಕಾವ್ಯಗಳೆಂದು ತಿಳಿಯಲಾಗುವ ಕುಮಾರರಾಮನ ಸಾಂಗತ್ಯಗಳು, ಕೆಳದಿ ನೃಪ ವಿಜಯ ಚಿಕ್ಕದೇವರಾಯ ವಂಶಾವಳಿ ಮುಂತಾದ ಕೃತಿಗಳಲ್ಲಿ ಐತಿಹ್ಯದ ಅಂಶ ಗಮನಾರ್ಹ ಪ್ರಮಾಣದಲ್ಲಿ ಸೇರಿಕೊಂಡಿರುವುದನ್ನು ನಾವು ಕಾಣಬಹುದು.

ಐತಿಹ್ಯ ಹೆಚ್ಚಿನ ಸಂದರ್ಭಗಳಲ್ಲಿ ಒಂದು ಚಿಕ್ಕ ಕಥಾನಕವಾಗಿರುತ್ತದೆ. ನಂಬಿಕೆಗಳು, ಧಾರ್ಮಿಕ ಅಂಶಗಳು, ಆಚರಣೆಗಳು, ವ್ಯಕ್ತಿಗಳು, ಸ್ಥಳೀಯ ನೈಸರ್ಗಿಕ ವೈಚಿತ್ರ್ಯಗಳು, ಚಾರಿತ್ರಿಕ

ಘಟನೆಗಳು ಮುಂತಾದವು ಐತಿಹ್ಯ ಸೃಷ್ಟಿಗೆ ಮೂಲ ಪರಿಕರಗಳನ್ನು ಒದಗಿಸಬಹುದು. ಉದಾಹರಣೆಗೆ ಸವದತ್ತಿಯ ಸಮೀಪದ ನವಿಲುತೀರ್ಥದ ಬಗೆಗಿನ ಐತಿಹ್ಯವನ್ನು ನೋಡಬಹುದು. ಈ ಭಾಗದಲ್ಲಿ ಒಡಕು ಹೊಳೆ ಎಂದು ಕರೆಯುವ ಪ್ರದೇಶದಲ್ಲಿ ಮಲಪ್ರಭಾ ನದಿ ಮುನವಳ್ಳಿಯ ಮೇಲ್ಗಡೆಯ ಗುಡ್ಡವನ್ನು ಸೀಳಿಕೊಂಡು ಎತ್ತರದಿಂದ ಆಳಕ್ಕೆ ಧುಮುಕುತ್ತದೆ. ಗುಡ್ಡದ ಮುಂಭಾಗದಲ್ಲಿ ನದಿಯ ಎರಡೂ ಬದಿಯ ಗುಡ್ಡದ ಮೇಲೆ ಎರಡು ಹೋಳು ಬಂಡೆಗಳಿವೆ. ಇವುಗಳನ್ನು ಕುರಿತಂತೆ ಈ ಭಾಗದಲ್ಲಿ ಬಹು ಪ್ರಸಿದ್ಧವಾದ ಐತಿಹ್ಯವೊಂದು ಪ್ರಚಲಿತವಾಗಿದೆ. ಮಲಪೂರಿ–ಮಲ್ಲವ್ವ ಬೆಟ್ಟದಲ್ಲಿ ಹುಟ್ಟಿ ರಭಸದಿಂದ ಹರಿಯುತ್ತ ಪೂರ್ವಾಭಿಮುಖವಾಗಿ ಬಂದಳಂತೆ. ಅವಳು ಈ ಪ್ರದೇಶದ ಬಳಿಗೆ ಬಂದಾಗ ಅವಳ ಪ್ರವಾಹಕ್ಕೆ ಎದುರಾಗಿ ಗುಡ್ಡ ಅಡ್ಡವಾಗಿ ಹತ್ತಿತು. ಆದ್ದರಿಂದ ಅವಳು ದಕ್ಷಿಣಕ್ಕೆ ತಿರುಗಿ ಬೆಳವಲದ ಕಡೆಗೆ ಹೊರಟಳು. ಆಗ ಗುಡ್ಡದ ಮೇಲೆ ಆಡುತ್ತಿದ್ದ ನವಿಲೊಂದು ಅವಳನ್ನು ಕಂಡು ಬೆಟ್ಟಕಂಜಿ ಬೆಳವಲಾ ಸೇರತಾಳ ಮಲ್ಲಿ ಎಂದು ಅಣಕವಾಡಿತು. ಅದನ್ನು ಕೇಳಿ ಕುಪಿತಳಾದ ಮಲ್ಲವ್ವ ಪುನಃ ತನ್ನ ಪ್ರವಾಹದ ದಿಕ್ಕನ್ನು ಬದಲಿಸಿ ಬಂದು ನವಿಲು ನಿಂತಿದ್ದ ಭಾಗದಲ್ಲಿಯೇ ಧುಮ್ಮಿಕ್ಕಿ ಹರಿದಳು. ಅವಳ ರಭಸಕ್ಕೆ ಗುಡ್ಡ ಸೀಳಿ ಇಬ್ಭಾಗವಾಗಿ ದಾರಿ ಕೊಟ್ಟಿತು. ಜೊತೆಗೆ ಅವಳನ್ನು ಅಣಕಿಸಿದ್ದ ನವಿಲು ಅವಳ ಕೋಪಕ್ಕೆ ತುತ್ತಾಗಬೇಕಾಯಿತು. ಗುಡ್ಡದ ಮೇಲೆ ಕೇಕೆ ಹಾಕಿ ಕುಣಿಯುತ್ತಿದ್ದ ನವಿಲನ್ನು ಮಲ್ಲವ್ವ ಸೀಳಿ ಎರಡು ತುಂಡಾಗಿಸಿ ಆಚೀಚೆ ಎಸೆದಳು. ಅವೆರಡು ತುಂಡುಗಳು ಈಗ ಮೇಲೆ ಹೇಳಿದ ಕಲ್ಲುಗಳಾಗಿ ಗುಡ್ಡದ ಎರಡೂ ಬದಿಗೆ ಬಿದ್ದುಕೊಂಡವು. ಎಂತಲೇ ನದಿಯ ಆ ಪ್ರದೇಶಕ್ಕೆ ನವಿಲು ತೀರ್ಥ ಎಂದು ಹೆಸರು ಬಂತು ಎಂಬ ಇತಿಹಾಸವಿದೆ.

ಇದೇ ರೀತಿ ಮೇಲೆ ಹೇಳಿದ ಇತರ ಸಂಗತಿಗಳೂ ಐತಿಹ್ಯ ಸೃಷ್ಟಿಗೆ ಕಾರಣವಾಗಬಹುದು ಇರಲಿ. ಇಲ್ಲಿ ಎಲ್ಲಮ್ಮನನ್ನು ಕುರಿತ ಮುಖ್ಯವಾದ ಐತಿಹ್ಯಗಳನ್ನು ಈಗ ನೋಡಬಹುದು. ಎಲ್ಲಮ್ಮನ ಐತಿಹ್ಯಗಳ ಚರ್ಚೆಯಲ್ಲಿ ಪ್ರಾಸಂಗಿಕವಾಗಿ ಪೌರಾಣಿಕ ಅಂಶಗಳೂ ನಂಬಿಕೆಗಳೂ ಆತಂಕಗೊಳ್ಳಬೇಕಾದುದು ಅನಿವಾರ್ಯ. ಒಟ್ಟಿನಲ್ಲಿ ಐತಿಹ್ಯಗಳ ಮೇಲೆ ಗಮನವನ್ನು ಪ್ರಧಾನವಾಗಿ ಕೇಂದ್ರೀಕರಿಸಿ ಇಲ್ಲಿ ಚರ್ಚಿಸಲಾಗಿದೆ.

ಎಲ್ಲಮ್ಮನ ಮೂಲವನ್ನು ಕುರಿತಂತೆ ಹಲವು ಐತಿಹ್ಯಗಳು, ನಂಬಿಕೆಗಳು ಪ್ರಚಲಿತವಾಗಿವೆ. ಅವುಗಳಲ್ಲಿ ಪ್ರಧಾನವಾದುವು ಎರಡು. ಒಂದರ ಪ್ರಕಾರ ಅವಳು ಉತ್ತರ ದೇಶದಿಂದ ಕರ್ನಾಟಕಕ್ಕೆ ಬಂದವಳೆಂದು ತಿಳಿಯುತ್ತದೆ. ಅವಳು ಕಾಶ್ಮೀರದೇಶದವಳು ರೇಣುಕ ರಾಜನ ಮಗಳು ಜಮದಗ್ನಿಯನ್ನು ಲಗ್ನವಾಗಿದ್ದಳೆಂಬುದು ಅದರಿಂದ ವ್ಯಕ್ತವಾಗುವ ವಿಷಯ. ಈ ವಿಷಯಕ್ಕೆ ಸಂಬಂಧಿಸಿದಂತೆ ಪುರಾಣಗಳಲ್ಲೂ ಜಾನಪದ ಕಥೆಗಳೂ ಸಾಕಷ್ಟು ಪ್ರಚಲಿತವಾಗಿವೆ.

ಎಂದರೆ ಈ ಐತಿಹ್ಯಕ್ಕೆ ಸಾಕಷ್ಟು ಪ್ರಸಾರವಿದೆಯೆಂದು ಹೇಳಬೇಕು. ಆದರೆ ಇದಕ್ಕೆ ವಿರುದ್ಧವಾಗಿ ಅವಳು-ಉಗರಗೊಳ್ಳದವಳೇ ಆದ ಹೆಣ್ಣುಮಗಳು ಎಂದು ಒಂದು ಐತಿಹ್ಯವಿದೆ. ಮನೆಯಿಂದ ಪರಿತ್ಯಕ್ತಳಾದ ಅವಳು ರೋಗಿಯಾಗಿ ಅಡ್ಡಾಡಿ ಕೊನೆಗೆ ಅದರಿಂದ ಅಂತೂ ಇಂತೂ ಮುಕ್ತಳಾದಳೆಂದು ಹೇಳಲಾಗುವ ಐತಿಹ್ಯವೂ ಅಲ್ಲಲ್ಲಿ ಕೇಳಿಬರುತ್ತದೆ.

ಇನ್ನೊಂದು ನಂಬಿಕೆಯ ಪ್ರಕಾರ ಅವಳು ಬೇವಿನ ಮರದಡಿಯ ಹುತ್ತದ ಕ್ವಾವೆಯಲ್ಲಿ ವಾಸವಾಗಿದ್ದಳೆಂದು ತಿಳಿಯುತ್ತದೆ. ಇದನ್ನು ಐತಿಹ್ಯವೆಂದು ಸ್ವೀಕರಿಸುವುದು ಕಷ್ಟ. ಇಂಥ ನಂಬಿಕೆ ಎಲ್ಲಮ್ಮನ ಬಗ್ಗೆ ಮಾತ್ರವಿರದೆ ಇನ್ನೂ ಅನೇಕ ದೇವರುಗಳ ಬಗೆಗೆ ಇರುವುದನ್ನು ಕಾಣಬಹುದು. ಉದಾಹರಣಾರ್ಥ ತಿರುಪತಿಯ ವೆಂಕಟರಮಣ ಮೈಲಾರದ ಮೈಲಾರಲಿಂಗಪ್ಪ ಮುಂತಾದ ದೇವತೆಗಳ ಬಗ್ಗೆಯೂ ರಾಮಾಯಣವನ್ನು ಬರೆದ ವಾಲ್ಮೀಕಿ ಮುಂತಾದ ವೈದಿಕ ಪರಂಪರೆಯ ವ್ಯಕ್ತಿಗಳ ಬಗೆಗೂ ಈ ನಂಬಿಕೆ ಇರುವುದನ್ನು ಇಲ್ಲಿ ಉದಾಹರಿಸಬಹುದು. ಆದ್ದರಿಂದ ಇದರ ಮೂಲ ಯಾವುದೆಂದು ನಿರ್ಧರಿಸಿ ಹೇಳುವುದು ಕಷ್ಟವೇ. ಇತಿಹಾಸಪೂರ್ವದ ಕಾಡಿನ ಸಂಸ್ಕೃತಿಯ ಪಳೆಯುಳಿಕೆ ಇದಾಗಿರುವಂತೆ ಕಾಣುತ್ತದೆ. ಒಟ್ಟಿನಲ್ಲಿ ಇದು ವಲಸೆ ಬಂದ ಐತಿಹ್ಯ ಅಥವಾ ನಂಬಿಕೆ ಎಂದು ಹೇಳಬಹುದು.

ಎಲ್ಲಮ್ಮ ಲಗ್ನವಾಗಿದ್ದಳೆಂದು ಸಂಗತಿ ಪುರಾಣ ಹಾಗೂ ಜಾನಪದ ಹಾಡುಗಳಲ್ಲಿ ಉಲ್ಲೇಖಗೊಂಡು ಬಹು ಪ್ರಸಿದ್ಧವಾಗಿದೆ. ಜಮದಗ್ನಿಯಿಂದ ಅವಳು ಐದು ಜನ ಮಕ್ಕಳನ್ನು ಕೂಡ ಪಡೆದಂತೆ ಪೌರಾಣಿಕ ಕಥೆಗಳಿವೆ. ಅದರಂತೆ ಕಾರ್ತವೀರ್ಯನಿಂದ ಜಮದಗ್ನಿಯ ಕೊಲೆಯಾಯಿತೆಂದೂ ಅದಕ್ಕಾಗಿ ಅವಳು ವಿಧವೆಯಾದಳೆಂದೂ ತಿಳುವಳಿಕೆಯಿದೆ. ಇದೇ ನಿಮಿತ್ತ ಸವದತ್ತಿಯ ದೇವಸ್ಥಾನದಲ್ಲಿ ಹೊಸ್ತಿಲ ಹುಣ್ಣಿವೆಯನ್ನು ರಂಡೆ ಹುಣ್ಣಿವೆಯೆಂದೂ ತರುವಾಯದ ಬನದ ಹುಣ್ಣಿವೆಯನ್ನು ಮುತ್ತೈದೆ ಹುಣ್ಣಿವೆಯೆಂದೂ ಆಚರಿಸುವುದು ವಾಡಿಕೆಯಾಗಿದೆ. ಮೊದಲಿನ ಹುಣ್ಣಿವೆಯೆಂದು ದೇವಿಯ ಕುಂಕುಮ ಮಂಗಳಸೂತ್ರಗಳ ವಿಸರ್ಜನೆ ನಡೆದು ಅಂದು ಗುಡ್ಡಕ್ಕೆ ಬಂದ ಜೋಗತಿಯರು ತಮ್ಮ ಕೈಬಳೆಗಳನ್ನು ಒಡೆದುಕೊಳ್ಳುವರು. ಅದೇ ರೀತಿ ಬನದ ಹುಣ್ಣಿವೆಗೆ ದೇವಿಗೆ ಪುನಃ ಮಂಗಳಸೂತ್ರ ಧಾರಣೆ ನಡೆದು ಜೋಗತಿಯರು ಬಳೆ ಧರಿಸುವ ಕಾರ್ಯಕ್ರಮ ನೆರವೇರುವುದು. ಈ ವಿಧಿಕ್ರಿಯೆಗಳನ್ನು ನೋಡಿದರೆ ಎಲ್ಲಮ್ಮ ಲಗ್ನವಾದದ್ದು ನಿಜವೆಂದು ಹೇಳಬೇಕಾಗುತ್ತದೆ. ಇದರ ಸಮೀಪದಲ್ಲಿ ನಿಲ್ಲುವ ಇನ್ನೊಂದು ಐತಿಹ್ಯ. ಕೋಲಾರದ ಕೋಲಾರಮ್ಮ ಅಥವಾ ರೇಣುಕೆಯ ಬಗೆಗೂ ಇದೆ. ಕೋಲಾರಮ್ಮ ತನ್ನ ಗಂಡ ಸತ್ತದ್ದರಿಂದ ಅವಳು ಸತ್ತೆಹೋದಳೆಂದೂ ಅಲ್ಲಿನ ಜನ ನಂಬಿಕೆಯಾಗಿದೆ. ಎಂದರೆ ಎಲ್ಲಮ್ಮ ಒಬ್ಬ ಮಹಾಸತಿ ಎಂದು ಹೇಳಬೇಕಾಗುತ್ತದೆ. ಆದರೆ ಈ ಐತಿಹ್ಯಕ್ಕೆ ಹೆಚ್ಚಿನ ಬೆಂಬಲ

ಕಂಡುಬರುವುದಿಲ್ಲ. ಅವಳ ಲಗ್ನವಾಗಿತ್ತೆಂಬ ಅಂಶಕ್ಕೆ ಮಾತ್ರ ಇದರಿಂದ ಪುಷ್ಠಿ ದೊರೆಯುತ್ತದೆ. ಚಂದ್ರಗುತ್ತಿಯಲ್ಲಿಯೂ ಒಂದು ರೇಣುಕಾ ದೇವಸ್ಥಾನವಿದೆ. ಅಲ್ಲಿ ದೇವಿಯನ್ನು ರೇಣುಕೆ ಎಲ್ಲಮ್ಮ ಇತ್ಯಾದಿಯಾಗಿ ಕರೆಯುವುದರ ಜೊತೆಗೆ ಕನ್ನಮ್ಮ ಎಂದೂ ಹೆಸರಿಸಲಾಗುತ್ತದೆ. ಅಲ್ಲಿ ದೇವಿಯನ್ನು ರೇಣುಕೆ ಎಲ್ಲಮ್ಮ ಇತ್ಯಾದಿಯಾಗಿ ಕರೆಯುವುದರ ಜೊತೆಗೆ ಕನ್ನಮ್ಮ ಎಂದೂ ಹೆಸರಿಸಲಾಗುತ್ತದೆ. ಕನ್ಯೆಯೆಂದು ಭಾವಿಸುವುದಾದರೆ ಅವಳು ಲಗ್ನವಾದದ್ದು ಅಸಂಭವಾಗುತ್ತದೆ. ದೇವಸ್ಥಾನದಲ್ಲಿ ದವನದ ಹುಣ್ಣಿಮೆಯನ್ನು ಮುತ್ತೈದೆ ಹುಣ್ಣಿವೆಯೆಂದು ಆಚರಿಸುವುದಾಗಿ ತಿಳಿದು ಬರುತ್ತದೆ. ಹಾಗಾದರೆ ಸವದತ್ತಿಯಲ್ಲಿ ನಡೆಯುವ ರಂಡೆ-ಹುಣ್ಣಿವೆ ಮತ್ತು ಮುತ್ತೈದೆ ಹುಣ್ಣಿಮೆಗಳ ಆಚರಣೆಗೆ ಏನು ಅರ್ಥ? ವಿವರಿಸುವುದು ಕಷ್ಟ.

ಇದಕ್ಕೆ ದೇವದಾಸಿಯರ ಜೀವನ ವಿಧಾನಗಳನ್ನೂ ನಂಬಿಕೆಗಳನ್ನೂ ಆಳವಾಗಿ ಅಧ್ಯಯನ ಮಾಡುವುದು ಅವಶ್ಯವೆನಿಸುತ್ತದೆ. ಈ ಎರಡೂ ಹುಣ್ಣಿವೆಯ ಆಚರಣೆಗಳಿಗೆ ಅವುಗಳಲ್ಲಿ ಉತ್ತರ ದೊರೆಯಬಹುದೋ ಏನೋ? ಗೊಂದಲಿಗರು ಹೇಳುವ ಕಥೆಯೊಂದರಂತೆ-ಓರುಗಲ್ಲಿನ ರಾಜರು ರೇಣುಕೆಯನ್ನು ಲಗ್ನವಾಗ ಬಯಸಿದನೆಂದು ತಿಳಿದು ಬರುತ್ತದೆ. ರೇಣುಕೆ ಮಹಾಮಾಯೆ ಆದಿಮಾತೆಯಾದುದರಿಂದ ಅವಳು ಆ ರಾಜನನ್ನೇ-ಮಣಿಸಿ ತನ್ನ ದಾಸನನ್ನಾಗಿ ಮಾಡಿಕೊಂಡಳೆಂತಲೂ ಅವನು ಪಡ್ಡಲಿಗೆ ಹಿಡಿದು ಜೋಗಪ್ಪನಾದನೆಂತಲೂ ಅದರಲ್ಲಿ ವರ್ಣನೆಗಳಿವೆ.

ಪರಶುರಾಮ-ಎಲ್ಲಪ್ಪ :

ಪುರಾಣಗಳ ಪ್ರಕಾರ ಈತ ರೇಣುಕೆಯ ಐದು ಜನ ಮಕ್ಕಳಲ್ಲಿ ಒಬ್ಬ. ಉಳಿದ ನಾಲ್ಕು ಜನರು ತಂದೆ ಆಜ್ಞೆ ಮಾಡಿದಾಗಲೂ ತಾಯಿಯ ಕೊಲೆಗೆ ಹಿಂದೆಗೆಯಲು, ಈತ ಮುಂದಾಗಿ ತಾಯಿಯ ತಲೆ ಕತ್ತರಿಸಿದನೆಂದು ಹೇಳಲಾಗುತ್ತದೆ. ಅದೇ ರೀತಿ ಕಾರ್ತವೀರ್ಯನನ್ನು ಕೊಂದುದು ಕ್ಷತ್ರಿಯ ವಂಶವನ್ನು ನಿರ್ಮೂಲ ಮಾಡಿದ್ದು ತಂದೆಯ ಆಶೀರ್ವಾದದಿಂದ ಪುನಃ ತಾಯಿಯನ್ನು ಬದುಕಿಸಿದ್ದು ಮುಂತಾದ ಸಂಗತಿಗಳ ಉಲ್ಲೇಖ ಪುರಾಣಗಳಲ್ಲಿಯೂ ಜಾನಪದ ಹಾಡುಗಳಲ್ಲಿಯೂ ಕಂಡುಬರುತ್ತದೆ. ಇವೆಲ್ಲ ಪುರಾಣದ ವ್ಯಾಪ್ತಿಗೆ ಸೇರುವ ಅಂಶಗಳು. ಆದರೆ ಮತ್ತೊಂದು ಜನಪದ ಹಾಡಿನಂತೆ ಪರಶುರಾಮನನ್ನು ಎಲ್ಲಮ್ಮ ಪವಾಡದ ರೀತಿಯಲ್ಲಿ ಹೆತ್ತಳೆಂದು ತಿಳಿದುಬರುತ್ತದೆ. ಆದ್ದರಿಂದ ತಾಯಿಯ ಶೀಲವನ್ನು ಶಂಕಿಸಿದ ಪರಶುರಾಮ ತಾಯಿಯ ಕೊಲೆ ಮಾಡಿದನೆಂಬ ನಂಬಿಕೆ ಬಹು ಮಹತ್ತರವಾಗಿದೆ. ಆದರೆ ಆಚರಣೆಯಲ್ಲಿ ಇದಕ್ಕೆ ಆಧಾರಗಳಿರುವಂತೆ ತೋರದು. ಜಾನಪದದ ನಂಬಿಕೆಯಂತೆ ಆಚರಣೆಗಳನ್ನು ನೋಡಿದರೆ ಈತನು ಕ್ಷೇತ್ರಪಾಲಕ ದೇವತೆ ಎನ್ನಬೇಕಾಗುತ್ತದೆ. ಗೊಂದಲಿಗರು ತಮ್ಮ ಗೊಂದಲದ

ಕೊನೆಯಲ್ಲಿ ಈ ಪರಶುರಾಮನ ಪೂಜೆಯನ್ನು ತಪ್ಪದೇ ಕೈಕೊಳ್ಳುವರು. ಅದೇ ರೀತಿ ಎಲ್ಲಮ್ಮನ ಗುಡ್ಡಕ್ಕೆ ಹೋಗಿ, ತಮ್ಮೂರಿಗೆ ತಿರುಗಿ ಬಂದ ಭಕ್ತರು ಪರಶುರಾಮನನ್ನು ಕಳುಹಿಸುವ ವಿಧಿ ಕ್ರಿಯೆಯನ್ನು ತಪ್ಪದೇ ಆಚರಿಸುವರು. ಹೀಗೆ ಆಚರಿಸುವ ಕಾರಣವೆಂದರೆ ಪರಶುರಾಮ ಭಕ್ತರ ರಕ್ಷಣಾರ್ಥ ಅವರ ಬೆಂಗಾವಲಿಗೆ ಬಂದಿರುವನೆಂದೂ ಅದಕ್ಕಾಗಿ ಅವನನ್ನು ಪೂಜಿಸಿ ಕಳಿಸಬೇಕಾದುದು ಅನಿವಾರ್ಯವೆಂದೂ ಭಾವಿಸಲಾಗುತ್ತದೆ. ಇವೆರಡೂ ಕ್ಷೇತ್ರಪಾಲಕ ದೇವತೆಗಳಿಗೆ ಸಲ್ಲುವ ಪೂಜೆಗಳೇ ಎಂಬುದು ನಿಸ್ಸಂಶಯ. ಈ ಸಂಗತಿಯನ್ನು ಬೆಂಬಲಿಸುವಂತೆ ಪರಶುರಾಮನ ಗುಡಿಯು ಗುಡ್ಡದಲ್ಲಿ ಮುಖ್ಯ ದೇವಾಲಯದಿಂದ ತಕ್ಕಷ್ಟು ದೂರ ದಕ್ಷಿಣಕ್ಕೆ ಇರುವುದನ್ನು ಕಾಣಬಹುದು. ಇದು ಕೂಡ ಪರಶುರಾಮನು ಕ್ಷೇತ್ರ ಪಾಲಕನೆಂಬುದನ್ನು ಸಮರ್ಥಿಸುತ್ತದೆ.

ಕ್ಷೇತ್ರಪಾಲಕ ದೇವತೆಗಳು ಯಾವಾಗಲೂ ಉಗ್ರ, ಭೈರವ, ಕಾಳಭೈರವ, ಕಾಳಭೈರವಿ ಮುಂತಾದವರು ನಮ್ಮ ದೇವಾಲಯಗಳಲ್ಲಿ ಕ್ಷೇತ್ರಪಾಲಕ ದೇವರುಗಳಾಗಿರುತ್ತಾರೆ. ಇವರೆಲ್ಲ ಉಗ್ರದೇವತೆಗಳೇ. ಪರಶುರಾಮನು ಗಂಡುಗೊಡಲಿ ಹಿಡಿದಿರುವುದು. ಕಾರ್ತವೀರ್ಯ ಮತ್ತು ಇತರ ಕ್ಷತ್ರಿಯರನ್ನು ಅವನು ಸಂಹರಿಸಿದನೆಂದು ಹೇಳುವುದು ಅವನ ಈ ಹಿನ್ನೆಲೆಗೆ ಯೋಗ್ಯವೇ ಆಗಿದೆ. ಪುರಾಣ–ಜಾನಪದ ಕಥೆಗಳಲ್ಲಿ ಈ ವಿಷಯಕ್ಕೆ ಮಾಹಿತಿ ದೊರೆಯುತ್ತದೆ. ದೇವಿಯ ಸೇವೆಗೆ ಸದಾ ಸನ್ನದ್ಧನಾಗಿ ನಿಂತಿರುವ ದೇವತೆಯಾದುದರಿಂದ ಅವನನ್ನು ದೇವಿಯ ಮಗನೆಂದು ಕಲ್ಪಿಸಲಾಯಿತೆಂದು ಹೇಳಬಹುದು. ಗಂಡನಿಲ್ಲದೇ ಪರಶುರಾಮನನ್ನು ಹೆತ್ತಳೆಂದು ಹೇಳುವುದುಮಾತ್ರ ವಿಶೇಷ ಆಶಯದಿಂದ ಕೂಡಿರುವಂತೆ ಕಾಣುತ್ತದೆ. ದೇವದಾಸಿ ಪದ್ಧತಿಯನ್ನು ಸಮರ್ಥಿಸುವ ಸಲುವಾಗಿ ಹುಟ್ಟಿದ ಕಥೆ ಇದೆ ಎಂಬಂತೆ ತೋರುತ್ತದೆ. ಎಂದರೆ ಆಚರಣೆಯ ಮೂಲಕ ಹುಟ್ಟಿದ ಐತಿಹ್ಯವಿದು ಎಂದು ಹೇಳಬೇಕಾಗುತ್ತದೆ. ಆನಪದರು ದೇವಿಯ ಗುಡಿಯಲ್ಲಿ ಪೂಜೆಯ ಕಾಲಕ್ಕೆ ನಡೆಯುವ ವಾದ್ಯ ವೈಭವದ ಸಪ್ಪಳ ಪರಶುರಾಮನ ಗುಡಿಯಲ್ಲಿ ಕೇಳುವುದಿಲ್ಲವೆಂದು ಹೇಳುತ್ತಾರೆ. ಈ ಸಂಗತಿ ಪರಿಶೀಲನಾರ್ಹವಾಗಿದೆ. ತನ್ನ ತಲೆಯನ್ನೇ ಕತ್ತರಿಸಿದ್ದಕ್ಕಾಗಿ ಎಲ್ಲಮ್ಮನು ಪರಶುರಾಮನಿಗೆ ಕೊಟ್ಟ ಶಾಪವೇ ಈ ಸಪ್ಪಳ ಕೇಳದಿರಲು ಕಾರಣವೆಂದು ಜನಪದರ ಹೇಳಿಕೆ. ಬಹುಶಃ ಈ ಎರಡೂ ದೇವಸ್ಥಾನಗಳು ನಿರ್ಮಿತವಾದ ಕೊಳ್ಳಗಳ ವಿಶಿಷ್ಟ ಪರಿಸರವೇ ಧ್ವನಿ ತರಂಗಗಳ ಪ್ರಸರಣಕ್ಕೆ ಅಡ್ಡಿಯುಂಟು ಮಾಡುವ ಸಾಧ್ಯತೆಯಿದೆ. ಇಂಥ ನೈಸರ್ಗಿಕ ಸನ್ನಿವೇಶಗಳಿಗೆ ತಕ್ಕಂತೆ ಅವನು ವಿವರಿಸುವ ಅನೇಕ ಐತಿಹ್ಯಗಳು ಸೃಷ್ಟಿಗೊಳ್ಳುವವೆಂಬ ಸಂಗತಿಯನ್ನು ಗಮನಿಸಬಹುದು.

ಮಾತಂಗಿ–ಸತ್ಯವ್ವ :

ಮಾತಂಗಿ ಹೊಲೆಯ ಅಥವಾ ಮಾದಿಗ ಜಾತಿಯವಳು ಎಂಬ ಬಗ್ಗೆ ಎಲ್ಲೆಡೆ ಏಕಾಭಿಪ್ರಾಯ ಕಂಡುಬರುತ್ತದೆ. ಪುರಾಣಗಳಲ್ಲಿ ಇವಳ ಪ್ರಸಕ್ತಿ ಇರುವಂತೆ ತೋರದು. ಇವಳು ಎಲ್ಲಮ್ಮನಿಗೆ ಕುಷ್ಠ–ತೊನ್ನು ಅಥವಾ ವಿಪರೀತ ಕಜ್ಜಿಗಳುಂಟಾದಾಗ ಅವಳನ್ನು ಉಪಚರಿಸಿದಳೆಂದು ಐತಿಹ್ಯವಿದೆ. ಅದೇ ರೀತಿ ಜೋಗುಳ ಬಾವಿಯ ಸತ್ಯವ್ವ ಎಲ್ಲವ್ವನನ್ನು ಸೇವಿಸಿದಳಂತೆ. ಇವೆಲ್ಲ ಶುದ್ಧ ಜನಪದೀಯವಾದ ಅಂಶಗಳು. ದೇವಸ್ಥಾನಕ್ಕೆ ಬರುವ ಭಕ್ತರು ಹುರುಕು–ಕಜ್ಜಿಗಳಿಂದ ಗುಣ ಹೊಂದಬೇಕೆಂದು ಅಥವಾ ಹೊಂದಿದ್ದಕ್ಕಾಗಿ, ದೇವಿಗೆ ಉಪ್ಪನ್ನು ಅರ್ಪಿಸುವ ಪದ್ಧತಿಯಿದೆ. ಒಂದು ವಿಧದಲ್ಲಿ ಇದೂ ಕೂಡ ಮಾತಂಗಿ ಎಲ್ಲಮ್ಮನನ್ನು ಸೇವಿಸಿದಳೆಂದು ಐತಿಹ್ಯಕ್ಕೆ ಉಪಷ್ಟಂಭಕವಾಗಿದೆ. ಆದರೆ ಎಲ್ಲಮ್ಮನಿಗೆ ಕಜ್ಜಿ–ತೊನ್ನುಗಳಾಗಿದ್ದವೆಂಬ ಕಲ್ಪನೆಯ ಹಿನ್ನೆಲೆಯಲ್ಲಿ ಇನ್ನೊಂದು ಜಾನಪದ ನಂಬಿಕೆ ಅಂತರ್ನಿಹಿತವಾಗಿರುವಂತೆ ತೋರುತ್ತದೆ. ನಮ್ಮಲ್ಲಿ ಒಂದೊಂದು ರೋಗಕ್ಕೂ ಒಬ್ಬೊಬ್ಬ ಅಧಿದೇವತೆಯನ್ನು ಜನಪದರು ಕಲ್ಪಿಸಿದ್ದಾರೆ. ಮೈಲಿ–ಕಾಲರಾಗಳಿಗೆ, ಮೈಲಮ್ಮ–ಮಾತಮ್ಮ ಉಡುಚುಗಡ್ಡೆಗೆ ಉಡುಚಮ್ಮ ಇತ್ಯಾದಿ. ಅದೇ ರೀತಿ ಎಲ್ಲಮ್ಮ ಕಜ್ಜಿ–ತೊನ್ನುಗಳಿಗೆ ಅಧಿದೇವತೆ ಎಂಬ ನಂಬಿಕೆ ಜನಪದರಲ್ಲಿದೆ. ಈ ನಂಬಿಕೆಯಿಂದಾಗಿ ಈ ಐತಿಹ್ಯ ಸೃಷ್ಟಿಗೊಂಡಿರಬಹುದಾಗಿದೆ.

ಎಕ್ಕಯ್ಯ–ಜೋಗಯ್ಯ :

ಎಕ್ಕಯ್ಯ ಜೋಗಯ್ಯರೆಂಬ ಇಬ್ಬರು ಸಿದ್ಧಪುರುಷರ ಮಹಿಮೆಯಿಂದ ಎಲ್ಲಮ್ಮನ ಶಾಪ ಅಥವಾ ರೋಗ ನಿವಾರಣೆಯಾಯಿತೆಂಬ ನಂಬಿಕೆಯೂ ಇದೆ. ಪ್ರಮುಖ ದೇವರಿಂದ ಇತರರು ಉದ್ಧಾರವಾದ ಕಥೆಗಳೇ ಸಾಮಾನ್ಯವಾಗಿರುವಾಗ ಪ್ರಮುಖ ದೇವತೆಯೇ ಇತರರಿಂದ ಉದ್ಧಾರಗೊಂಡಳೆಂದು ಹೇಳುವ ಈ ಕಥೆ ವಿಚಿತ್ರವಾಗಿದೆ ಈ ಎಕ್ಕಯ್ಯ–ಜೋಗಯ್ಯರ ಹೆಸರುಗಳು ಏಕನಾಥ ಜೋಗಿನಾಥರೆಂದೂ ರೂಢಿಯಲ್ಲಿವೆ. ಇವರಿಬ್ಬರು ಐತಿಹಾಸಿಕ ವ್ಯಕ್ತಿಗಳಾಗಿದ್ದ ಪಕ್ಷದಲ್ಲಿ ನಾಥಪಂಥೀಯರಾಗಿದ್ದರೋ ಏನೋ ಆದರೆ ಈ ಹೆಸರುಗಳನ್ನು ಇನ್ನೊಂದು ರೀತಿಯಿಂದಲೂ ವಿವರಿಸಬಹುದೆಂದು ಕಾಣುತ್ತದೆ. ಈ ಶಬ್ದಗಳು ಜೋಗಪ್ಪ ಜೋಗಮ್ಮಗಳ ಬಾಯಲ್ಲಿ ಬೇರೆ ಬೇರೆ ರೂಪಗಳಲ್ಲಿ ಪ್ರಚಾರವಾಗಿವೆ. ಕೆಲವರು ಇವಕ್ಕೆ ಪ್ರತಿಯಾಗಿ ಎಕ್ಕಲಿಗೋ ಜೋಗವ್ವ ಎಂದು ಹೇಳುತ್ತಾರಾದರೂ ಮತ್ತೆ ಕೆಲವರು ಜೋಗವ್ವ ಎಂದೂ ಎಕ್ಕುಲ್ದೆ ಜೋಗವ್ವ ಎಂದು ಹೇಳುತ್ತಾರೆ. ದೇವರ ಹೆಸರಿನಿಂದ ಭಿಕ್ಷಾವೃತ್ತಿ ಕೈಗೊಂಡ ನೈಷ್ಠಿಕ ಭಕ್ತರು ತಮ್ಮ ಆರಾಧ್ಯ ದೇವತೆಯ ಹೆಸರು ಹೇಳುವುದು ವಾಡಿಕೆಯೇ ಹೊರತು, ಉಪದೇವತೆಗಳ ಹೆಸರನ್ನಲ್ಲ. ದಾಸಯ್ಯಗಳು ವೆಂಕಟರಮಣಾ ಗೋವಿಂದ ಎಂದು ಹೇಳಿದರೆ

ಮೈಲಾರಲಿಂಗ ಭಕ್ತರು ಏಳು ಕೋಟಿ ಏಳು ಕೋಟಿ ಎಂದು ಹೇಳುವರು. ಕೆಲವೊಬ್ಬರು ಭಿಕ್ಷೆ ಬೇಡುವಾಗ ಹೊನ್ನತ್ತೆವ್ವನ ಜೋಗವ್ವ ಎಂದು ಹೇಳುತ್ತಾರೆ. ಅಂದರೆ ಈ ಜೋಗಮ್ಮ ಹೊನ್ನತ್ತಿಯ ಹೊನ್ನಮ್ಮನ ದೇವಸ್ಥಾನದಲ್ಲಿ ಹೊರೆ ಹೊತ್ತವಳೆಂದು ಅರ್ಥ. ಆದ್ದರಿಂದ ಅವಳ ಆರಾಧ್ಯದೇವತೆ ಹೊನ್ನತ್ತಿಯ ಹೊನ್ನಮ್ಮ. ಅವಳ ಹೆಸರು ಹೇಳುತ್ತ ಭಿಕ್ಷೆ ಬೇಡುವುದು ಅವಳ ವಿಧಿ. ಆದ್ದರಿಂದ ಜೋಗಪ್ಪ ಜೋಗಮ್ಮಗಳು ಹೇಳುವ ಈ ಶಬ್ದಗಳಲ್ಲಿ ತಮ್ಮ ಆರಾಧ್ಯ ದೇವತೆಯ ಹೆಸರಿರಬೇಕಾದುದು ಅನಿವಾರ್ಯ. ಕಾರಣ ಎಕ್ಕಯ್ಯ, ಎಕ್ಕಲಗೊ, ಎಕ್ಕುಂದೀ ಎಂಬ ಪೂರ್ವಪದವು ಈ ದೇವತೆಯ ವಾಚಕವಾಗಿರಲಿಕ್ಕೆ ಸಾಕು. ಉತ್ತರಪದ ಮಾತ್ರ ತಾನು ಆ ದೇವರ ಜೋಗಪ್ಪ ಅಥವಾ ಜೋಗವ್ವ ಎಂಬುವುದನ್ನು ತಿಳಿಸಿ ಹೇಳುವ ಶಬ್ದ. ಎಕ್ಕಯ್ಯ ಎಂಬುದಕ್ಕಿಂತ ಎಕ್ಕಲಿಗೆ ಅಥವಾ ಎಕ್ಕುಂದಿ ಎಂಬುವುದು ಹೆಚ್ಚು ಸರಿಯಾದ ಶಬ್ದ ಮತ್ತು ದೇವತಾವಾಚಕವಾದುದೆಂದು ಭಾವಿಸಬೇಕು. ದೇವಾಲಯದಲ್ಲಿರುವ ಶಾಸನದಲ್ಲಿ ದೇವಿಯನ್ನು ಜತ್ತಕ ಎಂದಿರುವುದನ್ನು ಇಲ್ಲಿ ಸ್ಮರಿಸಬಹುದು. ಒಟ್ಟಿನಲ್ಲಿ ಈ ಎಕ್ಕಲಿಗೆ, ಎಕ್ಕುಂದಿ, ಜತ್ತಕ, ಕನ್ನಮ್ಮ ಮುಂತಾದ ಶಬ್ದಗಳಲ್ಲಿ ದೇವಿಯ ಮೂಲ ಹೆಸರು ಅಡಗಿದೆ ಎಂದು ಹೇಳಬಹುದು. ಇದರಿಂದ ಸದ್ಯದ ಎಲ್ಲಮ್ಮ ಎಂಬುದು ಈಚಿನ ಹೆಸರೆಂಬುದಂತೂ ನಿಶ್ಚಿತ.

ಎಲ್ಲಮ್ಮ-ಸಿದ್ಧರು :

ದೇವಿಯನ್ನು ಕುರಿತ ಕೆಲವು ಹಾಡುಗಳಲ್ಲಿ ಎಲ್ಲಮ್ಮ ದುಷ್ಟರಾದ ಹಲವು ಜನ ಸಿದ್ದರನ್ನು ನಾಶ ಮಾಡಿದಳೆಂಬ ವರ್ಣನೆ ಬರುತ್ತದೆ. ಒಂದೆಡೆ ಆ ಸಿದ್ಧರ ಸಂಖ್ಯೆ ಮೂರುನೂರು ಅರವತ್ತು ಎಂದಿದೆ. ಅವರು ಎಲ್ಲಮ್ಮನನ್ನು ಪರಿಪರಿಯಾಗಿ ಕಾಡಿಸಿದರೆಂದೂ ಮೊದಲು ಅವಳಿಂದ ನಾನಾ ಪ್ರಕಾರದ ಸೇವೆ ಮಾಡಿಸಿಕೊಂಡರೆಂದೂ ವರ್ಣಿಸಿರುವುದು ಕಂಡು ಬರುತ್ತದೆ. ಕೊನೆಗೆ ಎಲ್ಲಮ್ಮ ಅವರಿಗೆ ಭಂಗಿ ಸೇವಿಸಲು ಹಚ್ಚಿ ಅವರೆಲ್ಲ ಅಮಲಿನಲ್ಲಿದ್ದಾಗ ಅವರ ತಲೆಗಳಲ್ಲಿ ಮೊಳೆ ಹೊಡೆದು ಅವರನ್ನು ತನ್ನ ಸ್ವಾಧೀನಪಡಿಸಿಕೊಂಡಳಂತೆ.

ಪಿಶಾಚಿ ಸಿದ್ಧರು ಪಿಶಾಚಿಗಳನ್ನು ಹಿಡಿದು ವಶಪಡಿಸಿಕೊಳ್ಳುವಾಗ ತಮ್ಮ ಮಂತ್ರಬಲದಿಂದ ಅವುಗಳ ತಲೆಯಲ್ಲಿ ಮೊಳೆ ಜಡಿದು ಬಿಡುವರೆಂದು ಆಮೇಲೆ ಅವು ಆ ಮಾಂತ್ರಿಕರು ಹೇಳಿದಂತೆ ಕೇಳುವರೆಂದೂ ಜಾನಪದರು ನಂಬುತ್ತಾರೆ. ಅಂಥ ಜನಪದ ಕಥೆಗಳೂ ಪ್ರಾಚರದಲ್ಲಿವೆ. ಬಾಗಿಲಿಗೆ ಬೇವಿನ ಗಿಡಗಳಿವೆ. ಪ್ರಸಿದ್ಧ ದೇವಾಲಯಗಳಲ್ಲಿನ ಮರಗಳಿಗೆ ತೊಲೆ-ಕಂಬಗಳಿಗೆ ಮೊಳೆ ಹೊಡೆಯುವ ವಿಧಾನವನ್ನು ನಾವು ಎಲ್ಲೆಡೆ ನೋಡುತ್ತೇವೆ. ಈ ರೀತಿ ಈ ಐತಿಹ್ಯಕ್ಕೆ ಸಾಕಷ್ಟು ಪ್ರಸಾರವಿದೆಯೆಂದು ಹೇಳಬೇಕು. ಕಾರಣ ಮೇಲುನೋಟಕ್ಕೆ ಇದೊಂದು ವಲಸೆ ಬಂದ

ಐತಿಹ್ಯದಂತೆ ತೋರುತ್ತದೆ. ಆದರೂ ಇದು ವಲಸೆ ಬಂದ ಐತಿಹ್ಯವಾಗಿರದೆ ಸ್ಥಳೀಯ ಐತಿಹ್ಯವಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಎಲ್ಲಮ್ಮ-ಮೈಲಾರಲಿಂಗಪ್ಪ :

ಧಾರವಾಡ ಜಿಲ್ಲೆಯಲ್ಲಿ ಪ್ರಚಲಿತವಿರುವ ಇನ್ನೊಂದು ಐತಿಹ್ಯವನ್ನು ಇಲ್ಲಿ ಪ್ರಸ್ತಾಪಿಸಬಹುದಾಗಿದೆ. ಸವದತ್ತಿಯ ಎಲ್ಲಮ್ಮ, ಚಂದ್ರಗುತ್ತಿಯ ಎಲ್ಲಮ್ಮ ಮತ್ತು ಹೊನ್ನತಿಯ ಹೊನ್ನಮ್ಮ ಇವರು ಮೈಲಾರಲಿಂಗನ ತಂಗಿಯರು ಎಂದು ಹೇಳುತ್ತಾರೆ. ಈ ಮೂವರು ಸಹೋದರಿಯರು ಭಂಡಾರವನ್ನು ತಮ್ಮ ತವರು ಮನೆಯಿಂದಲೇ ಎಂದರೆ ತಮ್ಮ ಅಣ್ಣನಾದ ಮೈಲಾರಲಿಂಗಪ್ಪನಿಂದಲೇ ತಂದರೆಂದು ನಂಬಿಕೆಯಿದೆ. ಅದೇ ರೀತಿ ಮೈಲಾರಲಿಂಗನ ದೇವಸ್ಥಾನದ ಗುರು ಮನೆತನದವರಾದ ಒಡೆಯರು ಎಲ್ಲಮ್ಮ ತಮ್ಮ ಮನೆತನದ ಹೆಣ್ಣುಮಗಳು ಎಂದು ನಂಬುತ್ತಾರೆ. ಈ ಐತಿಹ್ಯಕ್ಕೆ ಬೇರೆ ಪ್ರಸಾರವಿರುವಂತೆ ಕಾಣದು. ಆದ್ದರಿಂದ ಇದಕ್ಕೆ ಎಷ್ಟು ಬೆಲೆ ಕೊಡಬೇಕೋ ತಿಳಿಯದು. ನಮ್ಮ ಜನಪದರು ಸುತ್ತಮುತ್ತಲಿನ ದೇವರುಗಳಿಗೆ ಅಣ್ಣ, ತಮ್ಮ, ತಂಗಿ, ತಂದೆ, ಮಗ, ಮಗಳು ಇತ್ಯಾದಿಯಾಗಿ ಸಂಬಂಧ ಕಲ್ಪಿಸುವುದು ಎಲ್ಲೆಡೆ ಕಂಡು ಬರುತ್ತದೆ. ಇದು ಕಲ್ಪನೆಯೋ ಅಥವಾ ವಾಸ್ತವಾಂಶವೇನಾದರೂ ಇದರಲ್ಲಿ ಇದೆಯೋ ಹೇಳುವುದು ಕಷ್ಟ.

ಹೀಗೆ ಎಲ್ಲಮ್ಮನನ್ನು ಕುರಿತಿರುವ ಐತಿಹ್ಯಗಳಲ್ಲಿ ಹಲವಾರು ಜನಪದ ನಂಬಿಕೆಗಳು, ಪೌರಾಣಿಕ ಅಂಶಗಳು, ಆಚರಣೆಗಳು, ಅಡಕವಾಗಿರುವುದು ಕಂಡು ಬರುತ್ತದೆ. ಹೆಚ್ಚಿನದವುಗಳಿಗೆ ಜಾನಪದ ನಂಬಿಕೆಗಳೇ ಆಧಾರವಾಗಿವೆ. ಕೆಲವು ಐತಿಹ್ಯಗಳು ಪುರಾಣ ಸ್ಪರ್ಶವನ್ನು ಪಡೆದಿವೆ. ಒಂದೆರಡಾದರೂ ವಲಸೆ ಬಂದ ಐತಿಹ್ಯಗಳು ಇಲ್ಲಿ ಪ್ರಚಲಿತವಾಗಿವೆ. ಈ ದಿಶೆಯಲ್ಲಿ ಇನ್ನೂ ಹೆಚ್ಚಿನ ಸಂಶೋಧನೆ ನಡೆಯಬೇಕಾದುದು ಅನಿವಾರ್ಯ. ವಿಶೇಷವಾಗಿ ದೇವದಾಸಿ ಪದ್ಧತಿ, ಪರಶುರಾಮದೇವರು ಹಾಗೂ ಎಲ್ಲಮ್ಮನ ಇತರ ಕ್ಷೇತ್ರಗಳ ಕ್ಷೇತ್ರಾಧ್ಯಯನ ವಿವರವಾಗಿ ನಡೆಯಬೇಕು. ಆಗ ಮಾತ್ರ ಹೆಚ್ಚು ನಿಖರವಾಗಿ ಈ ದೇವತೆಯ ಐತಿಹ್ಯಗಳನ್ನು ಪರೀಕ್ಷಿಸುವುದು ಸಾಧ್ಯವಾದೀತು.

ಹುಲಿಗೆಮ್ಮನ ಭೌಗೋಳಿಕ ಹಿನ್ನೆಲೆ :

ಹುಲಿಗೆಯ ಕೊಪ್ಪಳ ಜಿಲ್ಲೆಯ ಒಂದು ಪ್ರಸಿದ್ಧವಾದ ಕ್ಷೇತ್ರವಾಗಿದೆ. ತುಂಗಭದ್ರಾ, ನದಿಯ ದಂಡೆಯಲ್ಲಿರುವ ಈ ಕ್ಷೇತ್ರಕ್ಕೆ ವ್ಯಾಘ್ರಪುರಿ ಎಂಬ ಹೆಸರನ್ನು ಕೆಲವರು ಇಟ್ಟುಕೊಂಡಿದ್ದಾರೆ. ಈಗ ಹುಲಿಗಿಯ ಪ್ರಸಿದ್ಧ ಕ್ಷೇತ್ರವಾಗಿರುವಂತೆ ಒಂದು ಗ್ರಾಮವೂ ಆಗಿದೆ. ಹುಲಿಗಿಕ್ಷೇತ್ರದಲ್ಲಿ ತುಂಗಭದ್ರಾ ನದಿಯು ಉತ್ತರಾಭಿಮುಖವಾಗಿ ಹರಿಯುತ್ತದೆ. ಇದೇ ನದಿ ದಂಡೆಯಲ್ಲಿ ಹುಲಿಗಿ ದೇವಸ್ಥಾನಕ್ಕೆ

ತಾಗಿಕೊಂಡಂತೆ ಸೋಮೇಶ ದೇವಸ್ಥಾನವೊಂದಿದ್ದು ಅದು ನೋಡಲು ಆಕರ್ಷಕವಾಗಿದೆ. ಹುಲಿಗಿ ಕ್ಷೇತ್ರವು ಸಮತಟ್ಟಾದ ಪ್ರದೇಶವಾಗಿದ್ದು, ತುಂಗಭದ್ರಾ ನದಿಯ ದಂಡೆಯಲ್ಲಿದೆ. ಸುಮಾರು ಕ್ರಿ.ಶ. ೧೨ನೆಯ ಶತಮಾನದಲ್ಲಿಯೇ ಹುಲಿಗಿ ಕ್ಷೇತ್ರದಲ್ಲಿ ಬೇಸಾಯ ಚೆನ್ನಾಗಿ ನಡೆಯುತ್ತಿತ್ತೆಂಬುದಕ್ಕೆ ಹುಲಿಗಿಯಲ್ಲಿರುವ ಸೋಮೇಶ್ವರ ದೇವಸ್ಥಾನದಲ್ಲಿರುವ ಶಾಸನವೇ ಸಾಕ್ಷಿಯಾಗಿದೆ. ಆ ಶಾಸನದ ಪ್ರಕಾರ ಚೌಡಿಭಟ್ಟನೆಂಬವನು ತುಂಗಭದ್ರೆಯಿಂದ ಕೃಷಿಭೂಮಿಗೆ ಬೇಕಾದಷ್ಟು ನೀರು ಹರಿದು ಬರುತ್ತದೆ. ಈ ಕ್ಷೇತ್ರದಲ್ಲಿ ಸಾಕಷ್ಟು ಭತ್ತ ಮತ್ತು ಕಬ್ಬು ಬೆಳೆಯುತ್ತಾರೆ. ಹಿಂದೆ ನೇರವಾಗಿ ನದಿಯಿಂದ ನೀರು ಹರಿದು ಬರುತ್ತಿತ್ತು ಈಗ ಕಾಲುವೆಯಿಂದ ದೊರಕುತ್ತದೆ.

ತುಂಗಭದ್ರಾನದಿಯ ಒಂದು ದಂಡೆಯಲ್ಲಿ ಹುಲಿಗಿ ಕ್ಷೇತ್ರವಿದ್ದರೆ, ಅದರ ಇನ್ನೊಂದು ದಂಡೆಯಲ್ಲಿ ಹೊಸೂರಮ್ಮನ ಗುಡಿಯಿದೆ. ಜನರು ಹೊಸೂರಮ್ಮನನ್ನು ಹುಲಿಗೆಮ್ಮ-ಎಲ್ಲಮ್ಮ ಎಂದೇ ಭಾವಿಸುತ್ತಾರೆ. ಎರಡು ದೈವಗಳ ಜಾತ್ರೆ ಒಂದೇ ರೀತಿಯಲ್ಲಿ ನಡೆಯುತ್ತವೆ. ಈ ಪ್ರದೇಶದ ಪ್ರಧಾನ ದೈವಗಳು ಹೊಸೂರಮ್ಮ ಮತ್ತು ಹುಲಿಗೆಮ್ಮ ಕೃಷಿಕರು ಈ ದೈವಗಳ ಮುಖ್ಯ ಭಕ್ತರಾಗಿದ್ದಾರೆ.

ಹುಲಿಗೆಮ್ಮನ ಪವಾಡಗಳು ಮತ್ತು ಐತಿಹಾಸಿಕ ದಾಖಲೆಗಳು :

ಹುಲಿಗೆಮ್ಮನ ವಿಶೇಷ ಶಕ್ತಿಯನ್ನು ಪ್ರಸ್ತುತ ಪಡಿಸುವಂತಹ ಅನೇಕ ಐತಿಹ್ಯಗಳು ಪ್ರಚಲಿತದಲ್ಲಿವೆ. ಈ ಐತಿಹ್ಯಗಳು ಹುಲಿಗೆಮ್ಮನು ಮಾಡಿದ ಅಥವಾ ತೀರಿಸಿದ ಪವಾಡಗಳು ಎಂಬ ನಂಬಿಕೆ ಸಾರ್ವತ್ರಿಕವಾಗಿ ಜನಪ್ರಿಯವಾಗಿದೆ. ಹುಲಿಗೆಮ್ಮನ ಜಾತ್ರೆಯ ದಿನದಂದು ಕುದಿಯುವ ಪಾಯಸಕ್ಕೆ ಹುಲಿಗೆಮ್ಮನ ಪೂಜಾರಿಗಳು ಕೈ ಹಾಕುವುದು, ಕುದಿಯುವ ಪಾಯಸಕ್ಕೆ ಕೈ ಹಾಕಿ ಹರಕೆ ತೀರಿಸುವುದು. ಬಾಳೆಯ ದಿಂಡಿನ ಮೇಲೆ ಪೂಜಾರಿಯೊಬ್ಬ ಕುಳಿತು ಸವಾರಿ ಮಾಡುವುದು. ಆ ದಿಂಡು ತುಂಡಾಗುವುದಿಲ್ಲ. ಕೊಂಡದಲ್ಲಿ ಹಾಕಲಾದ ಕೆಂಡದ ಮೇಲೆ ಪೂಜಾರಿಗಳು ಬರಿಗಾಲಲ್ಲಿ ನಡೆಯುವುದು ಈ ಪವಾಡಗಳು ಪ್ರತಿವರ್ಷ ಜಾತ್ರೆಯಲ್ಲಿ ನಡೆಯುತ್ತವೆ ಎಂದು ತಿಳಿದು ಬರುತ್ತದೆ.

ಜನಪದ ಮತ್ತು ಪುರಾಣಗಳಲ್ಲಿ ಹುಲಿಗೆಮ್ಮನ ಹಿನ್ನೆಲೆ :

ಹುಲಿಗೆಮ್ಮನ ಕುರಿತು ಅನೇಕ ಐತಿಹ್ಯಗಳು ಪ್ರಪಂಚದಲ್ಲಿದ್ದು ಕೆಲವನ್ನು ಮಾತ್ರ ಇಲ್ಲಿ ಹೇಳಲಾಗಿದೆ. ಹುಲಿಗೆಮ್ಮನ ಭಕ್ತನನ್ನು ಒಮ್ಮೆ ಟಿಪ್ಪು ಅವಮಾನಿಸಿದಂತೆ, ಇದರಿಂದಾಗಿ ಟಿಪ್ಪು ಶಕ್ತಿಗುಂದಿದನಂತೆ. ಇದು ಹುಲಿಗೆಮ್ಮನ ಕೋಪದ ಪರಿಣಾಮ ಎಂದು ಆತನಿಗೆ ತಿಳಿಯಿತು. ಆಗ ಆತನು ದೈವಕ್ಕೆ ಚಿನ್ನಾಭರಣಗಳನ್ನು ಹರಕೆ ರೂಪದಲ್ಲಿ ಒಪ್ಪಿಸುತ್ತಾನೆ. ದೈವ ಅದನ್ನು ಸ್ವೀಕರಿಸಿದ ಟಿಪ್ಪುವಿಗೆ ಆತನ ಶಕ್ತಿ ಮತ್ತು ಧೈರ್ಯಗಳನ್ನು ಮರಳಿ ಒಪ್ಪಿಸುತ್ತಾಳೆ. ಉಳಿದಂತೆ ದೈವವು ಕಿವಿ

ಕೇಳದವರಿಗೆ ಕಿವಿ ಕೇಳುವಂತೆ ಮಾಡುತ್ತದೆ. ಮೂಕರನ್ನೂ ಮಾತಾಡುವಂತೆ ಮಾಡುತ್ತದೆ ಎಂಬ ನಂಬಿಕೆಗಳಿವೆ ಎಂದು ತಿಳಿಯಲಾಯಿತು. ಇವುಗಳನ್ನು ಸಾಬೀತು ಪಡಿಸುವಂಥ ಅನೇಕ ಘಟನೆಗಳನ್ನು ಭಕ್ತರು ನಿರೂಪಿಸುತ್ತಾರೆ. ಹುಲಿಗೆಮ್ಮ ಉರಿಯ ದೇವತೆ. ಆಕೆಯ ಕಣ್ಣುಗಳು ಕೆಂಡವನ್ನೇ ಕಾರುತ್ತವೆ ಎಂಬ ನಂಬಿಕೆ ಜನರಲ್ಲಿದೆ. ಆಕೆ ಸಿಟ್ಟಾಗಿ ಕಣ್ಣು ತೆರೆದರೆ, ಊರೆಲ್ಲ ಭಸ್ಮವಾಗುತ್ತದೆ ಎಂಬ ನಂಬಿಕೆ ಇದೆ. ಊರಿಗೆ ಬರಗಾಲ ಬರುತ್ತದೆ. ಜನರಲ್ಲಿ ವಿವಿಧ ತರಹದ ಕಾಯಿಲೆಗಳು ಕಾಣಿಸಿಕೊಳ್ಳುತ್ತವೆ. ಎಂದು ಜನ ಈಗಲೂ ಭಾವಿಸುತ್ತಾರೆ.

ಇದಕ್ಕಾಗಿ ದೈವದ ಕಣ್ಣಿಗೆ ಎರಡು ಬೆಳ್ಳಿಯ ಕಣ್ಣು ಪಟ್ಟಿಗಳನ್ನು ಅಡ್ಡಲಾಗಿ ಕಟ್ಟಿದ್ದಾರೆ. ಇದರಿಂದ ದೈವದ ಉರಿಗಣ್ಣು ನೇರವಾಗಿ ಜನರನ್ನು ತಾಕುವುದಿಲ್ಲ ಎಂದು ಭಾವಿಸಲಾಗಿದೆ. ಇದರ ಜೊತೆಗೆ ದೈವವು ಸದಾ ಶಾಂತವಾಗಿರುವಂತೆ ಮಾಡಲು ಆಗಾಗ ಭಕ್ತರು ಕೆಲವು ವಿಶೇಷ ಹರಕೆಗಳನ್ನು ನೀಡುತ್ತಾರೆ. ಜನರು ತಪ್ಪುಗಳನ್ನು ಮಾಡದಿರುವುದೇ ದೈವದ ಕಣ್ಣು ತಂಪಾಗಿರುವಂತೆ ಮಾಡುತ್ತದೆ ಎಂಬುದು ಇನ್ನೊಂದು ನಂಬಿಕೆ ಇದೆ.

ಹುಲಿಗೆಮ್ಮನಿಗೆ ಹಿನ್ನಲೆಯಾಗಿ ಹೇಳುವ ಕತೆ ಮತ್ತು ಸವದತ್ತಿಯ ಎಲ್ಲಮ್ಮನಿಗೆ ಹಿನ್ನೆಲೆಯಾಗಿ ಹೇಳುವ ಕತೆಯು ಬಹುಮಟ್ಟಿಗೆ ಒಂದೇ ಆಗಿದೆ. ಎಲ್ಲಮ್ಮನೇ ಹುಲಿಗೆಮ್ಮನ ರೂಪದಲ್ಲಿ ಹುಲಿಗೆಯಲ್ಲಿ ಪ್ರತ್ಯಕ್ಷಳಾಗಿದ್ದಾಳೆ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಇದು ಸಹಜವೂ ಹೌದು. ಪುರಾಣ ಕತೆಯು ಮತ್ಸ್ಯ ಪುರಾಣ, ವಾಯು ಪುರಾಣ, ಮಾರ್ಕಂಡೆಯ ಪುರಾಣ, ಸ್ಕಂದ ಪುರಾಣ ಮಾತ್ರವಲ್ಲದೆ ಸುಪ್ರಸಿದ್ಧವಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಉಪಲಬ್ಧವಿರುವ ಪರಶುರಾಮನ ಕತೆಯೇ ಆಗಿದೆ.

ಜಮದಗ್ನಿ-ರೇಣುಕ ಮತ್ತು ಪರಶುರಾಮರೇ ಇಲ್ಲಿನ ಮುಖ್ಯ ಪಾತ್ರಗಳು. ಪುರಾಣಗಳ ವ್ಯಾಪ್ತಿಯನ್ನು ಮತ್ತು ಜನಪದರಲ್ಲಿ ಈ ಕತೆ ಪ್ರಸರಣಗೊಂಡಿರುವ ಬಗೆಯನ್ನು ಗಮನಿಸಿದರೆ. ಈ ಕತೆಯು ತುಂಬ ಜನಪ್ರಿಯವಾಗಿರುವುದಂತೂ ಸ್ಪಷ್ಟ. ಎಲ್ಲಮ್ಮನ ಗುಡ್ಡ ಮತ್ತು ಹುಲಿಗಿಯಲ್ಲಿ ಈ ಪುರಾಣ ಕತೆಯೂ ಪುನರಭಿನೀತಗೊಂಡು ವರ್ಷವರ್ಷವೂ ನವೀನವಾಗುತ್ತದೆ. ಮತ್ತು ಪುನರ್ ಸೃಷ್ಟಿ ಹೊಂದುತ್ತದೆ. ಲಭ್ಯ ಇರುವ ಪುರಾಣ ಕತೆಯ ಸ್ವರೂಪದ ಪ್ರಕಾರ ನರ್ಮದಾ ನದಿ ಬಯಲಿನಲ್ಲಿ ಜಮದಗ್ನಿಯು ವಾಸಿಸುತ್ತಿದ್ದ. ಅವನ ಹೆಂಡತಿಯ ಹೆಸರು ರೇಣುಕೆ. ಈಕೆ ಒಬ್ಬಳು ರಾಜಕುಮಾರಿಯಾಗಿದ್ದು ಜಮದಗ್ನಿಯ ತಪಃಶಕ್ತಿಗೆ ಮರುಳಾಗಿ ಆತನನ್ನು ಮದುವೆ ಆಗುತ್ತಾಳೆ. ಜಮದಗ್ನಿ-ರೇಣುಕೆಯರಿಗೆ ಐದು ಜನ ಮಕ್ಕಳು. ಕೊನೆಯವನೇ ಪರಶುರಾಮ.

ದಿನಂಪ್ರತಿ ನರ್ಮದೆಯಲ್ಲಿ ಸ್ನಾನ ಮಾಡಿ ಮುಡಿಯುಟ್ಟು, ಮರಳಿನ ಕೊಡದಲ್ಲಿ ಜಮದಗ್ನಿಯ ಯಜ್ಞಕ್ಕೆ ನೀರು ತರುವುದು ರೇಣುಕೆಯ ಕೆಲಸ. ಒಂದು ದಿನ ರೇಣುಕೆಯು ಸ್ನಾನ

ಮಾಡುತ್ತಿರುವಾಗ ನರ್ಮದೆಯಲ್ಲಿ ಕೆಲವು ಜನ ಗಂಧರ್ವರು ಸ್ನಾನ ಮಾಡುವುದನ್ನು ನೋಡುತ್ತಾಳೆ. ಅವಳ ಮನಸ್ಸು ಸ್ವಲ್ಪ ಚಂಚಲವಾಗುತ್ತದೆ. ಪರಿಣಾಮವಾಗಿ ಆ ದಿನ ಆಕೆಗೆ ಉಸುಕಿನಲ್ಲಿ ಕೊಡ ಮಾಡಲಾಗುವುದಿಲ್ಲ. ಅಸಹಾಯಕಳಾದ ರೇಣುಕೆ ಆಶ್ರಮಕ್ಕೆ ಬರುತ್ತಾಳೆ. ವಿಷಯ ತಿಳಿದ ಜಮದಗ್ನಿಯು ಆಕೆಯ ತಲೆ ಕತ್ತರಿಸಲು ಮಕ್ಕಳಿಗೆ ಆಜ್ಞಾಪಿಸುತ್ತಾನೆ. ತಾಯಿಯ ತಲೆ ಕಡಿಯಲು ನಿರಾಕರಿಸಿದ ಮೊದಲ ನಾಲ್ಕು ಮಕ್ಕಳು ಸುಟ್ಟು ಭಸ್ಮರಾಗುತ್ತಾರೆ. ಕೊನೆಯವನಾದ ಪರಶುರಾಮನು ತಾಯಿಯ ತಲೆ ಕತ್ತರಿಸುತ್ತಾನೆ. ಮತ್ತು ಜಮದಗ್ನಿ ನೀಡಿದ ವರದಿಂದ ಸತ್ತ ತಾಯಿಯನ್ನು ಮರಳಿ ಬದುಕಿಸಿ, ಹಿಮಾಲಯಕ್ಕೆ ಹೋಗುತ್ತಾನೆ. ಇದಿಷ್ಟು ಕಥೆ ಪುರಾಣಗಳಲ್ಲಿ ದೊರಕುವ ಕಥೆಯಾಗಿದೆ. ಜನಪದ ಪುರಾಣಗಳಲ್ಲಿ ಕಂಡು ಬರುವ ಎಲ್ಲಮ್ಮನ ಕಥೆಯು ಹಾಡಿನ ರೂಪದಲ್ಲಿ ಕೂಡ ಕೇಂದ್ರೀಕೃತಗೊಂಡಿವೆ.

ಹುಟ್ಟಿ ಬಂದೆ ಎಲ್ಲಮ್ಮನಾಗಿ
ನಿನ್ನ ಮದವಿಯ ಮಾಡಿ
ಕೊಟ್ಟಾರವ್ವ ಜಮದಗ್ನಿಗೆ

ರೇಣುಕ ರಾಜ ಸನ ತಂದಿ
ಭೋಗಾವತಿ ನಿನ ತಾಯಿ
ಹುಟ್ಟಿ ಬಂದೆ ಅವರ ಹೊಟ್ಟೇಲಿ
ಹಾಕಿ ತೂಗ್ಯಾರ ತೊಟ್ಟೀ ಮೇಲೆ

ಹಾವಿನ ಸಿಂಬಿ ತಲಿಯ ಮ್ಯಾಲಿ
ಉಸಂಗಿನ ಕೊಡ ಅದರ ಮ್ಯಾಲ
ಪತಿ ಸೇವೆ ಮಾಡುತಲಿ
ನೀರು ತರೂದು ನದಿಯಲಿ
ನೀರು ತರೂ ನದಿಯಲಿ
ಜೋಡ ಮೀನ ಆದ್ಯಾವಲಿ
ದೃಷ್ಟಿ ಹೋತ ಅದರ ಮ್ಯಾಲ
ಕೊಡ ಬಿತ್ತ ಅದರ ಮ್ಯಾಲ

ಜಮದಗ್ನಿಗೆ ತಿಳಿದೀತೆಲ್ಲ
ಪತ್ನಿ ಮಾಡಳ ದುಃಖವಲ್ಲಿ
ಶಾಪ ಕೊಟ್ಟ ಆತನಲ್ಲಿ
ಕುಷ್ಠರೋಗ ಬಡೀತಲ ಮೇಲಿ

ಕಾಡು ಮೇಡು ತಿರುಗತಲಿ
ಎಕ್ಕಯ್ಯ ಜೋಗಯ್ಯ ಬಂದಾನಲಿ
ಜಲ್ಮ ಉದ್ಧಾರಾದೀತಲಿ
ಮತ್ತೆ ಬಂದಾಳಲ್ಲೊ ಮನಿಗೆ

ಸಿಟುಗೊಂಡ ಮುನಿಯೇ ಕರೆದ
ಬಾ ರಾಮ ಏನ ಬೇಡತಿ ರಾಮ
ತಲೆಯ ಕಡಿಯೇ ಶಿರಾವ ಕಡಿಯೇ
ದಿಡಾ ಬಿತ್ತ ಭೂಮಿಯ ಮ್ಯಾಲೆ. (ಹುಲಿಗೆಮ್ಮ: ಪುರುಷೋತ್ತಮ ಬಿಳಿಮಲೆ, ಪು. ೫-೬. ೧೯೯೯)

ಈ ಜನಪ್ರಿಯವಾದ ಹಾಡಿನ ಜಾಡು ಹಿಡಿದು ಜನರು ಪರಶುರಾಮನ ಕಥೆ ಹೇಳುತ್ತಾರೆ. ಪರಶುರಾಮನ ನಾಟಕದಲ್ಲಿಯೂ ಈ ಕಥೆ ಹೇಳಲಾಗಿದೆ.

ಪ್ರಸ್ತುತ ಹುಲಿಗೆಮ್ಮನನ್ನು ಪೂಜಿಸುವವರು ವೈದಿಕ ಬ್ರಾಹ್ಮಣರು ಅವರು ಸಂಸ್ಕೃತ ಮಂತ್ರಗಳ ಮೂಲಕ ಹುಲಿಗೆಮ್ಮನನ್ನು ಆರಾಧಿಸುತ್ತಾರೆ. ಮತ್ತು ಇಂಥ ಆಚರಣೆಗೆ ಬೇಕಾದ ಪುರಾಣ ಕಥೆಗಳನ್ನು ಅವರು ಹಿನ್ನೆಲೆಯಾಗಿ ಹೇಳುತ್ತಾರೆ.

ಜಾತ್ರೆ, ಹುಣ್ಣಿಮೆ, ಮಂಗಳವಾರ, ಶುಕ್ರವಾರಗಳಲ್ಲಿ ಗುಡಿಗೆ ಬರುವ ಭಕ್ತರನ್ನು ಪರಿಶೀಲಿಸಿದರೆ ಎಷ್ಟೋ ಕಡೆ ಭಕ್ತರೇ ಪೂಜಾರಿಗಳಾಗುತ್ತಾರೆ. ಅವರು ತಮ್ಮ ಮನೆಗಳಲ್ಲಿ ಹುಲಿಗೆಮ್ಮನನ್ನು ತರುವಾಗ ಜೊತೆಗೆ ಕುಟುಂಬದ ಪೂಜಾರಿಯನ್ನೂ ಕರೆತರುತ್ತಾರೆ. ಮುತ್ತು ಕಟ್ಟಿಸಿಕೊಂಡ ಗರತಿಯರು ಕೂಡಾ ಪೂಜಾರಿಗಳಾಗಿರುತ್ತಾರೆ. ಹುಲಿಗೆಮ್ಮನ ಜಾತ್ರೆಯ ದಿವಸದಂದು ನಡೆಯುವ ಮುಖ್ಯ ಕ್ರಿಯೆಗಳಲ್ಲಿ ಗಂಗಾಮತಸ್ಥರೇ ಪೂಜಾರಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಪವಾಡ, ಪಾಯಸ, ಕೊಂಡಗಳಲ್ಲಿ ತೊಡಗಿಸಿಕೊಳ್ಳುವವರು ಗಂಗಾಮತಸ್ಥರೇ ಆಗಿರುತ್ತಾರೆ. ಜೋಗಮ್ಮದಿರೂ ಪೂಜಾರಿಗಳಾಗಿ ಕಾರ್ಯ ನಿರ್ವಹಿಸುತ್ತಾರೆ. ಭಕ್ತರನ್ನು ಈ ಜೋಗಮ್ಮದಿರೇ ವಿಚಾರಿಸಿಕೊಳ್ಳುತ್ತಾರೆ. ದೇವಳದಲ್ಲಿ ಕುಣಿಯುತ್ತಾರೆ. ಹೀಗೆ ಕೌಟುಂಬಿಕ, ಪುರೋಹಿತರು, ಬ್ರಾಹ್ಮಣ ಪುರೋಹಿತರು ಜೋಗಮ್ಮ-ಜೋಗಪ್ಪಂದಿರು ಹುಲಿಗೆಮ್ಮನ ಪೂಜಾರಿಗಳಾಗಿ ಕೆಲಸ ಮಾಡುತ್ತಾರೆ.

ಇದರಲ್ಲಿ ಬ್ರಾಹ್ಮಣ ಪುರೋಹಿತರನ್ನು ಹೊರತುಪಡಿಸಿದರೆ ಉಳಿದವರೆಲ್ಲ ಕೆಳಜಾತಿಗೆ ಸೇರಿದವರಾಗಿರುತ್ತಾರೆ. ಅಂಥವರಿಗೆ ಪೂಜಾರಿಕೆಯು ವಂಶಪಾರಂಪರ್ಯವಾಗಿ ಬಂದಿರುತ್ತದೆ. ವಂಶದಲ್ಲಿ ಏನಾದರೂ ತೊಡಕಿದ್ದರೆ ಸಮರ್ಥರಾದ ಇನ್ನೊಬ್ಬರನ್ನು ಪೂಜಾರಿಯಾಗಿ ಮಾಡಲು ಅವಕಾಶವಿದೆ. ಜಾತ್ರೆಯ ದಿವಸ ಹೊಸ ಪೂಜಾರಿಗಳನ್ನು ಮಾಡುವ ವಿಧಿಕ್ರಿಯೆಗಳೇ ಪ್ರತ್ಯೇಕವಾಗಿರುತ್ತವೆ.

ಹೀಗೆ ಹುಲಿಗಿಯ ಗುಡಿಯು ಬ್ರಾಹ್ಮಣರ ಆಚರಣೆಗೊಳಗಾಗುತ್ತಿದ್ದರೂ ಗುಡಿಯ ಹೊರಗಡೆಗೆ ಬೇರೆ ಬೇರೆ ವರ್ಗದ ಪೂಜಾರಿಗಳನ್ನು ಹೊಂದಿದೆ. ಈ ಅರ್ಥದಲ್ಲಿ ಹುಲಿಗೆಮ್ಮನ

ಆರಾಧನೆಗೆ ಒಂದು ವರ್ಗದವರು ಎಂಬಂತಿಲ್ಲ ಬದಲು ಎಲ್ಲ ವರ್ಗದವರೂ ಭಿನ್ನ ರೀತಿಯ ಆರಾಧನಾ ಕ್ರಮಗಳೂ ಅಲ್ಲಿವೆ ಇದರಲ್ಲಿ. ಇದರಲ್ಲಿ ವೈದಿಕ ಬ್ರಾಹ್ಮಣರನ್ನು ಬಿಟ್ಟರೆ ಉಳಿದೆಲ್ಲಾ ಪೂಜಾರಿಗಳ ಮೈಯಲ್ಲಿ ದೇವಿ ಬರುತ್ತಾಳೆ. ಹುಲಿಗೆಮ್ಮನ ಪೂಜಾರಿಗಳು ಸದಾ ಮಡಿಯಲ್ಲಿದ್ದು, ಯಾವ ಕಾರಣಕ್ಕೂ ಮೈಲಿಗೆಯಾಗಿರಕೂಡದೆಂಬ ನಂಬಿಕೆ ಕಟ್ಟುನಿಟ್ಟಾಗಿ ಆಚರಣೆಗೆ ಬರುತ್ತಿದೆ. ಹುಲಿಗೆಮ್ಮ ಯಾವ ಕಾರಣಕ್ಕೂ ಮೈಲಿಗೆ ಆದವರನ್ನು ಹತ್ತಿರ ಸೇರಿಸಿಕೊಳ್ಳುವುದಿಲ್ಲ. ಈ ಕಾರಣಕ್ಕೆ ಹುಲಿಗೆಮ್ಮನ ಪೂಜಾರಿಗಳು ಯಾವ ಊರಿನಲ್ಲೇ ಇರಲಿ, ಅವರು ಆ ಊರಿನ ಇತರ ಜನರಿಗಿಂತ ಭಿನ್ನವಾಗಿರಬೇಕು ಮತ್ತು ಸದಾ ತಮ್ಮ ಮಡಿಯನ್ನು ಕಾಪಾಡಿಕೊಂಡಿರಬೇಕು. ಜಾತ್ರೆಯ ವಿಶೇಷತೆ. ಸಾಮಾನ್ಯ ಜನರು ದೈವದ ಸಾಕ್ಷಾತ್ಕಾರಕ್ಕಾಗಿ ಹುಲಿಕಾ ಕ್ಷೇತ್ರಕ್ಕೆ ಬರುತ್ತಾರೆ. ಆ ಕ್ಷೇತ್ರದಲ್ಲಿ ಹುಲಿಗೆಮ್ಮ ಇರುವುದರಿಂದಾಗಿ ಆ ಸ್ಥಳಕ್ಕೆ ವಿಶೇಷ ಪ್ರಾಶಸ್ತ್ಯ ನೀಡಲಾಗುತ್ತಿದೆ. ಮತ್ತು ಜಾತ್ರೆಯ ದಿವಸ ಅಲ್ಲಿ ದೈವ ಇರುವುದರಿಂದಾಗಿ ಆ ಸ್ಥಳವನ್ನು ಮೈಲಿಗೆಯಾಗದಂತೆ ನೋಡಿಕೊಳ್ಳಲಾಗುವುದು. ಮೈಲಿಗೆ ರಹಿತವಾದ ಸ್ಥಳದಲ್ಲಿ ಹುಲಿಗೆಮ್ಮ ಅದೃಶ್ಯಳಾಗಿಯೇ ಇದ್ದು ಜನರನ್ನು ನೋಡುತ್ತಾಳೆ. ಸಾಮಾನ್ಯ ಜನ ಮತ್ತು ಹುಲಿಗೆಮ್ಮನ ನಡುವೆ ಜೋಗಪ್ಪ-ಜೋಗಮ್ಮದಿರಿದ್ದು ಅವರು ಹುಲಿಗೆಮ್ಮನನ್ನು ಮೈಮೇಲೆ ಬರಮಾಡಿಕೊಂಡು ಇರುತ್ತಾರೆ. ಅದಕ್ಕೆ ಬೇಕಾದ ವಿಶೇಷ ಶಕ್ತಿಯೂ ಅವರಿಗೆ ಇರುತ್ತದೆ. ಇಲ್ಲಿ ಮೂರು ರೀತಿಯ ಭಕ್ತರು ಬೇರೆ ಬೇರೆ ರಾಜ್ಯದಿಂದ ಅಥವಾ ಬೇರೆ ಬೇರೆ ಭಾಗಗಳಿಂದ ಬರುತ್ತಾರೆ. ೧) ಸಾಮಾನ್ಯ ಭಕ್ತರು ಪ್ರತಿನಿಧಿಸುವ ಲೌಕಿಕ ಲೋಕ, ೨) ಹುಲಿಗೆಮ್ಮ ಪ್ರತಿನಿಧಿಸುವ ಅಲೌಕಿಕ ಲೋಕ, ೩) ಜೋಗಪ್ಪ-ಜೋಗಮ್ಮದಿರು ಪ್ರತಿನಿಧಿಸುವ ಮಧ್ಯಂತರ ಲೋಕ, ಸಾಮಾನ್ಯ ಜನರು ದೈವದ ಸಾಕ್ಷಾತ್ಕಾರಕ್ಕಾಗಿ ಹುಲಿಗಿ ಕ್ಷೇತ್ರಕ್ಕೆ ಬರುತ್ತಾರೆ. ಆ ಕ್ಷೇತ್ರದಲ್ಲಿ ಹುಲಿಗೆಮ್ಮ ಇರುವುದರಿಂದಾಗಿ ಆ ಸ್ಥಳಕ್ಕೆ ವಿಶೇಷ ಪ್ರಾಶಸ್ತ್ಯ ನೀಡಲಾಗುತ್ತದೆ. ಮತ್ತು ಜಾತ್ರೆಯ ದಿವಸ ಅಲ್ಲಿ ದೈವ ಇರುವುದರಿಂದಾಗಿ ಆ ಸ್ಥಳವನ್ನು ಮೈಲಿಗೆಯಾಗದಂತೆ ನೋಡಿಕೊಳ್ಳಲಾಗುವುದು. ಮೈಲಿಗೆ ರಹಿತವಾದ ಸ್ಥಳದಲ್ಲಿ ಹುಲಿಗೆಮ್ಮ ಅದೃಶ್ಯಳಾಗಿಯೇ ಇದ್ದು ಜನರನ್ನು ನೋಡುತ್ತಾಳೆ.

ಸಾಮಾನ್ಯ ಜನ ಮತ್ತು ಹುಲಿಗೆಮ್ಮನ ನಡುವೆ ಜೋಗಪ್ಪ-ಜೋಗಮ್ಮದಿರಿದ್ದು ಅವರು ಹುಲಿಗೆಮ್ಮನನ್ನು ಮೈಮೇಲೆ ಅವ್ಹಾನಿಸಿಕೊಂಡು ಇರುತ್ತಾರೆ. ಅದಕ್ಕೆ ಬೇಕಾದ ವಿಶೇಷ ಶಕ್ತಿಯೂ ಅವರಿಗೆ ದಕ್ಕಿದೆ. ಹೀಗೆ ಲೌಕಿಕದ ಜನರು, ಅಲೌಕಿಕದ ದೈವ ಮತ್ತು ಅಲೌಕಿಕದ ದೈವವನ್ನೇ ಲೌಕಿಕದ ಜನರಿಗೆ ದರ್ಶನ ಮಾಡುವ ಜೋಗಪ್ಪ-ಜೋಗಮ್ಮ ಈ ಮೂರು ಶಕ್ತಿಗಳ ಸಮನ್ವಯದಲ್ಲಿ ಈ ದೈವದ ಆರಾಧನೆಯಲ್ಲಿ ನಡೆಯುತ್ತದೆ.

ಹುಲಿಗೆಮ್ಮ ಒಂದು ಊರಿನ ದೇವತೆಯಾಗಿ, ಮುಂದೆ ಒಂದು ಸೀಮೆಯ ದೇವತೆಯಾಗಿ, ಕಾಲಕ್ರಮೇಣ ಎಲ್ಲಮ್ಮನೊಂದಿಗೆ ತನ್ನನ್ನು ಗುರುತಿಸಿಕೊಂಡು, ಕೊನೆಯಲ್ಲಿ ಜಮದಗ್ನಿಯ ಪತ್ನಿಯಾದ ರೇಣುಕೆಯಾಗಿ ಸಮಗ್ರ ಭಾರತದ ಬ್ರಾಹ್ಮಣ ಸಂಸ್ಕೃತಿಯ ಭಾಗವಾಗಿ ಮಾರ್ಪಟ್ಟಿರುವುದು ಮೇಲ್ನೋಟಕ್ಕೆ ಕಂಡು ಬರುವ ಅಂಶವಾಗಿದೆ. ಒಂದು ಊರಿನ ದೈವವು ಹೀಗೆ ಗಡಿ ಮೀರಿ ಬೆಳೆಯುವುದು ತುಂಬ ಕುತೂಹಲಕರವಾದ ಅಂಶವಾಗಿದೆ. ಕರ್ನಾಟಕ, ತಮಿಳುನಾಡು, ಆಂದ್ರಪ್ರದೇಶ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರಗಳಿಂದ ಈ ದೈವದ ಭಕ್ತರು ಹುಲಿಗೆಗೆ ಬರುತ್ತಾರೆ. ಹುಣ್ಣಿಮೆ ಜಾತ್ರೆಗಳಲ್ಲಿ ಲಕ್ಷಗಟ್ಟಲೆ ಜನ ಬಂದು ಸೇರುತ್ತಾರೆ.

ಹೀಗೆ ಬರುವ ಯಾತ್ರಿಕರಲ್ಲಿ ಹಿಂದುಗಳಲ್ಲದೆ ಭಿನ್ನಧರ್ಮವಲಂಬಿಗಳೂ, ಗಿರಿಜನರೂ, ಗಂಡಸರು, ಹೆಂಗಸರು, ಮಕ್ಕಳು ಇರುತ್ತಾರೆ. ಆದರೆ ಮುಖ್ಯವಾಗಿ ಹುಲಿಗೆಮ್ಮನ ಭಕ್ತರು ಹೆಂಗಸರು, ಅದರಲ್ಲಿ ಕೆಳಜಾತಿಗೆ ಸೇರಿದ ಹೆಂಗಸರು.

ಈ ಭಕ್ತರು ಹುಲಿಗೆಮ್ಮನನ್ನು ಅಮ್ಮ ಎಂದೇ ಗುರುತಿಸುತ್ತಾರೆ. ನಮ್ಮಮ್ಮ ನಮ್ಮ ತಾಯಿ ಎಂಬುದು ಅವರ ಉದ್ಗಾರವಾಗಿದೆ. ಹೀಗೆ ಭಕ್ತರು ಅಮ್ಮನೆಂದು ಗುರುತಿಸುವ ಮೂಲಕ ತಾವು ಮಕ್ಕಳಾಗುತ್ತಾರೆ. ಭಾರತೀಯ ಸಮಾಜದಲ್ಲಿ ಕಂಡುಬರುವ ತಾಯಿ–ಮಗನ ಬಲಿಷ್ಠ ಸಂಬಂಧಗಳೇ ಇಲ್ಲಿನ ದೈವಿಕ–ಆವರಣದಲ್ಲಿ ಪುನಃಸೃಷ್ಟಿ ಆಗಿದೆ. ಇದರ ಇನ್ನೊಂದು ಮಗ್ಗುಲಲ್ಲಿ ತಂದೆ ಇಲ್ಲದಿರುವುದು ಕಂಡು ಬರುತ್ತದೆ. ತಂದೆ ಇಲ್ಲದೆ ತಾಯಿಯ ರಕ್ಷಣೆಯಲ್ಲಿರುವ ದೈವಿಕ ಸಮಾಜವಿದು. ಪರೋಕ್ಷವಾಗಿ ಇದು ಮಾತೃಮೂಲದ ಸಮಾಜವೊಂದರ ಅಭಿವ್ಯಕ್ತಿಯಾಗಿದೆ.

ವಾಸ್ತವದ ಸಮಾಜದಲ್ಲಿ ಈಗ ಪಿತೃಮೂಲ ಸಂಬಂಧಗಳು ಬಲಿಷ್ಟವಾಗಿವೆ. ಹುಲಿಗೆಮ್ಮನ ಭಕ್ತರೆಲ್ಲ ಇಂಥ ಪಿತೃಮೂಲವನ್ನು ನಿರಾಕರಿಸಿ ಮಾತೃ ಅಧಿಕಾರವನ್ನು ಸ್ಥಾಪಿಸುವ ಶಕ್ತಿಕೇಂದ್ರವಾಗಿದೆ. ಈ ಅರ್ಥದಲ್ಲಿ ಇದು ಭಾರತೀಯ ಸಮಾಜದ ಸ್ವಯಂ ವೈರುಧ್ಯಗಳನ್ನು ಸಾಬೀತುಪಡಿಸುತ್ತದೆ. ಒಂದು ಕೊನೆಯಲ್ಲಿ ಅದು ಆಚರಣೆಯ ಒಳಗೆ ದೈವಮೂಲದ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಹೊಂದಿದೆ.

ಹುಲಿಗೆಮ್ಮನ ಭಕ್ತರೆಲ್ಲ ದೀಕ್ಷೆ ತೆಗೆದುಕೊಂಡವರು ಜೋಗತಿ–ಜೋಗಪ್ಪ ಆಗುತ್ತಾರೆ. ಇವರಲ್ಲಿ ಹೆಚ್ಚಿನವರು ಸಮಾಜದ ಕೆಳವರ್ಗದಿಂದ ಬಂದವರೇ ಆಗಿದ್ದಾರೆ. ಇಲ್ಲಿ ಹೆಣ್ಣು ಮಕ್ಕಳಿಗೆ ಮುತ್ತು ಕಟ್ಟಿ, ಹುಲಿಗೆಮ್ಮ ದೇವರ ಹೆಂಡತಿಯಾಗಿ ಮಾಡುವ ಕುತೂಹಲಕರ ಅಂಶವಿದೆ. ಇವರಲ್ಲಿ ಉಚ್ಚಜಾತಿಯ ಹೆಂಗಸರು, ಸರತಿ ಮುತ್ತು ಕಟ್ಟುತ್ತಾರೆ. ಇವರು ಹಬ್ಬ ಹುಣ್ಣಿಮೆಗಳಲ್ಲಿ ದೈವದ ಸೇವೆ ಮಾಡಿ, ತೃಪ್ತರಾಗುತ್ತಾರೆ. ಆದರೆ ಅದೇ ಕೆಳಜಾತಿ ಹೆಂಗಸರು ದೇವದಾಸಿ

ಆಗುತ್ತಾರೆ. ಕೆಲವರು ಮುಂದೆ ವೇಶ್ಯಾ ಜೀವನಕ್ಕೆ ಇಳಿಯುತ್ತಾರೆ. ದೇವರಿಗೆ ಬಿಟ್ಟ ಈ ಹೆಣ್ಣುಮಕ್ಕಳಿಗೆ ಮುಂದೆ ಲೌಕಿಕದ ಯಾವುದೇ ಗಂಡಿನೊಂದಿಗೆ ವಿವಾಹ ಇರುವುದಿಲ್ಲ.

ಇಡೀ ಕರ್ನಾಟಕದಲ್ಲಿ ಮತ್ತು ಆಂದ್ರಪ್ರದೇಶ, ತಮಿಳುನಾಡು, ಕೇರಳದಲ್ಲಿ ಮಾತೃದೇವತಾರಾಧನೆ ಇಂದಿಗೂ ಜನಪ್ರಿಯವಾಗಿದೆ. ಕರ್ನಾಟಕ ರಾಜ್ಯವೊಂದರಲ್ಲಿಯೇ ಸುಮಾರು ೧೫೦೦ ಗ್ರಾಮದೇವತೆಗಳಿವೆ. ಹಿಂದೂ ಧರ್ಮಧ ಮುಖ್ಯ ದೇವತೆಗಳಿಗಿಂತ ಈ ಗ್ರಾಮದೇವತೆಗಳೇ ಜನರಿಗೆ ಹೆಚ್ಚು ಹತ್ತಿರವಾಗಿವೆ ಮತ್ತು ಜನರ ಕಷ್ಟ ಸುಖಗಳಿಗೆ ಕಿವಿಗೊಡುತ್ತವೆ. ಜನಪದ ಧರ್ಮದ ಮೂಲಧಾತುವನ್ನು ನಿರ್ಮಿಸಿದವರು ಈ ಗ್ರಾಮದೇವತೆಗಳೇ ಆಗಿದ್ದಾರೆ. ಈ ಗ್ರಾಮ ದೇವತೆಗಳೇ ಶೇ. ೮೦ಕ್ಕೂ ಹೆಚ್ಚು ಮಾತೃದೇವತೆಗಳಿವೆ. ಕಾರ್ಯದ ದೃಷ್ಟಿಯಿಂದ ಗಂಡು-ದೇವತೆಗಳಿಗೂ ಹೆಣ್ಣು ದೇವತೆಗಳಿಗೂ ಅಂಥ ವ್ಯತ್ಯಾಸವಿಲ್ಲವಾದರೂ ಸಂಖ್ಯಾ ದೃಷ್ಟಿಯಿಂದ ಮಾತೃದೇವತೆಗಳೇ ಅಧಿಕವಾಗಿವೆ.

ಹುಲಿಗೆಮ್ಮನ ಸ್ವರೂಪವನ್ನು ಗಮನಿಸುವಾಗ ಆಕೆಯ ಶಿಕ್ಷಕ ಮತ್ತು ರಕ್ಷಕ ಗುಣಗಳೆರಡೂ ನಮಗೆ ಎದ್ದು ಕಾಣುತ್ತವೆ. ಒಳ್ಳೆಯವರನ್ನು ಸಂರಕ್ಷಿಸುವ ಹೊಣೆಗಾರಿಕೆ ಆಕೆಗಿದೆ. ಆಕೆ ದುಷ್ಟರನ್ನು ನಿರ್ನಾಮ ಮಾಡುವ ಶಕ್ತಿಯೂ ಹೌದು. ಈ ಅರ್ಥದಲ್ಲಿ ಪರಸ್ಪರ ವಿರೋಧ ಗುಣಗಳಿರುವ ದೈವ ಆಕೆ. ಒಂದರ್ಥದಲ್ಲಿ ಆಕೆ ಸಲಹುವ ತಾಯಿ ಇನ್ನೊಂದರ್ಥದಲ್ಲಿ ಕೊಲ್ಲುವ ಕಾಳಿಯೂ ಹೌದೂ. ಇವೆರಡಲ್ಲಿ ಅಮ್ಮನಾಗಿಯೇ ಆಕೆ ಪ್ರಸಿದ್ಧಳು. ಹಾಲೂಡುವ, ಸಲಹುವ, ಕಾಪಾಡುವ ಶಕ್ತಿಯನ್ನೇ ಜನರು ಹೆಚ್ಚು ಒಪ್ಪಿಕೊಂಡು ಆಕೆಯೆದುರು ತಾವು ಮಕ್ಕಳಾಗಿದ್ದಾರೆ. ಹುಲಿಗೆಮ್ಮ ನಿನ್ನಾಲ್ಕು ಉಧೋ.. ಉಧೋ ಎಂಬ ನಿರಂತರ ಘೋಷಣೆಯಲ್ಲೂ ಆಕೆ ಅಮ್ಮನೇ ಆಗಿದ್ದಾಳೆ ಎಂದು ಹೇಳುವ ವಾಡಿಕೆ ಇದೆ.

ಅಧ್ಯಾಯ ೩
ಕರ್ನಾಟಕದ ಭಾಷಿಕ ನಕ್ಷೆಗಳು

ಅಧ್ಯಾಯ – ೩

ಕರ್ನಾಟಕದ ಭಾಷಿಕ ನಕ್ಷೆಗಳು

ಪಂಢರಪುರವು ಇಂದು ಮಹಾರಾಷ್ಟ್ರದಲ್ಲಿರುವ ಸೊಲ್ಲಾಪುರ ಜಿಲ್ಲೆಗೆ ಸೇರಿದ್ದು ವಿಠ್ಠಲನ ಪವಿತ್ರ ಕ್ಷೇತ್ರವಾಗಿದೆ. ಭೀಮಾ ನದಿಯ ತೀರದಲ್ಲಿರುವ ಈ ಕ್ಷೇತ್ರದಲ್ಲಿ ವಿಠ್ಠಲನ ಪ್ರಸಿದ್ಧ ದೇವಾಲಯವಿದೆ. ಮೂಲದಲ್ಲಿ ಕನ್ನಡದ ಅಧಿದೇವತೆಯಾಗಿರುವ ವಿಠ್ಠಲನು ಕಳೆದ ಎಂಟು ಶತಕಗಳಿಂದ ಮರಾಠಿ ಜನಮಾನಸದಲ್ಲಿ ಜನಪ್ರಿಯ ಅಧಿಪತಿಯಾಗಿ ಪ್ರಸಿದ್ಧಿ ಪಡೆದಿದ್ದಾನೆ. ಮಹಾರಾಷ್ಟ್ರದ ಎಲ್ಲ ಸಂತರು ತಮ್ಮ ಶ್ರದ್ಧಾಭಾವವನ್ನು ವಿಠ್ಠಲನಲ್ಲಿ ಸಮರ್ಪಿತಗೊಳಿಸಿದ್ದಾರೆ. ಧರ್ಮ, ಪಂಥ, ಸಂಪ್ರದಾಯಗಳ ಚೌಕಟ್ಟನ್ನು ಬದಿಗಿರಿಸಿ ಅದ್ವೈತದ ಭೂಮಿಕೆಯಿಂದ ಈ ಲೋಕ ವಿಠ್ಠಲನನ್ನು ಸ್ವೀಕರಿಸಿದ್ದಾರೆ. ತಮ್ಮ ಅಭಂಗವಾಣಿಯಿಂದ, ಶಬ್ಧವೈಭವದಿಂದ ಅವನನ್ನು ಸಾರಸ್ವತ ಲೋಕದಲ್ಲಿ ಮೆರೆಸಿದ್ದಾರೆ.

ಪಂಢರಪುರದ ವಿಠ್ಠಲನ ಪರಂಪರೆ ಮತ್ತು ಆಚರಣೆಗಳು :

ವಿಠ್ಠಲನು ವಿಷ್ಣುವೆಂದು, ಹರಿಹರನೆಂದು, ಜೈನ ತೀರ್ಥಂಕರನಾದ ನೇಮನಾಥನೆಂದು, ಬುದ್ಧನೆಂದು ಹಲವಾರು ವಾದಗಳಿವೆ. ವಿಠ್ಠಲನ ಹೆಸರಿಗೆ ಸೇರಿದ ಪಾಂಡುರಂಗವೆಂಬುದು ರುದ್ರವಾಚಿ ಪದವೆಂದು ಹೇಮಚಂದ್ರನ ದೇಶೀ ನಾಮಮಾಲೆ ಹೇಳುತ್ತದೆ. ರಂಗನೆಂದರೆ ಕೃಷ್ಣನೆಂದೂ ಮಹಾಭಾರತದ ಪಾಂಡವರ ಹಿತೈಷಿಯಾದ ಕೃಷ್ಣನೇ ಈ ಪಾಂಡುರಂಗನೆಂಬುದು ಮತ್ತೊಂದು ವಾದವಾಗಿದೆ. ದೇವರ ಸ್ವರೂಪ ಏನೇ ಇದ್ದರೂ, ಈ ಊರು ಮಾತ್ರ ಒಂದು ಕಾಲಕ್ಕೆ ಕನ್ನಡ ನಾಡಿಗೆ ಸೇರಿತ್ತು. ವಿಠ್ಠಲನು ಕನ್ನಡಿಗರ ದೇವನಾಗಿದ್ದ ಎಂಬುದು ವಿದ್ವಾಂಸರ ಮತದಿಂದ ಸ್ಪಷ್ಟವಾಗಿದೆ. ೧೨೩೭ರ ಹೊಯ್ಸಳ ಸೋಮೇಶ್ವರ ಶಾಸನದಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಭೀಮರತಿ ನದೀ ತೀರ ಸಂನವಿಷ್ಟ ಪಂಡರಿಗೆ ನಾಮಾನಾಂ ಮಹಾಗ್ರಾಮಮಧಿ ವಸತೇ ಪಂಡರೀಕ ಮನಃ ಕುಮುದ ವಿಕಾಸ ಸುಧಾಕರಾಯ ಭಗವತೇ ವಿಠ್ಠಲ ದೇವಾಯ (ದಾಸ ಸಾಹಿತ್ಯ ಮತ್ತು ಸಂಸ್ಕೃತಿ ಎಸ್.ಕೆ. ರಾಮಚಂದ್ರರಾವ್, ಪು. ೯೮, ೨೦೧೦) ಎಂಬ ಒಕ್ಕಣೆಯಿದೆ. ಹೊಯ್ಸಳ ರಾಜನಾದ ವಿಷ್ಣುವರ್ಧನನ ತಮ್ಮ ವೀರಬಲ್ಲಾಳನು ಈ ಪ್ರದೇಶವನ್ನು ಗೆದ್ದು ಅಲ್ಲಿ ಪುಂಡಲೀಕನೆಂಬ ಭಕ್ತನನ್ನು ಕಂಡು ಅವನಿಗಾಗಿ ವಿಷ್ಣು ದೇವಾಲಯವೊಂದನ್ನು ಕಟ್ಟಿಸಿದನೆಂದೂ, ಅರಸನಾದ ಬಿಟ್ಟಿಗನ ಹೆಸರನ್ನೇ ದೇವರಿಗೆ ಇಟ್ಟಿದ್ದರಿಂದ ದೇವರ ಹೆಸರು ವಿಠ್ಠಲನೆಂದಾಯಿತೆಂದೂ ಮಹಾರಾಷ್ಟ್ರದಲ್ಲಿ ನಂಬಿಕೆಯಿದೆ. ವಿಠ್ಠಲನು ಕನ್ನಡಿಗರ ದೇವನೆಂದು ಮರಾಠಿ ಸಂತರ ಹೇಳಿಕೆಗಳಿವೆ. ಮರಾಠಿ ಸಂತ ಸಾಹಿತ್ಯದ

ಪ್ರವರ್ತಕರಾದ ಜ್ಞಾನೇಶ್ವರರೇ ಕಾನಡಾ ಹೋ ವಿಠ್ಠಲು ಕರನಾಟಕೂ ಎಂದು ಹಾಡಿ ಹೊಗಳಿದ್ದಾರೆ. ನಾಮದೇವನು ಕಾನಡಾ ವಿಠ್ಠಲೂ ಹೋ ಉಭಾ ಭೀವರೇ ತೀರಿ, ನಾಮ ಬರವಾ, ರೂಪ ಬರವಾ, ದರ್ಶನ ಬರವಾ ಕಾನಡಿಯಾ ಈ ಕನ್ನಡದವನ ಹೆಸರೇ ಸೊಗಸಿನದು, ರೂಪ ಚೆಲುವಾದುದು, ನೋಟವಂತೂ ಮೋಹಕವಾದುದು ಎಂಬ ಮಾತುಗಳು ವಿಠ್ಠಲನ ಕನ್ನಡಿಗತನದ ನಿದರ್ಶನಗಳಾಗಿವೆ.

ಕನ್ನಡದ ಜನರಿಗೆ ಈ ಕ್ಷೇತ್ರ ಆದರಣೀಯವಾಗಿತ್ತೆಂಬುದು ಹಲವಾರು ಆಕರಗಳಿಂದ ಸ್ಪಷ್ಟವಾಗುತ್ತದೆ. ೧೩ನೆಯ ಶತಮಾನದ ಕನ್ನಡದ ಕವಿ ಚೌಂಡರಸನು ತನ್ನ ಅಭಿನವ ದಶಕುಮಾರ ಚರಿತೆಯನ್ನು ಅಭಂಗ ವಿಠ್ಠಲನಿಗೇ ಅಂಕಿತ ಮಾಡಿದ್ದಾನೆ. ತನ್ನನ್ನು ಶ್ರೀಮದ್ ಅಭಂಗ ವಿಠ್ಠಲ ಅವರ ಪದಾಂಭೋಜ ಮತ್ತು ಮಧುಕರ ಎಂದು ಬಣ್ಣಿಸಿಕೊಂಡಿದ್ದಾನೆ. ಪುರಂದರದಾಸರು, ಶ್ರೀಪಾದರಾಜರು, ವ್ಯಾಸರಾಯರು, ಮಧ್ವಾಚಾರ್ಯರು, ಎಲ್ಲರೂ ವಿಠ್ಠಲನ ಪರಮ ಭಕ್ತರಾಗಿದ್ದರು. ಶ್ರೀಪಾದರಾಯರಿಂದ ಪ್ರಾರಂಭವಾದ ಕನ್ನಡ ಕೀರ್ತನ ಸಾಹಿತ್ಯದಲ್ಲಿ, ಶ್ರೀಪಾದರನ್ನೊಳಗೊಂಡು ಒಟ್ಟು ೩೭ ದಾಸರು ವಿಠ್ಠಲನ ಅಂಕಿತದಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಶ್ರೀಪಾದರಾಜರ ಒಂದು ಕೃತಿಯಲ್ಲಿ ಪಂಡರಗೀಪುರಿ ಪರಿ ಸಿರಿರಂಗವಿಠ್ಠಲನೆಂದು ಅಂಕಿತವಿದೆ.

ವಿಠ್ಠಲ : ಗೋವಳಿಗ :

ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳ ಸಾಂಸ್ಕೃತಿಕ ಜೀವನವನ್ನು ಸಮೃದ್ಧಗೊಳಿಸಿದ ವಿಠ್ಠಲನು ಕ್ರಿ.ಶ. ೧೩ನೆಯ ಶತಮಾನದಲ್ಲಿ ವಿಷ್ಣು – ಕೃಷ್ಣರೂಪದಲ್ಲಿ ಲಕ್ಷಾಂತರ ಭಕ್ತರ ಹೃದಯದಲ್ಲಿ ಅಧಿಷ್ಠಿತ ಗೊಂಡಂತೆ ಕಾಣುತ್ತಾನೆ. ಆದರೆ ಅದಕ್ಕಿಂತ ಮೊದಲು ವಿಠ್ಠಲನು ಯಾವ ಸ್ಥಿತಿಯಲ್ಲಿದ್ದ ? ಯಾವ ಪಾತಳಿಯಲ್ಲಿ ಅವನ ಉಪಾಸನೆಯಾಗುತ್ತಿತ್ತು ? ಯಾವ ಯಾವ ಜನರು ಈತನ ಉಪಾಸನೆ ಮಾಡುತ್ತಿದ್ದರು? ಎಂಬುದರ ಬಗ್ಗೆ ಸಂಶೋಧಕರ ಜಿಜ್ಞಾಸೆಯು ನಿಶ್ಚಿತವಾದ ದಿಶೆಯನ್ನು ಪಡೆದುಕೊಂಡಿರಲಿಲ್ಲ. ಭಾರತದ ಇತಿಹಾಸ ಸಂಶೋಧಕ ಮಂಡಳ ಈ ಸಂಸ್ಥೆಯು ಶಕೆ ೧೮೩೬ ಮತ್ತು ೧೮೩೭ ಈ ಎರಡು ವರ್ಷಗಳ ವಾರ್ಷಿಕ ಇತಿವೃತ್ತದಲ್ಲಿ ಶ್ರೀ ವಾ. ದಾ. ಮಂಡಲೆಯವರು ಪ್ರಕಟಿಸಿದ ಧನಗರ ಗೀತೆಯಲ್ಲಿ, ಕುರುಬರ ಪರಂಪರೆಯಲ್ಲಿ ಪ್ರಚಲಿತವಾಗಿದ್ದ ವಿಠ್ಠಲ ಚರಿತ್ರೆಯನ್ನು ಕ್ರಮವಾಗಿ ಹೇಳುವ ಎರಡು ಗೀತೆಗಳು ಸಮಾವೇಶಗೊಂಡಿವೆ. ಆದರೆ ಪ್ರಕಟಗೊಂಡ ವಿಠ್ಠಲನ ಬಗೆಗಿನ ಗೋವಳಿಗರ ಈ ಮಾಹಿತಿಯು ಅಧ್ಯಯನಕಾರರ ಗಮನ ಸೆಳೆದಿರಲಿಲ್ಲ ಎಂದು ತಿಳಿದು ಬಂದಿದೆ. ಸುಮಾರು ನಲವತ್ತು ವರ್ಷಗಳ ನಂತರ ಲೋಕ ಸಂಸ್ಕೃತಿಯ ಸಂಶೋಧಕಿ, ಶ್ರೀಮತಿ ದುರ್ಗಾ ಭಾಗವತ ಇವರು

ಲೋಕ ಸಾಹಿತ್ಯಾಚಿ ರೂಪರೇಖಾ ಎಂಬ ಸಂಶೋಧನ ಗ್ರಂಥದಲ್ಲಿ ತಮಗೆ ಉಪಲಬ್ಧವಾಗಿದ್ದ ಸಾಮಗ್ರಿಯಿಂದ ಗೋವಳಿಗರ ಮೂಲ ಸ್ವರೂಪದ ಕಡೆಗೆ ಗಮನ ಸೆಳೆದರು. ಪಂಢರಪುರದ ವಿಠ್ಠಲನ ಮೂಲವು ಗೋವಳಿಗರ ಪರಂಪರೆಯಲ್ಲಿದೆ ಎಂಬ ವಿಚಾರವನ್ನು ಅವರು ಪಂಢರಿಯ ವಿಠೋಬಾ ಎಂಬ ಶೀರ್ಷಿಕೆಯ ಲಲಿತ ಪ್ರಬಂಧದಲ್ಲಿ ಸಶಕ್ತವಾಗಿ ಮಂಡಿಸಿದ್ದಾರೆ. ಈ ಪ್ರಬಂಧವು ಅವರ ಪೈಸ ಎಂಬ ಪ್ರಸಿದ್ಧ ನಿಬಂಧ ಸಂಗ್ರಹದಲ್ಲಿ ಸಮಾವೇಶಗೊಂಡಿದೆ. ದುರ್ಗಾ ಭಾಗವತರ ಈ ಸಶಕ್ತ ಪ್ರಬಂಧದ ಪ್ರಭಾವದಿಂದ ರೆವ್ಹರಂಡ ದಲರಿ ಮತ್ತು ಸೊಂಥಾಯಮರ ಮೊದಲಾದ ವಿದೇಶಿ ವಿದ್ವಾಂಸರು ಅವರು ಹಾಕಿಕೊಟ್ಟ ದಾರಿಯಲ್ಲಿ ವಿಠ್ಠಲನ ಶೋಧ ನಡೆಸಲು ಮುಂದಾದರು. ದುರ್ಗಾಬಾಯಿಯವರು ತೋರಿಸಿದ ಹಾದಿಯು ವಿಠ್ಠಲನ ಮೂಲರೂಪ ದರ್ಶನ ಮಾಡಿಸುವಂತಹದಾಗಿದೆ. ದುರ್ಗಾ ಭಾಗವತರ ವಿಠ್ಠಲನ ಬಗೆಗಿನ ಹೇಳಿಕೆಯು ಸಂಶೋಧಕರಿಗೆ ಒಂದು ಹೊಸ ತಿರುವನ್ನು ಒದಗಿಸಿತೆಂದು ತಿಳಿಯಲಾಗಿದೆ. ಕುರುಬರ ಕಥೆಗಳ ಬೆಳಕಿನಲ್ಲಿ ವಿಠ್ಠಲನ ಮೂಲ ದರ್ಶನ ಪಡೆಯುವಾಗ ದುರ್ಗಾಬಾಯಿಯರ ಪ್ರಕಾರ ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರ ಇವುಗಳ ಏಕಾತ್ಮ ಸಂಸ್ಕೃತಿಯ ಪ್ರತೀಕವೆಂದರೇನೆ ಪಂಢರಿಯ ವಿಠೊಬಾ. ಈ ಮೂರೂ ಪ್ರಾಂತಗಳಲ್ಲಿ ಭಾಷಾ ಭಿನ್ನತೆಯಿದ್ದರೂ ಅವುಗಳ ಸಂಸ್ಕೃತಿ ಒಂದೇ ಆಗಿದೆ. ಸಂಸ್ಕೃತಿ ಜಗತ್ತಿನಲ್ಲಿ ಇದೊಂದು ಅಚ್ಚರಿಯಾಗಿದೆ. ಈ ಸಂಸ್ಕೃತಿಯ ಏಕಾತ್ಮವು ಈ ಪ್ರದೇಶಗಳ ಗುಡ್ಡು ಗಾಡಿನ ಗ್ರಾಮ ಪ್ರದೇಶದ ಗೌಳಿಗ ಸಂಸ್ಕೃತಿಯಲ್ಲಿ ಅರಳಿದೆ. ವಿಠ್ಠಲ ಕಾನಡಾ ಆಗಿದ್ದಾನೆ. ಅವನು ಗೌಳಿಯೂ ಆಗಿದ್ದಾನೆ. ಕಪ್ಪು ಕಂಬಳಿ ಹೊದೆಯುತ್ತಾನೆ. ಅವನಿಗೆ ರಾಹಿ, ರುಕ್ಮಿಣಿ ಎಂಬ ಇಬ್ಬರು ಪತ್ನಿಯರಿದ್ದಾರೆ. ರಾಹಿ ಇಲ್ಲವೆ ರಾಧಾ ಉಳಿದೆಡೆ ಕೃಷ್ಣನ ಪ್ರೇಯಸಿಯಾಗಿದ್ದರೆ, ಮಹಾರಾಷ್ಟ್ರದಲ್ಲಿ ಮಾತ್ರ ಅವಳು ಅವನ ಹೆಂಡತಿಯಾಗಿದ್ದಾಳೆ. ರುಕ್ಮಿಣಿಯೇ ಅವನ ನಿಜವಾದ ರಾಣಿ. ಆದರೆ ವಿಠ್ಠಲ ಅವಳಲ್ಲಿ ಸಿಲುಕಿಕೊಂಡ ಗಂಡನಲ್ಲ. ಪಂಢರಪುರದಲ್ಲಿ ಇಬ್ಬರ ದೇವಾಲಯಗಳು ಬೇರೆ ಬೇರೆಯಾಗಿವೆ. ರಾಹಿ ಬಂದಳೆಂದು ರುಕ್ಮಿಣಿ ಮುನಿದಳೆಂದು ಓವಿಯಲ್ಲಿ ಹೇಳಲಾಗುತ್ತದೆ. ಆದರೆ ಕುರುಬರಿಂದ ನನಗೆ ಸಿಕ್ಕ ಕಥೆಯಲ್ಲಿ ಈ ದಂಪತಿಗಳ ವಿಚಿತ್ರ ವಿರಹದ ಮನೋಜ್ಞ ಕಾರಣ ನೀಡಲಾಗಿದೆ ಎಂದು ದುರ್ಗಾ ಭಾಗವತರು ಉಲ್ಲೇಖಿಸಿದ್ದಾರೆ. ದುರ್ಗಾ ಭಾಗವತರಿಗೆ ವಿಠ್ಠಲ ಮತ್ತು ಪದುಬಾಯಿ ಬೇರ್ಪಟ್ಟ ಕಥೆಯು ಕುರುಬರಿಂದ ಉಪಲಬ್ಧಗೊಂಡಿದ್ದು, ಆ ಘಟನಾ ಸ್ಥಳವು ಪಟ್ಟಣಕೋಡೋಲಿಯಾಗಿರದೆ ಪಂಢರಪುರದ ಮಾಳಶಿರಸವಾಗಿದೆ. ವಿಠ್ಠಲನು ಪಂಢರಪುರದಲ್ಲಿ ನೆಲೆಸುವುದಕ್ಕಿಂತ ಮೊದಲು ಮಾಳಶಿರಸದಲ್ಲಿದ್ದ ಎಂಬುದರ ಬಗೆಗೆ ಒಂದು ಲೋಕಕಥೆಯಿದೆ.

ವಿಠೋಬನ ಶಾಪದಿಂದ ಪದುಬಾಯಿ ಹುಣಿಸೆಮರದ ಕೆಳಗೆ ಸತ್ತು ಬಿದ್ದ ನಂತರ ಅವಳ ತವರಿನ ಜನ ಅಲ್ಲಿ ಸೇರಿದರು. ಆದರೆ ವಿಠೋಬನು ಅಲ್ಲಿ ನಾಗನಾಗಿ ಘೂತ್ಕರಿಸುತ್ತ ನಿಂತಿದ್ದರಿಂದ ಯಾರೂ ಅವಳ ದೇಹವನ್ನು ಮುಟ್ಟಲಿಲ್ಲ. ನಂತರ ವಿಠ್ಠಲನು ಅವಳ ಕೂದಲು ಕತ್ತರಿಸಿ ಹುಣಿಸೆ ಮರಕ್ಕೆ ಕಟ್ಟಿ ಅವಳ ಮಾಂಸವನ್ನು ಹದ್ದುಗಳಿಗೆ ಚೆಲ್ಲಿದ. ಮೇಘಕ್ಕೆ ಅವಳ ಎಲುಬುಗಳನ್ನು ಸಮುದ್ರಕ್ಕೆ ತೆಗೆದುಕೊಂಡು ಹೋಗಲು ಅಪ್ಪಣೆ ಮಾಡಿದ. ಇದನ್ನು ಕೇಳಿ ವಿಠೋಬನ ಪರಮಭಕ್ತನಾದ ಮಳಿರಾಯನಿಗೆ ಪಶ್ಚಾತ್ತಾಪವಾಯಿತು. ಅವನು ಸಮುದ್ರದಿಂದ ಪದುಬಾಯಿಯ ಅಸ್ತಿಗಳನ್ನು ಪಡೆಯುವುದಕ್ಕಾಗಿ ತಪಸ್ಸು ಮಾಡಿದ. ತಪದ ಬಲದಿಂದ ಸಮುದ್ರವು ಕರಗಿತು. ಮಳಿರಾಯನು ಪದುಬಾಯಿಯ ಅಸ್ತಿಗಳನ್ನು ಮರಳಿ ಪಡೆದ ಹಾಗೂ ಅವುಗಳನ್ನು ತಂದು ಪಂಢರಪುರದ ಚಂದ್ರಭಾಗಾದಲ್ಲಿ ಚೆಲ್ಲಿದ. ಅಲ್ಲಿ ಅದು ಕಮಲವಾಗಿ ಅರಳಿತು. ಆ ಕಮಲವನ್ನು ವಿಠೋಬ ಕಿತ್ತಿದ. ಆ ಸ್ಥಳದಲ್ಲಿ ಪದುಬಾಯಿ ಪುನಃ ಪ್ರತ್ಯಕ್ಷಳಾದಳು. ಅಲ್ಲಿ ಪ್ರಕಟಗೊಂಡ ಪದುಬಾಯಿ ಅಂದರೆ ರುಕ್ಮಿಣಿ ಎಂದು ಕುರುಬರ ಪರಂಪರೆ ಹೇಳುತ್ತದೆ.

ಪಂಢರಪುರದಲ್ಲಿ ಪದುಬಾಯಿ ಅಂದರೆ ಪದ್ಮಾವತಿ ಎಂಬ ಲೋಕದೇವಿಯು ಸಿಂಧೂರ ಬಣ್ಣದ ಶಿಲಾರೂಪದಲ್ಲಿ ಪೂಜಿಸಲ್ಪಟ್ಟಂತೆ, ಮುನಿದ ರಖುಮಾಯಿಯು ಲಖುಬಾಯಿ ಎಂಬ ಮೂಲಹೆಸರಿನಲ್ಲಿ ಅವಳೂ ಶಿಲಾರೂಪದಲ್ಲಿಯೇ ಪೂಜಿಸಲ್ಪಡುತ್ತಾಳೆ. ಅವಳು ಡಿಂಡಿರವನದಲ್ಲಿ ನೆಲೆಸಿದ್ದಾಳೆ. ಅವಳ ನೆರೆಯಲ್ಲಿ ಅಂಬಿಗ – ಗೌಳಿಸಮಾಜದವರಿಗೆ ಪ್ರಿಯಳಾದ ಮ್ಹಾಳಸಾದೇವಿಯು ಬೇರೊಂದು ಸ್ವತಂತ್ರ ಮಂದಿರದಲ್ಲಿ ವಿರಾಜಮಾನಳಾಗಿದ್ದಾಳೆ. ಲಕ್ಷ್ಮಿ ಇಲ್ಲವೆ ಲಖುಬಾಯಿಯು ಕುರುಬರಲ್ಲಿ ಕುರಿ ಮತ್ತು ದನಕರುಗಳ ಸಂಪತ್ತಿನ ದೇವತಾ ವಾಚಕ ಹೆಸರು ಎಂದು ಸುಪರಿಚಿತವಾಗಿದೆ. ಪ್ರತ್ಯಕ್ಷದಲ್ಲಿ ದೇವಿಯೂ ಕುರಿವಾಡೆಯಲ್ಲಿಯೇ ಇರುತ್ತಾಳೆ. ಆದ್ದರಿಂದ ಕಾಲಲ್ಲಿ ಮೆಟ್ಟನ್ನು ಧರಿಸಿ ಕುರಿವಾಡೆಯನ್ನು ಪ್ರವೇಶಿಸಿದರೆ ಅವಳಿಗೆ ಅಪಮಾನವಾಗುತ್ತದೆ ಎಂಬ ಪ್ರತ್ಯಕ್ಷ ನಿರೀಕ್ಷಣೆಯಿಂದ ಒದಗಿಸಿದ ಈ ಮಾಹಿತಿಯು ಮಹತ್ವದ್ದಾಗಿದೆ. ಗಜಲಕ್ಷ್ಮಿ ಎಂಬುದು ಅವಳ ಉನ್ನತ ಮೂರ್ತಿರೂಪವಾಗಿದೆ.

ವಿಠ್ಠಲನ ಮೂಲ ಉಪಾಸಕರಾದ ಆಂಧ್ರ, ಕರ್ನಾಟಕದ ಕುರುಬರನ್ನು ಮತ್ತು ವಿಶೇಷವಾಗಿ ದಕ್ಷಿಣ ಮಹಾರಾಷ್ಟ್ರದ ಧನಗರರನ್ನು ಇಂದಿಗೂ ಆಂಧ್ರ ಹಾಗೂ ಕರ್ನಾಟಕಗಳಲ್ಲಿ ಯಾದವರೆಂದು ಗುರುತಿಸುತ್ತಾರೆ. ಯಾದವರೆಂದರೆ ದನಕರುಗಳನ್ನು, ಆಡು ಕುರಿಗಳನ್ನು ಸಾಕುವ ಜನರು. ಕಾಲಿಗೆ ದಪ್ಪವಾದ ಮೆಟ್ಟು, ಸೊಂಟಕ್ಕೆ ತ್ರಿಕೋನಾಕಾರದ ಬಟ್ಟೆಯ ತುಂಡು, ಕೈಯಲ್ಲಿ ಕೋಲು, ತಲೆಗೆ ಬಣ್ಣದ ಮುಂಡಾಸು ಧರಿಸುವ ಇಂತಹ ವೇಷದ ಕುರುಬರನ್ನು ಈ

ಪ್ರದೇಶಗಳಲ್ಲಿ ಕಾಣುವುದು ಒಂದು ಸಾಮಾನ್ಯ ದೃಶ್ಯವಾಗಿದೆ. ವಿಠ್ಠಲನ ವೈಷ್ಣವ ಉಪಾಸನೆಯ ಆದ್ಯ ಕೇಂದ್ರವಾದ ಪಂಢರಪುರದ ಸುತ್ತಮುತ್ತಲಿನ ಪರಿಸರವು ಧನಗರ ವಸತಿಯಿಂದ ವ್ಯಾಪಿಸಿಕೊಂಡಿದೆ. ಕುರುಬರ ದೇವರಲ್ಲಿ ಬೀರಪ್ಪನು ಅತ್ಯಂತ ಹೆಚ್ಚು ಜನಪ್ರಿಯನಾಗಿದ್ದಾನೆ. ಇವನು ಸ್ವತಂತ್ರವಾಗಿ ಹಲವು ಸ್ಥಳಗಳಲ್ಲಿ ನೆಲೆಸಿದ್ದಾನೆ. ಆದರೆ ವಿಠ್ಠಲ ಮಾತ್ರ ಅಭಿನ್ನ ಸಹಚರನಾಗಿ ಬೀರಪ್ಪನ ಜೊತೆಗೇ ನೆಲೆಸಿರುತ್ತಾನೆ. ಎಲ್ಲೆಲ್ಲಿ ಕುರುಬ ವಿಠ್ಠಲನ ಕೇಂದ್ರವಿದೆಯೋ ಅಲ್ಲಿ ಅವನು ಬೀರಪ್ಪನ ಜೊತೆಗಿದ್ದಾನೆ. ವಿಠ್ಠಲನು ಗೋಧನದ ಮೂಲಕ ಗೌಳಿಗಳ ಪ್ರತಿನಿಧಿಯಾದರೆ, ಬೀರಪ್ಪನು ಕುರಿಗಳು ಧನವಾಗಿರುವ ಕುರುಬರ ಪ್ರತಿನಿಧಿಯಾಗಿದ್ದಾನೆ. ಕುರುಬರ ಕಥಾ ಭಂಡಾರದಲ್ಲಿಯೂ ವಿಠ್ಠಲನ ಗೌಳಿತನ ಉಳಿಸಿಕೊಂಡಿದೆ. ಅವರ ಪತ್ನಿಯನ್ನು ಪದೂಗೌಳಣ ಎಂದು ಉಲ್ಲೇಖಿಸಲಾಗಿದೆ.

ವಿಠ್ಠಲ ಮತ್ತು ವೆಂಕಟೇಶರ ಗೋವಳಿಗ ಸಂಬಂಧವು ಅತ್ಯಂತ ಪ್ರಾಚೀನವಾದುದು ಎಂಬುದು ಗೋವಳಿಗರ ಪರಂಪರೆಯಿಂದ ತಿಳಿದು ಬರುತ್ತದೆ. ವಿಠ್ಠಲ ವೆಂಕಟೇಶರು ಸಮಧರ್ಮಿಗಳಾಗಿದ್ದಾರೆ. ಇಬ್ಬರೂ ಗೋವಳಿಗರ ಒಂದೇ ದೇವರಾಗಿದ್ದು, ಎರಡು ಸ್ಥಳಗಳಲ್ಲಿ ಸ್ವಲ್ಪ ಭಿನ್ನ ರೂಪಗಳಲ್ಲಿ ಉತ್ಕ್ರಾಂತಿ ಹೊಂದಿದ್ದಾರೆ. ಗೌಳಿ – ಕುರುಬರ ವಿಠ್ಠಲ ಬೀರಪ್ಪನು ಇಬ್ಬರಿಗೂ ಮೂಲ ಸ್ರೋತನಾಗಿದ್ದಾನೆ. ವಿಠ್ಠಲನು ಪಂಢರೀಶನಾಗಿದ್ದಾನೆ. ಪಂಡರಿಗೆಯ ಸ್ವಾಮಿಯಾಗಿದ್ದಾನೆ. ವೆಂಕಟೇಶನು ವೆಂಗಡಮ್‌ದ ಸ್ವಾಮಿಯಾಗಿದ್ದುದರಿಂದ ವೆಂಕಟೇಶನಾಗಿದ್ದಾನೆ. ವಿಠ್ಠಲನು ಗೋವಳಗನೊಂದಿಗೆ, ವೆಂಕಟೇಶನು ತಿರುಮಲನೊಂದಿಗೆ ಸಂಬಂಧ ಹೊಂದಿದ್ದಾನೆ. ಪ್ರಾಚೀನ ಕಾಲದಲ್ಲಿ ಗೋಪಾಲ ಜನರು ಪಂಢರಪುರದ ಹತ್ತಿರ ಗೋಪಾಳಪುರುದಲ್ಲಿರುತ್ತಿದ್ದರು. ವಿಠ್ಠಲನ ಪೂಜೆ ಮಾಡುತ್ತಿದ್ದರು. ಹಾಲು ಮಾರುತ್ತಿದ್ದರು. ಜನರು ಅವರನ್ನು ಗೌಳಿ ಎಂದು ಕರೆಯುತ್ತಿದ್ದರು. ಒಂದು ಸಲ ಗೋಪಾಲರು ಪಂಢರಪುರದಿಂದ ಪಚಮಢಿಗೆ ಹೋದರು. ಅಲ್ಲಿ ನಡೆದ ದುರ್ಘಟನೆಯಿಂದ ಅವರು ಚದುರಿ ಹೋದರು. ವಿಭಿನ್ನ ಕುಲನಿರ್ಮಾಣ ನಡೆಯಿತು. ಗೋಪಾಳರು ಕೃಷ್ಣ–ವಿಠ್ಠಲನೊಂದಿಗೆ ಸಂಬಂಧವನ್ನು ಜೋಡಿಸಿದರೆ, ತಿರುಮಲ ತಿರುಮಳಿಗಳು ತಮ್ಮ ಜೊತೆಗೆ ವೆಂಕಟೇಶನ ಸಂಬಂಧವನ್ನು ಜೋಡಿಸುತ್ತಾರೆ. ಇವರು ತಮ್ಮ ಜೊತೆಗೆ ಕೌಲೆತ್ತು ತೆಗೆದುಕೊಂಡು ಭಿಕ್ಷೆ ಬೇಡಿ ಜೀವನ ಸಾಗಿಸುತ್ತಾರೆ. ಇವರನ್ನು 'ನಂದಿ ಬಸವ' ಎಂತಲೂ ಕರೆಯುತ್ತಾರೆ. ಪಂಢರಪುರದಲ್ಲಿ ವಿಷ್ಣು–ಕೃಷ್ಣ ರೂಪದಲ್ಲಿ ವಿಠ್ಠಲನ ಉನ್ನಯನ ಪರಿಪೂರ್ಣತೆ ಹೊಂದಿದ ನಂತರವೂ ಸಹ ಗೋವಳಿಗರ ಆದಿಮ ಅವಸ್ಥೆಯಲ್ಲಿದ್ದ ವಿಠ್ಠಲನು ಲುಪ್ತವಾಗಲಿಲ್ಲ. ಹಲವು ಕಡೆಗಳಲ್ಲಿ ತನ್ನ ಮೂಲರೂಪವನ್ನು ಸಂಭಾಳಿಸಿಕೊಂಡು ನೆಲೆಸಿದ್ದಾನೆ.

ವಿಠ್ಠಲ ಮತ್ತು ವೀರಗಲ್ಲು :

ವಿಠ್ಠಲನು ಮೂಲದಲ್ಲಿ ಒಬ್ಬ ಲೋಕದೇವನಾಗಿದ್ದಾನೆ. ಅವನು ದಕ್ಷಿಣದ ಗೋವಳಿಗರ ದೇವರಾಗಿದ್ದಾನೆ ಎಂಬುದರಲ್ಲಿ ಸಂಶಯವಿಲ್ಲ. ವಿಠ್ಠಲನು ಒಂದು ವೇಳೆ ಲೋಕದೇವರಾಗಿದ್ದರೆ, ಗೋವಳಿಗರ ದೇವರಾಗಿದ್ದರೆ, ಜಾನಪದ ಪರಂಪರೆಯಲ್ಲಿ ಅದರಲ್ಲೂ ವಿಶೇಷವಾಗಿ ಗೋವಳಿಗರ ಪರಂಪರೆಯಲ್ಲಿ ಯಾವ ದೇವರು ಕಟಿನ್ಯಸ್ತಕರದ ಮುದ್ರೆಯಲ್ಲಿದ್ದಾನೋ, ಅವನೊಂದಿಗೇನೆ ವಿಠ್ಠಲನ ಆತ್ಮೀಯ ಸಂಬಂಧ ಪ್ರಸ್ತಾಪಿತವಾಗಬಹುದಾಗಿದೆ. ವಿಠ್ಠಲ ಮೂರ್ತಿಯ ಉತ್ಕ್ರಾಂತಿಯನ್ನು ಮಂಡಿಸುವಾಗಲೂ ಈ ಪ್ರಕಾರದ ಜಾನಪದ ದೇವರ ಮೂರ್ತಿಯನ್ನು ಕುರಿತು ಯೋಚಿಸಬೇಕಾಗುವುದು ಅನಿವಾರ್ಯವಾಗುತ್ತದೆ. ಲೋಕಪರಂಪರೆಯಲ್ಲಿ, ಅದರಲ್ಲೂ ಗೋವಳಿಗ ಪರಂಪರೆಯಲ್ಲಿ ಈ ರೀತಿಯ ಮುದ್ರೆ ಹೊಂದಿದ ಅಸಂಖ್ಯ ಮೂರ್ತಿಗಳು ಮಹಾರಾಷ್ಟ್ರ ಹಾಗೂ ಕರ್ನಾಟಕದ ಊರುಗಳಲ್ಲಿವೆ. ಈ ಮೂರ್ತಿಗಳು ವೀರದೇವರದಾಗಿವೆ. ಆರಾಧನೆಯ ಸ್ಥಾನವನ್ನು ಪಡೆದ ಮೃತವೀರರ ಸ್ಮಾರಕಗಳೆಂದು ಅವುಗಳನ್ನು ನಿರ್ಮಿಸಲಾಗಿದೆ. ಕುರುಬರ ವಿಠ್ಠಲನ ಉಪಾಸನೆಯ ಮುಖ್ಯ ಕೇಂದ್ರವಾದ ಪಟ್ಟಣ ಕೋಡೋಲಿ (ಜಿ. ಕೊಲ್ಹಾಪುರ) ಎಂಬಲ್ಲಿ ವಿಠ್ಠಲ ಬೀರಪ್ಪನ ದಿನ್ನೆಯ ಮೇಲೆ ಕುರುಬರ ಪೂರ್ವಜರ ಹಲವು ಸ್ಮಾರಕ ಶಿಲೆಗಳಿವೆ. ಅದರಲ್ಲೂ ಕಟಿನ್ಯಸ್ತಕರ ಸ್ಥಿತಿಯಲ್ಲಿರುವ ಮೂರ್ತಿಗಳು ನಮಗೆ ನೋಡಲು ಸಿಗುತ್ತವೆ. ಪುಣೆಯ ಏರಂಡವಣೆಯ ಭಾಗದಲ್ಲಿ ಇಂತಹ ಮೂರ್ತಿಗಳು ಅಥವಾ ವೀರ ಸ್ಮಾರಕ ಕಲ್ಲುಗಳು ಇವೆ. ಬಿಹಾರದಲ್ಲಿ ವೀರ ಕುಮಾರ ಎಂಬ ಹೆಸರಿನ ಕೃಷ್ಣರೂಪ ಧರಿಸಿದ ಅಹಿರ ಎಂಬ ಒಬ್ಬ ಪ್ರಸಿದ್ಧ ವೀರ ದೇವರಿದ್ದಾನೆ. ಗೋವುಗಳ್ಳರ ಹಲ್ಲೆಯಿಂದ ತಮ್ಮ ಗೋಧನ ರಕ್ಷಿಸುವುದಕ್ಕಾಗಿ ಮೃತ್ಯುಮುಖಿಯಾದ ಅಹಿರನಿಗೇ ಈ ದೇವರೂಪ ಪ್ರಾಪ್ತವಾಗಿದೆ. ಅವನು ಗೋಪಾಲನಾಗಿದ್ದಾನೆ. ವೀರನೂ ಕುಮಾರನೂ ಆಗಿದ್ದಾನೆ. ಆದ್ದರಿಂದ ಗೋಪಾಲ ಕೃಷ್ಣನಲ್ಲಿ ಅವನ ಉನ್ನಯನವಾಗಿರುವುದು ಸ್ವಾಭಾವಿಕವಾಗಿದೆ.

ಗೌಳಿ ಕುರುಬರಂತಹ ದಕ್ಷಿಣದ ಗೋವಳಿಗರಲ್ಲೊಬ್ಬ ಪುರುಷನು ತನ್ನ ಗೋಧನದ ರಕ್ಷಣೆಯ ಹೋರಾಟದಲ್ಲಿ ವೀರ ಮರಣ ಹೊಂದಿರಬೇಕು. ಅವನ ಕಟಿನ್ಯಸ್ತಕರ ಸ್ಥಿತಿಯ ಸ್ಮಾರಕವು ಪೂಜಾ ವಿಷಯವಾಗಿ ಕಾಲಕ್ರಮದಲ್ಲಿ ಗೋಪಾಲಕೃಷ್ಣನ ರೂಪದಲ್ಲಿ ಉನ್ನಯನಗೊಂಡಿರಬೇಕು, ಎಂಬುದು ಸಾಧಾರ ಹೇಳಿಕೆಯಾಗಿದೆ.

ಆದರೆ ವಿಠ್ಠಲನು ಇಂಥದೊಂದು ವೀರಗಲ್ಲಿನ ಉನ್ನಯನದಿಂದ ನಿರ್ಮಾಣಗೊಂಡ ದೇವರೆಂದು ಖಚಿತವಾಗಿ ಹೇಳಲು ಮಹಾನುಭಾವರ ಗ್ರಂಥ (ಲೀಲಾಚರಿತ್ರೆ)ದ ಕಥೆಯ

ಹೊರತಾಗಿ ಬೇರೆ ನಿರ್ಣಾಯಕ ಪುರಾವೆ ಉಪಲಬ್ಧವಾಗಿಲ್ಲ. ಸೊಂಥಾಯಮರ ಇವರು ದಲರಿಯ ಮಾತವನ್ನು ಪುರಸ್ಕರಿಸುತ್ತಾರೆ. ಅವರ ಶೋಧದಲ್ಲಿ ಪಂಢರಪುರದ ಮಹಾದ್ವಾರದ ಎದುರಿನ ಭಾಗದಲ್ಲಿ ಒಂದು ವೀರ ಸ್ಮಾರಕ ಶಿಲೆ ದೊರಕಿದೆ. ಇದು ಲೀಲಾಚರಿತ್ರೆಯಲ್ಲಿಯ ವಿಠ್ಠಲ ವೀರ ಕಥನ ಈ ಲೀಲೆಯ ಸ್ಮರಣೆಯಾಗಿದೆ. ಸೊಂಥಾಯಮರ ಅವರ ವೀರಗಲ್ಲು ಹಾಗೂ ಲೀಲಾಚರಿತ್ರೆಯಲ್ಲಿಯ ಕಥೆಯ ಕಡೆಗೆ ತುಳಪುಳೆಯವರು ಸಮ್ಮತಿಸಿ ಮರಾಠಿ ಸಂಶೋಧನಪತ್ರಿಕೆಯಲ್ಲಿ ವಿಠ್ಠಲ ಮೂಲದಲ್ಲಿ ವೀರಗಲ್ಲೇ ಎಂಬ ಲೇಖನ ಬರೆದು ದಲರಿಯ ಮತಕ್ಕೆ ಸಿದ್ಧಾಂತ ನೀಡುವ ಪ್ರಯತ್ನ ಮಾಡಿದರು. ಧನಪಾಲವಾರ ಅವರು ದಲರಿಯವರ ಮತಕ್ಕೆ ಬೆಂಬಲ ವ್ಯಕ್ತಪಡಿಸುವಾಗ ವಿಠ್ಠಲಾಚಾ ಮೂಲ ರೂಪಾಚಾ ಶೋಧ ಎಂಬ ಲೇಖನದಲ್ಲಿ ತಮಗೆ ಆಂಧ್ರದಲ್ಲಿ ಉಪಲಬ್ಧವಾಗಿರುವ ವೀರದೈವತ ವಿಷಯಕ ಸಾಮಗ್ರಿಯನ್ನು ಸಾದರ ಪಡಿಸಿದ್ದಾರೆ. ಆಂಧ್ರದ ಪಲನಾಡು ಎಂಬ ಸ್ಥಾನವು ವೀರಗಲ್ಲಿನ ಆಗರವಾಗಿದೆ. ವೈಷ್ಣವರ ಮಹತ್ವದ ಕೇಂದ್ರವೂ ಆಗಿದೆ. ಆ ಭಾಗದಲ್ಲಿಯ ಹಲವು ಸ್ಮಾರಕಗಳಿಗೆ ವೈಷ್ಣವ ಪ್ರತಿಷ್ಠೆ ಪ್ರಾಪ್ತವಾಗಿದೆ. ಆ ವೈಷ್ಣವೀಕರಣ ಹೊಂದಿದ ವೀರ ದೇವರಲ್ಲಿ ವಿಠ್ಠಲ ಹೆಸರಿನಿಂದ ಪ್ರಖ್ಯಾತಗೊಂಡ ದೇವರಿಲ್ಲ ಎಂಬುದು ಗಮನಿಸಬೇಕಾದ ವಿಷಯವಾಗಿದೆ. ಲೀಲಾ ಚರಿತ್ರೆ ಎಂಬ ಪ್ರಾಚೀನ ಮರಾಠಿ ಗ್ರಂಥದಲ್ಲಿ ವಿಠ್ಠಲ ವೀರಕಥನ ಎಂಬ ಹೆಸರಿನ ಸ್ಮೃತಿ ಇದೆ. ಮಹಾರಾಷ್ಟ್ರದ ಬಹುಸಂಖ್ಯಾತ ಜನರ ಆರಾಧ್ಯ ದೈವವಾದ ವಿಠ್ಠಲನ ಉದಯದ ಬಗೆಗೆ ವಿಲಕ್ಷಣ ಮತ ನೋಂದಾಯಿಸಿರುವ ಈ ಗ್ರಂಥವು ಮಹಾನುಭಾವ ಸಂಪ್ರದಾಯದವರದಾಗಿದೆ. ಈ ಗ್ರಂಥದಲ್ಲಿ ವರ್ಣಿಸಿದ ವಿಠ್ಠಲ ವೀರನು ಗೋರಕ್ಷಕ ವೀರನಾಗಿರದೆ, ಗೋ-ಚೋರ ವೀರನಾಗಿದ್ದಾನೆ. ವಿಠ್ಠಲನು ಗೋಚೋರನಾದುದರಿಂದ ಅವನು ಗೋ-ಪಾಲ ಕೃಷ್ಣನ ಅವತಾರವಾಗುವುದು ಸಾಧ್ಯವಿಲ್ಲ ಎಂಬುದು ಮಹಾನುಭಾವ ಸಂಪ್ರದಾಯದವರ ಮತಿತಾರ್ಥವಾಗಿದೆ. ವಿಠ್ಠಲನನ್ನು ನೀಚನೆಂದು ನಿರ್ಧರಿಸಿದ್ದಷ್ಟೇ ಅಲ್ಲದೆ ವಿಠ್ಠಲನ ಉಪಾಸಕರನ್ನು ನಿಂದಿಸುವ ಪ್ರವೃತ್ತಿ ಈ ಗ್ರಂಥಕರ್ತನದಾಗಿತ್ತು. ವಿಠ್ಠಲನ ಪುತ್ರರು ಅವನಿಗೆ ದೇವತ್ವದ ಪ್ರತಿಷ್ಠೆ ಮಾಡಿಕೊಟ್ಟು, ಬಳಿಕ ತಮ್ಮ ಮಾತಾ ಪಿತರ ವಿಠ್ಠಲ-ರುಕ್ಮಿಣಿ ಎಂಬ ಹೆಸರನ್ನೂ ಮುದ್ರಿಕೆಯಲ್ಲಿ ತುರುಕಿ ಅವರ ಭಕ್ತಿಪರ ಪದ್ಯಗಳನ್ನು ರಚಿಸಿದದು ಎಂದು ಹೇಳಲಾಗಿದೆ. ಜ್ಞಾನದೇವರ ಹಲವು ಅಭಂಗಗಳಲ್ಲಿ ಬಾಪರಖುಮಾದೇವಿವರ ಎಂಬ ಅಂಕಿತವನ್ನು ಹೆಸರಿಸಲಾಗಿದೆ. ಅದು ಅವರ ತಾಯಿ-ತಂದೆಗಳ ಹೆಸರೂ ಆಗಿತ್ತು. ಹೀಗೆ ಲೀಲಾಚರಿತ್ರೆಕಾರನ ಪ್ರಕಾರ ವಿಠ್ಠಲ ಒಬ್ಬ ಗೋಚೋರ ವೀರ, ಅವನು ಪಂಢರಿಯಲ್ಲಿ ಕೊಲ್ಲಲ್ಪಟ್ಟ. ಅವನ ಮಕ್ಕಳು ಅವನಿಗೆ ದೇವತಾ ಪ್ರತಿಷ್ಠೆ ನೀಡಿದರು. ವಾರಕರಿ ಸಂಪ್ರದಾಯದ ಪರಮಾರಾಧ್ಯ ದೇವತೆ ವಿಠ್ಠಲ ಹಾಗೂ ಆ ಸಂಪ್ರದಾಯಕ್ಕೆ ಬುನಾದಿ ಹಾಕಿದ

ಜ್ಞಾನದೇವನನ್ನು ಕುರಿತು ನಿಂದಾಭಾವವು ಇಲ್ಲಿ ಜಾಗ್ರತೆಗೊಳ್ಳುವಂತಿದೆ. ಮಹಾನುಭಾವ ಪಂಥದವರ ಕೃಷ್ಣನು ಸಾಕ್ಷಾತ್ ಪರಮೇಶ್ವರನ ಅವತಾರವಾಗಿದ್ದಾನೆ. ಕೃಷ್ಣನು ವಿಷ್ಣುವಿನ ಅವತಾರ ವೆಂಬುದು ಮಹಾನುಭಾವ ಪಂಥದವರಿಗೆ ಒಪ್ಪಿಗೆ ಇಲ್ಲ. ಮಹಾನುಭಾವ ಪಂಥವು ವಾರಕರಿ ಸಂಪ್ರದಾಯಕ್ಕೆ ತೀರ ಹತ್ತಿರವಾಗಿದೆ. ಏಕೆಂದರೆ ಅದು ವಾರಕರಿ ಸಂಪ್ರದಾಯದಂತೆ ಕೃಷ್ಣನ ಉಪಾಸಕ ಪಂಥವಾಗಿದೆ. ಅಹಿಂಸಾ ತತ್ವಕ್ಕೆ ಪುರಸ್ಕೃತವಾಗಿದೆ. ಮದ್ಯ ಮಾಂಸದ ನಿಷೇಧವಿದೆ. ಭಕ್ತಿಮಾರ್ಗದ ಹಾದಿಯೂ ಒಂದೇ ಆಗಿದೆ. ಇಷ್ಟೆಲ್ಲ ಸಮಾನತೆ ಇದ್ದರೂ ವಾರಕರಿ ಸಂಪ್ರದಾಯದಂತೆ ವಿಠ್ಠಲನನ್ನು ಕೃಷ್ಣನೆಂದು ಒಪ್ಪಿಕೊಳ್ಳಲು ಸಿದ್ಧವಿಲ್ಲ. ಚಕ್ರಧರನ ವಚನದಲ್ಲಿ ಎಲ್ಲಿಯೂ ವಿಠ್ಠಲನಿಗೆ ಮಾನ್ಯತೆ ನೀಡಿದ್ದು ಕಂಡು ಬರುವುದಿಲ್ಲ. ಲೀಲಾಚರಿತ್ರೆಯಲ್ಲಿಯ ಸಾಂಪ್ರದಾಯಿಕ ದ್ವೇಷದ ಸ್ವರೂಪವನ್ನು ಬದಿಗಿಟ್ಟರೆ ಅದರಲ್ಲಿ ವೀರಗಲ್ಲಿನ ನಿರ್ಮಿತಿ, ಅವುಗಳಿಗೆ ಪ್ರಾಪ್ತವಾದ ದೇವತಾ ಪ್ರತಿಷ್ಠೆ, ಸಮಾಜದಲ್ಲಿ ಯಾರಿಗೆ ವೀರತ್ವ ಕೊಡಲಾಗುತ್ತಿತ್ತು? ವೀರರ ವೃತ್ತಿ – ಪ್ರವೃತ್ತಿಗಿಂತಲೂ ಅವರ ಮೇಲೆ ವಿರುದ್ಧ ಗುಣಗಳ ಆರೋಪವನ್ನು ಹೇಗೆ ಹೆಸರಿಸಲಾಗುತ್ತಿತ್ತು? ಈ ಎಲ್ಲ ಪ್ರಕ್ರಿಯೆಗಳು ವಿಠ್ಠಲ ವೀರಕಥನ ದಿಂದ ತಿಳಿದು ಬರುತ್ತವೆ. ಮಹಾನುಭಾವ ಪಂಥವು ಐತಿಹಾಸಿಕ ಸತ್ಯವನ್ನು ವಸ್ತುನಿಷ್ಠವಾಗಿ ಹೇಳದೆ, ಪರದೈವ ನಿಂದೆ ಮಾಡುವ ಉದ್ದೇಶ ಉಳ್ಳದ್ದಾಗಿದೆ ಎಂಬುದನ್ನು ನಿರಾಕರಿಸುವಂತಿಲ್ಲ.

ಮರಾಠಿ ಸಂತರು ವಿಠ್ಠಲನನ್ನು ವೈಕುಂಠಾಧಿಪತಿ ವಿಷ್ಣುವೆಂದು, ದ್ವಾರಕೆಯ ರಾಣಾಯೆಂದು ಬಣ್ಣಿಸಿದರೂ ವಿಠ್ಠಲನು ಬಾಳಕೃಷ್ಣನೇ ಎಂಬ ಧೋರಣೆಯು ಮಾತ್ರ ಬಹಳ ಪ್ರಚಲಿತಗೊಂಡಿದೆ. ಅವನ ಬಾಲರೂಪವು ಸಂತರಿಗೆ ಪ್ರಿಯವಾಗಿದೆ. ವಿಠ್ಠಲ ಮೂರ್ತಿಯ ಸಾಂಪ್ರದಾಯಿಕ ಸ್ಪಷ್ಟೀಕರಣವೂ ಸಹ ವಿಠ್ಠಲನು ಬಾಲಕೃಷ್ಣನೆಂದು ಒಪ್ಪಿಕೊಳ್ಳುವಂತಹದೇ ಆಗಿದೆ. ವಿಠ್ಠಲನಿಗೆ ಸಂಬಂಧಿಸಿದ ಪಾರಂಪಾರಿಕ ಭಾವನೆಯನ್ನು ಗಮನಕ್ಕೆ ತಂದಾಗ ಸಂಶೋಧಕರಿಗೆ ಅವನ ಗೋವಳಿಗ ಸಂಸ್ಕೃತಿಯ ಸಂಬಂಧದ ಬಗೆಗೆ ಅನುಮಾನ ಮೂಡುತ್ತದೆ. ಅವನು ಗೋಪಜನರ ದೇವರು ಎಂದು ದುರ್ಗಾ ಭಾಗವತ, ಢಾದರ ದಲರಿಯವರು ವ್ಯಕ್ತಪಡಿಸಿದ್ದಾರೆ. ಮಹಾರಾಷ್ಟ್ರ – ಕರ್ನಾಟಕ ಕುರುಬ ಸಮಾಜವು ವಿಠ್ಠಲನು ತಮ್ಮ ದೇವರೆಂದು ಒಪ್ಪುತ್ತವೆ. ವಿಠ್ಠಲ – ವೀರೂ ಕಥನದಲ್ಲಿ ವಿಠ್ಠಲನ ಸಂಬಂಧವು ದನಕರುಗಳೊಂದಿಗಂತೂ ಬಂದಿದೆ. ಆದರೆ ಗೋರಕ್ಷಕನೆನ್ನದೆ ಗೋಚೋರನೆಂದು ಬಂದಿದೆ. ಕೋಲತೆಯವರಿಗೆ ಲೀಲಾಚರಿತ್ರೆಯ ಒಂದು ಹಳೆಯ ಪಾಠ ದೊರೆತಿದೆ. ಲೀಲಾಚರಿತ್ರೆಯಂತೆ ಇಲ್ಲಿ ಕಠೋರ ನಿಂದೆ ಇಲ್ಲದಿದ್ದರೂ, ವಿಠ್ಠಲನು ಒಬ್ಬ ಗೋರಕ್ಷಕ ವೀರನ ಸ್ಮಾರಕದ ದೈವೀಕರಣವಾಗಿದ್ದಾನೆ. ಅವನ ಮೂಲ ಕ್ಷುದ್ರವಾಗಿದೆ ಎಂಬ ಮಾತು ಸ್ಪಷ್ಟವಾಗಿದೆ. ವೀರಕ್ಕಳ್ ಎಂಬ ಕನ್ನಡ ಶಬ್ದದ ಮರಾಠಿ ರೂಪವೇ ವೀರಗಳ್

ಎಂದಾಗಿದೆ. ವೀರಗಳ್ ಎಂದರೆ ವೀರಗಲ್ಲು, ವೀರ ಸ್ಮಾರಕ ಶಿಲೆ ಎಂದು ಅರ್ಥವಾಗುತ್ತದೆ. ವೀರ ಮರಣ ಪ್ರಾಪ್ತವಾದವರ ಸ್ಮರಣಾರ್ಥ ಶಿಲೆ ಸ್ಥಾಪಿಸುವ ಪದ್ಧತಿಯು ಭಾರತದಲ್ಲಿ ಪುರಾತನ ಕಾಲದಿಂದಲೂ ಬಂದಿದೆ. ಒಂದು ಎತ್ತರವಾದ ಸ್ತಂಭಾಕಾರದ ಶಿಲೆಯ ಮೇಲೆ ಸುಮಾರು ನಾಲ್ಕು ಚೌಕಟ್ಟಿನಲ್ಲಿ, ಕ್ರಮವಾಗಿ ಕೆಳಗಿನಿಂದ ಮೇಲೆ ವೀರಗತಿ ಹೊಂದಿದ ಪುರುಸನ ಜೀವನ ಪ್ರಸಂಗವನ್ನು ಉಬ್ಬು ಶಿಲ್ಪದಲ್ಲಿ ಕೆತ್ತಲಾಗುತ್ತದೆ. ತಳದ ಚೌಕಟ್ಟಿನಲ್ಲಿ ಯುದ್ಧ ಪ್ರಸಂಗವನ್ನು ತೋರಿಸಲಾಗುತ್ತದೆ. ಮೂರನೆಯ ಚೌಕಟ್ಟಿನಲ್ಲಿ ವೀರಮರಣ ಹೊಂದಿದ ಪುರುಷನಿಗೆ ದೇವರು ಸನ್ಮಾನದಿಂದ ಪರಲೋಕಕ್ಕೆ ಒಯ್ಯುವ ದೃಶ್ಯವಿರುತ್ತದೆ. ಮತ್ತು ನೆತ್ತಿಯ ಮೇಲೆ ಯಾವ ದೇವರ ಸಾನಿಧ್ಯ ಪಡೆದಿದ್ದಾನೋ ಆ ದೇವರನ್ನು, ವೀರನು ಪೂಜಿಸುವ ಪ್ರಸಂಗವನ್ನು ಕೆತ್ತಲಾಗುತ್ತದೆ. ಇದು ವೀರಗಲ್ಲಿನ ಸ್ವರೂಪವಾಗಿದೆ ಎಂದು ಸೊಂಥಾಯಮರರು ಉಲ್ಲೇಖಿಸಿದ್ದಾರೆ. ಬಲಿದಾನ, ಹುತಾತ್ಮ ಅಥವಾ ವಿಶಿಷ್ಟ ಧ್ಯೇಯಕ್ಕಾಗಿ ಮರಣ ಸ್ವೀಕರಿಸಿದ ಪುರುಷನನ್ನು ಮಾನವನು ದೇವತಾತುಲ್ಯನೆಂದು ಒಪ್ಪಿಕೊಂಡಿದ್ದಾನೆ. ಅಂತಹ ವ್ಯಕ್ತಿಯು ದೇವಸಮಾನನೆನಿಸುತ್ತಾನೆ. ಹೀಗಾಗಿ ವೀರಮರಣ ಸ್ವೀಕರಿಸುವ ಪುರುಷನನ್ನು ಜನಸಾಮಾನ್ಯರು ಪೂಜಿಸುತ್ತಾರೆ.

> **"ದ್ವಾವಿಮೌ ಪುರುಷೌ ಲೋಕೆ, ಸೂರ್ಯಮಂಡಲ ಭೇದಿನೌ ।**
> **ಪರಿವ್ರಾಟ್ ಯೋಗಯುಕ್ತಶ್ಚ ರಣೇಚ ಅಭಿಮುಖೋ ಹತ ।" (ಶ್ರೀ ವಿಠಲ ಒಂದು ಮಹಾ ಸಮನ್ವಯ ಅನುವಾದ, ಚಂದ್ರಕಾಂತ ಪೊಕಳೆ, ಪು. ೧೪೦, ೨೦೧೦).**

(ಯೋಗಯುಕ್ತ ಸನ್ಯಾಸಿ ಮತ್ತು ರಣಭೂಮಿಯಲ್ಲಿ ಹೋರಾಡುತ್ತಲೇ ಮರಣ ಹೊಂದಿದ ವೀರ ಇವರಿಬ್ಬರೂ ಈ ಜಗತ್ತಿನಲ್ಲಿ ಸೂರ್ಯಮಂಡಲವನ್ನು ಭೇದಿಸಿ ಹೋಗುವವರಾಗುತ್ತಾರೆ. ಅಂದರೆ ದಿವ್ಯ ಗತಿ ಪಡೆಯುತ್ತಾರೆ). ಈ ಶ್ಲೋಕವನ್ನು ಕರ್ನಾಟಕದ ಒಂದು ಶಿಲಾಲೇಖದಲ್ಲಿ ಕೆತ್ತಿಸಿ ವೀರಗೌರವ ನೀಡಿದ್ದಾರೆ. ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಮ್ (ಗೀತಾ, ೨.೩೭) ಎಂದು ಕೃಷ್ಣನು ಅರ್ಜುನನಿಗೆ ವೀರಮರಣದ ಮಹತ್ವವನ್ನು ಮತ್ತೆ ಮತ್ತೆ ಹೇಳುತ್ತಾನೆ. ಮಹಾರಾಷ್ಟ್ರ ಕರ್ನಾಟಕದಲ್ಲಿಯ ಉಪಾಸನಾ ಕ್ಷೇತ್ರದಲ್ಲಿ ಖಂಡೋಬನು ವೀರನೆಂಬ ಗೌರವ ಪಡೆದಿದ್ದಾನೆ. ವೀರಗಲ್ಲಿಗೆ ದೇವತ್ವ ಹೇಗೆ ಪ್ರಾಪ್ತವಾಗುತ್ತದೆ ಎಂಬುದಕ್ಕೆ ಒಂದು ನಿರ್ಣಾಯಕ ಪುರಾವೆಯು ಉಪಲಬ್ಧಗೊಂಡಿದೆ. ಕೊಂಕಣದಲ್ಲಿಯ ಗುಹಾಗರದ ವಾಡೇಶ್ವರ ಎಂಬ ಶಿವಸ್ಥಾನ ಮತ್ತು ಗುಹಾಗರದ ಪರಿಸರದ ಮಹಾತ್ಮೆಯನ್ನು ತಿಳಿಸಲು ವಿಶ್ವನಾಥ ಪಿತ್ರೆ ಎಂಬ ಕವಿಯು ಶ್ರೀ ವಾಡೇಶ್ವರೋದಯ ಎಂಬ ಸಂಸ್ಕೃತ ಕಾವ್ಯವನ್ನು ರಚಿಸಿದ್ದಾನೆ. ಈ ಮಹಾಕಾವ್ಯದಲ್ಲಿ ಗ್ರಾಮದಲ್ಲಿ ಇರುವ ವೀರ ಸ್ಮಾರಕದ ಕುರಿತು ಸ್ಪಷ್ಟ ವಿವರಣೆ ನೀಡಿದ್ದಾನೆ.

> **"ಗ್ರಾಮಸ್ಯ ದಲಯೋರ್ಮಧ್ಯೆ ಪಥಿ ಪಾಷಾಣ ಪುತ್ರಿಕಾಃ ।**
> **ದೃಶ್ಯಂತೇ ತ್ರಾಭವನ್ ಪೂರ್ವ ರಾಜ್ಞಾರಾಜಿಃ ಸುಧಾರುಣಾಃ ।**

ಯೇ ತತ್ರ ನಿಹತಾ ವೀರಾ ಏನಿಖಾತಾ ರಣಕ್ಷಿತೌ ।
ತೇ ಮಿ ಗ್ರಾಮಸ್ಯ ಮಧ್ಯಸ್ಥಾ ದೃಶ್ಯಂತೇಶ್ಮಸು ಚಿತ್ರಿತಾಃ ।
ಮನೋಭಿಲಕ್ಷಿತಾನಾರ್ಥಾನ್ ದದತಿ ಪ್ರಾರ್ಥಿತಾ ಯತಃ ।
ತೇನ ದೇವತ್ವಮಾಪನ್ನಾಃ ಪೂಜ್ಯಂತೇ ಕತಿಚಿಜ್ಜನೈಃ ।" (ಶ್ರೀ ವಿಠಲ ಒಂದು ಮಹಾ ಸಮನ್ವಯ ಅನುವಾದ, ಚಂದ್ರಕಾಂತ ಪೋಕಳೆ, ಪು. ೧೫೫, ೨೦೦೩).

ರಣಭೂಮಿಯಲ್ಲಿ ಪ್ರಾಣ ಕಳೆದುಕೊಂಡ ವೀರರ ಬಗೆಗೆ ಜನಮಾನಸದಲ್ಲಿ ಪರಮ ಆದರದ ಭಾವ, ಆ ಭಾವನೆಯಿಂದ ನಿಲ್ಲಿಸಲಾಗುವ ಅವರ ಶಿಲಾಸ್ಮಾರಕಗಳು, ಆ ಶಿಲಾಸ್ಮಾರಕದ ಕುರಿತಾದ ಗಾಢ ಶ್ರದ್ಧೆಯಿಂದ ಹೊರುವ ಹರಕೆ ಹಾಗೂ ಇಷ್ಟಾರ್ಥ ಪೂರ್ಣಗೊಂಡ ಅನುಭವವು ಬಂದಿದ್ದರಿಂದ ಜನಮಾನಸರು ಅವರಿಗೆ ಸಲ್ಲಿಸಿದ್ದ ದೇವತ್ವ, ಈ ಎಲ್ಲ ಪ್ರಕ್ರಿಯೆಯ ಸ್ಪಷ್ಟ ಚಿತ್ರಣವು ಈ ಮೂರು ಶ್ಲೋಕದ ಮೂಲಕ ನಮ್ಮ ಕಣ್ಣೆದುರು ನಿಲ್ಲುತ್ತದೆ. ಇದು ವೀರಸ್ಮಾರಕಗಳಿಗೆ ದೇವತ್ವ ಪ್ರಾಪ್ತಿಯಾಗುವುದರ ಕುರಿತು ದೊರೆತ ೧೭ನೆಯ ಶತಮಾನದ ಪುರಾವೆಯಾಗಿದೆ.

ಲೀಳಾಚರಿತ್ರೆಯ ವೀರಗಲ್ಲಿನಲ್ಲಿ ದೇವರೂಪ ಪಡೆದ ವೀರನು ಗೋರಕ್ಷಕನಾಗಿದ್ದಾನೆ. ಆಪತ್ಕಾಲದಲ್ಲಿ ಗೋರಕ್ಷಣ ಮಾಡುವವನು ಭಗವಂತನ ಪ್ರೀತಿಗೆ ಪಾತ್ರನಾಗಿದ್ದಾನೆ. ಗೋಕುಲದಲ್ಲಿ ಗೋರಕ್ಷಣೆ ಮಾಡುವ ಕೃಷ್ಣನೊಂದಿಗೆ ಏಕರೂಪ ಹೊಂದಿದ್ದಾನೆ ಎಂಬ ಭಾವನೆ ಪಾರಂಪಾರಿಕ ಸಮಾಜದಲ್ಲಿ ಸ್ಥಿರಗೊಂಡಿತ್ತು. ಗೋರಕ್ಷಕ ಹಾಗೂ ಬ್ರಾಹ್ಮಣ ರಕ್ಷಕ ವೀರರ ಸ್ಮಾರಕ ಶಿಲೆಗಳ ನಿರ್ಮಾಣದ ಹಿಂದಿರುವ ಸಾಮಾಜಿಕ ಹಿನ್ನೆಲೆಯು ಭಾರತೀಯ ದೈವತಾಮಂಡಲದ ಕೆಲವು ವಿಶಿಷ್ಟ ದೇವರುಗಳ ಉದಯ ವಿಕಾಸದ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳಲು ಅವಶ್ಯವಾಗಿದೆ. ವೀರಗಲ್ಲಿನಿಂದ ವರಿಷ್ಠ ದೇವತೆಯವರೆಗಿನ ವಿಕಾಸದ ಪ್ರಕ್ರಿಯೆಯನ್ನು ವಿಶ್ವಸನೀಯ ಪ್ರಮಾಣದ ಸಹಾಯದಿಂದ ಸಿದ್ಧ ಮಾಡಿ ತೋರಿಸುವ ಹೊಣೆಗಾರಿಕೆಯನ್ನು ಅಗತ್ಯವಾಗಿ ಸ್ವೀಕರಿಸಲೇಬೇಕಾಗುತ್ತದೆ. ಎಲ್ಲಿಯವರೆಗೆ ಸಾಂಪ್ರದಾಯಿಕ ದ್ವೇಷದಿಂದ ವ್ಯಕ್ತಗೊಂಡ ಲೀಳಾಚರಿತ್ರೆಯ ಉಲ್ಲೇಖದ ಹೊರತಾಗಿ ಬೇರೆ ಪ್ರಮಾಣವನ್ನು ಪ್ರಕಟಗೊಳಿಸುವುದು ಸಾಧ್ಯವಿಲ್ಲವೋ ಅಲ್ಲಿಯವರೆಗೆ ಳುಪುಳೆಯವರ ಮತಸಿದ್ಧಾಂತವು ಪ್ರತಿಷ್ಠೆಯನ್ನು ಪಡೆಯುವುದಿಲ್ಲ. ಅಲ್ಲದೇ ಪಂಢರಪುರದಲ್ಲಿ ಏಕೈಕ ವೀರಗಲ್ಲು ಉಪಲಬ್ಧಗೊಂಡಿರುವುದರಿಂದ ಅದು ಮಹಾನುಭಾವೀಯರ ಲೀಳಾಚರಿತ್ರೆಯ ವಾಸ್ತವದ ಅನುಭವವನ್ನು ಉಂಟುಮಾಡುತ್ತದೆ. ಈ ಹೇಳಿಕೆಯೂ ಈಗ ತಾಳಿಕೆಯದಾಗಿಲ್ಲ. ಏಕೆಂದರೆ, ಪಂಢರಪುರದ ಕಾಸಾರಗಲ್ಲಿಯಲ್ಲಿಯ ಬಡವೆಗಳ ಏಕವೀರಾ ದೇವಿಯ ಮಂದಿರದಲ್ಲಿ ಮತ್ತೊಂದು ಅಂತಹದೇ ವೀರಗಲ್ಲು ಇರುವುದಾಗಿ ವಾ.ಲ. ಮಂಜುಳ ಅವರು ತೋರಿಸಿಕೊಟ್ಟಿದ್ದಾರೆ. ಪಂಢರಪುರದ ಮಹಾದ್ವಾರದ

ಎದುರಿಗೆ ಸಿಕ್ಕ ವೀರಗಲ್ಲೇ ಒಂದು ವೇಳೆ ಮೂಲದ ವಿಠ್ಠಲನಾಗಿದ್ದರೆ, ಉನ್ನತ ವಿಠ್ಠಲನ ಉಪಾಸನಾ ವ್ಯವಸ್ಥೆಯಲ್ಲಿ ಅವನಿಗೆ ನಿಶ್ಚಿತವಾಗಿಯೂ ಪ್ರತೀಕಾತ್ಮಕ ಅಗ್ರಮಾನ್ಯತೆ ನೀಡಲಾಗುತ್ತಿತ್ತು ಮತ್ತು ಅಂತಹ ಸ್ಪಷ್ಟೀಕರಣ ನೀಡುವ ಕಥೆಯನ್ನೂ ಚತುರತೆಯಿಂದ ರಚಿಸಿ ಪಾಂಡುರಂಗ ಮಹಾತ್ಮೆಯಲ್ಲಿ ಸಮಾವೇಶಗೊಳಿಸಲಾಗುತ್ತಿತ್ತು. ಈ ಮೂಲರೂಪದ ದರ್ಶನ ಪಡೆಯದೆ ಗರ್ಭಗುಡಿಯಲ್ಲಿ ಪ್ರತಿಷ್ಠಿತಗೊಂಡ ವಿಠ್ಠಲನ ದರ್ಶನ ಪಡೆಯುವ ಭಕ್ತರಿಗೆ ಪುಣ್ಯಪ್ರಾಪ್ತಿಯಾಗುವುದಿಲ್ಲ ಎಂಬ ನಿಯಮವೂ ರೂಢವಾಗುತ್ತಿತ್ತು. ಪಂಢರಪುರದ ಆ ವಿಶಿಷ್ಟ ವೀರಗಲ್ಲಿನ ಇಂಥ ಯಾವ ಕಥೆಯೂ ವಿಠ್ಠಲನ ಉಪಾಸನಾ ಕ್ಷೇತ್ರದಲ್ಲಿ ರಚಿಸಿರುವ ಬಗ್ಗೆ ಪುರಾವೆ ಉಪಲಬ್ಧವಿಲ್ಲ. ಇದಕ್ಕೆ ಸಂಬಂಧಿಸಿದಂತೆ ಸ್ಥಳೀಯ ಜನಸಮುದಾಯವೂ ಸಹ ಗಮನವನ್ನು ಹರಿಸಿದಂತಿಲ್ಲ.

ಸಂತ ಜನರು ವಿಠ್ಠಲಮೂರ್ತಿಗೆ ವಿಷ್ಣು-ಕೃಷ್ಣ ರೂಪವನ್ನು ತೊಡಿಸಲು ಪ್ರಯತ್ನಿಸಿದರೂ, ಆ ಮೂರ್ತಿಯು ವಿಷ್ಣು-ಕೃಷ್ಣನ ಶಾಸ್ತ್ರ ಪ್ರತಿಷ್ಠಿತ ಲಕ್ಷಣಗಳಿಂದ ಕೂಡಿರದೆ, ಅವನು ಒಬ್ಬ ಕಟಿನ್ಯಸ್ತಕರ ಲೋಕದೇವತೆಯ ಮೂರ್ತಿಯಾಗಿದ್ದಾನೆ. ಅವನು ಒಂದು ವೇಳೆ ವೀರಗಲ್ಲಿನ ಉನ್ನಯನ ಹೊಂದಿ ಅವನು ವಿಷ್ಣು-ಕೃಷ್ಣನಾಗಿದ್ದರೆ, ಮಂದಿರದಲ್ಲಿಯ ಮೂರ್ತಿಯು ಪುನಃ ವೀರಗಲ್ಲು ಸದೃಶ ಲೋಕದೇವನಾಗದೆ ವಿಷ್ಣುವಿನ ಅಥವಾ ಕೃಷ್ಣನ ಪೂರ್ವ ರೂಢಿಯ ಪ್ರಸಿದ್ಧ ಲಕ್ಷಣಗಳಿಂದ ಸಂಪೂರ್ಣಯುಕ್ತನಾಗಿರುತ್ತಿದ್ದ. ಈ ಎಲ್ಲ ಸಂಗತಿಗಳನ್ನು ಯೋಚಿಸಿದಾಗ ಶ್ರೀ ವಿಠ್ಠಲನು ಮೂಲದಲ್ಲಿ ವೀರಗಲ್ಲಾಗಿದ್ದಾನೆ ಎಂದು ನಿರ್ಧರಿಸುವ ಪ್ರಮಾಣ ಪತ್ರ ಇದುವರೆಗೆ ಉಪಲಬ್ಧಗೊಂಡಿಲ್ಲ ಎಂಬುದು ಸತ್ಯವಾಗಿದೆ.

ವಿಠ್ಠಲ ಮತ್ತು ಪರಿವಾರ :

ವಿಠ್ಠಲನಿಗೆ ಗೋಪಾಲಕೃಷ್ಣನ ಚರಿತ್ರೆ ಪಂಢರಪುರ ಕ್ಷೇತ್ರದಲ್ಲಿಯೇ ಲಭಿಸಿತು. ಈ ಕ್ಷೇತ್ರದ ಸೀಮೆಯೊಳಗೆ ಅವನಿಗೆ ವೈಷ್ಣವ ಪ್ರತಿಷ್ಠೆಯೂ ಪ್ರಾಪ್ತವಾಯಿತು. ಪಂಢರಪುರದ ದೈವೀ ಸಮರ್ಥನೆ ಮಾಡಲೆಂದು ಯಾವ ಕಥೆಗಳ ನಿರ್ಮಾಣವಾಯಿತೋ ಆ ಕಥೆಗಳಿಂದ ವಿಠ್ಠಲನ ಹಾಗೂ ಅವನ ಪರಿವಾರದ ವೈಷ್ಣವ ಮಹಾತ್ಮೆಯೂ ಸಿದ್ಧವಾಯಿತು. ಈ ಸ್ಥಳಪುರಾಣಕ್ಕನುಗುಣವಾಗಿ ವಿಠ್ಠಲನೆಂಬ ದೇವರು, ಪುಂಡರೀಕನೆಂಬ ಭಕ್ತಶ್ರೇಷ್ಠ, ಚಂದ್ರಭಾಗಾತೀರ್ಥ, ಪದ್ಮಾವತಿ, ಮಲ್ಲಿಕಾರ್ಜುನ, ದಿಂಡಿರವನದ ಲಖೂಬಾಯಿ ಇವರೆಲ್ಲ ವಿಠ್ಠಲನ ಪರಿವಾರದಲ್ಲಿ ಸಮಾವೇಶಗೊಂಡಿದ್ದಾರೆ. ಹಾಗೂ ಇವುಗಳ ಮಹಿಮೆಯನ್ನೂ ಸ್ಥಳಪುರಾಣಗಳು ಬಣ್ಣಿಸಿವೆ. ಪುಂಡಲೀಕನು ವೈಷ್ಣವ ಭಕ್ತೋತ್ತಮನೆಂದು ಪ್ರಸಿದ್ಧಿ ಪಡೆದಿದ್ದಾನೆ.

ಮಲ್ಲಿಕಾರ್ಜುನ ಮತ್ತು ಪದ್ಮಾವತಿ ದೇವತೆಗಳ ವೈಷ್ಣವೀಕರಣದ ವ್ಯಾಪಕ ಪ್ರಯತ್ನ ನಡೆದಿದ್ದರೂ, ಅವರು ತಮ್ಮ ಮೂಲರೂಪವನ್ನು ಉಳಿಸಿಕೊಂಡಿದ್ದಾರೆ. ಲಖುಬಾಯಿಯು ಮುನಿದ ರುಕ್ಮಿಣಿಯ ಸ್ಥಾನವನ್ನು ಸ್ವೀಕರಿಸಿ ನೆಲೆಯೂರಿದ್ದಾಳೆ. ಚಂದ್ರಭಾಗಾ ತೀರ್ಥದಲ್ಲಿ ವಿಠ್ಠಲನ ವಾಸ್ತವ್ಯವಿದೆ. ಪಂಢರಪುರ ಕ್ಷೇತ್ರದಲ್ಲಿ ವಿಠ್ಠಲನು ಎರಡು ರೂಪದಲ್ಲಿ ನೆಲೆಸಿದ್ದಾನೆ. ಒಂದು ಗುಪ್ತ ರೂಪ ಮತ್ತು ಇನ್ನೊಂದು ಪ್ರಕಟಿತ ರೂಪ ಎಂಬುದು ಈ ಶ್ಲೋಕದಿಂದ ತಿಳಿದು ಬರುತ್ತದೆ.

ದ್ವಿಧಾ ರೂಪೇಣ ತತ್ರಾಸ್ತೆ ಕ್ಷೇತ್ರೆ ತೀರ್ಥೆ ಸುರಾಂತಕಃ ।
ಪಶ್ಚಿಮಾಭಿಮುಖಸ್ತೀರ್ಥೆ ಕ್ಷೇತ್ರೆ ಪೂರ್ವ ಮುಖೋ ವಿಭುಃ ।
ಉಭಯೋರ್ಮಧ್ಯದೇಶೋ ಯಃ ಕ್ಷೇತ್ರ ರಾಜಸ್ಸ ಉಚ್ಯತೆ ।
ತೀರ್ಥೇ ತು ಮಂಟಪೇ ಶುಭ್ರೆ ಸೌವರ್ಣೆ ರತ್ನ ಭೂಷಿತೆ ॥ (ಅದೇ ಪು. ೧೪೬)

ಅಸುರರನ್ನು ನಾಶಗೊಳಿಸುವ ದೇವನು ಇಲ್ಲಿ ತೀರ್ಥದಲ್ಲಿ ಮತ್ತು ಕ್ಷೇತ್ರದಲ್ಲಿ ಎರಡು ರೂಪಗಳಲ್ಲಿ ವಾಸವಾಗಿದ್ದಾನೆ. ತೀರ್ಥದಲ್ಲಿ ಪಶ್ಚಿಮಾಭಿಮುಖಿಯಾಗಿ, ಕ್ಷೇತ್ರದಲ್ಲಿ ಪೂರ್ವಾಭಿಮುಖಿಯಾಗಿ ನೆಲೆಸಿದ್ದಾನೆ. ಇವೆರಡರ ಮಧ್ಯದ ಭಾಗವನ್ನು ಕ್ಷೇತ್ರ ರಾಜ ಎಂದು ಕರೆಯುತ್ತಾರೆ. ತೀರ್ಥದಲ್ಲಿ ಸುವರ್ಣ, ರತ್ನಗಳಿಂದ ಅಲಂಕೃತವಾದ ಶುಭ್ರ ಮಂಟಪದಲ್ಲಿ ವಿಠ್ಠಲನು ಶೋಭಿಸುತ್ತಿದ್ದಾನೆ. ಸ್ಕಂದ ಮಹಾತ್ಮೆಯಲ್ಲಿ ತೀರ್ಥ, ಕ್ಷೇತ್ರ ಮತ್ತು ಮೂರ್ತಿ ಹೀಗೆ ಮೂರು ರೂಪಗಳನ್ನು ಮಾನ್ಯಗೊಳಿಸಿದ್ದರೂ, ವಿಶೇಷವಾಗಿ ಎರಡು ರೂಪಗಳಿರಬೇಕೆಂಬ ಅಭಿಪ್ರಾಯವಿದೆ ಎಂಬುದು ನಿಷ್ಪನ್ನವಾಗಿದೆ.

ಪದ್ಮೀಯ ಮಹಾತ್ಮೆಯಲ್ಲಿ ಮಾತ್ರ ಮೂರು ರೂಪಗಳಿರುವ ಅಭಿಪ್ರಾಯ ಸೂಚಿತವಾಗುತ್ತದೆ. ಮೇಲಿನ ಎರಡು ಮೂರ್ತಿಯ ವ್ಯತಿರಿಕ್ತವಾಗಿ ಲಕ್ಷ್ಮಿಯ ಎದುರು ಇನ್ನೊಂದು ಮೂರ್ತಿ ಇರುವುದಾಗಿ ಪದ್ಮೀಯ ಮಹಾತ್ಮೆ ಹೇಳುತ್ತದೆ. ಈ ಮೂರು ಮೂರ್ತಿಗಳ ಸ್ವರೂಪ ಅಥವಾ ಹೆಸರುಗಳು ಸೂತ್ರ ಮೂರ್ತಿ, (ಲಕ್ಷ್ಮೀತೀರ್ಥದೆದುರು) ತಮೋಮೂರ್ತಿ (ಕ್ಷೇತ್ರದಲ್ಲಿ) ಮತ್ತು ಹಿರಣ್ಯಮೂರ್ತಿ (ಬಂಗಾರದ ಮೂರ್ತಿ) ಹೀಗೆ ಇವೆ. ಎರಡೂ ಮಹಾತ್ಮೆಗನುಗುಣವಾಗಿ ಪಂಢರಪುರವು ವೈಷ್ಣವ ಕ್ಷೇತ್ರವಾಗಿದೆ. ಗೋಪವೇಷಧರ ಹರಿಯು ಇಲ್ಲಿ ಬಂದು ನೆಲೆಸಿದ್ದಾನೆ. ಅವನು ಪಂಢರಪುರದ ಮುಖ್ಯ ದೈವವಾಗಿದ್ದಾನೆ. ಲಕ್ಷ್ಮಿ, ಪದ್ಮಾವತಿ, ಮುಕ್ತಕೇಶಿ ಇವರಿಗೆ ಸಂಬಂಧಿತ ಕಥೆಯಿಂದ ಅವರು ನಗ್ನದೇವತೆಗಳಾಗಿದ್ದರು ಎಂದು ಉಲ್ಲೇಖಿಸುವುದರಿಂದ ವೈಷ್ಣವ ಧರ್ಮಕ್ಕಿಂತ ಮೊದಲು ತಾಂತ್ರಿಕರ ಪ್ರಭಾವದಲ್ಲಿ ಈ ಕ್ಷೇತ್ರವಿತ್ತು ಎಂಬುದು ಸ್ಪಷ್ಟವಾಗುತ್ತದೆ.

ರುಕ್ಮಿಣಿ :

ವಿಠ್ಠಲನ ಅರ್ಧಾಂಗಿನಿ ಅಂದರೆ ರಕುಮಾಬಾಯಿ – ರುಕ್ಮಿಣಿ – ಲಖೂಬಾಯಿ – ಪದೂಬಾಯಿ. ಇವಳ ಬಗ್ಗೆ ಸಂತ ಸಾಹಿತ್ಯದಲ್ಲಿ ಎಲ್ಲೋ ಅಲ್ಪ ಸ್ವಲ್ಪ ಮಾಹಿತಿ ಸಿಗುತ್ತದೆ. ಇಪ್ಪತ್ತೆಂಟು ಯುಗಗಳಿಂದ ನಿಂತಿರುವ ವಿಠ್ಠಲನಿಗೆ ದೂರದಿಂದಲೇ ಸಹವಾಸ ನೀಡಿರುವ, ಸೌಮ್ಯ ರಕುಮಾಬಾಯಿಯ ಕಥೆಯನ್ನು ಸಂತರು ಅವ್ಯಕ್ತವಾಗಿಯೇ ಇಟ್ಟಿದ್ದಾರೆ. ವಿಠೂಮಾಝಾ ಲೇಕುರವಾಳಾ ಎನ್ನುವ ಜನಾಬಾಯಿಯ ಅಭಂಗದಲ್ಲಿ ಅವಳ ಉಲ್ಲೇಖವಿಲ್ಲ. ವಿಠ್ಠಲನಿಂದ ರಕುಮಾಬಾಯಿಯ ಮೂರ್ತಿಯು ಏಕೆ ದೂರವಿದೆ ? ವಿಠ್ಠಲನ ಪಕ್ಕದಲ್ಲಿ ರಕುಮಾಬಾಯಿಯ ಮೂರ್ತಿ ಇಲ್ಲದಿದ್ದರೂ, ನಾಮದೇವನು ಯುಗೆ ಅಠ್ಠಾವೀಸ ವಿಟೇವರಿ ಉಭಾ, ವಾಮಾಂಗಿ ರಖುಮಾಯಿ ದಿಸೆ ದಿವ್ಯ ಶೋಭಾ ಎಂದು ಅಂದಿರುವುದೇಕೆ ? ಪೂರ್ವಾಶ್ರಮದಲ್ಲಿ ರುಕ್ಮಿಣಿ ಯಾರು ? ಅವಳ ರೂಪ ಹೇಗಿತ್ತು? ಜಾನಪದ ಗೀತೆಗಳಲ್ಲಿ, ಜಾನಪದ ಸಂಪ್ರದಾಯದಲ್ಲಿ ಅವಳ ಪ್ರತಿಬಿಂಬ ಹೇಗೆ ಅರಳಿದೆ ? ಎಂಬುವ ಪ್ರಶ್ನೆಗಳು ರುಕ್ಮಿಣಿಯ ಪ್ರಸಂಗದಲ್ಲಿ ತಲೆ ಎತ್ತುತ್ತವೆ.

ರಕುಮಾಬಾಯಿ ಅಂದರೆ ಪೂರ್ವಾಶ್ರಮದ ರುಕ್ಮಿಣಿ. ಪದ್ಮ ಪುರಾಣ, ಸ್ಕಂದ ಪುರಾಣಗಳಲ್ಲಿ ರಕುಮಾಬಾಯಿಯ ಕತೆ ಇದೆ. ಈ ರಕುಮಾಬಾಯಿಯೇ ರುಕ್ಮಿಣಿ ಮತ್ತು ವಿಠ್ಠಲ ಎಂದರೆ ಕೃಷ್ಣ. ಕೃಷ್ಣ–ರುಕ್ಮಿಣಿ, ವಿಠ್ಠಲ–ರಖುಮಾಯಿ ಈ ರೂಪ ಹೇಗೆ ಆಯಿತು ಎನ್ನುವ ಸಂದರ್ಭದಲ್ಲಿ ಪುರಾಣದ ಕಥೆಯಿದೆ. ರಾಧೆಯು ಕೃಷ್ಣನ ಪ್ರೇಯಸಿಯಾಗಿದ್ದಾಳೆ. ರಾಧೆ ನೀನು ನನ್ನ ದೇಹದ ಅರ್ಧಸ್ವರೂಪ ವಾಗಿದ್ದು, ಈಶ್ವರನ ಮೂಲ ಪ್ರಕೃತಿಯಾಗಿರುವಿ ಎಂದು ಬ್ರಹ್ಮವೈವರ್ತ ಪುರಾಣದಲ್ಲಿ ಸ್ವತಃ ಕೃಷ್ಣನೇ ಹೇಳಿದ್ದಾನೆ. ಕೃಷ್ಣನ ಜೊತೆಗಿನ ರಾಧೆಯ ಸಂಬಂಧ ಎಂದರೆ ಸೂತ್ರದಿಂದ ಇಬ್ಬರನ್ನೂ ಬಂಧಿಸಿಟ್ಟ ಸಂಬಂಧ. ಕೃಷ್ಣನು ಗೋಕುಲವನ್ನು ಬಿಟ್ಟು ದ್ವಾರಕೆಯಲ್ಲಿ ನೆಲೆಸಲು ಹೋದ. ಆಗ ರಾಧೆ ಕೃಷ್ಣನ ಭೇಟಿಗಾಗಿ ಬರುತ್ತಾಳೆ. ಕೃಷ್ಣನ ಮಂಡಿಯ ಮೇಲೆ ವಿರಾಜಿತಳಾಗುತ್ತಾಳೆ. ಅಷ್ಟರಲ್ಲಿ ಅಲ್ಲಿಗೆ ಬಂದ ರುಕ್ಮಿಣಿ ತನ್ನ ಪತಿಯ ತೊಡೆಯ ಮೇಲೆ ರಾಧೆಯನ್ನು ಕಂಡು ಸಂತಾಪಗೊಳ್ಳುತ್ತಾಳೆ. ಆದರೆ ರಾಧೆ ಕೃಷ್ಣರಿಬ್ಬರೂ ಅವಳನ್ನು ಗಮನಿಸುವುದಿಲ್ಲ. ಉದ್ರೇಕಗೊಂಡ ರುಕ್ಮಿಣಿ ಸಿಟ್ಟಿನಿಂದ ದ್ವಾರಕೆ ಬಿಟ್ಟು ಅನೇಕ ಯೋಜನಗಳ ದೂರ ದಾಟಿ ದಿಂಡಿರವನಕ್ಕೆ ಬರುತ್ತಾಳೆ. ಆ ವನದಲ್ಲಿ ಅವಳು ತಪಶ್ಚರ್ಯ ಮಾಡಲಾರಂಭಿಸುತ್ತಾಳೆ. ಇತ್ತ ನಿಜ ಸ್ಥಿತಿಗೆ ಬಂದ ಕೃಷ್ಣನು ಪತ್ನಿಯ ವಿರಹದಿಂದ ವ್ಯಾಕುಲನಾಗುತ್ತಾನೆ. ಗೋಪಜನರ ಜೊತೆಗೆ ರುಕ್ಮಿಣಿಯನ್ನು ಶೋಧಿಸುತ್ತ ಹೊರಡುತ್ತಾನೆ.

ಗೋಪಾಳಪುರದಲ್ಲಿ ಗೋಪಜನರನ್ನು ಬಿಟ್ಟು ಕೃಷ್ಣನು ದಿಂಡಿರವನದೊಳಗೆ ಬರುತ್ತಾನೆ. ರುಕ್ಮಿಣಿಗೆ ಸಮಜಾಯಿಸುವ ಪ್ರಯತ್ನ ಮಾಡುತ್ತಾನೆ. ಆದರೆ ರುಕ್ಮಿಣಿಯ ಕೋಪ ಕುಂದಲಿಲ್ಲ. ಕೊನೆಗೆ ಹತಾಶನಾಗಿ ವಿರಹದಿಂದ ಅಲ್ಲಿಯೇ ನಿಲ್ಲುತ್ತಾನೆ. ಈ ದಿಂಡಿರವನದ ಪರಿಸರವೆಂದರೆ ಈಗಿನ ಪಂಢರಪುರದ ಪರಿಸರ. ಸಿಟ್ಟಿಗೆದ್ದ ರುಕ್ಮಿಣಿಯೆಂದರೆ ರಖುಮಾಯಿ. ಕಟಿಯಲ್ಲಿ ಕರವಿಟ್ಟು ನಿಂತ ಕೃಷ್ಣನೆಂದರೆ ವಿಠ್ಠಲ. ಚೋಳಿ ಐನ್ಯಾಚಿ ಗುಲಾಬಿ ನಿಳಿ ನೇಸಲಿ ಪೈಠಣಿ. ಹೀಗೆ ಸುಂದರವಾಗಿ ಅಲಂಕೃತಳಾದ ರುಕ್ಮಿಣಿಯು ಮಮತೆಯ ತವರಿನಲ್ಲಿ, ಪಲ್ಲಕ್ಕಿ ಮತ್ತು ಮೇಣೆಯ ವೈಭವದಿಂದ ಮೆರೆದವಳು. ತಾಡಪತ್ರೆಯ ಮೇಲೆ ಕಮಲದ ದೇಟಿನ ಪರಾಗದಿಂದ ಕೃಷ್ಣನಿಗೆ ಪ್ರೇಮಪತ್ರ ಬರೆದಂತಹ ರುಕ್ಮಿಣಿಯೇ ವಿಠ್ಠಲನ ಪತ್ನಿ ರುಕ್ಮಿಣಿಯಾಗಿದ್ದಾಳೆ. ಹಾಗೆಯೇ ಲೋಕಸಾಹಿತ್ಯಕ್ಕನುಸಾರವಾಗಿ ದಿಂಡಿರವನದ ಪರಿಸರದಲ್ಲಿರುವ ಲಖುಬಾಯಿಯ ಪುರಾತನ ಮಂದಿರವೂ ಇದನ್ನೇ ಹೇಳುತ್ತದೆ. ಈ ಮಂದಿರದಲ್ಲಿ ಲಖೂಬಾಯಿಯ ಮೂಲರೂಪವು ಅಸ್ಪಷ್ಟ ಸಿಂಧೂರ ಬಣ್ಣದ ಉದ್ಭವ ಶಿಲೆಯ ರೂಪದಲ್ಲಿದೆ. ಈ ಉದ್ಭವ ಶಿಲೆಯ ಹಿಂದೆ ಎತ್ತರದ ಪೀಠದಲ್ಲಿ ಸ್ಥಾಪಿತವಾದ ಮೂರ್ತಿಯ ರೂಪವು ಗಜಲಕ್ಷ್ಮಿಯದಾಗಿದೆ. ಈ ಲಖೂಬಾಯಿ ಅಂದರೇನೇ ಕೃಷ್ಣನ ಮೇಲೆ ಮುನಿದು ದಿಂಡಿರವನದಲ್ಲಿ ಬಂದು ವಾಸಿಸಿದ ರುಕ್ಮಿಣಿ ಎಂದು ಒಪ್ಪಿಕೊಳ್ಳಲಾಗಿದೆ.

ಪುಂಡಲೀಕ :

ಪುಂಡಲೀಕ ಮತ್ತು ವಿಠ್ಠಲ ಇವರ ಸಹಚರ್ಯವು ಅಖಂಡವಾಗಿ ನಡೆದು ಬಂದಿದೆ. ಪುಂಡಲೀಕನ ಪುಂಡತನದಿಂದಲೇ ವೈಕುಂಠದ ದೇವರು ಪಂಢರಪುರಕ್ಕೆ ಬಂದ ಮತ್ತು ಅವನು ಒಗೆದ ಇಟ್ಟಂಗಿಯ ಮೇಲೆ ಕಟಿಯ ಮೇಲೆ ಕೈಯಿಟ್ಟುಕೊಂಡು ನಿಂತುಕೊಂಡ ಎಂಬ ವಿಷ್ಣುವಿನ ವಿಠ್ಠಲರೂಪದ ಅವತಾರದ ಕಥೆಯನ್ನು ಎಲ್ಲ ಸಂತರು ಶ್ರದ್ಧೆಯಿಂದ ಸ್ವೀಕರಿಸಿದ್ದಾರೆ. ಪುಂಡಲೀಕನ ಪುಂಡತನದಿಂದಲೇ ವಿಠ್ಠಲನ ಮೂಲದ ಲೋಕಧರ್ಮದ ರೂಪವು ಮುಚ್ಚಿ ಹೋಗಿ, ಅವನ ಹೊಸ ಆಧ್ಯಾತ್ಮಿಕ ವೈಷ್ಣವ ರೂಪವು ಹೊಳಪು ಪಡೆದಿದೆ. ಪುಂಡಲೀಕನು ಬೀಸಿ ಒಗೆದ ಇಟ್ಟಂಗಿಯ ಪ್ರತಿಷ್ಠೆಯಿಂದಾಗಿಯೇ ವಿಠ್ಠಲನ ದಿವ್ಯ ಜೀವನ ರೂಪಗೊಂಡಿದೆ. ಸಂತರ ಭಾವ ವಿಶ್ವದಲ್ಲಿ ಪುಂಡಲೀಕನು ಒಬ್ಬ ಮುನಿಯಾಗಿದ್ದಾನೆ, ಭಕ್ತರಾಜನಾಗಿದ್ದಾನೆ. ಶ್ರೀ ವಿಠ್ಠಲನು ಪ್ರಕಟಗೊಳ್ಳಲು ಕಾರಣೀಭೂತವಾದ ಪುಂಡಲೀಕನ ಚರಿತ್ರೆಯು ಪಾಂಡುರಂಗ ಮಹಾತ್ಮೆಯಲ್ಲಿ ವರ್ಣಿಸಲಾಗಿದೆ. ಸ್ಕಂದ ವಿಠ್ಠಲ ಮಹಾತ್ಮೆ ಮತ್ತು ಪದ್ಮ ವಿಠ್ಠಲ ಮಹಾತ್ಮೆ ಈ ಎರಡೂ

ಮಹಾತ್ಮೆಗಳಲ್ಲಿ ಪುಂಡಲೀಕನ ಕಥೆಯು ಹೆಚ್ಚು ಕಡಿಮೆ ಒಂದೇ ತಪಸೀಲಿನಿಂದ ವ್ಯಕ್ತಗೊಂಡಿದೆ. ಪದ್ಮ ಪುರಾಣದ ಪ್ರಕಾರ ಪುಂಡಲೀಕನ ಕಥೆ ಹೀಗೆ ರೂಪುಗೊಂಡಿದೆ :

ಪ್ರಾಚೀನ ಕಾಲದಲ್ಲಿ ದಿಂಡಿರವನದಲ್ಲಿ ಜನುದೇವ ಎಂಬ ಬ್ರಾಹ್ಮಣ ಪಂಡಿತನಿದ್ದ. ಅವನ ಹೆಂಡತಿಯ ಹೆಸರು ಸತ್ಯ. ಅವರಿಗೆ ಒಬ್ಬನೇ ಮಗನಿದ್ದ ಅವನ ಹೆಸರು ಪುಂಡಲೀಕ. ತಂದೆ ತಾಯಿಯವರು ಪುಂಡಲೀಕನ ಮದುವೆ ಮಾಡಿದರು. ಲಗ್ನವಾದ ಬಳಿಕ ಬಾಲ್ಯದಿಂದ ಸಾಕಿ ಬೆಳೆಸಿದ ತಂದೆ ತಾಯಿಯರನ್ನು ಅವನು ನಿರ್ಲಕ್ಷಿಸಿದ. ಯಾವಾಗಲೂ ಹೆಂಡತಿಯ ಸಹವಾಸದಲ್ಲಿರುತ್ತಿದ್ದ. ಆದರೆ ನಂತರ ಪುಂಡಲೀಕನ ಜೀವನಕ್ಕೆ ತಿರುವು ಕೊಡುವಂತಹ ಒಂದು ಘಟನೆ ಘಟಿಸಿತು. ವಾಲ್ಯಾದಿಂದ ವಾಲ್ಮೀಕಿ ಆದಂತೆ, ಈ ಘಟನೆಯಿಂದ ಪುಂಡಲೀಕನಲ್ಲಿ ಬದಲಾವಣೆಯಾಯಿತು. ಪುಂಡಲೀಕನ ತಂದೆ ತಾಯಿಯರು ಕಾಶಿಯಾತ್ರೆಗೆ ಹೋಗಬೇಕೆಂದು ಮಗನಲ್ಲಿ ಕೇಳಿಕೊಂಡರು. ಆದರೆ ಅದರ ಬಗೆಗೆ ಪುಂಡಲೀಕನು ಲಕ್ಷ್ಯ ಕೊಡಲಿಲ್ಲ. ಆದರೆ ಅವನ ಹೆಂಡತಿಯು ಕಾಶಿ ಯಾತ್ರೆಗೆ ಹೋಗುವ ಇಚ್ಛೆ ವ್ಯಕ್ತಪಡಿಸಿದಾಗ ತತ್‌ಕ್ಷಣ ಒಪ್ಪಿದ. ಮೊದಲು ಅವನಿಗೆ ತಂದೆ ತಾಯಿಯರನ್ನು ತಮ್ಮ ಜೊತೆಗೆ ಯಾತ್ರೆಗೆ ಒಯ್ಯುವ ವಿಚಾರವಿರಲಿಲ್ಲ. ಆದರೆ ತಮ್ಮ ಸಾಮಾನು ಹೊರಲು ಉಪಯೋಗವಾಗಬಹುದೆಂಬ ವಿಚಾರದಿಂದ ಅವರನ್ನೂ ಜೊತೆಗೆ ಕರೆದೊಯ್ದ. ಪ್ರವಾಸ ಮಾಡುತ್ತಿದ್ದಾಗ ಅರಣ್ಯದಲ್ಲಿ ಕುಕ್ಕುರ ಮುನಿಯ ಆಶ್ರಮವಿತ್ತು. ಅಲ್ಲಿ ರಾತ್ರಿ ವಸತಿ ಮಾಡಿದರು. ಮರುದಿನ ಬೆಳಗಿನ ಜಾವದಲ್ಲಿ ಮೂರು ಜನ ಕಪ್ಪು ಬಣ್ಣದ ಕೊಳಕು ಸ್ತ್ರೀಯರು ಅವರ ಆಶ್ರಮದ ಒಳಗೆ ಬರುವುದು ಪುಂಡಲೀಕನಿಗೆ ಕಾಣಿಸಿತು. ಇವರು ಯಾರಿರಬಹುದೆಂದು ಅವನಿಗೆ ಕುತೂಹಲವಾಯಿತು. ನಂತರ ಸ್ವಲ್ಪ ಹೊತ್ತಿನಲ್ಲಿಯೇ ಆ ಸ್ತ್ರೀಯರು ಗೌರವರ್ಣದ ತೇಜಸ್ವಿ ರೂಪದಿಂದ ಹೊರಬಿದ್ದರು. ಪುಂಡಲೀಕನು ಅವರಿಗೆ ನೀವು ಯಾರು ? ಬರುವಾಗ ಕಪ್ಪಾಗಿ ಕೊಳಕಾಗಿ ಕಂಡವರು ವಾಪಸ್ಸು ಹೋಗುವಾಗ ಬೆಳ್ಳಗೆ ತೇಜಸ್ವಿ ರೂಪ ಹೇಗೆ ಪಡೆದಿರಿ? ಇದೆಲ್ಲ ಹೇಗೆ ಸಂಭವಿಸಿತು? ಎಂದು ವಿಚಾರಿಸಿದ. ಆಗ ಆ ಸ್ತ್ರೀಯರು ನಿನ್ನಂತಹ ಪಾಪಿಷ್ಟನ ಜೊತೆಗೆ ನಮಗೆ ಮಾತಾಡುವ ಇಚ್ಛೆ ಇಲ್ಲ. ನೀನಾಗಿ ವಿಚಾರಿಸುತ್ತಿರುವುದರಿಂದ ಉತ್ತರಿಸುತ್ತೇವೆ. ನಾವು ಗಂಗಾ, ಯಮುನಾ ಹಾಗೂ ಸರಸ್ವತಿ ನದಿಯಾಗಿದ್ದೇವೆ. ದಿನವೆಲ್ಲ ಪಾಪಿ ಜನರು ನಮ್ಮಲ್ಲಿ ಸ್ನಾನ ಮಾಡುತ್ತಾರೆ. ಅವರ ಪಾಪವನ್ನು ನಾವು ತೊಳೆಯುತ್ತೇವೆ. ಅದಕ್ಕಾಗಿ ನಾವು ಕಪ್ಪು ಕೊಳಕಾಗಿರುತ್ತೇವೆ. ಆದರೆ ಕುಕ್ಕರ ಮುನಿಯ ದರ್ಶನದಿಂದ ನಾವು ಮತ್ತೆ ತೇಜಸ್ವಿಯಾಗುತ್ತೇವೆ. ಅದಕ್ಕಾಗಿಯೇ ಪ್ರತಿದಿನ ಬೆಳಿಗ್ಗೆ ಮುನಿಯ ದರ್ಶನ ಪಡೆಯುತ್ತೇವೆ ಎಂದು ಹೇಳಿ ಹೊರಟು ಹೋದರು.

ಅದೇ ಮುನಿಯ ಆಶ್ರಮದಲ್ಲಿ ಪುಂಡಲೀಕನೂ ತಂಗಿದ್ದರಿಂದ ತಾನೂ ಬೆಳಿಗ್ಗೆ ಮುನಿಯ ದರ್ಶನ ಪಡೆದ. ಮುನಿಗೆ ವಿಚಾರಿಸಿದ. ನಿಮಗೆ ಇಂಥ ಶಕ್ತಿ ಪ್ರಾಪ್ತವಾಗಲು ನೀವು ಯಾವ ತೀರ್ಥಯಾತ್ರೆ ಮಾಡಿರುವಿರಿ? ಅಂತಹ ಯಾವ ಪುಣ್ಯಕರ್ಮ ಮಾಡಿರುವಿರಿ? ಕುಕ್ಕುರ ಮುನಿಯ ಆಸನದ ಹಿಂದೆ ಒಂದು ತೊಟ್ಟಿಲು ಕಟ್ಟಲಾಗಿತ್ತು. ಆ ತೊಟ್ಟಿಲಲ್ಲಿ ಮುನಿಯ ಮಾತಾ ಪಿತರಿದ್ದರು. ತಂದೆ ತಾಯಿಯರು ಮಲಗಿದ ತೊಟ್ಟಿಲನ್ನು ಕುಕ್ಕುರ ಮುನಿ ತೂಗುತ್ತಿದ್ದರು. ತೊಟ್ಟಿಲಿನ ಕಡೆಗೆ ಬೆರಳು ತೋರಿಸಿ ಮುನಿಗಳು ಹೇಳಿದರು. ಇದೇ ನನ್ನ ತೀರ್ಥ ಕ್ಷೇತ್ರ ಮತ್ತು ಇದೇ ನನ್ನ ಪುಣ್ಯಕರ್ಮ. ನಾನು ತಾಯಿ ತಂದೆಯರ ಸೇವೆಯ ಹೊರತಾಗಿ ಏನನ್ನೂ ಮಾಡುವುದಿಲ್ಲ ಎಂದು ಉತ್ತರಿಸಿದರು. ಪುಂಡಲೀಕನಿಗೂ ಚೆನ್ನಾಗಿ ವರ್ತಿಸುವಂತೆ ಉಪದೇಶಿಸಿದರು. ಅವರ ಉಪದೇಶದಿಂದ ಪುಂಡಲೀಕನಿಗೆ ತನ್ನ ತಪ್ಪಿನ ಅರಿವಾಯಿತು. ಅಂದಿನಿಂದ ತಂದೆ ತಾಯಿಯರ ಸೇವೆ ಮಾಡುವ ನಿಶ್ಚಯ ಮಾಡಿದ. ತಂದೆ ತಾಯಿಯರಿಗೆ ಕಾಶಿ ಯಾತ್ರೆ ಮಾಡಿಸಿದ. ಅವರ ಬಗ್ಗೆ ಕಾಳಜಿ ವಹಿಸಿದ. ಮುನಿಯ ಉಪದೇಶದಂತೆ ಮಾತಾ ಪಿತರ ಸೇವೆಯನ್ನು ಭಕ್ತಿಯಿಂದ ಮಾಡತೊಡಗಿದ.

ಇದೇ ವಿಷಯಕ್ಕನುಗುಣವಾಗಿ ಇನ್ನೊಂದು ಪ್ರಸಿದ್ಧ ಕಥೆಯಿದೆ. ಕಾಶಿಗೆ ಹೋದಾಗ ಪುಂಡಲೀಕನ ಚಪ್ಪಲಿ ಹರಿಯಿತು. ಅದನ್ನು ಹೊಲಿಸಲು ರೋಹಿದಾಸನೆಂಬ ಚಮಗಾರನಲ್ಲಿ ಹೋದ. ಅವನು ಚಪ್ಪಲಿ ಹೊಲೆಯುವುದರ ಜೊತೆಗೆ ತಂದೆ ತಾಯಿಯರ ತೊಟ್ಟಿಲನ್ನೂ ತೂಗುತ್ತಿದ್ದ. ಪುಂಡಲೀಕನು ರೋಹಿದಾಸನಿಗೆ ಕೇಳಿದ. ಇಲ್ಲಿಂದ ಕಾಶಿ ಎಷ್ಟು ದೂರವಿದೆ? ಅದಕ್ಕೆ ರೋಹಿದಾಸನು ಒಂದೆರಡು ಮೈಲು ಇರಬೇಕು ಎಂದ. ಪುಂಡಲೀಕನು ಮತ್ತೆ ಕೇಳಿದ ನೀವು ಕಾಶಿಗೆ ಎಷ್ಟು ಸಲ ಹೋಗಿರಬಹುದು? ರೋಹಿದಾಸನು ಒಂದು ಸಲವೂ ಇಲ್ಲ ಎಂದು ಉತ್ತರಿಸಿದ. ನನಗೆ ನನ್ನ ತಂದೆ ತಾಯಿಯರೇ ಕಾಶಿ, ಅವರ ಸೇವೆಯೇ ವಿಶ್ವೇಶ್ವರನ ದರ್ಶನ ಎಂದ. ತಂದೆ ತಾಯಿಯ ಸೇವೆ ಮಾಡಿರಿ. ಅವರಂತಹ ದೇವರು ಬೇರಿಲ್ಲ. ಅವರ ಸೇವೆ ಮಾಡಿದರೆ ನಿಮಗೆ ಮತ್ತೇನೂ ಮಾಡುವ ಅವಶ್ಯಕತೆಯಿಲ್ಲ. ಕುಳಿತಲ್ಲಿಯೇ ದೇವರ ದರ್ಶನವಾಗುವುದು. ತಂದೆ ತಾಯಿಯವರ ಸೇವೆಯಿಂದ ಪುಣ್ಯವೂ ಲಭಿಸುವುದು. ರೋಹಿದಾಸನ ಉಪದೇಶದ ಪರಿಣಾಮದಿಂದ ಪುಂಡಲೀಕನು ತಂದೆ ತಾಯಿಗಳಿಗೆ ಕಾಶಿ ಯಾತ್ರೆ ಮಾಡಿಸಿದ. ಮನೆಗೆ ಬಂದ ನಂತರವೂ ಅವರ ಸೇವೆಯಲ್ಲಿಯೇ ನಿರತನಾದ. ಕೃಷ್ಣನಿಗೆ ಭಕ್ತ ಪುಂಡಲೀಕನ ನೆನಪಾಗಿ ಅವನ ಭಕ್ತಿಗೆ ಮೆಚ್ಚಿ ಅವನನ್ನು ನೋಡಲು ಪುಂಡಲೀಕನ ಮನೆಗೆ ಬಂದ. ಆಗ ಪುಂಡಲೀಕನು ತಂದೆ ತಾಯಿಯರ ಸೇವೆ ಮಾಡುತ್ತಿದ್ದ. ಭಗವಾನ್ ಕೃಷ್ಣನು ಅಲ್ಲಿ ಪ್ರತ್ಯಕ್ಷನಾದದ್ದನ್ನು ಪುಂಡಲೀಕನು ನೋಡಿದರೂ ಮತ್ತೆ ಮಾತಾ ಪಿತರ ಸೇವೆಯಲ್ಲಿ ಮಗ್ನನಾದ.

ಸಾಕಷ್ಟು ವೇಳೆಯ ನಂತರವೂ ಪುಂಡಲೀಕನು ತನ್ನ ಕಡೆಗೆ ಗಮನ ಹರಿಸದಿರುವುದನ್ನು ಕಂಡು ಕೃಷ್ಣನು ಅರೆ ಪುಂಡಲೀಕಾ, ನಾನು ನಿನ್ನನ್ನು ಭೇಟಿಯಾಗಲು ಬಂದಿದ್ದೇನೆ. ನಿನ್ನ ಸೇವೆಯಿಂದ ಸಂತುಷ್ಟನಾಗಿ ಇಲ್ಲಿಗೆ ಬಂದಿದ್ದೇನೆ. ನನ್ನ ಕಡೆ ನೋಡು ಎನ್ನಲು, ಪುಂಡಲೀಕನು ಹತ್ತಿರವಿದ್ದ ಒಂದು ಇಟ್ಟಿಗೆಯನ್ನು ಒಗೆದು ದೇವನಿಗೆ ಹೇಳಿದ, ದೇವಾ, ನನ್ನ ಸೇವೆ ಮುಗಿಯುವ ತನಕ ಈ ಇಟ್ಟಿಗೆಯ ಮೇಲೆ ನಿಲ್ಲು ಎಂದ. ಸ್ವಲ್ಪ ಸಮಯದ ನಂತರ ತಂದೆ-ತಾಯಿಯರ ಸೇವೆ ಮುಗಿಸಿದ ಮೇಲೆ ಕೃಷ್ಣನು ಪುಂಡಲೀಕನಿಗೆ ಏನು ವರ ಬೇಕು ಕೇಳಿಕೊ ಎನ್ನಲು, ಪುಂಡಲೀಕನು ದೇವಾ, ನಾನೇನು ವರ ಬೇಡಲಿ? ತಂದೆ ತಾಯಿಯರ ಸೇವೆಯಿಂದ ನನಗೆಲ್ಲ ಸಿಕ್ಕಿದೆ ಎಂದ. ಭಗವಂತನು ಆಗ್ರಹ ಮಾಡಿದ್ದರಿಂದ ಪುಂಡಲೀಕನು ದೇವಾ, ಭಕ್ತರಿಗೆ ದರ್ಶನ ಕೊಡುವುದಕ್ಕಾಗಿ ನೀನು ಸದಾ ಈ ಸ್ಥಾನದಲ್ಲಿಯೇ ವಾಸವಾಗಿರು ಎಂದು ಬೇಡಿಕೊಂಡನು. ಅಂದಿನಿಂದ ಪಾಂಡುರಂಗನು ಇಟ್ಟಿಗೆಯ ಮೇಲೆ ನಿಂತಿದ್ದಾನೆ. ಪುಂಡಲೀಕನ ಬಗ್ಗೆ ಐತಿಹಾಸಿಕವಾದ ಖಚಿತ ಮಾಹಿತಿ ಉಪಲಬ್ಧವಿಲ್ಲದ್ದರಿಂದ ಪುಂಡಲೀಕನ ವಿಷಯದಲ್ಲಿ ಬೇರೆ ಬೇರೆ ಕಲ್ಪನೆಗಳನ್ನು ಮಂಡಿಸಲಾಗುತ್ತದೆ.

ಪದೂಬಾಯಿ :

ದಲರಿ, ಸೊಂಥಯಮರ, ತುಳಪುಳೆ, ಮಾಣಿಕರಾವ ಧನಪಲವಾರ ಮೊದಲಾದ ಸಂಶೋಧಕರು ವಿಠ್ಠಲನು ಮೂಲದಲ್ಲಿ ಜಾನಪದ ದೇವನಾಗಿದ್ದಾನೆ, ದಕ್ಷಿಣದಲ್ಲಿಯ ಗೋವಳಿಗರ ದೇವನಾಗಿದ್ದಾನೆ ಎಂಬ ಹೊಸ ತಥ್ಯವನ್ನು ಮಂಡಿಸಿದ್ದಾರೆ. ವಿಠ್ಠಲನು ಕುರುಬರ ದೇವ. ವೀರದೇವನು ಇವನ ಅಭಿನ್ನ ಸಹಚರನೆಂದು ಇವನ ಜೊತೆಯಲ್ಲಿ ಸಮಾವೇಶಗೊಂಡಿದ್ದಾನೆ. ವಿಠ್ಠಲನು ಗೌಳಿಗರ ಪ್ರತಿನಿಧಿಯಾಗಿದ್ದರೆ, ವೀರಪ್ಪನು ಕುರುಬರ ಪ್ರತಿನಿಧಿಯಾಗಿದ್ದಾನೆ. ಕುರುಬ ಜನಾಂಗದಲ್ಲಿ ವಿಠ್ಠಲನ ಪತ್ನಿ ಪದೂಬಾಯಿ ಅಂದರೆ ಪದೂ ಗವಳಣ ಎಂಬ ಹೆಸರಿನಿಂದ ಇವಳು ಗುರುತಿಸಲ್ಪಡುತ್ತಾಳೆ. ಇದರ ಬಗ್ಗೆ ಒಂದು ಜಾನಪದ ಕಥೆಯ ದೃಷ್ಟಾಂತ ಹೀಗಿದೆ :

ಒಂದು ಸಲ ಇಟಲ – ಬ್ರಮಲರು (ವಿಠ್ಠಲ-ಬೀರಪ್ಪ) ಆಶ್ವೀನ ಪೌರ್ಣಿಮೆಗೆ ದೊಡ್ಡ ಜಾತ್ರೆಯನ್ನು ಸೇರಿಸುವುದಾಗಿ ನಿಶ್ಚಯಿಸಿದರು. ವಿಠ್ಠಲನು ಸೋಮ ಎಂಬ ಪ್ರಧಾನಿಯ ಮುಖಾಂತರ ತನ್ನ ಪತ್ನಿಗೆ ಜಾತ್ರೆಯ ತಯಾರಿ ಮಾಡಲು ಸಂದೇಶ ಕಳಿಸಿದನು. ಇಷ್ಟೊಂದು ಅಲ್ಪ ವೇಳೆಯಲ್ಲಿ ಎಲ್ಲಾ ತಯಾರಿ ಮಾಡುವುದು ಕಠಿಣವೆನಿಸಿ ಪದೂಬಾಯಿ ಸಿಟ್ಟಿಗೆದ್ದಳು. ಜಳೋ ತಿ ಜತರಾ. ನೀರಿನ ಹಂಡೆ ತುಂಬುವುದರಲ್ಲಿ ನನ್ನ ತಲೆ ಬೋಳಾಗುತ್ತದೆ. ಅನ್ನದ ರಾಶಿ ಮಾಡುವುದರಲ್ಲಿ ನನ್ನ ಕೈ ಗುಳ್ಳೆಗಳೇಳುತ್ತವೆ. ಎಂದು ಸಿಟ್ಟಿನಿಂದ ಉದ್ಗಾರವೆತ್ತಿದಳು. ಸೋಮನು

ಪದೂಬಾಯಿ ಆಡಿದ ಮಾತುಗಳನ್ನು ಮತ್ತಷ್ಟು ಹಿಗ್ಗಿಸಿ ಇಟಲ ದೇವನಿಗೆ ತಿಳಿಸಿದ. ಪತ್ನಿಯ ನಕಾರಾತ್ಮಕ ಭೂಮಿಕೆಯಿಂದ ದೇವನು ಸಂತಾಪಗೊಂಡು ಅವಳಿಗೆ ಹೀಗೆ ಶಾಪ ನೀಡಿದ. ನೀನು ಹುಚ್ಚಿಯಾಗು. ಜನರಿಗೆ ಕಲ್ಲು ಒಗೆಯುತ್ತ ತಿರುಗು. ದೇವನ ಈ ಶಾಪದಿಂದ ಪದೂಬಾಯಿ ಹುಚ್ಚಿಯಾದಳು. ಹುಚ್ಚಿಯಾಗಿ ಅಲೆದಾಡಿ ಅಲೆದಾಡಿ ಊರ ಹೊರಗೆ ಸತ್ತು ಬಿದ್ದಳು. ತಂದೆ ತಾಯಿಯರು ಅವಳ ಬಳಿ ಬರುವ ಹಾಗಿರಲಿಲ್ಲ. ಏಕೆಂದರೆ ವಿಠ್ಠಲನು ಐದು ಹೆಡೆಯ ನಾಗನಾಗಿ ಅವಳ ಬಳಿಯಲ್ಲಿಯೇ ಕಾವಲು ಕುಳಿತಿದ್ದ. ನಂತರ ವಿಠ್ಠಲನು ಅವಳ ಕೂದಲನ್ನು ಗಿಡಕ್ಕೆ ಕಟ್ಟಿದ. ಅವಳ ಮಾಂಸವನ್ನು ಪ್ರಾಣಿಗಳಿಗೆ ಹಾಕಿದ. ಮೋಡಗಳಿಗೆ ಆಜ್ಞೆ ಮಾಡಿ ಅವಳ ಎಲುಬುಗಳು ಮಳೆ ಪ್ರವಾಹದಿಂದ ಸಮುದ್ರ ಸೇರುವಂತೆ ಮಾಡಿದ. ಇದನ್ನೆಲ್ಲ ನೋಡಿ ವಿಠ್ಠಲನ ಭಕ್ತನಾದ ಮಾಲಿಂಗರಾಯನಿಗೆ ಪಶ್ಚಾತ್ತಾಪವಾಯಿತು. ಆತನು ತಪಸ್ಸು ಮಾಡಿ ಸಮುದ್ರಕ್ಕೆ ಪ್ರಾರ್ಥನೆ ಮಾಡಿ ಪದೂಬಾಯಿಯ ಅಸ್ತಿಯನ್ನು ಪಡೆದನು. ಅದನ್ನು ವಿಠ್ಠಲನ ಆಣತಿಯಂತೆ ಚಂದ್ರಭಾಗೆಯಲ್ಲಿ ಚೆಲ್ಲಿದ. ಅಸ್ತಿಯು ಕಮಲರೂಪದಲ್ಲಿ ರೂಪಾಂತರಗೊಂಡಿತು. ಆ ಕಮಲವನ್ನು ವಿಠ್ಠಲ ಕಿತ್ತಿದ. ನಂತರ ಆ ಸ್ಥಳದಲ್ಲಿ ಪದೂಬಾಯಿ ಪ್ರಕಟಗೊಂಡಳು. ಈ ಪದೂಬಾಯಿ ಎಂದರೇನೇ ರುಕ್ಮಿಣಿ. ವಿಠೋಬನಿಗೆ ಪದೂಬಾಯಿಯನ್ನು ಕಂಡು ಆನಂದವಾಯಿತು. ಅವನು ರುಕ್ಮಿಣಿಗೆ ಹೇಳಿದ. ರುಕ್ಮಿಣಿ, ನಿನ್ನ ಮೇಲೆ ನನಗೆ ಕೋಪವಿಲ್ಲ. ನಿನ್ನ ಮೇಲೆ ಪ್ರೇಮವಿದೆ. ಆದರೆ ನಾನು ಮಾಡಿದ ಪ್ರತಿಜ್ಞೆಯ ಕಾರಣದಿಂದ ನಾವಿಬ್ಬರೂ ಒಟ್ಟಿಗೆ ಇರುವಂತಿಲ್ಲ. ನೀನು ಇಲ್ಲಿಯೇ ಇರು. ನಾನೂ ಮಾಳಶಿರಸ ಬಿಟ್ಟು ಪಂಢರಪುರಕ್ಕೆ ಬಂದು ನೆಲೆಸುವೆ. ನಾವು ಹತ್ತಿರದಲ್ಲಿಯೇ ಇರೋಣ. ಆದರೆ ಒಟ್ಟಿಗೆ ಇರುವಂತಿಲ್ಲ. ನನ್ನ ಮಂದಿರ ಬೇರೆ, ನಿನ್ನ ಮಂದಿರ ಬೇರೆ. ಹತ್ತಿರದಲ್ಲಿದ್ದು ಭಕ್ತರ ದುಃಖ ದೂರ ಮಾಡೋಣ. ಇಂದಿಗೂ ವಿಠ್ಠಲ ರುಕ್ಮಿಣಿಯರ ದೇವಾಲಯಗಳು ಬೇರೆ ಬೇರೆಯಾಗಿರುವುದನ್ನು ಕಾಣುತ್ತೇವೆ.

ಸಂತ ಸಾಹಿತ್ಯದಲ್ಲಿ ವಿಠ್ಠಲನ ಜೊತೆಗೆ ರಖುಮಾಯಿಯ ಸಾಕ್ಷಾತ್ಕಾರ ಅಥವಾ ಕಥಾ ಪ್ರಸಂಗಗಳು ಕಾಣಿಸಿಕೊಂಡಿಲ್ಲ. ರುಕ್ಮಿಣಿ ಸ್ವಯಂವರದ ವಿಷಯದ ಮೇಲೆ ಅನೇಕ ವಿವರಗಳಿವೆ. ರುಕ್ಮಿಣಿ ಅಂದರೆ ರಖುಮಾಯಿ ಎಂದು ಪ್ರತಿಪಾದನೆಯನ್ನು ಮಾಡಿದ್ದಾರೆ. ಆದರೆ ವಿಠ್ಠಲನು ಸಂತ ಜನಾಬಾಯಿಯ ಮನೆಯಲ್ಲಿ ಕಾಳು ಬೀಸಿದ, ಚೋಖೋಬಾನ ಕೊರಳಿನಲ್ಲಿ ತನ್ನ ಸರವನ್ನು ಹಾಕಿದ, ಏಕನಾಥರ ಮನೆಯಲ್ಲಿ ನೀರು ತುಂಬುತ್ತಿದ್ದ, ಹೀಗೆ ವಿಠ್ಠಲನ ವಿವಿಧ ಚಮತ್ಕಾರಗಳು ಸಾಹಿತ್ಯದಲ್ಲಿ ವರ್ಣಿತವಾಗಿವೆ. ಆದರೆ ಸಂತರ ಸಾಹಿತ್ಯದಲ್ಲಿ ರಖುಮಾಬಾಯಿ ಮಾತ್ರ ಬಹಳ ವಿರಳವಾಗಿ ಉಲ್ಲೇಖಿಸಲ್ಪಡುತ್ತಾಳೆ. ವಿಠ್ಠಲ ರಖುಮಾಯಿಯರ ಸಂವಾದವೂ ವಿಶೇಷವಾಗಿಲ್ಲ. ಭಕ್ತರು, ವಾರಕರಿಯವರು, ವಿಠ್ಠಲ ರಖುಮಾಯಿ ಹೀಗೆ ಉದ್ಘೋಷ

ಮಾಡುವಾಗಲೂ ಅವಳ ಕಥೆಯನ್ನು ಹಾಡುವುದಿಲ್ಲ. ವಿಠ್ಠಲನ ಕಥೆಯಲ್ಲಿ ಅವಳ ರೂಪ ಕ್ಷೀಣವಾಗಿದೆ.

ಸ್ತ್ರೀವಾದಿ ತತ್ವದ ಆವಿಷ್ಕಾರವು ಸಾಹಿತ್ಯದಲ್ಲಿ ಪ್ರಭಾವಿಯಾಗುತ್ತಿರುವಾಗ ಸ್ತ್ರೀ ಶೋಷಣೆಯ ವಿಷಯದಲ್ಲಿ ಉರ್ಮಿಳೆ, ಸೀತೆ, ದ್ರೌಪದಿಯರಂತೆ, ಇಪ್ಪತ್ತೆಂಟು ಯುಗಗಳಿಂದ ಒಂಟಿ ಜೀವನವನ್ನು ಅನುಭವಿಸಿ ಸಹಿಸಿಕೊಂಡಿರುವ ರುಕ್ಮಿಣಿಯ ಶೋಷಣೆಯ ಪೌರಾಣಿಕ ರೂಪವನ್ನು ಅರುಣ ಕೋಲಾಟಕರರಂತಹ ಕವಿಗಳು ಎತ್ತಿ ತೋರಿಸಿದ್ದಾರೆ. ರಂಗ ಮಹಾಲಿ ವಿಠೂಚಾ ಎಂಬ ಕವಿತೆಯಲ್ಲಿ ಅರುಣಾ ಢೇರೆ ಅವರು ಹೀಗೆ ಹೇಳುತ್ತಾರೆ. ಸಾಧಾ ಭೋಳಾ ಮತ್ತು ಕಪ್ಪು ಬಣ್ಣದ ವಿಠ್ಠಲನಿಗಾಗಿ ಸರ್ವಸ್ವವನ್ನು ತ್ಯಜಿಸಿ ಬಂದ ರುಕ್ಮಿಣಿಯು ವಿಠ್ಠಲನಿಗಾಗಿ ಕಾಯುತ್ತಾಳೆ. ಆದರೆ ವಿಠ್ಠಲನು ಕೇವಲ ರುಕ್ಮಿಣಿಯ ಪತಿಯಾಗಿರದೆ ಲೋಕನಾಥನಾಗಿದ್ದಾನೆ. ದಾರಿ ಕಾದು ಕಾದು ಬೇಸತ್ತ ರುಕ್ಮಿಣಿಗೆ ಜನಾಬಾಯಿಯ ಅಂಗಣದಲ್ಲಿ ಅಲ್ಲಾಡುವ ತುಳಸಿಯ ಜೊತೆಗೆ ವಿಠ್ಠಲನ ಶಿಲೆಯನ್ನು ಕಂಡು ರುಕ್ಮಿಣಿಯ ವಿರಹದ ಆರ್ದ್ರತೆ ತೀವ್ರಗೊಳ್ಳುತ್ತದೆ. ಹೀಗೆ ಬೇರೆ ಬೇರೆ ರೀತಿಯಲ್ಲಿ ವಿಠ್ಠಲನ ಸರ್ವವ್ಯಾಪಕತ್ವದ ಸ್ಪಷ್ಟೀಕರಣದ ಜೊತೆಗೆ ರುಕ್ಮಿಣಿಯ ವೇದನೆಯ ಸ್ಪಷ್ಟೀಕರಣೆಯನ್ನೂ ವ್ಯಕ್ತಗೊಳಿಸಿದ್ದಾರೆ.

ಪೂರ್ವಾಶ್ರಮದ ಕೃಷ್ಣನು ವಿಠ್ಠಲ ರೂಪದಲ್ಲಿ ರೂಪಾಂತರಗೊಳ್ಳುವಾಗ ಜನಮಾನಸರು ಅವನ ವಿಠ್ಠಲ ರೂಪಕ್ಕೆ ಮಹತ್ವ ಕೊಟ್ಟರು. ಅದರಂತೆ ರುಕ್ಮಿಣಿಯ, ರಖುಮಾಯಿಯ ರೂಪಾಂತರದ ವಿಷಯದಲ್ಲಿ ಮಹತ್ತತೆ ದೊರಕಲಿಲ್ಲ. ತವರಿನ ಪ್ರೀತಿಯನ್ನು ದೂರ ಸರಿಸಿ ಬಂದ ನೀಲ ಪೀತಾಂಬರಧಾರಿ ರುಕ್ಮಿಣಿಯು ರಖುಮಾಯಿಯ ರೂಪದಲ್ಲಿ ಕಾಣಿಸಿದಾಗ ಸಹ ರುಕ್ಮಿಣಿಯಾಗಿಯೇ ಉಳಿದಳು. ಅವಳ ಕೋಪವು ಗಟ್ಟಿಯಾಗಿಯೇ ಉಳಿಯಿತು. ಅವಳ ಅಂತರ್ಯದ ನೋವು ಹೊರಗೆ ಪ್ರಕಟವಾಗಲಿಲ್ಲ. ವಿಠ್ಠಲ ಮಹಾತ್ಮೆಯಲ್ಲಿ, ಸಂತ ಸಾಹಿತ್ಯದಲ್ಲಿ ವಿಠ್ಠಲನ ಚಾರಿತ್ರ್ಯವೇ ಮಹತ್ವಪಡೆದುಕೊಂಡಿದ್ದು ರಖುಮಾಯಿಗೆ ವಿಶೇಷ ಮಾನ್ಯತೆ ದೊರೆಯದೆ ಗೌಣವಾಗಿದ್ದಾಳೆ ಎಂಬುದು ಇಲ್ಲಿ ಬೆಳಕಿಗೆ ಬಂದಿರುವುದು ಗಮನಾರ್ಹವಾಗಿದೆ.

ಚಂದ್ರಭಾಗಾ :

ಚಂದ್ರಭಾಗಾ ಈ ನದಿಯ ಮೂಲ ಹೆಸರು ಭೀಮಾ. ಪಂಢರಪುರದ ಹತ್ತಿರ ಹರಿಯುವಾಗ ನದಿಯ ಆಕಾರವು ಅರ್ಧಚಂದ್ರನ ಆಕಾರ ಪಡೆಯುವುದರಿಂದ ಚಂದ್ರಭಾಗಾ ಎನ್ನುತ್ತಾರೆ. ಸ್ಕಂದ ಪುರಾಣದ ಪ್ರಕಾರ ಪುಂಡರೀಕನಿಗೆ ನೀಡಿದ ವರದಾನದ ಪ್ರಕಾರ ವಿಠ್ಠಲನು ಎರಡು ರೂಪಗಳಲ್ಲಿ, ಎರಡು ಸ್ಥಾನಗಳಲ್ಲಿ ಪ್ರಕಟಗೊಂಡ. ಒಂದು ಗುಪ್ತ ರೂಪ ಮತ್ತು

ಇನ್ನೊಂದು ಪ್ರಕಟ ರೂಪವಾಗಿದೆ. ಗುಪ್ತ ರೂಪವೇ ಪಂಢರಪುರದ ತೀರ್ಥ ಮತ್ತು ಅದು ಪಶ್ಚಿಮಾಭಿಮುಖಿ ಎಂಬ ಉಲ್ಲೇಖವಿದೆ. ಇಲ್ಲಿ ತೀರ್ಥವೆಂದರೆ ಚಂದ್ರಭಾಗಾ. ಚಂದ್ರಭಾಗಾ ನದಿಯಲ್ಲಿ ದೇವನ ಅಸ್ತಿತ್ವವಿದೆ ಎಂಬ ಶ್ರದ್ಧೆಯಿರುವುದರಿಂದ ಈ ನದಿಗೆ ಮಹತ್ವವಿದೆ. ಚಂದ್ರಭಾಗೆಯ ತೀರದಲ್ಲಿ ಹದಿನಾಲ್ಕು ಘಾಟಗಳಿವೆ. ಎಲ್ಲ ಸಂತರು ಚಂದ್ರಭಾಗೆಯ ಮಹಿಮೆಯನ್ನು ಹಾಡಿ ಹೊಗಳಿದ್ದಾರೆ. ನಾಮದೇವನು,

"ಪಂಢರಿಚಾ ವಾಸ ಚಂದ್ರಭಾಗೆ ಸ್ನಾನ
ಆಣಿಕ ದರ್ಶನ ವಿಠೋಭಾಚೆ
ಹೇಚ ಮಜ ಘಡೋ ಜನ್ಮ ಜನ್ಮಾಂತರಿ" (ಮಾಣಿಕರಾವ್ ಧನಪಲವಾರ, ಭಕ್ತರಾಜ ಪುಂಡಲಿಕ, ಪು. ೨೨, ೨೦೦೩)

ಇಂತಹ ಪವಿತ್ರ ಚಂದ್ರಭಾಗೆಯಲ್ಲಿ ಸ್ನಾನ ಮಾಡಿ ವಿಠ್ಠಲನ ದರ್ಶನಕ್ಕಾಗಿ ವಿಠ್ಠಲ ಮಂದಿರದ ಕಡೆ ಹೋಗೋಣ. ಚಂದ್ರಭಾಗೆಯೆಂದರೆ ದಕ್ಷಿಣದ ಗಂಗೆಯಾಗಿದ್ದಾಳೆ. ವಾರಕರಿಗಳು ಮೊದಲು ಚಂದ್ರಭಾಗೆಯಲ್ಲಿ ಮಿಂದು ನಂತರ ವಿಠ್ಠಲನ ದರ್ಶನ ಪಡೆಯುತ್ತಾರೆ. ಇಲ್ಲಿ ಭಕ್ತಿಗಾನದ ಮಹಾಸಾಗರವೇ ಉಕ್ಕಿ ಹರಿಯುತ್ತಿರುತ್ತದೆ. ಭಜನೆ, ಟಾಳ, ಮೃದಂಗಗಳ ಧ್ವನಿ ಇಲ್ಲಿ ದುಮುದುಮಿಸುತ್ತಿರುತ್ತದೆ ಎಂದು ವರ್ಣಿಸಿದ್ದಾನೆ.

ಮಲ್ಲಿಕಾರ್ಜುನ :

ಮಲ್ಲಿಕಾರ್ಜುನ ಎಂಬ ಹೆಸರು ಧಾರಣೆ ಮಾಡಿದವ ಮತ್ತು ದಿಂಡಿರವನದಲ್ಲಿಯ ದಿಂಡಿರವನೆಂಬ ಹೆಸರಿನ ದೈತ್ಯನನ್ನು ಸಂಹರಿಸಿ, ಆ ಭೂಮಿಯನ್ನು ವೈಷ್ಣವ ಭಕ್ತರಿಗಾಗಿ ಶುದ್ಧಗೊಳಿಸಿದವನು ಕೈಲಾಸ ನಾಯಕನಾಗಿದ್ದ ಶಿವನೇ ಆಗಿದ್ದಾನೆ ಎಂದು ಶೈವ ಭಕ್ತಿಮಾರ್ಗದಲ್ಲಿ ಸಂತ ಕವಿ ಸೇನಾನ್ಹಾವಿ ಹೇಳಿದ್ದಾನೆ. ಅವನ ಪ್ರಕಾರ ಪಂಢರಪುರ ಕ್ಷೇತ್ರವು ಭೂವೈಕುಂಠವಾಗಿದೆ. ಪುಂಡಲೀಕನು ಅಲ್ಲಿ ಸ್ಥಾಯಿಕನಾಗಿದ್ದಾನೆ.

ಪದ್ಮಪುರಾಣದ ಪಾಂಡುರಂಗ ಮಹಾತ್ಮೆಯ ಆರಂಭದ ಭಾಗದಲ್ಲಿಯೇ ದಿಂಡಿರವನದ ಸ್ಪಷ್ಟೀಕರಣದ ಕಥೆಯಿದೆ. ಈ ವನದೊಳಗೆ ದಿಂಡಿರವನೆಂಬ ರಾಕ್ಷಸ ಇರುತ್ತಿದ್ದ. ಆದ್ದರಿಂದ ಇದಕ್ಕೆ ದಿಂಡಿರವನ ಎಂಬ ಹೆಸರು ಪ್ರಾಪ್ತವಾಯಿತು ಎಂದು ಗ್ರಂಥಕಾರನು ಸ್ಪಷ್ಟೀಕರಣ ನೀಡಿದ್ದಾನೆ. (ಪದ್ಮಪುರಾಣ ಶ್ರೀ ಪಾಂಡುರಂಗ ಮಹಾತ್ಮೆ) ದಿಂಡಿರವ ಎಂಬ ರಾಕ್ಷಸನ ಸಂಹಾರಕ್ಕಾಗಿ ಸಾಕ್ಷಾತ್ ವಿಷ್ಣುವೇ ಮಲ್ಲಿಕಾರ್ಜುನನ ರೂಪ ಧರಿಸಿದ. ಲೋಹದಂಡದಿಂದ ಪ್ರಹಾರ ಮಾಡಿ ದಿಂಡಿರವನೆಂಬ ದೈತ್ಯನ ವಧೆ ಮಾಡಿದ. ವಿಷ್ಣುವು ಶಿವ ರೂಪ ಧಾರಣೆ ಮಾಡಿ ದಿಂಡಿರವನನ್ನು ಲೋಹದಂಡದಿಂದ ಕೊಂದಿದ್ದರಿಂದ ಈ ಕ್ಷೇತ್ರವು ಲೋಹಾನ್ ಅಥವಾ ಲೋಹದಂಡ ಎಂದು

ಪ್ರಸಿದ್ಧಿ ಪಡೆಯಿತು. ಈ ನಾಮ ಸ್ಪಷ್ಟೀಕರಣದ ಕಥೆಯಲ್ಲಿ ದಿಂಡಿರವನ ಮತ್ತು ಲೋಹದಂಡ ಈ ಮೂಲ ಸ್ಥಳನಾಮದ ಕೃತ್ರಿಮ ಸಂಸ್ಕೃತೀಕರಣ ಮಾಡಿ ಆ ಸಂಸ್ಕೃತೀಕೃತ ನಾಮದ ಬಗ್ಗೆ ಅದ್ಭುತ ಸ್ಪಷ್ಟೀಕರಣ ನೀಡುವ ಪ್ರಯತ್ನ ಮಾಡಲಾಗಿದೆ. ಅಲ್ಲದೆ ಲೋಹಾನ್ ಸ್ಥಳದ ಅಧಿಕೃತ ದೇವರಾದ ಮಲ್ಲಿಕಾರ್ಜುನನನ್ನು ವೈಷ್ಣವೀಕರಣ ಗೊಳಿಸುವ ಪ್ರಯತ್ನವನ್ನು ಮಾಡಲಾಗಿದೆ. ಪಂಢರಪುರದಲ್ಲಿ ಒಂದು ಕಾಲಕ್ಕೆ ಈಗಿರುವ ವಸತಿ ಪ್ರದೇಶದಲ್ಲಿ ಲೋಹಾನ ಎಂಬ ಊರು ಇತ್ತು ಎಂಬುದು ಲೋಹದಂಡ ಕ್ಷೇತ್ರಾಚಿ ಕೈಫಿಯತ್ ಎಂಬ ಅಪ್ರಕಟಿತ ಹಸ್ತಪ್ರತಿಯಲ್ಲಿ ದೊರೆಯುತ್ತದೆ. ಈ ಕಥೆಯ ಸ್ಪಷ್ಟೀಕರಣದಲ್ಲಿ ಈ ಕಥೆಯ ಹಿಂದೆ ಅಡಗಿರುವ ಆಯಾ ಸ್ಥಳದ ಮತ್ತು ಸ್ಥಾನ ಪರಂಪರೆಯ ಮೂಲರೂಪವು ಯಥಾರ್ಥ ಸ್ವರೂಪದಲ್ಲಿ ಕಾಣ ಸಿಗುತ್ತದೆ. ಆ ಮೂಲರೂಪವನ್ನು ಉನ್ನಯನಗೊಳಿಸುವ ಉದ್ದೇಶವೂ ಸ್ಪಷ್ಟವಾಗಿ ಗೋಚರಿಸುತ್ತದೆ.

ವಿಠ್ಠಲನ ಪೌರಾಣಿಕ ಹಿನ್ನೆಲೆ ತಿಳಿದುಕೊಳ್ಳಲು ಶ್ರೀ ವಿಠ್ಠಲ ಹಾಗೂ ಪಂಢರಪುರಕ್ಕೆ ಸಂಬಂಧಿಸಿದ ಮೂರು ಪೌರಾಣಿಕ ಗ್ರಂಥಗಳು ಉಪಲಬ್ಧವಾಗಿವೆ.

೧. ಸ್ಕಂದ ಪುರಾಣಾಂತರ್ಗತ ಪಾಂಡುರಂಗ ಮಹಾತ್ಮೆ.

೨. ಪದ್ಮ ಪುರಾಣಾಂತರ್ಗತ ಪಾಂಡುರಂಗ ಮಹಾತ್ಮೆ.

೩. ವಿಷ್ಣು ಪುರಾಣಾಂತರ್ಗತ ಪಾಂಡುರಂಗ ಮಹಾತ್ಮೆ.

ಈ ಮಹಾತ್ಮೆಗಳಲ್ಲಿ ಸ್ಕಂದ ಪಾಂಡುರಂಗ ಮಹಾತ್ಮೆಯು ನಿವೃತ್ತಿನಾಥ, ಜ್ಞಾನದೇವ ಮೊದಲಾದ ಸಂತರ ಉದಯಕ್ಕಿಂತ ಪೂರ್ವದಲ್ಲಿ, ಹೇಮಾದ್ರಿ ಪಂಡಿತರಿಗಿಂತ ಮೊದಲು ರಚಿಸಲಾಗಿದೆ. ಪಂಢರಪುರದ ವಿಠ್ಠಲಪ್ರಧಾನ ಪಾವಿತ್ರ್ಯದ ಸಾಮಗ್ರಿಗಳಿಗೆ ಈ ಗ್ರಂಥವೇ ಬುನಾದಿಯಾಗಿದೆ. ಎರಡನೆಯದು ಪದ್ಮ ಪಾಂಡುರಂಗ ಮಹಾತ್ಮೆ. ಇದು ಸಹ ಪಂಢರಪುರದ ಪಾವಿತ್ರ್ಯ ಸಾಮಗ್ರಿಯನ್ನು ವಿಸ್ತಾರಗೊಳಿಸುವ ಉದ್ದೇಶದಿಂದ ಮತ್ತು ಕೆಲವು ಸ್ಥಳೀಯ ದೇವತೆಗಳಿಗೆ ವೈಷ್ಣವ ಪ್ರತಿಷ್ಠೆ ದೊರಕಿಸಿಕೊಟ್ಟು ಅವುಗಳನ್ನು ವಿಠ್ಠಲ ಪರಿವಾರದಲ್ಲಿ ಸೇರ್ಪಡೆಗೊಳಿಸುವ ಉದ್ದೇಶದಿಂದ ಈ ಗ್ರಂಥವನ್ನು ರಚಿಸಲಾಗಿದೆ. ದಿಂಡಿರವನದಲ್ಲಿ ಮುನಿದು ಬಂದ ರುಕ್ಮಿಣಿಯ ಕಥೆಯು ಮೊದಲು ಪದ್ಮ ಪಾಂಡುರಂಗ ಮಹಾತ್ಮೆಯಲ್ಲಿ ಪ್ರಕಟವಾಗಿದೆ. ಈ ಕಥೆಯ ಉಲ್ಲೇಖವನ್ನು ಏಕನಾಥರು ಪಂಢರಿ ಮಹಾತ್ಮೆಯ ಅಭಂಗದಲ್ಲಿ ಮಾಡಿದ್ದಾರೆ. ಹೀಗಾಗಿ ಈ ಮಹಾತ್ಮೆಯ ರಚನೆಯು ಸುಮಾರು ೧೬ನೆಯ ಶತಮಾನದಲ್ಲಿ ಆಗಿರಬೇಕು. ಮೂರನೆಯದು ವಿಷ್ಣುಪುರಾಣಾಂತರ್ಗತ ಪಾಂಡುರಂಗ ಮಹಾತ್ಮೆ. ಆದರೆ ಇದು ಹೆಚ್ಚು

ಜನಪ್ರಿಯವಾಗಲಿಲ್ಲ. ಇದರಲ್ಲಿ ಪುಂಡಲೀಕನ ಕಥೆಯ ಹೊರತಾಗಿ ಅನ್ಯ ಸ್ಥಳೀಯ ತಪಶೀಲು ಇಲ್ಲದೇ ಇರುವುದರಿಂದ ಇದಕ್ಕೆ ಹೆಚ್ಚು ಮಹತ್ವವಿಲ್ಲ.

ಸ್ಕಂದ ಪಾಂಡುರಂಗ ಮಹಾತ್ಮೆಯು ಪಂಢರಪುರದ ಪ್ರಾಚೀನ ಶಿಲಾಲೇಖಕ್ಕಿಂತ ಪ್ರಾಚೀನ ವಾದುದರಿಂದ ಸಂಶೋಧನೆಯ ಕ್ಷೇತ್ರದಲ್ಲಿ ಈ ಗ್ರಂಥವು ಮೊದಲ ಮಹತ್ವದ ಸಾಮಗ್ರಿಯಾಗಿದೆ. ಈ ಮಹಾತ್ಮೆಯಲ್ಲಿ ಪಾಂಡುರಂಗ ಎಂಬ ವಿಠ್ಠಲನ ಪರ್ಯಾಯ ಹೆಸರು ಬಂದರೂ, ಅದು ಮೂಲತಃ ಕ್ಷೇತ್ರದ ಹೆಸರಾಗಿದೆ. ಪಾಂಡುಗಂತ ವಿಠ್ಠಲ ಎಂದರೆ ಪಾಂಡುರಂಗನೆಂಬ ಕ್ಷೇತ್ರದ ವಿಠ್ಠಲ ಎಂದು ಅರ್ಥವಾಗುತ್ತದೆ. ಪಾಂಡುರಂಗ ಎಂಬ ಕ್ಷೇತ್ರವಾಚಕ ಪೂರ್ವ ಪದದ ಮುಂದೆ ದೇವರು ಅಂದರೆ ವಿಠ್ಠಲನ ಹೆಸುರ ಸೇರಿ ಒಂದು ಜನಪ್ರಿಯ ಪರ್ಯಾಯ ನಾಮದ ಪಾಂಡುರಂಗ ವಿಠ್ಠಲ ಎಂದು ಹೆಸರಾಯಿತು.

ಸ್ಕಂದ ಮಹಾತ್ಮೆಯು ಶಂಕರ ಪಾರ್ವತಿಯರ ಸಂವಾದಾತ್ಮಕ ರೂಪದಲ್ಲಿದ್ದು ಅದರಲ್ಲಿ ೧೨ ಅಧ್ಯಾಯಗಳಿವೆ. ಪುಂಡರೀಕ ಮುನಿಯ ಆಶ್ರಮದಲ್ಲಿ ಕೃಷ್ಣ ಬರುತ್ತಾನೆ ಮತ್ತು ಪುಂಡರೀಕನ ಹೆಸರಿನಿಂದ ಈ ಸ್ಥಳ ಪ್ರಸಿದ್ಧವಾಗುವುದೆಂದು ವರನೀಡಿ ದೇವನು ಅಲ್ಲಿಯೇ ನೆಲೆಸುತ್ತಾನೆ. ಎರಡನೆಯ ಅಧ್ಯಾಯವು ಈ ಕ್ಷೇತ್ರದಲ್ಲಿಯ ದಾನಿಗಳ ಮಹಾತ್ಮೆ ಮತ್ತು ಕ್ಷೇತ್ರ ದರ್ಶನದಿಂದ ಕೂಡಿದ್ದು, ಕ್ರಮವಾಗಿ ನಾಲ್ಕೂ ದ್ವಾರಗಳಲ್ಲಿಯ ದೇವತೆಗಳ ವರ್ಣನೆಯಿಂದ ಕೂಡಿದೆ. ಮೂರನೆಯ ಅಧ್ಯಾಯದಲ್ಲಿ ಕ್ಷೇತ್ರದ ದೇವತೆಗಳ ನಿರ್ದೇಶವಿದ್ದು, ನಾಲ್ಕನೆಯ ಅಧ್ಯಾಯದಲ್ಲಿ ಕ್ಷೇತ್ರದಲ್ಲಿಯ ತೀರ್ಥಗಳ ವರ್ಣನೆಯಿದೆ. ಐದರಲ್ಲಿ ನಾರದನ ಮರುಪ್ರಶ್ನೆ, ಆರರಲ್ಲಿ ಸಂಗಮದಲ್ಲಿಯ ನರಸಿಂಹ ಕ್ಷೇತ್ರ ಮಹಾತ್ಮೆ, ಏಳನೆಯದು ಪುಂಡರೀಕಾಶ್ರಮದಲ್ಲಿ ಗೋಪವೇಷದ ಹರಿಯ ಆಗಮನ ಮತ್ತು ಪುಂಡರೀಕ ದಶಾವತಾರ ಸ್ತುತಿ, ಎಂಟು ಪಾಂಡುರಂಗ ಮೂರ್ತಿಯ ವರ್ಣನೆ, ಒಂಬತ್ತರಲ್ಲಿ ಮಂದಿರದ ಹತ್ತಿರ ಇರುವ ಭೈರವನ ಕಥೆ, ಹತ್ತನೆಯ ಅಧ್ಯಾಯ ಪುಂಡರೀಕ ತೀರ್ಥದ ನಾಲ್ಕು ಅಂತರದ್ವಾರ, ನಾಲ್ಕು ಬಹಿರ್ದ್ವಾರಗಳ ವರ್ಣನೆ ಇದೆ. ಹನ್ನೊಂದು ಮತ್ತು ಹನ್ನೆರಡು ಮತ್ತೆ ಕ್ಷೇತ್ರದೇವತೆಗಳ ವರ್ಣನೆ, ಹೀಗೆ ಸ್ಕಂದ ಮಹಾತ್ಮೆಯು ಹನ್ನೆರಡು ಅಧ್ಯಾಯಗಳ ಗ್ರಂಥವಾಗಿದೆ.

ಪದ್ಮ ಪುರಾಣದಲ್ಲಿ ಒಟ್ಟು ಮೂವತ್ತೆರಡು ಅಧ್ಯಾಯಗಳಿವೆ. ಇದು ವಿಸ್ತೃತ ಗ್ರಂಥವಾಗಿದ್ದು, ಮೊದಲ ಐದು ಅಧ್ಯಾಯಗಳಲ್ಲಿ ದೇವರ ಪುಂಡರೀಕ ಕ್ಷೇತ್ರದಲ್ಲಿಯ ಆಗಮನ ಮತ್ತು ಅಲ್ಲಿಯ ತೀರ್ಥಗಳ ವರ್ಣನೆಯಿದೆ. ನಂತರದಲ್ಲಿ ಈ ಐದು ಅಧ್ಯಾಯಗಳ ಆಶಯವೇ ಪುನರುಕ್ತಿಯಾಗಿದೆ. ಪಾಂಡುರಂಗ ಮಹಾತ್ಮೆ ಈ ಶಬ್ದ ಪ್ರಯೋಗದಲ್ಲಿ ಪಾಂಡುರಂಗ ಎಂಬ

ಹೆಸರಿನ ಕ್ಷೇತ್ರದ ಮಹಾತ್ಮೆ ಎಂಬ ಅರ್ಥವೇ ಅದರಲ್ಲಿ ಸಮಾವೇಶವಾಗಿದೆ. ಹೀಗಿದ್ದರೂ ಈ ಕ್ಷೇತ್ರದಲ್ಲಿಯ ಮುಖ್ಯ ದೇವತೆಯೆಂದು ಪಾಂಡುರಂಗ ದೇವನ ಮಹತ್ವವನ್ನು ಯಥಾವತ್ತಾಗಿ ತಿಳಿಸಲಾಗಿದೆ. ಮುಖ್ಯ ಉದ್ದೇಶವು ಕ್ಷೇತ್ರ ಮಹಾತ್ಮೆಯ ಕಥನವಾಗಿದ್ದುದರಿಂದ ಈ ದೇವರ ವಿಷಯದ ಮಹಾತ್ಮೆಯು ಅದಕ್ಕೇ ಸಂಬಂಧಿಸಿದ್ದುದ ರಿಂದ ಅದು ಇಲ್ಲಿ ಅಮುಖ್ಯವಾಗಿದೆ. ಇಲ್ಲಿ ದೇವತೆಯಿಂದ ಕ್ಷೇತ್ರದ ಮತ್ತು ಕ್ಷೇತ್ರದಿಂದ ದೇವತೆಯ ಮಹಾತ್ಮೆಯು ಹೆಚ್ಚಿರುವುದು ಕಂಡು ಬರುತ್ತದೆ.

ಸ್ಕಂದ ಮಹಾತ್ಮೆಯಲ್ಲಿ ಪುಂಡಲೀಕನು ಮಾತಾ ಪಿತರ ಭಕ್ತ. ಅವನು ಸದಾ ಮಾತಾಪಿತರ ಭಕ್ತಿಯಲ್ಲಿಯೇ ತಲ್ಲೀನನಾಗಿರುತ್ತಿದ್ದ. ದೇವರು ಅವನ ಮಾತಾಪಿತೃ ಭಕ್ತಿಗೆ ಮೆಚ್ಚಿ ಗೋಪಾಲಕೃಷ್ಣನ ರೂಪದಲ್ಲಿ ಸೊಂಟದ ಮೇಲೆ ಕೈಯಿಟ್ಟುಕೊಂಡು ಅವನ ಸನ್ನಿಧಿಗೆ ಬಂದ. ಈ ಕಥೆಯ ಪ್ರಕಾರ ಪುಂಡಲೀಕನು ದೇವರ ಆಗಮನಕ್ಕಿಂತ ಮೊದಲೇ ಪಂಢರಪುರದಲ್ಲಿದ್ದ. ಪುಂಡಲೀಕನು ವಿಠ್ಠಲನ ಉಪಾಸಕನಾಗಿರಲಿಲ್ಲ. ಆದರೆ ಅವನು ಮಾತಾ ಪಿತೃ ಭಕ್ತ. ಅವನು ದೇವರನ್ನು ಕರೆಯಲಿಲ್ಲ. ದೇವ ತಾನಾಗಿಯೇ ಅವನ ಬಳಿಗೆ ಬಂದ. ಪುಂಡಲೀಕನು ದೇವರಿಗೆ ಹೀಗೆ ಬೇಡಿಕೆ ಹಾಕಿದ :

ಅನೇನ ಚಾರು ರೂಪೇಣ ತ್ವಯಾ ಸ್ಥೇಯ ಮಿಹ ಪ್ರಭೋ
ಮನ್ನಮ್ನೈವ ಭವೇತ್ ಕ್ಷೇತ್ರ ವಿಶ್ರುತ ಸುರಪೂಜಿತಮ್ (ಸ್ಕಂದ ಪುರಾಣ, ಪು. ೧೬೧, ೧೯೭೦)

ಇದೇ ಸುಂದರ ರೂಪದಲ್ಲಿ ನೀನಿಲ್ಲಿರಬೇಕು. ಈ ಕ್ಷೇತ್ರವು ನನ್ನ ಹೆಸರಿನಿಂದ ಪ್ರಸಿದ್ಧವಾಗಬೇಕು. ದೇವನು ಇಲ್ಲಿ ಪೂಜಿತನಾಗಬೇಕು. ಪುಂಡಲೀಕನ ಬೇಡಿಕೆಯನ್ನು ಮನ್ನಿಸಿ ದೇವರು ಹೇ ಬ್ರಾಹ್ಮಣ, ನಾನು ನಿನ್ನ ಹೆಸರು ಧರಿಸಿ ಈ ಕ್ಷೇತ್ರದಲ್ಲಿ ಸದಾ ವಾಸಿಸುತ್ತೇನೆ ಎಂದು ಪುಂಡಲೀಕನಿಗೆ ಆಶ್ವಾಸನೆ ನೀಡಿದ. ಪಂಢರಪುರ ಕ್ಷೇತ್ರವು ಪುಂಡಲೀಕನ ಹೆಸರಿಗೆ ಸಂಬಂಧಿಸಿದ್ದು, ಕ್ಷೇತ್ರವು ಅವನ ಹೆಸರಿನಿಂದಲೇ ಪ್ರಚಲಿತವಾಗಿದೆ. ಸ್ಕಂದ ಪಾಂಡುರಂಗ ಮಹಾತ್ಮೆ ಮತ್ತು ಪದ್ಮ ಪಾಂಡುರಂಗ ಮಹಾತ್ಮೆ, ಎರಡೂ ಸೇರಿ, ನಾಲ್ಕು ಪ್ರಸಂಗಗಳು ಪಂಢರಪುರದಲ್ಲಿ ಘಟಿಸಿವೆ ಎಂದು ಹೇಳಲಾಗಿದೆ.

೧. ದಿಂಡಿರವನದಲ್ಲಿ ಸೊಕ್ಕಿಗೆದ್ದ ದಿಂಡೀರವ ಎಂಬದೈತ್ಯನ ವಧೆ ಮಾಡಲು ವಿಷ್ಣು ಮಲ್ಲಿಕಾರ್ಜುನನ ರೂಪ ಧರಿಸಿದ ಮತ್ತು ಲೋಹದಂಡದಿಂದ ಆ ದೈತ್ಯನ ವಧೆ ಮಾಡಿದ.

೨. ಕೃಷ್ಣನು ದ್ವಾರಕೆಯಲ್ಲಿಯೂ ಸಹ ರಾಧೆಗೆ ಆಶ್ರಯ ನೀಡಿದ್ದರಿಂದ ಅವನಮೇಲೆ ಮುನಿದು ದಿಂಡಿರವನದಲ್ಲಿ ನೆಲೆ ನಿಂತ ರುಕ್ಮಿಣಿಯ ಕೋಪವನ್ನು ಶಮನಗೊಳಿಸಲು ಕೃಷ್ಣನು ಗೋಪಾಲಕರ ಸಮೇತನಾಗಿ ಮೊದಲು ಗೋಪಾಳಪುರಕ್ಕೆ ಬಂದ. ಅಲ್ಲಿ ಉಳಿದ ಪರಿವಾರವನ್ನೆಲ್ಲ ಬಿಟ್ಟು ತಾನೊಬ್ಬನೇ ಗೋವಳಿಗ ವೇಷ ಧರಿಸಿ ರುಕ್ಮಿಣಿಯ ಬಳಿಗೆ ಬಂದ.

೩. ಪುಂಡರೀಕನ ಮಾತಾ ಪಿತೃಗಳ ಸೇವೆಯಿಂದ ಸಂತುಷ್ಟನಾಗಿ ಅವನಿಗೆ ವರ ನೀಡಲು ಕೃಷ್ಣನು ಗೋವಳಿಗ ವೇಷ ಧರಿಸಿ ಪುಂಡರೀಕನ ಆಶ್ರಮಕ್ಕೆ ಆಗಮಿಸಿದ.

೪. ಪದ್ಮಾ ಎಂಬ ಸುಂದರ ಯುವತಿಯು ಇಷ್ಟ ವರ ಪ್ರಾಪ್ತಿಗಾಗಿ ತಪ ಆರಂಭಿಸಿದಾಗ ದೇವರು ಅವಳಿಗಿಂತ ಸುಂದರ ವೇಷ ಧರಿಸಿ ಅವಳ ಎದುರು ಪ್ರಕಟಗೊಂಡನು. ದೇವರ ಸುಂದರ ರೂಪ ಕಂಡು ಅವಳು ಮೋಹಿತಳಾದಳು. ಅವಳ ಬಟ್ಟೆ ಕಳಚಿತು. ಅವಳ ಕೂದಲು ಕೆದರಿತು. ದೇವರ ವರಪ್ರದಾನದಿಂದ ಅವಳ ಹೆಸರಿನ ಮುಕ್ತಕೇಶಿ ಎಂಬ ತೀರ್ಥ ನಿರ್ಮಾಣವಾಯಿತು. (ಸ್ಕಂದ ಪುರಾಣ, ಅದೇ ಪು. ೧೨೭)

ಪಂಢರಪುರದ ಹತ್ತಿರ ದಿಂಡಿರವನ ಎಂಬ ಅರಣ್ಯವಿತ್ತು. ಈ ಪ್ರದೇಶದಲ್ಲಿ ದಿಂಡಿರವನೆಂಬ ರಾಕ್ಷಸ ಇರುತ್ತಿದ್ದ. ಅವನ ನಿವಾಸದಿಂದ ದಿಂಡಿರವನ ಎಂಬ ಹೆಸರು ರೂಢಿಯಲ್ಲಿತ್ತು. ಆ ರಾಕ್ಷಸನ ಉಪಟಳವನ್ನು ತಡೆಯಲಾರದೆ ದೇವತೆಗಳು ಬ್ರಹ್ಮನಿಗೆ ಮೊರೆ ಹೊಕ್ಕರು. ಆಗ ವಿಷ್ಣುವು ಅವನ ಸಂಹಾರಕ್ಕಾಗಿ ಮಲ್ಲಿಕಾರ್ಜುನನ ರೂಪ ಧರಿಸಿದ. ತನ್ನ ಲೋಹದಂಡದಿಂದ ದೈತ್ಯನ ಸಂಹಾರ ಮಾಡಿದ್ದರಿಂದ ಈ ಕ್ಷೇತ್ರವು ಲೋಹದಂಡ ಕ್ಷೇತ್ರವೆಂದು ಪ್ರಸಿದ್ಧಿ ಪಡೆಯಿತು. ಕೃಷ್ಣರಾಧೆಯರಲ್ಲಿಯ ಆಕರ್ಷಣೆಯಿಂದ ರುಕ್ಮಿಣಿ ಸಿಟ್ಟಿಗೆದ್ದು ದಿಂಡಿರವನಕ್ಕೆ ಹೊರಟು ಹೋದಳು. ಕೃಷ್ಣ ರುಕ್ಮಿಣಿಯನ್ನು ಶೋಧಿಸುವ ಸಲುವಾಗಿ ದಿಂಡಿರವನಕ್ಕೆ ಬಂದ. ಅವನು ಗೋಪಾಲಕರ ಪರಿವಾರವನ್ನು ಬಿಟ್ಟು ಒಬ್ಬನೇ ದಿಂಡಿರವನಕ್ಕೆ ಬಂದು ನೆಲೆಸಿದ. ಸ್ಕಂದದ ಮೂರನೆಯ ಅಧ್ಯಾಯದಲ್ಲಿ ಮುಕ್ತಕೇಶಿಯ ಕಥೆಯಿದೆ. ಗೋಪಿಕಾ ಸ್ತ್ರೀ ತಪವನ್ನು ಆಚರಿಸುತ್ತಿದ್ದರಳು. ದೇವರು ಪ್ರಸನ್ನನಾಗಿ ನಿನಗೆ ಬೇಕಾದ ವರ ಬೇಡಿಕೊ ಎಂದ. ಗೋಪಾಲಕೃಷ್ಣನ ಆ ಮೋಹಕ ರೂಪ ನೋಡಿ ಅವಳು ಕಾಮಾಸಕ್ತಳಾದಳು. ಅವಳ ವಸ್ತ್ರ ಕಳಚಿತು. ಕೂದಲು ಕೆದರಿತು. ಅವಳು ಪರಮಾತ್ಮನ ಪಾದ ಹಿಡಿದಳು. ಅವಳು ತಾನು ಹಾಗೆಯೇ ಅವನ ಹತ್ತಿರ ಉಳಿಯಬೇಕೆಂದು ವರ ಬೇಡಿದಳು. ಇದೇ ಕಥೆಯು ಪದ್ಮಪುರಾಣದ

ಇಪ್ಪತ್ತೇಳನೆಯ ಅಧ್ಯಾಯದಲ್ಲಿ ವರ್ಣಿತವಾಗಿದೆ. ಇಲ್ಲಿ ಗೋಪಿಕಾ ಸ್ತ್ರೀ ಎಂದರೆ ಚಂದ್ರಸೇನನ ಮಗಳು ಪದ್ಮ ಎಂದು ವರ್ಣಿಸಲಾಗಿದೆ.

ವಜ್ರ ಅಥವಾ ಇಟ್ಟಿಗೆ :

ವಿಠ್ಠಲನ ಎರಡು ಕಾಲುಗಳ ಮಧ್ಯೆ ವಜ್ರ ಹಿಡಿದಿದ್ದರ ಉಲ್ಲೇಖವು ಪದ್ಮಪುರಾಣದ ಪಾಂಡುರಂಗ ಮಹಾತ್ಮೆಯ ಐದನೆಯ ಅಧ್ಯಾಯದಲ್ಲಿದೆ. ಇಲ್ಲಿ ವಜ್ರ ಅಂದರೆ ಇಂದ್ರ, ಇದು ದೇವನ ಆಸನ ಹೇಗಾಯಿತು ಎಂದು ಸ್ಪಷ್ಟೀಕರಿಸುವ ಕಥೆ ಇದಾಗಿದೆ. ವೃತ್ರ ಎನ್ನುವ ಮೂರು ಮುಖದ ಸರ್ಪವು ಒಂದೊಂದು ಮುಖದಿಂದ ಸ್ವಾಧ್ಯಾಯ, ಸಾಮಗಾನ ಮತ್ತು ತಪಸ್ಸಿನಿಂದ ಪೀಡಿಸುತ್ತಿತ್ತು. ಆಗ ಇಂದ್ರನು ಒಬ್ಬ ಕಿರಾತನಿಂದ ಅದನ್ನು ಸಂಹಾರಗೊಳಿಸಿದ. ಅದಕ್ಕಾಗಿ ವೃತ್ರವು ಇಂದ್ರನಿಗೆ 'ನೀನು ವಿಷ್ಣುವಿನ ಲೋಷ್ಟನಾಗುವಿ' ಎಂದು ಶಾಪ ಕೊಟ್ಟಿತು. ಈ ಶಾಪವು ವಿಷ್ಣು ಪುಂಡಲೀಕನಿಗಾಗಿ ಬಂದಾಗ, ವಿಷ್ಣು ನಿನ್ನ ಮೇಲೆ ನಿಲ್ಲುತ್ತಾನೆ. ಆಗ ನೀನು ಶಾಪಮುಕ್ತನಾಗುವಿ ಎಂಬ ಶಾಪ ವಿಮೋಚನೆಯ ವರವಿತ್ತು. ಈ ರೀತಿಯಾಗಿ ಇಂದ್ರನು ಲೋಷ್ಟದ ರೂಪದಲ್ಲಿ ಹರಿಯ ಸೇವೆ ಮಾಡುತ್ತಿದ್ದಾನೆ. ವಜ್ರ ಎಂದರೆ ವಜ್ರಧಾರಿ ಇಂದ್ರನಾಗಿದ್ದಾನೆ.

ಚಂದ್ರನು ಬೃಹಸ್ಪತಿಯ ಪತ್ನಿಯಾದ ತಾರೆಯೊಂದಿಗೆ ವ್ಯಭಿಚಾರ ಮಾಡಿದ್ದರಿಂದ ಬೃಹಸ್ಪತಿಯು ಚಂದ್ರನಿಗೆ ಶಾಪವಿತ್ತ. ಭೀಮೆಯಲ್ಲಿ ಸ್ನಾನ ಮಾಡಿದರೆ ಶಾಪಮುಕ್ತನಾಗುವನೆಂಬ ಮೋಕ್ಷವಿಮೋಚನೆ ಯನ್ನೂ ಸೂಚಿಸಿದ. ಚಂದ್ರನು ಭೀಮೆಯಲ್ಲಿ ಸ್ನಾನ ಮಾಡಿದ್ದರಿಂದ ಆ ನದಿಯು ಚಂದ್ರಭಾಗೆ ಎಂದು ಹೆಸರಾಯಿತು. ಸ್ಕಂದ ಪಾಂಡುರಂಗ ಮಹಾತ್ಮೆಯಲ್ಲಿ ಪುಂಡರೀಕ ಮತ್ತು ಅವನಿಗಾಗಿ ಭಗವಂತನು ಪ್ರಕಟಗೊಂಡ ವರ್ಣನೆ ಇದ್ದರೆ, ಪದ್ಮ ಪಾಂಡುರಂಗ ಮಹಾತ್ಮೆಯಲ್ಲಿ ಲಕ್ಷ್ಮಿಯ ಭೇಟಿಗಾಗಿ ಬಂದ ವರ್ಣನೆ ಇದೆ. ಇವು ವಿಠ್ಠಲನ ಪೌರಾಣಿಕ ಹಿನ್ನೆಲೆಯ ಆಧಾರವಾಗಿವೆ.

ವಿಠ್ಠಲನ ಜಾನಪದ ಹಿನ್ನೆಲೆ :

ಕುರುಬರ ಮೌಖಿಕ ಪರಂಪರೆಯಲ್ಲಿ ವಿಠೋಬ ಇವನು ಮುಖ್ಯವಾಗಿ ಬೀರೋಬಾ ಅಥವಾ ಬೀರಪ್ಪನ ಜೊತೆಗೆ ಸಂಬಂಧ ಹೊಂದಿದ್ದಾನೆ. ಇವರಿಬ್ಬರೂ ಸೋದರ ಸಂಬಂಧದವರಾಗಿದ್ದು, ಅವರನ್ನು ವಿಠ್ಠಲ-ಬೀರಪ್ಪ ಎಂಬ ಜೋಡು ಶಬ್ದದಿಂದ ಕರೆಯುತ್ತಾರೆ. ವಿಠ್ಠಲನು ವೈಷ್ಣವ ವಾರಕರಿ ಪರಂಪರೆಯ ಅಧೀನನಾಗಿದ್ದರೂ ಜನಪದ ಧರ್ಮಕ್ಕೆ ಹೊಂದುವಂತಹ ಅನೇಕ ವೈಶಿಷ್ಟ್ಯಗಳು ಅವನಲ್ಲಿವೆ. ಕೃಷ್ಣನು ವೈಷ್ಣವ ಎಂಬ ಒಂದು ವಿಶಿಷ್ಟ ವ್ಯಕ್ತಿಯ ದೇವನಾಗುವುದಕ್ಕಿಂತ ಮೊದಲು, ಅವನ ಪ್ರಾಚೀನ ಇತಿಹಾಸವು ಜನಪದ

ಪರಂಪರೆಯಲ್ಲಿ ಇತ್ತು. ಬೀರಪ್ಪಾ ಅಥವಾ ಬೀರೋಬಾ ಇವನು ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿಯ ಕುರುಬರ ಜಾತಿಯ ದೇವರಾಗಿದ್ದು, ಅವನ ಪುರಾಣ ಬಹಳ ಸಮೃದ್ಧವಾಗಿದೆ. ವಿಠೋಬಾ ಗೋಧನದ ಮೂಲಕ ಗೌಳಿಗರ ಪ್ರತಿನಿಧಿಯಾಗಿದ್ದರೆ, ಬಿರೋಬಾ ಆಡು ಮತ್ತು ಕುರಿಗಳ ಸಂಪತ್ತು ಹೊಂದಿದ್ದ ಕುರುಬರ ಪ್ರತಿನಿಧಿಯಾಗಿದ್ದಾನೆ.

ಈ ಎರಡೂ ದೇವತೆಗಳು ಒಬ್ಬರಿಗೊಬ್ಬರು ಹೇಗೆ ಭೇಟಿಯಾದರೆಂದು ಹೇಳುವ ಮೌಖಿಕ ಪರಂಪರೆಯ ಕಥೆಯ ದೃಷ್ಟಾಂತಗಳು ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರದಲ್ಲಿ ಸಿಗುತ್ತವೆ. ಇಟಿಲ ಮತ್ತು ಬ್ರಮಲ ಎಂಬ ಇಬ್ಬರು ಸೋದರರಿದ್ದರು. ತಮ್ಮಿಬ್ಬರ ಜೊತೆಗೆ ಇನ್ನೊಬ್ಬನಿದ್ದರೆ ಕೆಲಸ ಕಾರ್ಯಗಳಲ್ಲಿ ಸಹಾಯವಾಗುತ್ತದೆ ಎಂದು ಇಬ್ಬರೂ ಯೋಚಿಸಿದರು. ಬಳಿಕ ತಮ್ಮ ದೇಹದ ಮಲಿನವನ್ನು ತೆಗೆದು, ಅದರಿಂದ ಮೂರ್ತಿಯನ್ನು ನಿರ್ಮಿಸಿ, ಅಮೃತ ಸಿಂಪಡಿಸಿ ಅದಕ್ಕೆ ಜೀವ ತುಂಬಿದರು. ಅದಕ್ಕೆ ಸೋಮ ಎಂದು ಹೆಸರಿಟ್ಟರು. ಅವನು ಬೆಳೆದು ೧೨ ವರ್ಷದವನಾದ. ನಂತರ ವಾಸಿಸಲು ಹೊಸ ಜಾಗವನ್ನು ಹುಡುಕುತ್ತ ಮೂವರೂ ಕುಂಡಲಾದ ದಿನ್ನೆಗೆ ಬಂದರು. ಅಲ್ಲಿ ಅವರು ಒಂದು ಕುಂಡವನ್ನು ನೆಟ್ಟಿದ್ದರಿಂದ ಅದಕ್ಕೆ ಕುಂಡಲಗಾಂವ ಎಂಬ ಹೆಸರು ಬಂತು. ನಂತರ ಆ ಊರು ಅಷ್ಟಾಗಿ ಹಿಡಿಸಲಿಲ್ಲ. ಅಲ್ಲಿಂದ ಹೊರಟು ಕೋಡೋಲಿಯ ದಿನ್ನೆಗೆ ಬಂದರು. ಅಲ್ಲಿಯ ಪ್ರಶಸ್ತ ಜಾಗ ಅವರಿಗೆ ಹಿಡಿಸಿತು. ರಾತ್ರಿ ಅಲ್ಲಿಯೇ ತಮ್ಮ ನಿಶಾನೆ ಊರಿದರು. ಈ ವೃತ್ತಾಂತವು ಊರಿನ ಕಲ್ಲೇಶ್ವರ ದೇವರಿಗೆ ತಿಳಿಯಿತು. ಅವನು ಊರಿನ ಮುಧಾರಿಗಳಿಗೆ ಈ ಸುದ್ದಿ ತಿಳಿಸಿದ. ಅವರು ಕುರುಬ ದೇವನಿಗೆ ಅಲ್ಲಿ ಸ್ಥಳ ನೀಡುವುದಿಲ್ಲವೆಂದು ಕಲ್ಲೇಶ್ವರನಿಗೆ ಆಶ್ವಾಸನೆ ನೀಡಿದರು. ಮರುದಿನ ಇಟಲಿ ಬ್ರಮರರು ಸೋಮನನ್ನು ಊರೊಳಗೆ ಕಳುಹಿಸಿ ತಮ್ಮನ್ನು ಸ್ವಾಗತಿಸುವ ಅಥವಾ ತಮ್ಮ ಸಮಾಚಾರವನ್ನು ಯಾರಾದರೂ ವಿಚಾರಿಸುವವರಿದ್ದಾರೆಯೇ ಎಂದು ಕೇಳಿದರು. ಯಾರೂ ಸೋಮನನ್ನು ವಿಚಾರಿಸಲಿಲ್ಲ. ಅವನು ಹಾಗೆಯೇ ಮರಳಿದ. ನಂತರ ಸೋದರರ ಸಲಹೆಯಂತೆ ಭಂಡಾರದ ಚೀಲವನ್ನು ಹಿಡಿದುಕೊಂಡು ಊರೊಳಗೆ ಪ್ರವೇಶಿಸಿ ಇಡೀ ಊರಿನ ಜನರ ಮೇಲೆ ಭಂಡಾರ ಎರಚಿದ. ಮರುದಿನ ಮೂರು ಪೂಜಾರಿಗಳನ್ನು ಬಿಟ್ಟು ಎಲ್ಲರೂ ಕುರುಡರಾದರು. ಇದರಿಂದ ಚಿಂತಾಗ್ರಸ್ತರಾದ ಪೂಜಾರಿಗಳು ಸೋಮನನ್ನು ಕರೆದು ವಿಚಾರಿಸಿದರು. ನಿನಗೇನಾದರೂ ಈ ಸಂಕಟ ನಿವಾರಿಸಲು ದೈವೀ ಉಪಾಯ ಗೊತ್ತಿದೆಯೇ? ಎಂದು ಪ್ರಶ್ನಿಸಿದರು. ಸೋಮನು ತನ್ನ ಸೋದರರು ತಿಳಿದಿದ್ದಾರೆ ಎಂದ. ಮೂವರೂ ಪೂಜಾರಿಗಳು ಇಟಲ ಬ್ರಮಲರಿಗೆ ಶರಣರಾದರು. ಅವರಿಗೆ ವಾಸಿಸಲು ಸ್ಥಳ ನೀಡಿದರು. ಅರಣ್ಯದಲ್ಲಿ ಕಟ್ಟಿಗೆ ಕಡೆಯಲು ಅನುಮತಿ ನೀಡಿದರು. ನಂತರ ಇಟಲ ಬ್ರಮಲ ಸೋಮರು ಪುನಃ ಭಂಡಾರ ಎರಚಿ ಊರ ಜನರಿಗೆ ಕಣ್ಣು

ನೀಡಿದರು. ನಂತರ ದಿನ್ನೆಯ ಮೇಲೆ ಸ್ವತಂತ್ರ ಮಂದಿರ ಕಟ್ಟಿ, ಸ್ವತಂತ್ರವಾಗಿ ವಾಸಿಸಲು ಆರಂಭಿಸಿದರು. ಹೀಗೆ ಅಲ್ಲಿ ಕುರುಬರು ಸ್ಥಾನಿಕರಾದರು. ಎಲ್ಲ ವಿರೋಧವನ್ನು ಎದುರಿಸಿ ಅಲ್ಲಿ ತಳವೂರಿದರು. ಇದು ಮೂಲ ಲಿಂಗಾಯತ ಧರ್ಮದ ವಸಾಹತುದಾರರ ನಂತರ ಆಗಮಿಸಿದ ಕುರುಬರ ಸಂಘರ್ಷದ ಹಾಗೂ ಸಮನ್ವಯದ ಕಥೆಯಾಗಿದೆ. ಇಲ್ಲಿ ಕಥೆಗಾರನು ಇಟಲ ಬ್ರಮಲ ಎಂದು ಸಂಬೋಧಿಸಿದ್ದಾನೆ. ಇಟಲ ಎಂದತೆ ವಿಠ್ಠಲ, ಬ್ರಮಲ ಎಂದರೆ ಬೀರಪ್ಪ. ಇಬ್ಬರೂ ಅಭಿನ್ನ ಬಂಧುಗಳಾದ ನಿಲುವು ಇಲ್ಲಿ ವ್ಯಕ್ತಗೊಂಡಿದೆ. ವಿಠ್ಠಲ ಬೀರದೇವರ ಆಗಮನಕ್ಕಿಂತ ಮೊದಲು ಈ ಇಬ್ಬರೂ ದೇವರು ಒಂದೆಡೆಗೆ ಹೇಗೆ ಬಂದರು ? ಹೇಗೆ ವಿಭಿನ್ನವಾಗಿ ವಾಸಿಸಲಾರಂಭಿಸಿದರು? ಎಂಬ ಕಥೆಯು ಕುರುಬರ ದೈವದ ಕಥಾ ಭಂಡಾರದಲ್ಲಿ ಈ ರೀತಿಯಾಗಿ ಪ್ರಚಲಿತವಾಗಿದೆ.

ಬೀರದೇವನು ಐವತ್ತೆರಡು ತತ್ವಗಳನ್ನು ಒಗ್ಗೂಡಿಸಿಕೊಂಡು ಜನ್ಮ ತಾಳಿದನು. ಶಿವನ ಕೃಪೆಯಿಂದ ಗಂಗಾ ಸುರವಂತಿಗೆಗೆ ಹುಟ್ಟಿದವನು. ಈ ಬಾಲ ಬೀರದೇವನನ್ನು ಮಾಯವ್ವ ದೇವಿಯು ತನ್ನ ಸಹಚಾರಿ ದೇವಿಗಳ ಸಹಾಯದಿಂದ ಸಾಕಿದಳು. ಈ ಮಾಯವ್ವನೇ ಬೀರದೇವನ ಸೋದರಿಯಾಗಿ ಚಿಂಚಲಿಯಲ್ಲಿ ಅತ್ಯಂತ ವೈಭವಯುಕ್ತವಾಗಿ ನೆಲೆಸಿದ್ದಾಳೆ. ಪ್ರತಿವರ್ಷ ಕಾರ್ತಿಕ ಮಾಸದಲ್ಲಿ ಹಲವು ದೇವತೆಗಳ ಪಲ್ಲಕ್ಕಿಗಳು ಅವಳಿಗೆ ಭೇಟಿಯಾಗಲು ಚಿಂಚಲಿಗೆ ಬರುತ್ತವೆ. ಈ ಪಲ್ಲಕ್ಕಿಗಳಲ್ಲಿ ಹುಲಜಂತಿಯ ಮಾಳಿಂಗರಾಯನ ಪಲ್ಲಕ್ಕಿಯೂ ಇರುತ್ತದೆ. ಮಾಳಿಂಗರಾಯ ಕುರುಬರ ವಿಠ್ಠಲನ ಪರಮ ಭಕ್ತ. ಮಂಗಳವೇಢೆಯ ಹುಲಜಂತಿ ಎಂಬುದು ಇವನ ಕ್ಷೇತ್ರವಾಗಿದೆ. ಪಂಢರಪುರದ ಶಿವಪೂಜಕರಾದ ಅಂಬಿಗರು ಈ ಮಾಳಿಂಗರಾಯನನ್ನು ತಮ್ಮ ಕುಲದೇವತೆಗಳಲ್ಲಿ ಒಬ್ಬನೆಂದು ಭಾವಿಸುತ್ತಾರೆ. ಮದುವೆ ಕಾರ್ಯಗಳ ನಂತರ ಇಲ್ಲಿಗೆ ಕಾಣಿಕೆ ಒಪ್ಪಿಸಲು ಬರುತ್ತಾರೆ. ಮಾಯಕ್ಕನು ವಾತ್ಸಲ್ಯದಿಂದ ಬೆಳೆಸಿದ ಬೀರದೇವನು ಮರಗುಂಡಿ ಎಂಬ ಅಥಣಿ ಕ್ಷೇತ್ರದಲ್ಲಿ ಹುತ್ತಿನಲ್ಲಿ ನಾಗರೂಪದಲ್ಲಿದ್ದುಕೊಂಡು ಹನ್ನೆರಡು ವರ್ಷ ತಪಸ್ಸು ಆಚರಿಸಿದ. ಆ ಕಾಲದಲ್ಲಿ ಗೌಳಿಗರ ವಿಠ್ಠಲನು ಬೀರದೇವನ ಆಕರ್ಷಣೆಯಿಂದ ಅಲ್ಲಿಗೆ ಬಂದ. ಬೀರದೇವನ ಆಡುಗಳನ್ನು ಹನ್ನೆರಡು ವರುಷಗಳವರೆಗೆ ನಿಷ್ಠೆಯಿಂದ ಸಂಬಾಳಿಸಿದ. ಪ್ರತಿದಿನ ಹುತ್ತದೊಳಗಿನ ಬೀರಪ್ಪನಿಗೆ ಹಾಲು ಕುಡಿಸಿದ. ವಿಠ್ಠಲನ ಈ ಪ್ರೇಮದಿಂದ ಪ್ರಸನ್ನನಾದ ಬೀರದೇವನು ಹನ್ನೆರಡು ವರುಷಗಳ ನಂತರ ತನ್ನ ನಿಜರೂಪದಲ್ಲಿ ಪ್ರತ್ಯಕ್ಷನಾಗಿ ವಿಠ್ಠಲನನ್ನು ಪ್ರೀತಿಯಿಂದ ತಬ್ಬಿಕೊಂಡನು. ಆ ಕ್ಷಣದಲ್ಲಿ ಒಂದಾದ ವಿಠ್ಠಲ ಮತ್ತು ಬೀರದೇವರು ಕುರುಬರ ಶ್ರದ್ಧೆ ವಿಶ್ವಾಸದಿಂದ ಎಂದಿಗೂ ಬೇರ್ಪಡೆಯಾಗಲಿಲ್ಲ. ಕುರುಬರ ದೇವರಲ್ಲಿ ಬೀರಪ್ಪನು ಹೆಚ್ಚು ಜನಪ್ರಿಯನಾಗಿದ್ದು ಅವನು ಸ್ವತಂತ್ರವಾಗಿಯೂ ಹಲವಾರು

ಸ್ಥಳಗಳಲ್ಲಿ ನೆಲೆಸಿದ್ದಾನೆ. ಆದರೆ ವಿಠ್ಠಲ ಮಾತ್ರ ಬೀರಪ್ಪನ ಅಭಿನ್ನ ಸಹಚರನಾಗಿದ್ದಾನೆ. ಕುರುಬರ ಕಥಾ ಭಂಡಾರದಲ್ಲಿ ವಿಠ್ಠಲನ ಗೌಳಿತನ ಉಳಿದುಕೊಂಡಿದೆ. ಅವನ ಪತ್ನಿ ಪದೂಬಾಯಿ ಪದೂಗೌಳಣ ಎಂದೇ ಗುರುತಿಸಲ್ಪಡುತ್ತಾಳೆ. ದುರ್ಗಾ ಭಾಗವತರು ವಿವರಿಸಿದ ಕಥೆಯು ಅವರಿಗೆ ಕುರುಬರಿಂದಲೇ ಉಪಲಬ್ಧವಾಗಿದೆ. ಈ ಘಟನಾ ಸ್ಥಳವು ಪಟ್ಟಣ ಕೋಡೋಲಿಯಲ್ಲಿದೆ. ಪಂಢರಪುರದ ಹತ್ತಿರ ಮಾಳಶಿರಸದಲ್ಲಿದೆ. ವಿಠ್ಠಲನು ಪಂಢರಪುರದಲ್ಲಿ ನೆಲೆಸುವುದಕ್ಕಿಂತ ಮೊದಲು ಮಾಳಶಿರಸದಲ್ಲಿದ್ದ ಎಂದು ಈ ಕಥೆ ಹೇಳುತ್ತದೆ. ಪದ್ಮಾ ಅಥವಾ ಪದ್ಮಾಳೆ ತೀರ್ಥ ಎಲ್ಲವೂ ಪಂಢರಪುರದಲ್ಲಿ ಇವೆ. ಪದ್ಮಾವತಿಯ ದೇವಾಲಯವಿದೆ. ಆದರೆ ದುರ್ಗಾ ಭಾಗವತರು ಹೇಳಿದಿ ಕಥೆ ಮಾತ್ರ ಲುಪ್ತವಾಗಿದೆ. ಆದರೆ ಧನಗರರು ಅಂದರೆ ಕುರುಬರು ಅದನ್ನು ಜೋಪಾನವಾಗಿಟ್ಟಿದ್ದಾರೆ. ಇಷ್ಟು ಕರುಣರಮ್ಯವಾದ ಕಥೆ ಮಾತ್ರ ಅಪರೂಪವಾಗಿಯಾದರೂ ಎಲ್ಲಿಯಾದರೂ ಕೇಳಲು ಸಿಗುತ್ತದೆ.

ವಿಠ್ಠಲನ ಐತಿಹಾಸಿಕ ಹಿನ್ನೆಲೆ :

ಸೇವುಣ ಯಾದವರ ಆದಿಪುರುಷನ ಉದಯದ ಕಥೆಯು ಒಬ್ಬ ಗೋರಕ್ಷಕ ವೀರನ ವಿಕ್ರಮ ಸಾಹಸದ ಮೇಲೆ ನಿಂತಿದೆ. ನಾಶಿಕ ಮತ್ತು ಖಾನದೇಶಗಳಲ್ಲಿಯೂ ಈ ಕುಲವು ಗೌಳಿಗರದಾಗಿತ್ತು. ಸೇವುಣ ಯಾದವರನ್ನು ಈ ಭಾಗದಲ್ಲಿ ಗೌಳಿರಾಜರೆಂದೇ ಕರೆಯುತ್ತಾರೆ. ಸೇವುಣ ಯಾದವರ ರಾಜನಾದ ಐದನೆಯ ಭಿಲ್ಲಮನವರೆಗೆ ಸಿನ್ನರವೇ ಇವರ ರಾಜಧಾನಿಯಾಗಿತ್ತು. ಸಿನ್ನರದಲ್ಲಿ ಗೌಳಬೊವಾ ಎಂಬ ಹೆಸರಿನ ಒಂದು ದೈವವು ಇಂದಿಗೂ ಪೂಜಿಸಲ್ಪಡುತ್ತದೆ ಎಂದು ಸೂಚಿಸುತ್ತ, ಯು.ರಾ. ಗುಪ್ತೆ ಎಂಬ ಸಂಶೋಧಕರು ಈ ದೈವದ ಬಗ್ಗೆ ಹೀಗೆ ಹೇಳಿದ್ದಾರೆ. ಗೌಳಿಬೊವಾ ಪ್ರಸಿದ್ಧ ಮಂದಿರವು ಸಿನ್ನರದಲ್ಲಿ ಇದೆ. ಗೌಳಿರಾಜೆ ಎಂಬ ನಾಮಾಭಿಧಾನವನ್ನು ಖಾನದೇಶ ಮತ್ತು ನಾಶಿಕದ ಯಾದವರು ತಮ್ಮ ಹೆಸರಿನ ಜೊತೆಗೆ ಲಗತ್ತಿಸುತ್ತಾರೆ. ಆದ್ದರಿಂದ ಗೌಳಿಬೊವಾ ಎಂದರೆ ಯಾದವರಲ್ಲಿಯ ಸುಪ್ರಸಿದ್ಧ ರಾಜನಾಗಿದ್ದಾನೆ. ಈ ಊರಲ್ಲಿ ಇವನಿಗೆ ದೇವ ಪುರುಷನ ಮಾನ್ಯತೆ ಇತ್ತು. ಗೌಳಿಬೊವಾ ಈಗ ಒಂದು ದೊಡ್ಡ ಕಲ್ಲಿನ ಪ್ರತಿಮೆಯಾಗಿದೆ. ಇಲ್ಲಿ ಜನರು ನೂರಾರು ತೆಂಗಿನಕಾಯಿ ಒಡೆಯುತ್ತಾರೆ. ಸಿನ್ನರದಲ್ಲಿ ಐದನೆಯ ಬಿಲ್ಲಮನಷ್ಟು ಪ್ರಸಿದ್ಧನಾದ ರಾಜನು ಮತ್ತೊಬ್ಬನಾಗಲಿಲ್ಲ. ಅವನೇ ಸಾರ್ವಭೌಮನಾಗಿದ್ದ. ಇವನ ಕಾಲದಲ್ಲಿಯೇ ಯಾದವರ ರಾಜಧಾನಿಯನ್ನು ದೇವಗಿರಿಗೆ ಒಯ್ಯಲಾಯಿತು. ಹೀಗಾಗಿ ಇಲ್ಲಿಯ ಗೌಳಿಬೊವಾ ಇದು ೫ನೆಯ ಭಿಲ್ಲಮನ ಪ್ರತೀಕವಾಗಿರುವ

ಸಾಧ್ಯತೆ ಇದೆ. (ಶ್ರೀ ವಿಠಲ ಒಂದು ಮಹಾ ಸಮನ್ವಯ ಅನುವಾದ, ಚಂದ್ರಕಾಂತ ಪೋಕಳೆ, ಪು. ೨೯೮, ೨೦೦೩).

ಸಿನ್ನರದ ಶಿವಮಂದಿರಗಳ ಸಮೂಹದಲ್ಲಿ ವಿಠ್ಠಲೇಶ್ವರ ಎಂಬ ಹೆಸರಿನ ಒಂದು ಶಿವಸ್ಥಾನವಿದೆ ಎಂಬುದು ಗಮನಿಸಬೇಕಾದ ಅಂಶವಾಗಿದೆ. ಈ ವಿಠ್ಠಲೇಶ್ವರನ ಸ್ಥಾನವನ್ನು ಸೇವುಣ ಯಾದವರ ಮನೆತನದ ಅಥವಾ ಅವರ ಪ್ರಭುತ್ವದಲ್ಲಿರುವ ವಿಠ್ಠಲನೆಂಬ ಹೆಸರಿನ ಒಬ್ಬ ಪುರುಷನು ಸ್ಥಾಪಿಸಿರಬೇಕು. ಗೋರಕ್ಷಕ ವೀರಪುರುಷನಿಗೆ ಬಿಟ್ಟಿಗ, ಬಿಟ್ಟಿದೇವ, ಬಿಟ್ಟರಸ ಎಂಬ ಸಂಜ್ಞೆಗಳಿರುವುದರಿಂದ ಮತ್ತು ಈ ದೇಶೀ ಸಂಜ್ಞೆಯು ವಿಠ್ಠಲ ಎಂಬುದಾಗಿಯೂ ರೂಪವನ್ನು ಹೊಂದಿರುವುದರಿಂದ, ಈ ರಾಜಕುಲದ ಒಬ್ಬ ರಾಜ ಪುರುಷನು ತನ್ನ ಗೋರಕ್ಷಕರ ಆದಿ ಪುರುಷನಾದ ದಾಡಿಯಪ್ಪನ ಸ್ಮರಣಾರ್ಥವಾಗಿ ಈ ವಿಠ್ಠಲೇಶ್ವರನ ಸ್ಥಾನವನ್ನು ನಿರ್ಮಾಣ ಮಾಡಿರಬಹುದಾಗಿದೆ.

ಈ ಸೇವುಣ ಯಾದವರಂತೆಯೇ ಹೊಯ್ಸಳ ಯಾದವರೂ ಗೊವಳಿಗರಿಂದಲೇ ಉದಯ ಹೊಂದಿದವರು. ಈ ಹೊಯ್ಸಳ ಯಾದವರ ಆದಿಪುರುಷನ ಕುರಿತಾದ ಕಥೆಯೂ ಸಹ ಹೊಯ್ಸಳರ ಕುಲನಾಮದ ಸ್ಪಷ್ಟೀಕರಣದ ಕಥೆಯೂ ಆಗಿದೆ. (ಅದೇ ಪು. ೨೯೯).

ಒಮ್ಮೆ ಸಳನೆಂಬ ಜೈನ ಶ್ರಾವಕನು ಸೊಸೆವೂರಿನ ವಾಸಂತಿಕ ಮಂದಿರದಲ್ಲಿ ಸುದತ್ತ ಮುನಿಯೆಂಬ ಜೈನ ಆಚಾರ್ಯರ ಧರ್ಮಶ್ರವಣದಲ್ಲಿ ನಿರತರಾಗಿದ್ದರು. ಆಗ ಹುಲಿಯೊಂದು ಆಕಸ್ಮಿಕವಾಗಿ ಆಚಾರ್ಯರ ಮೇಲೆ ನುಗ್ಗಿತು. ತಕ್ಷಣ ಸುದತ್ತ ಮುನಿಯು ಸಳನನ್ನು ಉದ್ದೇಶಿಸಿ ಹೊಯ್ ಸಳಾ ಎಂದರು. ತಕ್ಷಣವೇ ಸಳನು ತನ್ನ ಕೈಯಲ್ಲಿದ್ದ ಶಸ್ತ್ರದಿಂದ ಹುಲಿಯನ್ನು ಇರಿದು ಕೊಂದನು. ಈ ಪ್ರಸಂಗದಿಂದ, ಈ ಉದ್ಗಾರದಿಂದ ಅವನ ವಂಶವು ಹೊಯ್ಸಳ ವಂಶವೆಂದು ಪ್ರಸಿದ್ಧವಾಯಿತು. ಸಳನು ಶಸ್ತ್ರದಿಂದ ಹುಲಿಯನ್ನು ಕೊಂದ ದೃಶ್ಯವೇ ಆ ರಾಜ ಕುಲದ ಲಾಂಛನವಾಯಿತು. ಇದೇ ಕುಲದ ಬಿಟ್ಟಿದೇವ ಎಂಬ ರಾಜನು ರಾಮಾನುಜರ ಪ್ರಭಾವದಿಂದ ಜೈನ ಧರ್ಮವನ್ನು ತೊರೆದು ವೈಷ್ಣವ ಧರ್ಮವನ್ನು ಸ್ವೀಕರಿಸಿದ. ನಂತರ ವಿಷ್ಣುವರ್ಧನನೆಂಬ ನಾಮಧಾರಣೆ ಮಾಡಿದ. ಈ ಹೊಯ್ಸಳ ವಿಷ್ಣುವರ್ಧನನಿಗಿಂತ ಮೊದಲು ಪೂರ್ವ ಚಾಲುಕ್ಯ ಮನೆತನದಲ್ಲಿ ಇಬ್ಬರು ಬಿಟ್ಟರಸ, ಬಿಟ್ಟಿಗ ಎಂಬ ಹೆಸರಿನವರು ವಿಷ್ಣುವರ್ಧನ ಎಂಬ ಹೆಸರನ್ನು ಧಾರಣೆ ಮಾಡಿದ ಕಥೆಗಳೂ ಇತಿಹಾಸದಲ್ಲಿ ದಾಖಲೆಯಾಗಿವೆ. ಬಿಟ್ಟಿಗ, ಬಿಟ್ಟರಸ ಇವು ಗೋವಳಿಗರಲ್ಲಿ ಜನಪ್ರಿಯ ಹೆಸರಾಗಿವೆ. ಈ ಹೆಸರಿನ ಭಿನ್ನ ರೂಪಗಳೆಲ್ಲವೂ ಒಂದೇ ದೇವರ ಶ್ರದ್ಧೆಯಿಂದ ಬಂದವುಗಳಾಗಿವೆ. ಆ ದೇವನು ವಿಟ್ಟ, ಬಿಟ್ಟ, ವಿಠ್ಠಲನೇ ಆಗಿದ್ದಾನೆ. ಪೂರ್ವ

ಚಾಲುಕ್ಯ ಮನೆತನದ ಇಬ್ಬರು ವಿಷ್ಣುವರ್ಧನರು ಕ್ರಿಶ. ೭-೯ನೆಯ ಶತಮಾನದವರು. ಬಿಟ್ಟರಸ, ಬಿಟ್ಟ ಎಂಬ ದೇಸಿ ಹೆಸರಿನ ಸಂಸ್ಕೃತೀಕರಣ ಮಾಡುವ ಪ್ರವೃತ್ತಿಯು ಕ್ರಿಶ. ೭ನೆಯ ಶತಮಾನದಿಂದಲೇ ಇದೆ.

ಪೂರ್ವಚಾಲುಕ್ಯರ ರಾಜಕಕ್ಷೆಯಲ್ಲಿದ್ದ ಆಂಧ್ರದ ಭಟ್ಟಿಪ್ರೊಲು ಎಂಬಲ್ಲಿ ವಿಠಲೇಶ್ವರನ ದೇವಸ್ಥಾನವಿದೆ. ಈ ದೇವಾಲಯದ ಹೆಸರು ವಿಠ್ಠಲೇಶ್ವರ ಎಂದಿದ್ದರೂ ಅದು ಶಿವನ ದೇವಾಲಯವಾಗಿದೆ. ಈ ದೇವಸ್ಥಾನದ ಸ್ಥಾಪನೆಯನ್ನು ಈ ಮನೆತನದ ಮೊದಲನೆಯ ಅಥವಾ ಐದನೆಯ ವಿಷ್ಣುವರ್ಧನನು ಮಾಡಿರಬೇಕು. ಇದನ್ನು ಸ್ಥಾಪಿಸಿದವನ ಹೆಸರು ವಿಠ್ಠಲ, ಬಿಟ್ಟರಸನಾಗಿದ್ದುದರಿಂದ, ಈ ದೇವಾಲಯಕ್ಕೆ ವಿಠ್ಠಲೇಶ್ವರನೆಂಬ ಸ್ಥಾಪಕನ ಹೆಸರು ನೀಡಿರಬೇಕು. ವಿಠ್ಠಲನೆಂಬ ಈಶ್ವರನು ಸ್ಥಾಪಿಸಿದ ದೇವರು ವಿಠ್ಠಲೇಶ್ವರನೆಂದಾದ. ಇಲ್ಲಿ ವಿಠ್ಠಲನೆಂಬ ದೇವತೆಯ ಸಂಬಂಧವು ಸ್ಥಾಪಕನ ಹೆಸರಿನೊಂದಿಗಿದೆ. ಆದರೆ ಸ್ಥಾಪಿಸಿದ ಶಿವನೊಂದಿಗಿಲ್ಲ. ಭಟ್ಟಿಪ್ರೋಲುವಿನ ವಿಠ್ಠಲೇಶ್ವರನೆಂಬ ಹೆಸರು ಸ್ಥಾಪಕನ ಜನ್ಮನಾಮದಿಂದ ಸೂಚಿತವಾಗಿರುವ ವಿಠ್ಠಲನ ಬಗೆಗಿನ ಶ್ರದ್ಧೆಯ ಸಂಕೇತದ ಪುರಾವೆಯಾಗಿದೆ. ಈ ಸಂಕೇತದಿಂದ ವಿಠ್ಠಲನೆಂಬ ಹೆಸರಿನ ಮತ್ತು ಪರ್ಯಾಯವಾಗಿ ಲೋಕಧರ್ಮದ ಕ್ಷೇತ್ರದಲ್ಲಿ ಹೆಸರಾದ ವಿಠ್ಠಲ ದೇವತೆಯ ಪ್ರಾಚೀನತೆಯು ೭ನೆಯ ಶತಮಾನದಷ್ಟು ಹಿಂದೆ ಸರಿಯುತ್ತದೆ. ದೇವಗಿರಿಯ ಯಾದವರಿಗೆ, ದ್ವಾರಸಮುದ್ರದ ಹೊಯ್ಸಳ ಯಾದವರಿಗೆ ಪಂಢರಪುರದ ವಿಠ್ಠಲನು ಪ್ರಿಯನಾಗಿದ್ದನೆಂಬುದು ಪಂಢರಪುರದ ೧೧೫೫ರ ಶಿಲಾಲೇಖದಿಂದಲೂ ತಿಳಿದು ಬರುತ್ತದೆ. ವಿಠ್ಠಲನ ಮತ್ತು ಯಾದವರ ಸಂಬಂಧವು ಈ ಐತಿಹಾಸಿಕ ದಾಖಲೆಗಳಿಂದ ತಿಳಿದು ಬರುತ್ತದೆ.

ದಿಂಡಿ :

ದಿಂಡಿ ಈ ಶಬ್ದವು ಅರ್ಥವು ಪತಾಕಾ ಎಂದು ಹೇಳಲಾಗಿದೆ. ವಾರಕರಿಗಳ ಹೆಗಲ ಮೇಲೆ ಕೇಸರಿ ಧ್ವಜ ಇರುವುದರಿಂದ, ವಾರಕರಿ ಸಮುದಾಯಕ್ಕೆ ಈ ಹೆಸರು ದೊರಕಿದೆ. ಆದರೆ ವೀಣಾವಾದಕರ ಹೆಗಲಿನ ಮೇಲೆ ಇರುವ ವೀಣೆಯು ದಿಂಡಿ ಎಂಬ ವಾದ್ಯ ಎಂಬುದಾರಿಯೂ ಸಂಬೋಧಿಸಲಾಗುತ್ತದೆ. “ವೀಣೆ ಹಿಡಿದುಕೊಂಡು ನಡೆಯುವವರ ಜೊತೆಗೆ ಮಾರ್ಗದಲ್ಲಿ ಸಂಕೀರ್ತನ ಮಾಡುತ್ತ ಹೋಗುವುದೆಂದರೆ ದಿಂಡಿ. ಎಂದು ಸೋನೋಪಂತ ದಾಂದೇಕರರು ಹೇಳಿದ್ದಾರೆ.” (ವಾರಿ, ಸ್ವರೂಪ ಅಣಿ ಪರಂಪರಾ, ರಾಮಚಂದ್ರ ದೇಖಣೆ, ಪು.೨೧, ೧೯೯೨) ತುಕಾರಾಮನ ಮನೆತನದಲ್ಲಿ ವಾರಿ ಪರಂಪರೆಯು ತುಕಾರಾಮನಿಗಿಂತ ಎಂಟು ತಲೆಮಾರು ಮುಂಚಿನಿಂದ ನಡೆದುಕೊಂಡು ಬಂದಿತ್ತು. ಅವರ ಮನೆತನದ ಮೂಲಪುರುಷ ವಿಶ್ವಂಭರರು ಪ್ರತಿ

೧೫ ದಿನಕ್ಕೊಮ್ಮೆ ಪಂಢರಪುರಕ್ಕೆ ಹೋಗುತ್ತಿದ್ದರು. ಇದು ತುಕಾರಾಮನ ತಂದೆ ಬೋಲ್ಹೋಬಾನವರೆಗೆ ಚಾಲ್ತಿಯಲ್ಲಿತ್ತು. ಬೋಲ್ಹೋಬಾ ನಲವತ್ತು ವರ್ಷ ಪಂಢರಿಯ ವಾರಿ ಮಾಡಿರುವುದಾಗಿ ಮಹಿಪತಿದಾಸರು ಬಣ್ಣಿಸಿದ್ದಾರೆ. ಬೋಲ್ಹೋಬಾನ ನಂತರ ತುಕಾರಾಮ ಪಂಢರಿಯ ವಾರಿ ಮಾಡತೊಡಗಿದರು. ತುಕಾರಾಮನ ದಿಂಡಿಯಲ್ಲಿ ೧೫೦೦ ಜನ ತಾಳದವರಿದ್ದರು. ತುಕಾರಾಮರು ದೇಹೂದಿಂದ ಆಳಂದಿಗೆ ದಿಂಡಿ ಒಯ್ಯುತ್ತಿದ್ದರು, ಅವರ ಮರಣದ ನಂತರ ತುಕಾರಾಮನ ಮಗ ನಾರಾಯಣಬಾಬಾ ಅವರು ಜ್ಞಾನೇಶ್ವರ ಮತ್ತು ತುಕಾರಾಮರ ಪಾದುಕೆಗಳನ್ನು ಒಂದೇ ಪಾಲಕಿಯಲ್ಲಿಟ್ಟುಕೊಂಡು ಜ್ಞಾನೋಬಾ ತುಕಾರಾಮ ಎಂದು ಭಜಿಸುತ್ತ, ಆಷಾಡ ಏಕಾದಶಿಗೆ ಪಂಢರಪುರಕ್ಕೆ ಹೋಗುವ ಪರಂಪರೆಯನ್ನು ಪ್ರಾರಂಭಿಸಿದರು.

ವಾರಿಯ ಪ್ರವಾಸ :

ಪಂಢರಪುರ ದೇವರ ವಾರಿ ಮತ್ತು ಆಳಂದಿಯ ಸಂತರ ವಾರಿ ಇವೆರಡೂ ವಾರಿಗಳು ವಾರಿಕರಿಯರ ದೃಷ್ಟಿಯಲ್ಲಿ ಅತಿ ಮಹತ್ವದ್ದಾಗಿವೆ. ಪಂಢರಿಯ ಪ್ರಮುಖ ವಾರಿಗಳೆಂದರೆ ಆಷಾಡ, ಕಾರ್ತಿಕ, ಮಾಘ ಮತ್ತು ಚೈತ್ರ ತಿಂಗಳಲ್ಲಾಗುವ ವಾರಿಗಳು, ಆಷಾಡದ ವಾರಿಯಲ್ಲಿ ಸುಮಾರು ಐದು ಲಕ್ಷ, ಕಾರ್ತಿಕ ವಾರಿಯಲ್ಲಿ ಸುಮಾರು ಮೂರು ಲಕ್ಷ, ಮಾಘ ಮತ್ತು ಚೈತ್ರ ವಾರಿಗಳಲ್ಲಿ ಸುಮಾರು ಲಕ್ಷಗಟ್ಟಲೆ ವಾರಿಕರಿ ಭಕ್ತ ಜನರು ಇಲ್ಲಿ ಸೇರುತ್ತಾರೆ.

ಜನಾಬಾಯಿಯು ತನ್ನ ಅಭಂಗದಲ್ಲಿ ವಾರಿಕರಿ ಸಂಪ್ರದಾಯದ ಬಗ್ಗೆ ಹೀಗೆ ಹೇಳುತ್ತಾಳೆ.

"ಜ್ಞಾನದೇವೆ ರಚಿಲಾ ಪಾಯಾ, ಉಭಾರಿಲೆ ದೇವಾಲಯಾ।
ನಾಮಾ ತಯಾಚಾ ಕಿಂಕರ, ತೇಣೆ ಕೇಲಾ ಹಾ ವಿಸ್ತಾರ ।" (ಅದೇ ಪು. ೨೨)

ಜ್ಞಾನದೇವನು ವಾರಿಕರಿ ಸಂಪ್ರದಾಯದ ತತ್ವದ ಬುನಾದಿ ಹಾಕಿದ, ನಾಮದೇವನು ಅವನ ವಿಚಾರವನ್ನು ವಿಸ್ತಾರಗೊಳಿಸಿದ. ಆದರೆ ಏಕನಾಥನು ಈ ಭಾಗವತ ಧರ್ಮ ಮಂದಿರಕ್ಕೆ ಭದ್ರವಾದ ಖಂಬದ ಆಧಾರ ಕೊಟ್ಟ. ತುಕಾರಾಮನು ಈ ಮಂದಿರದ ಮೇಲೆ ಕಳಸ ನಿಲ್ಲಿಸಿದ. ಪಂಢರಿಯ ವಾರಿಯಲ್ಲಿ ಆಷಾಡದ ವಾರಿಯು ಹೆಚ್ಚು ಪ್ರಾಮುಖ್ಯತೆ ಪಡೆದಿದೆ. ಜ್ಞಾನೇಶ್ವರ ಮತ್ತು ತುಕಾರಾಮರ ಸಂಯುಕ್ತ ಪಾಲಕಿಯ ಉತ್ಸವವು ೧೬೮೦ ರಲ್ಲಿ ಪ್ರಾರಂಭವಾಯಿತು. ನಂತರ ಕ್ರಿ.ಶ. ೧೮೩೫ ರ ತನಕ ಅವ್ಯಾಯತವಾಗಿ ನಡೆದು ಬಂದಿತ್ತು. ೧೮೩೫ರಲ್ಲಿ ದೇಹೂ ಸಂಸ್ಥಾನದಲ್ಲಿ ತುಕೋಬನ ವಂಶಜರಲ್ಲಿ ಪಾಲಕಿಯ ಒಡೆತನದ ಹಕ್ಕಿಗಾಗಿ ಜಗಳ

ಆರಂಭವಾಯಿತು. ವೈಮನಸ್ಸಿನಿಂದ ಉತ್ಸವ ನಡೆಸಕೂಡದೆಂದು ನಿಶ್ಚಯಿಸಿ ಹೈಬತಬಾಬಾ ಅರಫಳಕರ ಅವರು ಆಳಂದಿಯಿಂದ ಸ್ವತಂತ್ರವಾಗಿ ಪಾಲಕಿ ಹೊರಡಿಸಲು ಪ್ರಾರಂಭಿಸಿದರು.

ಹೈಬತಬಾಬಾ ಗ್ವಾಲ್ಹೇರದ ಶಿಂದೆ ರಾಜರ ಸರದಾರನಾಗಿದ್ದ. ಒಂದು ಸಲ ಸಾಕಷ್ಟು ಹಣವನ್ನು ತೆಗೆದುಕೊಂಡು ತಮ್ಮ ಊರಿಗೆ ಹೋಗುತ್ತಿದ್ದಾಗ ದಾರಿಯಲ್ಲಿ ದರೋಡೆಕೋರರು ಅವನಿಗೆ ಅಡ್ಡಗಟ್ಟಿದರು. ಅವರ ಸಂಪತ್ತನ್ನೆಲ್ಲ ಲೂಟಿ ಮಾಡಿ, ಹೈಬತಬಾಬಾನನ್ನು ಹಿಡಿದು ನೆಲಮನೆಯಲ್ಲಿ ಕೂಡಿ ಹಾಕಿದರು. ಅವರ ಶಿರಚ್ಛೇದ ಮಾಡುವ ವಿಚಾರ ದರೋಡೆಕೋರರದಾಗಿತ್ತು. ಇಂತಹ ಕಷ್ಟದ ಸ್ಥಿತಿಯಲ್ಲಿ ಹೈಬತಬಾಬಾ ಜ್ಞಾನೇಶ್ವರರ ಸ್ಮರಣೆ ಮಾಡತೊಡಗಿದರು. ಇದೇ ವೇಳೆಯಲ್ಲಿ ಮಕ್ಕಳಿಗಾಗಿ ಹಂಬಲಿಸುತ್ತಿದ್ದ ದರೋಡೆಕೋರನ ಗರ್ಭವತಿ ಪತ್ನಿಗೆ ಪುತ್ರರತ್ನ ಪ್ರಾಪ್ತಿಯಾಯಿತು. ಹೈಬತಬಾಬಾನ ಕಾಲ್ಗುಣದಿಂದ ತನಗೆ ಪುತ್ರ ಜನನವಾಯಿತೆಂದು ಶ್ರದ್ಧೆ ಆಕೆಯಲ್ಲಿ ನಿರ್ಮಾಣವಾಯಿತು. ಅವಳು ಬಂಧಿಸಿದ ಹೈಬತಬಾಬಾನನ್ನು ಬಿಡುಗಡೆಗೊಳಿಸಲು ತನ್ನ ಪತಿಗೆ ಹೇಳಿದಳು. ಹೈಬತಬಾಬಾ ಬಿಡುಗಡೆ ಹೊಂದಿದರು. ಜ್ಞಾನೇಶ್ವರರ ಕೃಪೆಯಿಂದಲೇ ತಾವು ಮೃತ್ಯುವಿನ ದವಡೆಯಿಂದ ಪಾರಾಗಿ ಬಂದಿರುವುದಾಗಿ ತಿಳಿದರು. ಹೈಬತಬಾಬಾ ತಮ್ಮ ಜೀವಿತ ಕಾಲವನ್ನು ಜ್ಞಾನೇಶ್ವರರ ಸೇವೆಗಾಗಿ ಆಳಂದಿಯಲ್ಲಿಯೇ ಕಳೆದರು. ವಾರಕರಿಯರ ಭಜನೆಗಳಲ್ಲಿ ರೂಪ ಪಾಹತಾ ಲೋಚನಿ ಮತ್ತು ಕೊನೆಯಲ್ಲಿ ಜ್ಞಾನೇಶ್ವರ ತುಕಾರಾಮರ ಆರತಿ ಹಾಡುವ ನಿಯಮವನ್ನು ಹೈಬತಬಾಬಾ ಅವರೇ ಪ್ರಾರಂಭಿಸಿದರು. ಹೈಬತಬಾಬಾರಿಂದ ಜ್ಞಾನೇಶ್ವರರ ಪಾದುಕೆಗಳನ್ನು ಪಾಲಕಿಯಲ್ಲಿ ಒಯ್ಯುವ ವ್ಯವಸ್ಥೆ ಪ್ರಾರಂಭವಾಯಿತು. ಅವರು ಸೈನ್ಯಾಧಿಕಾರಿಯಾಗಿದ್ದರಿಂದ ವಾರಿಗೂ ಸೈನ್ಯದ ಶಿಸ್ತು ಲಭಿಸಿತು. ಇವರ ನಂತರದಲ್ಲಿ ಮಹಾರಾಷ್ಟ್ರದ ಬೇರೆ ಬೇರೆ ಭಾಗಗಳಿಂದ ಅಲ್ಲಿಯ ಸಂತರ ಪಾದುಕೆಗಳನ್ನು ಪಾಲಕಿಯಲ್ಲಿಟ್ಟುಕೊಂಡು ಅನೇಕ ಭಜನಾ ಮಂಡಲಗಳು ಬೇರೆ ಬೇರೆ ಮಾರ್ಗದಿಂದ ಪಂಢರಪುರಕ್ಕೆ ಬರತೊಡಗಿದರು.

ಪ್ರತಿ ವರುಷ ಜ್ಯೇಷ್ಠ ವದ್ಯ ಅಷ್ಟಮಿಗೆ ಜ್ಞಾನೇಶ್ವರರ ಪಾಲಕಿಯು ಆಳಂದಿಯಿಂದ ಮತ್ತು ಸಪ್ತಮಿಗೆ ತುಕಾರಾಮರ ಪಾಲಕಿಯು ದೇಹೂದಿಂದ ಪ್ರಸ್ಥಾನಗೊಳ್ಳುತ್ತವೆ. ನಿಶ್ಚಿತ ಪಡಿಸಿದ ಶುಭ ಮುಹೂರ್ತದಲ್ಲಿ ಹೊರಟು ರಾತ್ರಿ ಗಾಂಧಿವಾಡೆಯಲ್ಲಿ ವಸತಿಯಿದ್ದು ನವಮಿ ಆಳಂದಿಗೆ ಹೊರಡುತ್ತದೆ. ನಂತರ ವಿರವಾಡಾ, ಹೋಳಕರ ಪೂಲ, ಪುಣೆ–ಮುಂಬಯಿ ಮಾರ್ಗ, ಮತ್ತು ವಾಕಡೇವಾಡಿ ಮಾರ್ಗದಿಂದ ಪುಣೆಗೆ ಆಗಮಿಸುತ್ತದೆ. ಜ್ಞಾನೇಶ್ವರರ ಪಾಲಕಿಯು ಭವಾನಿ ಪೇಟೆ, ಮತ್ತು ತುಕಾರಾಮರ ಪಾಲಕಿಯು ನಾನಾಪೇಠದ ದೇವಾಲಯದಲ್ಲಿ ವಸತಿಯಾಗುತ್ತದೆ. ಇಲ್ಲಿಯ

ವ್ಯಾಪಾರಸ್ಥರಿಂದ ಭೋಜನದ ವ್ಯವಸ್ಥೆಯಾಗುತ್ತದೆ. ನಂತರ ಏಕಾದಶಿಯ ದಿನ ಬೆಳಿಗ್ಗೆ ಎರಡೂ ಪಾಲಕಿಗಳು ಮುಂದೆ ಪ್ರಯಾಣ ಬೆಳೆಸುತ್ತವೆ. ಹಡಪಸರದವರೆಗೆ ಒಂದರ ಹಿಂದೆ ಒಂದು ಹೊರಟು ನಂತರ ಜ್ಞಾನೇಶ್ವರ ಪಾಲಕಿಯು ಸಾಸವಡ, ಬೇಜೂರಿ, ಫಲಟಣ, ಮಾಳಶಿರಸ, ವಾಖರಿ ಮಾರ್ಗವಾಗಿ ಪಂಢರಪುರ ಸೇರುತ್ತದೆ. ತುಕಾರಾಮರ ಪಾಲಕಿಯು ಹಡಪಸರ, ಲೋಣಿ, ಕಾಳಭೋರ, ವರವಂಡ, ಬಾರಾಮತಿ, ಇಂದಾಪುರ, ಅಕಲೂಜ, ವಾಖರಿ ಮಾರ್ಗವಾಗಿ ಪಂಢರಪುರಕ್ಕೆ ಹೋಗುತ್ತದೆ.

ಪ್ರತಿ ೪೦೫ ಕಿ.ಮೀಟರ್ ಅಂತರದಲ್ಲಿ ವಿಶ್ರಾಂತಿ ಪಡೆಯುತ್ತ ರಾತ್ರಿ ನಿಗದಿ ಪಡಿಸಿದ ಸ್ಥಳದಲ್ಲಿ ವಷತಿ ಇರುತ್ತದೆ. ಪ್ರತಿಯೊಂದು ದಿಂಡಿಗೆ ಕೊಟ್ಟಿರುವ ಕ್ರಮಾಂಕದ ಪ್ರಕಾರ ದಿಂಡಿಗಳು ಸಾಗುತ್ತವೆ. ಪ್ರತ್ಯೇಕ ದಿಂಡಿಯ ಅಗ್ರಭಾಗದಲ್ಲಿ ಕೇಸರಿ ಪತಾಕೆ ಇರುತ್ತದೆ. ಮಧ್ಯಭಾಗದಲ್ಲಿ ಮೃದಂಗ ವಾದಕರು, ಕೊನೆಯಲ್ಲಿ ವೀಣಾವಾದಕರಿರುತ್ತಾರೆ. ಅವರ ಹಿಂದೆ ಮಹಿಳಾ ವಾರಿಕರಿಗಳು ಇದ್ದು ಕೆಲವರ ತಲೆಯ ಮೇಲೆ ತುಳಸಿ ವೃಂದಾವನ, ಕೆಲವರ ತಲೆಯ ಮೇಲೆ ನೀರಿನ ಹಂಡೆ ಇರುತ್ತವೆ. ಮಾರ್ಗದಲ್ಲಿ ನೀರಡಿಕೆಯಾದರೆ ಕುಡಿಯುವ ಸಲುವಾಗಿ ನೀರಿನ ಹಂಡೆ ಒಯ್ಯುತ್ತಾರೆ. ಹಾರ ಮಾರುವವರು, ಚಹ ಮಾರುವವರು, ಗಂಧ ಮಾರುವವರು, ಎಲ್ಲರೂ ಜೊತೆಯಲ್ಲಿರುತ್ತಾರೆ.

"ರೂಪ ಪಾಹತಾ ಲೋಚನಿ, ಸುಖ ಝಾಲೆ ಓ ಸಾಜಣಿ ।
ತೋ ಹಾ ವಿಠ್ಠಲ ಬರವಾ, ತೋ ಹಾ ಮಾಧವ ಬರವಾ ।" (ಅದೇ ಪು. ೨೫)

ಈ ಅಭಂಗದಿಂದ ಅವರ ಸಂಕೀರ್ತನೆ ಪ್ರಾರಂಭವಾಗುತ್ತದೆ. ಪ್ರಯಾಣಿಸುವಾಗ ಊರು ಬರುವ ಮೊದಲೇ ದೂರದಿಂದಲೇ ತಯಾರಾಧ ಬಿಡಾರವು ಕಾಣುತ್ತದೆ. ಅಲ್ಲಿ ಸಂತರಿಂದ ಕೀರ್ತನೆಯ ನಾದ ಮೊಳಗುತ್ತದೆ. ಪತಾಕೆಯವರು, ತಾಳದವರು, ನೇಕಾರರು ಎಲ್ಲರೂ ಜ್ಞಾನೋಬಾ ತುಕಾರಾಮನ ಭಜನೆ ಮಾಡುತ್ತಾರೆ. ಮಾವುಲಿಯ ಪಾಲಕಿ ಹೊತ್ತವರು ಒಳಗೆ ಪ್ರವೇಶಿಸಿದ ಮೇಲೆ ವಾರಿಕರಿಗಳು ಮೈಮರೆತು ನರ್ತಿಸುತ್ತಾರೆ. ಕಾವಲುಗಾರನು ಬೆಳ್ಳಿಯ ಛಡಿ ಮೇಲೆ ಎತ್ತಿದ ಕೂಡಲೇ ಎಲ್ಲ ಧ್ವನಿಗಳು ನಿಃಶಬ್ದವಾಗುತ್ತವೆ. ಕಾವಲುಗಾರರ ದಂಡಿಯ ತುದಿಯನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದ ವಾರಿಕರಿಗಳನ್ನು ಗಮನಿಸಿದರೆ ಅವರು ಎಷ್ಟು ಶಿಸ್ತುಬದ್ಧವಾಗಿ ಸಮಾರಂಭದಲ್ಲಿ ಭಾಗವಹಿಸುತ್ತಾರೆ ಎಂಬ ಕಲ್ಪನೆ ಬರುತ್ತದೆ. ಸಂತ ಏಕನಾಥರು ಒಂದು ಭಾರುಡದಲ್ಲಿ ಹೀಗೆ ಬರೆಯುತ್ತಾರೆ :

"ಆಜ ಸಖಿ ಮ್ಯಾ ನವಲ ದೇಖಿಲೆ । ವಳಚಣಿಚೆ ಪಾಣಿ ಆಢ್ಯಾಲ ಗೆಲೆ ।" (ಅದೇ ಪು. ೨೬)

ನೀರಿನ ಪ್ರವಾಹ ಯಾವಾಗಲೂ ಮೇಲಿನಿಂದ ಕೆಳಗೆ ಹರಿಯುತ್ತದೆ. ಆದರೆ ನಾಥರ ಮನೆಯದಕ್ಕೆ ವಿರುದ್ಧದ ಗತಿಯಿದೆ. ಸಾಸವಡದ ಘಾಟದ ಮೇಲಿನ ತುದಿಯಲ್ಲಿ ನಿಂತು ನೋಡಿದರೆ ಜನಪ್ರವಾಹವು ಅವಿವೇಕದಿಂದ ವಿವೇಕದೆಡೆಗೆ, ಅಜ್ಞಾನದಿಂದ ಜ್ಞಾನದೆಡೆಗೆ ಕತ್ತಲೆಯಿಂದ ಪ್ರಕಾಶದೆಡೆಗೆ, ಸೂಕ್ಷ್ಮತೆಯಿಂದ ವ್ಯಾಪಕತ್ವದೆಡೆಗೆ, ದ್ವೈತದಿಂದ ಅದ್ವೈತದೆಡೆಗೆ ಕೆಳಗಿನಿಂದ ಮೇಲೆ ಸರಿದಂತೆ ವ್ಯಕ್ತವಾಗುತ್ತದೆ. ಸಾಸವಡದಲ್ಲಿ ಏಕಾದಶಿ ಮತ್ತು ದ್ವಾದಶಿಯಂದು ವಾಸ್ತವ್ಯವಿರುತ್ತದೆ. ನಂತರ ಜೇಜೂರಿಗೆ ಮುಂದುವರೆಯುತ್ತದೆ. ಜೇಜೂರಿಯ ಖಂಡೋಬ ಮಹಾರಾಷ್ಟ್ರದ ಲೋಕದೇವ. ವೈಷ್ಣವ ದೇವತೆಯ ಆರ್ತತೆಯಿಂದ ಹೊರಟ ವೈಷ್ಣವ ಮೇಳವು ಲೋಕದೇವದ ಸ್ಥಾನದಲ್ಲಿ ಆಸ್ಥೆಯಿಂದ ನೆಲೆಸುತ್ತದೆ. ಪಾಂಡುರಂಗನಿಗೆ ಬುಕ್ಕ ಪ್ರಿಯವಾದರೆ, ಖಂಡೋಬನು ಭಂಡಾರಪ್ರಿಯನಾಗಿದ್ದಾನೆ. ಎಲ್ಲರ ಗಲ್ಲಕ್ಕೂ ಬುಕ್ಕಾ ಹಚ್ಚಿ ಭಂಡಾರವನ್ನು ಹಾರಿಸುತ್ತಾರೆ. ಜೇಜೂರಿನಿಂದ ವಾಲ್ಹೆ, ನಂತರ ಲೋಣಂದದಲ್ಲಿ 'ರಿಂಗಣ' ವಾಗುತ್ತದೆ.

ರಿಂಗಣ :

ರಿಂಗಣ ಎಂದರೆ ಗೋಲಾಕಾರದ ಆಟ. ರಿಂಗಣದಲ್ಲಿ ಯಾವ ಬಿಂದುವಿನಿಂದ ವರ್ತುಳ ಪ್ರಾರಂಭಿಸುತ್ತದೆಯೋ ಪುನಃ ಅದೇ ಬಿಂದುವಿನಲ್ಲಿ ಬಂದು ಕೂಡಿದ ನಂತರ ಅದು ಪರಪೂರ್ಣಯೆನಿಸುತ್ತದೆ. ಹಾಗೆಯೇ ಜೀವನದಲ್ಲಿ ಯಾವುದೇ ಕ್ಷಣದಿಂದ ನಾವು ಪಾರಮಾರ್ಥಿಕ ರಿಂಗಣದಲ್ಲಿ ಪ್ರವೇಶಿಸಬಹುದಾಗಿದೆ. ಅಂದರೆ ಅಂತಃಕರಣ ಶುದ್ಧಿಯ ಮನಸ್ಸಿನ ರಿಂಗಣ ಆರಂಭವಾಗುತ್ತದೆ. ಆತ್ಮ ಸ್ವರೂಪದಿಂದ ಹೊರಟು ವ್ಯಾಪಕವಾದ ಶಿವಸ್ವರೂಪಕ್ಕೆ ಸುತ್ತು ಹಾಕುತ್ತಾ ಪುನಃ ಆತ್ಮ ಸ್ವರೂಪದಲ್ಲಿ ನೆಲೆಸುತ್ತದೆಯೋ ಆಗ ವರ್ತುಳ ಪೂರ್ಣವಾಗತ್ತದೆ. ವಿಶ್ವದ ನಿರ್ಮಾಣ ಇದು ಭಗವಂತನ ಆಟವಾಗಿದೆ. ಆದರೆ ಜೀವನದಲ್ಲಿ ಜೀವಿಸುವುದು ಇದು ಜೀವದ ಆಟವಾಗಿದೆ. ನಾವು ಹಾಕಿಕೊಂಡ ಮರ್ಯಾದೆಯಲ್ಲಿಯೇ ಅಂದರೆ, ಧರ್ಮ, ನೀತಿ, ತತ್ವ, ಆಚಾರ ಇವುಗಳ ಪರಿಧಿಯಲ್ಲಿ ಜೀವನದ ಆಟವನ್ನು ಹೂಡಿ ಆನಂದದ ರಿಂಗಣವನ್ನು ಮಾಡುವುದಿರುತ್ತದೆ.

ಜ್ಞಾನೇಶ್ವರರ ಪಾಲಕಿಯ ಉತ್ಸವದಲ್ಲಿ ಚಾಂದೋಬಾಚಾ ಲಿಂಬ ಇಲ್ಲಿ ಉಭೆ ರಿಂಗ' ಮತ್ತು ಸದಾಶಿವನಗರ, ವಿಹಿರ ಇಲ್ಲಿ ಗೋಲರಿಂಗಣಗಳು ಆಗುತ್ತವೆ. ವಾಖರಿಯ ರಿಂಗಣ ಬಹಳ ಪ್ರಸಿದ್ಧವಾಗಿದೆ. ತುಕಾರಾಮರ ಪಾಲಕಿಯ ಉತ್ಸವದಲ್ಲಿ ಬೇಲಖಡಿ, ಇಂದಾಪುರ ಮತ್ತು ವಾಖರಿಯಲ್ಲಿ ಗೋಲರಿಂಗಣಗಳು ಆಗುತ್ತವೆ. ಗೋಲರಿಂಗಣದಲ್ಲಿ ವಾರಕರಿಗಳು, ತಾಳ ಹಾಕುವವರು, ಮೃದಂಗ ವಾದಕರು, ವೀಣಾವಾದಕರು, ಪತಾಕೆ ಹಿಡಿದವರು ಗೋಲಾಕಾರವಾಗಿ

ನಿಲ್ಲುತ್ತಾರೆ. ನಮಸಂಕೀರ್ತನೆ ಹಾಡುತ್ತಾರೆ. ವಾರಿಕರಿಗಳು ತಾಳ ಮೃದಂಗದ ಲಯಕ್ಕನುಸಾರವಾಗಿ ನರ್ತಿಸುತ್ತಾರೆ. ಮಾವುಲಿಯ ಅಶ್ವವು ರಭಸದಿಂದ ಓಡುತ್ತ ಮೂರು ಗೋಲಾಕಾರದ ಪ್ರದಕ್ಷಣೆ ಹಾಕುತ್ತದೆ. ಈ ಅಶ್ವದ ಹಿಂದೆ ಜರಿಪಟ್ಕಾ ಜರಿಯ ವಸ್ತ್ರದ ಹೊದಿಕೆ ಹಾಕಿದ ಚೋಪದಾರನ ಅಶ್ವವು ಓಡುತ್ತದೆ. ಇದೇ ರೀತಿ 'ಉಭೆ ರಿಂಗಣ' ಗಳು ಆಗುತ್ತವೆ. ಇದರಲ್ಲಿ ರಸ್ತೆಯ ಎರಡೂ ಬದಿಗೆ ಸಮಾಂತರವಾಗಿ ವಾರಿಕರಿಗಳು ನಿಲ್ಲುತ್ತಾರೆ. ಇವರ ಮಧ್ಯೆ ಜ್ಞಾನೇಶ್ವರ ಮಹಾರಾಜರ ಅಶ್ವ ವೇಗವಾಗಿ ಓಡುತ್ತದೆ. ರಿಂಗಣವು ವಾರಿಕರಿಗಳ ಒಂದು ಮನ ರಂಜನೆಯಾಗಿದೆ. ಈ ಅಶ್ವದ ಮೇಲೆ ಜ್ಞಾನೇಶ್ವರರು ಆಸೀನರಾಗಿರುತ್ತಾರೆ ಎಂಬ ಶ್ರದ್ಧೆಯಿರುವುದರಿಂದ, ಈ ಕುದುರೆ ಪವಿತ್ರವೆಂದು ಭಾವಿಸಿರುವುದರಿಂದ ವಾರಿಕರಿಗಳು ಅದರ ದರ್ಶನ ಪಡೆಯುತ್ತಾರೆ.

ವಾಖರಿಯಲ್ಲಿ ಎಲ್ಲ ಪಾಲಕಿಗಳು ಒಟ್ಟಿಗೆ ಸೇರುತ್ತವೆ. ವಾಖರಿಯಿಂದ ಆಷಾಢ ಶುದ್ಧ ದಶಮಿಗೆ ಪಾಲಕಿಗಳು ಪಂಢರಪುರದ ಕಡೆಗೆ ಹೊರಡುತ್ತವೆ. ಮಾರ್ಗದಲ್ಲಿ ಪಾದುಕಾ ಸ್ಥಾನದಲ್ಲಿ ಶಿತೋಳೆ ಸರಕಾರದ ಪ್ರತಿನಿಧಿಯ ಕೊರಳಲ್ಲಿ ಜ್ಞಾನೇಶ್ವರರ ಪಾದುಕೆಗಳನ್ನು ಕಟ್ಟುತ್ತಾರೆ. ನಂತರ ರಾತ್ರಿ ಎಲ್ಲ ಪಾಲಕಿಗಳು ಪಂಢರಪುರಕ್ಕೆ ತಲುಪುತ್ತವೆ. ಎಲ್ಲ ದಿಂಡಿಗಳು, ಪಾಲಕಿಗಳು, ಆಷಾಢ ಶುದ್ಧ ದಶಮಿಯಿಂದ ಚತುರ್ದಶಿಯವರೆಗೆ ಅಲ್ಲಿಯೇ ಇದ್ದು ಪೌರ್ಣಿಮೆಯ ಗೋಪಾಳಪುರದ ಕಾಲಾ ಮುಗಿಸಿಕೊಂಡು ತಮ್ಮ ತಮ್ಮ ಊರಿಗೆ ಹೊರಡುತ್ತವೆ.

ವಿಠ್ಠಲನ ಪೂಜಾ ಉಪಚಾರಗಳು :

ವಿಠ್ಠಲನ ಉಪಚಾರಗಳಲ್ಲಿ ನಿತ್ಯ ಮತ್ತು ನೈಮಿತ್ತಿಕ ಎಂದು ಎರಡು ಪ್ರಕಾರಗಳಿವೆ. ನಿತ್ಯವೂ ತಪ್ಪದೇ ನಡೆಯುವ ಉಪಚಾರಗಳು ನಿತ್ಯೋಪಚಾರಗಳೆಂದು ಕರೆಯಲ್ಪಡುತ್ತವೆ. ನಿರ್ದಿಷ್ಟ ಕಾರಣಗಳಿಂದ ಮತ್ತು ನಿರ್ದಿಷ್ಟ ಕಾಲಕ್ಕೆ ಮಾಡುವ ಪೂಜೋಪಚಾರಗಳಿಗೆ ನೈಮಿತ್ತಿಕ ಉಪಚಾರವೆಂದು ಕರೆಯುತ್ತಾರೆ.

ನಿತ್ಯೋಪಚಾರಗಳು :

ವಿಠ್ಠಲನು ಮಹಾರಾಷ್ಟ್ರದ ಪ್ರಿಯ ದೈವವಾಗಿರುವುದರಿಂದ ನಿತ್ಯೋಪಚಾರವು ಬಹಳ ವಿಜೃಂಭಣೆಯಿಂದ ನಡೆಯುತ್ತವೆ. ದಿನವೂ ಪಂಚ ಪಕ್ವಾನ್ನದ ನೈವೇದ್ಯವಾಗುತ್ತದೆ. ದಿನ ನಿತ್ಯ ಆರು ಸಲ ಪೂಜೆ ಆರತಿ ನೆರವೇರುತ್ತವೆ. ನಿತ್ಯೋಪಚಾರಗಳಲ್ಲಿ ಕಾಕಡಾರತಿ, ಪಂಚಾಮೃತ, ಮಧ್ಯಾಹ್ನ ಪೂಜೆ ಅಪರಾಹ್ನ ಪೂಜೆ, ಧೂಪಾರತಿ, ಶೇಜಾರತಿ ಇವು ಸಮಾವಿಷ್ಟವಾಗಿವೆ.

ಕಾಕಡಾರತಿ :

ದೇವರನ್ನು ಎಬ್ಬಿಸುವುದು, ಅವನ ಪಾದ ತೊಳೆಯುವುದು, ಗಂಧ ಹಚ್ಚುವುದು, ಮಾಲೆ ಅರ್ಪಿಸುವುದು, ಧೂಪ–ದೀಪ–ನೈವೇದ್ಯ ಸಮರ್ಪಿಸಿ ಹತ್ತಿಯ ಬತ್ತಿಯಿಂದ ಆರತಿ ಮಾಡಿ ಮಂತ್ರ ಪುಷ್ಪ ಹೇಳುವ ವಿಧಿಯಿದೆ.

ಪಂಚಾಮೃತ :

ನಿರ್ಮಾಲ್ಯ ತೆಗೆಯುವುದು, ಪಂಚಾಮೃತ ಸ್ನಾನ, ಶುದ್ಧೋದಕ ಸ್ನಾನ, ವಸ್ತ್ರ ಪರಿಧಾನ ಇತ್ಯಾದಿ ಷೋಡಶೋಪಚಾರ ವಿಧಿಯ ಪೂಜೆಯಾಗುತ್ತದೆ.

ಮಧ್ಯಾಹ್ನ ಪೂಜೆ :

ದೇವರಿಗೆ ಮಹಾನ್ನೈವೇದ್ಯ ಅರ್ಪಣೆ. ಅಪರಾಹ್ನ ಪೂಜಾ : ದಿವಸದ ಮೂರನೆಯ ಪರಹರದಲ್ಲಿ ಅಂದರೆ ಸಾಯಂಕಾಲ ಭಗವಂತನ ಪಾದ ಪ್ರಕ್ಷಾಲನ, ಹೊರ ವಸ್ತ್ರ ಪರಿಧಾನ ಇವು ಮುಖ್ಯವಾಗಿವೆ.

ಶೇಜಾರತಿ, ಧೂಪಾರತಿ : ಇದು ಎಲ್ಲ ಕಡೆಗೆ ಪ್ರಚಲಿತವಿರುವಂತೆಯೇ ಇದೆ. ರಾತ್ರಿ ದೇವರನ್ನು ಮಲಗಿಸುವ ಮುನ್ನ ಮಾಡುವ ಆರತಿ ಮತ್ತು ಶಯನೋತ್ಸವ.

ವಿಠ್ಠಲನ ಪೂಜಾ ಸೇವೆಯನ್ನು ಏಳು ಪ್ರಕಾರದ ಸೇವಾಕರ್ತರಿಂದ ಮಾಡಿಸಲಾಗುತ್ತದೆ.

೧) ಬಡವೆ : ಇವರು ದೇವರ ಮುಖ್ಯ ಅರ್ಚಕರು, ದೇವಸ್ಥಾನದ ಬೀಗ ಇವರ ಹತ್ತಿರ ಇರುತ್ತದೆ.

೨) ಭೇಣಾರಿ : ದೇವರ ಸ್ತುತಿಪಾಠಕರು, ಆರತಿಯ ಸಮಯದಲ್ಲಿ ಮಂತ್ರ ಪಠಿಸುತ್ತಾರೆ.

೩) ಪರಿಚಾರಕ : ಪೂಜೆಗಾಗಿ ನೀರು ತರುತ್ತಾರೆ.

೪) ಹರಿದಾಸ : ೧೬ ಕಂಬದ ಮಂಟಪದಲ್ಲಿ ನಿಂತು ದೇವರೆದುರಿಗೆ ಪಂಚಪಡಿ ಹೇಳುತ್ತಾರೆ.

೫) ಡಿಂಗರೆ : ದೇವರಿಗೆ ವಸ್ತ್ರ ತೊಡಿಸಿದ ಮೇಲೆ ಕನ್ನಡಿ ತೋರಿಸುತ್ತಾರೆ. ಆರತಿಯ ವೇಳೆಯಲ್ಲಿ ಪಾಯಘಡಿ ಹಾಸುತ್ತಾರೆ.

೬) ಡಾಂಗೆ : ಇವರು ದೇವರ ಚೋಪದಾರ. ಪ್ರತಿಯೊಂದು ಪೂಜೆಯ ವೇಳೆಗೆ ಬೆಳ್ಳಿಯ ದಂಡ ಹಿಡಿದು ಕಮಾನಿನಲ್ಲಿ ನಿಲ್ಲುತ್ತಾರೆ.

೭) ದಿವಟೆ : ಆರತಿಯ ವೇಳೆಗೆ ದೀವಟಿಗೆಯನ್ನು ತೋರಿಸುತ್ತಾರೆ.

ಪ್ರತಿದಿನ ಬೆಳಿಗ್ಗೆ ನಾಲ್ಕು ಗಂಟೆಗೆ ದೇವರ ಗರ್ಭದ್ವಾರ ತೆಗೆಯುತ್ತದೆ. ಕಾಕಡಾರತಿಯಿಂದ ದೇವರನ್ನು ಎಬ್ಬಿಸುತ್ತಾರೆ. ನಿರ್ಮಾಲ್ಯ ತೆಗೆದು ಧೂಪದೀಪದ ಆರತಿ ಮಾಡಿ ವಿಠ್ಠಲನಿಗೆ ಬೆಣ್ಣೆ ಸಕ್ಕರೆಯ ನೈವೇದ್ಯ ತೋರಿಸುತ್ತಾರೆ. ನೀರಿನ ಅಭಿಷೇಕದ ನಂತರ ಹಾಲು ಮೊಸರಿನ ಅಭಿಷೇಕಗಳಾದ ಮೇಲೆ ದೇವರ ಬಾಯಿಗೆ ಬೆಣ್ಣೆಯ ಉಂಡೆ ಹಚ್ಚಿ ಆರತಿ ಮಾಡುತ್ತಾರೆ. ನಂತರ ಬೆಣ್ಣೆಯನ್ನು ತೆಗೆಯುತ್ತಾರೆ. ಹಾಲು ಸಕ್ಕರೆ, ಜೇನುತುಪ್ಪಗಳ ಅಭಿಷೇಕ ಮಾಡಿದ ನಂತರ ಶುದ್ಧೋದಕ ಹಾಕಿ ದೇವರಿಗೆ ವಸ್ತ್ರ ತೊಡಿಸುತ್ತಾರೆ. ಹಣೆಗೆ ಗಂಧ, ಮುಖಕ್ಕೆ ಸುಗಂಧ ದ್ರವ್ಯ, ಕೊರಳಿಗೆ ತುಳಸಿಯ ಹಾರ ಹಾಕಿದ ಮೇಲೆ ಡಿಂಗರೆ ದೇವರಿಗೆ ಕನ್ನಡಿ ತೋರಿಸುತ್ತಾರೆ.

ಮಧ್ಯಾಹ್ನ ಮಹಾನೈವೇದ್ಯವಿರುತ್ತದೆ. ನೈವೇದ್ಯದಲ್ಲಿ ಪಂಚಪಕ್ವಾನ್ನಗಳಿರುತ್ತವೆ. ಮಧ್ಯಾಹ್ನ ಮೂರು ಗಂಟೆಗೆ ಮತ್ತೆ ಪೂಜೆ ಇರುತ್ತದೆ. ಆಗ ಪುನಃ ವಸ್ತ್ರ ಬದಲಿಸುತ್ತಾರೆ. ಸಾಯಂಕಾಲ ೬.೩೦ಕ್ಕೆ ಧೂಪಾರತಿ, ಗಂಧ, ಧೂಪ, ದೀಪಗಳ ಆರತಿ ಮಾಡಿ ದೇವರಿಗೆ ಮೊಸರನ್ನದ ನೈವೇದ್ಯವಿರುತ್ತದೆ. ರಾತ್ರಿ ೧೧ ಗಂಟೆಗೆ ಶಯನೋತ್ಸವ. ದೇವರ ವಸ್ತ್ರ ಬದಲಿಸುತ್ತಾರೆ. ಹೊಸ ಹಾರ ಹಾಕುತ್ತಾರೆ. ಧೂಪ, ದೀಪ, ಉಂಡಿ, ಸಕ್ಕರೆ ಕೊಬ್ಬರಿ ನೈವೇದ್ಯದ ನಂತರ ಡಿಂಗರೆಯವರು ದೇವಗೃಹದಿಂದ ಶಯ್ಯಾಗೃಹದವರೆಗೆ ಕೇಶರ–ಕಸ್ತೂರಿ ಮಿಶ್ರಿತ ನೀರಿನಿಂದ ಪ್ರೋಕ್ಷಣೆ ಮಾಡುತ್ತಾರೆ. ಶತರಂಜ ಹಾಸುತ್ತಾರೆ. ಡಾಂಗೆ ಕೈಯಲ್ಲಿ ದಂಡಿಗೆ ಹಿಡಿಯುತ್ತಾರೆ. ದಿವಟೆಗಳು ಕೈಯಲ್ಲಿ ದೀವಟಿಗೆ ಹಿಡಿಯುತ್ತಾರೆ. ಬೇಣಾರಿ ಮಂತ್ರ ಹೇಳುತ್ತಾರೆ. ಅರ್ಚಕರು ಪಾದ ತೊಳೆಯುತ್ತಾರೆ. ಆರತಿ ಮಾಡಿ, ಅಭಂಗ ಹೇಳಿ ದೇವರನ್ನ ಮಲಗಿಸುತ್ತಾರೆ. ಪ್ರತಿ ನಿತ್ಯವೂ ಪೂಜೆಯ ವೇಳೆಯಲ್ಲಿ ಪ್ರಹ್ಲಾದ ಮಹಾರಾಜರು ಬರೆದ ಆರತಿಯನ್ನು ಹೇಳುವ ಪದ್ಧತಿಯಿದೆ.

"ಶರಣಾಗತ ತವ ಚರಣಾ ಮಜವರಿ ಕರಿ ಕರುಣಾ ।
ಅಶರಣ ಶರಣಾ ದೇಯಿ ಮಜ ನಿಜಪದಿ ಚರಣಾ। (ಅದೇ ಪು. ೨೮)

ಇವು ನಿತ್ಯೋಪಚಾರಗಳಾದರೆ, ಈ ಕೆಳಗಿನವು ನೈಮತ್ತಿಕ ಉಪಚಾರಗಳಾಗಿವೆ.

ನೈಮಿತ್ತಿಕ ಉಪಚಾರ :

ಪ್ರತಿ ಏಕಾದಶಿ ದಿನ ಜಾಗರಣೆ ಇರುವುದಿರಿಂದ ಅಂದು ದೇವರನ್ನು ಮಲಗಿಸುವುದಿಲ್ಲ. ಆಷಾಢ, ಕಾರ್ತಿಕ ಏಕಾದಶಿಯಂದು ಕೇವಲ ಪಂಚಾಮೃತ ಪೂಜೆ ಮಾತ್ರ ಮಡಲಾಗುತ್ತದೆ. ಏಕೆಂದರೆ ಅಹೋರಾತ್ರಿ ದೇವರ ದರ್ಶನ ನಡೆದಿರುತ್ತದೆ. ಅಷಾಢ ಪೂರ್ಣಿಮೆಯ ನಂತರ ವದ್ಯ

ಪಂಚಮಿಗೆ ಪ್ರಕ್ಷಾಳ ಪೂಜೆ ಇರುತ್ತದೆ. ಅಂದು ಲಿಂಬೇಹಣ್ಣು, ಸಕ್ಕರೆಯಿಂದ ಸ್ವಚ್ಛವಾಗಿ ದೇವರನ್ನು ತೊಳೆಯುತ್ತಾರೆ. ನಂತರ ದೇವರಿಗೆ ನೈವೇದ್ಯವಿರುತ್ತದೆ.

ಚೈತ್ರ ತಿಗಳಲ್ಲಿ ದೇವರಿಗೆ ಚಂದನದ ಲೇಪನವಿರುತ್ತದೆ. ಚಂದನದ ಲೇಪನದಿಂದ ವಸ್ತ್ರಾಲಂಕಾರ ಮಾಡುತ್ತಾರೆ. ಪ್ರತಿ ಬುಧವಾರ ಮತ್ತು ಶನಿವಾರ ದೇವರಿಗೆ ಅಭ್ಯಂಗ ಸ್ನಾನವಿರುತ್ತದೆ. ಚಳಿಗಾಲದಲ್ಲಿ ದೇವರಿಗೆ ಹುಗ್ಗಿಯ ನೈವೇದ್ಯವಿರುತ್ತದೆ. ಮಾಘ ಶುದ್ಧ ಪಂಚಮಿಯಿಂದ ರಂಗಪಂಚಮಿಯವರೆಗೆ ದೇವರ ಪಾದಗಳಮೇಲೆ ಗುಲಾಲು ಏರಿಸುತ್ತಾರೆ. ತಲೆಗೆ ಪಗಡಿ ಸುತ್ತುತ್ತಾರೆ. ಬೇಸಿಗೆಯಲ್ಲಿ ತಣ್ಣೀರು, ಉಪಹಾರಕ್ಕಾಗಿ ಕೆಲವು ಫಲಾಹಾರ ಮತ್ತು ತಾಂಬೂಲ ಅರ್ಪಿಸುತ್ತಾರೆ. ಉಗಾದಿಯ ಪ್ರತಿಪದೆಯಿಂದ ಮೃಗ ನಕ್ಷತ್ರ ಮುಗಿಯುವ ತನಕ ದೇವರಿಗೆ ಶಯನೋತ್ಸವದಲ್ಲಿ ಚಂದನದ ಲೇಪ ಹಚ್ಚುತ್ತಾರೆ.

ಗೋಕುಲಾಷ್ಟಮಿಯಲ್ಲಿ ಒಂಭತ್ತು ದಿನ ಇಲ್ಲಿ ಉತ್ಸವವಾಗುತ್ತದೆ. ಆಷಾಢ ವದ್ಯ ಪ್ರತಿಪದೆ ಮತ್ತು ಕಾರ್ತಿಕ ವದ್ಯ ಬಿದಿಗೆಯಂದು ಮಂದಿರದಲ್ಲಿ ಕಾಲಾ ಉತ್ಸವವಾಗುತ್ತದೆ. ಆಗ ಹರಿದಾಸರ ತಲೆಗೆ ಪಾದುಕೆ ಕಟ್ಟಿ ಮೆರವಣಿಗೆಯಲ್ಲಿ ಕರೆದುಕೊಂಡು ಬರುತ್ತಾರೆ. ಕಾಲಾದ ಗಡಿಗೆ ಕಟ್ಟಿರುತ್ತಾರೆ. ಅದನ್ನು ಒಡೆಯುತ್ತಾರೆ. ಎಲ್ಲರಿಗೂ ಪ್ರಸಾದ ಹಂಚುತ್ತಾರೆ. ಹೀಗೆ ಕಾಲಾದ ಉತ್ಸವವಾಗುತ್ತದೆ.

ವಿಠ್ಠಲ ಮಂದಿರದ ಸಭಾಮಂಟಪದಲ್ಲಿಯ ರಾಮದಾಸರ ಮಾರುತಿಯ ಗುಡಿಯ ಹತ್ತಿರ ಒಂದು ಕೋಣೆಯಿದೆ. ಅಲ್ಲಿ ಧಾಮಣಗಾವದ ಪ್ರಸಿದ್ಧ ಭಕ್ತ ಬೋಧಲೆಯವರ ಮೂರ್ತಿಯಿದೆ. ಅವನ ವಂಶಜರು ವೈಶಾಖ ಏಕಾದಶಿಗೆ ಪಂಢರಪುರಕ್ಕೆ ದಿಂಡಿ ತೆಗೆದುಕೊಂಡು ಬರುತ್ತಾರೆ. ಅವರು ಪಾಂಡುರಂಗನಿಗೆ ಹಾಕಿದ ವಸ್ತ್ರಗಳನ್ನು ತೆಗೆದು, ತಾವು ತಂದಿರುವ ವಸ್ತ್ರಗಳನ್ನು ದೇವರಿಗೆ ತೊಡಿಸುತ್ತಾರೆ. ಈ ವಂಶಜರು ಪಂಢರಪುರಕ್ಕೆ ಬಂದಾಗ ಚಂದ್ರಭಾಗೆಗೆ ಹೆಚ್ಚು ನೀರು ಬಂದಿರುವುದು ಕಂಡುಬರುತ್ತದೆ ಎಂಬ ನಂಬಿಕೆಯಿದೆ.

ಇಂತಹದೆ ಇನ್ನೊಂದು ಉದಾಹರಣೆಯನ್ನು ಢೇರೆಯವರು ಉಲ್ಲೇಖಿಸುತ್ತಾರೆ. ೧೧೦ ವಾಲಾವಲ ಎಂಬುದು ಕೊಂಕಣದಲ್ಲಿಯ ಒಂದು ಪ್ರಸಿದ್ಧ ವೈಷ್ಣವ ಕ್ಷೇತ್ರ. ಇಲ್ಲಿಯ ನಾರಾಯಣ ಮತ್ತು ಪಂಢರಪುರದ ವಿಠ್ಠಲ ಈ ಎರಡು ದೇವತೆಗಳಲ್ಲಿ ಒಂದು ವಿಶಿಷ್ಟ ಮಥಾ ರೂಡಿಯಲ್ಲಿದೆ. ಪ್ರತಿ ವರ್ಷ ಮಾಘ ಏಕಾದಶಿಯ ದಿನ ವಾಲಾವಲದ ನಾರಾಯಣನ ಕೊರಳಿನಲ್ಲಿಯ ತುಳಸಿ ಮಾಲೆಯನ್ನು ತೆಗೆದುಕೊಂಡು ಹೋಗಿ ಪಂಢರಪುರ ವಿಠ್ಠಲನ ಕೊರಳಿಗೆ ಹಾಕುತ್ತಾರೆ. ನಂತರ ವಿಠ್ಠಲನ ಹಳೆಯ ವಸ್ತ್ರ ತೆಗೆದು ವಿಠ್ಠಲನಿಗೆ ಹೊಸ ವಸ್ತ್ರ ತೊಡಿಸುತ್ತಾರೆ. ಇದಕ್ಕೆ ಕಾರಣವೆಂದರೆ ವಿಠ್ಠಲನನ್ನು ವರ್ಷವಿಡಿ ಭಕ್ತರು ಸ್ಪರ್ಶಿಸುವುದರಿಂದ ದೇವರ ಪಾವಿತ್ರ್ಯ ಕಡಿಮೆಯಾಗುತ್ತದೆ.

ವಾಲಾವಲದ ನಾರಾಯಣನ ದೇವಸ್ಥಾನದಲ್ಲಿ ಜನರಿಗೆ ಮೂರ್ತಿಯನ್ನು ಸ್ಪರ್ಶಿಸಲು ಅವಕಾಶವಿಲ್ಲ. ಆದ್ದರಿಂದ ಅವನು ಮಡಿಬ್ರಹ್ಮನೆಂಬ ಶ್ರದ್ಧೆಯಿದೆ. ಅವನ ಕೊರಳಲ್ಲಿ ಎರುಡು ತುಳಸಿ ಮಾಲೆಯಿರುತ್ತವೆ. ಹೀಗಾಗಿ ಅವನ ಕೊರಳಲ್ಲಿಯ ಒಂದು ತುಳಸಿಮಾಲೆ ವಿಠ್ಠಲನಿಗೆ ಹಾಕಿದರೆ ವಿಠ್ಠಲನ ಮೈಲಿಗೆ ಹೋಗುತ್ತದೆಯೆಂದು ನಂಬುತ್ತಾರೆ. ಈಗ ತುಳಸಿ ಮಾಲೆಯು ಅಂಚೆಯ ಮೂಲಕ ಬರುತ್ತದೆ. ಈ ಸೇವೆಗಾಗಿ ಕರಮಳಕರ ಮನೆತನಕ್ಕೆ ಬೂಮಿಯು ಉಂಬಳಿಯಾಗಿ ದೊರೆತಿದೆ.

ವಿಠ್ಠಲನಂತೆ ರುಕ್ಮಿಣಿಗೂ ಶುಕ್ರವಾರ ಮತ್ತು ಮಂಗಳವಾರ ಅಭ್ಯಂಗ ಸ್ನಾನ, ಬೇಸಿಗೆಯಲ್ಲಿ ಸಾಯಂಕಾಲ ತಣ್ಣೀರು ಅರ್ಪಿಸುತ್ತಾರೆ. ಚಂದನ ಲೆಪಿಸುತ್ತಾರೆ. ಧನ ಸಂಕ್ರಾಂತಿಯಿಂದ ಮಕರ ಸಂಕ್ರಾಂತಿಯ ವರೆಗೆ ಒಂದು ತಿಂಗಳು ಹುಗ್ಗಿಯ ನೈವೇದ್ಯ ತೋರಿಸುತ್ತಾರೆ. ನವರಾತ್ರಿಯಲ್ಲಿ ಒಂಭತ್ತು ದಿನ ದೇವಿಯ ಉತ್ಸವವಾಗುತ್ತದೆ. ಪುರಾಣ, ಸಂಗೀತ, ಬ್ರಾಹ್ಮಣ ಭೋಜನ ನೆರವೇರುತ್ತವೆ. ರಾಖಿ ಮತ್ತು ಇತರ ಅಲಂಕಾರವಿರುತ್ತದೆ.

ಆಷಾಢ ಶುದ್ಧ ಪಂಚಮಿಗೆ ವಿಠೋಬಾ ಮತ್ತು ರುಕ್ಮಿಣಿ ಇಬ್ಬರ ಶಯ್ಯೆಯನ್ನು ಹೊರಗೆ ತೆಗೆಯುತ್ತಾರೆ. ಅಹೋರಾತ್ರಿ ಭಕ್ತರ ದರ್ಶನದಿಂದ ದೇವರಿಗೆ ದಣಿವಾಗುವುದೆಂಬ ಭಾವನೆಯಿಂದ ಎಣ್ಣೆ ಮಜ್ಜನ ಮಾಡಿ ದೇವರನ್ನು ಸುಗಂಧ ದ್ರವ್ಯಗಳಿಂದ ಸ್ವಚ್ಛಗೊಳಿಸುತ್ತಾರೆ. ನಂತರ ಧೂಪ ದೀಪ ಮಾಡಿ ನೈವೇದ್ಯ ತೋರಿಸುತ್ತಾರೆ. ಇವು ದೇವರ ನೈಮಿತ್ತಿಕ ಉಪಚಾರಗಳಾಗಿವೆ.

ಉತ್ಸವಗಳು :

ವರ್ಷದಲ್ಲಿ ಪಂಢರಪುರದಲ್ಲಿ ನಾಲ್ಕು ದೊಡ್ಡ ಯಾತ್ರೆಗಳಾಗುತ್ತವೆ.

೧) ಚೈತ್ರದ ವಾರಿ : ಚೈತ್ರ ಶುದ್ಧ ಪ್ರತಿಪದೆ ವದ್ಯ ಷಷ್ಠಿಯ ವರೆಗೆ ೨೧ ದಿವಸ.

೨) ಆಷಾಢದ ವಾರಿ : ಆಷಾಢ ಶುದ್ಧ ಪ್ರತಿಪದೆಯಿಂದ ವದ್ಯ ನವಮಿಯ ವರೆಗೆ ೨೪ ದಿವಸ.

೩) ಕಾರ್ತಿಕ ವಾರಿ : ಕಾರ್ತಿಕ ಶುದ್ಧ ಪ್ರತಿಪದೆಯಿಂದ ವದ್ಯ ನವಮಿಯ ವರೆಗೆ ೨೪ ದಿವಸ.

೪) ಮಾಘದ ವಾರಿ : ಮಾಘ ಶುದ್ಧ ನವಮಿಯಿಂದ ವದ್ಯ ತೃತೀಯಾದ ವರೆಗೆ ೧೦ ದಿವಸ.

ಇವುಗಳಲ್ಲಿ ಎಲ್ಲಕ್ಕಿಂತ ದೊಡ್ಡ ಯಾತ್ರೆ ಎಂದರೆ ಆಷಾಢದ್ದಾಗಿದೆ.

ಪಾಲಕಿ ಉತ್ಸವ :

ಈ ಉತ್ಸವವು ಅತ್ಯಂತ ಪ್ರೇಕ್ಷಣೀಯವಾಗಿದೆ. ಈ ಉತ್ಸವದಲ್ಲಿ ಭಾಗವತ ಧರ್ಮದ ಸತ್ಯದರ್ಶನವಾಗುತ್ತದೆ. ಶ್ರೀಮಂತ–ಬಡವ, ಸಣ್ಣವರು–ದೊಡ್ಡವರು, ಜ್ಞಾನಿ–ಅಜ್ಞಾನಿ ಎಲ್ಲ ಭೇದಭಾವ ಗಳನ್ನು ಮರೆತು ಎಲ್ಲರೂ ಇಲ್ಲಿ ಸಮಭಾವದಿಂದ ವರ್ತಿಸುತ್ತಾರೆ. ಪಂಢರಪುರದಲ್ಲಿ ಸುಮಾರು ೪೦–೪೫ ಪಾಲಕಿಗಳು ಬರುತ್ತವೆ. ಎಲ್ಲಕ್ಕಿಂತ ಜ್ಞಾನೇಶ್ವರರ ಪಾಲಕಿ ಶ್ರೇಷ್ಠವಾದುದು. ಜ್ಯೇಷ್ಠ ವದ್ಯ ಅಷ್ಟಮಿಗೆ ಆಳಂದಿಯಿಂದ ಹೊರಟು ಪುಣೆ, ಸಾಸವಡ, ಜೇಜೂರಿ, ತೊಂಡಲೆ, ಬೊಂದಲೆ, ಶೇಗಾಂವ ಮಾರ್ಗವಾಗಿ ಆಷಾಢ ದಶಮಿಗೆ ವಾಖರಿಗೆ ಬರುತ್ತವೆ. ಅಲ್ಲಿ ಪಾಲಕಿಯ ಜೊತೆಗೆ ಬಂದ ಕುದುರೆಯ ಉಭೇರಿಂಗಣ ಮತ್ತು ಗೋಲರಿಂಗಣ ಆಗುತ್ತವೆ. ಕುದುರೆಯು ಜಾನೇಶ್ವರ ಪಾಲಕಿಯ ದರ್ಶನ ಪಡೆದ ನಂತರ ರಿಂಗಣ ಪ್ರಾರಂಭವಾಗುತ್ತದೆ. ವಾಖರಿಯಲ್ಲಿ ಎಲ್ಲ ಪಾಲಕಿಗಳು ಒಟ್ಟಿಗೆ ಸೇರುತ್ತವೆ. ನಂತರ ಸಂಭ್ರಮದಿಂದ ಪಂಢರಪುರಕ್ಕೆ ಬರುತ್ತವೆ. ಎರಡು ದಿನ ದೇವನು ಚಂದ್ರಭಾಗೆಯಲ್ಲಿ ಸ್ನಾನಕ್ಕೆ ಬರುತ್ತಾನೆಂಬ ಭಾವಿಕರ ಶ್ರದ್ಧೆಯಿರುವುದರಿಂದ ಚಂದ್ರಭಾಗೆಯಲ್ಲಿ ವಿಪರೀತ ಗದ್ದಲವಿರುತ್ತದೆ. ಎಲ್ಲೆಲ್ಲಿಯೂ ಟಾಳ ಮೃದಂಗಗಳ ಧ್ವನಿ, ಭಜನೆ, ಕೀರ್ತನೆ, ಜಯ ಜಯ ರಾಮ ಕೃಷ್ಣ ಹರಿ ಎಂಬ ಘೋಷಣೆಗಳಿಂದ ಪಂಢರಪುರವು ವಿಜೃಂಭಿಸುತ್ತದೆ. ಪೌರ್ಣಿಮೆಯ ಗೋಪಾಲ ಕಾಲಾ ದ ನಂತರ ಎಲ್ಲ ಪಾಲಕಿಗಳು ತಮ್ಮ ತಮ್ಮ ಊರುಗಳಿಗೆ ತೆರಳುತ್ತವೆ.

ಹರಿದಾಸ ಕಾಲಾ :

ಪಾಂಡುರಂಗನ ಏಳು ಬಗೆಯ ಸೇವಾಕರ್ತೃಗಳಲ್ಲಿ ಹರಿದಾಸ ಕುಟುಂಬವೂ ಒಂದು. ಇವರು ದೇವರ ಕೀರ್ತನೆ ಸೇವೆ ಮಾಡುತ್ತಾರೆ. ಪಾಂಡುರಂಗ ಬುವಾ ಎಂಬುವರಿಂದ ಹರಿದಾಸ ಕಾಲಾದ ವ್ರತಾ ಆರಂಭವಾಯಿತು. ಇವರು ಪಾಂಡುರಂಗನ ಪರಮ ಭಕ್ತರು. ವೈಶಾಖದ ಬಿಸಿಲಿನಲ್ಲಿ ಉಸುಕಿನಲ್ಲಿ ನಡೆದು ಸ್ನಾನಕ್ಕೆ ಹೋದಾಗ, ಕಾದ ಮರಳಿನ ಶಾಖದಿಂದ ಎಚ್ಚರ ತಪ್ಪಿದರು. ವಿಠ್ಠಲನು ಬ್ರಾಹ್ಮಣ ವೇಷದಲ್ಲಿ ಅವರ ಎದುರಿಗೆ ಪಾದುಕೆಗಳನ್ನಿಟ್ಟು ಗುಪ್ತನಾದ. ಪಾಂಡುರಂಗಬುವಾ ಕಣ್ಣು ತೆರೆದಾಗ ಎದುರಿಗೆ ಕೇವಲ ಪಾದುಕೆಗಳಿದ್ದವು. ದೇವನು ಪ್ರತ್ಯಕ್ಷನಾಗಿ ಪಾದುಕೆಗಳನ್ನು ಕೊಟ್ಟು, ಪಾದುಕೆಗಳನ್ನು ತಲೆಗೆ ಬಿಗಿದುಕೊಂಡು ಕಾಲಾ ಮಾಡುತ್ತಾ ಹೋಗು ಎಂದು ಆಜ್ಞೆ ಮಾಡಿದಂತಾಯಿತು. ಅಂದಿನಿಂದ ಆಷಾಢ ವದ್ಯ ಪ್ರತಿಪದೆ ಮತ್ತು ಕಾರ್ತಿಕ ವದ್ಯ ಬಿದಿಗೆ ಈ ಎರಡು ದಿನ ಕಾಲಾ ಸಮಾರಂಭ ನಡೆಯುತ್ತದೆ. ಆ ದಿನ ಬೆಳಿಗ್ಗೆ ಪಾಂಡುರಂಗಬುವಾ ಅವರ ವಂಶಜರ ಮನೆಯಲ್ಲಿ ಬೆಳಿಗ್ಗೆ ಭಜನೆ, ಆರತಿಯಾಗುತ್ತದೆ. ನಂತರ

ಮಧ್ಯಾಹ್ನ ೧೨ ಗಂಟೆಗೆ ಪಾಂಡುರಂಗ ಬುವಾ ಅವರ ವಂಶಜರ ಸದಸ್ಯನು ತಲೆಯ ಮೇಲೆ ಬಿಳಿ ವಸ್ತ್ರಗಳಲ್ಲಿ ಪಾದುಕೆಗಳನ್ನು ಗಟ್ಟಿಯಾಗಿ ಕಟ್ಟಿಕೊಳ್ಳುತ್ತಾನೆ. ನಾಮದೇವನ ವಂಶಜರು ದಿಂಡಿ ತೆಗೆದುಕೊಂಡು ಕಾಲಾ ದವರ ಮನೆಗೆ ಬರುತ್ತಾರೆ. ಅವನು ನಿಧಾನವಾಗಿ ವಿಸ್ಮೃತಿಗೊಳ್ಳುತ್ತಾನೆ. ಭಜನಕಾರರು ಅವನ ಕೈ ಹಿಡಿದುಕೊಂಡು ಪಾಂಡುರಂಗ ಬುವಾರ ಸಮಾಧಿಯ ದರ್ಶನ ಪಡೆದು, ಮಾರುತಿ ದೇವಸ್ಥಾನದ ಹತ್ತಿರ ಕಾಲಾದ ಹಂಡಿ ಕಟ್ಟಿರುವಲ್ಲಿಗೆ ಬರುತ್ತಾರೆ. ಮಾರುತಿ ದೇವಸ್ಥಾನಕ್ಕೆ ಐದು ಪ್ರದಕ್ಷಿಣೆ ಹಾಕಿ ಮಡಕೆ ಒಡೆಯುತ್ತಾನೆ. ನಾಮದೇವನ ವಂಶಜರು ಅವನನ್ನು ತಲೆಯ ಮೇಲೆ ಎತ್ತಿಕೊಂಡು ಮಹಾದ್ವಾರದ ಮೂಲಕ ಚಂದ್ರಭಾಗೆಗೆ ಬರುತ್ತಾರೆ. ಅಲ್ಲಿ ಪಾದುಕೆಗಳಿಗೆ ಜನಸಿಂಚನೆ ಮಾಡಿ ಕುಂಬಾರ ಘಾಟದ ಮೂಲಕ ಹರಿದಾಸರ ಸಮಾಧಿಗೆ ನಮಸ್ಕರಿಸಿ ಅರಳು ಹಾರಿಸುತ್ತಾರೆ. ನಂತರ ಕಾಲಾದವರ ಮನೆಗೆ ಹಿಂತಿರುಗುತ್ತಾರೆ. ಪಾದುಕೆಗಳನ್ನು ದೇವರ ಮನೆಯಲ್ಲಿ ಇಡುತ್ತಾರೆ. ಇದಕ್ಕೆ ಮಹಾದ್ವಾರ ಕಾಲಾ ಎಂದೂ ಕರೆಯುತ್ತಾರೆ.

ಸಂಪ್ರದಾಯ ಆಚರಣೆಗಳು :

ವಿಠ್ಠಲ ಕುಲದೇವತೆಯಾಗಿರುವ ವೈದಿಕ ಸಂಪ್ರದಾಯದ ಮನೆಗಳಲ್ಲಿ ನವರಾತ್ರಿಯ ಆಚರಣೆ ಇರುತ್ತದೆ. ಆಷಾಢ ಮತ್ತು ಕಾರ್ತಿಕ ತಿಂಗಳಲ್ಲಿ ಶುದ್ಧ ದಶಮಿಯಿಂದ ಪೌರ್ಣಿಮೆಯ ವರೆಗೆ ಆರು ದಿನಗಳವರೆಗೆ ವಿಠ್ಠಲನ ನವರಾತ್ರಿ ಆಚರಿಸುತ್ತಾರೆ. ಪ್ರತಿದಿನ ಪೂಜೆ, ಅಭಿಷೇಕ, ನೈವೇದ್ಯ, ಆರತಿ ಮಾಡುತ್ತಾರೆ. ಆರು ದಿನಗಳವರೆಗೆ ಅಹೋರಾತ್ರಿ ನಂದಾದೀಪ ಬೆಳಗುತ್ತಾರೆ. ಮದುವೆ ಮೊದಲಾದ ಶುಭ ಕಾರ್ಯಗಳಲ್ಲಿ ನವದಂಪತಿ ಸಮೇತರಾಗಿ ಕುಟುಂಬ ಯಾತ್ರೆ ಮಾಡುವ ಪದ್ಧತಿ ರೂಢಿಯಲ್ಲಿದೆ. ಆಷಾಢ ಮತ್ತು ಕಾರ್ತಿಕ ಏಕಾದಶಿಯ ದಿನ ದಏವರ ಭಜನೆ, ಸಂಕೀರ್ತನೆ, ಉಪವಾಸ ಮತ್ತು ಜಾಗರಣೆಗಳನ್ನು ಆಚರಿಸುವುದು ಕರ್ನಾಟಕ ಮತ್ತು ಮಹಾರಾಷ್ಟ್ರಗಳೆರಡರಲ್ಲಿ ಬಹು ವಿಜೃಂಭಣೆಯಿಂದ ನೆರವೇರುತ್ತವೆ.

ಪಂಢರಪುರ :

ವಿಠ್ಠಲನೆಂದರೆ ಪ್ರೇಮ, ವಿಠ್ಠಲನೆಂದರೆ ಕೃಷ್ಣ, ವಿಠ್ಠಲನೆಂದರೆ ಯೋಗೇಶ್ವರ, ಎಂಬುದು ಲಕ್ಷಾವಧಿ ಜನರ ಶ್ರದ್ಧೆಯಾಗಿದೆ. ಈ ಲಕ್ಷಾವಧಿ ಜನರ ಶ್ರದ್ಧೆಯ ವಿಠ್ಠಲನ ಸ್ಥಾನವೇ ಪಂಢರಪುರವಾಗಿದೆ. ಸಂತರು ಸಾಮಾನ್ಯ ಜನರಿಗೆ ಪಾರಮಾರ್ಥಿಕ ವಿವೇಚನೆಯನ್ನು ತಿಳಿಸಿ ಅವರ ಅಂತಿಮ ಸುಖಕ್ಕಾಗಿ ಅವರೆದುರಿಗೆ ವಿಠ್ಠಲ ದೇವತೆಯನ್ನು ನಿಲ್ಲಿಸಿದರು. ಈ ದೇವತೆಯ ಸ್ಥಾನ ಸಂತರ ತವರೂರು. ವಾರಿಕರಿ ತತ್ವಜ್ಞಾನದ ವಿದ್ಯಾಪೀಠ ಎಂದು ಗುರುತಿಸಲ್ಪಟ್ಟಿದೆ. ವಾರಿಕರಿ

ಸಂಪ್ರದಾಯದ ರಾಜಧಾನಿ ಇಂತಹ ಪಂಢರಪುರ ಅಂದರೆ ಪೃಥ್ವಿಯ ಮೇಲಿನ ವೈಕುಂಠವಾಗಿದೆ.

ಇಲ್ಲಿಯ ಮುಖ್ಯ ಮಂದಿರವೆಂದರೆ ವಿಠ್ಠಲ ಮಂದಿರ. ಇದು ಅತ್ಯಂತ ಭವ್ಯ ಮತ್ತು ವಿಶಾಲವಾಗಿದೆ. ಇಲ್ಲಿಯ ಶಿಲ್ಪವು ಅತ್ಯಂತ ಪ್ರೇಕ್ಷಣೀಯವಾಗಿದೆ. ದೇವಾಲಯದ ಪೂರ್ವಕ್ಕೆ ಮೂರು, ಉತ್ತರಕ್ಕೆ ಮೂರು ಮತ್ತು ದಕ್ಷಿಣ ಮತ್ತು ಪಶ್ಚಿಮಕ್ಕೆ ಒಂದೊಂದು, ಹೀಗೆ ಎಂಟು ಪ್ರವೇಶದ್ವಾರಗಳಿವೆ. ಮಂದಿರದ ಎದುರಿಗೆ ಕೋಟೆಯಂತೆ ಗೋಡೆ ಇದೆ. ಒಳಗಿನ ಮುಖ್ಯ ಮಂದಿರದಲ್ಲಿ ನಾಲ್ಕು ಭಾಗಗಳಿವೆ. ಕಟ್ಟೆ, ಹದಿನಾರು ಕಂಬದ ಮಂಟಪ, ನಾಲ್ಕು ಕಂಬದ ಮಂಟಪ ಮತ್ತು ಗರ್ಭಗೃಹ. ದೇವಾಲಯದ ಎದುರಿಗೆ ಚಿಕ್ಕದಾದ ಕಲ್ಲಿನ ರಸ್ತೆಯಿದೆ. ಮುಖ್ಯ ಪ್ರವೇಶದ್ವಾರಕ್ಕೆ ಮಹದ್ವಾರವೆನ್ನುತ್ತಾರೆ. ಈ ಮಹಾದ್ವಾರದ ಎದುರಿಗೆ ಚೋಖೋಬಾನ ಸಮಾಧಿಯಿದೆ. ಸಮಾಧಿಯ ಎದುರಿನ ಮಹಾದ್ವಾರದಲ್ಲಿ ೧೨ ಮೆಟ್ಟಿಲುಗಳಿವೆ. ಅದರಲ್ಲಿ ಮೊದಲನೆಯ ಮೆಟ್ಟಲಿಗೆ ನಾಮದೇವನ ಮೆಟ್ಟಲು ಎಂದು ಹೆಸರಿದೆ. ಈ ಸ್ಥಳದಲ್ಲಿ ನಾಮದೇವನು ಸಮಾಧಿ ಹೊಂದಿದ್ದ. ಮಂದಿರಕ್ಕೆ ಬರುವ ಹೋಗುವ ಸಂತರ ಪಾದ ಧೂಳಿಯ ಸ್ಪರ್ಶವು ತನಗೆ ಲಭಿಸಬೇಕೆಂದು ನಾಮದೇವನು ಈ ಸ್ಥಳದಲ್ಲಿ ಸಮಾಧಿಸ್ಥನಾಗಿದ್ದ. ಈ ಮೆಟ್ಟಲಿಗೆ ಹಿತ್ತಾಳೆ ಕವಚವನ್ನು ತೊಡಿಸಿದ್ದಾರೆ. ಅಲ್ಲಿ ನಾಮದೇವನ ಮುಖವಾಡವನ್ನು ಕೂಡಿಸಲಾಗಿದೆ. ಇದರ ಮೇಲ್ಭಾಗದಲ್ಲಿ ಹಿತ್ತಾಳೆಯ ತಗಡಿನ ಮೇಲೆ ಹದಿನಾಲ್ಕು ಮನುಷ್ಯಾಕೃತಿಗಳನ್ನು ಕೆತ್ತಿದ್ದಾರೆ. ನಾಮದೇವನು ಸಮಾಧಿ ಹೊಂದಿದ ನಂತರ ಅವನ ಹದಿನಾಲ್ಕು ಸಂಬಂಧಿಗಳು ಚಂದ್ರಭಾಗೆಯಲ್ಲಿ ಹಾರಿ ದೇಹ ವಿಸರ್ಜನೆ ಮಾಡಿದರು. ಅದರ ಕುರುಹಾಗಿ ಈ ಮನುಷ್ಯಾಕೃತಿಗಳನ್ನು ಕೆತ್ತಲಾಗಿದೆ. ನಾಮದೇವನ ಮೆಟ್ಟಲು ಇರುವ ಈ ದ್ವಾರಕ್ಕೆ ನಾಮದೇವನ ಬಾಗಿಲು ಎಂದು ಕರೆಯುತ್ತಾರೆ.

ಈ ಮಹಾದ್ವಾರದ ಹನ್ನೆರಡು ಮೆಟ್ಟಲುಗಳನ್ನು ಹತ್ತಿದ ಮೇಲೆ ಮುವತ್ಮೂರು ಕೋಟಿ ದೇವರ ಮಂದಿರವಿದೆ. ಅಲ್ಲಿ ಕೆಲವು ದೇವತೆಗಳ ಹಿತ್ತಾಳೆ ಮೂರ್ತಿಗಳು ಕಾಣಿಸುತ್ತವೆ. ಹತ್ತಿರದಲ್ಲಿ ದೊಡ್ಡ ವೃಕ್ಷವಿದ್ದು ಮುಂದೆ ಹೋದರೆ ಅಲ್ಲಿ ಮುಖಮಂಟಪವಿದೆ. ಅದರ ಎರಡೂ ಬದಿಗೆ ಕೋಣೆಗಳಿವೆ. ಎಡಗಡೆಗೆ ಗಣಪತಿಯ ಸ್ಥಾನವಿದೆ. ಮುಖ ಮಂಟಪಕ್ಕೆ ಮುಕ್ತಿ ಮಂಟಪ ಎನ್ನುತ್ತಾರೆ. ಮಂಟಪ ದಾಟಿ ಮೇಲೆ ಕಟ್ಟೆಗೆಯ ಸಭಾ ಮಂಟಪವಿದೆ. ಮಹಾ ಮಂಟಪದಲ್ಲಿ ಮೂವತ್ತು ಅಡಿ ಎತ್ತರದ ಎರಡು ದೀಪಸ್ಥಂಭಗಳಿವೆ. ಎಡಗಡೆಗೆ ಒಂದು ದೊಡ್ಡ ಮಾರುತಿಯ ಮೂರ್ತಿಯಿದೆ. ಸಮರ್ಥ ರಾಮದಾಸರು ಇದನ್ನು ಸ್ಥಾಪಿಸಿದ್ದಾರೆ. ಮಧ್ಯಭಾಗದಲ್ಲಿ ವಿಠ್ಠಲನ

ಮೂರ್ತಿಯ ಎದುರಿಗೆ ಗರುಡನ ಮತ್ತು ಹನುಮಂತನ ಮಂದಿರವಿದೆ. ಸಭಾಮಂಟಪದ ಎರಡೂ ಕಡೆಗೆ ಜಯ ವಿಜಯರ ಮೂರ್ತಿಗಳಿವೆ. ಈ ಮಂಟಪದಲ್ಲಿ ಒಂದು ಸಂಸ್ಕೃತ ಶಿಲಾಲೇಖವಿದೆ. ಮಂಟಪದ ಎಡಗಡೆಗೆ ಅಲಂಕಾರ ಗೃಹವಿದೆ. ದೇವನ ಮೌಲ್ಯದ ಅಲಂಕಾರ ವಸ್ತುಗಳನ್ನು ಇಲ್ಲಿ ಇಡಲಾಗಿದೆ. ಸಭಾ ಮಂಟಪದ ನಂತರ ಹದಿನಾರು ಕಂಬದ ಮಂಟಪವಿದೆ. ಭದ್ರವಾದ ಹದಿನಾರು ಕಲ್ಲಿನ ಕಂಬಗಳ ಮೇಲೆ ಈ ಮಂಟಪ ನಿಂತಿರುವುದರಿಂದ ಇದನ್ನು ಹದಿನಾರು ಕಂಬದ ಮಂಟಪವೆನ್ನುತ್ತಾರೆ. ಪ್ರತಿಯೊಂದು ಕಂಬದ ಮೇಲೆ ಬೇರೆ ಬೇರೆ ಶಿಲಾಕೃತಿಗಳನ್ನು ಕೆತ್ತಲಾಗಿದೆ. ಈ ಮಂಟಪದ ಎಡಗಡೆಯ ಒಂದು ಕಂಬಕ್ಕೆ ಬೆಳ್ಳಿಯ ತಗಡು ಹೊದಿಸಲಾಗಿದ್ದು, ಇದನ್ನು ಗರುಡ ಕಂಬ ಎಂದು ಕರೆಯುತ್ತಾರೆ. ಗರುಡವು ದೇವರ ವಾಹನವೆಂದು ಭಕ್ತರು ಈ ಕಂಬಕ್ಕೆ ಆಲಿಂಗನ ಮಾಡಿ ನಂತರ ವಿಠ್ಠಲನ ದರ್ಶನ ಪಡೆಯುತ್ತಾರೆ. ಈ ಮಂಟಪದ ದಕ್ಷಿಣಕ್ಕೆ ಎರಡು, ಮತ್ತು ಉತ್ತರಕ್ಕೆ ಮೂರು ಬಾಗಿಲುಗಳಿವೆ. ಪಶ್ಚಿಮದಿಂದ ಹೊರಗೆ ಹೋಗುವ ಬಾಗಿಲಿಗೆ ಮೊದಲು ಬೆಳ್ಳಿಯ ತಗಡು ಹೊದಿಸಲಾಗಿತ್ತು. ಆದ್ದರಿಂದ ಅದಕ್ಕೆ ಬೆಳ್ಳಿಯ ಬಾಗಿಲು ಎಂದು ಹೆಸರು ಬಿದ್ದಿದೆ. ಇಲ್ಲಿಂದ ಒಳಗೆ ಹೋದರೆ ನಾಲ್ಕು ಕಂಬದ ಮಂಟಪವಿದೆ. ದೇವಾಲಯದಲ್ಲಿ ಗದ್ದಲವಿದ್ದಾಗ ಬಡವೆಗಳ ಪರಿಚಯದಿಂದ ಈ ನಾಲ್ಕು ಕಂಬದ ಮಂಟಪದ ಮೂಲಕ ವಿಠ್ಠಲನ ದರ್ಶನ ಪಡೆಯಬಹುದಾಗಿದೆ. ಉತ್ತರದ ಗೋಡೆಯಲ್ಲಿ ದೊಡ್ಡ ಅಡ್ಡ ಇದ್ದು ಅಲ್ಲಿ ಪಾಂಡುರಂಗನ ಶಯ್ಯಾಗೃಹವಿದೆ. ಅಲ್ಲಿ ಬೆಳ್ಳಿಯ ಮಂಚವಿದ್ದು, ಬೆಲೆ ಬಾಳುವ ವಸ್ತ್ರಗಳಿಂದ ಕೂಡಿದ ಹಾಸಿಗೆ ಇದೆ. ನಾಲ್ಕು ಕಂಬದ ಮಂಟಪ ದಾಟಿದ ಮೇಲೆ ಒಂದು ಚೌರಸ ಸ್ಥಳವಿದೆ. ಇದನ್ನು ಕಮಾನ ಎನ್ನುತ್ತಾರೆ. ಇಲ್ಲಿಂದ ಮುಂದೆ ಗರ್ಭಗೃಹವಿದೆ. ಗರ್ಭಗೃಹದಲ್ಲಿ ೮” ವ್ಯಾಸದ ಹಿತ್ತಾಳೆಯ ತಗಡಿನ ದಂಡವಿದೆ. ಎದುರಿಗೆ ಪ್ರಭಾವಳಿ, ಅದರ ಎದುರಿಗೆ ಕಲ್ಲಿನ ಪೀಠದ ಮೇಲೆ ಬೆಳ್ಳಿಯ ಮಂಟಪದಲ್ಲಿ ವಿಠ್ಠಲನ ಮೂರ್ತಿ ಇದೆ. ಈ ಮೂರ್ತಿಯು ೩.೫’ ಎತ್ತರವಿದೆ. ತಲೆಯ ಮೇಲೆ ಶಿವಲಿಂಗವಿದೆ. ಕತ್ತಿನಲ್ಲಿ ಕೌಸ್ತುಭ ಮಣಿ, ಹೃದಯದ ಮೇಲೆ ವತ್ಸ ಲಾಂಚನ, ಸೊಂಟಕ್ಕೆ ಸೊಂಟದ ಪಟ್ಟಿಯಿದ್ದು ಅದರ ಒಂದು ತುದಿ ತೊಡೆಯ ಮೇಲೆ ಇಳಿಬಿದ್ದಿದೆ. ಕಿವಿಯಲ್ಲಿ ಮಕರ ಕುಂಡಲ, ಕೊರಳಲ್ಲಿ ವೈಜಯಂತಿ ಇದೆ. ಇಲ್ಲಿ ಪಾಂಡುರಂಗ ಒಬ್ಬನೇ ನಿಂತಿದ್ದಾನೆ.

ದೇವಾಲಯದ ಹಿಂದಿನ ಬಾಗಿಲಿಗೆ ದಕ್ಷಿಣದ್ವಾರ ಎನ್ನುತ್ತಾರೆ. ಇದಕ್ಕೆ ರುಕ್ಮಿಣಿ ದ್ವಾರ ಎಂದೂ ಕರೆಯುತ್ತಾರೆ. ಈ ದ್ವಾರದ ಎದುರಿಗೇ ರುಕ್ಮಿಣಿಯ ಮಂದಿರವಿದೆ. ಈ ದೇವಾಲಯದ ಶಿಲ್ಪವು ಅರ್ವಾಚೀನವಾಗಿದೆ. ಇಲ್ಲಿ ಮೂರ್ತಿಯ ವಾಸಸ್ಥಾನ, ಮಧ್ಯಗೃಹ, ಮುಖ ಮಂಟಪ, ಕಟ್ಟಿಗೆಯ ಸಭಾ ಮಂಟಪ ಇವುಗಳ ಸಮಾವೇಶವಿದೆ. ಕಟ್ಟಿಗೆಯ ಮಂಟಪದಲ್ಲಿ ಒಂದು

ದೀಪಸ್ತಂಭವಿದೆ. ಮಧ್ಯಗೃಹದ ದಕ್ಷಿಣ ಬಾಗಿಲಿನಿಂದ ಸತ್ಯಭಾಮಾ ಮತ್ತು ರಾಹಿ ಮಂದಿರಕ್ಕೆ ದಾರಿ ಇದೆ. ಗರ್ಭಗೃಹದಲ್ಲಿ ರುಕ್ಮಿಣಿಯ ಸಿಂಹಾಸನಸ್ಥ ಮೂರ್ತಿಯಿದೆ. ಸಭಾಮಂಟಪ ಹತ್ತಿ ಮೇಲೆ ಬಂದರೆ ಅಶ್ವತ್ಥ ವೃಕ್ಷವಿದೆ. ಇದಕ್ಕೆ ಸುವರ್ಣ ಅಶ್ವತ್ಥವೃಕ್ಷ ಎನ್ನುತ್ತಾರೆ. ಇಲ್ಲಿಂದಲೂ ರುಕ್ಮಿಣಿಯ ದರ್ಶನ ಮಾಡಬಹುದಾಗಿದೆ. ವೃಕ್ಷದ ಬಲಗಡೆಗೆ ಏಳು ಮಂದಿರಗಳಿವೆ. ಈ ಮಂದಿರ ಮತ್ತು ಹದಿನಾರು ಕಂಬದ ಮಂಟಪದ ಮಧ್ಯದಲ್ಲಿ ಒಂದು ಶಿಲಾಲೇಖವಿದೆ. ಇದಕ್ಕೆ ೮೪ರ ಶಿಲಾಲೇಖ ಎಂದು ಹೆಸರಿದೆ. ಈ ಕಂಬದ ವಾಯುವ್ಯ ದಿಕ್ಕಿಗೆ ಎರಡು ಜೋಡು ಪಾದುಕೆಗಳಿವೆ. ದಾಮಾಜಿಪಂತನ ವಿನಂತಿಯಿಂದ ಪಾಂಡುರಂಗನು ಬಾದಶಾಹನಿಗೆ ಮೂರು ಸಲ ದರ್ಶನವಿತ್ತುದರ ನಿದರ್ಶನಕ್ಕಾಗಿ ಈ ಪಾದುಕೆಗಳಿವೆ. ನಾಲ್ಕು ಕಂಬದ ಮಂಟಪ, ಗರುಡಗಂಬದ ಹತ್ತಿರದ ಮಂಟಪ ಮತ್ತು ಮುಕ್ತಿ ಮಂಟಪ ಈ ಮೂರು ಸ್ಥಳಗಳಿಂದ ವಿಠ್ಠಲನ ಮುಖ ದರ್ಶನ ಪಡೆಯಬಹುದು. ವಿಠೋಬನ ಮಂದಿರದ ಶಿಖರ ದರ್ಶನಕ್ಕೆ ಬಹಳ ಮಹತ್ವವಿದೆ. ಯಾತ್ರೆಯ ದಿನಗಳಲ್ಲಿ ಜನರಿಗೆ ವಿಠೋಬನ ದರ್ಶನವು ಅಶಕ್ಯವಾದುರಿಂದ ಭಕ್ತರು ಶಿಖರ ದರ್ಶನದಿಂದಲೇ ತೃಪ್ತರಾಗುತ್ತಾರೆ.

ಗರುಡ ಕಂಬ :

ಪಾಂಡುರಂಗ ದೇವಾಲಯದ ಹದಿನಾರು ಕಂಬದ ಮಂಟಪದಲ್ಲಿ ಒಂದು ಹಿತ್ತಾಳೆಯ ತಗಡು ಹೊದಿಸಿದ ಕಂಬವಿದ್ದು ಅದಕ್ಕೆ ಗರುಡ ಕಂಬವೆಂದು ಕರೆಯುತ್ತಾರೆ. ಈ ಕಂಬಕ್ಕೂ, ಕರ್ನಾಟಕದ ಪ್ರಸಿದ್ಧ ಹರಿದಾಸರಾದ ಪುರಂದರದಾಸರಿಗೂ ಸಂಬಂಧವಿದೆ. ಪ್ರತಿ ವರ್ಷ ಪೌಷ್ಯ ವದ್ಯ ಅಮಾವಾಸ್ಯೆಯ ಸುಮಾರಿಗೆ ಕರ್ನಾಟಕದಿಂದ ಸುಮಾರು ೩೦೦-೪೦೦ ಭಕ್ತರು ಪಂಢರಪುರಕ್ಕೆ ಬಂದು ಪುರಂದರದಾಸರ ಪುಣ್ಯತಿಥಿ ಆಚರಿಸುತ್ತಾರೆ. ಈ ಕಂಬಕ್ಕೆ ಅರ್ಚನೆ ಮಾಡಿ ಕೀರ್ತನ, ಪ್ರವಚನದ ಕಾರ್ಯಕ್ರಮವನ್ನು ಆಸ್ಥೆಯಿಂದ ಆಚರಿಸುತ್ತಾರೆ. ಈ ಕಂಬದ ಪಾರಂಪಾರಿಕ ಕಥೆ ಹೀಗಿದೆ.

ಪುರಂದರದಾಸರು ಪ್ರಾರಂಭದಲ್ಲಿ ವ್ಯವಸಾಯದಲ್ಲಿ ಚಿನಿವಾಲರಾಗಿದ್ದರು. ಅವರ ಪತ್ನಿಯು ಯಾಚಕ ಬ್ರಾಹ್ಮಣನಿಗೆ ತನ್ನ ನತ್ತು ದಾನ ಮಾಡಿದ್ದಳು. ಅವನು ಶ್ರೀನಿವಾಸ ನಾಯಕನಲ್ಲಿ ಮಾರಲು ತೆಗೆದುಕೊಂಡು ಹೋದ. ಆ ನತ್ತು ತಮ್ಮ ಹೆಂಡತಿಯದು ಎಂದು ನಾಯಕರು ಗುರುತಿಸಿದರು. ಮನೆಗೆ ಬಂದು ಪತ್ನಿಗೆ ಪ್ರಶ್ನಿಸಿದರು. ಪರಮೇಶ್ವರನ ಪ್ರಾರ್ಥನೆಯಿಂದ ಅವಳಿಗೆ ನತ್ತು ದೊರಕಿತು. ಪತಿಗೆ ತೋರಿಸಿದಳು. ಶ್ರೀನಿವಾಸ ನಾಯಕನಿಗೆ ಆಶ್ಚರ್ಯವಾಯಿತು. ನಿಜ ಸಂಗತಿ ತಿಳಿದ ಮೇಲೆ ಪಶ್ಚಾತ್ತಾಪವಾಗಿ, ಎಲ್ಲ ಸಂಪತ್ತನ್ನು ತ್ಯಜಿಸಿ,

ವಿಠ್ಠಲನ ನಿಸ್ಸೀಮ ಭಕ್ತರಾದರು. ಈ ಪರವರ್ತನೆಯ ನಂತರ, ಒಂದು ಸಲ ಪಂಢರಪುರಕ್ಕೆ ಬಂದಾಗ ಅವರು ಅನಾರೋಗ್ಯದಿಂದ ಮಲಗಿದ್ದರು. ಯಾರೂ ಹತ್ತಿರವಿರಲಿಲ್ಲ. ನೀರಡಿಕೆಯಾಗಿತ್ತು. ನೀರು ಬೇಡಿದರು. ಪಾಂಡುರಂಗನು ಹುಡುಗನ ವೇಷದಲ್ಲಿ ಬಂದು ಒಂದು ಬೆಳ್ಳಿಯ ಪಾತ್ರೆಯಲ್ಲಿ ನೀರು ತಂದು ಕೊಟ್ಟು ಹೊರಟು ಹೋದ. ಪಾತ್ರೆ ಅಲ್ಲಿಯೇ ಉಳಿಯಿತು. ಮರುದಿನ ಪಾತ್ರೆ ಕಳವಾಗಿದೆಯೆಂದು ಅರ್ಚಕನು ಎಲ್ಲ ಕಡೆಗೆ ಹುಡುಕಿ, ಪುರಂದರ ದಾಸರ ಕೋಣೆಗೆ ಬಂದಾಗ ಅಲ್ಲಿ ಅದು ಸಿಕ್ಕಿತು. ಪುರಂದರ ದಾಸರನ್ನು ಕಳ್ಳನೆಂದು ತಿಳಿದು, ಕಂಬಕ್ಕೆ ಕಟ್ಟಿ ಹೊಡೆದರು. ನಂತರ, ಅರ್ಚಕನಿಗೆ ಪಾಂಡುರಂಗನ ಸಾಕ್ಷಾತ್ಕಾರವಾಗಿ ನಿಜ ಸಂಗತಿ ತಿಳಿದಾಗ, ಅರ್ಚಕನು ಪುರಂದರ ದಾಸರಲ್ಲಿ ಕ್ಷಮೆ ಯಾಚಿಸಿದ. ಅದರಿಂದ ಪುರಂದರದಾಸರ ಮಹಿಮೆ ಹೆಚ್ಚಿತು. ಹೀಗಾಗಿ, ಆ ಕಂಬಕ್ಕೆ ಪುರಂದರ ಕಂಬವೆಂಬ ಹೆಸರು ಬಂದಿತು. ಇಂದಿಗೂ ಕನ್ನಡಿಗರು ಪಂಢರಪುರಕ್ಕೆ ಹೋದರೆ ಮೊದಲು ಈ ಕಂಬವನ್ನು ಆಲಂಗಿಸಿ ನಂತರ ವಿಠ್ಠಲನ ದರ್ಶನ ಪಡೆಯುತ್ತಾರೆ. ಮಹಾರಾಷ್ಟ್ರದವರು ಮಾತ್ರ ಇದನ್ನು ಗರುಡಗಂಬವೆಂದು ಹೇಳುತ್ತಾರೆ.

ಗರುಡ ಮಂಟಪ :

ಗರುಡ ಮಂಟಪದಲ್ಲಿ ಗರುಡನ ಮಂದಿರವಿದೆ. ಅದರ ಪೂಜೆ, ಅರ್ಚನೆಯ ಉತ್ಪನ್ನವನ್ನು ಏಳು ಸೇವಾಕರ್ತರ ಪೈಕಿ ಬೇಣಾರೆ ತೆಗೆದುಕೊಳ್ಳುತ್ತಾರೆ. ಬೇಣಾರೆಯವರು ಪಾಂಡುರಂಗನ ಪೂಜೆಯ ವೇಳೆಯಲ್ಲಿ ಮಂತ್ರ ಪಠಿಸುತ್ತಾರೆ. ಇವರಿಗೆ ಪ್ರಚಂಡ ಗರುಡ ಧ್ವಜ ಬೇಣೆಕಾರ ಎಂಬ ಪದವಿಯಿದೆ. ಗರುಡವು ದೇವರ ವಾಹನವಾಗಿದೆ. ಪೇಶ್ವೆ ಕಾಲದಲ್ಲಿ ಇವರಿಗೆ ಗರುಡನ ಗುಡಿಯ ಒಡೆತನವನ್ನು ಕೊಟ್ಟಿದ್ದಾರೆ. ದೇವಾಲಯದ ಉತ್ತರ ಭಾಗದಲ್ಲಿ ರಾಮೇಶ್ವರ ಮತ್ತು ವಿಶ್ವನಾಥರ ಶಿವಲಿಂಗಗಳಿವೆ. ಇವುಗಳ ಒಡೆನವು ಕೋಳಿ ಜನಾಂಗಕ್ಕೆ ಸೇರಿದೆ.

ಪಂಢರಪುರದ ಇತರ ಸ್ಥಳಗಳು :

೧. **ವಿಷ್ಣುಪದ (ವೇಣುನಾದ)** : ವಿಠ್ಠಲನ ದೇವಸ್ಥಾನದಿಂದ ಒಂದು ಮೈಲು ಅಂತರದಲ್ಲಿ ನದಿಯ ಹತ್ತಿರವಿದೆ. ರುಕ್ಮಿಣಿ ಕೋಪಿಸಿಕೊಂಡು ದಿಂಡಿರವನಕ್ಕೆ ಬಂದಳು. ಅವಳನ್ನು ಶೋಧಿಸುವ ಸಲುವಾಗಿ ಕೃಷ್ಣನು ಗೋವು, ಗೋಪಾಲಕರ ಸಹಿತ ಇಲ್ಲಿಗೆ ಬಂದ. ಇಲ್ಲಿಯ ಮಂದಿರದಲ್ಲಿ ಕೃಷ್ಣನಮತ್ತು ಗೋವಿನ ಹೆಜ್ಜೆಗಳ ಗುರುತು ಇವೆ. ನಾವೆಯಿಂದ ಇಲ್ಲಿಗೆ ಹೋಗಬಹುದು. ಪಂಢರಪುರದಿಂದ ವಿಷ್ಣುಪದದವರೆಗಿನ ಭೀಮಾ ನದಿಗೆ ಚಂದ್ರಭಾಗಾ ಎಂದು ಕರೆಯುತ್ತಾರೆ.

೨. **ಪುಂಡಲೀಕ ಮಂದಿರ :** ಇದು ವಾರಕರಿಗಳ ಶ್ರದ್ಧಾಕೇಂದ್ರವಾಗಿದೆ. ಈ ಮಂದಿರದಲ್ಲಿ ಶಿವಲಿಂಗವಿದೆ. ಶಿವಲಿಂಗದ ಮೇಲೆ ಪುಂಡಲೀಕನ ಮುಖವಾಡ ಕೂಡಿಸಿದ್ದಾರೆ. ಮುಖವಾಡಕ್ಕೆ ಐದು ಹೆಡೆಯ ಹಾವಿನ ಪ್ರತಿಮೆಯಿದೆ. ಈ ಮಂದಿರದ ಅರ್ಚಕರು ಕೋಳಿ ಜಾತಿಯವರಿದ್ದಾರೆ. ಚಂದ್ರಭಾಗೆಗೆ ಮಹಾಪೂರ ಬಂದಾಗ ಅನೇಕ ವೇಳೆ ಈ ಮಂದಿರ ಮುಳುಗುತ್ತದೆ. ಆದರೂ ಇಂದಿಗೂ ಅದು ಭದ್ರವಾಗಿದೆ.

೩. **ಲೋಹದಂಡ ತೀರ್ಥ :** ಪುಂಡಲೀಕ ಮಂದಿರದ ಎದುರಿಗೆ ಲೋಹದಂಡ ತೀರ್ಥವಿದೆ. ಇಲ್ಲಿ ೧ ಅಡಿ ಉದ್ದ ಮತ್ತು ೨ ಇಂಚು ಅಗಲದ ಒಂದು ಕಲ್ಲಿನ ದೋಣಿ ತೋರಿಸುತ್ತಾರೆ. ಅದು ನೀರಿನ ಮೇಲೆ ತೇಲುತ್ತದೆ. ಈ ಕಲ್ಲಿನ ದೋಣಿಯಿಂದ ಪುಂಡಲೀಕ ಹೊರಗೆ ಬಂದ ಎಂದು ಹೇಳುತ್ತಾರೆ. ಲೋಹದಂಡ ತೀರ್ಥವು ಉದ್ಭವಿಸಿದ ಬಗ್ಗೆ ಒಂದು ಕಥೆಯಿದೆ. ಶಿವ ಪಾರ್ವತಿಯರು ವಿಹಾರ ಹೊರಟಾಗ ಪಾರ್ವತಿಗೆ ನೀರಡಿಕೆಯಾಯಿತು. ದಿಂಡಿರವನದಲ್ಲಿ ಹುಡುಕಿದರೆ ನೀರು ಸಿಗಲಿಲ್ಲ. ಕೊನೆಗೆ ತನ್ನ ತ್ರಿಶೂಲವನ್ನು ಭೂಮಿಯಲ್ಲಿ ತೂರಿದ. ಅಲ್ಲಿ ನೀರು ಬಂದಿತು. ಆದ್ದರಿಂದ ಅದು ಲೋಹದಂಡ ಕ್ಷೇತ್ರವಾಯಿತು.

೪. **ಗೋಪಾಳಪುರ :** ವಿಠ್ಠಲ ಮಂದಿರದಿಂದ ಒಂದು ಮೈಲಿ ಅಂತರದಲ್ಲಿ ಈ ಸ್ಥಳವಿದೆ. ದಹಿ ಕಾಲಾ ದ ಸಲುವಾಗಿ ಈ ಕ್ಷೇತ್ರವು ಪ್ರಸಿದ್ಧವಾಗಿದೆ. ಆಷಾಢ ಪೌರ್ಣಿಮೆ ಮತ್ತು ಕಾರ್ತಿಕ ಪೂರ್ಣಿಮೆಯಂದು ಇಲ್ಲಿ ದಹಿಕಾಲಾ ಉತ್ಸವವಾಗುತ್ತದೆ. ಆಷಾಢ ಮತ್ತು ಕಾರ್ತಿಕ ಏಕಾದಶಿಗೆ ಪಂಢರಪುರಕ್ಕೆ ಬಂದ ಯಾತ್ರಾರ್ಥಿಗಳು ಇಲ್ಲಿಯ ಕಾಲಾ ಉತ್ಸವದ ನಂತರ ತಮ್ಮ ತಮ್ಮ ಊರಿಗೆ ಹೊರಡುತ್ತಾರೆ. ಇಲ್ಲಿ ನೋಡಬೇಕಾದ ಮೂರು ಸ್ಥಳಗಳಿವೆ.

ಅ. **ಜನಾಬಾಯಿಯ ಗುಹೆ :** ಇಲ್ಲಿ ಜನಾಬಾಯಿಯ ಒಂದು ಸಣ್ಣ ಮೂರ್ತಿ ಇದೆ. ಈ ಗುಹೆಯಲ್ಲಿ ಜನಾಬಾಯಿ ಉಪಯೋಗಿಸುತ್ತಿದ್ದ ಬೀಸುವ ಕಲ್ಲು, ಒಲೆ, ಕೌದಿ, ಗಡಿಗೆ ಮೊದಲಾದ ಸಂಸಾರದ ಸಾಮಾನುಗಳಿವೆ.

ಬ. **ಗೋಪಾಲಕೃಷ್ಣನ ಮಂದಿರ :** ಗೋಪಾಲಕೃಷ್ಣನ ಮೂರ್ತಿ ಇದೆ. ಗೋಪಾಲಕೃಷ್ಣನು ಕೊಳಲೂದುತ್ತ ಇಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಎಂಬ ನಂಬಿಕೆ ಇದೆ. ಇದೊಂದು ಸುಂದರ ಮಂದಿರವಾಗಿದೆ.

ಕ. **ಭೀಮಕರಾಜನ ಮಂದಿರ :** ರುಕ್ಮಿಣಿ ಮುನಿದು ದಿಂಡಿರವನಕ್ಕೆ ಬಂದಳು. ಅವಳ ಭೇಟಿಗಾಗಿ ತಂದೆ ಭೀಮಕರಾಜ ಬಂದ. ಇಲ್ಲಿ ಭೀಮಕರಾಜನ ಮುಖವಾಡವಿದೆ. ಇಲ್ಲಿಯೇ ರುಕ್ಮಿಣಿಯ ಸಿಟ್ಟು ಇಳಿಯಿತು ಎಂದು ಹೇಳುತ್ತಾರೆ. ಇಲ್ಲಿ

ಲಕ್ಷ್ಮೀನಾರಾಯಣ ಮಂದಿರವೂ ಇದೆ. ಗೋಪಾಳಪುರವು ಪಂಢರಪುರದಲ್ಲಿಯ ಮಹತ್ವದ ಪ್ರೇಕ್ಷಣೀಯ ಸ್ಥಳವಾಗಿದೆ.

ಮಜ್ಜಿಗೆ ಹಿಟ್ಟಿನ ವಿಠೋಬ :

ವಿಠ್ಠಲ ಮಂದಿರದ ಪಶ್ಚಿಮ ದಿಕ್ಕಿಗೆ ಹತ್ತಿರದಲ್ಲಿಯೇ ತಾಕ ಪೀಠಾಚಾ ವಿಠೋಬಾನ ಸಣ್ಣ ಮಂದಿರವಿದೆ. ಮುಂದೆ ಸಭಾಮಂಟಪವಿದೆ. ಬಡವೆಯವರು ಈ ಮಂದಿರದ ವ್ಯವಸ್ಥೆಯನ್ನು ನೋಡಿ ಕೊಳ್ಳುತ್ತಾರೆ. ಈ ವಿಠೋಬನ ಕಥೆ ಹೀಗಿದೆ : ಮಹಾಜನ ಬಡವೆ ಮನೆತನದವರು ಏಕನಾಥರ ಸಲಹೆಗನುಗುಣವಾಗಿ ರಮಾಬಾಯಿ ಎಂಬ ಹುಡುಗಿಯ ಜೊತೆಗೆ ಮದುವೆಯ ಸಂಬಂಧ ಮಾಡಿದರು. ಅವಳು ಈ ಮನೆ ಸೇರಿದ ಮೇಲೆ ಪ್ರತಿದಿನ ವಿಠೋಬನಿಗೆ ಮಜ್ಜಿಗೆ ಮತ್ತು ಹಿಟ್ಟು ಕಲಿಸಿ ಅರ್ಪಿಸುತ್ತಿದ್ದಳು. ಅವಳು ವಯೋವೃದ್ಧಳಾಗಿ ಹೆಳವಳಾದಳು. ಆಗ ವಿಠೋಬನು ಸ್ವತಃ ತಾನೇ ಅವಳ ಮನೆಗೆ ಹೋಗಿ ನೆಲೆಸಿದನೆಂಬ ಐತಿಹ್ಯವಿದೆ. ಮೊದಲು ನೆಲಮನೆಯಲ್ಲಿ ವಿಠೋಬನ ಮೂರ್ತಿ ಇತ್ತು. ಈಗ ಅದನ್ನು ಮೇಲೆ ತಂದು ಇಡಲಾಗಿದೆ.

ಪಾಂಡುರಂಗನ ಇತರ ಕ್ಷೇತ್ರಗಳು :

ಅಹೋಬಲ ಕ್ಷೇತ್ರ :

ಇಲ್ಲಿ ಕಮಲದ ಚಿತ್ರವುಳ್ಳ ಪೀಠದ ಮೇಲೆ, ಕಟಿಯಲ್ಲಿ ಕರವಿಟ್ಟು ನಿಂತಿರುವ ವಿಠ್ಠಲನ ಮೂರ್ತಿಯಿದೆ. ಕೈಯಲ್ಲಿ ಶಂಖ ಕಮಲನಾಲಗಳಿವೆ. ಮೇಲೆ ವಿವಿಧ ಆಭರಣಗಳಿದ್ದು ತಲೆಯಮೇಲೆ ಎತ್ತರದ ಟೋಪಿಯಿದ್ದು ಕಲಾ ಕುಸುರಿನಿಂದ ಕೂಡಿದ ಮುಕುಟವಿದೆ. ಇಲ್ಲಿಯ ಮೂರ್ತಿ ಪುರಾತನವಾಗಿದೆ.

ತಿರುಪತಿಯ ವಿಠ್ಠಲ :

ಇಲ್ಲಿಯ ಮೂರ್ತಿ ಸುಂದರವಾಗಿದ್ದು, ಸಿಂಹಾಸನದ ಮೇಲೆ ಇಟ್ಟಿರುವ ಕಮಲದಲ್ಲಿ ನಿಂತದ್ದಾಗಿದೆ. ಕಮಲದಿಂದಾಗಿ ಮೊಣಕಾಲಿನ ತನಕ ಕಾಲು ಕಾಣಿಸುವುದಿಲ್ಲ ಎರಡೂ ಕೈ ಸೊಂಟದ ಮೇಲಿದೆ. ಆದರೆ ಬಲಗೈ ಇಳಿಮುಖವಾಗಿದ್ದು ಅದರಲ್ಲಿ ಕಮಲ ತೆಗೆಯಲಾಗಿದೆ. ತಲೆಗೆ ಮುಕುಟ, ಕೊರಳಲ್ಲಿ ಸರ, ಕಿವಿಯಲ್ಲಿ ಮಕರ ಕುಂಡಲ, ಸೊಂಟಕ್ಕೆ ಉಡದಾರಗಳಿದ್ದು ಮೂರ್ತಿ ಅರೆ ನಗ್ನವಾಗಿದೆ.

ಹಂಪಿ :

ತುಂಗಾ ತೀರದ ವಿಠ್ಠಲನಿಗೆ, ವಿಠ್ಠಲೇಶ್ವರನೆಂಬ ಉಲ್ಲೇಖವಿದೆ. ಹಂಪಿಯ ವಿಠ್ಠಲೇಶ್ವರನು ವಿಷ್ಣು ಕೃಷ್ಣ ರೂಪದವನೇ ಆಗಿದ್ದನೆಂಬುವುದು ಹಲವು ಪುರಾವೆಗಳಿಂದ ಸಿದ್ಧಗೊಂಡಿದೆ.

ಮುಳಬಾಗಿಲು :

ಈ ಕ್ಷೇತ್ರದ ವಿಠ್ಠಲನು ನಾರಾಯಣಸ್ವಾಮಿಯಾಗಿದ್ದಾನೆ. ಈ ವೈಷ್ಣವೀ ಮುದ್ರೆಯನ್ನು ಪಡೆದು ಕಳೆದ ನಾಲ್ಕು ಶತಕಗಳಿಂದ ವೈಭವದಿಂದ ಮೆರೆಯುತ್ತಿದ್ದಾನೆ.

ಸೋಗಾನೆ :

ಶಿವಮೊಗ್ಗಾ ಜಿಲ್ಲೆಯ ಸೋಗಾನೆ ವಿಠ್ಠಲೇಶ್ವರನ ಕ್ಷೇತ್ರವಾಗಿದೆ. ವೀರ ಬಲ್ಲಾಳನೆಂಬ ಹೊಯ್ಸಳ ವಂಶದ ರಾಜನ ಕ್ರಿ.ಶ. ೧೨೧೬ ಕಾಲದ ದಾನ ಲೇಖವಿದೆ. ಇಲ್ಲಿ ವಿಠ್ಠಲನಿಗೆ ವಿಠ್ಠಲೇಶ ಎಂಬ ಈಶ ಪದಾಂತ ಹೆಸರಿದ್ದು ಈತನು ವಿಷ್ಣುವಾಗಿದ್ದಾನೆ ಎಂದು ಹೇಳಲಾಗಿದೆ. ಆದರೆ ಇಂದು ಈ ದೇವಾಲಯ ಸಂಪೂರ್ಣ ನಷ್ಟಗೊಂಡಿದೆ.

ಹರಣಹಳ್ಳಿ :

ಇಲ್ಲಿಯ ವಿಠ್ಠಲೇಶನೂ ವಿಷ್ಣು ಆಗಿದ್ದಾನೆ. ಕರ್ನಾಟಕದ ಅರಸೀಕೆರೆ ತಾಲೂಕಿನ ಹರಣ ಹಳ್ಳಿಯಲ್ಲಿ ಕೇಶವ ಮಂದಿರದ ಸನಿಹದ ಶಿಲಾಲೇಖದಲ್ಲಿ ವಿಷ್ಣೋಃ ಶ್ರೀ ವಿಠ್ಠಲೇಶಸ್ಯ ಸನ್ನಿಧೌ ಮುಕ್ತಿದಾಯಿನಿ.

ಚಿತಕುಂಟಾ :

ಕರ್ನೂಲ ಜಿಲ್ಲೆಯಲ್ಲಿ ಚಿತಕುಂಟಾ ಎಂಬ ಹೆಸರಿನ ಎರಡು ಊರುಗಳಿವೆ. ಒಂದು ಎಂ. ಚಿತಕುಂಟಾ, ಮತ್ತು ಇನ್ನೊಂದು ವೆಂಕಟೇಶ್ವರನ ಚಿತಕುಂಟಾ. ಎಂ. ಚಿತಕುಂಟಾದಲ್ಲಿ ನಾಗೇಶ್ವರನ ಮಂದಿರವಿದ್ದು, ವೆಂಕಟೇಶ್ವರನ ಚಿತಕುಂಟಾದಲ್ಲಿ ವಿಠ್ಠಲೇಶ್ವರನ ಮಂದಿರವಿದೆ. ಇದನ್ನು ಪಾಂಡುರಂಗ ಸ್ವಾಮಿಯ ಮಂದಿರ ಎಂದು ಗುರುತಿಸಲಾಗುತ್ತದೆ. ಭವ್ಯ ಮತ್ತು ಎತ್ತರವಾದ ಮಂದಿರವಿದೆ. ಮಹಾದ್ವಾರದಿಂದ ಒಳಗೆ ಹೋದರೆ ಎರಡೂ ಕಡೆಗೆ ಕುಸುರಿ ಕಂಬಗಳಿವೆ. ಒಳಗೆ ಒಂದು ಬದಿಗೆ ಶಕೆ ೧೫೦೬ರ ಶಿಲಾಲೇಖವಿದೆ. ಮುಖ ಮಂಟಪದ ಎದುರು ಗರುಡವಿದೆ. ಗರ್ಭಗೃಹದ ಹೊರಭಾಗದಲ್ಲಿ ಚತುರ್ಭುಜ ದ್ವಾರಪಾಲಕರಿದ್ದಾರೆ. ಮಂಟಪದ ಬಲಬದಿಗೆ ಎರಡು ಉತ್ಸವ ಮೂರ್ತಿಗಳಿದ್ದು ಎರಡರಲ್ಲೂ ಶ್ರೀದೇವಿ, ಭೂದೇವಿ

ಸಹಿತ ವಿಠ್ಠಲನದಾಗಿವೆ. ಬಲಗೈಯಲ್ಲಿ ವರಮುದ್ರೆಯಿದ್ದು, ಎಡಗೈ ಶಂಖಸಹಿತ ವಾಗಿದ್ದು ಸೊಂಟದ ಮೇಲಿದೆ. ಉತ್ಸವಮೂರ್ತಿ ವಿಠ್ಠಲನದಾಗಿದ್ದರೂ ಗರ್ಭಗೃಹದ ಮೂರ್ತಿ ಮಾತ್ರ ಎಡಗಾಲು ಮಡಚಿ, ಬಲಗಾಲು ಕೆಳಗೆ ಬಿಟ್ಟು ಕುಳಿತ ಚತುರ್ಭುಜ ವಿಷ್ಣುವಿನದಾಗಿದೆ.

ವಿಜಯ ವಿಠ್ಠಲ ಹಂಪಿ :

ವಿಜಯನಗರದ ವಿಠ್ಠಲಸ್ವಾಮಿ ಮಂದಿರದಲ್ಲಿ ಒಂಬತ್ತು ಶಿಲಾಲೇಖಗಳಿವೆ. ಮೂರು ಕೃಷ್ಣದೇವರಾಯನ ಕಾಲ, ಒಂದು ಅಚ್ಯುತರಾಯನ ಕಾಲ ಮತ್ತು ಉಳಿದ ಐದು ಶಿಲಾಲೇಖಗಳು ಸದಾಶಿವರಾಯನ ಕಾಲದ್ದಾಗಿವೆ. ಚಿನ್ನಾದೇವಿ, ತಿರುಮಲಾದೇವಿ ರಾಣಿಯರು ದೇವರಿಗೆ ಭೂದಾನ ಮಾಡಿದ ಮತ್ತು ಗೋಪುರ ಕಟ್ಟಿಸಿದ ದಾಖಲೆಗಳಿವೆ. ಅನ್ನಮಾಚಾರ್ಯರು ವಿಠ್ಠಲಪರ ರಚಿಸಿದ ಗೀತೆಗಳಲ್ಲಿ ವಿಜಯನಗರದ ವಿಠ್ಠಲ ಮಂದಿರದ ದೇವರ ಸ್ನಾನಮಹೋತ್ಸವ, ರಥ ಮಹೋತ್ಸವ ಮತ್ತು ವನಭೋಜನ ಉತ್ಸವಗಳ ಉಲ್ಲೇಖವಿದೆ. ಇಲ್ಲಿಯ ವಿಠ್ಠಲ ರುಕ್ಮಿಣಿಯರ ಮೂರ್ತಿಗಳು ವೆಂಕಟಾಚಲದಿಂದ ಬಂದಿವೆ ಎಂದು ಹೇಳುತ್ತಾರೆ.

ಮಾಢೆ :

ಸೋಲಾಪುರ ಜಿಲ್ಲೆಯ ಮಾಢೆ ಎಂಬ ಊರಲ್ಲಿ ವಿಠ್ಠಲನ ಮಂದಿರವಿದೆ. ರಂಭಾಜಿ ನಿಂಬಾಳಕರ ಕಟ್ಟಿಸಿದ ವಾಡೆಯಲ್ಲಿ ವಿಠ್ಠಲನ ಮಂದಿರವಿದೆ. ಇಲ್ಲಿಯ ಮೂರ್ತಿಯ ವಕ್ಷಸ್ಥಲದ ಮೇಲೆ ವಿಠ್ಠಲಾಯ ನಮ: ಎಂಬ ಷಡಾಕ್ಷರ ಮಂತ್ರವನ್ನು ಕೆತ್ತಲಾಗಿದೆ. ರಾಜವಾಡೆಯವರ ಪ್ರಕಾರ ಕ್ರಿ.ಶ. ೧೬೫೯ರಲ್ಲಿ ಅಫಝುಲಖಾನನಿಂದ ಗಂಡಾಂತರ ಒದಗಿದಾಗ ಅರ್ಚಕರು ಪಂಢರಪುರದ ಮೂರ್ತಿಯನ್ನು ಇಲ್ಲಿಗೆ ತಂದಿದ್ದರು. ಅಫಝುಲಖಾನನ ವಧೆಯ ನಂತರ ಮತ್ತೆ ಮೂರ್ತಿಯನ್ನು ಪಂಢರಪುರಕ್ಕೆ ಒಯ್ಯಲಾಯಿತು. ಆದರೆ ಆ ಗಂಡಾಂತರದ ಸ್ಮರಣಾರ್ಥವಾಗಿ ಇಲ್ಲಿ ಒಂದು ಸ್ವತಂತ್ರ ದೇವಾಲಯ ಮತ್ತು ವಿಠ್ಠಲ ಮೂರ್ತಿಯನ್ನು ಸ್ಥಾಪಿಸಲಾಯಿತು. ಇಲ್ಲಿಯ ಈಗಿನ ಮೂರ್ತಿಯು ಪಂಢರಪುರದ ಆದ್ಯ ವಿಠ್ಠಲ ಮೂರ್ತಿಯ ಪ್ರತಿಕೃತಿಯಾಗಿದೆ.

ಚಿಲಕಲಪುಡಿ :

ಮಚಲೀಪಟ್ಟಣದಿಂದ ೨ ಕಿ.ಮಿ. ಅಂತರದಲ್ಲಿ ಚಿಲಕಲಪುಡಿ ಇದೆ. ಇಲ್ಲಿ ಸ್ಥಾಪಿಸಲಾದ ವಿಠ್ಠಲ ಮೂರ್ತಿಯು ಪಂಢರಪುರದಂತೆಯೇ ಇದೆ. ಲೋಕಪ್ರಿಯತೆಯಿಂದ ಇದು ಪ್ರತಿ ಪಂಢರಪುರ ಎಂದು ಕರೆಯಲ್ಪಡುತ್ತದೆ. ಇಲ್ಲಿಯೂ ಮೂರ್ತಿಯ ಚರಣಸ್ಪರ್ಶ ಮಾಡಬಹುದಾಗಿದೆ.

ಟಾಕಳಿಭಾನ :

ಅಹಮ್ಮದನಗರ ಜಿಲ್ಲೆಯ ಟಾಕಳಿಭಾನ ಎಂಬುದು ವಿಠ್ಠಲನ ಸ್ಥಾನವಾಗಿದೆ. ಇದು ಭಾನನೆಂಬ ಸ್ಥಾನಿಕ ರಾಜನ ರಾಜಧಾನಿಯಾಗಿತ್ತು. ವಿಠ್ಠಲ ಈತನ ಕುಲದೈವವಾಗಿತ್ತು ಎಂಬ ಮಾಹಿತಿಯನ್ನು ಜೋಶಿ ಅವರು ನೀಡಿದ್ದಾರೆ. ಈ ವಿಠ್ಠಲ ಮಂದಿರವು ಯಾದವ ಕಾಲದ್ದಾಗಿದೆ, ಯಾದವ ಕಾಲದ ಮಂದಿರದ ಹಲವು ಶಿಲ್ಪಗಳು ಇಲ್ಲಿ ಸಿಗುತ್ತವೆ. ಇಲ್ಲಿಯ ಮೂರ್ತಿಯು ವಿಷ್ಣುಸ್ವರೂಪಿಯಾಗಿದ್ದು ಅದಕ್ಕೆ ಮೀಸೆಯನ್ನುಕೊರೆಯಲಾಗಿದೆ. ಬೆಳ್ಳಿಯ ಕಣ್ಣು ಜೋಡಿಸಲಾಗಿದೆ. ಇದು ಅಭಿಜಾತ ಶಿಲ್ಪವಾಗಿರದೆ ಲೋಕ ಶಿಲ್ಪವಾಗಿದೆ. ವಿಠ್ಠಲನ ಮೂರ್ತಿಯು ಚತುರ್ಭುಜವಾಗಿದ್ದು ಮಸ್ತಕದ ಮೇಲೆ ಕೆತ್ತಿದ ಪೀಠಸಹಿತ ಶಿವಲಿಂಗವಿದೆ. ಇಲ್ಲಿಯ ಮೂರ್ತಿ ಮತ್ತು ಉಳಿದ ಮೂರ್ತಿಗಳನ್ನು ನೋಡಿದಾಗ ತಿಳಿದು ಬರುವ ವಿಷಯವೆಂದರೆ ಭಕ್ತರು ವಿಠ್ಠಲನ ಮೂರ್ತಿಯನ್ನು ಒಮ್ಮೆ ದ್ವಿಭುಜ ವಿಷ್ಣುವಿನ ರೂಪದಲ್ಲಿ, ಇನ್ನೊಮ್ಮೆ ಚತುರ್ಭುಜ ವಿಷ್ಣುವಿನ ರೂಪದಲ್ಲಿ, ಮತ್ತೊಮ್ಮೆ ಗೋಪಾಲ ಕೃಷ್ಣನ ರೂಪದಲ್ಲಿ ನಿರ್ಮಿಸಿದ್ದು ಕಂಡು ಬರುತ್ತದೆ. ಆಯುಧ, ಲಾಂಛನಗಳಲ್ಲಿಯೂ ವಿವಿಧತೆ ಇದೆ. ಚೌಕೋನ ಪಾದಪೀಠದ ಮೇಲೆ ಸಮಚರಣ ರೂಪದಲ್ಲಿ ನಿಂತ ಭಂಗಿಯು ಬಹುಸಂಖ್ಯೆಯಲ್ಲಿ ಕಾಣಿಸಿದರೆ, ಅಪರೂಪಕ್ಕೆ ಕಮಲವು ಮೊಣಕಾಲತನಕ ಮುಚ್ಚಿರುವ ಭಂಗಿಯೂ ಕಾಣಿಸುತ್ತದೆ. ಕಟಿನ್ಯಸ್ತಕರ ಸ್ಥಿತಿಯ ವಿಠ್ಠಲನ ಲಕ್ಷಣ ಬಿಟ್ಟರೆ, ವಿಠ್ಠಲನ ವಿಷಯದಲ್ಲಿ ಪ್ರಮಾಣೀಕರಣದ ಪ್ರಕ್ರಿಯೆಯು ಯಾದವ ಕಾಲದಲ್ಲಿ ಪೂರ್ಣಗೊಂಡಿರಲಿಲ್ಲ. ದಕ್ಷಿಣದ ಈ ಸ್ಥಳೀಯ ದೇವತೆಯ ಮೇಲೆ ವಿಷ್ಣು ಕೃಷ್ಣ ರೂಪದ ಆರೋಪಣ ಮಾಡುವ ಪ್ರಕ್ರಿಯೆಯಲ್ಲಿ ಕಟ್ಟಾ ಸಂಪ್ರದಾಯಕ್ಕಿಂತ ಉದಾರ, ಸಮನ್ವಯಶೀಲ ಪ್ರಭಾವವು ಅಧಿಕವಾಗಿತ್ತು ಎಂಬುದಕ್ಕೆಈ ಟಾಕಳೀಭಾನ ವಿಠ್ಠಲನ ಮೂರ್ತಿಯು ಸಾಕ್ಷಿಯಾಗಿದೆ.

ಭಟ್ಟಿಪ್ರೋಲು :

ಇಲ್ಲಿ ವಿಠ್ಠಲೇಶ್ವರನ ಪುರಾತನ ಮಂದಿರವಿದೆ. ಆದರೆ ಈ ವರೆಗೆ ವಿವರಿಸಿದ ಸ್ಥಳಗಳಂತೆ, ಅದು ವಿಷ್ಣುವಿನ ಸ್ಥಾನವಾಗಿರದೆ ಶಿವ ಸ್ಥಾನವಾಗಿದೆ. ಇದುವರೆಗೆ ಉಪಲಬ್ಧವಿದ್ದ ವಿಠ್ಠಲೇಶ್ವರ ಮಂದಿರಗಳಲ್ಲಿ ಇದು ಅತ್ಯಂತ ಪ್ರಾಚೀನವಾದದ್ದಾಗಿದೆ.

ಲೇಪಾಕ್ಷಿ :

ಇಲ್ಲಿ ವೀರಭದ್ರನ ದೇವಸ್ಥಾನವಿದೆ. ವಿಠ್ಠಲೇಶ್ವರ–ವೀರೇಶ್ವರ ಎಂಬ ಜೋಡಿ ದೇವರ ಕ್ಷೇತ್ರವಾಗಿದೆ. ಇಲ್ಲಿಯ ವೀರಭದ್ರನು ವಿಠ್ಠಲನ ಶೈವೀಕರಣದ ಉದಾಹರಣೆ ಎಂದು ಮಾಣಿಕರಾವ ಧನಪಲವಾರ ಅವರು ವಿಠ್ಠಲ ಮ್ಹಣಜೆ ಶಿವನ ಎಂಬ ಲೇಖನದಲ್ಲಿ

ಉಲ್ಲೇಖಿಸಿದ್ದಾರೆ. ವಿಠ್ಠಲನು ಶಿವ, ವೀರಭದ್ರ ರೂಪದಲ್ಲೂ ಕೆಲವೆಡೆ ಪೂಜಿಸಲ್ಪಡುತ್ತಾನೆ. ಇವನನ್ನು ವಿಠ್ಠಲೇಶ್ವರ ಎಂದು ಬೋಧಿಸಲಾಗಿದೆ. ಇದುವರೆಗೆ ವಿವರಿಸಿದ ವಿಠ್ಠಲ ಕ್ಷೇತ್ರಗಳಲ್ಲಿ ಕೆಲವು ವಿಷ್ಣುವಿನ ದೇವಸ್ಥಾನಗಳಿದ್ದರೆ, ಕೆಲವು ಶೈವ ಮಂದಿರಗಳಾಗಿವೆ. ಆದರೂ ಇವು ವಿಠ್ಠಲನ ಕ್ಷೇತ್ರಗಳೆಂದೇ ಪ್ರಸಿದ್ಧಿ ಪಡೆದಿರುವುದು ಗಮನಾರ್ಹವಾಗಿದೆ. ವಿಠ್ಠಲನ ಕ್ಷೇತ್ರಗಳು ಹರಿ-ಹರ ಐಕ್ಯಕ್ಕೆ ಮಾದರಿಯಾಗಿವೆ.

ಅಧ್ಯಾಯ ೪
ಕರ್ನಾಟಕದ ಧಾರ್ಮಿಕ ನಕ್ಷೆ

ಅಧ್ಯಾಯ – ೪

ಕರ್ನಾಟಕದ ಧಾರ್ಮಿಕ ನಕ್ಷೆ

ಕೊಲ್ಹಾಪುರವು ಮಹಾಲಕ್ಷ್ಮಿಯ ಸ್ಥಾನವಿದ್ದುದರಿಂದ ಮಹಾರಾಷ್ಟ್ರದ ಪುಣ್ಯಕ್ಷೇತ್ರವೆಂದು ಪ್ರಖ್ಯಾತಿ ಪಡೆದಿದೆ. ಈ ಕ್ಷೇತ್ರವು ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಗಡಿ ಪ್ರದೇಶದಲ್ಲಿದೆ. ಈ ಭೌಗೋಲಿಕ ಸಂಬಂಧದಿಂದ ಹಾಗೂ ಕರ್ನಾಟಕದ ಅರಸು ಮನೆತನಗಳ ಆಡಳಿತಕ್ಕೆ ಈ ಪ್ರದೇಶ ಒಳಗಾಗಿದ್ದುದರಿಂದ ಸಾವಿರಾರು ವರ್ಷಗಳ ಹಿಂದಿನಿಂದಲೂ ಕರ್ನಾಟಕದಲ್ಲಿ ಮಹಾಲಕ್ಷ್ಮಿಯ ಭಕ್ತಿ ಪ್ರಸಾರವಾಗಿರುವುದು ಕಂಡು ಬರುತ್ತದೆ. ದಕ್ಷಿಣ ಭಾರತದ ಅನೇಕ ಕ್ಷೇತ್ರಗಳಿಗೆ 'ದಕ್ಷಿಣ ಕಾಶಿ' ಎಂದು ಗೌರವಿಸಲಾಗುತ್ತಿದ್ದರೂ ಕೊಲ್ಹಾಪುರದ ಖ್ಯಾತಿ ಮಾತ್ರ ಅನನ್ಯವಾಗಿದೆ.

ಕೊಲ್ಹಾಪುರದ ಮಹಾಲಕ್ಷ್ಮಿ ಪರಂಪರೆ :

ಕೊಲ್ಹಾಪುರ ಕ್ಷೇತ್ರದಲ್ಲಿಯ ಮಹಾಲಕ್ಷ್ಮಿಯು ಲಕ್ಷ್ಮಿ ಆಗಿದ್ದಳೊ ಅಥವಾ ಪಾರ್ವತಿ ಆಗಿದ್ದಳೊ? ಅವಳು ಬ್ರಹ್ಮ-ವಿಷ್ಣು-ಮಹೇಶರ ಜನನಿಯಾಗಿದ್ದಳೊ? ಅಥವಾ ಅವರೇ ತಮ್ಮಲ್ಲಿಯ ಶಕ್ತಿ ತತ್ವದಿಂದ ತ್ರಿರೂಪಾತ್ಮಕ ದೇವಿಯನ್ನು ನಿರ್ಮಿಸಿದ್ದಾರೊ? ಇವುಗಳ ಬಗ್ಗೆ ಹಲವಾರು ಭಿನ್ನಾಭಿಪ್ರಾಯಗಳಿವೆ. ಆಗಾಗ ಈ ಧೋರಣೆಗಳಲ್ಲಿ ಸಂಕರವೂ ನಡೆದಿದೆ. ಇದು ಶೈವ ಕ್ಷೇತ್ರವೊ ಇಲ್ಲವೆ ವೈಷ್ಣವ ಕ್ಷೇತ್ರವೊ? ಇಲ್ಲಿಯ ಆದಿಶಕ್ತಿಯ ಸಹಚರನು ಶಿವನೊ ಅಥವಾ ವಿಷ್ಣುವೊ? ಈ ವಿಷಯದಲ್ಲಿಯೂ ಭಕ್ತ ಮತ್ತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಸತ್ಯದ ಸಂಗತಿಯೆಂದರೆ ಅವಳು ಮೂರೂ ದೇವತೆಗಳ ಜನನಿಯಾಗಿದ್ದಾಳೆ. ಮೂರು ರೂಪದಿಂದ ದೇವತ್ರಯರ ಸಹಚಾರಿಣಿಯಾಗಿದ್ದಾಳೆ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಸಾರ್ವಭೌಮತ್ವ ಪಡೆದ ಆದಿಶಕ್ತಿ ಇವಳೇ ಆಗಿದ್ದಾಳೆ. ಸ್ಥಳ ಪುರಾಣಕಾರನು ವಿಷ್ಣುಪಾರಮ್ಯದಿಂದ ಕರವೀರ ಕ್ಷೇತ್ರದ ಮಹಿಮೆ ಹೇಳುವಾಗ ಸಮನ್ವಯ ದೃಷ್ಟಿಯಿಂದ ಉಲ್ಲೇಖಿಸುತ್ತಾನೆ. ಕರವೀರ ಕ್ಷೇತ್ರದಲ್ಲಿ ಜಲವೆಲ್ಲ ಶಂಭು ರೂಪ, ಪಾಷಾಣವೆಲ್ಲ ವಿಷ್ಣುರೂಪ, ಮರಳಿನ ಕಣ ಕಣವು ಋಷಿ ಮುನಿಗಳ ರೂಪ, ಹಾಗೂ ಗಿಡ ಮರಗಳೆಲ್ಲವೂ ದೇವತೆಗಳ ರೂಪವಾಗಿವೆ. ಮೊದಲು ವಿಷ್ಣು ಕ್ಷೇತ್ರವಾಗಿದ್ದ ಕರವೀರ ಕ್ಷೇತ್ರವು ನಂತರ ಮಹಾಲಕ್ಷ್ಮಿಯ ಆಗಮನದಿಂದ ಶಕ್ತಿ ಸ್ಥಳವಾಯಿತು. ಭಕ್ತರಿಗೆ ಭಕ್ತಿ ಮತ್ತು ಮುಕ್ತಿ ಪ್ರದಾನ ಮಾಡುವ ಈ ಕ್ಷೇತ್ರವು ವಾರಾಣಸಿಗಿಂತ ಶ್ರೇಷ್ಠವೆನಿಸಿದೆ.

"ದೇವಿ ಭಾಗವತ"ವೆಂಬ ಮಹಾ ಪುರಾಣದಲ್ಲಿಯ ಶಕ್ತಿಪೀಠಗಳ ನಾಮಾವಳಿಯಲ್ಲಿ ಕೊಲ್ಹಾಪುರಕ್ಕೆ ಮೊದಲಸ್ಥಾನ ನೀಡಲಾಗಿದೆ.[೨] ದೇವಿ ಭಾಗವತದ ೭ ನೆಯ ಸ್ಕಂದದಲ್ಲಿ ೩೮ನೆಯ ಅಧ್ಯಾಯದ ಪ್ರಾರಂಭದಲ್ಲಿ ಹಿಮಾಲಯ ಗಿರಿರಾಜನು ದೇವಿಗೆ ಪೃಥ್ವಿಯಲ್ಲಿ ನಿನಗೆ ಪ್ರಿಯವಾಗಿರುವ ಯಾವ ಸ್ಥಾನವು ದರ್ಶನೀಯವಾಗಿದೆ ಮತ್ತು ನಿನಗೆ ಪ್ರಿಯವಾಗಿರುವ ವೃತ ಮತ್ತು ಉತ್ಸವ ಯಾವುದು? ಎಂದಿದ್ದಕ್ಕೆ ದೇವಿಯು,

"ಕೋಲಾಪುರಂ ಮಹಾಸ್ಥಾನಂ ಯತ್ರ ಲಕ್ಷ್ಮಿ: ಸದಾಸ್ಥಿತಾ ।

ಮಾಥಃಪುರಂ ದ್ವಿತೀಯಂ ಚ ರೇಣುಕಾಧಿಷ್ಠಿತಂ ಪರಮ್ ।

ತುಳಜಾಪುರಂತೃತೀಯಂ ಸ್ಯಾತ್ ಸಪ್ತಶೃಂಗಂ ತಥೈವಚ ।

ಹಿಂಗುಲಾಯಾ ಮಹಾಸ್ಥಾನಂ ಜ್ವಾಲಾಮುಖ್ಯಾಸ್ತಥೈವ ಚ ।"(ದೇವಿ ಭಾಗವತ, ಮಹಾಪುರಾಣ, ಪು. ೭೮, ೧೯೬೨)

ಎಲ್ಲಿ ಲಕ್ಷ್ಮಿಯು ಸದೈವ ವಾಸವಾಗಿದ್ದಾಳೆಯೋ ಆ ಕೊಲ್ಹಾಪುರ ಇದು ನನ್ನ ಆದ್ಯ ಪೀಠವಾಗಿದೆ. ಎರಡನೆಯ ಪೀಠ ರೇಣುಕೆಯ ಅಧಿದೇವತೆಯಾಗಿರುವ ಮಾಹೂರ, ಮೂರನೆಯದು ತುಳಜಾಪುರ ಮತ್ತು ಅದರ ನಂತರ ಸಪ್ತಶೃಂಗವು ಅರ್ಧಪೀಠ, ಹಿಂಗಲಜಾ ಮತ್ತು ಜ್ವಾಲಾಮುಖಿ ಇತ್ಯಾದಿಗಳು ನನ್ನ ಇತರ ಮಹಾಸ್ಥಾನಗಳಾಗಿವೆ.

ವಿಶೇಷವೆಂದರೆ ಈ ನಾಮಾವಲಿಯಲ್ಲಿ ಭಾರತೀಯ ಖ್ಯಾತಿಯ ಅನೇಕ ದೇವಸ್ಥಾನಗಳ ಉಲ್ಲೇಖವಿದೆ. ಮಹಲಸಾ (ನೇವಾಸೆ), ಚಂದ್ರಿಕಾ (ಹರಿಶ್ಚಂದ್ರಘಡ), ಚಂದ್ರಲಂಬಾ(ಸನ್ನತಿ), ಶಾಕಂಬರಿ (ಬಾದಾಮಿ) ಯೋಗೇಶ್ವರಿ (ಅಂಬಾಪುರಿ), ಮೊದಲಾದ ಮಹಾರಾಷ್ಟ್ರದಲ್ಲಿಯ ಮತ್ತು ಮರಾಠಿ ಜನರಿಗೆ ಪ್ರಿಯವಾಗಿರುವ ಗಡಿ ಪ್ರದೇಶದಲ್ಲಿರುವ ಸ್ಥಾನಗಳನ್ನು ಉಲ್ಲೇಖಿಸಿದ್ದಾನೆ. ನೈಮಿಷಾರಣ್ಯದಲ್ಲಿಯ ಮಹಾಸ್ಥಾನದ ದೇವಿಯು 'ಅಂಗಧಾರಿಣಿ'ಯಾಗಿದ್ದಾಳೆ ಎಂದು ಅವಳ ಮೂರ್ತಿ ವೈಶಿಷ್ಟ್ಯತೆಯನ್ನು ಉಲ್ಲೇಖಿಸುತ್ತಾನೆ. ತುಳಜಾ ಭವಾನಿಯ ಮಸ್ತಕದ ಮೇಲೆ ಶಿವಲಿಂಗವಿದೆ ಎಂಬ ಉಲ್ಲೇಖವು ಶ್ರೀಕರ ಭಾಷ್ಯಾದಿ ಗ್ರಂಥಗಳಲ್ಲಿ ಬಂದಿದೆ.ಕೊಲ್ಹಾಪುರ ಶಕ್ತಿಪೀಠದಲ್ಲಿ ನೆಲೆಸಿರುವ ಮಹಾಲಕ್ಷ್ಮಿಯೂ ತನ್ನ ಮಸ್ತಕದಲ್ಲಿ ಶಿವಲಿಂಗ ಧರಿಸಿರುವ ಮಹಾಶಕ್ತಿಯಾಗಿದ್ದಾಳೆ.

ಬಾರ್ಹಸ್ಪತ್ಯ ಸೂತ್ರಮ್ ಎಂಬ ರಾಜನೀತಿ ವಿಷಯದ ಗ್ರಂಥದಲ್ಲಿ ಎಂಟು ಶಕ್ತಿ ಪೀಠಗಳಲ್ಲಿ ಕೊಲ್ಹಾಪುರ ಕ್ಷೇತ್ರವನ್ನು ಸಮಾವೇಶಗೊಳಿಸಲಾಗಿದೆ. ಈ ಗ್ರಂಥವು ೧೯೨೧ ರಲ್ಲಿ ಲಾಹೋರದಲ್ಲಿಯ 'ಪಂಜಾಬ ಸಂಸ್ಕೃತ ಬುಕ್ ಡಿಪೊ' ಎಂಬ ಪ್ರಕಾಶನ ಸಂಸ್ಥೆಯಿಂದ 'ಪಂಜಾಬ ಸಂಸ್ಕೃತ ಸಿರೀಜ' ಗ್ರಂಥಮಾಲೆಯ ಪ್ರಥಮ ಪುಷ್ಪವೆಂದು ಪ್ರಕಾಶಿತಗೊಂಡಿತು.

ಇಂದು ಲಾಹೋರ ಪಾಕಿಸ್ತಾನದಲ್ಲಿದೆ. ಶಾಕ್ತ ಮಹಾಕ್ಷೇತ್ರದ ಬಗ್ಗೆ ಗ್ರಂಥಕಾರನು ಮೊದಲ ಸೂತ್ರದಲ್ಲಿ ಎಂಟು ಕ್ಷೇತ್ರಗಳನ್ನು ಉಲ್ಲೇಖಿಸಿದ್ದಾನೆ. ಎರಡನೆಯ ಸೂತ್ರದಲ್ಲಿ ಕ್ಷೇತ್ರಗಳ ಹೆಸರನ್ನು ಗ್ರಥಿತಗೊಳಿಸಿದ್ದಾನೆ. ಮೂರು ಮತ್ತು ನಾಲ್ಕನೆಯ ಸೂತ್ರದಲ್ಲಿ ಕ್ಷೇತ್ರಗಳ ಹಿರಿಮೆಯನ್ನು ಹಿರಿಮೆಯನ್ನು ದಾಖಲಿಸಿದ್ದಾನೆ. ಇವು ಮಹತ್ವದ ಕ್ಷೇತ್ರಗಳಾಗಿದ್ದು ಉಪಾಸಕರಿಗೆ ಸರ್ವಸಿದ್ಧಿಕರವಾಗಿವೆ ಎಂದೂ ಹೇಳಿದ್ದಾನೆ. ಈ ಗ್ರಂಥದಲ್ಲಿ ಕೊಲ್ಹಾಪುರಕ್ಕೆ 'ಕೊಲ್ಲ' ಎಂಬ ಸಂಕ್ಷಿಪ್ತ ಸಂಜ್ಞೆಯಿಂದ ಉಲ್ಲೇಖಿಸಿದ್ದಾನೆ. ಮೊದಲ ಶಕ್ತಿಪೀಠವು 'ಒಗ್ಗೀಣ' ಎಂಬ ಹೆಸರಿನಿಂದ ಉಲ್ಲೇಖಗೊಂಡಿದ್ದು ಇದು ಉಡ್ಡಿಯಾನ ದರ ಅಪಭ್ರಂಶವಾಗಿದೆ. ಇಂದು ಈ ಪೀಠ ಭಾರತದಲ್ಲಿರದೆ, ಪಾಕಿಸ್ತಾನದ ಭಾಗವಾಗಿದೆ. ಆದರೆ, ಈಗ ಈ ಪೀಠವು ಅಸ್ತಿತ್ವದಲ್ಲಿದೆಯೋ ಇಲ್ಲವೋ, ತಿಳಿದು ಬಂದಿಲ್ಲ. 'ಬಾರ್ಹಸ್ಪತ್ಯ' ಗ್ರಂಥಕಾರನು ಉಲ್ಲೇಖಿಸಿದ ಎಂಟು ಶಕ್ತಿಪೀಠಗಳು ಹೀಗಿವೆ.

೧) ಉಡ್ಡಿಯಾನ

೨) ಜಲ ಎಂದರೆ ಜಲಂಧರ

೩) ಪೂರ್ಣ ಎಂದರೆ ಪೂರ್ಣಗಿರಿ

೪) ಕಾಮ ಎಂದರೆ ಕಾಮರೂಪ

೫) ಕೊಲ್ಲ ಎಂದರೆ ಕೊಲ್ಹಾಪುರ

೬) ಶ್ರೀಶೈಲ ಭ್ರಮರಾಂಬಿಕೆಯ ಸ್ಥಾನ

೭) ಕಾಂಚಿ ಕಾಮಾಕ್ಷಿಯ ಕ್ಷೇತ್ರ

೮) ಮಹೇಂದ್ರ

ಈ ಪರಿಗಣನೆಯ ನಂತರ ಸೂತ್ರ ೧೨೮ ರಲ್ಲಿ 'ವಿಂಧ್ಯೆ ನಿತ್ಯಂ ವಸತಿ ದುರ್ಗಾ ಮಹಾಕಾಲಿ ಚ' ಎಂದು ವಿಂಧ್ಯವಾಸಿನಿಯ ನಿರ್ದೇಶವಿದೆ. ಕೊಲ್ಹಾಪುರ ಶಕ್ತಿಪೀಠ ಮತ್ತು ಅಲ್ಲಿಯ ಮಹಾಲಕ್ಷ್ಮಿಯ ಕೀರ್ತಿಯು ಕ್ರಿ.ಶ. ೧೧-೧೨ನೆಯ ಶತಕದಲ್ಲಿ ಭಾರತದಲ್ಲಿ ಪಸರಿಸಿತ್ತು ಎಂಬುದಕ್ಕೆ ಒಂದು ಸ್ಪಷ್ಟ ಪ್ರಮಾಣವನ್ನು 'ಬಾರ್ಹಸ್ಪತ್ಯ ಸ್ತೋತ್ರದ ಕರ್ತೃನು ಒದಗಿಸಿ ಕೊಟ್ಟಿದ್ದಾನೆ ಎಂಬುದು ಇದರಿಂದ ತಿಳಿದು ಬರುತ್ತದೆ.

ಮಾರ್ಕಂಡೇಯ ಪುರಾಣದ 'ದೇವಿ ಮಹಾತ್ಮೆ ಪ್ರಕ್ಷಿಪ್ತ' (ಕ್ರಿ.ಶ. ೯೮೮ ರ ಪೂರ್ವದ್ದು) ದೇವಿ ಮಹಾತ್ಮೆಯ 'ಮೂರ್ತಿ ರಹಸ್ಯ ಪ್ರಕ್ಷಿಪ್ತ' (೧೬ನೆಯ ಶತಕ), 'ಮಾನಸಾರ', 'ವಿಶ್ವಕರ್ಮ ಶಾಸ್ತ್ರ' ಮತ್ತು ಅನೇಕ ಸ್ತೋತ್ರಗಳಲ್ಲಿ ಲಕ್ಷ್ಮಿಯ ವರ್ಣನೆಗಳು ಉಲ್ಲೇಖಿತವಾಗಿವೆ. 'ಮಾನಸಾರ'

ಗ್ರಂಥದಲ್ಲಿರುವ ದೇವಿಯ ವರ್ಣನೆಯಿಂದ ಅವಳು ಕೊಲ್ಹಾಪುರದ ಲಕ್ಷ್ಮಿಗಿಂತ ಭಿನ್ನವಾಗಿದಾಳೆ. ಆದರೆ ಅವಳೊಬ್ಬ ಸ್ವತಂತ್ರ ದೇವತೆಯಾಗಿದ್ದಾಳೆ ಎಂದು ತಿಳಿಯಬಹುದಾಗಿದೆ. ಶ್ರೀ ತತ್ವನಿಧಿಯ 'ಚಂಡಿಕಲ್ಪ'ದಲ್ಲಿ ಒಂದು ಮಹಾಲಕ್ಷ್ಮಿಯ ವರ್ಣನೆಯಿದ್ದು ಅವಳು ಅಲ್ಲಿ ಮಹಾಲಕ್ಷ್ಮಿ ಶಬ್ದದಿಂದ ಮಹಿಷಮರ್ದಿನಿಯಾಗಿಯೇ ಅಭಿಪ್ರೇತಗೊಂಡಿದ್ದಾಳೆ ಎಂಬುದು ಖಚಿತವಾಗುತ್ತದೆ. ಇದೇ ಗ್ರಂಥದಲ್ಲಿ ಅಷ್ಟಲಕ್ಷ್ಮಿಯರ ಒಂದು ಸಮೂಹವನ್ನು ಉಲ್ಲೇಖಿಸಲಾಗಿದೆ. ಅದರಲ್ಲಿ ದ್ವಿಭುಜಲಕ್ಷ್ಮಿ, ಗಜಲಕ್ಷ್ಮಿ, ಮಹಾಲಕ್ಷ್ಮಿ, ಶ್ರೀದೇವಿ, ವೀರಲಕ್ಷ್ಮಿ, ದ್ವಿಭುಜ ವೀರಲಕ್ಷ್ಮಿ, ಅಷ್ಟಭುಜ ವೀರಲಕ್ಷ್ಮಿ ಮತ್ತು ಪ್ರಸನ್ನ ಲಕ್ಷ್ಮಿ ಎಂಬ ಹೆಸರುಗಳಿವೆ. ಇವುಗಳಲ್ಲಿ ಮೂರನೆಯವಳು ಮಹಾಲಕ್ಷ್ಮಿಯಾಗಿದ್ದಾಳೆ. ಅಲ್ಲಿರುವ ವರ್ಣನೆಯಿಂದ ಅವಳು ಕೊಲ್ಹಾಪುರದ ಲಕ್ಷ್ಮಿಯನ್ನು ಹೋಲುತ್ತಾಳೆ. ಆದರೆ ಉಳಿದವರ ವಿಷಯದಲ್ಲಿ ವಿಶೇಷವೇನಿಲ್ಲ[1] ಎಂದು ಖರೆಯವರು ವಿವರಿಸಿದ್ದಾರೆ.

'ರೂಪಮಂಡನೆ' ಯಲ್ಲಿಯ ದುರ್ಗತ್ರಯ ವರ್ಗದಲ್ಲಿ ಮತ್ತು 'ರೂಪಾವತಾರ' ಅಥವಾ 'ದೇವತಾಮೂರ್ತಿ ಪ್ರಕರಣ' ಗಳಲ್ಲಿಯ ನವದುರ್ಗಾ ವರ್ಗದಲ್ಲಿ ಒಂದು ಮಹಾಲಕ್ಷ್ಮಿಯ ವರ್ಣನೆ ಇದೆ. ಆದರೆ ಅವಳಿಗೂ ಮಹಾಲಕ್ಷ್ಮಿಗೂ ಸಂಬಂಧವಿರದೆ ಅವಳು ದುರ್ಗೆಯಾಗಿದಾಳೆ. ಇದೇ ದೇವತಾಮೂರ್ತಿ ಪ್ರಕರಣದಲ್ಲಿ, ಹನ್ನೆರಡು ಪ್ರಕಾರಗಳ ಸರಸ್ವತಿಯರನ್ನು ಹೆಸರಿಸಲಾಗಿದೆ. ಅವುಗಳಲ್ಲಿ ಮಹಾಲಕ್ಷ್ಮಿ, ಮಹಾಸರಸ್ವತಿ ಮತ್ತು ಮಹಾಕಾಲಿ ಈ ಮೂರು ದೇವತೆಗಳಿದ್ದರೂ ಅಲ್ಲಿಯ ವರ್ಣನೆಯಿಂದ ಅವು ಸರಸ್ವತಿಯ ಮೂರು ಪ್ರಕಾರಗಳಾಗಿವೆ. 'ದೇವತಾಮೂರ್ತಿ ಪ್ರಕರಣ' ಮತ್ತು 'ತತ್ವನಿಧಿ' ಯಲ್ಲಿಯ ಅಷ್ಟ ಮಾತೃಕೆಗಳಲ್ಲಿ ಮಹಾಲಕ್ಷ್ಮಿಯ ಸಮಾವೇಶವಾಗಿದೆ. ಆದರೆ ಅವಳ ಸ್ವರೂಪವು ತೀರಾ ಬೇರೆಯಾಗಿರುವುದರಿಂದ ಮಹಾಲಕ್ಷ್ಮಿಯ ಜೊತೆಗೆ ಅವಳ ಸಂಬಂಧವಿಲ್ಲವೆಂಬುದು ಖಚಿತವಾಗುತ್ತದೆ. ಅಲ್ಲದೆ ಪ್ರತಿವರುಷ ಆಶ್ವೀಜ ಶುದ್ಧ ಅಷ್ಟಮಿಯಂದು ಬ್ರಾಹ್ಮಣರ ಮನೆಗಳಲ್ಲಿ ಈ ಮಹಾಲಕ್ಷ್ಮಿಯ ಮುಖವಾಡದ ಪೂಜೆ ಮಾಡುವ ಪದ್ಧತಿ ರೂಢಿಯಲ್ಲಿದೆ. ಅವಳ ಸ್ವರೂಪ ಗಮನಿಸಿದರೆ ಅವಳು ಅಷ್ಟ ಭುಜದ 'ಮಹಿಷಮರ್ದಿನಿ' ಎಂಬುದು ಸ್ಪಷ್ಟವಾಗುವುದರಿಂದ ಅವಳನ್ನು ಮಹಾಲಕ್ಷ್ಮಿಯ ಜೊತೆಗೆ ಸೇರಿಸಲಾಗುವುದಿಲ್ಲ[2] ಎಂದು ಖರೆಯವರು ಪ್ರಸ್ತುತ ಪಡಿಸಿದ್ದಾರೆ.

ಅನೇಕ ತಾಮ್ರ ಶಾಸನಗಳು, ಕಾಗದ ಪತ್ರಗಳು, ಮತ್ತು ಗ್ರಂಥಗಳಲ್ಲಿ ಕೊಲ್ಹಾಪುರದ ದೇವಿಗೆ ಮಹಾಲಕ್ಷ್ಮಿ, ಲಕ್ಷ್ಮಿ, ರಮಾ, ಭವಾನಿ, ಹೆಸರುಗಳಿಂದ ಸಂಭೋದಿಸಲಾಗಿದೆ. 'ಅಂಬಾಬಾಯಿ' ಎಂಬ ಹೆಸರು ಕೇವಲ ಜನಸಾಮಾನ್ಯರ ಆಡುಮಾತಿನಲ್ಲಿ ಕೇಳಿಬರುತ್ತದೆ. ದೈನಂದಿನ ವ್ಯವಹಾರದಲ್ಲಿ ಅಂಬಾಬಾಯಿ ಹೆಸರು ಬಳಕೆಯಾಗುತ್ತಿದ್ದರೂ ಯಾವ

ಕಾಗದಪತ್ರಗಳಲ್ಲಿಯೂ ಇದರ ಉಲ್ಲೇಖವಿಲ್ಲದಿರುವುದು ಆಶ್ಚರ್ಯವೆನಿಸುತ್ತದೆ. 'ಭವಾನಿ' ಎಂಬ ಹೆಸರು ಕೇವಲ ಒಂದು ಫಾರ್ಸಿ ಕಾಗದ ಪತ್ರದಲ್ಲಿ ಮಾತ್ರ ದಾಖಲಾಗಿದೆ. 'ಭವಾನಿ' ಹೆಸರನ್ನು ಉದ್ದೇಶಪೂರ್ವಕವಾಗಿ ಬಳಸಲಾಗಿದೆ ಎಂದು ತಿಳಿಯಲು ಸಾಧನಗಳಿಲ್ಲ. ಆದರೆ ಉದ್ದೇಶಪೂರ್ವಕವಾಗಿ ಬಳಸುವುದರ ಅರ್ಥ ಮಹಾಲಕ್ಷ್ಮಿ ಅಂದರೆ 'ಭವಾನಿ' ಅರ್ಥಾತ್ 'ಪಾರ್ವತಿ' ಎಂದಾಗಿದೆ. 'ರಮಾ' ಎಂಬ ಹೆಸರನ್ನು ವಾದಿರಾಜ ಸ್ವಾಮಿಗಳು ಮತ್ತು 'ಲಕ್ಷ್ಮಿ' ಹೆಸರನ್ನು ಪದ್ಮಪುರಾಣಕಾರ ಮತ್ತು ಚೈತನ್ಯ ಪ್ರಭುಗಳು ಬಳಸಿದ್ದಾರೆ. ವಾದಿರಾಜರು ಹಾಗೂ ಚೈತನ್ಯರಿಬ್ಬರೂ ವೈಷ್ಣವ ಸಂಪ್ರದಾಯದವರಿದ್ದುದರಿಂದ ಅವರು ಮಹಾಲಕ್ಷ್ಮಿಗೆ 'ರಮಾ' ಮತ್ತು 'ಲಕ್ಷ್ಮಿ' ಹೆಸರಿನಿಂದ ಸಂಬೋಧಿಸಿರುವುದು ಸ್ವಾಭಾವಿಕವೆನಿಸುತ್ತದೆ. ಪದ್ಮಪುರಾಣದಲ್ಲಿ 'ಲಕ್ಷ್ಮಿ' ಹಾಗೂ 'ಮಹಾಲಕ್ಷ್ಮಿ' ಎರಡೂ ಹೆಸರುಗಳು ಬಳಕೆಯಾಗಿರುವುದರಿಂದ 'ಲಕ್ಷ್ಮಿ' ಹೆಸರಿಗೆ ವಿಶೇಷ ಅರ್ಥವಿರಲಿಕ್ಕಿರಲಿಲ್ಲ. ದಾಖಲೆ ಪತ್ರಗಳಲ್ಲೂ ಮಹಾಲಕ್ಷ್ಮಿಗೆ ಕ್ವಚಿತ್ತಾಗಿ 'ಲಕ್ಷ್ಮಿ' ಎಂದೂ ದಾಖಲಿಸಲಾಗಿದೆ. ಬಹುಶಃ ಮಹಾಲಕ್ಷ್ಮಿ ಹೆಸರು ದೊಡ್ಡದಾಗಿರುವುದರಿಂದ ಬರೆಯಲು ತೊಂದರೆಯಾಗದಿರಲೆಂದು 'ಲಕ್ಷ್ಮಿ' ಎಂದು ಬರೆದಿರಬಹುದಾಗಿದೆ. ಮಹಾಲಕ್ಷ್ಮಿ ಹೆಸರಿನ ಬಗೆಗೆ ಹೇಳುವುದಾದರೆ 'ವಿಷ್ಣು' ವಿಗೆ ಬದಲಾಗಿ 'ಮಹಾವಿಷ್ಣು' ಎಂದು ಕರೆದರೆ ವಿಶೇಷ ವ್ಯತ್ಯಾಸವೆನಿಸುವುದಿಲ್ಲ. ವಿಷ್ಣುವೇ ಮಹಾವಿಷ್ಣುವೆಂದು ಅಭಿಪ್ರೇತವಾಗುತ್ತದೆ. ಹಾಗೆಯೇ ಲಕ್ಷ್ಮಿಯ ಬದಲಾಗಿ ಮಹಾಲಕ್ಷ್ಮಿ ಪದವನ್ನು ಬಳಸಿರಬಹುದು ಎಂದು ತಿಳಿಯಬಹುದಾಗಿದೆ.[೮]

ಮೊದಲನೆಯ ವರ್ಗದಲ್ಲಿ ವಿಶ್ವಕರ್ಮ ಶಾಸ್ತ್ರವು ಮುಖ್ಯವಾಗಿದ್ದು, ಹೇಮಾದ್ರಿ – ರೂಪಾವತಾರ – ರೂಪಮಂಡನ ಈ ಗ್ರಂಥಗಳು ಅದರ ಅನುವಾದವಾಗಿವೆ. ಎರಡನೆಯ ವರ್ಗದಲ್ಲಿ ಮೂರ್ತಿ ರಹಸ್ಯ ಮುಖ್ಯವಾಗಿದ್ದು, ನಿತ್ಯಕರ್ಮ ಸಂಗ್ರಹವು ಇದರ ಅನುಕರಣೆಯಾಗಿದೆ. ಮೊದಲನೆಯ ವರ್ಗದಲ್ಲಿಯ ವರ್ಣನೆಯು ಕೊಲ್ಹಾಪುರದ ಮಹಾಲಕ್ಷ್ಮಿಯದಾಗಿದೆ ಎಂದು ಸ್ಪಷ್ಟವಾಗಿ ಹೇಳಿದ್ದರೂ ಸದ್ಯದ ಮಹಾಲಕ್ಷ್ಮಿಯ ಮೂರ್ತಿ ಮತ್ತು ಗ್ರಂಥದಲ್ಲಿಯ ವರ್ಣನೆಗಳಲ್ಲಿ ಎರಡು ದೊಡ್ಡ ವ್ಯತ್ಯಾಸಗಳಿವೆ. ಸದ್ಯದ ಮಹಾಲಕ್ಷ್ಮಿಯ ಬಲಗೈಯಲ್ಲಿ ಮಾದಲ ಹಣ್ಣು ಮತ್ತು ಎಡಗೈಯಲ್ಲಿ ಪಾನ ಪಾತ್ರೆ ಇವೆ. ಆದರೆ ವಿಶ್ವಕರ್ಮ ಶಾಸ್ತ್ರದ ವರ್ಣನೆಯ ಪ್ರಕಾರ ಬಲಗೈಯಲ್ಲಿ ಪಾನ ಪಾತ್ರೆ ಮತ್ತು ಎಡಗೈಯಲ್ಲಿ ಮಾದಲ ಹಣ್ಣು ಇವೆ. ಕೇವಲ ಆಯುಧ ಧಾರಣೆಯ ಕ್ರಮವಷ್ಟೇ ಅಲ್ಲ, ಆಯುಧಗಳೂ ಬದಲಾಗಿವೆ. ಹಾಗೆಯೇ ದೇವಿಯ ಮಸ್ತಕದ ಮೇಲೆ ಲಿಂಗವಿರುವುದೆಂಬ ದಾಖಲೆಯಿವೆ. ಆದರೆ ರೂಪಾವತಾರ ಮಂಡನಕಾರನು ತನ್ನ ಗ್ರಂಥಗಳಲ್ಲಿ ಅವುಗಳನ್ನು ವರ್ಜ್ಯಗೊಳಿಸಿದ್ದಾನೆ. ವಿಶ್ವಕರ್ಮ ಶಾಸ್ತ್ರಕಾರನು

ಮಹಾಲಕ್ಷ್ಮಿಯ ಮೂರ್ತಿಯನ್ನು ಎದುರಿಟ್ಟುಕೊಂಡು ವರ್ಣಿಸಿದ್ದಾನೆ ಎಂದು ತಿಳಿದರೆ ಅಂದಿನ ಮೂರ್ತಿ ಮತ್ತು ಇಂದಿನ ಮೂರ್ತಿ ಬೇರೆಯಾಗಿವೆಯೆಂದು ಹೇಳಬೇಕಾಗುತ್ತದೆ[೧೪]. ನಿತ್ಯಕರ್ಮ ಸಂಗ್ರಹದಲ್ಲಿಯ ವರ್ಣನೆ ಕೊಲ್ಹಾಪುರದ ಮಹಾಲಕ್ಷ್ಮಿಯದಾಗಿದೆ. ಆಯುಧ ವರ್ಣನೆಯಲ್ಲಿ ಕ್ರಮವಿದೆ ಮತ್ತು ಅದು ದಕ್ಷಿಣಾಧಃಕರ ಎಂದಿದೆ. ಈ ಮೂರು ವಿಷಯಗಳ ಮಾನ್ಯತೆಯಿಂದ ಕೊಲ್ಹಾಪುರದ ಸದ್ಯದ ಮೂರ್ತಿಯೊಂದಿಗೆ ಸಾಮ್ಯವಿದೆ ಎಂಬುದರಲ್ಲಿ ಅನುಮಾನವಿಲ್ಲ. ಎಂದು ಖರೆಯವರು ಸಧ್ಯದ ಮೂರ್ತಿಯೊಂದಿಗಿರುವ ಸಾಮ್ಯವನ್ನು ಖಚಿತಪಡಿಸಿದ್ದಾರೆ.[೧೫]

ಮೇಲಿನ ಎರಡೂ ವರ್ಗದ ಮೂರ್ತಿಗಳ ವರ್ಣನೆಯಲ್ಲಿ ಇಲ್ಲದಿರುವ ಒಂದು ವಿಶೇಷವೆಂದರೆ ಮಹಾಲಕ್ಷ್ಮಿ ಮೂರ್ತಿಯ ಹಿಂದೆ ತೋರಿಸಿರುವ ಸಮ್ಮುಖದ ಸಿಂಹ. ಈ ಸಿಂಹದ ವರ್ಣನೆ ಯಾವ ಗ್ರಂಥದಲ್ಲಿಯೂ ಪ್ರಸ್ತುತವಾಗಿಲ್ಲ. ಹೀಗಾಗಿ ಸಿಂಹದ ಅಸ್ತಿತ್ವವನ್ನು ಒಪ್ಪಬೇಕೋ ಬೇಡವೋ ಎಂಬ ಪ್ರಶ್ನೆ ಏಳುತ್ತದೆ. ಶಿರೂರಿನಲ್ಲಿ ದೊರೆತಿರುವ ಎರಡು ಶಿಲಾಲೇಖನಗಳಿಂದ ೧೦ ನೆಯ ಶತಮಾನದಲ್ಲಿ ಮಹಾಲಕ್ಷ್ಮಿಯು ಸಿಂಹವಾಹಿನಿಯಾಗಿದ್ದಳೆಂಬ ಕಲ್ಪನೆ ರೂಢಿಯಲ್ಲಿತ್ತು ಎಂಬುದು ಸ್ಪಷ್ಟವಾಗುತ್ತದೆ. ಪೇಶ್ವೆಕಾಲದ ಜಮಾ ಖರ್ಚಿನ ಲೆಕ್ಕದ ದಾಖಲೆಯಲ್ಲಿ ಮಹಾಲಕ್ಷ್ಮಿಯ ಸಿಂಹದ ದುರಸ್ತಿಗಾಗಿ ಖರ್ಚು ಮಾಡಿರುವ ಉಲ್ಲೇಖವಿದೆ. ಇದರಿಂದ ಪೇಶ್ವೆ ಕಾಲದಲ್ಲಿಯೂ ಮಹಾಲಕ್ಷ್ಮಿಯ ವಾಹನವು ಗರುಡವಾಗಿರದೆ ಸಿಂಹವೆಂಬ ಕಲ್ಪನೆಯೇ ಅಂಕುರಿಸಿತ್ತು ಎಂಬುದು ಖಚಿತವಾಗುತ್ತದೆ. ಗರುಡಮಂಟಪದಲ್ಲಿ ಗರುಡವಿರುವುದು ನಿಜ. ಆದರೆ ಆ ಮಂಟಪ ಮತ್ತು ಗರುಡ ಎರಡೂ ಇತ್ತೀಚಿನದಾಗಿವೆ. ಇವುಗಳಿಗೆ ಪರಂಪರೆಯ ಆಧಾರವಿಲ್ಲ. ಖರೆಯವರ ಅಭಿಪ್ರಾಯದ ಪ್ರಕಾರ ಮಹಾಲಕ್ಷ್ಮಿಯು ನಿಶ್ಚಿತವಾಗಿಯೂ ಶೈವ ಪಂಥದ ದೇವತೆಯಾಗಿದ್ದಾಳೆ. ಆದರೆ ವೈಷ್ಣವರು ಅವಳು ತಮ್ಮ ಪಂಥದ ದೇವತೆಯೇ ಎಂದು ಅರ್ಥೈಸಿದರು. ಪದ್ಮಪುರಾಣ, ದೇವಿ ಭಾಗವತದ ನಿರ್ದೇಶ, ವಾದಿರಾಜರ ತೀರ್ಥ ಪ್ರಬಂಧದಲ್ಲಿಯ ಉಲ್ಲೇಖ, ದಾಜಿ ಪಂಡಿತರು ಸ್ಥಾಪಿಸಿದ ಗರುಡಗಂಬ ಮುಂತಾದವುಗಳಿಂದ ಅವಳನ್ನು ವಿಷ್ಣುಪತ್ನಿ, ಲಕ್ಷ್ಮಿಯನ್ನಾಗಿ ಮಾಡುವ ಪ್ರಯತ್ನ ಮಾಡಿದರು. ಪೇಶ್ವೆಯವರ ಕಾಲದವರೆಗೆ ಮಹಾಲಕ್ಷ್ಮಿಯ ವಾಹನ ಸಿಂಹವಾಗಿದ್ದುದು ಕಾಗದ ಪತ್ರಗಳಿಂದ ದೃಢವಾಗಿದೆ. ಕೊಲ್ಹಾಪುರವು ಶೈವಕ್ಷೇತ್ರ ಎಂಬುದಕ್ಕೆ ಪ್ರಾಚೀನ ನಿರ್ದೇಶವಿದೆ. ಮಹಾಲಕ್ಷ್ಮಿಯು ಶೈವ ಪಂಥದವಳಾಗಿದ್ದಾಳೆ ಎಂಬುದಕ್ಕೆ ಸಾಕ್ಷಿಗಳಿವೆ. ಬಾರ್ಹಸ್ಪತ್ಯ ಸೂತ್ರದಲ್ಲಿಯ ನಿರ್ದೇಶವು ಮಾತ್ರ ನಂತರ ಕಾಲದ್ದಾಗಿದೆ ಎಂಬುದನ್ನು ಮಾತ್ರ ಗಮನಿಸಬೇಕು ಎಂಬುದಾಗಿ ಮಹಾಲಕ್ಷ್ಮಿಯ ಶೈವತ್ವವನ್ನು ಖರೆಯವರು ವಿವರಿಸಿದ್ದಾರೆ.

ಕೊಲ್ಹಾಪುರವು ಒಂದು ಶಕ್ತಿಪೀಠ. ಶಿವ ಕ್ಷೇತ್ರ, ಮತು ಚೌಷಷ್ಟಿಯೋಗಪೀಠವೆಂದು (ಶಾಸನ ೨೧) ರಲ್ಲಿ ಬಣ್ಣಿಸಲಾಗಿದೆ. ಶಾಸನದ ಕಾಲ ೧೨೫೭. ಇದಕ್ಕಿಂತ ಮೊದಲಿನ ೧೦೫೯ ರ ಶಿರೂರ ಗ್ರಾಮದ ಶಾಸನದಲ್ಲಿ ಈ ಸ್ಥಳವು ಶಿವಕ್ಷೇತ್ರವೆಂದು ಉಕ್ತವಾಗಿದ್ದು ಮಹಾಲಕ್ಷ್ಮಿಯನ್ನು "ಮಹಾಶಕ್ತಿ ಸ್ವರೂಪ ಪರಮೋದ್ಧಾರಕ ಮಹಾಮೂರ್ತಿ", "ಚತುಷಷ್ಟಿಯೋಗಿನಿ ಸಿದ್ಧ ಸಂದೋಹ ಪರಿವೇಷ್ಟಿತೆ", "ಶಿವಕ್ಷೇತ್ರ ಮಹಾಪಾತಕ ವಿನಾಶಿನಿ", "ರುದ್ರಾರ್ಧಾಗೋತ್ಸಂಗವಾಸಿನಿ", "ಬ್ರಹ್ಮಾರಾಧಿತ ಸಿಂಹವಾಹಿನಿ", "ಶ್ರೀಮದ್ ಕೊಲ್ಹಾಪುರ ಪೀಠಾಧಿಷ್ಠಿತೇ ದೇವಾಧಿದೇವಿ ಶ್ರೀಮನ್ಮಹಾಲಕ್ಷ್ಮಿದೇವಿ", ಎಂದು ಬಣ್ಣಿಸಲಾಗಿದೆ. ಇಲ್ಲಿ ಕೊಲ್ಹಾಪುರ ದೇವಿಯನ್ನು ಲಕ್ಷ್ಮಿ ಮತ್ತು ಪಾರ್ವತಿ ಎಂಬ ಎರಡೂ ಹೆಸರಿನಿಂದ ಕರೆದಿರುವುದು ಸ್ಪಷ್ಟವಾಗಿದೆ.[೧೭]

'ಮಹಾಪೀಠ ನಿರ್ಣಯ'ದ ಆಧಾರದಿಂದ ಡಾ. ಸರಕಾರರು ಸಿದ್ಧಪಡಿಸಿದ ಪ್ರಬಂಧದಲ್ಲಿ ಕರವೀರ ಪೀಠವು ಪಾರ್ವತಿಯ ತ್ರಿನೇತ್ರಗಳ ಮೇಲೆ ನಿರ್ಮಾಣವಾಗಿದೆ. ಈ ಪೀಠದ ಅಧಿದೇವತೆ ಮಹಿಷಾಸುರಮರ್ದಿನಿಯಾಗಿದ್ದಾಳೆ. ಅವಳ ಲೀಲಾಸಹಚರ ಭೈರವನು 'ಕ್ರೋಧೀಶ' ಅಥವಾ 'ಕ್ರೋಧೇಶ'ನಾಗಿದ್ದಾನೆ.[೧೮]

ಈ ಕ್ಷೇತ್ರಕ್ಕೆ ಕೊಲ್ಲಾಪುರ, ಕರವೀರಪುರ, ಕ್ಷುಲಕಪುರ, ಹಿಪೊಕೂರ , ಕೋಲಗಿರಿ ಎಂಬ ಪರ್ಯಾಯ ನಾಮಗಳಿರುವುದು ಪುರಾಣಗಳಿಂದ, ಇತಿಹಾಸದಿಂದ, ಶಿಲಶಾಸನಗಳಿಂದ ತಿಳಿದು ಬರುತ್ತದೆ. ಕೊಲ್ಲಾಸುರನನ್ನು ಸಂಹರಿಸಿದ ನಂತರ ಅವನಿಗೆ ಕೊಟ್ಟ ವರದಂತೆ ಆ ಕ್ಷೇತ್ರಕ್ಕೆ ಅವನದೇ ಹೆಸರು ಇಟ್ಟಿದ್ದರಿಂದ ಕೊಲ್ಹಾಪುರವೆಂಬ ಹೆಸರು ಪ್ರಸಿದ್ಧಿಗೆ ಬಂದಿತು ಎಂಬುದು ಪೌರಾಣಿಕ ಸಂಗತಿ. ಶಿಲಾ ಶಾಸನಗಳಲ್ಲಿ ಕೊಲ್ಹಾಪುರದ ಹೆಸರನ್ನು ಕೊಲ್ಲಾಪುರ ಎಂದು ಉಲ್ಲೇಖಿಸಲಾಗಿದೆ. ಕೊಲ್ಲಾಪುರ ಶಬ್ದದ ವ್ಯುತ್ಪತ್ತಿಯು ದ್ರವಿಡ ಭಾಷೆಯದಾಗಿದೆ. ಕೊಲ್ಲ ಎಂದರೆ ದರಿ. ಕೊಲ್ಲಾಪುರ ಎಂದರೆ ದರಿಯಲ್ಲಿರುವ ಊರು ಎಂದಾಗುತ್ತದೆ. ದೇವಾಲಯದ ಸ್ಥಾಪನೆಯ ನಂತರದ ಕಾಲದಲ್ಲಿ ಮೂಲ ಹೆಸರು ಮರೆಯಾಗಿ ಕೊಲ್ಲ ಇದಕ್ಕೆ ಅಸುರನೆಂದು ಅರ್ಥ ಹಚ್ಚಿಸಿ ಕೊಲ್ಲನನ್ನು ಲಕ್ಷ್ಮಿಯು ಸಂಹರಿಸಿದಳೆಂದು ಕೊಲ್ಲಾಪುರ ಎಂದು ಪ್ರಚಲಿತಗೊಳಿಸಿದರು. ನಂತರ ಕೊಲ್ಲಾಪುರವು ಅಪಭ್ರಂಶಗೊಂಡು ಕೊಲ್ಹಾಪುರವಾಯಿತು ಎಂದು ತಿಳಿದು ಬರುತ್ತದೆ.[೧೯] ಕೊಲ್ಲಾಸುರನ ಮಗ ಕರವೀರನನ್ನು ಶಿವನು ಸಂಹರಿಸಿದ ನಂತರ ಅವನಿಗೆ ಅಭಯ ನೀಡಿದಂತೆ ಕ್ಷೇತ್ರಕ್ಕೆ ಅವನ ಹೆಸರಿಟ್ಟಿದ್ದರಿಂದ ಕರವೀರಪುರವೆಂದು ಪ್ರಸಿದ್ಧಿ ಪಡೆಯಿತು.[೨೦] ಕೊಲ್ಹಾಪುರವು 'ಕ್ಷುಲ್ಲಕಪುರ'ವೆಂದು ಕರೆಯಲ್ಪಟ್ಟಿದೆ. ಇದು ಕೊಲ್ಹಾಪುರ ಶಬ್ದಕ್ಕೆ ಸಂಸ್ಕೃತ ರೂಪವನ್ನು ಕೊಡುವ

ಪರಯತ್ನವೆಂದು ಹೇಳಬಹುದು. ಆದರೆ 'ಕ್ಷುಲ್ಲಕ' ಪದವು ಜೈನ ಧಾರ್ಮಿಕ ಪ್ರಣಾಳಿಕೆಗೆ ಸಂಬಂಧಿಸಿದೆ. 'ಕ್ಷುಲ್ಲಕ'ವು ಒಂದು ಜೈನ ಯತಿಪರಂಪರೆಯನ್ನು ಸೂಚಿಸುತ್ತದೆ, ಎಂದು ಡಾ. ಪಿ.ಬಿ. ದೇಸಾಯಿಯವರು ಹೇಳಿದ್ದಾರೆ. ಕೊಲ್ಹಾಪುರವು ಪ್ರಾಚೀನ ಕಾಲದಿಂದ ಇಂದಿನವರೆಗೆ ಧಾಮಿಕ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನ ಪಡೆದಿದಿಎ, ಎಂಬುದಕ್ಕೆ ಇದು ಉದಾಹರಣೆಯಾಗಿದೆ.[೨೧] ಟಾಲೆಮಿಯು ತನ್ನ ಭೂಗೋಲ ಶಾಸ್ತ್ರದಲ್ಲಿ ಕೊಲ್ಹಾಪುರವನ್ನು 'ಹಿಪ್ಪೊಕೂರ' ಎಂದೂ, ಅಲ್ಲಿ ರಾಜ್ಯವಾಳುತ್ತಿದ್ದ ಅರಸ ವಿಲಿವಾಯಕರನನ್ನು 'ಬಾಲೆಕುರಾನ್' ಎಂದೂ ಉಲ್ಲೇಖಿಸಿದ್ದಾನೆ. ವಿಲಿವಾಯುಕುರನು ಆಂಧ್ರ ಅರಸುಮನೆತನಕ್ಕೆ ಸೇರಿದವನು. ಅವನ ಸೀಸದ ನಾಣ್ಯಗಳು ಕೊಲ್ಹಾಪುರದಲ್ಲಿ ಬ್ರಹ್ಮಪುರಿಯ ಹತ್ತಿರ ದೊರೆತಿವೆ. ಅವು ಬ್ರಹ್ಮಲಿಪಿಯಲ್ಲಿವೆ. ಇದರಿಂದ ಕ್ರಿ.ಶ. ೧೫೦ ರ ಸುಮಾರಿಗೆ ವಿಲಿವಾಯುಕುರನು ಇಲ್ಲಿ ರಾಜ್ಯವಾಳುತ್ತಿದ್ದ, ಅವನ ರಾಜಧಾನಿ ಕೊಲ್ಲಾಪುರವಾಗಿತ್ತು ಎಂಬುದರ ಅರಿವಾಗುತ್ತದೆ.[೨೨]

ಕೊಲ್ಹಾಪುರದ ಲಕ್ಷ್ಮಿ ಮತ್ತು ಅವಳ ಪರಿವಾರ :

ದೇವಿಮಹಾತ್ಮೆಯ ಮೊದಲ ಅಧ್ಯಾಯದಲ್ಲಿಯ ಎರಡನೆಯ ಶ್ಲೋಕದಲ್ಲಿ ದೇವಿಗೆ 'ಮಹಾಮಾಯಾ' ಎಂದು ಸಂಭೋದಿಸಲಾಗಿದೆ. ಇಲ್ಲಿ 'ಮಾಯಾ' ಶಬ್ದದ ಅರ್ಥ ದೈವೀ ಶಕ್ತಿ ಎಂದಿದೆ. 'ಶ್ರೀದೇವಿ' ಈ ಶಬ್ದದ ವ್ಯಾಖ್ಯಾರ್ಥ 'ಸ್ತ್ರೀದೇವತಾ' ಎಂದಿದೆ. ಇವಳೇ ಆದಿಮಾಯಾ ಶಕ್ತಿ. ಆದಿ ಎಂದರೆ ಪುರಾತನ. ಆದಿಶಕ್ತಿ ಇದು ಅವಳ ಮೂಲರೂಪ. ಅವಳ ಉದರದಲ್ಲಿ ಅನೇಕ ಶಕ್ತಿರೂಪಗಳು ಜನ್ಮ ಪಡೆದಿವೆ, ಅನೇಕರೂಪ ಹೊಂದಿವೆ. ಅವೆಲ್ಲವೂ ಅವಳದೇ ಅಂಶಾತ್ಮಕ ರೂಪವಾಗಿವೆ. ಆದ್ದರಿಂದ ಶ್ರೀ ಮಹಾಲಕ್ಷ್ಮಿಯು ಆದಿಶಕ್ತಿಯಾಗಿದ್ದಾಳೆ. ವೇದಗಳಲ್ಲಿ ಶ್ರೀ ಉಷಾದೇವಿ, ಸೂರ್ಯಾದೇವಿ, ಹಾಗೂ ಲಕ್ಷ್ಮೀದೇವಿ ಹೀಗೆ ವಿವಿಧ ದೇವತೆಗಳ ಅನೇಕ ಸೂತ್ರಗಳಿರುವುದು ಕಂಡುಬರುತ್ತದೆ. ಋಗ್ವೇದದ ಕೊನೆಯ ಸೂತ್ರದಲ್ಲಿ ಶ್ರೀಸರಸ್ವತಿ ಸ್ತುತಿ ಇದೆ. ಯಜುರ್ವೇದದಲ್ಲಿ ಸರಸ್ವತಿಗೆ ಆಹುತಿ ಕೊಡಲಾಗಿದೆ. ಅಥರ್ವವೇದದಲ್ಲಿ ದೈವೀಸೂಕ್ತ ಮತ್ತು ಶ್ರೀಸೂಕ್ತ ಇವು ದೇವಿಯ ಸ್ತವನಗಳಾಗಿವೆ.

ಇಡೀ ಪ್ರಪಂಚವು ಈ ಆದ್ಯಶಕ್ತಿಯ ಇಚ್ಛೆ, ಜ್ಞಾನ, ಕ್ರಿಯೆ ಈ ಮೂರು ಶಕ್ತಿಗಳ ಮುಖಾಂತರ ಕಾರ್ಯ ನಿರ್ವಹಿಸುತ್ತಿದೆ. ಶ್ರೀ ಮಹಾಲಕ್ಷ್ಮಿ, ಮಹಾಕಾಲಿ, ಶ್ರೀಮಹಾಸರಸ್ವತಿ ಈ ಶಕ್ತಿರೂಪದಿಂದ ಈ ವಿಶ್ವವು ರಕ್ಷಿಸಲ್ಪಡುತ್ತದೆ. ಆದ್ದರಿಂದ ಈ ಆದಿಶಕ್ತಿಯು ಬಹುರೂಪವಾಗಿದೆ. ಬ್ರಹ್ಮಾದಿಗಳಿಗೂ ಅವಳ ಸ್ವರೂಪ ತಿಳಿಯುವದಾಗಿಲ್ಲ. ದೇವಿಯ ಶಕ್ತಿಸ್ವರೂಪವು ಅನಂತಕೋಟಿ ಬ್ರಹ್ಮಾಂಡ ವಿಶ್ವದ ವ್ಯಾಪಕತೆಯಿಂದಲೇ ವ್ಯಕ್ತವಾಗಿದೆ. ಅದಿತಿಯು ಆದಿತ್ಯನ ಜನನಿ. ಅವಳೇ

ಆದಿಜನನಿ. ಅವಳ ಮತ್ತು ದೇವಿಯ ಸ್ವರೂಪ ಒಂದೇ ಆಗಿದೆ. ದೇವಿ ಮಹಾತ್ಮ್ಯೆಕಾರ ಅವಳ ವ್ಯಾಪಕತ್ವವನ್ನು ಅಗಾಧವೆಂದು ನಂಬಿದ್ದಾನೆ. ಚರಾಚರ ಸೃಷ್ಟಿಯು ಅವಳಿಂದಲೇ ಉತ್ಪನ್ನವಾಗುತ್ತದೆ. ಅವಳು ದೈವಿಕ ಸ್ವರೂಪದಲ್ಲಿ ಅಸುರರನ್ನು ಮತ್ತು ಅಧ್ಯಾತ್ಮಿಕ ರೂಪದಲ್ಲಿ ಅಜ್ಞಾನರೂಪದ ಅಂಧಃಕಾರವನ್ನು ನಾಶ ಮಾಡುತ್ತಾಳೆ. ಅವಳು ಒಬ್ಬಳಿದ್ದೂ ಬಹುರೂಪಿಯಾಗಿದ್ದಾಳೆ. ಎಲ್ಲ ಮಂತ್ರಗಳಲ್ಲಿ ಅವಳು 'ಮಾತೃಕಾ' ಎಂದು ವಾಸ್ತವ್ಯ ಮಾಡಿದ್ದಾಳೆ. ಬ್ರಹ್ಮಾ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವರಾಹಿ, ಇಂದ್ರಾಣಿ, ಚಾಮುಂಡಾ ಮತ್ತು ಮಹಾಲಕ್ಷ್ಮಿ ಇವು ದೇವಿಯ ಅಷ್ಟ ಶಕ್ತಿರೂಪಗಳಾಗಿವೆ.

"ವಿಶ್ವದ ಸರ್ವಶಕ್ತಿಗೆ ಕಾರಣೀಭೂತಳಾದ ಸತ್ವ, ರಜ, ತಮ ಗುಣಗಳಿಂದ ವಿವಿಧ ಆಕಾರ, ಕ್ರಿಯೆ, ವಿವಿಧ ಸಂಜ್ಞೆಗಳನ್ನು ಧಾರಣೆ ಮಾಡುವ, ಸರ್ವರ ಹೃದಯದಲ್ಲಿದ್ದು ಸರ್ವ ಕ್ರಿಯೆಗಳ ಮೇಲೆ ಗಮನ ಹರಿಸುವ, ಸಗುಣ ಮತ್ತು ನಿರ್ಗುಣ ಎರಡೂ ರೂಪದಲ್ಲಿರುವ ಈ ದೇವತೆಗೆ ಮಹಾಲಕ್ಷ್ಮಿ ಎನ್ನುತ್ತಾರೆ. ಲಕ್ಷ್ಮಿಯು ಸೌಂದರ್ಯ ಸಂಪನ್ನಳೂ, ಐಶ್ವರ್ಯವಂತಳೂ, ಪರಮ ಮಂಗಲಳೂ ಆಗಿದ್ದಾಳೆ. ದೇವ, ಋಷಿ, ಮುನಿಗಳ ಧ್ಯಾನ, ಪೂಜೆಗೆ ಅನುಕೂಲವಾಗುವಂತೆ ಅವಳು ವಿವಿಧ ರೂಪ ಧಾರಣೆ ಮಾಡಿದ್ದಾಳೆ. ಶೂತ್ರ ಸಂಹಿತಾ, 'ದೇವಿ ಭಾಗವತ' ಮತ್ತು 'ಚಂಡಿಕಾರ್ಚನರಹಸ್ಯ' ಗ್ರಂಥಗಳು ಅವಳ ಸ್ತುತಿಗಳಾಗಿದ್ದು ಅವಳ ಉಪಾಸನೆಯ ಮಾರ್ಗದರ್ಶನಗಳಾಗಿವೆ. 'ತಂತ್ರ ಚೂಡಾಮಣಿ'ಯಲ್ಲಿ ಐವತ್ತೊಂದು ಶಕ್ತಿಪೀಠಗಳ ಉಲ್ಲೇಖವಿದ್ದು, ದೇವಿ ಭಾಗವತದಲ್ಲಿ ೧೦೮ ಶಕ್ತಿಪೀಠಗಳೆಂದು ಹೇಳಲಾಗಿದೆ. ಶಕ್ತಿಪೀಠಗಳ ಗಣನೆಯಲ್ಲಿ ಎರಡು ವಿಧಗಳಿದ್ದರೂ, ೫೧ ಶಕ್ತಿಪೀಠಗಳ ಗಣನೆಯು ಸರ್ವಮಾನ್ಯವಾಗಿರುವುದು ಕಂಡುಬರುತ್ತದೆ.

ಈ ಶಕ್ತಿದೇವತೆಯ ಉತ್ಪತ್ತಿಯ ವಿಷಯ ಕುರಿತು ಒಂದು ಕಥೆಯಿದೆ. ಪ್ರಜಾಪತಿ ದಕ್ಷನು ಬೃಹಸ್ಪತಿ ಹೆಸರಿನ ಒಂದು ದೊಡ್ಡ ಯಜ್ಞವನ್ನು ಮಾಡಿದ. ಈ ಯಜ್ಞಕ್ಕೆ ಅವನ ಅಳಿಯನಾದ ಶಂಕರನಿಗೆ ಆಮಂತ್ರಣ ಕೊಡಲಿಲ್ಲ. ಸರ್ವ ದೇವತೆಗಳಿಗೆ ಆಮಂತ್ರಣವಿದ್ದರೂ ಶಿವನಿಗೆ ಆಮಂತ್ರಣವಿಲ್ಲದ್ದರಿಂದ ಆತನಿಗೆ ಸಿಟ್ಟು ಬಂದಿತು. ಶಿವನು ಬೇಡವೆಂದರೂ, ಆತನ ಇಚ್ಛೆಗೆ ವಿರುದ್ಧವಾಗಿ ಪಾರ್ವತಿಯು ತನ್ನ ತಂದೆಯ ಯಜ್ಞ ಸಮಾರಂಭಕ್ಕೆ ಹೋದಳು. ಆದರೆ ದಕ್ಷನು ಶಿವನಿಗೆ ಯಜ್ಞದಲ್ಲಿ ಹವಿರ್ಭಾಗವನ್ನು ಕೊಡದೆ, ಅವನನ್ನು ನಿಂದಿಸತೊಡಗಿದ. ಇದರಿಂದ ಪಾರ್ವತಿಯು ಕ್ರೋಧಿತಳಾಗಿ ಯಜ್ಞ ಕುಂಡದಲ್ಲಿ ತನ್ನ ದೇಹವನ್ನು ಅರ್ಪಿಸಿದಳು. ಶಿವನು ಗಣಸಹಿತನಾಗಿ ಬಂದು ದಕ್ಷನ ಯಜ್ಞವನ್ನು ವಿಧ್ವಂಸಗೊಳಿಸಿದ. ಯಜ್ಞ ಕುಂಡದಲ್ಲಿ ತಪ್ತಗೊಂಡ

ಪಾರ್ವತಿಯ ಕಳೇಬರವನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡು ಭ್ರಮಣ ಮಾಡತೊಡಗಿದ. ಶಿವನ ಈ ಅವಸ್ಥೆಯಿಂದ ಅನರ್ಥ ಸಂಭವಿಸಬಹುದೆಂದು ವಿಷ್ಣುವು ತನ್ನ ಸುದರ್ಶನ ಚಕ್ರದಿಂದ ಪಾರ್ವತಿಯ ಕಳೇಬರವನ್ನು ತುಂಡರಿಸಿದ. ತುಂಡರಿಸಿದ ದೇಹವು ೫೧ ತುಣುಕುಗಳಾಗಿ ಪೃಥ್ವಿಯ ಮೇಲೆ ಚಲ್ಲಾಪಿಲ್ಲಿಯಾಗಿ ಬಿದ್ದವು. ಎಲ್ಲೆಲ್ಲಿ ಆಕೆಯ ದೇಹದ ಭಾಗಗಳು ಬಿದ್ದೋ, ಆ ಸ್ಥಳಗಳಲ್ಲಿ ೫೧ ಶಕ್ತಿಪೀಠಗಳು ನಿರ್ಮಾಣಗೊಂಡವು. ಎಲ್ಲಿ ಪಾರ್ವತಿಯ ನೇತ್ರಗಳು ಬಿದ್ದಿವೆಯೋ ಆ ಸ್ಥಾನವು ಕರವೀರಪುರವೆಂದು ಪ್ರಸಿದ್ಧಿ ಪಡೆಯಿತು.

ಆದಿಶಕ್ತಿಯ ೫೧ ಶಕ್ತಿಪೀಠಗಳಲ್ಲಿ ಕಂಚಿ, ಕಾಮಾಖ್ಯ, ಕರವೀರ, ಕಾಶ್ಮೀರ, ಶ್ರೀಶೈಲ, ಕಾಶಿ, ಕಾಲಿಪೀಠ, ಜಲಂಧರಗಳು ಮಹತ್ವದ ಸ್ಥಾನ ಪಡೆದಿವೆ. ಮಹಾರಾಷ್ಟ್ರದಲ್ಲಿ ಕರವೀರಪುರದ ಮಹಾಲಕ್ಷ್ಮಿ, ತುಳಜಾಪುರದ ಭವಾನಿ, ಮಾಹೂರದ ರೇಣುಕಾ ಮತ್ತು ಸಪ್ತಶೃಂಗಿಯ ವಣಿ ಇವು ಮೂರೂವರೆ ಶಕ್ತಿಪೀಠಗಳೆಂದು ಪ್ರಸಿದ್ಧಿ ಪಡೆದಿವೆ. ಶ್ರೀ ಮಹಾಲಕ್ಷ್ಮಿ, ಶ್ರೀ ಮಹಾಕಾಳಿ ಮತ್ತು ಶ್ರೀ ಮಹಾಸರಸ್ವತಿ ಇವು ಅವಳ ಪ್ರಾಸಂಗಿಕ ರೂಪಗಳಾಗಿವೆ ಮತ್ತು ಅವಳದೇ ಅಂಶಾವತಾರಗಳಾಗಿವೆ. ಮಹಾಮಾಯಾ, ಏಕವೀರಾ, ಮಹಾಮಾರಿ ಇತ್ಯಾದಿ ಹೆಸರುಗಳು ಮಹಾಕಾಳಿಯ ಇತರ ಹೆಸರುಗಳಾಗಿವೆ. ಹಾಗೆಯೇ ಮಹಾವಿದ್ಯಾ, ಮಹಾದಾಣಿ, ಭಾರತಿ, ಸುರೇಶ್ವರಿ, ಇವು ಸರಸ್ವತಿಯ ವಿಶಿಷ್ಟ ಗುಣದರ್ಶಕ ಹೆಸರುಗಳಾಗಿದ್ದು ಅವಳದೆ ಅಂಶಾವತಾರಗಳಾಗಿವೆ. ಈ ತ್ರಿಶಕ್ತಿಯ ಮತ್ತೆ ಕೆಲವು ಹೆಸರುಗಳೆಂದರೆ ಚಂಡಿಕಾ, ಭಗವತಿ, ದುರ್ಗಾ, ಶವಿ, ತ್ರಿಪುರಾ, ಭುವನೇಶ್ವರಿ, ಭೈರವಿ, ಲಲಿತ, ಶ್ಯಾಮಾ, ಚಾಮುಂಡಾ, ತುಳಜಾಭವಾನಿ, ಶಾಂತಾದುರ್ಗಾ ಇತ್ಯಾದಿ ಆಗಿವೆ. ಆದರೆ ಅವು ಅವಳ ಉಗ್ರ ಅವತಾರದ ಸ್ವರೂಪಗಳಾಗಿವೆ. ದುರ್ಗಾ ಮತು ನವದುರ್ಗಾ ಇವು ಆದಿ ಶಕ್ತಿಯದೇ ರೂಪಗಳಾಗಿವೆ. ಪ್ರಸಂಗಕ್ಕನುಗುಣವಾಗಿ ದುರ್ಗೆಯು ಒಂಭತ್ತು ಅವತಾರಗಳನ್ನು ಧರಿಸಿದ್ದಾಳೆ. ಶೈಲಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಂಟಾ, ಕುಷ್ಮಾಂಡಾ, ಸ್ಕಂದಮಾತಾ, ಕಾತ್ಯಾಯಿನಿ, ಕಾಲರಾತ್ರಿ, ಮಹಾಗೌರಿ ಮತ್ತು ಸಿದ್ಧರಾತ್ರಿ ಇವು ನವದುರ್ಗೆಯ ವಿವಿಧ ರೂಪಗಳಾಗಿವೆ. ಶ್ರೀಲಕ್ಷ್ಮಿ, ಶ್ರೀ ಮಹಾಕಾಲಿ ಮತ್ತು ಶ್ರೀ ಮಹಾ ಸರಸ್ವತಿ ಈ ತ್ರಿಶಕ್ತಿಯ ಅವತಾರಕಾರ್ಯವನ್ನು ಪುರಾಣಗಳಲ್ಲಿ ವರ್ಣಿಸಲಾಗಿದೆ. ದೇವರ ರಕ್ಷಣೆಗಾಗಿ ಮತ್ತು ರಾಕ್ಷಸ ಸಂಹಾರಕ್ಕಾಗಿ ಈ ದೇವತೆಗಳು ಕಾಲಕಾಲಕ್ಕೆ ಅವತಾರವೆತ್ತಿದ್ದಾರೆ. ಅಸುರರನ್ನು ಸಂಹರಿಸಿ ಪೃಥ್ವಿಯನ್ನು ನಿಷ್ಕಂಟಕಗೊಳಿಸಿದ್ದಾರೆ. ಲಕ್ಷ್ಮಿವಿಜಯ ಈ ಗ್ರಂಥದಲ್ಲಿಯ ಲಕ್ಷ್ಮಿಯ ವರ್ಣನೆಯು ಹೀಗಿದೆ:

ಶ್ರೀಮಹಾಲಕ್ಷ್ಮಿಯು ರಜೋಗುಣದ ದೇವತೆ. ಮಹಿಷಾಸುರ ಎಂಬ ದೈತ್ಯನನ್ನು ಸಂಹರಿಸುವುದಕ್ಕಾಗಿ ಲಕ್ಷ್ಮಿಯು ಮಹಿಷಮರ್ದಿನಿಯ ಅವತಾರ ತಳೆದಳು. ಈ ದೈತ್ಯನ ಶರೀರ ಎಮ್ಮೆಯಂತೆ ಇದ್ದು ಮುಖ ರಾಕ್ಷಸನದಾಗಿತ್ತು. ಅದಕ್ಕಾಗಿ ಅವನಿಗೆ ಮಹಿಷಾಸುರವೆಂಬ ಹೆಸರು ಬಂದಿತು. ಅವನು ಸರ್ವ ದೇವತೆಗಳನ್ನು ಪರಾಭವಗೊಳಿಸಿ, ಇಂದ್ರನನ್ನು ಸೋಲಿಸಿ ಸ್ವತಃ ಇಂದ್ರ ಪದವಿಯನ್ನು ಪಡೆದುಕೊಂಡಿದ್ದ. ಎಲ್ಲ ದೇವತೆಗಳು ಅವನ ಹಿಂಸೆಯನ್ನು ಸಹಿಸಲಾರದೆ ಶಿವ ಮತ್ತು ವಿಷ್ಣುವಿನಲ್ಲಿ ಮೊರೆಯಿಟ್ಟರು. ಎಲ್ಲರೂ ಸೇರಿ ಆದಿಶಕ್ತಿಯನ್ನು ಪ್ರಾರ್ಥಿಸಿದರು. ಆಗ ದೇವಿಯು ಉಗ್ರರೂಪದಿಂದ ಅವತರಿಸಿದಳು. ಗೌರವರ್ಣದ ಮುಖ, ನೀಲಿ ಬಾಹುಗಳು, ೧೮ ಕೈಗಳು, ಕೈಯಲ್ಲಿ ವಿವಿಧ ಆಯುಧಗಳು, ಕೆಂಪು ಬಣ್ಣದ ಸೊಂಟ ಮತ್ತು ಕಾಲು ಹಾಗೂ ಸಿಂಹವಾಹಿನಿಯಾಗಿ ಬಂದು ಮಹಿಷಾಸುರನ ಮೇಲೆ ತ್ರಿಶೂಲದಿಂದ ಪ್ರಹಾರ ಮಾಡಿದಳು. ಖಡ್ಗದಿಂದ ತಲೆ ಕತ್ತರಿಸಿದಳು. ದೈತ್ಯನ ಇಚ್ಛೆಗನುಸಾರವಾಗಿ ತನ್ನ ಚರಣದಡಿಯಲ್ಲಿ ಅವನಿಗೆ ಆಶ್ರಯವಿತ್ತಳು.

ಶ್ರೀ ಮಹಾಕಾಳಿ ತಮೋಗುಣಿ. ಮಧುಕೈಟಭನ ಸಂಹಾರಕ್ಕಾಗಿ ಅವಳ ಅಂಶಾವತಾರವಾಯಿತು. ಅವಳಿಗೆ ಹತ್ತು ಮುಖ, ಹತ್ತು ಕೈ, ಹತ್ತು ಕಾಲು, ಮೂವತ್ತು ಕಣ್ಣು, ಕೈಯಲ್ಲಿ ರಕ್ತದಿಂದ ಸೋರುತ್ತಿರುವ ತಲೆಬುರುಡೆ, ಕೈಯಲ್ಲಿ ವಿವಿಧ ಆಯುಧಗಳು, ಕಪ್ಪುಬಣ್ಣ, ಇದು ಅವಳ ಅವತಾರ ಸ್ವರೂಪವಾಗಿತ್ತು. ಮಧು-ಕೈಟಭ ಎಂಬ ಹೆಸರಿನ ಇಬ್ಬರು ರಾಕ್ಷಸರು ವಿಷ್ಣುವಿನ ಕಿವಿಯ ಕೊಳೆಯಿಂದ ಉತ್ಪನ್ನರಾದರು. ಹುಟುತ್ತಲೆ, ಬ್ರಹ್ಮದೇವನನ್ನೇ ಸಂಹರಿಸಲು ಧಾವಿಸಿದರು. ಆಗ ಬ್ರಹ್ಮನು ವಿಷ್ಣುವಿನ ನಾಭಿ ಕಮಲದಲ್ಲಿ ಕುಳಿತಿದ್ದ ವಿಷ್ಣು ಯೋಗನಿದ್ರೆಯಲ್ಲಿದ್ದ. ಈ ಯೋಗನಿದ್ರೆಯು ತಾಮಸಿ ಮಹಾಕಾಳಿಯೇ ಆಗಿದ್ದಳು. ಅವಳು ಈ ಇಬ್ಬರೂ ದೈತ್ಯರನ್ನು ವಿಷ್ಣುವಿನ ಸಹಾಯದಿಂದ ಸಂಹರಿಸಿದಳು. (ಮಧು ಕೈಟಭನ ಸಂಹಾರ ಕಥೆಯು ದೇವಿ ಭಾಗವತದ ೬,೭,೮,೯ ಈ ಅಧ್ಯಾಯಗಳಲ್ಲಿ ಉಲ್ಲೇಖಿತವಾಗಿದೆ.)

ಶ್ರೀ ಮಹಾಸರಸ್ವತಿಯು ಮೂಲತಃ ಸತ್ವಗುಣಿ ದೇವತೆಯಾಗಿದ್ದು ಶಂಭಾಸುರನ ಸಂಹಾರಕ್ಕಾಗಿ ಗೌರಿಯ ದೇಹದಿಂದ ಅವಳ ಅಂಶಾವತಾರವಾಯಿತು. ಅವಳಿಗೆ ಎಂಟು ಭುಜಗಳು, ಬಾಣ, ಶಂಖ, ಚಕ್ರ, ಗದಾ, ಧನುಷ್ಯ, ಶೂಲ ಮೊದಲಾದವು ಅವಳ ಕೈಯಲ್ಲಿಯ ಆಯುಧಗಳು. ಚಂಡ ಮುಂಡರ ಜನ್ಮವೇ ಅಸೂಯೆ ಮತ್ತು ಮತ್ಸರ ಇವುಗಳ ಪ್ರೇರಣೆಯಿಂದ ಆಯಿತು. ಅವರ ತಾಯಿಯ ಹೆಸರು ದನು, ಇವಳ ಸವತಿ ಅದಿತಿ. ಅದಿತಿಯ ಮಗನೇ ಇಂದ್ರ. ಇಂದ್ರನನ್ನು ಪರಾಭವಗೊಳಿಸುವಂತಹ ಪರಾಕ್ರಮಿ ಪುತ್ರನನ್ನು ಪಡೆಯುವುದು ಅವಳ

ಬಯಕೆಯಾಗಿತ್ತು. ಅದಕ್ಕಾಗಿ ಅವಳು ಘೋರ ತಪವನ್ನಾಚರಿಸಿದಳು. ಆ ಉಗ್ರ ತಪಸ್ಸಿನ ಫಲವೇ ಶುಂಭ-ನಿಶುಂಭ ಮತ್ತು ನರುಚಿಯರ ಜನ್ಮ. ಇಂದ್ರ ಪದವಿಯನ್ನೇ ಹೊಸಕಿ ಹಾಕುವಂತಹ ಬಲಾಢ್ಯ ಪುತ್ರರ ಜನನವಾಯಿತು. ಇವರೂ ತಪಸ್ಸು ಮಾಡಿ ಯಾವುದೇ ದೇವ, ಗಂಧರ್ವ, ಮಾನವ, ಯಕ್ಷ, ಕಿನ್ನರರಿಂದ ತಮ್ಮ ವಧೆಯಾಗಕೂಡದೆಂದು ವರ ಪಡೆದರು. ವಧೆಯಾಗುವುದಾದರೆ ಮಾಡುವವಳು ಸ್ತ್ರೀಯಾಗಿರಬೇಕು, ಆದರೆ ಅವಳು ಅಯೋನಿ ಸಂಭವಳಿರಬೇಕು. ಅವಳು ಲೋಕೋತ್ತರ ಪರಾಕ್ರಮಿಯಾಗಿರಬೇಕು. ಮರಣವು ಯುದ್ಧದಲ್ಲಿಯೇ ಬರಬೇಕು. ಯುದ್ಧಕ್ಕೆ ಸ್ತ್ರೀಯೇ ಕಾರಣಿಭೂತಳಾಗಬೇಕು. ಇಂತಹ ವಿಲಕ್ಷಣ ವರವನ್ನು ಅವರು ಕೇಳಿ ಪಡೆದಿದ್ದರು. ಶುಂಭ-ನಿಶುಂಭರೆಂಬ ಬಲಾಢ್ಯ ದೈತ್ಯರು ಇಂದ್ರನ ರಾಜ್ಯ ಹರಣ ಮಾಡಿದರು. ಎಲ್ಲ ದೇವತೆಗಳನ್ನು ಓಡಿಸಿ, ಇಂದ್ರನನ್ನು ಅವನ ಪದವಿಯಿಂದ ಕಿತ್ತೊಗೆದಿದ್ದರು. ಅವರೆಲ್ಲರೂ ಹಿಮಾಲಯದಲ್ಲಿಯ ಅಪರಾಜಿತಾ ದೇವಿಯಲ್ಲಿ ಹೋಗಿ ಪ್ರಾರ್ಥಿಸಿದರು. ಅಲ್ಲಿ ಪಾರ್ವತಿ ಪ್ರತ್ಯಕ್ಷಳಾದಳು. ಅವಳ ಶರೀರದಿಂದ ಶಿವಾ, ಅಂಬಿಕಾ ಎಂಬ ಇಬ್ಬರು ದೇವಿಯರು ಪ್ರಕಟರಾದರು. ಅಂಬಿಕೆಯು ಪಾರ್ವತಿಯ ಬಾಹ್ಯಕೋಶದಿಂದ ಉದ್ಭವಿಸಿದ್ದರಿಂದ ಅವಳಿಗೆ ಕಾಶಿಕಾ ಎಂಬ ಹೆಸರು ಪ್ರಾಪ್ತವಾಯಿತು. ಪಾರ್ವತಿಯ ಬಣ್ಣವೂ ಕಪ್ಪು ಬಣ್ಣ ಪಡೆದುಕೊಂಡಿತು. ಆದುದರಿಂದ ಅವಳು ಕಾಳಿಕಾ ಆದಳು. ಅವಳು ಚಂಡ ಮುಂಡ ಅವರ ಸೇನಾಪತಿಯಾದ ಸುಗ್ರೀವ ಮತ್ತು ಧೂಮಕೇತು ಅವರನ್ನೆಲ್ಲ ಸಂಹರಿಸಿದಳು. ಆಗ ಅಂಬಿಕೆಯು ಕೋಪದಿಂದ ಉದ್ರಿಕ್ತಳಾದುದರಿಂದ ಅವಳ ಕಪೋಲದಿಂದ ಕಾಲಿ ಹೆಸರಿನ ಭಯಾನಕ ಮುಖದ ದೇವಿಯು ಪ್ರತ್ಯಕ್ಷಳಾದಳು. ಕೈಯಲ್ಲಿ ಖಡ್ಗ, ಕೊರಳಲ್ಲಿ ಮನುಷ್ಯರ ತಲೆಬುರುಡೆಗಳ ಹಾರ, ಕೆಂಪು ನಾಲಿಗೆಯನ್ನು ಲವಲವಿಸುತ್ತ ಬಂದು, ಎಲ್ಲ ರಾಕ್ಷಸರನ್ನು ಬಾಯಿಯಲ್ಲಿ ಹಾಕಿಕೊಂಡು ಸಾಯಿಸತೊಡಗಿದಳು. ಚಂಡ ಮುಂಡರ ರುಂಡವನ್ನು ಕತ್ತರಿಸಿದಳು. ಹಾಗೆಯೇ ಬ್ರಾಹ್ಮಣಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ನಾರಸಿಂಹಿ ಎಂಬ ಶಕ್ತಿದೇವತೆಗಳು ಅಲ್ಲಿ ಪ್ರಕಟಗೊಂಡರು. ಅಂಬಿಕೆ ಮತ್ತು ಕಾಲಿಕಾ ಇವರು ಎಲ್ಲ ರಾಕ್ಷಸರನ್ನು ಸಂಹರಿಸಿದರು ಎಂಬುದಾಗಿ ಮಹಾಕಾಳಿ ಮತ್ತು ಮಹಾ ಸರಸ್ವತಿಯರ ಅವತಾರ ಕಥೆಗಳನ್ನು ಧರ್ಮಾಧಿಕಾರಿಗಳು ಉಲ್ಲೇಖಿಸಿದ್ದಾರೆ. ಇದರಿಂದ ಶ್ರೀಮಹಾಲಕ್ಷ್ಮಿ, ಶ್ರೀಮಹಾಕಾಳಿ ಹಾಗೂ ಶ್ರೀಮಹಾಸರಸ್ವತಿಯರು ಒಂದೇ ಆದಿಶಕ್ತಿಯ ವಿವಿಧ ರೂಪಗಳೆಂದು ತಿಳಿದುಬರುತ್ತದೆ. ಇದಲ್ಲದೆ ತ್ರ್ಯಂಬುಲಿ, ಕಾತ್ಯಾಯಿನಿ, ಪೀಟಜೆ, ಚರ್ಪಟಾಂಬಾ, ಜೋತಿಬಾ ಇವರೆಲ್ಲರೂ ಮಹಾಲಕ್ಷ್ಮಿಯ ಪರಿವಾರದ ಸದಸ್ಯರಾಗಿದ್ದಾರೆ. ತುಳಜಾಭವಾನಿ, ಬನಶಂಕರಿ, ಮೂಕಾಂಬಿಕಾ ಇವೆಲ್ಲವೂ ಮಹಾಲಕ್ಷ್ಮಿಯ ವಿವಿಧ ರೂಪಗಳಾಗಿವೆ.

ತ್ರ್ಯಂಬುಲಿ :

ತ್ರ್ಯಂಬುಲಿಯ ಸಮಾವೇಶವು ಕೊಲ್ಹಾಪುರದ ನವದುರ್ಗೆಯರಲ್ಲಿ ಆಗಿದೆ. ತ್ರ್ಯಂಬುಲಿಯನ್ನು ಮಹಾಲಕ್ಷ್ಮಿಯ ಕಿರಿಯ ಸೋದರಿಯೆಂದು ತಿಳಿಯಲಾಗುತ್ತದೆ. ಆದುದರಿಂದ ತ್ರ್ಯಂಬುಲಿಗೆ ಮಹತ್ವವಿದೆ. ಕೊಲ್ಹಾಪುರದ ಮಹಾಲಕ್ಷ್ಮಿಯ ಜೊತೆಗೆ ಅವಳ ಅತ್ಯಂತ ನಿಕಟ ಸಂಬಂಧವಿದೆ. ಆಶ್ವಿನ ಶುಕ್ಲ ಪಂಚಮಿಗೆ ಟೆಂಬಲಾಯಿ ಪಂಚಮಿ, ಲಲಿತಾ ಪಂಚಮಿ ಎಂಬ ಹೆಸರುಗಳು ಲೋಕ ಪ್ರಚಲಿತವಾಗಿವೆ. ಟೆಂಬಲಾಯಿ ಗುಡ್ಡದ ಮೇಲೆ ತ್ರ್ಯಂಬುಲಿಯ ದೇವಸ್ಥಾನವಿರುವುದರಿಂದ "ಟೆಂಬಲಾಯಿದೇವಿ" ಎಂದೂ ಕರೆಯುವುದುಂಟು. ಈ ದೇವಿಯು ಗುಡ್ಡದ ಮೇಲೆ ಮಹಾಲಕ್ಷ್ಮಿಗೆ ಬೆನ್ನು ತಿರುಗಿಸಿ ನಿಂತಿರುವಂತಿದೆ. ಈ ದೃಷ್ಟಿಗೋಚರ ವಾಸ್ತವದ ಸ್ಪಷ್ಟೀಕರಣವೆಂದರೆ ತ್ರ್ಯಂಬುಲಿಯು ಮಹಾಲಕ್ಷ್ಮಿಯ ಮೇಲೆ ಸಿಟ್ಟಿಗೆದ್ದು ಅವಳ ಕಡೆಗೆ ಬೆನ್ನು ತಿರುಗಿಸಿದ್ದಾಳೆ.ಅವಳ ಕೋಪ ನಿವಾರಣೆಗಾಗಿ ಲಲಿತಾ ಪಂಚಮಿಯಂದು ಮಹಾಲಕ್ಷ್ಮಿಯು ತ್ರ್ಯಂಬುಲಿಯ ಭೇಟಿಗಾಗಿ ಅವಳ ಬಳಿಗೆ ಬರುತ್ತಾಳೆ. ಪ್ರತಿ ವರುಷವೂ ಸಾವಿರಾರುಭಕ್ತರೆದುರು ಈ ಕಾರ್ಯಕ್ರಮ ನೆರವೇರುತ್ತದೆ.

ಕರವೀರ ಮಹಾತ್ಮೆಯ ೩೭, ೩೮ ಮತ್ತು ೩೯ ನೆಯ ಅಧ್ಯಾಯದಲ್ಲಿ ತ್ರ್ಯಂಬುಲಿ ಮತ್ತು ಮಹಾಲಕ್ಷ್ಮಿಯ ಸಂಬಂಧದ ಕಥೆ ಇದೆ. ೨೭ ತ್ರ್ಯಂಬುಲಿಯು ಒಬ್ಬ ಋಷಿಯ ಪತ್ನಿ ಹಾಗೂ ಋಷಿಯ ಕನ್ಯೆ. ಕೌಂಡಿಲ್ಯ ಋಷಿಯ ಪತ್ನಿಯಾಗಿದ್ದಳು. ಅವಳು ಪತಿಸೇವೆಯಲ್ಲಿ ನಿರತಳಾದಾಗ ಬಾಗಿಲಿಗೆ ಒಬ್ಬ ವೃದ್ಧ ಭಿಕ್ಷುಕ ಬಂದ. ಭಿಕ್ಷೆ ನೀಡಲು ಅವಳು ಪತಿಸೇವೆ ಬಿಟ್ಟು ಹೋಗಬೇಕಾಯಿತು. ಅದರಿಂದ ಅವಳ ಪತಿಯು ಸಂತಾಪಗೊಂಡು ನೀನು ದಾಸಿಯಾಗಿ ಹುಟ್ಟು ಎಂದು ಶಾಪವಿತ್ತ. ಈ ಶಾಪವು ಅಯೋಗ್ಯವಾದುದಾಗಿದೆ ಎಂದು ಪತ್ನಿಯು ಋಷಿಗೆ ಸಮಜಾಯಿಸಿದ ಮೇಲೆ ಅವಳ ಶಾಪವನ್ನು ಕಡಿಮೆಗೊಳಿಸಿದ. ನಂತರ ಅವಳು ಪುನರ್ಜನ್ಮ ಪಡೆದು ಬ್ರಾಹ್ಮಣ ಕುಲದಲ್ಲಿ ಹುಟ್ಟಿ ದೇವರ ದಾಸಿಯಾದಳು. ಭಾರ್ಗವ ಋಷಿಯ ಮಗಳಾಗಿ ಜನ್ಮ ಪಡೆದಳು. ಋಷಿಯು ಮಗಳ ಇಚ್ಛೆಗನುಗುಣವಾಗಿ ಅವಳನ್ನು ಕರವೀರನಿವಾಸಿನಿ ಮಹಾಲಕ್ಷ್ಮಿಗೆ ಅರ್ಪಿಸಿದನು. ಅಲ್ಲಿ ಅವಳು ಅಹೋರಾತ್ರಿ ಜಗದಂಬೆಯ ಸೇವೆ ಮಾಡಿದಳು. ತ್ರಿಕಾಲ ಸ್ನಾನ ಮಾಡಿ ದೇವಿಯನ್ನು ಪೂಜಿಸಿದಳು. ಮಲ್ಲಾಲಯ ತೀರ್ಥದಲ್ಲಿಯ ಸ್ವರ್ಣ ಕಮಲವನ್ನು ದೈತ್ಯರು ಪಾತಾಳ ಮಾರ್ಗದಿಂದ ಬಂದು ಕದಿಯುತ್ತಿದ್ದರು. ತ್ರಿಕಾಲವೂ ನೀರಿನಲ್ಲಿದ್ದು ಕುಮಾರಿಯು ಆ ಸ್ವರ್ಣ ಕಮಲ ಕದಿಯುವ ದೈತ್ಯನನ್ನು ಸಂಹರಿಸಿದಳು. ಅವಳ ಶೌರ್ಯ, ನಿಷ್ಠೆಯಿಂದ ಪ್ರಸನ್ನಳಾದ ದೇವಿಯು ಅವಳಿಗೆ ಅಂಬು ಎಂದು ಕರೆದಳು. ತ್ರಿಕಾಲವೂ

ನೀರಿನಲ್ಲಿ ವಾಸ್ತವ್ಯ ಮಾಡುತ್ತಿದ್ದರಿಂದ ಅವಳಿಗೆ ತ್ರ್ಯಂಬುಲಿ ಎಮದು ನಾಮಾಭಿದಾನ ಮಾಡಿದಳು. ಸ್ವರ್ಣಕಮಲವನ್ನು ರಕ್ಷಿಸಿ ದೈತ್ಯರನ್ನು ಸಂಹರಿಸಿದ್ದಕ್ಕಾಗಿ ಅವಳು ದೇವಿಗೆ ಅತ್ಯಂತ ಪ್ರಿಯವಾದಳು. ದೇವಿಯ ಕೃಪೆಯಿಂದ ಬಲಾಢ್ಯಳಾದ ತ್ರ್ಯಂಬುಲಿಯು ದೇವಾದಿ ದೇವತೆಗಳಿಗೂ ಅಸಾಧ್ಯವೆನಿಸಿದ ಒಂದು ಪರಾಕ್ರಮ ಮಾಡಿದಳು.

ಹಿರಣ್ಯಕಶ್ಯಪನ ವಂಶಜರಾದ ರಕ್ತ ಮತ್ತು ಕಾಮಾಕ್ಷರನ್ನು ದೇವತೆಗಳು ಲಕ್ಷ್ಮಿಯ ಸಹಾಯದಿಂದ ಪರಾಭವಗೊಳಿಸಿದ್ದರು. ಆದ್ದರಿಂದ ಅವರು ಸಂತಾಪಗೊಂಡು ಶುಕ್ರಾಚಾರ್ಯರ ಬಳಿಗೆ ಹೋಗಿ, ದೇವರನ್ನು ಪರಾಭವಗೊಳಿಸುವ ಉಪಾಯವನ್ನು ವಿಚಾರಿಸಿದರು. ಅದಕ್ಕೆ ಶುಕ್ರಾಚಾರ್ಯರು "ಅಮೃತ ಪಾನ ಮಾಡಿ ಅಮರತ್ವವನ್ನು ಪಡೆದ ದೇವತೆಗಳನ್ನು ಪರಾಭವಗೊಳಿಸುವುದು ಅಸಾಧ್ಯವಾಗಿದೆ. ಆದರೂ ಒಂದು ಉಪಾಯವನ್ನು ಸೂಚಿಸುತ್ತೇನೆ. ಕಪಿಲ ಋಷಿಯ ಹತ್ತಿರ ಒಂದು ಯೋಗ ದಂಡವಿದೆ. ಅದನ್ನು ಹೇಗಾದರೂ ಮಾಡಿ ಋಷಿಯಿಂದ ಪಡೆದುಕೊಳ್ಳಿ ಎಂದರು. ಅದನ್ನು ದೇವ ಅಥವಾ ಮಾನವರ ತಲೆಯ ಮೇಲಿಂದ ಬಲಕ್ಕೆ ತಿರುಗಿಸಿದರೆ ಅವರು ಕುರಿ ಆಡುಗಳಲ್ಲಿ ರೂಪಾಂತರಗೊಳ್ಳುತ್ತಾರೆ ಮತ್ತು ಅದೇ ದಂಡನ್ನು ಎಡಕ್ಕೆ ತಿರುಗಿಸಿದರೆ ಮೊದಲಿನರೂಪ ಪಡೆಯುತ್ತಾರೆ ಎಂದು ಶುಕ್ರಾಚಾರ್ಯರು ಯೋಗದಂಡದ ವಿಷಯ ತಿಳಿಸಿದರು. ಕಾಮಾಕ್ಷನು ಕಪಿಲ ಋಷಿಯ ಬಳಿಗೆ ಹೋಗಿ ಅವರ ಸೇವೆ ಮಾಡಿ ಅವರಿಂದ ಯೋಗದಂಡವನ್ನು ಪಡೆದ. ಆದರೆ ಋಷಿಗಳು ಯೋಗದಂಡವನ್ನು ನೆಲದ ಮೇಲೆ ಇಟ್ಟರೆ ಅದರ ಗುಣವು ನಾಶವಾಗುತ್ತದೆ ಎಂದು ದಂಡದ ಬಗ್ಗೆ ಕಾಮಾಕ್ಷನಿಗೆ ಎಚ್ಚರಿಕೆ ನೀಡಿದರು. ಕಾಮಾಕ್ಷನು ಯೋಗ ದಂಡದ ಸಹಾಯದಿಂದ ಎಲ್ಲ ದೇವತೆಗಳನ್ನು ಆಡು, ಕುರಿಗಳನ್ನಾಗಿ ಪರಿವರ್ತಿಸಿದ. ಅವರನ್ನು ಶೋಷಿಸತೊಡಗಿದ. ದೇವತೆಗಳ ಮತ್ತು ಮಹಾಲಕ್ಷ್ಮಿಯ ರಕ್ಷಣೆಗಾಗಿ ತ್ರ್ಯಂಬುಲಿಯು ಸಿದ್ಧಳಾಗಿ ಬಂದಳು. ಮಾರ್ಗದಲ್ಲಿ ಕಾಮಾಕ್ಷನ ತಂಗಿ, ರಕ್ತಾಕ್ಷಿಯನ್ನು ಭೇಟಿಯಾದಳು. ಯುಕ್ತಿಯಿಂದ ಅವಳಿಂದ ಯೋಗದಂಡದ ರಹಸ್ಯವನ್ನು ತಿಳಿದುಕೊಂಡಳು. ತ್ರ್ಯಂಬುಲಿಯು ಒಬ್ಬ ವೃದ್ಧ ದಾಸಿಯ ರೂಪ ಧರಿಸಿ ಕಾಮಾಕ್ಷನಲ್ಲಿಗೆ ಬಂದು ನಾನು ಶುಕ್ರಾಚಾರ್ಯರ ದಾಸಿ, ಅವರು ಇಲ್ಲಿಗೇ ಬರುತ್ತಿದ್ದಾರೆ, ಅಗ್ನಿಹೋತ್ರಕ್ಕಾಗಿ ಒಣಗಿದ ಸಗಣಿಯು ಬೇಕಾಗಿದೆ. ಅದನ್ನು ಶೇಖರಿಸುವುದಕ್ಕಾಗಿ ಶುಕ್ರಾಚಾರ್ಯರು ನನ್ನನ್ನು ಮೊದಲು ಕಳಿಸಿದ್ದಾರೆ ಸಹಕರಿಸಬೇಕು ಎಂದು ತ್ರ್ಯಂಬುಲಿಯು ಹೇಳಿದ ಮೇಲೆ ಕಾಮಾಕ್ಷನು ಅವಳಿಗೆ ಕುರಿ ಆಡುಗಳ ಗುಂಪಿಗೆ ಹೋಗುವಂತೆ ಸೂಚಿಸಿದ. ತ್ರ್ಯಂಬುಲಿಯು ಒಳಗೆ ಬಂದ ಮೇಲೆ ತಲೆ ಸುತ್ತು ಬಂದಂತೆ ನಟಿಸಿದಳು. ಅವಳನ್ನು ಎಬ್ಬಿಸಲು ಕಾಮಾಕ್ಷನು ಒಳಗೆ ಬಂದ. ಯೋಗ ದಂಡವನ್ನು ತನ್ನ ತಲೆಯ ಮೇಲೆ ಇಟ್ಟು, ಎರಡೂ ಕೈಗಳಿಂದ ಅವಳ ಬುಟ್ಟಿಯನ್ನು ಎತ್ತ ತೊಡಗಿದ. ಇದೇ

ಸಂಧಿಯನ್ನು ಸಾಧಿಸಿ ತ್ರ್ಯಂಬುಲಿಯು ಚಾಲಾಕತನದಿಂದ ಕಾಮಾಕ್ಷನ ತಲೆಯ ಮೇಲಿನ ಯೋಗದಂಡವನ್ನು ಕಿತ್ತುಕೊಂಡು, ಅವನನ್ನು ಕಲ್ಲಿನಿಂದ ಹೊಡೆದು ಕೊಂದಳು. ತ್ರ್ಯಂಬುಲಿಯು ಯೋಗದಂಡವನ್ನು ಹಿಡಿದುಕೊಂಡು ಎಡಗಡೆಯಿಂದ ತಿರುಗಿಸಿದಳು. ಮಹಾಲಕ್ಷ್ಮಿಯ ಸಹಿತಾಗಿ ಎಲ್ಲ ದೇವತೆಗಳು ತಮ್ಮ ಪೂರ್ವರೂಪ ಪಡೆದರು. ದೇವತೆಗಳು ಹರ್ಷದಿಂದ ಉತ್ಸವ ಆಚರಿಸಿದರು. ಮಹಾಪರಾಕ್ರಮದಿಂದ ತಮ್ಮನ್ನು ಮುಕ್ತಗೊಳಿಸಿದ ತ್ರ್ಯಂಬುಲಿಯು ಧನ್ಯವಾದ ಹೇಳುವುದನ್ನೇ ಮರೆತರು. ಅದರಿಂದ ತ್ರ್ಯಂಬುಲಿಯು ದುಃಖಿತಳಾದಳು. ಕೊನೆಗೆ ಸಿಟ್ಟಿನಿಂದ ಅಲ್ಲಿಂದ ಹೊರಟು ತ್ರ್ಯಂಬುಲಿಯು ಟೆಂಬಲಾಯಿ ಗುಡ್ಡದ ಮೇಲೆ ಹೋಗಿ ಕುಳಿತಳು. ಕುಷ್ಮಾಂಡ ಭೇದ ಉತ್ಸವಕ್ಕೆ ತ್ರ್ಯಂಬುಲಿಯನ್ನು ಆಮಂತ್ರಿಸಲು ದೇವತೆಗಳು ಮರೆತರು. ಇದು ಮಹಾಲಕ್ಷ್ಮಿಗೆ ತಿಳಿಯಿತು. ಕೊನೆಗೆ ಮಹಾಲಕ್ಷ್ಮಿಯು ಸ್ವತಃ ತಾನೆ ಅವಳಲ್ಲಿಗೆ ಹೋಗಿ ಅವಳು ಮಾಡಿದ ಉಪಕಾರಕ್ಕೆ ಧನ್ಯವಾದ ಹೇಳಿದಳು, ಅವಳನ್ನು ನಾನಾ ರೀತಿಯಿಂದ ಸಾಂತ್ವನಗೊಳಿಸಿದಳು. ತ್ರ್ಯಂಬುಲಿಯ ಕೋಪ ಶಮನವಾಯಿತು. ತ್ರ್ಯಂಬುಲಿಯು ದೇವಿಯಲ್ಲಿ ಈ ರೀತಿ ಪ್ರಾರ್ಥಿಸಿದಳು. ತಾಯಿ ಭಗವತಿ ಪ್ರತಿ ವರುಷ ಮುಕ್ತಿ ಮಂಟಪದಲ್ಲಿ ನೆರವೇರುವ ಕುಷ್ಮಾಂಡ ಭೇದ ಉತ್ಸವವು ನನ್ನ ಬಾಗಿಲಲ್ಲಿ ನೆರವೇರುವಂತಾಗಬೇಕು. ಅಂದು ನೀನೂ ಸಹ ಎಲ್ಲ ದೇವತೆಗಳೊಂದಿಗೆ ಇಲ್ಲಿಗೆ ಬರಬೇಕು ತ್ರ್ಯಂಬುಲಿಯ ಬೇಡಿಕೆಗೆ ಲಕ್ಷ್ಮಿಯು ತಕ್ಷಣ ತಥಾಸ್ತು ಹೇಳಿದಳು. ಅಂದಿನಿಂದ ತ್ರ್ಯಂಬುಲಿಯ ದೇವಸ್ಥಾನದ ಎದುರು ಕುಷ್ಮಾಂಡ ಭೇದ ಉತ್ಸವ ಆಚರಿಸಲು ಪ್ರಾರಂಭವಾಯಿತು.

ಪ್ರತಿ ವರುಷ ಆಶ್ವಿನ ಶುಕ್ಲ ಪಂಚಮಿಯಂದು ಮಹಾಲಕ್ಷ್ಮಿಯ ಬೆಳಗಿನ ಪೂಜೆಯ ನಂತರ, ಮಹಾಲಕ್ಷ್ಮಿ ಮಂದಿರದಿಂದ ದೇವಿಯ ಪಲ್ಲಕ್ಕಿಯು ಹೂವಿನಿಂದ ಅಲಂಕೃತಗೊಂಡು ವಾದ್ಯಗಳ ನಿನಾದದೊಂದಿಗೆ ಟೆಂಬಲಾಯಿಗೆ ಹೊರಡುತ್ತದೆ. ಮಧ್ಯಾಹ್ನ ಟೆಂಬಲಾಯಿ ಮಂದಿರ ತಲುಪುತ್ತದೆ. ಅಲ್ಲಿ ಇಬ್ಬರೂ ದೇವಿಯರ ಭೇಟಿಯಾಗುತ್ತದೆ. ಭೇಟಿಯ ಪ್ರತೀಕವೆಂದು ನಾಗವೇಲಿ ಎಲೆಯ ಬೀಡ ಮತ್ತು ಖಣ ತೆಂಗಿನಕಾಯಿಯೊಂದಿಗೆ ಉಡಿ ತುಂಬುವ ಕಾರ್ಯಕ್ರಮವಾಗುತ್ತದೆ. ನಂತರ ಕುಷ್ಮಾಂಡ ಭೇದ ವಿಧಿ ನೆರವೇರುತ್ತದೆ. ಕುಷ್ಮಾಂಡ ಭೇದವೆಂದರೆ ಕುಂಬಳಕಾಯಿ ಒಡೆಯುವ ಸಮಾರಂಭ. ಖಡ್ಗದಿಂದ ಕುಂಬಳಕಾಯಿ ಒಡೆಯುವದೆಂದರೆ, ದೈತ್ಯನಾದ ಮಹಿಷಾಸುರನ ಶಿರವನ್ನು ಕತ್ತರಿಸಿದ ಕುರುಹು ಎಂಬ ಶ್ರದ್ಧೆಯಿಂದ. ಮಹಾಲಕ್ಷ್ಮಿ ಮಂದಿರದಲ್ಲಿ ನೆರವೇರುತ್ತಿದ್ದ ಈ ಬಲಿ ವಿಧಿಯ ಕಾರ್ಯವು ಟೆಂಬಲಾಯಿ ಮಂದಿರಕ್ಕೆ ಸ್ಥಳಾಂತರಿಸಿರುವುದು ಮಹಾಲಕ್ಷ್ಮಿಯ ಉಪಾಸನೆಯನ್ನು ಪೂರ್ಣವಾಗಿ ಸಾತ್ವಿಕೀಕರಣಗೊಳಿಸುವ ಪ್ರಯತ್ನವಾಗಿದೆ.

ಕಾತ್ಯಾಯನಿ :

ಮಹಾಲಕ್ಷ್ಮಿಯ ಪರಿವಾರದಲ್ಲಿ ನವದುರ್ಗೆಯರಲ್ಲಿ ಸಮಾವೇಷಗೊಂಡ ಮತ್ತೊಬ್ಬ ದೇವಿಯೆಂದರೆ ಕಾತ್ಯಾಯನಿ. ಕಾತ್ಯಾಯನಿಯು ನವಕೋಟಿ ಉಗ್ರ ದೇವತೆಗಳ ಸ್ವಾಮಿನಿಯಾಗಿದ್ದಾಳೆ. ಕರವೀರ ಕ್ಷೇತ್ರಕ್ಕೆ ಅತಿಶಯ ನಿಷ್ಠಾಬದ್ಧರಾಗಿರುವ ಸಿಂಧೆ ರಾಜ ಮನೆತನದ ಒಂದು ಶಾಖೆಯ ಆರಾಧ್ಯ ದೇವತೆಯೆಂದೂ ಪ್ರಾಚೀನ ಇತಿಹಾಸದಲ್ಲಿ ಹೆಸರಿರು ಪಡೆದಿದ್ದಾಳೆ. ಕರವೀರ ಮಹಾಲಕ್ಷ್ಮಿಯ ಪುರಾಣ ಚರಿತ್ರೆಯಲ್ಲಿ ರಕ್ತಬೀಜ ಹೆಸರಿನ ಅಸುರನ ಸಂಹಾರ ಮಾಡಿದ ಕಾತ್ಯಾಯನಿಯು ಮಹಾಲಕ್ಷ್ಮಿಯ ವಿಕ್ರಮಶಾಲಿ ಸಖಿಯಾಗಿದ್ದಾಳೆ. ಕರವೀರ ಕ್ಷೇತ್ರದ ದ್ವಾರ ದೇವತೆಗಳಲ್ಲಿ ಇವಳು ದಕ್ಷಿಣ ದ್ವಾರದ ರಕ್ಷಕ ದೇವತೆಯಾಗಿದ್ದಾಳೆ. ಮಹಾಲಕ್ಷ್ಮಿ ದೇವಸ್ಥಾನದಿಂದ ೯ ಕಿ.ಮಿ. ಅಂತರದಲ್ಲಿ ಗಾರಗೋಟಿ ರಸ್ತೆಯಲ್ಲಿ ಒಂದು ಗುಡ್ಡದ ಮೇಲೆ ಕಾತ್ಯಾಯನಿಯ ಉತ್ತರಾಭಿಮುಖ ಮಂದಿರವಿದೆ. ಗರ್ಭಗೃಹದಲ್ಲಿ ದೇವಿಯ ಕೆಂಪು ಬಣ್ಣದ ಒಡಮೂಡಿದ ಮೂರ್ತಿಯ ಆಕಾರವಿದೆ. ಭೈರವ ಇವಳ ಸಹಚರನಾಗಿದ್ದಾನೆ. ಕರವೀರ ಮಹಾತ್ಮ್ಯೆಯ ೪೭ ನೇಯ ಅಧ್ಯಾಯದಲ್ಲಿ ಕಾತ್ಯಾಯನಿಯ ಮಹಿಮೆಯನ್ನು ವರ್ಣಿಸಲಾಗಿದೆ.

ಕೊಲ್ಲಾಸುರನು ನಾಲ್ಕು ದಿಕ್ಕಿನ ನಾಲ್ಕು ದ್ವಾರಗಳ ರಕ್ಷಣೆಗಾಗಿ ಅಧಿಕಾರಿಗಳನ್ನು ನಿಯಮಿಸಿದ್ದ. ಅದರಲ್ಲಿ ರಕ್ತಬೀಜನು ದಕ್ಷಿಣ ದ್ವಾರಕ್ಕೆ ನಿಯುಕ್ತಿಯಾಗಿದ್ದ. ಮಹಾಲಕ್ಷ್ಮಿಯು ಕರವೀರ ನಗರವನ್ನು ದೈತ್ಯರಿಂದ ಮುಕ್ತಗೊಳಿಸಲು ನಿಶ್ಚಯಿಸಿ ಯುದ್ಧ ಹೂಡಿದಳು. ಭೈರವನನ್ನು ಭೂತ, ಪ್ರೇತ, ಗಣ ಸಹಿತನಾಗಿ ರಕ್ತಬೀಜನ ಜೊತೆಗೆ ಯುದ್ಧ ಮಾಡಲು ಕಳುಹಿಸಿದಳು. ಕ್ರೋಧಿತನಾದ ರಕ್ತಬೀಜನು ಭೈರವನ ಮೇಲೆ ಏರಿ ಹೋದ. ಇಬ್ಬರ ನಡುವೆ ಘನಘೋರ ಯುದ್ಧವಾಯಿತು. ರಕ್ತಬೀಜನು ಮಾಯಾವಿ ಯುದ್ಧ ಮಾಡಿದ. ಭೈರವನು ಅವನಿಗೆ ಅದೇ ರೀತಿಯಲ್ಲಿ ಪ್ರತ್ಯುತ್ತರಿಸಿದ. ಭೈರವನು ತನ್ನ ಖಡ್ಗದಿಂದ ರಕ್ತಬೀಜನನ್ನು ಗಾಯಗೊಳಿಸಿದ. ಆದರೆ ಅವನ ರಕ್ತ ಬಿಂದುವಿನಿಂದ ಅನೇಕ ದೈತ್ಯರ ನಿರ್ಮಾಣವಾಯಿತು. ಅವರೆಲ್ಲ ಭೈರವನನ್ನು ಮುತ್ತಿದರು. ಆಗ ಭೈರವನು ಕಾತ್ಯಾಯನಿಯ ಪ್ರಾರ್ಥನೆ ಮಾಡಿದ. ಪರಿಸ್ಥಿತಿಯನ್ನು ಗಮನಿಸಿದ ದೈತ್ಯಮರ್ದಿನಿಯಾದ ರೌದ್ರ ಸ್ವರೂಪಿ ಕಾತ್ಯಾಯನಿಯು ತನ್ನ ನವಕೋಟಿ ಸೈನ್ಯದೊಂದಿಗೆ ಭೀಷಣ ಸಂಗ್ರಾಮಕ್ಕೆ ಧಾವಿಸಿದಳು. ತನ್ನ ಅಮೋಘ ಬಾಣಗಳಿಂದ ಸಹಸ್ರಾರು ರಾಕ್ಷಸರನ್ನು ನೆಲಕ್ಕುರುಳಿಸಿದಳು. ರಕ್ತಬೀಜನು ಮತ್ತೆ ಬಲ ತೋರಿಸಿದಾಗ ಕಾತ್ಯಾಯನಿಯು ವೃಕ್ಷ ಯುದ್ಧ ಆರಂಭಿಸಿದಳು. ಆದರೂ ಹತೋಟಿಗೆ ಬರದಿದ್ದುದರಿಂದ ಶೈಲ ಯುದ್ಧ ಆರಂಭಿಸಿದಳು. ಗುಡ್ಡಗಳನ್ನೇ ಕಿತ್ತಿ ಒಗೆದು ರಾಕ್ಷಸರನ್ನು ವಿಚ್ಛಿನ್ನಗೊಳಿಸಿದಳು. ನಂತರ ದೈತ್ಯರು ಕದಂಬ ಪದ್ಧತಿ

ಆರಂಭಿಸಿದಾಗ ಕಾತ್ಯಾಯನಿಯು ಆಗಸದಿಂದ ರಕ್ತ ಬೀಜನ ಮೇಲೆ ಬಾಣ ವೃಷ್ಟಿ ಮಾಡಿ ಜರ್ಜರಿತಗೊಳಿಸಿದಳು. ಆಗ ರಕ್ತಬೀಜನು ಕಾತ್ಯಾಯನಿಗೆ ಬೇರೊಬ್ಬರ ಬಲದಿಂದ ಗರ್ವ ತೋರಿಸಿದ ಶೌರ್ಯದಿಂದ ಮೆರೆಯಬೇಡ ಎಂದು ಅವಳ ಸಾಮರ್ಥ್ಯವನ್ನು ಅವಹೇಳನಗೊಳಿಸಿದಾಗ ಕಾತ್ಯಾಯನಿಯು, ನಾನೊಬ್ಬಳೆ ನಿನ್ನನ್ನು ಕೊಲ್ಲಲು ಸಮರ್ಥಳಾಗಿರುವೆ ಎಂದು ಹೋರಾಟಕ್ಕೆ ಸಿದ್ಧಳಾದಳು. ದೇವಿಯು ಭಯಂಕರ ರೂಪ ತಳೆದು, ತನ್ನ ಬಾಯಿಯ ಆಕಾರವನ್ನು ವಿಸ್ತೃತಗೊಳಿಸಿ ಕ್ಷಣಾರ್ಧದಲ್ಲಿ ಎಲ್ಲ ರಾಕ್ಷಸ ಸೈನ್ಯವನ್ನು ಬಾಯಿಯಲ್ಲಿ ಹಾಕಿಕೊಂಡಳು. ರಣಾವೇಶದಿಂದ ಉನ್ಮತ್ತನಾದ ರಕ್ತಬೀಜನು ಅವಳ ಮೇಲೆ ಏರಿ ಬಂದಾಗ ದೇವಿಯು, ನಿನ್ನ ರಕ್ತದಿಂದಲೇ ಮೃತ ವೀರರಿಗೆ ತರ್ಪಣೆ ಮಾಡುವೆ ಎಂದು ಗರ್ಜಿಸಿದಳು. ಭೈರವ ಗಣದ ಸಹಾಯವನ್ನು ನಿರಾಕರಿಸಿ ತಾನೊಬ್ಬಳೇ ಅವನನ್ನು ಎದುರಿಸಿದಳು. ರಕ್ತಬೀಜನು ಉಗ್ರ ತಪಸ್ಸು ಆಚರಿಸಿ ನನ್ನಿಂದಲೇ ಮುಕ್ತಿ ಪಡೆಯುವ ವರವನ್ನು ಪಡೆದುಕೊಂಡಿದ್ದಾನೆ ಎಂದು ಹೇಳಿ ದೈತ್ಯನಾದ ರಕ್ತಬೀಜನನ್ನು ಸಂಹರಿಸಿದಳು.

ಚರ್ಪಟಾಂಬಾ (ಚೋಪಟಾಯಿ) :

ಕೊಲ್ಲಾಸುರನು ಮಹಾಲಕ್ಷ್ಮಿಯ ಉಪಾಸನೆ ಮಾಡಿದ್ದರಿಂದ ಮಹಾಲಕ್ಷ್ಮಿಯು ಅವನ ಭಕ್ತಿಗೆ ಪ್ರಸನ್ನನಾದಳು. ನಿನ್ನ ಇಚ್ಛಾನುಸಾರ ವರ ಕೇಳು ಎಂದಳು. ಕೊಲ್ಲಾಸುರನು ದೇವಿಗೆ, ಮಾತೋಶ್ರೀ, 'ನೂರು ವರುಷಗಳವರೆಗೆ ನೀನು ಈ ಕ್ಷೇತ್ರವನ್ನು ತ್ಯಜಿಸಬೇಕು, ನಾನು ಎಲ್ಲ ದೇವರುಗಳನ್ನು ಗೆದೆಯುವಂತಾಗಬೇಕು' ಎಂದು ವರ ಕೇಳಿಕೊಂಡ. ದೇವಿಯು ಕೊಲ್ಲಾಸುರನಿಗೆ ತಥಾಸ್ತು ಹೇಳಿ, ತನ್ನ ಕ್ಷೇತ್ರವನ್ನು ಬಿಟ್ಟು ಹಿಮಾಲಯಕ್ಕೆ ಹೊರಟು ಹೋದಳು. ಆದರೆ ಕರವೀರ ಕ್ಷೇತ್ರದ ವಿಯೋಗದಿಂದ ಅತ್ಯಂತ ದುಃಖಿತಳಾದಳು. ಸ್ವತಃ ಕೊಲ್ಲಾಸುರನಿಗೆ ವರವಿತ್ತು ಅಗತಿಕಳಾದಳು. ಅವಳು ಒಂದೊಂದು ದಿವಸವನ್ನೂ ಒಂದೊಂದು ಯುಗಗಳಂತೆ ಅನುಭವಿಸಿದಳು. ಇತ್ತ ಕೊಲ್ಲಾಸುರನು ರತ್ನಾಸುರನನ್ನು ಪರ್ವತದ ರಕ್ಷಣೆಗಾಗಿ ನಿಯುಕ್ತಿಗೊಳಿಸಿದ. ಅಲ್ಲಿದ್ದು ಅವನು ಕರವೀರದ ಉತ್ತರ ದ್ವಾರವನ್ನು ರಕ್ಷಿಸುತ್ತಿದ್ದ. ರತ್ನಾಸುರನು ದೇವಿಯಲ್ಲಿಗೆ ತನ್ನ ಇಬ್ಬರು ದೂತರನ್ನು ಕಳಿಸಿದ. ಅವರು ದೇವಿಯ ಮೇಲೆ ಹಲ್ಲೆ ಮಾಡತೊಡಗಿದರು. ದೇವಿಯು ಅವರನ್ನು ಸಂಹರಿಸಿದಳು. ಅದರ ಸೇಡಿಗಾಗಿ ರತ್ನಾಸುರನು ತಾನೇ ಸೈನ್ಯ ಸಹಿತನಾಗಿ ದೇವಿಯ ಜೊತೆ ಯುದ್ಧಕ್ಕೆ ಹೊರಟ. ದೇವಿಯು ರತ್ನಾಸುರನ ಜೊತೆಗೆ ಯುದ್ಧ ಮಾಡುವುದಕ್ಕಾಗಿ ಚರ್ಪಟಾಂಬೆಯನ್ನು ಕಳಿಸಿದಳು. 'ಚರ್ಪಟಾಂಬೆ' ಅಥವಾ 'ಚೋಪಟಾಯಿ' ಎಂದು ಕರೆಯಲ್ಪಡುವ ದೇವಿಯು ಮಹಾಪರಾಕ್ರಮಿಯಾಗಿದ್ದಳು. ಅವಳು

ಅನೇಕ ದೈತ್ಯರಿಗೆ ರಕ್ತಸ್ನಾನ ಮಾಡಿಸಿದಳು. ಅವಳ ಶೌರ್ಯವನ್ನು ನೋಡಿ ರತ್ನಾಸುರ ಮಾಯಾವಿ ಯುದ್ಧ ಪ್ರಾರಂಭಿಸಿದ. ಚರ್ಪಟಾಂಬೆಯ ಮೇಲೆ ಬಾಣಗಳ ವೃಷ್ಟಿ ಹರಿಸಿದ. ಆದರೆ ಅವಳು ಎಲ್ಲ ಅಸ್ತ್ರಗಳನ್ನು ನಾಶಗೊಳಿಸಿದಳು. ಅದರ ನಂತರ ರತ್ನಾಸುರನು ಮಾಯೆಯಿಂದ ಅತಿ ಉಷ್ಣ ಮತ್ತು ಅತಿ ಶೀತ ಹವೆಯನ್ನು ನಿರ್ಮಿಸಿದ. ಆಕಾಶದಲ್ಲಿ ನಕ್ಷತ್ರ, ಚಂದ್ರ, ಸೂರ್ಯರನ್ನು ನಿರ್ಮಿಸಿದ. ಚರ್ಪಟಾಂಬೆಯ ಸೈನ್ಯಕ್ಕೆ ದಿನ ರಾತ್ರಿಗಳನ್ನು ಗುರುತಿಸುವುದು ಕಠಿಣವಾಯಿತು. ಆಗ ಚರ್ಪಟಾಂಬೆಯು ತನ್ನಲ್ಲಿಯ ಪ್ರಜ್ಞಾ ಶಸ್ತ್ರದಿಂದ ರಾಕ್ಷಸಿ ಮಾಯೆಯನ್ನು ನಾಶಗೊಳಿಸಿದಳು. ಖಡ್ಗದಿಂದ ರತ್ನಾಸುರನ ತಲೆಯನ್ನು ಕತ್ತರಿಸಿ ಹಾಕಿದಳು. ರತ್ನಾಸುರನು ಸತ್ತಮೇಲೆ ದೈತ್ಯಸೈನ್ಯವೆಲ್ಲಾ ಚೆಲ್ಲಾಪಿಲ್ಲಿಯಾಯಿತು. ಚರ್ಪಟಾಂಬೆಯು ರತ್ನಾಸುರನನ್ನು ಸಂಹರಿಸಿ, ವಿಜಯ ಸಂಪಾದಿಸಿ ರತ್ನಗಿರಿಯ ಕಡೆಗೆ ಹೊರಟಳು.

ಜೋತಿಬಾ :

ಜೋತಿಬಾ ಗುಡ್ಡ ಎಂದು ಗುರುತಿಸಲ್ಪಡುವ ಜೋತಿಬಾನ ಸ್ಥಾನವು ಮೊದಲು ರತ್ನಗಿರಿ ಎಂದು ಸಂಬೋಧಿಸಲ್ಪಡುತ್ತಿತ್ತು. ಇಂದಿಗೂ ಈ ಸ್ಥಾನವು ವಾಡಿ-ರತ್ನಾಗಿರಿ ಎಂದು ಪರಿಚಯಿಸಲ್ಪಡುತ್ತದೆ. ಜೋತಿಬಾ ಮಹಾರಾಷ್ಟ್ರದಲ್ಲಿಯ ಅನೇಕ ಜಾತಿ ಮತಗಳ ಜನರಿಗೆ ಕುಲದೇವನಾಗಿದ್ದಾನೆ. ಮಹಾರಾಷ್ಟ್ರದ ಕ್ಷೇತ್ರಪಾಲ ದೇವತೆ ಎಂದು ಗುರುತಿಸಲಾಗುವ ಭೈರವನ ಜೊತೆಗೆ ಜೋತಿಬಾನದು ಸಾಕಷ್ಟು ಸಾಮ್ಯ ಪ್ರವೃತ್ತಿಯಿದೆ. ಖಂಡೋಬನಂತೆ ಜೋತಿಬಾ ಸಹಿತ ಶಿವನ ಅವತಾರಿ ಪುರುಷನಾಗಿದ್ದಾನೆ. ಜೋತಿಬಾನ ಕಥೆಯು ಕೇದಾರ ಮಹಾತ್ಮ್ಯೆ ಎಂಬ ಸಂಸ್ಕೃತ ಗ್ರಂಥದಲ್ಲಿ ಉದ್ಧೃತವಾಗಿದೆ. ಹಿಮಕೇದಾರನು ಶ್ರೀ ಮಹಾಲಕ್ಷ್ಮಿಯ ಆಗ್ರಹದ ಮೇರೆಗೆ ದಕ್ಷಿಣಕ್ಕೆ ಬಂದನೆಂದು ಅವನಿಗೆ ದಕ್ಷಿಣ ಕೇದಾರ ಎನ್ನುತ್ತಾರೆ.

ಕೊಲ್ಲಾಸುರನ ಉಪಟಳದಿಂದ ಬಹಿಷ್ಕೃತಳಾಗಿದ್ದ ಮಹಾಲಕ್ಷ್ಮಿಗೆ ಪುನಃ ಕೊಲ್ಲಾಪುರದಲ್ಲಿ ಪ್ರತಿಷ್ಠಿತಗೊಳಿಸುವ ಕಾರ್ಯವನ್ನು ಇವನು ಪೂರ್ತಿಗೊಳಿಸಿದ. ಜೋತಿಬಾನ ಈ ಕಾರ್ಯಕ್ಕಾಗಿ ಅವನ ಸಹಾಯಕ್ಕೆ ಗಣಪತಿ ಭೈರವ, ಮಾತೃಕಾ ಮತ್ತು ಚರ್ಪಟಾಂಬಾ ಇವರೆಲ್ಲರೂ ಸಹಕರಿಸಿದರು. ಕೇದಾರನಾಥನು ಈ ಸೈನ್ಯದ ಸಹಾಯದಿಂದ ರತ್ನಾಸುರ ಹಾಗೂ ಆತನ ಸೈನ್ಯವನ್ನು ನಾಶಗೊಳಿಸಿದ. ರತ್ನಾಸುರನು ಎಲ್ಲಿ ಸತ್ತು ಬಿದ್ದನೋ ಆ ಪರ್ವತಕ್ಕೆ ನಂತರ ರತ್ನಗಿರಿ ಎಂದು ಹೆಸರು ಬಂದಿತು. ಜೋತಿಬಾನ ಶೌರ್ಯದಿಂದ ಮಹಾಲಕ್ಷ್ಮಿಯು ಕೊಲ್ಲಾಪುರದಲ್ಲಿ ಪುನಃ ಪ್ರತಿಷ್ಠಾಪಿತಗೊಂಡಳು. ಅವಳ ಆಗ್ರಹದಿಂದಲೇ ಜೋತಿಬಾ ರತ್ನಗಿರಿಯ

ಮೇಲೆ ಶಾಶ್ವತವಾಗಿ ನೆಲೆಯೂರಿದ. ಜೋತಿಬಾ ದೇವತೆಯು ಗ್ವಾಲ್ಹೇರ ಸಿಂಧೆ ಮನೆತನದ ಕುಲದೈವವಾಗಿದ್ದಾನೆ.

ರತ್ನಾಸುರನ ವಧೆಗಾಗಿ ಚರ್ಪಟಾಂಬೆಯೂ ಕಠಿಣ ಶ್ರಮ ವಹಿಸಬೇಕಾಯಿತು. ರತ್ನಾಸುರನ ಜೊತೆಗೆ ಯುದ್ಧ ಮುಗಿಸಿ ಹೋಗುವಷ್ಟರಲ್ಲಿ ರಕ್ತಭೋಜ ರಾಕ್ಷಸನು ಚರ್ಪಟಾಂಬೆಯ ಮೇಲೆ ಮುನ್ನುಗ್ಗಿ ಬಂದ. ಆಗ ಮಹಾಲಕ್ಷ್ಮಿಯು ಚಿಂತಿತಳಾದಳು. ಆಗ ಕೇದಾರನಾಥನು ದೇವಿಗೆ ಚಿಂತಿಸುವುದೇಕೆ ಮಾತೆ? ನಿಮ್ಮ ಕೃಪೆಯಿಂದ ನಿಮ್ಮ ಚಿಂತೆಯನ್ನು ನಿವಾರಿಸಬಲ್ಲೆ ಎಂದಾಗ ದೇವಿಯು ರಕ್ತಭೋಜನ ವಧೆಗಾಗಿ ಚರ್ಪಟಾಂಬೆಗೆ ಸಹಕರಿಸಲು ಹೇಳಿದಳು. ರವಳನಾಥನು ತನ್ನ ಸೈನ್ಯದೊಂದಿಗೆ ರಕ್ತರ್ಭೋನನ್ನು ಎದುರಿಸಲು ಆಗಮಿಸಿದ. ಮಹಾಲಕ್ಷ್ಮಿಗೆ ಯುದ್ಧದಲ್ಲಿ ಸಹಕರಿಸಲು ಹಿಮಾಲಯದಿಂದ ಬಂದಿರುವೆನೆಂದು ರಕ್ತರ್ಭೋನಿಗೆ ಹೇಳಿದ. ಚರ್ಪಟಾಂಬೆಯು ಮಹಾಲಕ್ಷ್ಮಿಯ ಸಖಿಯಾಗಿದ್ದಾಳೆ. ಅವಳು ಶೌರ್ಯದಿಂದ ರತ್ನಾಸುರನನ್ನು ಕೊಂದಿದ್ದಾಳೆ. ಈಗ ನಿನ್ನನ್ನು ಸಂಹರಿಸಲು ಜಗದಂಬೆಯು ನನ್ನನ್ನು ಕಳುಹಿಸಿದ್ದಾಳೆ. ಯುದ್ಧಕ್ಕೆ ಸಿದ್ಧನಾಗು ಎಂದು ಹೇಳಿದಾಗ ರಕ್ತಭೋಜನು ಬಾಣಗಳ ಮಳೆಯನ್ನು ಸುರಿಸಿದ. ಕೇದಾರನಾಥನು ಕೋದಂಡದಿಂದ ಬಾಣಗಳನ್ನು ಛೇದಿಸಿದ. ಅನೇಕ ವೀರರನ್ನು ಸೋಲಿಸಿದ. ಚರ್ಪಟಾಂಬೆಯೂ ಹೋರಾಡಿದಳು. ಸ್ತ್ರೀಯರ ಸಹಾಯದಿಂದ ಏನು ಶೌರ್ಯ ತೋರಿಸುತ್ತಿರುವಿ, ಧೈರ್ಯವಿದ್ದರೆ ಒಬ್ಬನೇ ಬಾ ಎಂದು ರಕ್ತಭೋಜನು ಹೇಳಿದಾಗ ಇಬ್ಬರಲ್ಲಿ ಘನಘೋರ ಯುದ್ಧ ನಡೆಯಿತು. ಕೇದಾರನಾಥನು ಶೌರ್ಯದಿಂದ ರಕ್ತಭೋಜನ ಶಿರಚ್ಛೇದ ಮಾಡಿದ. ವಿಜಯಿಯಾಗಿ ಕೇದಾರನಾಥ ಮತ್ತು ಚರ್ಪಟಾಂಬೆಯು ರತ್ನಗಿರಿಗೆ ಬಂದರು. ಕೇದಾರನು ರತ್ನಗಿರಿಯ ಮೇಲೆ ಲಿಂಗವನ್ನು ಸ್ಥಾಪಿಸಿದ, ಮಹಾಲಕ್ಷ್ಮಿಯ ಆದೇಶದ ಮೇರೆಗೆ ವಾಡಿ ರತ್ನಾಗಿರಿ ಗುಡ್ಡದ ಮೇಲೆಯೇ ಸ್ಥಾಯಿಯಾದ. ಲಕ್ಷ್ಮಿಯ ರಕ್ಷಣೆಗಾಗಿ ಕೇದಾರದಿಂದ ಬಂದು ಅವಳ ಆದೇಶದಂತೆ ವಾಡಿ ರತ್ನಾಗಿರಿಯ ಗುಡ್ಡದ ಮೇಲೆಯೇ ನೆಲೆಸಿ ಮಹಾಲಕ್ಷ್ಮಿಯ ಪರಿವಾರದ ಸದಸ್ಯನಾದ.

ಮಹಾಲಕ್ಷ್ಮಿ ಮತ್ತು ಪೀಟಜೆ :

ವಿವಿಧ ತೀರ್ಥಕಲ್ಪ ಮತ್ತು ಪ್ರಬಂಧ ಕೋಶ ಎಂಬ ಜೈನ ಗ್ರಂಥಗಳಲ್ಲಿ ಉಲ್ಲೇಖಿತವಾಗಿರುವ ಮಹಾಲಕ್ಷ್ಮಿಯು ಯಾದವರ ಕಾಲದಲ್ಲಿ ಪೈಠಣದ ಅಧಿದೇವತೆಯಾಗಿದ್ದಳು. ಅದೇ ರೀತಿ ಇದು ಪೀಟಜಾ ದೇವಿಯ ಸ್ಥಾನವೂ ಆಗಿತ್ತು. ಎಂಬುದು ಮಹಾನುಭಾವರ ಗ್ರಂಥದ ಸಾಕ್ಷಿಯಿಂದ ಸಿದ್ಧಗೊಳ್ಳುತ್ತದೆ. ೨೯ ವಿವಿಧ ತೀರ್ಥಕಲ್ಪ ಮತ್ತು

ಪ್ರಬಂಧಕೋಶ ಈ ಎರಡು ಜೈನ ಗ್ರಂಥಗಳಲ್ಲಿ ಶ್ರೀ ಮಹಾಲಕ್ಷ್ಮಿಯ ಬಗ್ಗೆ ಮಹತ್ವಪೂರ್ಣ ನಿರ್ದೇಶನವಿದ್ದು ಕರವೀರ ಕ್ಷೇತ್ರ, ಅಲ್ಲಿಯ ಮಹಾಲಕ್ಷ್ಮಿ ಹಾಗೂ ಪೈಠಣದ ಜೊತೆಗಿರುವ ಸಂಬಂಧವನ್ನು ಒಂದು ಕಥೆಯ ಮುಖಾಂತರ ಸ್ಪಷ್ಟೀಕರಣಗೊಳಿಸಿದೆ. ವಿವಿಧ ತೀರ್ಥಕಲ್ಪವು ಜಿನಪ್ರಭು ಸೂರಿಯ ರಚನೆಯಾಗಿದೆ. ಪ್ರಬಂಧಕೋಶವು ರಾಜಶೇಖರ ಸೂರಿಯ ರಚನೆಯಾಗಿದೆ. (ರಾಜಶೇಖರ ಸೂರಿ, ೧೩೪೮.) ಇಬ್ಬರೂ ಸಮಕಾಲೀನರಾಗಿದ್ದು, ಇವರು ಜೈನ ಧರ್ಮದ ಅನುಯಾಯಿಗಳಾಗಿದ್ದಾರೆ. ರಾಜಶೇಖರ ಸೂರಿಯು ವಿವಿಧ ತೀರ್ಥಕಲ್ಪದಲ್ಲಿಯ ಕಥೆಯನ್ನು ತನ್ನ ಪ್ರಬಂಧಕೋಶದಲ್ಲಿ ಯಥಾ ರೀತಿಯಾಗಿ ಅನುಕರಣ ಮಾಡಿದ್ದಾನೆ. ಶ್ರೀಲಕ್ಷ್ಮಿಗೆ ಸಂಬಂಧಿಸಿದ ಈ ಕಥೆಯು ಕೆಳಗಿನಂತಿದೆ:

ಪೈಠಣದಲ್ಲಿ ಶಾತವಾಹನ ರಾಜನು ರಾಜ್ಯವಾಳುತ್ತಿದ್ದ. ರಾಜನು ಶೂದ್ರಕ ಎಂಬ ಹೆಸರಿನ ವ್ಯಕ್ತಿಯ ಶಕ್ತಿಬಲಕ್ಕೆ ಮೆಚ್ಚಿ ಅವನನ್ನು ಪೈಠಣದ ಕೊತವಾಲನನ್ನಾಗಿ ನೇಮಿಸಿದನು. ಶೂದ್ರಕನ ಪ್ರತಿಷ್ಠೆ ದಿನದಿನವೂ ವೃದ್ಧಿಸುತ್ತಿತ್ತು. ಒಂದು ಸಲ ಮಾಯಸುರನೆಂಬ ರಾಕ್ಷಸನು ರಾಣಿಗೆ ಮೈಮರೆಸುವಂತೆ ಮಾಡಿ ಅವಳನ್ನು ಓಡಿಸಿಕೊಂಡು ಹೋದ. ಶೂದ್ರಕನ ಪ್ರತಿಷ್ಠೆಯನ್ನು ಸಹಿಸದ ಜನರು ಆರೋಪವನ್ನು ಶೂದ್ರಕನ ತಲೆಗೆ ಕಟ್ಟಿದರು. ರಾಜನು ಇದನ್ನೇ ನಿಜವೆಂದು ನಂಬಿ ಶೂದ್ರಕನನ್ನು ಶೂಲಕ್ಕೇರಿಸುವ ಶಿಕ್ಷೆ ವಿಧಿಸಲು ನಿರ್ಣಯಿಸಿದ. ಆದರೆ ಶೂದ್ರಕನು ರಾಣಿಯನ್ನು ಹುಡುಕಿ ತರಲು ಕಾಲಾವಕಾಶ ಬೇಡಿದ. ನಂತರ ಶೂದ್ರಕನು ತನ್ನ ಪಳಗಿದ ನಾಯಿಯ ಸಹಾಯದಿಂದ ರಾಣಿಯನ್ನು ಶೋಧಿಸುತ್ತ ಶೋಧಿಸುತ್ತ ಕೊಲ್ಲಾಪುರದ ಮಹಾಲಕ್ಷ್ಮಿಯ ಮಂದಿರದವರೆಗೆ ಬಂದ. ಅಲ್ಲಿ ಅವನು ದೇವಿಯನ್ನು ಪೂಜಿಸಿ ಉಪವಾಸ ವ್ರತವನ್ನು ಮಾಡಿ ದೇವಿಯನ್ನು ಪ್ರಸನ್ನಗೊಳಿಸಿದ. ದೇವಿಯ ಕೃಪೆಯಿಂದ ರಾಕ್ಷಸರನ್ನು ಪರಾಭವಗೊಳಿಸಿ ಅವರಿಂದ ರಾಣಿಯನ್ನು ಮುಕ್ತಗೊಳಿಸಿದ. ಕೊಲ್ಲಾಪುರದ ಮಹಾಲಕ್ಷ್ಮಿಯ ಪ್ರತೀಕವೆಂದು ಪೈಠಣ ನಗರದಲ್ಲಿ ಮಹಾಲಕ್ಷ್ಮಿಯ ಮಂದಿರವನ್ನು ಕಟ್ಟಿಸಿದ. ಆದರೆ ಈ ಘಟನೆಯ ನಂತರ ಪೈಠಣದ ರಾಜನು ದುರ್ಬುದ್ಧಿಯ ವಶನಾಗಿ ತನ್ನ ರಾಜ್ಯದಲ್ಲಿಯ ಎಲ್ಲ ಸುಂದರ ತರುಣಿಯರನ್ನು ಬಲವಂತದಿಂದ ಕರೆಸಿ ಮದುವೆಯಾದ. ಇದರಿಂದ ನಗರದ ಜನರು ದುಃಖಿತರಾದರು. ಈ ಅನ್ಯಾಯದ ವಿರುದ್ಧ ಒಬ್ಬ ನಾಗರಿಕನು ಪೀಟಜಾ ಹೆಸರಿನ ಉಗ್ರ ದೇವತೆಯನ್ನು ಪ್ರಾರ್ಥಿಸಿದ. ದೇವಿಯು ಪ್ರಸನ್ನಳಾದಳು ಹಾಗೂ ದೇವಿಯು ರಾಜನ ಸ್ವಂತ ಕನ್ಯೆಯ ರೂಪವನ್ನೇ ಧರಿಸಿ ರಾಜನನ್ನು ಸಂಹರಿಸಿದಳು. ಪೈಠಣದಲ್ಲಿಯ ಶ್ರೀ ಮಹಾಲಕ್ಷ್ಮಿ ಮತ್ತು ಪೀಟಜಾ ದೇವಿಯರ ಪ್ರತಿಷ್ಠಾಪನೆಯ ಬಗ್ಗೆ ಈ ಕಥೆಯು ಸ್ಪಷ್ಟೀಕರಣವನ್ನು ನೀಡುತ್ತದೆ. ಪೀಟಜಾ ದೇವಿಯ ಸ್ಥಾನವು ಪೈಠಣದ ಮುಖ್ಯ ಮಾರ್ಗದ ಆಚೆಗೆ ಇದೆ ಎಂದು ಪ್ರಬಂಧ

ಕೋಶದಲ್ಲಿ ಹೇಳಲಾಗಿದೆ. ಪೈಠಣದಲ್ಲಿಯ ಗೋದಾವರಿ ನದಿಗೆ ಕಟ್ಟಿರುವ ಘಟ್ಟಗಳಲ್ಲಿಯ ಒಂದು ಘಟ್ಟದ ಹೆಸರು. ಮಹಾಲಕ್ಷ್ಮಿ ಘಟ್ಟ ಎಂದೇ ಪ್ರಸಿದ್ಧಿ ಪಡೆದಿದೆ. ನದಿಯ ತೀರದ ಎತ್ತರದ ಭಾಗದಲ್ಲಿ ಮೊದಲು ಮಹಾಲಕ್ಷ್ಮಿಯ ಮಂದಿರವಿತ್ತು. ಆದರೆ ಕಾಲಾಂತರದಲ್ಲಿ ವಿಧರ್ಮೀಯರ ಆಕ್ರಮಣ ಕಾಲದಲ್ಲಿ ಮಹಾಲಕ್ಷ್ಮಿಯ ಮಂದಿರವು ನಾಶವಾಯಿತು, ಹಾಗೂ ಆ ಸ್ಥಳದಲ್ಲಿ ಆಕ್ರಮಣಕಾರರ ಧರ್ಮಶ್ರದ್ಧೆಯ ಸ್ಥಾನ ನಿರ್ಮಾಣವಾಯಿತು. ಇದು ಕೊಲ್ಲಾಪುರ ಮತ್ತು ಪೈಠಣ ಕ್ಷೇತ್ರಗಳ ಸಂಬಂಧವನ್ನು ಭಾವ ಬಂಧನದಿಂದ ಬೆಸೆಯುವ ಕಥೆಯಾಗಿದೆ.

ಮಹಾನುಭಾವ ಸಂಪ್ರದಾಯದ ಪ್ರವರ್ತಕರಾದ ಚಕ್ರಧರನು ತನ್ನ ಸಂಪ್ರದಾಯ ಪ್ರವರ್ತನ ಕಾರ್ಯವನ್ನು ಪೈಠಣದಿಂದಲೇ ಪ್ರಾರಂಭಿಸಿದ್ದಾರೆ. ಅಲ್ಲಿ ಅವನು ದೀರ್ಘ ಕಾಲದವರೆಗೆ ವಾಸವಾಗಿದ್ದನು. ಪೈಠಣದಲ್ಲಿಯ ಅನೇಕ ಮಠ ಮಂದಿರಗಳ ಜೊತೆಗೆ ಅವನ ಸಂಬಂಧವಿತ್ತು. ಮಹಾಲಕ್ಷ್ಮಿ ಹಾಗೂ ಪೀಟಜಾ ಈ ಎರಡೂ ದೇವತೆಗಳ ಸ್ಥಾನದ ವಿಷಯಗಳ ಬಗ್ಗೆ ಸ್ಥಾನಪೋತಿಯ ಗ್ರಂಥಕಾರನು ಹೇಳಿರುವುದೆಂದರೆ ಕೇವಲ ಚಕ್ರಧರನ ಕಾಲದಲ್ಲಿ ಮಾತ್ರವಲ್ಲ, ನಂತರ ಮುನಿವಾಸ ಕೋರಿಯ ಕಾಲದಲ್ಲೂ ಪೈಠಣದಲ್ಲಿ ಪೀಟಜಾ ಮತ್ತು ಮಹಾಲಕ್ಷ್ಮಿ ದೇವಿಯರ ಮಂದಿರಗಳಿದ್ದವು. ಮುಸಲ್ಮಾನರ ಆಕ್ರಮಣದಿಂದ ಒಂದೇ ಪ್ರಾಕಾರದಲ್ಲಿದ್ದ ಲಕ್ಷ್ಮಿ, ರೇಣುಕಾ ಮತ್ತು ಗಣೇಶರ ಮೂರ್ತಿಗಳನ್ನು ಉಧ್ವಸ್ಥಗೊಳಿಸಿ ಅಲ್ಲಿ ಮಸೀದೆ ಕಟ್ಟಲಾಯಿತು ಎಂಬುದನ್ನು ಸೇತುಮಾಧವ ಪಗಡಿಯವರು ಸೂಫಿ ಸಂಪ್ರದಾಯ ಎಂಬ ಸಂಶೋಧನ ಪ್ರಬಂಧದಲ್ಲಿ ಉಲ್ಲೇಖಿಸಿದ್ದಾರೆ. ೩೦ ಪರಕೀಯರ ಆಕ್ರಮಣದಿಂದ, ಅವರ ವಿಧ್ವಂಸಕ ಕೃತ್ಯಗಳಿಂದ, ಎಷ್ಟೋ ಹಿಂದೂ ದೇವತಾಕ್ಷೇತ್ರಗಳು ಹೇಳ ಹೆಸರಿಲ್ಲದಂತಾಗಿವೆ ಎಂಬುದು ಪೈಠಣದಲ್ಲಿ ಮರೆಯಾದ ಮಹಾಲಕ್ಷ್ಮಿ ದೇವಸ್ಥಾನದಂತಹ ಉದಾಹರಣೆಗಳಿಂದ ನಮ್ಮ ಗಮನಕ್ಕೆ ಬರುತ್ತವೆ.

ತುಳಜಾ ಭವಾನಿ ಮತ್ತು ಮಹಾಲಕ್ಷ್ಮಿ :

ಆದಿಶಕ್ತಿಯು ಮಹಾಮಾಯೆಯ ತ್ರಿಗುಣಾತ್ಮಕ, ತ್ರಿರೂಪಾತ್ಮಕ ಸ್ವರೂಪವನ್ನು ಪಡೆದವಳಾಗಿದ್ದಾಳೆ. ಅವಳ ತ್ರಿರೂಪಗಳೆಂದರೆ, ಮಹಾಲಕ್ಷ್ಮಿ, ಮಹಾಕಾಳಿ ಮತ್ತು ಮಹಾ ಸರಸ್ವತಿ. ಅವಳ ಮೂರು ಗುಣಗಳೆಂದರೆ ರಜೋಗುಣ, ತಮೋಗುಣ ಮತ್ತು ಸತ್ವಗುಣ. ಅವಳ ಮೂರು ಕ್ರಿಯೆಗಳೆಂದರೆ ಸೃಷ್ಟಿ, ಸ್ಥಿತಿ ಮ್ತತು ಲಯ. ಮಹಾಲಕ್ಷ್ಮಿಯು ರಜೋಗುಣದ ದೇವತೆ, ಮಹಾಕಾಳಿ ತಮೋಗುಣದ ದೇವತೆ ಮತ್ತು ಮಹಾ ಸರಸ್ವತಿಯು ಸತ್ವಗುಣದ ದೇವತೆಯಾಗಿದ್ದಾಳೆ. ಮಹಾಕಾಳಿಯ ಅಂಶಾವತಾರವೇ ತುಳಜಾ ಭವಾನಿಯಾಗಿದ್ದಾಳೆ. ಮಹಾರಾಷ್ಟ್ರದ ಶಕ್ತಿ ಪೀಠದ

ಗಣನೆಗನುಸಾರವಾಗಿ ಮೂರುವರೆ ಶಕ್ತಿಪೀಠಗಳಿವೆ. ಈ ಮೂರುವರೆ ಶಕ್ತಿಪೀಠಗಳಲ್ಲಿ ನಾಲ್ಕು ಶಕ್ತಿ ದೇವತಾ ಕ್ಷೇತ್ರಗಳ ಸಮಾವೇಶವಾಗಿದೆ. ತುಳಜಾಪುರ, ಮಾಹೂರ ಮತ್ತು ಕೊಲ್ಲಾಪುರ ಕ್ಷೇತ್ರಗಳಿಗೆ ಶಕ್ತಿಯ ಪೂರ್ಣಸ್ಥಾನದ ಅರ್ಹತೆ ದೊರೆತಿದ್ದರೆ, ಸಪ್ತ ಶೃಂಗವು ಅರ್ಧಪೀಠವೆಂದು ಪರಿಗಣಿಸಲ್ಪಟ್ಟಿದೆ. ದೇವಿ ಭಾಗವತದ ಪ್ರಕಾರ ಕೊಲ್ಲಾಪುರಕ್ಕೆ ಮೊದಲ ಸ್ಥಾನದ ಕ್ರಮಾಂಕವು ದೊರೆತಿದೆ. ಮಹಾರಾಷ್ಟ್ರದ ಶಕ್ತಿಪೀಠದ ಗಣನೆಗನುಸಾರವಾಗಿ ತುಳಜಾಪುರಕ್ಕೆ ಮೊದಲ ಸ್ಥಾನ ದೊರೆತಿದ್ದು, ಎರಡನೆಯದು ಮಾಹೂರ ಮತ್ತು ಮೂರನೆಯದು ಕೊಲ್ಲಾಪುರವೆಂದು ಹೇಳಲಾಗಿದೆ.

"ಏಕ ಪೀಠ ತೆ ತುಳಜಾಪುರ
ದ್ವಿತೀಯ ಪೀಠ ತೇ ಮಾಹೂರ
ತೃತೀಯ ಪೀಠ ತೇ ಕೊಲ್ಲಾಪುರ
ಅರ್ಧಪೀಠ ಸಪ್ತಶೃಂಗಿ"(ಸಾಡೇ ತೀನ ಶಕ್ತಿಪೀಠೆ, ತುಳಜಾ ಭವಾರಿ ಸಂಪಾದಕ, ಆನಂದ ಘನರಾಮ, ಪು. ೨೯, ೨೦೦೮)

ಎಂದು ವರ್ಣಿಸಲಾಗಿದೆ. ಸೊಲ್ಲಾಪುರದಿಂದ ಉತ್ತರಕ್ಕೆ ಸುಮಾರು ೨೮ ಕಿ.ಮಿ. ಅಂತರದಲ್ಲಿ ತುಳಜಾಪುರ ನಗರವಿದ್ದು, ಇದು ತುಳಜಾ ಭವಾನಿಯ ಪ್ರಸಿದ್ಧ ಕ್ಷೇತ್ರವಾಗಿದೆ. ತುಳಜಾ ಭವಾನಿ ನೆಲೆಸಿರುವ ಈ ಎತ್ತರ ಪ್ರದೇಶಕ್ಕೆ 'ಯಮುನಾಚಲ'ವೆಂಬ ಹೆಸರಿದೆ. ಯಮುನಾಚಲದಲ್ಲಿ ದೇವಿಯ ಅವತರಣ ಹೇಗೆ ಆಯಿತು ಎನ್ನುವುದಕ್ಕೆ ಸ್ಕಂದ ಪುರಾಣದ ಸಹ್ಯಾದ್ರಿ ಖಂಡದಲ್ಲಿ ಒಂದು ಕಥೆಯಿದೆ.

ಕೃತಾಯುಗದಲ್ಲಿ ಕರ್ದಮ ಹೆಸರಿನ ಋಷಿಯಿದ್ದ. ಅವನ ಪತ್ನಿ ಅನುಭೂತಿಯು ಪತಿವ್ರತೆಯಾಗಿದ್ದಳು. ಹಾಗೂ ಸೌಂದರ್ಯವತಿಯೂ ಆಗಿದ್ದಳು. ಅವರ ಸಂಸಾರ ಸುಖವಾಗಿ ವ್ಯವಸ್ಥಿತವಾಗಿತ್ತು. ಆದರೆ ದುರ್ದೈವದಿಂದ ಕರ್ದಮ ಋಷಿಯ ನಿಧನವಾಯಿತು. ಮಹಾಸತಿ ಅನುಭೂತಿಯು ಸತಿ ಹೋಗಲು ನಿರ್ಧರಿಸಿದಳು. ಆದರೆ ಆಕೆ ಗರ್ಭವತಿಯಾಗಿದ್ದುದರಿಂದ ಋಷಿ ಮುನಿಗಳು ಅವಳಿಗೆ ಸಹಗಮನ ಮಾಡಲು ಅನುಮತಿ ನೀಡದೆ ತಾಪಸಿ ಜೀವನ ನಿರ್ವಹಿಸುವಂತೆ ಸಲಹೆ ನೀಡಿದರು. ಅನುಭೂತಿ ಮಂದಾಕಿನಿ ನದಿ ತೀರದಲ್ಲಿ ಆಶ್ರಮ ಮಾಡಿ ಇರತೊಡಗಿದಳು. ಅವಳು ತಪಶ್ಚರ್ಯವನ್ನು ಪ್ರಾರಂಭಿಸಿದಳು. ಕುಕ್ಕುಟ ಹೆಸರಿನ ದೈತ್ಯನೊಬ್ಬ ಅಲ್ಲಿಗೆ ಬಂದ. ಅನುಭೂತಿಯನ್ನು ನೋಡಿ ಅವಳ ಸೌಂದರ್ಯಕ್ಕೆ ಮರುಳಾದ. ಕುಕ್ಕುಟನಿಗೆ ಬೇಕಾದ ರೂಪವನ್ನು ಪಡೆಯುವ ವರವಿದ್ದುದರಿಂದ ತಾನು ಅಜಿಂಕ್ಯನೆಂದು ತಿಳಿದಿದ್ದ. ಯಾವುದೇ ವಿಚಾರಕ್ಕೂ ಅವಕಾಶ ಕೊಡದೆ ಅನುಭೂತಿಯನ್ನು ಸ್ಪರ್ಶಿಸಿದ. ಮಹಾಸತಿಯ

ತಪೋಭಂಗವಾಯಿತು. ಅವಳು ಎಚ್ಚತ್ತು, ಆಪತ್ತಿನಿಂದ ಪಾರು ಮಾಡುವಂತೆ ಭಗವತಿಯ ಪ್ರಾರ್ಥನೆ ಮಾಡಿದಳು. ಅವಳ ಪ್ರಾರ್ಥನೆಯಿಂದ ಅಷ್ಟಭುಜದಮಹಿಷಾಸುರ ಮರ್ದಿನಿ ಅಲ್ಲಿ ಪ್ರಕಟಗೊಂಡಳು. ಆದಿಶಕ್ತಿಯ ಆಶೀರ್ವಾದದಿಂದ ಅನುಭೂತಿಗೆ ತೊಂದರೆ ಕೊಡಲು ಮಹಿಷರೂಪದಲ್ಲಿ ಬಂದಿದ್ದ ಕುಕ್ಕಟನ ಅಂತ್ಯವಾಯಿತು. ದೇವಿಯು ಪ್ರಕಟಗೊಂಡ ಆ ಪರ್ವತದ ಹೆಸರು ಯಮುನಾಚಲ. ಅನುಭೂತಿಯ ಪ್ರಾರ್ಥನೆಯಿಂದ ಭಗವತಿಯು ತನ್ನ ವಾಸ್ತವ್ಯವನ್ನು ಅಲ್ಲಿ ಮಾಡಿದಳು. ಇಲ್ಲಿ ದೇವಿಯ ವಾಸ್ತವ್ಯವಿರುವುದರಿಂದ ಯಮ್ಮನ ಗುಡ್ಡ ಎಂದು ಕರೆಯುತ್ತಾರೆ. ಮರಾಠಿಯಲ್ಲಿ ಇದಕ್ಕೆ 'ಯಮಾಯಿಚಾ ಡೊಂಗರ ಎಂದು ಕರೆಯುತ್ತಾರೆ.

ತುಳಜಾಪುರದ ಹಳೆಯ ಹೆಸರು ಚಿಂಚಪುರ. ದೇವಾಲಯವಿರುವ ಸ್ಥಾನವು ಸಂಪೂರ್ಣವಾಗಿ ಹುಣಸೆ ಮರಗಳಿಂದ ವ್ಯಾಪಿಸಿತ್ತು. ಅದರ ಕುರುಹಾಗಿ ಇಂದಿಗೂ ದೇವಾಲಯದ ಎದುರಿಗೆ ಒಂದು ಹುಣಸೆಯ ಮರವಿದೆ. ಹಳೆಯ ದಾಖಲೆ ಪತ್ರಗಳಲ್ಲಿ ಚಿಂಚಪುರ ಸ್ಥಳದ ಉಲ್ಲೇಖವಿದೆ. ಅನುಭೂತಿಯ ಕರೆಗೆ ದೇವಿಯು ಧಾವಿಸಿ ಇಲ್ಲಿಗೆ ಬಂದುದರಿಂದ ಅವಳು ತ್ವರಿತಾ ಆದಳು. ತ್ವರಿತಾ ಶಬ್ದದಿಂದ ತುರಜಾ, ನಂತರ ತುಳಜಾ ಎಂಬ ಶಬ್ದ ಸ್ವರೂಪ ಪಡೆದಿದೆ. ತುಳಜಾ ಭವಾನಿಯ ಮಂದಿರವು ಪೂರ್ವಭಿಮುಖವಾಗಿದ್ದು, ಗರ್ಭಗೃಹ, ಗೂಢ ಮಂಟಪ ಮತ್ತು ೧೬ ಕಂಬಗಳ ಸಭಾ ಮಂಟಪಗಳನ್ನು ಒಳಗೊಂಡಿದೆ. ಪ್ರಾಕಾರದಲ್ಲಿ ಅನೇಕ ಪರಿವಾರ ದೇವತೆಗಳ ಮಂದಿರಗಳಿವೆ. ಮುಖ್ಯ ಮಂದಿರದಲ್ಲಿ ಭವಾನಿಯು ಅಷ್ಟಭುಜ ಮಹಿಷ ಮರ್ದಿನಿಯ ರೂಪದಲ್ಲಿದ್ದಾಳೆ. ಅವಳ ಮಸ್ತಕದ ಮೇಲೆ ಸಯೋನಿ-ಶಿವಲಿಂಗವಿದೆ. ಕೈಯಲ್ಲಿ ತ್ರಿಶೂಲ, ಬಾಣ. ಚಕ್ರ, ಶಂಖ, ಧನುಷ್ಯ, ಪಾನಪಾತ್ರೆ ಮತ್ತು ಮಹಿಷಾಸುರನ ಶಿಖೆ ಇದೆ. ಎಡಗಾಲು ಭೂಮಿಯ ಮೇಲೆ ಊರಲಾಗಿದ್ದು, ಬಲಗಾಲನ್ನು ಮಹಿಷಾಸುರನ ಶರೀರದ ಮೇಲೆ ಒತ್ತಿದ್ದಾಳೆ. ಎರಡೂ ಕಾಲಿನ ಮಧ್ಯದಲ್ಲಿ ಮಹಿಷಾಸುರನ ತಲೆ ಇದೆ. ಮಹಿಷಾಸುರನ ಬಲಗಡೆಗೆ ದೇವಿಯ ವಾಹನ, ಸಿಂಹವಿದೆ. ಅದರ ಕೆಳಗೆ ಮಾರ್ಕಂಡೇಯ ಋಷಿಯ ಮೂರ್ತಿಯಿದೆ. ಉದಾತ್ತ ಜೀವನಾರ್ಥದ ಪ್ರೇರಕ ಪ್ರತೀಕವಾಗಿರುವ ಮಹಿಷ ಮರ್ದಿನಿಯ ರೂಪವು ನಾರಿ ತತ್ವದ ಶಕ್ತಿಶಾಲಿ ರೂಪವಾಗಿದೆ. ಸರ್ವ ಅರಿಷ್ಟ ಶಕ್ತಿಯ ನಿರ್ಮೂಲನ ಮಾಡಿದ ನಂತರ ಋಷಿ ಮುನಿಗಳು, ದೇವತೆಗಳು ಅವಳ ಸ್ತವನವನ್ನು ಹೀಗೆ ಮಾಡಿದ್ದಾರೆ. ನಮಸ್ತಸ್ಯೆ, ನಮಸ್ತಸ್ಯೆ, ನಮೋನಮಃ ಅವಳನ್ನು ಹೀಗೆ ಸ್ತುತಿಸುತ್ತ ಅವಳ ಸರ್ವಭೂತಾಂತರ್ಯಾಮಿ ತತ್ವರೂಪವನ್ನು ಅನುಭವಿಸಿದ್ದಾರೆ. ಮಹಿಷಾಸುರ ಮರ್ದಿನಿ ಇದು ಉದಾತ್ತ ಜೀವನಾರ್ಥದ ತೇಜೋಮಯ ಪ್ರತೀಕವಾಗಿದೆ.

ಚಂದ್ರ ಸೂರ್ಯರ ಕರ್ಣಭೂಷಣಗಳಿಂದ ಅಲಂಕೃತಳಾದ, ಭಾಲನೇತ್ರಸಹಿತ ಮೂರು ನೇತ್ರಗಳುಳ್ಳ, ಕೈಯಲ್ಲಿ ಶೂಲವನ್ನು ಧಾರಣ ಮಾಡಿರುವ, ಅಸುರ ಶತ್ರುಗಳ ವಿನಾಶಕ್ಕಾಗಿ ಆಯುಧಗಳನ್ನು ಧಾರಣ ಮಾಡಿ, ಸಜ್ಜಾಗಿರುವ ಮಹಾಕಾಳಿಯ ರೂಪದ ಆದಿಶಕ್ತಿ ತುಳಜಾಭವನಿಗೆ ನಾನು ವಂದಿಸುತ್ತೇನೆ. ಅತಿಕಾಲರೂಪಾಮ್ ಈ ಮಹಾಕಾಳಿಯ ವಿಶೇಷಣವು ಲಕ್ಷಣೀಯವಾಗಿದೆ. ಈ ಅತಿಕಾಲಿರೂಪಾ ವಿಶೇಷಣದಿಂದ ತುಳಜಾ ಭವಾನಿಯು ಕಾಳಿಯೇ ಆಗಿದ್ದಾಳೆ ಎಂಬುದು ಅಭಿಪ್ರೇತವಾಗುತ್ತದೆ. ಮಹಾಸರಸ್ವತಿ, ಮಹಾಲಕ್ಷ್ಮಿ ಮತ್ತು ಮಹಾಕಾಳಿ ಈ ತ್ರಿವಿಧ ರೂಪಗಳಿಂದ ವರ್ಣಿಸಿದ, ವಂದಿಸಿದ ತುಳಜಾ ಭವಾನಿಯ ತುಳಜಾಷ್ಟಕದಿಂದ ದೇವಿಯ ವಿಷಯ ಚಿಂತನವು ಅಧಿಕ ಗಾಢ ಗೂಢವಾಗುತ್ತ ಹೋಗುತ್ತದೆ.

ಬೃಹತ್‌ಸ್ತೋತ್ರ ಸಂಗ್ರಹದಲ್ಲಿ ಸಮಾವಿಷ್ಟವಾದ ಸ್ತೋತ್ರವೂ ಅಷ್ಟಕವೇ ಆಗಿದೆ. ಈ ಸ್ತೋತ್ರದಲ್ಲಿ ಯಮುನಾಚಲದ ಅಂದರೆ ತುಳಜಾಭವಾನಿ ವಿರಾಜಮಾನಳಾಗಿರುವ ಗುಡ್ಡದ ಸ್ಪಷ್ಟ ಉಲ್ಲೇಖವಿದೆ. ೩೫ ದೇವಿಗೆ ಅನುಭೂತಿ ಸತಿ ಪ್ರಾಣ ಪರಿತ್ರಾಣ ಪರಾಯಣಿ' ಎಂಬ ವಿಶೇಷಣದಿಂದ ಗೌರವಿಸಲಾಗಿದೆ. ತುಳಜಾಪುರದಲ್ಲಿ ತುಳಜಾ ಭವಾನಿಯ ಪ್ರಕಟೀಕರಣವು ಸತಿ ಅನುಭೂತಿಯ ರಕ್ಷಣೆಗಾಗಿಯೇ ಆಗಿದೆ ಎಂಬುದು ಈ ಕ್ಷೇತ್ರ ಮಹಾತ್ಮೆಯಿಂದ ಸ್ಪಷ್ಟವಾಗುತ್ತದೆ. ಸ್ಥಾನದ ಮತ್ತು ಅವತಾರ ಪ್ರಯೋಜನದ ಈ ಉಲ್ಲೇಖವು ಸ್ಪಷ್ಟವಾಗಿ ತುಳಜಾಭವಾನಿಗೇ ಸಂಕೇತಿಸುವುದಾಗಿದೆ. ಈ ಸ್ತೋತ್ರದ ಸ್ತುತಿ ವಿಷಯ ಕಾಲಿಕಾ ದೇವಿಯದಾಗಿದೆ ಎಂಬುದನ್ನು ಗಮನಕ್ಕೆ ತೆಗೆದುಕೊಂಡರೆ, ಸ್ತೋತ್ರಕಾರನಿಗೆ ತುಳಜಾ ಭವಾನಿಯು ಕಾಳಿಯೇ ಆಗಿದ್ದಾಳೆ ಎಂಬುದು ಅವನ ಅಭಿಪ್ರಾಯವಾಗಿದೆ ಎಂಬುದು ಖಚಿತವಾಗುತ್ತದೆ. ಇಂದಿಗೂ ತುಳಜಾಪುರದ ಗರ್ಭಗೃಹದ ಅವಳ ಸಾನಿಧ್ಯದಲ್ಲಿ ಅನುಭೂತಿಯ ಶಿಲ್ಪವನ್ನು ತೋರಿಸಲಾಗುತ್ತದೆ.

ಈ ಕುಲಸ್ವಾಮಿನಿ ಭವಾನಿಯು ತ್ರಯಾತ್ಮಕ ಸಗುಣ ದೇವಿಯಾಗಿದ್ದಾಳೆ. ಕರವೀರ ಕ್ಷೇತ್ರದಲ್ಲಿ ಈ ಮೂರು ರೂಪಗಳ ದರ್ಶನವು ಒಂದೇ ಮಂದಿರದಲ್ಲಿ ಭಕ್ತರಿಗೆ ಆಗುತ್ತದೆ. ದೇವಿ ಭಾಗವತದ ಪ್ರಕಾರ ದೃಷ್ಟಿಗೋಚರವಾದ ಜಗತ್ತೆಲ್ಲವೂ ಅವಳ ಸ್ಥಾನವಾಗಿದೆ. ಸರ್ವಕಾಲವೂ ಅವಳ ವ್ರತಕ್ಕೆ ಯೋಗ್ಯವಾಗಿದೆ. ಸರ್ವಕಾಲದಲ್ಲಿಯೂ ಅವಳಿಗೆ ಉತ್ಸವವಿದೆ. ಕಾರಣ ಅವಳು ಸರ್ವರೂಪಿಣಿಯಾಗಿದ್ದಾಳೆ ಆದರೆ ಭಕ್ತರಿಗಾಗಿ ಕೆಲವು ಸ್ಥಳಗಳು ಮತ್ತು ಕೆಲವು ವ್ರತಗಳನ್ನು ಸೂಚಿಸಿ ಶಕ್ತಿಪೀಠಗಳ ನಾಮಾವಳಿಗಳನ್ನು ಸಾದರಗೊಳಿಸಲಾಗಿದೆ ಎಂಬ ಉಲ್ಲೇಖವಿದೆ. (ದೇವಿ ಭಾಗವತ, ಪು.೩೮) ಅದರಲ್ಲಿ ಕೊಲ್ಲಾಪುರವು ಮೊದಲ ಸ್ಥಾನದಲ್ಲಿದ್ದು ತುಳಜಾಪುರವು

ಮೂರನೆಯ ಸ್ಥಾನದಲ್ಲಿದೆ. ತುಳಜಾಭವಾನಿಗೆ ರಾಮವರದಾಯಿನಿ ಎಂಬ ಬಿರುದು ಇದೆ. ತುಳಜಾಪುರದ ದಕ್ಷಿಣ ಗುಡ್ಡದ ಮೇಲೆ ಇರುವ ಒಂದು ಮಂದಿರದಲ್ಲಿ ಒಂದು ದೊಡ್ಡ ಶಿಲೆ ಇದ್ದು, ಅದಕ್ಕೆ ಘಟಶಿಲಾ ಎನ್ನುತ್ತಾರೆ. ಸೀತೆಯ ರೂಪ ಧರಿಸಿ ಬಂದ ಪಾರ್ವತಿಯು ಇದೇ ಶಿಲೆಯ ಮೇಲೆ ಕುಳಿತಳು. ಅಲ್ಲಿಂದಲೇ ರಾಮನ ಜೊತೆಗೆ ಮಾತನಾಡಿದಳು. ಇದೇ ಸ್ಥಳದಿಂದ ಪಾರ್ವತಿಯು ರಾಮನಿಗೆ ದಕ್ಷಿಣದ ಮಾರ್ಗವನ್ನು ತೋರಿಸಿದಳು ಹಾಗೂ ದೈತ್ಯರನ್ನು ಪರಭವಗೊಳಿಸಿ ನೀನು ಯಶಸ್ವಿಯಾಗು ಎಂದು ವರವನ್ನೂ ಕೊಟ್ಟಳು ಎಂಬ ಹೇಳಿಕೆಯಿದೆ.

ರಾಮನು ವನವಾಸದಲ್ಲಿದ್ದಾಗ ಸೀತೆಯ ಶೋಧಕ್ಕಾಗಿ ಅಲೆದಾಡುತ್ತಿದ್ದ. ರಾಮನ ಈ ವರ್ತನೆ ಪಾರ್ವತಿಗೆ ಹಿಡಿಸಲಿಲ್ಲ. ಅವನ ಶೌರ್ಯದ ಬಗ್ಗೆ ಶಂಕೆಯಾಯಿತು. ಆದರೆ ಶಿವನು ಅದನ್ನು ಒಪ್ಪಲಿಲ್ಲ. ಆದರೆ ಪಾರ್ವತಿಯು ಹಟಹಿಡಿದು ರಾಮನನ್ನು ವಂಚಿಸುವುದಕ್ಕಾಗಿ ಸೀತೆಯ ರೂಪ ಧರಿಸಿ ಆ ಸ್ಥಳಕ್ಕೆ ಬಂದಳು. ಆದರೆ ರಾಮನು ಅವಳ ಕಾರಸ್ಥಾನವನ್ನು ಗುರುತಿಸಿದ ಮತ್ತು ಪಾರ್ವತಿಗೆ ಹೀಗೆ ಕೇಳಿದ ಆಯಿ, ತೂ ಇಥೆ ಕಾ ಆಲಿಸ? (ದೇವಿ, ನೀನು ಇಲ್ಲಿ ಏಕೆ ಬಂದಿರುವಿ?) ಅದರಿಂದ ಪಾರ್ವತಿಯ ಗರ್ವ ಭಂಗವಾಯಿತು. ಈ ಪ್ರಸಂಗದಿಂದ ದೇವಿಯ ಹೆಸರು ತುಕಾಯಿ ಎಂದು ರೂಢಿಯಲ್ಲಿ ಬಂದಿತು.

ಸಂತ ಏಕನಾಥರು ಈ ಪ್ರಸಂಗವನ್ನು ಬಹಳ ಸುಂದರವಾಗಿ ವರ್ಣಿಸುತ್ತಾರೆ.

ಶ್ರೀ ರಾಮ ಮ್ಹಣೆ ತೂ ಕಾ ಆಯಿ ।
ತೇಚಿ ನಾಮ ಲೋಕಾಂಚೆ ಠಾಯಿ ।
ಅದ್ಯಾಪಿ ರಾಹಿಲೇಸೆ ಪಾಹಿ ।
ಮ್ಹಣತಿ ತುಕಾಯಿ ಜಗದಂಬಾ । (ಅದೇ ಪು. ೩೮)

ಏಕನಾಥರು ತಮ್ಮ ರಾಮಚರಿತ್ರೆಯಲ್ಲಿ ಈ ಕಥೆಯನ್ನು ಸೇರಿಸಿದ್ದಾರೆ. ಗಾವಣನ ಮೇಲೆ ವಿಜಯ ದೊರಕಿಸಿ ಕೊಡುವುದಕ್ಕಾಗಿ ಭವಾನಿಯು ರಾಮನಿಗೆ ವರ ನೀಡಿದ ದೇವಿಯಾಗಿದ್ದಾಳೆ. ತುಳಜಾಪುರದ ಮಂದಿರದ ಪ್ರಾಕಾರವನ್ನು ಪ್ರವೇಶಿಸುವ ಮೊದಲು ಮಹಾದ್ವಾರದಲ್ಲಿಯೇ ಮಾತಂಗಿಯ ಸ್ಥಳವಿದೆ. ಈ ಮಾತಂಗಿಯ ದರ್ಶನ ಮೊದಲು ಪಡೆದು ನಂತರ ಭವಾನಿಯ ದರ್ಶನ ಪಡೆಯುವುದಿದೆ. ಹೀಗೆ ಉಪಾಸನೆಯ ಸಂಕೇತವೂ ಇದೆ. ಮಾತಂಗಿಗೆ ದೊರೆತಿರುವ ಈ ಅಗ್ರಪೂಜೆಯು ನಿಜವಾಗಿ ಅರ್ಥಪೂರ್ಣವಾಗಿದೆ ಎಂಬುದನ್ನು ಸೂಚಿಸುತ್ತದೆ. ಗರ್ಭಗುಡಿಯಲ್ಲಿಯ ಭವಾನಿಯು ಮೂಲತಃ ಮಾತಂಗಿಯೇ ಆಗಿದ್ದಳು, ರೇಣುಕೆಯೇ ಆಗಿದ್ದಳು. ಲೋಕ ಕವಯತ್ರಿಯರ ಗೀತಗಳಲ್ಲಿ 'ಪರಶುರಾಮಾ ತುಝಾ ಬಾಳ' ಎಂಬುದು

ಭವಾನಿಯನ್ನು ಉದ್ದೇಶಿಸಿ ಹೇಳಲಾಗಿದೆ. ಭವಾನಿಯ ಸಾನಿಧ್ಯದಲ್ಲಿ ಪರಶುರಾಮನ ಮೂರ್ತಿಯು ನೋಡಲು ದೊರೆಯುತ್ತದೆ.

ಮಾಹೂರಿನ ರೇಣುಕಾ :

ಪಾರಂಪಾರಿಕ ಶಕ್ತಿಪೀಠಗಳಲ್ಲಿ ಮಾಹೂರಿನ ಕ್ರಮ ಎರಡನೆಯದಾಗಿದೆ. ಮಾಹೂರಿನ ರೇಣುಕೆಯು ನಿಜವಾದ ದೈವೀ ತತ್ವದ ಮೂಲ ರೂಪವನ್ನು ಜತನ ಮಾಡಿಕೊಂಡಿದ್ದಾಳೆ. ಅವಳು ಸರ್ವ ಅರ್ಥದಿಂದಲೂ ಆದಿಮಾತೆಯಾಗಿದ್ದಾಳೆ. ನಾಂದೇಡ ಜಿಲ್ಲೆಯಲ್ಲಿ, ಆಂಧ್ರದದ ಗಡಿಯ ಹತ್ತಿರ ಇರುವ ಮಾಹೂರ ಕ್ಷೇತ್ರವು ರೇಣುಕೆಯ ಮೂಲ ಪೀಠವಾಗಿದೆ.

ಯಜ್ಞಕುಂಡದಲ್ಲಿ ಪಾರ್ವತಿಯು ದೇಹಾರ್ಪಣೆ ಮಾಡಿದ ನಂತರ, ಶಿವನು ಪಾರ್ವತಿಯ ಕಳೇಬರವನ್ನು ಹೊತ್ತುಕೊಂಡು ಭ್ರಮಿಸುತ್ತಿದ್ದಾಗ ವಿಷ್ಣುವು ಸುದರ್ಶನ ಚಕ್ರದಿಂದ ಆ ಕಳೇಬರವನ್ನು ಛೇದಿಸಿದ. ಆಗ ಅವಳ ದೇಹದ ಭಾಗಗಳು ಬೇರೆ ಬೇರೆ ಸ್ಥಳಗಳಲ್ಲಿ ಬಿದ್ದವು. ಆ ಸ್ಥಳಗಳನ್ನು ಶಕ್ತಿಪೀಠಗಳೆಂದು ಕರೆದರು. ಪಾರ್ವತಿಯ ಸ್ತನಗಳು ಸಹ್ಯ ಪರ್ವತದ ಮೇಲೆ ಬಿದ್ದಿದ್ದರಿಂದ ಮಾತಾಪುರ ಶಕ್ತಿಪೀಠ ನಿರ್ಮಾಣವಾಯಿತು ಎಂದು ರೇಣುಕಾ ಮಹಾತ್ಮೆ ಗ್ರಂಥದ ಪ್ರಸ್ತಾವನೆಯಲ್ಲಿ ಹೇಳಲಾಗಿದೆ. ಅದರ ಪ್ರಕಾರ ರೇಣುಕೆಯ ಕಥೆ ಹೀಗಿದೆ :

ರೇಣುಕೆಯು ಇಕ್ಷ್ವಾಕು ವಂಶದ ರೇಣುಕರಾಜನ ಪುತ್ರಿ. ರೇಣುರಾಜನು ಪುತ್ರಕಾಮೇಷ್ಟಿ ಯಜ್ಞ ಮಾಡಿದ್ದರಿಂದ ರೇಣುಕೆಯು ಅಗ್ನಿಕುಂಡದಿಂದ ಆವಿರ್ಭವಿಸಿದಳು. ನಂತರ ಜಮದಗ್ನಿ ಋಷಿಯ ಜೊತೆಗೆ ಇವಳ ವಿವಾಹವಾಯಿತು. ಒಂದು ದಿನ ರೇಣುಕೆಯು ನೀರು ತರಲು ನದಿ ತೀರಕ್ಕೆ ಹೋಗಿದ್ದಳು. ಅಲ್ಲಿ ಚಿತ್ರರಥ ಗಂಧರ್ವ ಮತ್ತು ಅವನ ಪ್ರೇಯಸಿ ಜಲವಿಹಾರ ಮಾಡುತ್ತಿದ್ದುದನ್ನು ನೋಡಿ ರೇಣುಕೆಯ ಮನಸ್ಸು ವಿಚಲಿತಗೊಂಡಿತು. ಜಮದಗ್ನಿಗೆ ಇದು ತಿಳಿಯಿತು. ಅವನು ಕೋಪೋದ್ರಿಕ್ತನಾದ. ಈ ಘೋರ ಅಪರಾಧಕ್ಕಾಗಿ ರೇಣುಕೆಯನ್ನು ಕೊಲ್ಲಬೇಕೆಂದು ತನ್ನ ನಾಲ್ಕೂ ಮಕ್ಕಳಿಗೆ ಆಜ್ಞೆ ಮಾಡಿದ. ಆದರೆ ಅವರು ಒಪ್ಪಲಿಲ್ಲ. ಜಮದಗ್ನಿಯು ಅವರನ್ನು ಶಾಪದಿಂದ ಭಸ್ಮಗೊಳಿಸಿದ. ಆಗ ಪರಶುರಾಮನು ತಪಶ್ಚರ್ಯೆಗೆಂದು ಹಿಮಾಲಯಕ್ಕೆ ಹೋಗಿದ್ದ. ಜಮದಗ್ನಿ ಪರಶುರಾಮನನ್ನು ಕರೆಸಿ ರೇಣುಕೆಯನ್ನು ಕೊಲ್ಲು, ಇಲ್ಲವೆ ಶಿಕ್ಷೆಗೆ ಒಳಗಾಗು ಎಂದು ಆಜ್ಞೆ ಮಾಡಿದ. ಪರಶುರಾಮನು ತಂದೆಯ ಆಜ್ಞೆ ಪರಿಪಾಲಿಸಿದ. ತನ್ನ ಪರಶುವಿನಿಂದ ತಾಯಿಯ ತಲೆಯನ್ನು ಕತ್ತರಿಸಿ ಅವಳನ್ನು ಶರೀರದಿಂದ ಬೇರ್ಪಡಿಸಿದ. ಅದರಿಂದ ಆನಂದಿತನಾಗಿ ಜಮದಗ್ನಿಯು ಪುತ್ರನಿಗೆ ಬೇಕಾದ ವರ ಕೇಳುವಂತೆ ಹೇಳಿದ. ಪರಶುರಾಮನು ನನ್ನ ತಾಯಿಯನ್ನು ಜೀವಂತಗೊಳಿಸಿರಿ, ಮತ್ತು ನಿಮ್ಮ ಕ್ರೋಧವನ್ನು

ಪೂರ್ತಿಯಾಗಿ ಗೆದ್ದು ತಮ್ಮ ಜೀವನವನ್ನು ಪ್ರಶಾಂತಗೊಳಿಸಿರಿ ಎಂದು ಬೇಡಿಕೊಂಡ. ಜಮದಗ್ನಿಯು ಈ ಎರಡೂ ಬೇಡಿಕೆಗಳನ್ನು ಮಾನ್ಯ ಮಾಡಿದನು.

ಒಂದು ಸಲ ಮಹಿಷ್ಮತಿಯ ರಾಜನಾದ ಸಹಸ್ರಾರ್ಜುನ ಕಾರ್ತವೀರ್ಯನಿಗೆ ಜಮದಗ್ನಿಯ ಬಳಿಯಿದ್ದ ಕಾಮಧೇನುವನ್ನು ಪಡೆಯಬೇಕೆಂಬ ಆಶೆಯಾಯಿತು. ಜಮದಗ್ನಿಯ ಆಶ್ರಮದಲ್ಲಿ ಹೊಕ್ಕು ಅವನ ಕಾಮಧೇನುವನ್ನು ಓಡಿಸಿಕೊಂಡು ಹೋದ. ಪರಶುರಾಮ ಮತ್ತು ಸಹಸ್ರಾರ್ಜುನರ ಮಧ್ಯೆ ಯುದ್ಧವಾಯಿತು. ಸಹಸ್ರಾರ್ಜುನನನ್ನು ಪರಶುರಾಮನು ಸಂಹರಿಸಿದನು. ಅದರ ನಂತರ ಸಹಸ್ರಾರ್ಜುನನ ಪುತ್ರರು ಪರಶುರಾಮನು ಮನೆಯಲ್ಲಿ ಇಲ್ಲದಿದ್ದಾಗ ಬಂದು ಧ್ಯಾನಸ್ಥನಾಗಿದ್ದ ಜಮದಗ್ನಿಯನ್ನು ವಧೆ ಮಾಡಿದರು. ಇದರಿಂದ ರೇಣುಕೆಯು ಆಕ್ರೋಶಗೊಂಡಳು. ನಂತರ ಪರಶುರಾಮನು ತನ್ನ ತಂದೆಯನ್ನು ಕೊಂದ "ಹೈಹ್ಯ" ಕುಲವನ್ನು ನಿಃಪಾತಗೊಳಿಸಿದ. ಅಷ್ಟೇ ಅಲ್ಲ, ಪೃಥ್ವಿಯ ಮೇಲಿನ ಎಲ್ಲ ಕ್ಷತ್ರಿಯರ ಮೇಲೆ ಇಪ್ಪತ್ತೊಂದು ಸಲ ದಾಳಿ ಮಾಡಿ ನಿಃಕ್ಷತ್ರಿಯಗೊಳಿಸಿದ. ನಂತರ ತಾಯಿಯ ಹೇಳಿಕೆಯ ಪ್ರಕಾರ ಪರಶುರಾಮನು ತನ್ನ ತಂದೆಯ ಶವವನ್ನು ಕಾವಡಿಯ ಒಂದು ಬುಟ್ಟಿಯಲ್ಲಿ ಮತ್ತು ತಾಯನ್ನು ಕಾವಡಿಯ ಇನ್ನೊಂದು ಬುಟ್ಟಿಯಲ್ಲಿ ಕೂಡಿಸಿ ಕಾವಡಿಯನ್ನು ಹೆಗಲ ಮೇಲೆ ಹೊತ್ತುಕೊಂಡು ಹೊರಟ. ನರ್ಮದೆಯನ್ನು ದಾಟಿ, ವಿಂಧ್ಯಾದ್ರಿ ಪರ್ವತದ ಮೇಲೆ ಬಂದಾಗ ಅಲ್ಲಿ ಆಕಾಶವಾಣಿಯಾಯಿತು. ಜಮದಗ್ನಿಗೆ ಇಲ್ಲಿ ಅಗ್ನಿಕಾಷ್ಟವನ್ನು ಕೊಡು, ಕಾರಣ ಇದು ಪವಿತ್ರ ಭೂಮಿಯಾಗಿದೆ, ಮಾಹುರಗಡದಲ್ಲಿ ಅಗ್ನಿ ಸಂಸ್ಕಾರದ ತಯಾರಿ ಮಾಡಲಾಯಿತು. ರೇಣುಕೆಯು ಸತಿ ಹೋಗಲು ಅಣಿಯಾದಳು, ಪರಶುರಾಮನಿಗೆ ನೀನು ಚಿತೆಗೆ ಅಗ್ನಿ ಸಂಸ್ಕಾರ ಕೊಟ್ಟು ಹೋಗು, ನಾನು ಸತಿ ಹೋಗುವಾಗ ನೀನು ಹತ್ತಿರ ಬರಬೇಡ, ಹಿಂತಿರುಗಿ ನೋಡದೆ ಹೊರಟು ಹೋಗು, ಎಂದು ಹೇಳಿದಳು, ಪರಶುರಾಮ ಅದಕ್ಕೆ ಒಪ್ಪಿ ಕೆಲವು ಹೆಜ್ಜೆ ಮುಂದೆ ಸರಿದ, ಆದರೆ ಮಾತೃ ವಿರಹ ತಾಳಲಾರದೆ ಅವನು ಹಿಂತಿರುಗಿ ನೋಡಿ ಅಮ್ಮಾ ಎಂದು ಆಕ್ರಂದಿಸಿದ, ಆಗ ರೇಣುಕೆಯ ಅರ್ಧ ಶರೀರ ಮಾತ್ರ ಭಸ್ಮಗೊಂಡಿತ್ತು, ಅವಳ ಮೇಲಿನ ಭಾಗ ಇನ್ನೂ ಹಾಗೆಯೇ ಉಳಿದಿತ್ತು, ಮಗನ ಕೂಗಿಗೆ ತಾಯಿ ಹಾಗೆಯೇ ಮೇಲೆ ಬಂದಳು. ಈಗ ನಾನು ಹೀಗೆಯೇ ಅರ್ಧ ರೂಪದಲ್ಲಿಯೇ ಇಲ್ಲಿ ನೆಲೆಸುವೆ ಎಂದಳು ರೇಣುಕೆಯ ಅರ್ಧ ಶರೀರ ಮಾತ್ರ ದಹನವಾಗಿದ್ದರಿಂದ, ಮಾಹೂರದಲ್ಲಿ ದೇವಿಯ ಮುಖವಾಡ ಮಾತ್ರ ಕಾಣುತ್ತದೆ. ಉಳಿದ ಶರೀರ ಕಾಣುವುದಿಲ್ಲ.

ರೇಣುಕಾ ಮಂದಿರವು ಮಾತಾಪುರ ಊರಿನ ಗುಡ್ಡದ ಶಿಖರದ ಮೇಲಿದೆ. ದೇವಿಯ ದರ್ಶನಕ್ಕೆ ಹೋಗಲು ಸಾವಿರ ಮೆಟ್ಟಲುಗಳ ದಾರಿಯಿದೆ. ಈಗ ವಾಹನಗಳ ಸೌಕರ್ಯವಿದ್ದರೂ ೩೦-೪೦ ಮೆಟ್ಟಲುಗಳನ್ನು ಹತ್ತಿ ಹೋಗಬೇಕಾಗುತ್ತದೆ. ಇಲ್ಲಿ ದೇವಿಯು ಸ್ವಯಂಭೂ ರೂಪದಲ್ಲಿ ಪ್ರತಿಷ್ಠಾಪಿತಳಾಗಿದ್ದಾಳೆ. ದೇವಿಯ ಗರ್ಭಗುಡಿಯ ಬಾಗಿಲಿಗೆ ಬೆಳ್ಳಿಯ ತಗಡು ಹೊದಿಸಲಾಗಿದೆ. ದೇವಾಲಯವು ಸಾಮಾನ್ಯವಾಗಿದ್ದು, ದೇವಿಯ ಸ್ವರೂಪವು ಉಗ್ರವಾಗಿದೆ. ದೇವಿಯ ಆಸನದ ಮೇಲೆ ಸಿಂಹದ ಆಕಾರವನ್ನು ಕೊರೆಯಲಾಗಿದೆ. ಐದು ಅಡಿ ಎತ್ತರದ ಮೂರ್ತಿಯಾಗಿದ್ದು ಕಣ್ಣು ತುಟಿಗಳು ಎದ್ದು ಕಾಣುತ್ತವೆ. ಮೂರ್ತಿಯ ಕೇವಲ ಎದೆಯ ಭಾಗದವರೆಗೆ ಮಾತ್ರ ಇದ್ದು, ನೋಡಲು ಭವ್ಯವಾಗಿದೆ. ರೇಣುಕೆಯ ಮಂದಿರದ ಹತ್ತಿರ ತುಳಜಾ ಭವಾನಿ, ಮಹಾಲಕ್ಷ್ಮಿ, ಪರಶುರಾಮ ಮಂದಿರಗಳು ಮತ್ತು ಎತ್ತರದ ಶಿಖರದ ಮೇಲೆ ದತ್ತ ಮಂದಿರವಿದೆ, ವಿದರ್ಭದ ಜನರಿಗೆ ತುಳಜಾಪುರದ ಅಂಬಾಬಾಯಿ ಮತ್ತು ಮಾಹುರದ ರೇಣುಕಾ ಇಬ್ಬರೂ ಕುಲದೇವತೆಗಳಿರುತ್ತಾರೆ. ನವರಾತ್ರಿಯಲ್ಲಿ ಇಲ್ಲಿ ದೊಡ್ಡ ಪ್ರಮಾಣದಲ್ಲಿ ಉತ್ಸವವಾಗುತ್ತದೆ. ಶ್ರಾವಣ ಪೂರ್ಣಿಮೆಯೆಂದು ಸಾವಿರಾರು ಭಕ್ತರು ಸಂಪೂರ್ಣ ಮಾಹುರಗಡದ ಪ್ರದಕ್ಷಿಣೆ ಹಾಕುತ್ತಾರೆ. ಈ ಉಪಾಸನೆಗೆ 'ಪರಿಕ್ರಮಾ' ಎಂದು ಕರೆಯುತ್ತಾರೆ. ರೇಣುಕೆಯು ಪಾರ್ವತಿಯ ಅವತಾರವಾಗಿದ್ದಾಳೆ. ರೇಣುಕೆಯ ಶಿಖರದ ಮೇಲೆ ಮಹಾದ್ವಾರದ ಹತ್ತಿರ ಮಹಾಕಾಳಿಯ ಮೂರ್ತಿಯಿದೆ, ರೇಣುಕೆಯ ಶಿಖರದ ಮೇಲೆ ಮಹಾದ್ವಾರದ ಹತ್ತಿರ ಮಹಾಕಾಳಿಯ ಮೂರ್ತಿಯಿದೆ. ಪ್ರತಿಸಲ ಅಗ್ರಪೂಜೆಯ ಮಾನ ಈ ಮಹಾಕಾಳಿ ದೇವಿಗೇ ಸಲ್ಲುತ್ತದೆ. ಇಲ್ಲಿ ಹೂ ಅರ್ಪಿಸಿದರೆ, ಅಲ್ಲಿಯೂ ಹೂ ಅರ್ಪಿಸಲಾಗುತ್ತದೆ. ರೇಣುಕೆಗೆ ಉಡಿ ತುಂಬುವಾಗ ಅದರಲ್ಲಿಯ ಕೆಲವು ಭಾಗ ಮಹಾಕಾಳಿಗೆ ಅರ್ಪಿಸಲಾಗುತ್ತದೆ. ಮಹಾಕಾಳಿಯು ರೇಣುಕೆಯ ಸೋದರಿಯಾಗಿದ್ದಾಳೆ. ಇವಳು ಕೋಲ್ಹಾಪುರದ ಮಹಾಲಕ್ಷ್ಮಿ ಎಂಬ ಶ್ರದ್ಧೆಯಿದೆ. ದೇವಿಯ ದರ್ಶನಕ್ಕೆಂದು ಬರುವ ಭಕ್ತರು ಇಲ್ಲಿ ತಾಂಬೂಲ ಕಲ್ಲುಸಕ್ಕರೆ ಮತ್ತು ಮಿಠಾಯಿ ಅರ್ಪಿಸುತ್ತಾರೆ. ನಾಗವೇಲಿಯ ತಾಂಬೂಲ ಸುಮಾರು ಇಪ್ಪತ್ತೈದರಿಂದ ಸಾವಿರದಾ ಒಂದು ಎಲೆಗಳಷ್ಟು ದೊಡ್ಡ ಪ್ರಮಾಣದಲ್ಲಿರುವ ಶಕ್ಯತೆಯಿದೆ. ಇದನ್ನು ದೇವಿಯ ಬಾಯಿಯಲ್ಲಿ ಹಾಕಿ, ನಂತರ ಕುಟ್ಟಿ ಅದನ್ನೇ ಪ್ರಸಾದವೆಂದು ಭಕ್ತರಿಗೆ ಕೊಡುತ್ತಾರೆ. ಕುಟ್ಟಿದ್ದ ತಾಂಬೂಲ ಮತ್ತು ಮಿಠಾಯಿಯನ್ನು ಭಕ್ತರು ದೇವಿಯ ಪ್ರಸಾದವೆಂದು ಊರಿಗೆ ತೆಗೆದುಕೊಂಡು ಹೋಗುತ್ತಾರೆ.

ಸಪ್ತಶೃಂಗಿ ನಿವಾಸಿನಿ ಶ್ರೀ ಜಗದಂಬಾ :

ಕೊಲ್ಹಾಪುರ, ಮಾತಾಪುರ ಮತ್ತು ತುಳಜಾಪುರ ಈ ಮೂರು ದೇವತೆಗಳೆಂದರೆ, ಸಪ್ತಶೃಂಗಿಯ ಪ್ರತಿಮೆಯೇ ಎಂದು ಜನರು ಭಾವಿಸುತ್ತಾರೆ. ಮಹಾರಾಷ್ಟ್ರದ ನಾಲ್ಕು ಶಕ್ತಿಪೀಠಗಳಲ್ಲಿ ಕೊಲ್ಹಾಪುರ, ಮಾತಾಪುರ ಮತ್ತು ತುಳಜಾಪುರ ಸ್ಥಾನಗಳೂ ಪೂರ್ಣ ಶಕ್ತಿಪೀಠಗಳಾಗಿದ್ದರೆ, ಸಪ್ತಶೃಂಗಿಗೆ ಅರ್ಧ ಪೀಠದ ಸ್ಥಾನ ದೊರಕಿದೆ. ವಣಿ ಗ್ರಾಮವು ನಾಶಿಕ ಜಿಲ್ಲೆಯಲ್ಲಿದೆ. ಸಪ್ತಶೃಂಗಿ ಬೆಟ್ಟವೂ ಇದೇ ಜಿಲ್ಲೆಯಲ್ಲಿದೆ. ನಾಶಿಕದಿಂದ ನಾಂದುರಿ ೩೦ ಮೈಲಿ ಅಂತರದಲ್ಲಿದೆ. ನಾಂದುರಿ ಇದು ಸಪ್ತಶೃಂಗಿಯ ಬೆಟ್ಟದ ಕೆಳಗಿನ ಊರಾಗಿದೆ. ಈ ಬೆಟ್ಟಕ್ಕೆ ಏಳು ಶಿಖರಗಳಿರುವುದರಿಂದ ಸಪ್ತಶೃಂಗ ಎಂದು ಕರೆಯುತ್ತಾರೆ. ಇದು ವಣಿಯ ಬೆಟ್ಟ ಎಂದು ಖ್ಯಾತಿ ಪಡೆದಿದೆ. ವಣಿ ಅಥವಾ ಸಪ್ತಶೃಂಗಿ ದೇವಿಯ ಕಥೆಯು ಸಪ್ತಶೃಂಗ ಮಹಾತ್ಮೆ ಯಲ್ಲಿ ವರ್ಣಿತವಾಗಿದೆ.

ಒಂದು ಕಾಲದಲ್ಲಿ ಪೃಥ್ವಿಯ ಮೇಲೆ ದೈತ್ಯರದೇ ಸಾಮ್ರಾಜ್ಯ ಪಸರಿಸಿತ್ತು, ಅಸುರರ ಪೀಡನೆಯಿಂದ ದೇವ ಲೋಕದಲ್ಲಿಯ ದೇವತೆಗಳು ತ್ರಸ್ತರಾಗಿದ್ದರು. ಈ ರಾಕ್ಷಸರನ್ನು ಪರಾಭವಗೊಳಿಸಲು ಬ್ರಹ್ಮ, ವಿಷ್ಣು, ಮಹೇಶ್ವರರು ತಮ್ಮ ಶಕ್ತಿಯಿಂದ ಮಹಾಶಕ್ತಿ ದೇವತೆಯನ್ನು ನಿರ್ಮಾಣ ಮಾಡಿದರು. ಆ ಶಕ್ತಿ ದೇವತೆಯು ನಾಲ್ಕು ಸ್ಥಳಗಳಲ್ಲಿ ತನ್ನ ಪ್ರತ್ಯೇಕ ರೂಪವನ್ನು ಪ್ರಕಟಿಸಿದಳು. ಅದರಲ್ಲಿಯ ಒಂದು ಸ್ಥಳ ಎಂದರೆ ಸಪ್ತಶೃಂಗಿ, ದೇವಿಯ ಮಹಾತ್ಮೆಯು ವರ್ಣನೆಯಾಗಿರುವ ಗ್ರಂಥದ ಹೆಸರು ಸಪ್ತಶತಿ, ಇದರಲ್ಲಿ ದೇವಿಯ ಪರಾಕ್ರಮ ಹಾಗೂ ಮಾರ್ಕಂಡೇಯ ಋಷಿಯ ಅಸ್ತಿತ್ವವನ್ನು ವರ್ಣಿಸಲಾಗಿದೆ. ದೇವಿಯು, ಕಾಳಿ, ಮಹಾಕಾಳಿ, ಭದ್ರಕಾಳಿ, ಕಪಾಲಿನಿ, ಚಾಮುಂಡಾ, ದುರ್ಗಾ, ಚಂಡಿಕಾ, ಇತ್ಯಾದಿ ಹೆಸರಿನಿಂದ ಪ್ರಸಿದ್ಧಳಾಗಿದ್ದಾಳೆ.

ಪ್ರಾಚೀನ ಕಾಲದಲ್ಲಿ ಸುರಥ ಹೆಸರಿನ ರಾಜನಿದ್ದ, ಅವನು ಅತ್ಯಂತ ನೀರಿವಂಶ ಮತ್ತು ಸದಾಚಾರಿಯಾಗಿದ್ದನು, ಈ ರಾಜನ ಮೇಲೆ ಒಂದುಸಲ ಒಂದು ದೊಡ್ಡ ಸಂಕಟ ಬಂದಿತು, ಅದರ ಮೇಲೆ ಪರಚಕ್ರ ಬಂದಿತು, ಇದೇ ವೇಳೆಯಲ್ಲಿ ಅವನ ಪ್ರಧಾನನು ರಾಜನ ಪರಮ ಶತ್ರುವಿನೊಡನೆ ಸೇರಿಕೊಂಡನು. ಆದರಿಂದ ರಾಜನ ಪರಾಭವವಾಯಿತು. ಆದರೆ ಇಂತಹ ಸಂದಿಗ್ಧ ಸ್ಥಿತಿಯಲ್ಲಿಯೂ ರಾಜನಿಗೆ ತನ್ನ ಪ್ರಧಾನನ ಬಗೆಗೆ ಆದರ ಮತು ಆತ್ಮೀಯತೆ ಇತ್ತು. ಈ ದಾರುಣಾವಸ್ಥೆಯಲ್ಲಿ ಅಲೆದಾಡುತ್ತಿದ್ದಾಗ ಅವನಿಗೆ ಸಮಾಧಿ ಹೆಸರಿನ ಒಬ್ಬ ವ್ಯಾಪಾರಿ ಭೇಟಿಯಾದ, ಅವನು ಶ್ರೀಮಂತನಾಗಿದ್ದ. ಆದರೆ ಹಣದ ಲೋಭದಿಂದ ಅವನ ಹೆಂಡತಿ

ಮಕ್ಕಳು ಅವನನ್ನು ಮನೆಯಿಂದ ಹೊರಗೆ ಹಾಕಿದ್ದರು. ಆದರೂ ಅವನಿಗೆ ತನ್ನ ಹೆಂಡತಿ ಮಕ್ಕಳ ಬಗ್ಗೆ ಅಪಾರ ಪ್ರೇಮವಿತ್ತು. ಹೀಗೆ ಸುರಥ ರಾಜ ಮತ್ತು ಸಮಾಧಿ ವ್ಯಾಪಾರಿಯು ಸಮ ದುಃಖಿಗಳಾಗಿದ್ದು ಅವರು ಅಲೆದಾಡುತ್ತಿದ್ದಾಗ ಮಾರ್ಕಂಡೇಯ ಮುನಿಯು ಅವರಿಗೆ ಭೇಟಿಯಾದನು. ಇಬ್ಬರೂ ತಮ್ಮ ದುಃಖವನ್ನು ತೋಡಿಕೊಂಡರು. ಮುನಿಯು ಅವರಿಗೆ ಪರ್ವತದ ಮೇಲಿದ್ದ ಸಪ್ತಶೃಂಗಿ ದೇವಿಯ ಉಪಾಸನೆ ಮಾಡುವಂತೆ ಉಪದೇಶಿಸಿದನು, ಅವರಿಬ್ಬರೂ ಅನನ್ಯ ಭಾವದಿಂದ ದೇವಿಯ ಉಪಾಸನೆ ಮಾಡಿ ಅಲ್ಪ ಕಾಲದಲ್ಲಿಯೇ ಸಂಕಟದಿಂದ ಮುಕ್ತರಾದರು.

ಸಪ್ತಶೃಂಗಿ ಮಾತೆಯ ಸ್ಥಾನವು ವಿಂಧ್ಯ ಪರ್ವತ ಶ್ರೇಣಿಯಲ್ಲಿದೆ. ಈ ದೇವಿಗೆ ವಿಂಧ್ಯಾಚಲವಾಸಿನಿ ಎಂದು ಕರೆಯುತ್ತಾರೆ. ಏಳು ಬೆಟ್ಟಗಳನ್ನು ಹತ್ತಿದ ಮೇಲೆ, ಸುಮಾರು ೨೫೦ ಮೆಟ್ಟಲುಗಳನ್ನು ಹತ್ತಿದ ಮೇಲೆಯೇ ದೇವಿಯ ದರ್ಶನವಾಗುವುದು. ಮೊದಲ ಹಂತದಲ್ಲಿ ೨೫೦ ಮೆಟ್ಟಲುಗಳಿದ್ದು ನಂತರ ಎರಡನೆಯ ಹಂತದಲ್ಲಿ ೪೦೦ ಮೆಟ್ಟಲುಗಳಿವೆ. ಬೆಟ್ಟ ಹತ್ತಿದ ಮೇಲೆ ಸುಮಾರು ಎರಡು ಫರ್ಲಾಂಗ ಅಂತರದಲ್ಲಿ ಒಂದು ಕೊಳವಿದೆ. ಅಲ್ಲಿ ಸ್ನಾನ ಮಾಡಿದ ನಂತರ ದೇವಿಯ ದರ್ಶನ ಮಾಡುವ ರೂಡಿಯಿದೆ. ಎರಡು ಶಿಖರಗಳ ಮಧ್ಯದಲ್ಲಿ ಗುಹೆಯಂತಿರುವ ಭಾಗದಲ್ಲಿ ಒಳಗೆ ಪ್ರವೇಶಿಸಿದ ನಂತರ ದೇವಿಯ ಮಂದಿರವಿದೆ. ಗುಡಿಯಲ್ಲಿ ಪ್ರವೇಶಿಸಿದ ನಂತರ ಸಪ್ತಶೃಂಗಿಯ ಮಹಿಷ ಮರ್ದಿನಿಯ ಭವ್ಯ, ಉಗ್ರರೂಪದ ಮೂರ್ತಿಯು ಕಾಣಿಸುತ್ತದೆ. ಇದು ನೈಸರ್ಗಿಕ ಕಲ್ಲಿನಲ್ಲಿ ಕೊರೆದಿರುವುದಾಗಿದೆ. ಮೂರ್ತಿಯು ಸುಮಾರು ೧೮ ಅಡಿ ಎತ್ತರ ಮತ್ತು ೧೦ ರಿಂದ ೧೨ ಅಡಿ ಅಗಲದ ಅಕಾರದಲ್ಲಿದೆ. ದೇವಿಗೆ ೧೮ ಕೈಗಳಿವೆ, ಪ್ರತಿ ಯೊಂದು ಕೈಯಲ್ಲಿ ಆಯುಧಗಳಿವೆ. ರುದ್ರಾಕ್ಷಿಯ ಮಾಲೆ, ಕತ್ತಿ, ಕುಠಾರ, ಬಾಣ, ಗದಾ, ಕಮಲ, ಧನುಷ್ಯ, ದಂಡ, ಶಕ್ತಿ, ತಲವಾರ, ಶಂಖ, ಘಂಟೆ, ಪಾನಪಾತ್ರ, ಶೂಲ, ಪಾಶ, ಚಕ್ರ, ಮೊದಲಾದ ೧೮ ಆಯುಧಗಳನ್ನು ಹಿಡಿದಿದ್ದಾಳೆ. ದೇವಿಯ ಮೂರ್ತಿ ಭವ್ಯವಾಗಿರುವುದರಿಂದ ಶಿಡಿ ಹತ್ತಿಯೇ ಪೂಜೆ ಮಾಡ ಬೇಕಾಗುತ್ತದೆ. ದೇವಿಗೆ ನಿತ್ಯ ಅಭಿಷೇಕವಾಗುತ್ತದೆ. ನಂತರ ಮೂರ್ತಿಗೆ ನಖ ಶಿಖಾಂತ ಸಿಂಧೂರ ಲೇಪನವನ್ನು ಬಳಿಯುತ್ತಾರೆ. ಹಣೆಯಲ್ಲಿ ಕುಂಕುಮವಿಟ್ಟು, ದೇವಿಗೆ ಕುಬುಸ, ಸೀರೆ ಉಡಿಸಿ ತಲೆಗೆ ಮುಕುಟ ತೊಡಿಸುತ್ತಾರೆ. ದೇವಿಯ ಎದುರಿಗೆ ಒಂದು ದೊಡ್ಡ ತ್ರಿಶೂಲವಿದೆ.

ಇಲ್ಲಿ ಆಶ್ವೀನ ಮಾಸದಲ್ಲಿ ೧೦ ದಿವಸ ನವರಾತ್ರಿಯ ಮತ್ತು ಚೈತ್ರ ಪೌರ್ಣಿಮೆಯಿಂದ ಒಂದು ವಾರದವರೆಗೆ ಉತ್ಸವಗಳಿರುತ್ತದೆ. ಈ ದೇವಿಯು ಅನೇಕ ಮರಾಠಿ ಕುಟುಂಬಗಳ

ಕುಲದೇವತೆಯಾಗಿದ್ದಾಳೆ. ಆಶ್ವೀನ ಪೌರ್ಣಿಮೆಯ ಹಿಂದಿನ ದಿನ ರಾತ್ರಿ ರಾಮವಾಡಿ ಗ್ರಾಮದ ಗೌಳಿಯು ಸಪ್ತಶೃಂಗಿಯ ಮಂದಿರಕ್ಕೆ ಬರುತ್ತಾನೆ. ಅಲ್ಲಿ ಅವನಿಗೆ ಉಡಿ ತುಂಬುತ್ತಾರೆ. ಅವನ ವೇಷವೆಂದರೆ, ಹಳದಿ ಅಂಚಿನ ಬಿಳಿಯ ಬಣ್ಣದ ಕುಬಸ ಮತ್ತು ಸೀರೆ ಇರುತ್ತದೆ. ಅವನು ಕೈಯಲ್ಲಿ ಬಾವುಟ ಹಿಡಿದುಕೊಂಡು ದೇವಿಯ ಮಂದಿರದಿಂದ ಸುಮಾರು ೪೦೦ ಅಡಿ ಎತ್ತರ ಇರುವ ಶಿಖರದ ಮೇಲೆ ಹೋಗುತ್ತಾನೆ. ಇದು ದುರ್ಗಮ ಮಾರ್ಗವಾಗಿದ್ದು, ಮೆಟ್ಟಲುಗಳೂ ಇಲ್ಲ. ಇಂತಹ ದುರ್ಗಮ ಶಿಖರ ಏರಿ, ಅಲ್ಲಿ ಧ್ವಜ ಊರಿ ಬೆಳಿಗ್ಗೆ ಆ ಮನುಷ್ಯ ಕೆಳಗೆ ಇಳಿದು ಬಂದಿರುತ್ತಾನೆ. ಈ ದುರ್ಗಮ ಮಾರ್ಗದಿಂದ ಹೇಗೆ ಹತ್ತಿ ಇಳಿಯುತ್ತಾನೆ ಎಂಬುದು ಒಂದು ನಿಗೂಡ ಸಂಗತಿಯಾಗಿದೆ. ಆದರೆ ಇಂದಿಗೂ ಈ ಪರಂಪರೆ ಚಾಲ್ತಿಯಲ್ಲಿದೆ.

ಆಶ್ವಿನ ಮತ್ತು ಚೈತ್ರ ತಿಂಗಳ ಚಾತ್ರೆಯ ಸಮಯದಲ್ಲಿ ಭಕ್ತರು ತ್ರ್ಯಂಬಕೇಶ್ವರದಿಂದ ಪಂಚಗಂಗೆ ಮತ್ತು ನಾಶಿಕದ ರಾಮಕುಂಡದಿಂದ ನೀರನ್ನು ಕಾವಡಿಯಲ್ಲಿ ಹೊತ್ತುಕೊಂಡು ಸಪ್ತಶೃಂಗಿಯ ಜೇವಿಯ ಸ್ನಾನಕ್ಕಾಗಿ ತರುತ್ತಾರೆ. ಎರಡು ಮೂರು ದಿವಸದ ಪ್ರವಾಸವಾದರೂ ಕಾವಡಿಯನ್ನು ಕೆಳಗೆ ಇಡುವಂತಿಲ್ಲ. ಒಂದು ವೇಳೆ ಕೆಳಗೆ ಇಟ್ಟರೆ, ಅದನ್ನು ದೇವಿಗೆ ಉಪಯೋಗಿಸದೆ ಅಲ್ಲಿಯೇ ಗಿಡಕ್ಕೆ ತೂಗು ಹಾಕುತ್ತಾರೆ. ಇದು ಒಂದು ಮಹತ್ವದ ಅಚರಣೆಯಾಗಿದೆ. ದೇವಿಯ ಪ್ರದಕ್ಷಿಣೆಯ ಮಾರ್ಗವು ಗುಡ್ಡದಲ್ಲಿದ್ದು ಇದು ಸುಮಾರು ೫ ಮೈಲು ಅಂತರದ ಮಾರ್ಗವಾಗಿದೆ.

ಆದಿ ಮಾತೆಯು ಮಹಿಷಾಸುರನ ವಧೆಗಾಗಿ ಭಯಂಕರ ರೂಪವನ್ನು ಧಾರಣೆ ಮಾಡಿದಳು. ಅವನನ್ನು ಸಂಹರಿಸಿ ತ್ರೈಲೋಕ್ಯದಲ್ಲಿ ಶಾಂತತೆಯನ್ನು ನಿರ್ಮಾಣ ಮಾಡಿದಳು. ಮಹಿಷಾಶುರನ ವಧೆಯ ವೇಳೆಯಲ್ಲಿ ದೇವಿಗೆ ಅತಿಶಯ ಕ್ರೋಧ ಉಂಟಾಗಿ ಉಗ್ರಗೊಂಡ ದೇವಿಯು ವಿಶ್ರಾಂತಿಗಾಗಿ ಈ ಸ್ಥಾನದಲ್ಲಿ ನೆಲೆಸಿದಳು. ಮಾರ್ಕಂಡೇಯ ಋಷಿಗಳು ಇಲ್ಲಿಯೇ ೮-೧೦ ಮೈಲು ಅಂತರದಲ್ಲಿರುವ ಗುಹೆಯಲ್ಲಿ ಕುಳಿತು ದೇವಿಯ ಸ್ತುತಿ ಮಾಡಿದರು. ದೇವಿಯ ಆದರಿಂದ ಪ್ರಸನ್ನಳಾಗಿ ವರದಾಯಿನಿ ಆದಳು, ಅನ್ಯಾಯ, ಅಧರ್ಮದಿಂದ ರೊಚ್ಚಿಗೆದ್ದು ದುಷ್ಟರ ಸಂಹಾರಕ್ಕಾಗಿ ಉಗ್ರರೂಪ ಧಾರಣ ಮಾಡಿದಳು. ಇವು ಮಹಾರಾಷ್ಟ್ರದಲ್ಲಿ ಪ್ರಸಿದ್ಧಿ ಪಡೆದ ದೇವಿಯ ಮೂರೂವರೆ ಶಕ್ತಿ ಪೀಠಗಳಾಗಿವೆ.

ಮೂಕಾಂಬಿಕಾ ಮತ್ತು ಮಹಾಲಕ್ಷ್ಮಿ :

ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದಲ್ಲಿರುವ ಕೊಲ್ಲೂರ ಕ್ಷೇತ್ರದಲ್ಲಿ ಮೂಕಾಂಬಿಕಾ ಹೆಸರಿನಿಂದ ಮಹಾಲಕ್ಷ್ಮಿಯು ಪ್ರಸಿದ್ಧಿ ಪಡೆದಿದ್ದಾಳೆ. ಕೊಲ್ಲೂಕು ಈ ಕ್ಷೇತ್ರದ ನಾಮವು

ಕೊಲ್ಲಾಪುರ ಈ ಹೆಸರಿನ ಕನ್ನಡದ ಸಂಕ್ಷಿಪ್ತ ರೂಪವಾಗಿದೆ. ಕನ್ನಡದಲ್ಲಿ ಪುರಮ್ ಮತ್ತು ಪುರ ಈ ನಗರವಾಚಕ ಸಂಜ್ಞೆಯು ಊರ ಎಂದು ರೂಪಾಂತರ ಹೊಂದಿರುವುದು ಎಲ್ಲಾ ಕಡೆಗೆ ಕಂಡು ಬರುತ್ತದೆ. ಮಹಾರಾಷ್ಟ್ರದಲ್ಲಿಯೂ ಊರ ಈ ಉತ್ತರ ಪದಯುಕ್ತ ಊರ ಹೆಸರುಗಳು ಎಲ್ಲ ಕಡೆಗೆ ಇವೆ. ಕೊಲ್ಹಾಪುರ ಈ ಕ್ಷೇತ್ರದ ಹೆಸರಿನಲ್ಲಿಯ ಕೊಲ್ಲಕೋಲ ಈ ಪೂರ್ವ ಪದವು ವ್ಯಕ್ತಿ ವಾಚಕಿವಾಗಿದೆ. ಕೊಲ್ಹಾಪುರದಲ್ಲಿಯೇ ಕೋಲ ಇದು ಅಸುರನಿಗೆ ಸಂಬಧಿಸಿದೆ. ಆದರೆ ಕೊಲ್ಲೂರಿನಲ್ಲಿ ಕೋಲಮಹರ್ಷಿ ಎಂಬ ಸಜ್ಜನ ಭಕ್ತಿನಿಗೆ ಸಂಬಂದಿಸಿದ್ದಾಗಿದೆ. ಅನೇಕ ಪ್ರಾಚೀನ ಶಿಲಾಲೇಖಗಲ್ಲಿ ಕೊಲ್ಹಾಪುರ ಕ್ಷೇತ್ರದ ಹೆಸರು ಕೊಲ್ಲಾಪುರ ಎಂದು ನಮೂದಿಸಲಾಗಿದೆ. ಮರಾಠಿ ಭಾಷೆಯ ಪ್ರಕೃತಿಗನುಗುಣವಾಗಿ ಕೊಲ್ಹಾಪುರ ಉಚ್ಚಾರಣೆಯಲ್ಲಿ ಹ ಮಹಾಪ್ರಾಣವು ಸೇರಿ ಕೊಲ್ಹಾಪುರವಾಗಿದೆ. ಕೊಲ್ಲೂರಿನ ಮೂಕಾಂಬಿಕೆಯ ವಿಷಯವಾಗಿ ಬರೆದಿರುವ ಸ್ಥಾನಿಕ ಅಭ್ಯಸಕರು ಮೂಕಾಂಬಿಕೆಯ ಕ್ಷೇತ್ರಕ್ಕೆ ಕೋಲಾಪುರ ಎಂಬ ಹೆಸರಿನಿಂದಲೇ ಉಲ್ಲೇಖಿಸುತ್ತಾರೆ. ಅಂದರೆ ಮಹಾರಾಷ್ಟ್ರದಲ್ಲಿರುವ ಮಹಾಲಕ್ಷ್ಮಿ ಮತ್ತು ಕರ್ನಾಟಕದಲ್ಲಿರುವ ಮೂಕಾಂಬಿಕೆ ಈ ಎರಡೂ ಕ್ಷೇತ್ರಗಳು ಕೋಲಾಪುರ ಎಂಬ ಸಮಾನ ಹೆಸರಿನಿಂದಲೇ ಪ್ರಸಿದ್ಧಿ ಪಡೆದಿವೆ. ಎರಡೂ ಕ್ಷೇತ್ರಗಳಲ್ಲಿಯೂ ಸ್ಪಷ್ಟೀಕರಣದ ಕಥೆಯಲ್ಲಿ ಕೋಲ ಈ ವ್ಯಕ್ತಿನಾಮವೂ ಸಮಾನವಾಗಿದೆ. ಭೇದವಿರುವುದು ಕೋಲದ ಚರಿತ್ರೆಯಲ್ಲಿ ಮಾತ್ರ, ಕೊಲ್ಹಾಪುರದ ದೇವಿಯು ಕೋಲಾಸುರನ ವಧೆಗಾಗಿ ಪ್ರಕಟಗೊಂಡಳು. ಕೊಲ್ಲೂರಿನಲ್ಲಿ ದೇವಿಯು ಕೋಲ ಮಹರ್ಷಿಯ ರಕ್ಷಣೆಗಾಗಿ ಪ್ರಕಟಗೊಂಡಳು, ಈ ಭೇದದ ರಹಸ್ಯಾರ್ಥವು ಗಂಭೀರವಾಗಿದೆ. ಎರಡೂ ಕ್ಷೇತ್ರಗಳಲ್ಲಿ ತ್ರಿಗುಣಾತ್ಮಕ ತ್ರಿರೂಪಾತ್ಮಕ ದೇವಿಯ ತತ್ವದ ಪ್ರಕಟಣೆಯಾಗುವಾಗ, ಯಾರು ಯಾರನ್ನು ಪ್ರಭಾವಿತಗೊಳಿಸಿದರು? ಯಾವ ಕ್ಷೇತ್ರದಲ್ಲಿಯ ಪರಂಪರೆಯು ಇನ್ನೊಂದು ಕ್ಷೇತ್ರದಲ್ಲಿಯ ಶ್ರದ್ಧೆ, ವಿಶ್ವಾಸದ ಮೇಲೆ ಪರಿಣಾಮ ಮಾಡಿತು? ಇದರ ಉತ್ತರ ಅಷ್ಟು ಸರಳವಾಗಿಲ್ಲ. ಎರಡು ಕ್ಷೇತ್ರಗಳ ಪ್ರಾಚೀನತೆಯು ೬ ನೇಯ ಶತಮಾನಕ್ಕಿಂತ ಹಿಂದಿನದು ಎಂದು ನಿಶ್ಚಿತವಾಗಿದೆ. (ಎರಡೂ ಕ್ಷೇತ್ರಗಳಲ್ಲಿ ೬ನೇಯ ಶತಮಾನದ ಪ್ರಾರಂಭದಲ್ಲಿ ಶಂಕರಾಚಾರ್ಯರು ಶ್ರೀಚಕ್ರವನ್ನು ಸ್ಥಾಪಿಸಿದ್ದಾರೆ ಎಂಬುದು ಪರಂಪರೆಯಿಂದ ತಿಳಿದು ಬರುತ್ತದೆ.) ಮಹಾ ಪುರಾಣದಲ್ಲಿ ಅಂತರ್ಗತವಾಗಿರುವ ಮತ್ತು ದಾಖಲೆ ಹೊಂದಿರುವ ಎರಡೂ ಕ್ಷೇತ್ರಗಳ ಸಂಸ್ಕೃತ ಸ್ಥಳ ಪುರಾಣಗಳು ಲಭ್ಯವಾಗಿವೆ. ಅವುಗಳನ್ನು ಸ್ಪಷ್ಟೀಕರಿಸುವ ಕಥೆಯನ್ನು ಹೊರಗೆಡಹುವುದರಿಂದ ವಿಶೇಷ ಪ್ರಕಾಶ ಬೀಳುವ ಶಕ್ಯತೆಯಿದೆ.

ಸಹ್ಯಾದ್ರಿ ಪರ್ವತದ ನಿಬಿಡ ವೃಕ್ಷ- ವಲ್ಲರಿಗಳಿಂದ ತುಂಬಿದ ಹಸಿರು ಅರಣ್ಯದಲ್ಲಿ, ಕುಟಚಾದ್ರಿ ಪರ್ವತದ ಅಡಿಯಲ್ಲಿ ಕೊಲ್ಲೂರು ಕ್ಷೇತ್ರವಿದೆ. ಸೌಪರ್ಣಿಕಾ ನದಿಯಿಂದ ಈ ಕ್ಷೇತ್ರಕ್ಕೆ

ತೀರ್ಥಕ್ಷೇತ್ರದ ರೂಪ ಪ್ರಾಪ್ತವಾಗಿದೆ. ಈ ಕ್ಷೇತ್ರಕ್ಕೆ ಪುರಾತನ ಕಾಲದಲ್ಲಿ 'ಮಹಾರಣ್ಯ ಕ್ಷೇತ್ರ ವೆಂಬ ಹೆಸರಿತ್ತು, ಕೇರಳದ ಜನರು ಈ ಕ್ಷೇತ್ರಕ್ಕೆ 'ಮೂಕಾಂಬಿಕಾಪುರಿ' ಎಂದು ಉಲ್ಲೇಖಿಸುತ್ತಾರೆ. ಈ ಕ್ಷೇತ್ರದಲ್ಲಿ ಕೋಲ ಮಹರ್ಷಿಯು ತನ್ನ ತಪೋಬಲದಿಂದ ಶಿವನನ್ನು ಪ್ರಸನ್ನಗೊಳಿಸಿದ್ದ. ಅವನ ಆದೇಸದಿಂದಲೇ ತ್ರಿಗುಣಾತ್ಮಕ, ತ್ರಿರೂಪಾತ್ಮಕ ಮಹಾಶಕ್ತಿಯ ಕೃಪೆಗೂ ಪಾತ್ರನಾಗಿದ್ದ. ಆದರೆ ಅದೇ ಶಿವನ ಕೃಪಾಕಟಾಕ್ಷಕ್ಕೆ ಪಾತ್ರನಾದ 'ಕಂಹಾಸುರ' ಎಂಬ ಸುರನು ಉನ್ಮತ್ತತೆಯಿಂದ ಎಲ್ಲ ಕಡೆಗೆ ಭಯದ ವಾತಾವರಣವನ್ನು ನಿರ್ಮಾಣ ಮಾಡಿದ, ಬ್ರಹ್ಮ ವಿಷ್ಣು ಮತ್ತು ಮಹೇಶರಿಗೂ ಇದು ಜಟಿಲ ಪ್ರಶ್ನೆಯಾಯಿತು. ಯಾರೇ ತಪವನ್ನು ಆದರಿಸಿದರೂ ಅವರಿಗೆ ಇಚ್ಛಿತ ವರದಾನ ಮಾಡುವ ಶಿವನಿಗೆ ಪ್ರಶ್ನೆಯುಂಟಾಯಿತು. ಕಂಹಾಸುರನಿಗೆ ಅಮರತ್ವ ದೊರೆತರೆ, ಅವನು ತ್ರಿಲೋಕವನ್ನು ಸಂಹಾರಗೊಳಿಸುತ್ತಾನೆ. ಆದ್ದರಿಂದ ಸಮಯಕ್ಕೆ ಮುಂಚಿತವಾಗಿಯೇ ಅವನನ್ನು ನಿವಾರಿಸಬೇಕೆಂದು ಶಿವನು ಮಹಾಶಕ್ತಿಯನ್ನು ಪ್ರಾರ್ಥಿಸಿ, 'ನೀನು ಆ ಅಸುರನನ್ನು ಮೂಕಾನನ್ನಾಗಿಸು, ಅಂದರೆ ಅವನು ವರಪ್ರಾಪ್ತಿಗಾಗಿ ನನ್ನೆದುರು ನಿಂತರೂ ಅವನಿಗೆ ಕೇಳುವುದು ಸಾಧ್ಯವಾಗುವುದಿಲ್ಲ. ಶಿವನ ಸೂಚನೆಯಂತೆ ದೇವಿಯೂ ಕಂಹಾಸುರನನ್ನು ಮೂಕಾನನ್ನಾಗಿಸಿದಳು. ಆದರೂ ಅವನ ಉಪದ್ರವ ಹೆಚ್ಚಗೊಡಗಿತು. ಆಹಂಕಾರ ಮತ್ತು ಆದರಿಂದ ಉದ್ಭವಿಸುವ ವಿವೇಕಹೀನ ಉನ್ಮಾದವನ್ನು ಪರಿಹರಿಸುವುದು ದೇವರಿಗೂ ಅಸಾದ್ಯವಾಗುತ್ತದೆ. ಇದರ ನಿಗ್ರಹಕ್ಕಾಗಿ ಶಕ್ತಿಯೇ ಪ್ರಕಟವಾಗಬೇಕಾಗುತ್ತದೆ. ದೇವರು ಶಕ್ತಿಯ ಆಸ್ರಯ ಪಡೆದು, ದುಷ್ಟ ಶಕ್ತಿಯು ಅಮರತ್ವನ್ನು ಪಡೆಯುವುದಕ್ಕಿಂತ ಮುಂಚಿತವಾಗಿಯೆ ಅದನ್ನು ಕೊನೆಗೊಳಿಸಬೇಕೆಂದು ಪ್ರಾರ್ಥಿಸಿದರು. ಅವಳು ಮೂಕಾಸುರವನ್ನು ಸಂಹರಿಸಿದಳು. ಅವತಾರ ಕಾರ್ಯ ಮುಗಿಯುತ್ತಿದ್ದಂತೆಯೇ ಅವಳು ಸ್ವಯಂಭೂ ಶಿವಲಿಂಗದಲ್ಲಿ ಪ್ರವಿಷ್ಟಳಾದಳು. ಮೂಕಾಸುರನಿಗೆ ಪಶ್ಚಾತ್ತಾಪವಾಗಿ ದೇವಿಗೆ ಶರಣಾಗತನಾದನು. ದೇವಿ, ನನ್ನನ್ನು ಕ್ಷಮಿಸು, ನನ್ನ ಹೆಸರನ್ನು ನಿನ್ನ ಹೆಸರಿನೊಂದಿಗೆ ಸೇರಿಸು, ಭಕ್ತರ ಭಾವಕೋಶದಲ್ಲಿ ನನ್ನ ಹೆಸರು ಶಾಶ್ವತವಾಗಿ ಸ್ಥಾನ ಪಡೆಯುವಂತೆ ಮಾಡು ಎಂದು ದೇವಿಯಲ್ಲಿ ಪ್ರಾರ್ಥಿಸಿದನು. ಅವನ ಪ್ರಾರ್ಥನೆಯನ್ನು ದೇವಿಯು ಮನ್ನಿಸಿದಳು. ಆಹಂಕಾರದ ಮದದಿಂದ ಉಂಟಾದ ದುಷ್ಟತನದಿಂದ ಅವನು ಪೂರ್ಣವಾಗಿ ಮುಕ್ತನಾಗಿದ್ದ, ಪ್ರಾಂಜಲ ಮನಸ್ಸಿನಿಂದ ಅಪರಾಧವನ್ನು ಒಪ್ಪಿ, ಸನ್ಮಾರ್ಗದಲ್ಲಿ ನಡೆಯುವ ಅಭಯ ನೀಡುವುದು ಸಾತ್ವಿಕ ಶಕ್ತಿಯ ಸ್ವಭಾವವಾಗಿದೆ. ದೇವಿಯು ಅವನಿಗೆ ವರ ನೀಡಿ ಅವನಿಗಾಗಿ ಮೂಕಾಂಬಿಕೆ ಎಂಬ ಹೆಸರನ್ನು ಧಾರಣೆ ಮಾಡಿದಳು. ಕೋಲಾಪುರ, ಮೂಕಾಂಬಿಕಾ, ಕಂಹಾಸುರ, ಮೂಕಾಸುರ ಈ ಹೆಸರಿನ ಸ್ಪಷ್ಟೀಕರಣಕ್ಕಾಗಿ ಸ್ಥಳ ಪುರಾಣಿಕನು ಮಾಡಿದ ಸಂಕ್ಷಿಪ್ತ ಪರಿಚಯವು ಸಾಕಷ್ಟು ಏನೆಲ್ಲವನ್ನು ಸೂಚಿಸುತ್ತದೆ.

'ಕಂಹಾಸುರ' ಈ ಶಬ್ದದ ಗೂಢವನ್ನು ತಿಳಿದುಕೊಳ್ಳುವುದು ಮಹತ್ವದ್ದಾಗಿದೆ. ಮಹಾತ್ಮೈಕಾರನು ಉದ್ದೇಶಪೂರ್ವಕವಾಗಿ ಈ ಸಂಸ್ಕೃತ ಶಬ್ದವನ್ನು ಆರಿಸಿದ್ದಾನೆ. 'ಕಂಹ' ಅಂದೆರೆ 'ಕ' ದ' ಹನನ ' ಮಾಡುವವ, ಕ'ಕ' ಕ್ಕೆ ಹಾನಿಯನ್ನು ಉಂಟು ಮಾಡುವವ 'ಕ' ಈ ಏಕಾಕ್ಷರಿ ಶಬ್ದ ಕೋಶದ ಅರ್ಥ, ಹತ್ತೊಂಭತ್ತು' ಎಂದಿದೆ ಅನೇಕ ಅರ್ಥಗಳಲ್ಲಿ 'ಶಬ್ದ' ಧ್ವನಿ' ಅರ್ಥವು ಇದೆ, ಪರ್ಯಾಯವಾಗಿ ಇದು ಶಬ್ದೋಚ್ಚಾರಕ್ಕೆ ಸಂಬಮದಿಸಿದ್ದಾಗಿದೆ ಯಾರಲ್ಲಿ ಮಾತನಾಡುವ ಶಕ್ತಿ ಕುಂದಿದೆಯೋ, ಅವನು 'ಕಂಹರ' ಸಾತ್ವಿಕತೆಗೆ ದೇವಿಗುಣಕ್ಕೆ, ಶತ್ರುವಾಗಿರುವ ಅಸುರನು 'ಕಂಹಾಸುರ' ಈ ಗೂಢ ಶಬ್ದದ ನಿಜವಾದ ಅರ್ಥ ಮೂಕಾಸುರವೇ ಆಗಿದೆ. ಈ ರಹಸ್ಯವು ಸಾಮಾನ್ಯರಿಗೆ ಗೊತ್ತಾಗದಿರಲೆಂದು ಸ್ಥಳ ಪುರಾಣಕಾರನು ಶಿವನ ಆದೇಶದಂತೆ ದೇವಿಯು ಅಸುರನನ್ನು ಮೂಕನನ್ನಾಗಿ ಮಾಡಿದಳು ಎಂದು ಕಥೆ ಹೇಳಿರುವನು. ನಿಜವಾಗಿ ಈ ಕಥೆಯ ಮಿಥಿಕ ಉಗಮವು 'ಕಂಹಾಸುರ' ಹೆಸರಿನಲ್ಲಿಯೇ ಇದೆ, ಮೂಕಾಂಬಿಕಾ ಈ ಸಂಸ್ಕೃತ ದೇವಿಯ ಹೆಸರು ಕಂಹಾಸುರನ ಮೂಕಾತೆಗೆ ಜೋಡಿಸುವಂತಹ ಅನುಕೂಲತೆಯು 'ಕಂಹಾಸುರ' ಈ ಗೂಢನಾಮದ ರಚನೆಯಿಂದ ಸಾಧ್ಯವಾಯಿತು. ವಾಸ್ತವಿಕವಾಗಿ 'ಮುಕ್ಕ' ಇದು ಮೂರು ಎಂಬ ಸಂಖ್ಯಾ ವಾಚಕ ಶಬ್ದದಿಂದಾಗಿ 'ಮೂಕಾಂಬಿಕಾ' ದೇವಿಯ ಹೆಸರು ಸಾಧಿಸಿದೆ. ಮಕ್ಕಣ್ಣ ಅಂದರೆ ತ್ರಿಲೋಚನ. ಹಣೆಯಲ್ಲಿ ಮೂರನೆಯ ನೇತ್ರವುಳ್ಳವನು ಅಥವಾ'ಮುಕ್ಕಂಬಾ' ಅಂದರೆ ತ್ರಿರೂಪಾ- ಅಂಬಾ ಅಂದರೆ, ರೂಪತ್ರಯಾತ್ಮಕ ಶಕ್ತಿವುಳ್ಳವಳು, ಮಹಾಲಕ್ಷ್ಮಿ, ಮಹಾಕಾಳಿ ಮತ್ತು ಮಹಾಸರಸ್ವತಿ ಈ ಮೂರು ರೂಪಗಳು ಯಾರಲ್ಲಿ ಒಂದಾಗಿವೆಯೇ ಅವಳು ಅಂಥಹ ಶಕ್ತಿ ಅಂದರೆ ಮುಕ್ಕಂಬಾ, ಈ ಹೆಸರಿನ ಸಂಸ್ಕರೀಕರಣ 'ಮೂಕಾಂಬಿಕಾ' ಎಂದಾಗಿದೆ. ಸಂಸ್ಕೃತ ಹೆಸರಿನಿಂದ ಬಂದ ಈ ಶಬ್ದದಿಂದ ಕಂಹಾಸುರ, ಮೂಕಾಸುರದ ನಿರ್ಮಿತಿಯಾಗಿದೆ. ಕೊಲ್ಲೂರು, ಕೊಲ್ಹಾಪುರ ಈ ಕ್ಷೇತ್ರಗಳ ಹೆಸರಿನ ಸ್ಪಷ್ಟೀಕರಣಕ್ಕಾಗಿ ಕೊಲ್ಹಾಪುರ ಕ್ಷೇತ್ರದಲ್ಲಿ ಕೊಲ್ಹಾಸುರ ಹೆಸರಿನ ದೈತ್ಯನ ನಿರ್ಮಾಣ ಮಾಡಲಾಯಿತು. ಈ ಎರಡೂ ಮಹಾಲಕ್ಷ್ಮಿ ಕೇಂದ್ರದಲ್ಲಿಯ ಪಾತ್ರದ ಭೇದಗಳು ಸ್ಥಳ ಪುರಾಣಕಾರಣ ಭಿನ್ನ ಕಲ್ಪನಾ ಶಕ್ತಿಯಿಂದ ನಿರ್ಮಾಣವಾಗಿದೆ.

ಪ್ರಾಚೀನ ಕಾಲದಿಂದ ಕೊಲ್ಲಾಪುರವೆಂದು ಖ್ಯಾತಿ ಪಡೆದ ಈ ಪ್ರದೇಶದ ಹೆಸರು ಕೊಲ್ಹಾಪುರವರಂದು ಹೇಗೆ ಆಯಿತು ಎಂಬುದು ಐದಿಹಾಸಿಕ ಉದಾಹರಣೆಯಿಂದ ನಿಶ್ಚಿತವಾಗುತ್ತದೆ. ಪ್ರಾಕೃತ, ಸಂಸ್ಕೃತ ಭಾಷೆಯಲ್ಲಿ 'ಕೊಲ್ಹ' ಎಂಬ ಶಬ್ದವಿಲ್ಲ. ಮೂಲದಲ್ಲಿ 'ಕೊಲ್ಲಾ' ಇದು ತೆಲಗು ಶಬ್ದಾವಾಗಿದೆ. ಅದರ ಅರ್ಥ' ಐಶ್ವರ್ಯ- ಸಂಪನ್ನತೆ' 'ಸಮೃದ್ಧಿ' ಎಂದು ಇದೆ. ಸ್ವಾಭಾವಿಕವಾಗಿ ಎಲ್ಲಿ ಲಕ್ಷ್ಮಿಯ ವಾಸವೋ, ಅಲ್ಲಿ ಐಶ್ವರ್ಯ ಎಂಬ ಈ ಎರಡು

ಸಂಕಲ್ಪನೆಗಳು ಒಟ್ಟಿಗೆ ಬಂದಾಗ 'ಕೊಲಾಪುರ' ಶಬ್ದ ಪ್ರಯೋಗ ಸಿಗುತ್ತದೆ. ತೆಲಗು ಬಿಟ್ಟು ಬೇರೆ ಯಾವ ದಕ್ಷಿಣ ಭಾಷೆಯಲ್ಲಿಯೂ ಶಬ್ದವು ಈ ಅರ್ಥದಲ್ಲಿ ಉಪಯೋಗಿಸಿಲ್ಲ. ತಮಿಳು ಮತ್ತು ಕನ್ನಡದಲ್ಲಿ ಅದರ ಅರ್ಥ ಬೇರೆ ಯಾಗಿದೆ. ಮರಾಠಿಯಲ್ಲಿಯ ತೆಲಗು ಶಬ್ದಗಳ ಬಾಹುಳ್ಯ ಗಮನಿಸಿದರೆ ಈ ಶಬ್ದಕ್ಕೆ, ಅರ್ಥಕ್ಕೆ, ಸ್ಥಳಕ್ಕೆ ಐತಿಹಾಸಿಕ ಸುಳಿವು ಸಿಗುತ್ತದೆ. ಇದರ ಮೇಲಿಂದ ಲಕ್ಷ್ಮಿ ನಿವಾಸ ಎಂದರೆ ಕೊಲ್ಲಾಪುರ, ಇದು ಸಮಾಂತರ ಸಂಜ್ಞೆಯಾಗಿದೆ. ಎಂಬುದು ಸ್ಪಷ್ಟರಾಗಿ ಗೋಚರಿಸುತ್ತದೆ.ಆಂಧ್ರದಲ್ಲಿಯ ಕೆಳವರ್ಗದ ಸಮಾಜದಲ್ಲಿಯೂ ಕೊಲ್ಹಾಪುರ ಮಹಾಲಕ್ಷ್ಮಿಯ ಹೆಸರು ವಿಜೃಂಭಿಸುತ್ತದೆ. ಎಂಬುದರ ಒಂದು ಜೀವಂತ ಉದಾಹರಣೆಯು ಪಿ.ನಾಗೇಶ್ವರರಾವ್ ಅವರ ಲೇಖನದಿಂದ ತಿಳಿದು ಬರುತ್ತದೆ. ಕೊಲ್ಹಾಪುರ ಮಹಾಲಕ್ಷ್ಮಿಗೆ ಆಂಧ್ರದ ಜನಜೀವನದಲ್ಲಿ ಎಷ್ಟು ಹತ್ತಿರದ ಸಂಬಂಧವಿದೆ ಎಂಬುದನ್ನು ಪುರಾವೆಯಿಂದ ಲೇಖಕರು ದಾಖಲಿಸುತ್ತಾರೆ. ಎರಕಲ್ ಎಂಬ ಹಿಂದುಳಿದ ತೆಲಗು ಅಲೆಮಾರಿ ಜನಾಂಗವಿದೆ. ಈ ಜನಾಂಗದ ಸ್ತ್ರೀಯರು ಆಂಧ್ರದ ಹಳ್ಳಿ ಹಳ್ಳಿಗಳಲ್ಲಿ ಮನೆ ಮನೆ ತಿರುಗುತ್ತಾರೆ. ಅವರ ಮುಖ್ಯ ಕಸಬು ಎಂದರೆ ಭವಿಷ್ಯ ಹೇಳುವುದು. ಅವರು ತಮ್ಮ ಕೆಲಸ ಆರಂಭಿಸುವ ಮೊದಲು ಕೊಲ್ಹಾಪುರದ ಲಕ್ಷ್ಮಿ ಮತ್ತು ರೇಣುಕೆಯನ್ನು ಆಹ್ವಾನಿಸುತ್ತಾರೆ. ಈ ಹಳೆಯ ಪದ್ಧತಿ ಇಂದಿಗೂ ಆಚರಣೆಯಲ್ಲಿದೆ. ಈ ಜನರ ಸಂಚಾರವಿರದ ಊರೇ ಸಿಗುವುದಿಲ್ಲ. ನಾಗೇಶ್ವರರಾವ ಅವರ ಕೊಲ್ಲ–ಕೋಲ ಸಂಜ್ಞೆಯ ಮೂಲಾರ್ಥದ ಅನಾವರಣದಿಂದ ಸತ್ಯದಿಂದ ಉದ್ದೇಶ ಪೂರ್ವಕವಾಗಿ ದೂರವಿರಿಸಿದ ಸ್ಥಳಪುರಾಣಿಕರ ನಿರ್ಮಿತಿಯ ಭೇದ ಮಾಡಲು ಬರುತ್ತದೆ. ಇದರಿಂದ ಎರಡೂ ಕ್ಷೇತ್ರಗಳ ದೇವಿ ತತ್ವದ ಏಕರೂಪತೆಯನ್ನು ನಿಶ್ಚಿಂತೆಯಿಂದ ಅನುಭವಿಸಬಹುದಾಗಿದೆ.

ಲಕ್ಷ್ಮಿ ಸಂಕಲ್ಪನೆಯ ಮೂಲ ರೂಪವು ಶ್ರೀಸೂಕ್ತದಲ್ಲಿದೆ. ಅದರಲ್ಲಿಯ ಶ್ರೀ ದೇವತೆಯ ಸಮೃದ್ಧಿಯ ದೇವತೆಯಾಗಿದ್ದಾಳೆ. ಅವಳು ಆ ಕಾಲದ ಐಶ್ವರ್ಯ ದೇವತೆಯಾಗಿದ್ದಳು, ಕಾಲಾಂತರದಲ್ಲಿ ಅವಳಿಗೆ ಶಿವನ ಅಥವಾ ವಿಷ್ಣುವಿನ ಜೊತೆಗೆ ಜೋಡಿಸುವ ಪ್ರಯತ್ನವನ್ನು ಶೈವರು ಮತ್ತು ವೈಷ್ಣವರು ತಮ್ಮ ತಮ್ಮ ರೀತಿಯಲ್ಲಿ ಮಾಡಿದರೂ ಮೂಲದಲ್ಲಿ ಅವಳು ಸರ್ವತಂತ್ರ ಸ್ವತಂತ್ರ, ಹಾಗೂ ಸಾರ್ವಭೌಮದ ಅಧಿಕಾರ ಚಲಾಯಿಸಿದ ಆದಿಶಕ್ತಿಯ ರೂಪವೇ ಆಗಿದ್ದಾಳೆ. ಕೊಲ್ಲೂರು ಮಾಕಾಂಬಿಕೆ ಮತ್ತು ಕೊಲ್ಲಾಪುರದ ಮಹಾಲಕ್ಷ್ಮಿ ಈ ಎರಡೂ ರೂಪದಲ್ಲಿ ಅವಳು ತನ್ನ ಮೂಲ ರೂಪದಂತೆಯೇ ಇಂದಿಗೂ ತನ್ನ ರೂಪ ಉಳಿಸಿಕೊಂಡಿದ್ದಾಳೆ. ಕೊಲ್ಲೂರು ಕ್ಷೇತ್ರ ಮತ್ತು ಅಲ್ಲಿಯ ಅಧಿದೇವತೆ ಮೂಕಾಂಬಿಕೆಯ ಜೊತೆಗೆ ಆದ್ಯ ಶಂಕರಾಚಾರ್ಯರ ಹೆಸರು ಸದಾಬದ್ಧವಾಗಿದೆ. ಆದ್ಯ ಶಂಕರಾಚಾರ್ಯರು ಮಾತೃಭಕ್ತರಾಗಿದ್ದುದರಿಂದ ಮಹಾಮಾತೆಯ ಭಕ್ತರೂ ಆಗಿದ್ದರು. ಕಾಶಿಯಿಂದ ಕನ್ಯಾಕುಮಾರಿ,

ಕೊಲ್ಲೂರಿನಿಂದ ಕಂಚಿಯವರೆಗಿನ ಅನೇಕ ಶಕ್ತಿಪೀಠಗಳು ಅವರ ಸ್ಪರ್ಶದಿಂದ ಅಧಿಕ ಊರ್ಜಾ ಸಂಪನ್ನವಾದವು. ಶಕ್ತಿಪೀಠಗಳಲ್ಲಿ ಶಾಕ್ತರ ವಾಮಾಚಾರಿ ವಿಧಿ ವಿಧಾನಗಳಿಂದ ಪ್ರದೂಷಣೆಯು ಅಧಿಕವಾಗಿತ್ತು. ಅದನ್ನು ನಿವಾರಿಸುವುದಕ್ಕಾಗಿ ಅವರು ಅಸೇತು ಹಿಮಾಚಲದವರೆಗೆ ಕಾಲ್ನಡಿಗೆಯಿಂದ ಪ್ರವಾಸ ಮಾಡಿದರು. ಅನೇಕ ಶಕ್ತಿಪೀಠಗಳಲ್ಲಿ ಶ್ರೀಚಕ್ರದ ಸ್ಥಾಪನೆ ಮಾಡಿದರು. ದೇವಿಯ ವಿಷಯದಲ್ಲಿಯ ಶ್ರದ್ದೆಯನ್ನು ನಿರ್ಮಲ ಮತ್ತು ಉನ್ನತ ವಿಚಾರಗಳಿಂದ ಉದ್ಧರಿಸಿದರು. ಅವರು ರಚಿಸಿದ ಅನೇಕ ಶಕ್ತಿ ಸ್ತೋತ್ರಗಳು ನಾದಮಯವೂ, ತತ್ವ ಗರ್ಭಿತವೂ ಆಗಿದೆ. ತ್ರಿಪುರ ಸುಂದರೆ ಸ್ತೋತ್ರ, ಸೌಂದರ್ಯ ಲಹರಿ ಇವು ದೇವಿಯ ಮಹಿಮೆಯ ಸ್ತುತಿಗಳಾಗಿವೆ. ಸೌಂದರ್ಯ ಲಹರಿಯಂತೂ ಮೂಕಾಂಬಿಕಾ ಮಂದಿರದಲ್ಲಿಯೇ ರಚಿಸಲಾಗಿದೆ.

ಕೊಲ್ಲೂರು ಕ್ಷೇತ್ರದಲ್ಲಿ ಶಂಕರಾಚಾರ್ಯರು ದೇವಿಯ ಪಂಚಲೋಹದ ಮೂರ್ತಿಯನ್ನು ಮಾಡಿ, ಆಸನದ ಮೇಲೆ ಸಿಂಹದ ಆಕೃತಿಯನ್ನು ಕೊರೆಯಿಸಿ, ವಿಧಿಪೂರ್ವಕವಾಗಿ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಇಲ್ಲಿಯ ಚತುರ್ಭುಜ ಮೂರ್ತಿಯ ಎರಡು ಕೈಗಳಲ್ಲಿ ಶಂಖ ಚಕ್ರದಲ್ಲಿದ್ದು, ಕೆಳಗಿನ ಒಂದು ಕೈ ವರದ ಮುದ್ರೆಯಲ್ಲಿದ್ದು, ಎರಡನೆಯ ಕೈ ಅಭಯಮುದ್ರೆಯಲ್ಲಿದೆ. ಶಂಕರಾಚಾರ್ಯರು ಗೊತ್ತುಪಡಿಸಿದ ರೀತಿಯಲ್ಲಿಯೇ ಇಲ್ಲಿ ಪೂಜೋಪಚಾರ, ಉಪಾಸನಾ ಸ್ವರೂಪವನ್ನು ಆಚರಿಸಲಾಗುತ್ತಿದೆ. ಇದು ಹನ್ನೊಂದು ಶತಕಗಳಿಂದ ಅವ್ಯಾಹತವಾಗಿ ನಡೆದು ಬಂದಿದೆ.

ಈ ಮಂದಿರವನ್ನು ವೆಂಗಿ ವಂಶದ ವೆಂಕಣ್ಣಾ ಸಮಂದರನು ಅಥವಾ ಸ್ಥಪತಿಯು ಸ್ಥಾಪಿಸಿದ್ದಾನೆ. ಮಂದಿರದ ಜೀರ್ಣೋದ್ಧಾರವನ್ನು ಕೆಳದಿಯ ವೆಂಕಟಪ್ಪನಾಯಕನು ಕ್ರಿ. ಶ. ೧೬೦೮ ರಲ್ಲಿ ಮಾಡಿದ್ದಾನೆ. ಈ ದೇವಿಯು ಬಿದನೂರು ರಾಜರ ಕುಲದೇವತೆಯಾಗಿದ್ದಳು. ಬಿದನೂರಿನ ರಾಜನು ವಿಜಯನಗರದ ರಾಜನ ಮಾಂಡಲೀಕನಾಗಿದ್ದನು. ಈ ಕ್ಷೇತ್ರದಲ್ಲಿಯ ಒಂದು ವಿಶೇಷ ಸಂಕೇತವು ಹೀಗಿದೆ. ಇಲ್ಲಿಯ ಕ್ಷೇತ್ರಪಾಲನಾದ ವೀರಭದ್ರನಿಗೆ ಅಗ್ರಪೂಜೆಯ ಮಾನ್ಯತೆಯಿದೆ. ಇವನ ದರ್ಶನ ಪಡೆದೇ ದೇವಿಯ ದರ್ಶನ ಪಡೆಯಬೇಕು, ಇಲ್ಲದಿದ್ದರೆ ದೇವಿ ದರ್ಶನದ ಫಲ ದೊರೆಯುವುದಿಲ್ಲ. ದೇವಿಯ ಬಲಗಡೆಗೆ ಮಹಾಸರಸ್ವತಿ, ಎಡಗಡೆಗೆ ಮಹಾಕಾಲಿ – ದುರ್ಗಾ ದೇವಿಯ ಮೂರ್ತಿಗಳಿವೆ. ಕೊಲ್ಲೂರು ಮೂಕಾಂಬಿಕೆಯ ಶಕ್ತಿಪೀಠವು ಕರವೀರ ನಿವಾಸಿನಿಯ ಶಕ್ತಿಪೀಠದಂತೆ ವರ್ಷಪೂರ್ತಿ ಅನೇಕ ಉತ್ಸವಗಳಿಂದ ವಿಜೃಂಭಿಸುತ್ತಿರುತ್ತದೆ. ಕೊಲ್ಲೂರು ಕ್ಷೇತ್ರದಲ್ಲಿ ಮೂಕಾಂಬಿಕೆಯು ಜಾಗೃತ ಜ್ಞಾನಶಕ್ತಿಯಾಗಿದ್ದಾಳೆ ಎಂಬುದು ಭಕ್ತರ ಆರಾಧನಾ ವಿಧಿಯಿಂದ ವ್ಯಕ್ತವಾಗುತ್ತದೆ. ಆದ್ದರಿಂದಲೇ ದೇವಿಗೆ ಕಲಾನಿಧಿ

ಎಂದು ವಿಶೇಷಣ ದೊರೆತಿದೆ. ಇವಳು ಎಲ್ಲ ಕಲೆಯ ಜನನಿಯಾಗಿದ್ದಾಳೆ. "ಯಾದೇವಿ ಸರ್ವ ಭೂತೇಷು ಬುದ್ಧಿರೂಪೇಣ ಸಂಸ್ಥಿತಾ ಎಂದು ಸಪ್ತಶತಿಯಲ್ಲಿ ಈ ಮಹಾಶಕ್ತಿಯ ವರ್ಣನೆಯಿದೆ.

ಮೋಕಾಂಬಾ ಮೋಕ್ತೇಸರ :

ಶಂಕರಾರಾಚಾರ್ಯರಿಗಿಂತ ಮುಂಚೆಯೇ ಕೊಲ್ಲೂರಿನ ಗ್ರಾಮದೇವತೆಯಾಗಿ ಪ್ರಸಿದ್ಧಿ ಪಡೆದ ಈ ಮಾತೆಯ ಮಹಿಮೆಯನ್ನು ಶಂಕರಾಚಾರ್ಯರು ತಮ್ಮ ಜನ್ಮಭೂಮಿಯಾದಕೇರಳದಲ್ಲಿರುವಾಗಲೇ ತಿಳಿದಿರಬೇಕು. ಬಹಳ ಪ್ರಾಚೀನ ಕಾಲದಿಂದಲೂ ಕೊಲ್ಲೂರು ಕೇರಳಿಯರ ಆಕರ್ಷಣೆಯ ವಿಷಯವಾಗಿ ಉಳಿದಿದೆ. ಅಚಾರ್ಯರು ಈ ಲೋಕ ದೇವತೆಯ ಲೋಕಪ್ರಿಯತೆಯನ್ನು ಗಮನಿಸಿಯೇ ಅವಳಿಗೆ ಸತ್ವಾಧಿಷ್ಠಿತ ಮಹಾಶಕ್ತಿಯ ರೂಪವನ್ನು ಅವಳಿಗೆ ಒದಗಿಸಿಕೊಟ್ಟರು. ಅವಳಿಗೆ ಹೊಸ ರೂಪವನ್ನು ಕೊಟ್ಟು, ಪೀಠದಲ್ಲಿ ಅಧಿಷ್ಠಾಪನೆಗೊಳಿಸಿ ಅವಳ ಪ್ರತೀಕವೆಂದು ಶ್ರೀಚಕ್ರವನ್ನು ಗರ್ಭಗೃಹದಲ್ಲಿ ಸ್ಥಾಪಿಸಿದರು. ಪೂಜೋತ್ಸವನ್ನು ಉನ್ನತ ಮಟ್ಟದಲ್ಲಿ ಪರಷ್ಕೃತಗೊಳಿಸಿ ಪ್ರಚಲನಗೊಳಿಸಿದರು. ಅವರ ಈ ಕಾರ್ಯದಿಂದ ಲೋಕ ದೇವತೆಯ ಮೂಲರೂಪವು ಪೂರ್ಣವಾಗಿ ಮುಚ್ಚಿ ಹೋಯಿತು. ಕೇವಲ ವೀರಭದ್ರನಂತಹ ಉಗ್ರದೇವತೆಗೆ ದೊರೆತ ಅಗ್ರಪೂಜೆಯ ಮಾನ್ಯತೆಯಂತೆ, ಯಾವುದೋ ಒಂದು ಸಾಂಸ್ಕೃತಿಕ ಪ್ರಾಚೀನ ಅವಶೇಷದಂತೆ, ಅವಳ ಮೂಲ ಸ್ವರೂಪದ ಸೂಕ್ಷ್ಮಾವಲೋಕನದ ದಾರಿಯ ಅಸ್ಪಷ್ಟತೆ ಮಾತ್ರ ನಮಗೆ ಗೋಚರಿಸುತ್ತದೆ. ಮೋಕಾಂಬಾ ಮೂಕ್ತಾಂಬಾ ಈ ಕೊಲ್ಲಾಪುರದಲ್ಲಿಯ ನಾಮೋಚ್ಛಾರದಿಂದ 'ಉ' ಕಾರವು 'ಓ' ಕಾರವಾಗಿರುವುದು ತಿಳಿಯುತ್ತದೆ. ಬಾಷಾ ಶಾಸ್ತ್ರದ ದೃಷ್ಟಿಯಿಂದ ಇದು ಸ್ವಾಭಾವಿಕವಾಗಿದೆ. ಆದರೆ ಈ ಅಭೇದದ ಮಹತ್ವವು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯ ಪರಿಸರದಲ್ಲಿ ಪ್ರಚಲಿತವಗಿರುವ ಗೊಮದಲ ವಿಧಿಯ ಸೂತ್ರಧಾರನಿಂದ ತಿಳಿದು ಬಂದಿತು ೪೩ ಎಂದು ಥೇರೆಯವರು ಉಲ್ಲೇಖಿಸಿದ್ದಾರೆ. ಕೇವಲ ದೇವಿಯ ಮಂದಿರದಲ್ಲಿ ನೆರವೇರುವ ಗೊಂದಲದ ಪ್ರಮುಖನಿಗೆ ಮೋಕ್ತೇಸರ ಎಂಬ ಸಂಜ್ಞೆ ಇದೆ. ಈ ಸಂಜ್ಞೆ ಯಾಕೆ ಬಂದಿತು? ಇವನು ಮೂಕಾಂಬಿಕೆಯ ಪುರಾಣ ಕಥೆಯ ಕಾರಣನಾಗಿದ್ದ ಮೂಕಾಸುರನಾಗಿರಲಿಕ್ಕಿಲ್ಲವೇ? ಎಂಬ ಸಂಶಯ ತಲೆದೋರುತ್ತದೆ. ದಕ್ಷಿಣದ ಭೂಮಿಯು ಭೂತಗಣಗಳಿಂದ ತುಂಬಿದೆ. ಗೊಂದಲ ನೃತ್ಯ ವಿಧಿಯು ಮೂಲತಃ ಭೂತಗಣಕ್ಕೆ ಸಂಬಂಧಿತವಾಗಿದೆ. ಆದ್ದರಿಂದ ಈ ನೃತ್ಯದ ಪ್ರಮುಖನೂ ಅಸುರ ಕುಲದವನಾಗಿರುವುದು ಸ್ವಾಭಾವಿಕವಾಗಿದೆ. ಒಂದು ವಿಶೇಷತೆಯೆಂದರೆ ಇಂದಿಗೂ ಈ ಗೊಂದಲದ ವಿಧಿಯು ಉಳಿದುಕೊಂಡು ಬಂದಿದೆ. ಈ ಗೊಂದಲದ ವಿಧಿಯಲ್ಲಿ ಅತ್ಯಂತ

ಹಿಂಸೆಯ ರೂಪದಲ್ಲಿ ಪಶು ಬಲಿ ಕೊಡುವ ವಿಧಿ ಇಂದಿಗೂ ಉಳಿದುಕೊಂಡಿದೆ. ಪಶುಬಲಿ ಕೊಡುವ ಈ ಗೊಂದಲಕ್ಕೆ 'ಅಸುರ ಕ್ರಿಯಾ' ಎಂದೂ, ಪಶುವಲಿ ವಿರಹಿತ ಗೊಂದಲಕ್ಕೆ 'ದೇವ ಕ್ರಿಯ' ಎಂದೂ ಹೆಸರಿದೆ. ದೇವಕ್ರಿಯೇಯಲ್ಲಿಯ ಪೂಜಾ ವಿಧಿಯು ಬ್ರಾಹ್ಮಣರದಾಗಿರುತ್ತದೆ. ಈ ಮಾಹಿತಿಯ ಕಡೆಗೆ ದೃಷ್ಟಿಹರಿಸಿ ಪರಾಮರ್ಶಿಸಿದರೆ ಮೊಕ್ತೇಸರು ಮೂಕಾಂಬಿಕೆಯ ಸ್ಥಳ ಪುರಾಣದಲ್ಲಿರುವ ಮೂಕಾಸುರನ ಪ್ರೇರಕವಾಗಿರುವ ಶಕ್ಯತೆಯನ್ನು ಅಲ್ಲಗೆಳೆಯುವಂತಿಲ್ಲ. ಸ್ಥಳ ಪುರಾಣಕಾರನು ವಿಶಿಷ್ಟ ಕ್ಷೇತ್ರದಲ್ಲಿರುವ, ವಾಸ್ತವತೆಯಲ್ಲಿರುವ ಸಾಮಗ್ರಿಯನ್ನೇ ಕೌಶಲ್ಯದಿಮದ ಉಪಯೋಗಿಸಿರುತ್ತಾನೆ. ಎಂಬುದು ಅನೇಕ ದೇವಸ್ಥಾನಗಳ ಸ್ಥಳಪುರಣಗಳ ವಿಶ್ಲೇಷಣೆಗಳಿಮದ ನಮಗೆ ತಿಳಿದು ಬರುತ್ತದೆ. ಈ ಪಾರ್ಶ್ವಭೂಮಿಯ ಮೇಲೆ ಪರಿಶೀಲನೆ ಮಾಡಿದರೆ ಆದ್ಯ ಶಂಕರಾಚಾರ್ಯರು ಕೊಲ್ಲೂರ ಕ್ಷೇತ್ರಕ್ಕೆ ಒದಗಿಸಿದ ಹೊಸ ಪರಿಶೀಲನೆ ಮಾಡಿದರೆ ಆದ್ಯ ಶಂಕರಾಚಾರ್ಯರು ಕೊಲ್ಲೂರ ಕ್ಷೇತ್ರಕ್ಕೆ ಒದಗಿಸಿದ ಹೊಸ ಚಾಲನೆ, ಉನ್ನತಿ, ಸತ್ವಸಂಪನ್ನತೆಯ ರೂಪ ಮತ್ತು ಆ ರೂಪದ ಪ್ರಭಾವದಿಂದ ಆತ್ಮಸಾಧಕರಿಗೆ, ಜ್ಞಾನೋಪಾಸಕರಿಗೆ, ಕಲಾವಂತರಿಗೆ ಪ್ರೇರಣಾ ಸಾಮರ್ಥ್ಯ ದೊರಕುವಂತಾಗಿದೆ. ಇದು ವರ್ಣನೆಗೆ ಅತೀತವಾಗಿದೆ, ಶಬ್ದಾತೀತವಾಗಿದೆ. ಒಂದು ಅಲೌಕಿಕ ವ್ಯಕ್ತಿಮತ್ವವು ಎಷ್ಟು ಕ್ರಾಂತಿಕಾರಿ ಪರಿವರ್ತನೆ ಮಾಡಬಲ್ಲದು ಎಂಬುದಕ್ಕೆ ಕೊಲ್ಲೂರು ಮೂಕಾಂಬಿಕೆಯ ರೂಪತ್ರಯಾತ್ಮಕ ಜ್ಞಾನ ಶಕ್ತಿಯ ಸುಂದರ ಸ್ವರೂಪದ ದರ್ಶನವು ಜ್ವಲಂತ, ಜಾಗೃತ ಉದಾಹರಣೆಯಾಗಿದೆ.

ಬನಶಂಕರಿ ಮತ್ತು ಮಹಾಲಕ್ಷ್ಮಿ :

ಚೋಳದಗುಡ್ಡ ಈ ಕ್ಷೇತ್ರದಲ್ಲಿ ಬನಶಂಕರಿ ಅಥವಾ ಶಾಕಂಬರಿ ಎಂದು ಖ್ಯಾತಿ ಪಡೆದಿರುವ ದೇವತೆಯು 'ಬದಾಮಿಯ ಬನಶಂಕರಿ' ಎಂದೇ ಮಹಾರಾಷ್ಟ್ರ ಸಹಿತವಾಗಿ ಪೂರ್ತಿ ದಕ್ಷಿಣ ಭಾರತದಲ್ಲಿ ಪ್ರಸಿದ್ಧಿ ಪಡೆದಿದ್ದಾಳೆ. ದಕ್ಷಿಣ ಭಾರತದಲ್ಲಿ ಅಸಂಖ್ಯ ಜನರ ಕುಲದೇವತೆಯೂ ಆಗಿದ್ದಾಳೆ. ಪುಣೆಯಲ್ಲಿರುವ ಚತುಃಶೃಂಗಿ ದೇವಿಯ ಅರ್ಚಕರ ಕುಲದೇವತೆಯೂ ಬನಶಂಕರಿಯೇ ಆಗಿದ್ದಾಳೆ. ಈ ಅರ್ಚಕರ ಪೂರ್ವಜರು ಬನಶಂಕರಿ ದೇವಸ್ಥಾನದ ಜೀರ್ಣೋದ್ಧಾರವನ್ನು ಮಾಡಿದ್ದಾರೆ ಎಂಬುದನ್ನು ಬನಶಂಕರಿ ದೇವಸ್ಥಾನದ ಪಾರಂಪಾರಿಕ ಅರ್ಚಕರಾದ ಶ್ರೀ ಮಲ್ಲಾರಭಟ್ಟ ಬನಂಭಟ್ಟ ಪೂಜಾರರು ಕ್ಷೇತ್ರಪರಿಚಯ ಪುಸ್ತಕದಲ್ಲಿ ನಮೂದಿಸಿದ್ದಾರೆ. ಉತ್ತರ ಕರ್ನಾಟಕದಿಂದ ಮಹಾರಾಷ್ಟ್ರದಲ್ಲಿ ಸ್ಥಳಾಂತರಿತರಾಗಿದ್ದ ಅನೇಕ ಮನೆತನದವರ ಕುಲದೇವತೆ ಬನಶಂಕರಿಯಾಗಿದ್ದಾಳೆ ಎಂಬುದು ಈ ಉಲ್ಲೇಖನದಿಂದ ತಿಳಿದು ಬರುತ್ತದೆ.

ಕರ್ನಾಟಕದ ಬಾದಾಮಿಯಲ್ಲಿ ಅರಳಿಕಟ್ಟೆ ಹೆಸರಿನ ಗುಡ್ಡದ ಮೇಲಿನ ಸ್ಥಾನದಲ್ಲಿ ಕೊಲ್ಹಾಪುರದ ಮಹಾಲಕ್ಷ್ಮಿಯ ಒಂದು ಸ್ಥಾನವಿದೆ. ಈ ಸ್ಥಳದ ನಿರ್ಮಾಣದ ಬಗ್ಗೆ ಒಂದು ಸಂಸ್ಕೃತ ಶಿಲಾಲೇಖವು ಮಹಾಲಕ್ಷ್ಮಿಯ ಮೂರ್ತಿಯ ಪರಿಸರದಲ್ಲಿ ಉಪಲಬ್ಧವಾಗಿದೆ. ಭಾರತೀಯ ಇತಿಹಾಸದ ಅಭ್ಯಾಸಕ ಜೆ. ಎಫ್. ಫ್ಲೀಟ್ ಇವರು ಈ ಶಿಲಾಲೇಖವನ್ನು ಹುಡುಕಿ ಅದನ್ನು ಇಂಗ್ಲೀಷ ಭಾಷೆಗೆ ಭಾಷಾಂತರಿಸಿದ್ದಾರೆ. (೧೮೮೧) ಕೊಲ್ಹಾಪುರದ ಸಂಶೋಧಕ ಕೆ.ಜಿ. ಕುಂದಣಗಾರರು ತಮ್ಮ ಮಹಾಲಕ್ಷ್ಮಿ ವಿಷಯದ ಪುಸ್ತಕದಲ್ಲಿ ಈ ಶೋಧನೆಯನ್ನು ಉಲ್ಲೇಖಿಸಿದ್ದಾರೆ. ಬಾದಾಮಿಯಿಂದ ಸುಮಾರು ಅರ್ಧ ಮೈಲು ಅಂತರದಲ್ಲಿರುವ ಗುಡ್ಡದ ತುದಿಯಲ್ಲಿ ಈ ಸ್ಥಾನವಿದೆ. ಇಲ್ಲಿ ಒಂದು ತೀರ್ಥಕುಂಡವಿದೆ. ಗುಡ್ಡದ ಮೇಲಿರುವ ಈ ಸ್ಥಳದಲ್ಲಿ ಕಲ್ಲಿನಿಂದ ಕಟ್ಟಲ್ಪಟ್ಟ ಎರಡು ಶಿಖರರಹಿತವಾದ ಕಟ್ಟಡಗಳಿವೆ. ಒಂದನ್ನು ಗುಡ್ಡದ ಗುಹೆಗೆ ಜೋಡಿಸಿ ಕಟ್ಟಲಾಗಿದೆ. ಅದರಲ್ಲಿ ವಿಷ್ಣು ಮತ್ತಿತ್ತರ ಹಲವಾರು ಮೂರ್ತಿಗಳನ್ನು ಸ್ಪಷ್ಟವಾಗಿ ಕೊರೆದಿದ್ದಾರೆ. ಅಲ್ಲಿಯೇ ಮಹಾಲಕ್ಷ್ಮಿಯ ಕುರಿತಾದ ಶಿಲಾಲೇಖವಿದೆ. ಇದರಲ್ಲಿ ಕಾಲದ ಉಲ್ಲೇಖವಿಲ್ಲ. ಮೊದಲಿನ ಎಲ್ಲ ಪಂಕ್ತಿಗಳ ಆಶಯವು ಸ್ಪಷ್ಟವಾಗಿದೆ. "ಕೊಲ್ಹಾಪುರದ ಅಧಿದೇವತೆಯಾಗಿದ್ದ ಮಹಾಲಕ್ಷ್ಮಿಗೆ ವಂದನೆಗಳು. ಹಾರಿತ ಕುಲದಲ್ಲಿ ಜನಿಸಿದ ರವಿದೇವ ತ್ರಿದಂಡಿಯ ಭಕ್ತಿಯಿಂದ ಸಂತುಷ್ಟಳಾಗಿ ಮಹಾಲಕ್ಷ್ಮಿಯು ಕೊಲ್ಹಾಪುರದ ಕ್ಷೇತ್ರದಿಂದ ಇಲ್ಲಿಗೆ ಬಂದಿದ್ದಾಳೆ. ಅವಳ ಮಹಿಮೆ ಅಗಾಧವಾಗಿದೆ. ಅವಳಿಂದ ಇಲ್ಲಿ ಎಲ್ಲವೂ ಮಂಗಲಮಯವಾಗಿದೆ. ಅವಳಿಗೆ ಪುನಃ ವಂದಿಸುವೆ. ಯಾವ ಭಕ್ತನಿಂದ ಪ್ರಸನ್ನಳಾಗಿ ದೇವಿಯು ಕೊಲ್ಹಾಪುರದಿಂದ ಅರಳಿಕಟ್ಟೆಗೆ ಬಂದಿದ್ದಾಳೆ ಅವನ ಹೆಸರು 'ರವಿದೇವ ತ್ರಿದಂಡಿ' ಎಂದಿದೆ. ಈ ಶಿಲಾಲೇಖದ ಕಾಲದ ಉಲ್ಲೇಖನವಿರದಿದ್ದರೂ ಇದ ೧೬ ಅಥವಾ ೧೭ನೆಯ ಶತಕದ್ದಾಗಿರಬೇಕು ಎಂದು ಡಾ.ಫ್ಲೀಟರು ಗುರುತಿಸುತ್ತಾರೆ. ಆದರೆ ಈ ಶಿಲಾಲೇಖದ ಹಸ್ತಾಕ್ಷರ ಗಮನಿಸಿದರೆ ಇದು ೧೫ ನೆಯ ಶತಮಾನದ್ದಾಗಿರಬಹುದು ಎಂಬುದಾಗಿ ಢೇರೆ ವಿವರಿಸುತ್ತಾರೆ. ಅರಳಿಕಟ್ಟೆ ಎಂಬ ಸಣ್ಣ ಊರಿಗೆ ಕೊಲ್ಹಾಪುರದಿಂದ ಮಹಾಲಕ್ಷ್ಮಿಯು ಬಂದಿರಬೇಕಾದರೆ ಅವರ ಸ್ವರೂಪವು ಕೊಲ್ಹಾಪುರದ ದೇವಿಗೆ ಸಮರೂಪವಾಗಿದೆಯೋ ಅಥವಾ ಬೇರೆಯಾಗಿದೆಯೋ ಎಂಬುದನ್ನು ನೋಡಿಯೇ ಗುರುತಿಸಬೇಕು. ಆದರೆ ಮಹಾಲಕ್ಷ್ಮಿಯ ಎಲ್ಲ ಸ್ಥಾನಗಳ ಸ್ವರೂಪ ಮತ್ತು ಸಾಮಾಗ್ರಿಗಳು ಕೊಲ್ಹಾಪುರದಂತೆಯೇ ಇವೆ ಎಂದು ಹೇಳಲು ಸಾಧ್ಯವಿಲ್ಲ. ಈ ಲೇಖನದಲ್ಲಿ ಪಾಡಿಗಾರರು ಇಲ್ಲಿಯ ತೀರ್ಥಕುಂಡ, ಗುಹೆ, ಮೂರ್ತಿರಹಿತ ಎರಡು ಸಣ್ಣ ಮಂದಿರಗಳು ಗುಹೆಯ ಹೊರಗೆ ಕೊರೆದಿರುವ ದೇವತಾ ಶಿಲ್ಪ, ಶಿಲ್ಪದ ಸಾಲಿನಲ್ಲಿ ಕೊರೆದಿರುವ ಮಹಾಲಕ್ಷ್ಮಿ ವಿಷಯದ ಶಿಲಾಲೇಖ ಇವುಗಳ ವರ್ಣನೆಯಿದೆ. ಅರಳಿತೀರ್ಥ ಎಂದರೆ ಪುಷ್ಕರಣಿತೀರ್ಥ ಎಂಬ

ಉಲ್ಲೇಖವೂ ಇದೆ. ಪಾಡಿಗಾರರು ಇಲ್ಲಿಯ ಮೂರ್ತಿಗಳನ್ನು ಎರಡು ರೀತಿಯಾಗಿ ವಿಂಗಡಿಸಿದ್ದಾರೆ. ಭೈರವ, ಸೂರ್ಯ, ಸರಸ್ವತಿ, ಗಣಪತಿ ಇವು ಒಂದು ವರ್ಗ. ಎರಡನೆಯ ವರ್ಗದಲ್ಲಿ ಮಹಾಲಕ್ಷ್ಮಿ, ಬ್ರಹ್ಮ-ವಿಷ್ಣು- ಮಹೇಶ, ಮಹಿಷಮರ್ದಿನಿ, ಅನಂತಶಾಯನಿ ಇತ್ಯಾದಿಗಳ ವಿವರಣೆ ಇದೆ. ಮೊದಲ ವರ್ಗದ ಮೂರ್ತಿಗಳು ೧೪ -೧೫ ನೆಯ ಶತಮಾನದ್ದಾಗಿವೆ. ಎರಡನೆಯ ವರ್ಗದಲ್ಲಿ ಸೂರ್ಯ ಮೂರ್ತಿಯ ಬಾಹುಳ್ಯವಿದೆ. ಇವು ೧೬ನೆಯ ಶತಮಾನದ್ದಾಗಿವೆ ಎಂಬುದು ಪಾಡಿಗಾರರ ಅಭಿಪ್ರಾಯವಾಗಿದೆ. ಫ್ಲೀಟರು ಬೆಳಕಿಗೆ ತಂದ ಕನ್ನಡ ಶಾಸನದ ಪಂಕ್ತಿಗಳು ಹೀಗಿವೆ :

> **"ಪ್ರಭವ ಸಂವತ್ಸರ ಭಾದ್ರ ಶು.**
> **ಸೋಮವಾರ ವರ್ಧಮಾನ ದೇವರು**
> **ಮುಕ್ತರಾದರು." (ಅದೇ ಪು. ೯)**

ಈ ಶಿಲಾಲೇಖದಲ್ಲಿಯ ವರ್ಧಮಾನದೇವ ಹೆಸರಿನಿಂದ ಇವನ ಜೈನ ಸಾಧು ಇರಬೇಕು ಎನಿಸುತ್ತದೆ. ಪಕ್ಕದ ಗುಹೆಯ ಸಮೂಹದಲ್ಲಿ ಒಂದು ಜೈನ ಗುಹೆಯೂ ಇದೆ. ಇದರಿಂದ ಅರಳಿತೀರ್ಥ ಸ್ಥಳದಲ್ಲಿ ಧ್ಯಾನಧಾರಣೆ ಮತ್ತು ತತ್ವಚಿಂತನ ಮಾಡುವ ಸತ್ಪುರುಷರಲ್ಲಿ ಜೈನ ಮುನಿಗಳೂ ಇದ್ದರು. ಇಲ್ಲಿಯ ಪರಿಸರವು ಜೈನ, ವೈಷ್ಣವ, ಶಾಕ್ತ ಮತ್ತು ಶೈವ ಧರ್ಮಗಳ ಮಧುರ ಸಂಗಮ ಸಾಧಿಸುವಂತಿತ್ತು. ಅರಳಿತೀರ್ಥವು ಈ ಭಕ್ತಿಯುಕ್ತ ಸಾಮಂಜಸ್ಯವನ್ನು ರಕ್ಷಿಸಿದೆ ಎಂಬುದು ಇಲ್ಲಿಯ ಶಿಲ್ಪಾವಶೇಷದಿಂದ ತಿಳಿದು ಬರುತ್ತದೆ.

ಅರಳಿತೀರ್ಥದಲ್ಲಿ ಲಕ್ಷ್ಮಿಯ ಮಂದಿರವಿಲ್ಲ. ಅಲ್ಲಿಯ ಮೂರ್ತಿ ಸಾಮಾಗ್ರಿಗಳಲ್ಲಿ ಒಂದು ಮಹಾಲಕ್ಷ್ಮಿಯು ಸಮಭಂಗಿಯಲ್ಲಿದ್ದು, ಅವಳಿಗೆ ಚತುರ್ಭುಜಗಳಿವೆ. ಪಾಡಿಗಾರರು ವರ್ಣಿಸಿದಂತೆ ಅವಳಿಗೆ ಅಭಂಗವಾದ ಮೂರು ಕೈಗಳಲ್ಲಿ ಬೇಲದ ಹಣ್ಣು, ಗದೆ, ಥಾಲ ಮತ್ತು ಮುರಿದ ನಾಲ್ಕನೆಯ ಕೈಯಲ್ಲಿ ಕಲಶ ಇರುವುದರಿಂದ, ಇದು ಕೊಲ್ಹಾಪುರದ ಮಹಾಲಕ್ಷ್ಮಿಯ ಮೂರ್ತಿಯಂತೆ ಇದೆ ಎಂದು ಹೇಳಬಹುದಾಗಿದೆ. ಆದರೆ ಈಗ ಅರಳಿಕಟ್ಟೆ ಎಂಬ ಹೆಸರು ಮರೆಯಾಗಿದೆ. ಅಲ್ಲಿ ಮಹಾಲಕ್ಷ್ಮಿಯ ಪೂಜಾರ್ಚನೆಗಳೂ ಆಗುವುದಿಲ್ಲ. ನೈಮಿತ್ತಿಕ ಯಾತ್ರೆಗಳೂ ನಡೆಯುವುದಿಲ್ಲ. ಗುಡ್ಡದ ಮೇಲಿನ ಮೂರ್ತಿ ನೋಡಲು ಹೋಗುವ ಸೌಲಭ್ಯವೂ ಇಲ್ಲ. ಸಂಶೋಧಕರಿಗೆ ಮಾತ್ರ ಮಹಾಲಕ್ಷ್ಮಿಯ ದರ್ಶನ ಮಾಡುವಾಗ ರವಿದೇವನ ಭಕ್ತಿಯ ಪರಿಮಳದ ಅರಿವು ನಿಶ್ಚಿತವಾಗಿ ಆಗುತ್ತದೆ. ಇಂದು ಅರಳಿಕಟ್ಟೆ ಮಂದಿರವಿಲ್ಲದಿದ್ದರೂ, ತ್ರಿದಂಡಿಯಿಂದ ಪ್ರಸಿದ್ಧಿ ಪಡೆದ ಮಹಾಲಕ್ಷ್ಮಿಯನ್ನು ಇಂದು ಕೇವಲ ಶಿಲಾಲೇಖದಲ್ಲಿ ಕಾಣಬಹುದಾಗಿದೆ ಎಂಬುದಾಗಿ ಢೇರೆ ಅವರು ವಿವರಿಸುತ್ತಾರೆ. ಬಾದಾಮಿಯ ಬನಶಂಕರಿಯ ನಿವಾಸ ಕ್ಷೇತ್ರವು

ದೇವಿಯ ಭಕ್ತನಾದ ರವಿದೇವ ತ್ರಿದಂಡಿಯ ಶ್ರದ್ಧಾಸ್ಥಾನವೂ ಆಗಿದೆ. ಆದ್ದರಿಂದ ಸ್ಕಂದ ಪುರಾಣಾಂತರ್ಗತ ಎಂದು ತಿಳಿಯಲ್ಪಡುವ 'ಶಾಖಂಬರಿಯ ಮಹಾತ್ಮ್ಯಮ್' ಎಂಬ ಸಂಸ್ಕೃತ ಸ್ಥಳಪುರಾಣವು ರವಿದೇವ ತ್ರಿದಂಡಿಯನ್ನು ಮರೆತಿಲ್ಲ. ೧೫-೧೬ ನೆಯ ಶತಕದಲ್ಲಿ ಅಥವಾ ರವಿದೇವ ತ್ರಿದಂಡಿಯ ನೆನಪು ಜನಮನದಲ್ಲಿ ಹೊಚ್ಚ ಹೊಸದಿರುವಾಗಲೇ ಈ ಸ್ಥಳಪುರಾಣವನ್ನು ರಚಿಸಲಾಗಿದೆ. ಈ ಸ್ಥಳಪುರಾಣದಲ್ಲಿ ವಾಸ್ತವತೆ ಮತ್ತು ಸ್ಥಳದ ಪಾವಿತ್ರ್ಯತೆಯನ್ನು ಪ್ರಸ್ಥಾಪಿಸಿದ ಭಕ್ತಿ ಸಂಪನ್ನ ವ್ಯಕ್ತಿಯ ಮಹಿಮೆಯನ್ನು ಹಾಡಿ ಹೊಗಳಿದೆ. ನಮ್ಮ ವರ್ಣ್ಯ ವಿಷಯದ ಬಗ್ಗೆ ಪ್ರಾಚೀನ ಕಾಲದ ನಿಯಮಗಳು ಮತ್ತು ಅದರ ಪಾವಿತ್ರ್ಯತೆ ಇತಿಹಾಸದಾಚೆಯ ಕಾಲದಿಂದ ಹೇಗೆ ಇತ್ತು? ಎನ್ನುವುದನ್ನು ಇಂದಿನ ಕಾಲದ ಭಕ್ತ ಭಾವಿಕರಿಗೆ ಪಟಾಯಿಸುವ ಉದ್ದೇಶದಿಂದ ಸ್ಥಳ ಪುರಾಣಿಕನು ಈ ಪದ್ಧತಿಯನ್ನು ಅವಲಂಬಿಸುತ್ತಾನೆ ಎಂಬುದು ನಮಗೆ ಅರ್ಥವಾದರೆ ಸ್ಥಳ ಪುರಾಣದಲ್ಲಿಯ ಇತಿಹಾಸದ ಉತ್ಖನನ ಮಾಡುವುದು, ಶಬ್ದದಿಂದ ನಿರ್ಮಾಣವಾಗಿರುವ ಗೂಢತೆಯನ್ನು ಭೇದಿಸುವುದು ಮತ್ತು ವಿಸ್ಮೃತಿಗೊಂಡಿರುವ ವಾಸ್ತವತೆಯ ದರ್ಶನ ಮಾಡಿಸುವುದು ಶಕ್ಯವಾಗುತ್ತದೆ. 'ಶಾಖಂಬರಿ ಮಹಾತ್ಮ್ಯಮ್'ದ ಸ್ಥಳ ಪುರಾಣದಲ್ಲಿ ಇದೇ ರೀತಿಯಾಗಿ ತ್ರಿದಂಡಿಯ ಮಹಿಮೆಯು ಪುರಾಣ ಪದ್ಧತಿಯ ಪರಿವೇಶದಿಂದ ಪ್ರಕಟವಾಗಿದೆ. ಹದಿನೈದು ಅಧ್ಯಾಯಗಳ ಈ ಮಹಾತ್ಮೆಯಲ್ಲಿ ಕೊನೆಯ ಎರಡು ಅಧ್ಯಾಯಗಳು ತ್ರಿದಂಡಿಯ ಮಹಿಮೆಯನ್ನು ವರ್ಣಿಸುತ್ತವೆ. ಅರಳಿತೀರ್ಥದ ಶಿಲಾಲೇಖದಿಂದ ಅಲ್ಲಿಯ ಮಹಾಲಕ್ಷ್ಮಿಯ ಶಿಲಾಲೇಖಕ್ಕೆ ಮಹತ್ವಕೊಟ್ಟರೂ, ಅಲ್ಲಿಯ ಸೂರ್ಯ ಮೂರ್ತಿಯ ಬಾಹುಳ್ಯದ ಸಾಮಾಗ್ರಿಯಿಂದ ರವಿದೇವ ತ್ರಿದಂಡಿಯ ದರ್ಶನವಾಗುತ್ತದೆ. ಈತನು ಮಹಾಲಕ್ಷ್ಮಿಯ ಭಕ್ತನಿದ್ದಂತೆ, ಸೂರ್ಯೋಪಾಸಕನೂ ಅಗಿರಬೇಕು. ಆದ್ದರಿಂದಲೇ ಅವನ ಹೆಸರು ರವಿದೇವ ಎಂಬ ಹೆಸರು ಬಂದಿರಬೇಕು. ಸೂರ್ಯ ಪ್ರಧಾನಶಿಲ್ಪ ಸಾಮಾಗ್ರಿಯಿಂದ ಲುಪ್ತವಾಗಿರುವ ಸತ್ಯವು ಬೆಳಕಿಗೆ ಬರುತ್ತದೆ.

ಮಹಾತ್ಮ್ಯೆಯ ೧೪- ೧೫ ಅಧ್ಯಾಯಗಳಲ್ಲಿ ಬಾದಾಮಿಯ ಪರಿಸರದಲ್ಲಿಯ ಈ ಭಕ್ತೋತ್ತಮನ ದರ್ಶನವಾಗುತ್ತದೆ. ಈ ಶಾಕಾಂಬರಿ ಮಹಾತ್ಮ್ಯೆಯ ವಕ್ತಾರನು ಸ್ಕಂದನಾಗಿದ್ದು ಶ್ರೋತ್ರಿಯರು ಗುಹಾರಣ್ಯದ ಋಷಿಮುನಿಗಳಾಗಿದ್ದಾರೆ. ಗುಹಾರಣ್ಯವು ಬಾದಾಮಿಯ ಪರಿಸರದ ಒಂದು ವನವಾಗಿದೆ. 'ತಿಲಕವನ' ವೆಂಬುದು ಇದರ ಪರ್ಯಾಯ ನಾಮ. ಇಂದು ಚೋಳದ ಗುಡ್ಡ ಎಂದು ಗುರುತಿಸಲ್ಪಡುವ ಶಾಕಾಂಬರಿಯು ಈ ಗುಹಾರಣ್ಯದಲ್ಲಿದೆ. ದೇವಿಯು ಈ ಪವಿತ್ರತಮ ವನದಲ್ಲಿ ವಾಸವಾಗಿರುವುದರಿಂದ ಅವಳಿಗೆ 'ಬನಶಂಕರಿ' ಅಥವಾ 'ವನಶಂಕರಿ' ಈ ಪರ್ಯಾಯ ನಾಮ ಲಭ್ಯವಾಗಿದೆ. ಈ ಮಹಾತ್ಮ್ಯೆಯಲ್ಲಿ ಏ ಋಷಿಮುನಿಗಳೆ, ಯಾರ ಸ್ಮರಣೆ

ಮಾತ್ರದಿಂದ ಮುಕ್ತಿಯ ಲಾಭ ದೊರೆಯುತ್ತದೆಯೋ ಅಂತಹ ಪವಿತ್ರ ದೇವಿಯ ಕಥೆಯನ್ನು ಆಲಿಸಿರಿ ಎಂದು ಹೇಳಲಾಗಿದೆ. ಸ್ಕಂದನ ಆಹ್ವಾನದಿಂದ ತ್ರಿದಂಡಿಯ ಪುಢಾಕಾರದಿಂದ ಋಷಿಮುನಿಗಳು ಕೈ ಜೋಡಿಸಿ, 'ಹೇ ಘೋರ ರೂಪಿಣಿ, ಮಹಾದೇವಿ, ನಿನಗೆ ನಮನ, ನೀನು ಬ್ರಹ್ಮ, ವಿಷ್ಣು, ಮಹೇಶ್ವರರ ಶಕ್ತಿಯಾಗಿರುವೆ. ನೀನು ಸತ್ವ, ರಜ, ತಮೋಗುಣಗಳಿಂದ ಭೂಷಿತಳಾಗಿರುವೆ. ತ್ರಿಗುಣಾತ್ಮಕಳಾಗಿರುವಿ. ಮಹಾಲಕ್ಷ್ಮಿ, ಮಹಾಕಾಳಿ, ಮಹಾಸರಸ್ವತಿ ಇವು ನಿನ್ನದೆ ರೂಪಗಳಾಗಿವೆ. ಕರುಣಾಪೂರ್ಣಲೋಚನೆ, ಭಕ್ತಪ್ರೇಮದ ವೃದ್ಧಿಗಾಗಿ ನೀನು ನಿನ್ನ ಉಗ್ರರೂಪವನ್ನು ತ್ಯಜಿಸು. ಅದು ನನ್ನ ಘೋರ ರೂಪವಾಗಿದೆ. ಈ ರೂಪವನ್ನು ತ್ಯಜಿಸಿ ಶಾಂತರೂಪದಿಂದ ಪ್ರಕಟವಾಗು. ನಿನ್ನ ಭಯಂಕರ ರೂಪದಿಂದ ಜಗತ್ತು ಹೆದರುತ್ತದೆ. ನೀನು ಪ್ರಸನ್ನತೆಯಿಂದ ನಮ್ಮ ಕಡೆಗೆ ದೃಷ್ಟಿ ಹರಿಸು. ಬಾಲ ರೂಪದ ಭಕ್ತರಿಗೆ ತಾಯಿಯ ಮಮತೆಯ ಅನುಭವವನ್ನು ನೀಡು' ಎಂದು ಬೇಡಿಕೊಂಡರು. ಈ ಬೇಡಿಕೆಯಿಂ ದೇವಿಯು ಉಗ್ರ ರೂಪ ತ್ಯಜಿಸಿ ಪರಮ ಸಾತ್ವಿಕ, ಅತಿ ಸೌಮ್ಯ ರೂಪಧಾರಣೆ ಮಾಡಿದಳು. ಎಲ್ಲ ವರ್ಗಗಳ ಕುಲದೇವತೆಯಾಗಿರುವ ತಿಲಕವನವಾಸಿನಿ ಶಂಕರಿಯು ಋಷಿ ಮುನಿಗಳಿಗೆ ಅಭಯ ನೀಡಿದಳು. ಸೌಮ್ಯ ರೂಪದಿಂದ ಪ್ರಸನ್ನರಾದ ಎಲ್ಲ ಋಷಿ ಮುನಿಗಳೂ ಹೀಗೆ ಹೇಳಿದರು.

ಪ್ರತಿವರ್ಷ ಮಾಘ ಮಾಸದಲ್ಲಿ ನಿನಗೆ ಆಗಮೋಕ್ತ ಉತ್ಸವ ಆಗುವುದು. ಈ ಉತ್ಸವವನ್ನು ತ್ರದಂಡಿ ಮುನಿಯು ದೊಡ್ಡ ಪ್ರಮಾಣದಲ್ಲಿ ಆಚರಿಸುವನು." ಎಂಬುದಕ್ಕೆ ದೇವಿಯ ಆಶೀರ್ವಾದ ದೊರಕಿತು. ತ್ರಿದಂಡಿ ಮುನಿಯು ಒಳ ಬಗೆಯ ಉಪಚಾರಗಳಿಂದ ಮಂತ್ರಪೂರ್ವಕವಾಗಿ ದೇವಿಯ ಪೂಜೆ ಆಚರಿಸಿದ. ಜಗದಂಬೆಗೆ ನೀನು ಕಾಲ ಕಾಲಕ್ಕೆ ಭಿನ್ನ ಭಿನ್ನ ಹೆಸರಿನಿಂದ ಅವತರಿಸು. ಜಗಕ್ಕೆ ಕಂಟಕವಾಗಿರುವ ರಕ್ಕಸರನ್ನು ಸಂಹಾರ ಮಾಡು. ಮಹಾಲಕ್ಷ್ಮಿಯ ರೂಪದಿಂದ ಕೋಲಾಸುರನನ್ನು ಸಂಹರಿಸು. ಈ ತಿಲಕವನದಲ್ಲಿ ನೀನು ಸದಾ ವಾಸವಾಗಿ ಕಲ್ಯಾಣ ಮಾಡು. ಎಲ್ಲರನ್ನು ಸುಖಿಯಾಗಿಸು ಎಂದು ಪ್ರಾರ್ಥಿಸಿ ತ್ರಿದಂಡಿ ಮುನಿಯು ಆಶ್ರಮಕ್ಕೆ ತೆರಳಿದ.

ದೇವಿಯ ದರಬಾರದಲ್ಲಿಯ ತ್ರಿದಂಡಿಯ ಸ್ಥಾನವು ಎಷ್ಟು ಉಚ್ಚವಾಗಿತ್ತು ಎಂಬುದನ್ನು ಮಹಾತ್ಮ್ಯೆಕಾರನು ಉತ್ಕಟ ಶಬ್ದಗಳಿಂದ ಸ್ಪಷ್ಟಪಡಿಸಿದ್ದಾನೆ. ಅವನ ಮಹಿಮೆಯ ಒಂದು ಸಂದರ್ಭವನ್ನು ಹೀಗೆ ಉಲ್ಲೇಖಿಸಿದ್ದಾನೆ. ಪಾಂಡ್ಯ, ಚೋಲ, ಕಲಿಂಗ, ಪಾಂಚಾಲ, ಮಗಧ ಮೊದಲಾದ ರಾಜಪುರುಷರ ಸ್ವಪ್ನದಲ್ಲಿ ದೇವಿಯು ಪ್ರತ್ಯಕ್ಷಳಾಗಿ ಅವರನ್ನು ತ್ರಿದಂಡಿ ಮುನಿಯ ಕಡೆಗೆ ಕಳುಹಿಸಿದಳು. ಅವರೆಲ್ಲರೂ ತ್ರಿದಂಡಿಯಿಂದ ಗುರುಪದೇಶ ಪಡೆದು ಪವಿತ್ರರಾದರು.

ತ್ರಿದಂಡಿಯು ತನ್ನ ಆಧ್ಯಾತ್ಮಿಕ ಬಲದಿಂದ ಭಕ್ತರನ್ನಷ್ಟೇ ಅಲ್ಲ, ರಾಜಪುರುಷರನ್ನೂ ಪ್ರಭಾವಿತಗೊಳಿಸಿದ. ತ್ರಿದಂಡಿಯು ಒಬ್ಬ ಸನ್ಯಾಸಿಯಾಗಿರದೇ ಐತಿಹಾಸಿಕ ಪುರುಷನಾಗಿದ್ದಾನೆ. ರವಿದೇವ ತ್ರಿದಂಡಿ ಹೆಸರಿನ ಒಬ್ಬ ವಿಶಿಷ್ಟ ಸತ್ಪುರುಷನಾಗಿದ್ದಾನೆ. ಅವನು ಉಗ್ರರೂಪಿಣಿಯಾದ ಬನಶಂಕರಿಯನ್ನು ಸಾತ್ವಿಕೀಕರಣಗೊಳಿಸಿದ್ದಾನೆ. ದೇವಿಯ ತಾಮಸಿ ರೂಪದ ಉಪಾಸನೆಯನ್ನು ಸೌಮ್ಯರೂಪಗೊಳಿಸಿದ. ದೇವಿಯ ಉತ್ಸವಗಳಲ್ಲಿ ಸ್ವತಃ ನೇತೃತ್ವ ವಹಿಸಿ ಉತ್ಸವ ಮಹೋತ್ಸವಗಳನ್ನು ಪ್ರಾರಂಭಿಸಿದ. ರಾಜಪುರುಷರಿಗೆ ಆದರ್ಶ ಕ್ಷತ್ರಿಯ ಧರ್ಮಪರಿಪಾಲನೆಯ ಉಪದೇಶ ಮಾಡಿದ. ಈತನಿಗೆ ಗ್ರಂಥಕಾರನು ತ್ರಿದಂಡಿ ಎಂಬ ವಿಶೇಷಣವನ್ನು ಉದ್ದೇಶಪೂರ್ವಕವಾಗಿ ಉಪಯೋಗಿಸಿದ್ದಾನೆ. ಐತಿಹಾಸಿಕತೆಯನ್ನು ಅಳಿಸಿ ಅವನಿಗೆ ಪೌರಾಣಿಕತೆಯ ಹೊದಿಕೆ ಹೊದಿಸುವ ಪ್ರಯತ್ನ ಮಾಡಿ ವಿಫಲವಾಗಿದ್ದಾನೆ. ಹೊದಿಕೆಯು ಪಾರದರ್ಶಕವಾಗಿದೆ. ಪುರಾಣ ಗ್ರಂಥಗಳಲ್ಲಿ ಅನೇಕಾನೇಕ ಋಷಿ ಮುನಿಗಳನ್ನು ಹೆಸರಿರುವಾಗ ಕೇವಲ ತ್ರಿದಂಡಿ ಎಂಬ ಹೆಸರನ್ನೇ ಉಪಯೋಗಿಸಿ, ಅವನ ಮಹಿಮೆಯನ್ನು ಹೊಗಳುವ ಸ್ಥಳ ಪುರಾಣಿಕನ ಪ್ರಯತ್ನ ಯಶಸ್ವಿಯಾಗಲಿಲ್ಲ.

ಸ್ಥಳ ಪುರಾಣಿಕನಿಗೆ ಬಾದಾಮಿಯ ಪರಿಸರ, ಬನಶಂಕರಿಯ ಮಂದಿರ, ಅಲ್ಲಿಯ ಮೂರ್ತಿ, ತೀರ್ಥ, ಎಲ್ಲದರ ಪರಿಚಯ ಚೆನ್ನಾಗಿದೆ. ಅಲ್ಲಿಯ ಗುಹೆಯಲ್ಲಿಯ ಮೂರ್ತಿ, ಅಗಸ್ತ್ಯ ತೀರ್ಥ, ಭೂತನಾಥ ಮಂದಿರಗಳ ಉಲ್ಲೇಖನವನ್ನು ಮಾಡುತ್ತಾನೆ. ಮಹಾಕೂಟೇಶ್ವರನ ಪ್ರಾಕಾರದಲ್ಲಿರುವ ಲಜ್ಜಾಗೌರಿಯ ಅಸ್ತಿತ್ವವನ್ನೂ ಭಕ್ತರಿಗೆ ತಿಳಿಸುತ್ತಾನೆ. ಬಾದಾಮಿಯ ಚಾಲುಕ್ಯರು ನಿರ್ಮಾಣ ಮಾಡಿದ ಈ ಪಾವಿತ್ರ್ಯ ವ್ಯೂಹವನ್ನು ತಿಳಿದಿರುವ ಮಹಾತ್ಮ್ಯಕಾರನು ಇಲ್ಲಿಯ ಇತಿಹಾಸಕ್ಕೆ ಪುರಾಣ ರೂಪ ಕೊಟ್ಟು ಇತಿಹಾಸದ ಪುರಾಣೀಕರಣ ಮಾಡಿದ್ದಾನೆ.

ರವಿದೇವಿ ತ್ರಿದಂಡಿಯು ಕೊಲ್ಹಾಪುರದ ದೇವಿಯ ಭಕ್ತನಾಗಿದ್ದಂತೆ ಬನಶಂಕರಿಯ ಭಕ್ತನೂ ಆಗಿದ್ದ. ಅವನು ವಾಸವಾಗಿದ್ದ ಬನಶಂಕರಿ ಕ್ಷೇತ್ರವು ಮಹಾಲಕ್ಷ್ಮಿಯದೇ ಒಂದು ಕ್ಷೇತ್ರವಾಗಿದ್ದರಿಂದ ಎರಡೂ ಕ್ಷೇತ್ರಗಳ ದೇವಿಯರಲ್ಲಿ ಅವನಿಗೆ ಕಿಂಚಿತ್ತೂ ವ್ಯತ್ಯಾಸವೆನಿಸಲಿಲ್ಲ. ಕೊಲ್ಹಾಪುರದ ಮಹಾಲಕ್ಷ್ಮಿಯ ದೇವಸ್ಥಾನದ ಪ್ರಾಕಾರದಲ್ಲಿ ಇಂದಿಗೂ ಶಾಕಂಭರಿಯ ಸ್ಥಾನವಿದೆ. ತ್ರಿದಂಡಿಯು ಬನಶಂಕರಿಗೆ ಜಗನ್ಮಾತಾ ಎಂದು ಆಹ್ವಾನಿಸಿದ್ದಾನೆ. ಹಾಗೆಯೇ 'ಪದ್ಮಪ್ರಿಯಾ,'

'ಮಹಾಕಾಲಿ, ಮಹಾಸರಸ್ವತಿ, ಮಹಾಲಕ್ಷ್ಮಿ ಈ ಮೂರು ರೂಪದಲ್ಲಿರುವ ತ್ರಿಗುಣಗಳ ಅವಿಷ್ಕಾರ ಮಾಡುವ ತ್ರಿಗುಣಾತ್ಮಕ ಬನಶಂಕರಿಯು ಇಲ್ಲಿಯ ಸ್ತವನದ ವಿಷಯವಾಗಿದ್ದಾಳೆ. ಕಾಶಿ ಕ್ಷೇತ್ರದಿಂದ ಹೊರಬಿದ್ದ ಅಗಸ್ತ್ಯ ಋಷಿಯು ವಿಂಧ್ಯಕ್ಕೆ ನಮಿಸಿ ದಕ್ಷಿಣ ಕಾಶಿಯೆಂದು ಪ್ರಸಿದ್ಧಿ

ಪಡೆದ ಕರವೀರ ಕ್ಷೇತ್ರಕ್ಕೆ ತನ್ನ ಲೋಪಾಮುದ್ರೆ ಸಹಿತ ಬಂದು ನೆಲೆಸಿದಾಗ ಮಹಾಲಕ್ಷ್ಮಿಯು ಅವನಿಗೆ ಕೇವಲ ಆರು ತಿಂಗಳು ಅಲ್ಲಿರಲು ಅನುಜ್ಞೆ ಮಾಡಿದಳು. ನಂತರ ಬನಶಂಕರಿ ಕ್ಷೇತ್ರಕ್ಕೆ ಹೋಗಿ ಉಪಾಸನೆ ಮಾಡುವಂತೆ ಆದೇಶಿಸಿದಳು. ಈ ಆದೇಶದಲ್ಲಿ ಮಹಾಲಕ್ಷ್ಮಿ ಮತ್ತು ಬನಶಂಕರಿಯರ ಏಕಾತ್ಮತೆಯ ಸೂಚನೆಯಿದೆ. ಅವಳ ಆದೇಶಕ್ಕನು ಗುಣವಾಗಿ ಅಗಸ್ತ್ಯನು ಬನಶಂಕರಿಗೆ ಬಂದು ಅಗಸ್ತ್ಯ ತೀರ್ಥ ನಿರ್ಮಿಸಿದನೆಂದು ಶಾಕಾಂಬರಿ ಮಹಾತ್ಮೆಯಲ್ಲಿ ಹೇಳಲಾಗಿದೆ. ಸರ್ವ ಅಮಂಗಲವನ್ನು ದೂರ ಮಾಡುವ ದೇವಿಗೆ ಪತ್ನಿಸಮೇತ ನಮಸ್ಕರಿಸಿ ಋಷಿಯು ಹೀಗೆ ಹೇಳಿದ. "ಹೇ ಮಹಾಕಾಲಿ, ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿ ನೀನು 'ಅ' ಕಾರದಿಂದ 'ಕ್ಷ' ಕಾರದವರೆಗೆ ಇರುವ ೫೨ ಮಾತೃಕೆಗಳ ಸಾಕ್ಷಾತ್ ರೂಪವಾಗಿರುವಿ. ನಿನಗೆ ವಂದಿಸುವೆ ನೀನು ನನ್ನನ್ನು ರಕ್ಷಿಸು." ಹೀಗೆ ಬಾದಾಮಿಯ ಪರಿಸರ ಧಾರ್ಮಿಕ ಪಾವಿತ್ರ್ಯದ ವಿವರಗಳು ಮಹಾತ್ಮೆಯಲ್ಲಿ ಅಭಿವ್ಯಕ್ತವಾಗಿವೆ.

ಸ್ಥಳ ಪುರಾಣಕಾರರು ಹೇಳುತ್ತಾರೆ, ಜಗತ್ತಿನಲ್ಲಿ ಎರಡು ಮಹಾಕ್ಷೇತ್ರಗಳು ಪ್ರಖ್ಯಾತವಾಗಿವೆ. ಒಂದು ಉತ್ತರದ ಭಾಗೀರಥಿ ತಟದಲ್ಲಿರುವ ಕಾಶಿ, ಎರಡನೆಯದು ದಕ್ಷಿಣದ ಪಂಚಗಂಗಾ ತಟದಲ್ಲಿರುವ ಕರವೀರಪುರ. ಶಿವನು ಅಗಸ್ತ್ಯನಿಗೆ " ಹೇ ಮುನಿವರಾ ಕರವೀರ ಹೆಸರಿನ ಕ್ಷೇತ್ರವು ಮಹಾರಾಷ್ಟ್ರದಲ್ಲಿದೆ. ಅದರ ಮಹಿಮೆಯು ಕಾಶಿಗಿಂತ ಒಂದು ತೂಕ ಹೆಚ್ಚಾಗಿದೆ ಎಂದು ಜನ ಹೇಳುತ್ತಾರೆ. ಆ ಕ್ಷೇತ್ರಕ್ಕೆ 'ದಕ್ಷಿಣಕಾಶಿ' ಎಂಬ ಪ್ರತಿಷ್ಠೆಯಿದೆ. ಆದ್ದರಿಂದ ನೀನು ಅಲ್ಲಿಗೆ ಹೋಗಿ ನೆಲೆಸು. ನಿನ್ನ ಮನಸ್ಸಿಗೆ ಶಾಂತಿ ಲಭಿಸುವುದು" ಎಂದು ಹೇಳುವನು ಇಲ್ಲಿ ಕರವೀರ ಕ್ಷೇತ್ರವು ಎಲ್ಲಿದೆ ಎಂದು ಅಗಸ್ತ್ಯನಿಗೆ ವಿವರಿಸುವಾಗ ಶಿವನಿಂದ ಮಹಾರಾಷ್ಟ್ರದ ನಿರ್ದೇಶವು ಬಹುವಚನದಲ್ಲಿ ಮಾಡಲಾಗಿದೆ. "ಶಾಕಾಂಬರಿ ಮಹಾತ್ಮೆ" ಯು ಬನಶಂಕರಿ (ಬಾದಾಮಿ) ಕ್ಷೇತ್ರದ ವಿಷಯವಾಗಿರುವುದರಿಂದ ಮಹಾತ್ಮೆಕಾರನು ಬಹುವಚನವನ್ನು ಪ್ರಯೋಗಿಸಿದ್ದಾನೆ. ಬಾದಾಮಿಯ ಚಾಳುಕ್ಯ ಸಮ್ರಾಟನಾದ ಪುಲಕೇಶಿಯು ಮೂರು ಮಹಾರಾಷ್ಟ್ರಗಳ ಸ್ವಾಮಿಯಾಗಿದ್ದನೆಂಬ ಐತಿಹಾಸಿಕ ಸತ್ಯವು ಗ್ರಂಥಕರ್ತನಿಗೆ ತಿಳಿದಿದ್ದರಿಂದ ಅವನು 'ಮಹಾರಾಷ್ಟ್ರೇ' ಎಂಬ ಬಹುವಚನದ ಪ್ರಯೋಗ ಮಾಡಿದ್ದಾನೆ ಎಂಬುದು ಗಮನಾರ್ಹ ವಿಷಯವಾಗಿದೆ. ನಂತರ ಅಗಸ್ತ್ಯ ಋಷಿಯು ಪತ್ನಿ ಸಮೇತ ಅರವತ್ನಾಲ್ಕು ಉಪಚಾರಗಳಿಂದ ಜಗದಂಬೆಯ ಪೂಜೆ ಮಾಡಿದರು. ತ್ರಿವಾರದವರೆಗೆ ಶ್ರೀ ಸೂಕ್ತದ ಜಪ ಮಾಡಿದರು. ಮಹಾಕಾಲಿ, ಮಹಾಸರಸ್ವತಿಯರ ಪೂಜೆಯೂ ಆಯಿತು. ಅಗಸ್ತ್ಯರು ಮಹಾಲಕ್ಷ್ಮಿಯ ಸ್ತೋತ್ರ ಹಾಡಿದರು. ಈ ಮಧುರವಾದ, ಆಶಯ ಸಂಪನ್ನವಾದ ಸ್ತೋತ್ರವನ್ನು ರಚಿಸಿರುವುದು ಗ್ರಂಥಕಾರನಿಗೆ ಲಕ್ಷ್ಮಿಯ ಬಗೆಗಿದ್ದ ಶ್ರದ್ಧೆಯ ವಿಶಿಷ್ಟತೆ ಮತ್ತು ಅವಳ ಬಗ್ಗೆಯೂ ಆವಿಷ್ಕಾರ ಮೂಡಿಸುವಂತಾಗಿದೆ. ಅವನು

ಕೊಲ್ಹಾಪುರದ ಮಹಾಲಕ್ಷ್ಮಿಗೆ 'ವಿಷ್ಣುಪ್ರಿಯಾ', 'ಹರಿಪ್ರಿಯಾ' ಎಂದು ಭಾವಿಸಿಯೇ ಅವಳ ಸ್ತುತಿಯನ್ನು ಅಗಸ್ತ್ಯನ ಮುಖಾಂತರ ಹಾಡಿದ್ದಾನೆ. ಹಿಂದೆ ತ್ರಿದಂಡಿಯಿಂದಲೂ 'ಪದ್ಮಾ,' 'ಪದ್ಮಾಪ್ರಿಯಾ' ಈ ಲಕ್ಷ್ಮಿದ್ಯೋತಕ ವಿಶೇಷಣವನ್ನು ಶಾಕಂಭರಿ ಮಹಾತ್ಮ್ಯಕಾರನು ಬಳಸಿದ್ದಾನೆ. ಇದರ ಸ್ಪಷ್ಟಾರ್ಥವೆಂದರೆ ಬಾದಾಮಿಯ ಸ್ಥಳಪುರಾಣಕಾರನು ಕೊಲ್ಹಾಪುರದ ಮಹಾಲಕ್ಷ್ಮಿಯನ್ನೇ 'ವಿಷ್ಣುಪ್ರಿಯಾ' ಲಕ್ಷ್ಮಿ ಎಂದು ತಿಳಿಸಿದ್ದಾನೆ. ಇದು ಅಗಸ್ತ್ಯ ಋಷಿಯ ಮುಖಾಂತರ ಹಾಡಿದ ಸ್ತೋತ್ರದಿಂದ ಅನುಭವಕ್ಕೆ ಬರುವುದು.

"ಮಾತರ್ನಮಾಮಿ ಕಮಲೆ ಕಮಲಯತಾಕ್ಷಿ
ಹೇ ವಿಷ್ಣು ಹೃತ್ಕಮಲವಾಸಿನಿ ವಿಸ್ವಮಾತಃ" (ಅದೇ ಪು. ೩೩)

ಹೇ ಮಾತೆ, ನೀನು ಕಮಲೆಯಾಗಿರುವಿ. ಅರಳಿದ ಕಮಲದಂತೆ ನಿನ್ನ ನೇತ್ರಗಳು ವಿಶಾಲವಾಗಿವೆ. ಹೇ ವಿಶ್ವಮಾತೆಯೆ, ನೀನು ವಿಷ್ಣುವಿನ ಹೃದಯ ಕಮಲದಲ್ಲಿ ವಾಸವಾಗಿರುವಿ. ನೀನು ಕ್ಷೀರಸಾಗರದಲ್ಲಿ ಜನ್ಮ ಪಡೆದಿರುವಿ. ನಿನಗೆ ಶರಣಾಗಿರುವ ಎಲ್ಲ ಭಕ್ತರಿಗೆ ನೀನು ಯಾವಾಗಲೂ ಪ್ರಸನ್ನಳಾಗಿರು. ಚಂದ್ರನಲ್ಲಿರುವ ಜ್ಯೋತ್ಸ್ನಾ, ಸೂರ್ಯನಲ್ಲಿರುವ ಪ್ರಕಾಶದ ಪ್ರಭೆ, ನೀನಾಗಿರುವಿ. ಸರ್ವ ವಿಶ್ವವನ್ನು ರಕ್ಷಿಸುವ ವಿಶ್ವಂಭರಿಯೂ ನೀನೇ ಆಗಿರುವಿ.

ಲಕ್ಷ್ಮಿಯು ಲೋಕಕಲ್ಯಾಣಕ್ಕಾಗಿ ಏನೇನು ನಿರ್ಮಾಣ ಮಾಡಿದ್ದಾಳೆ ಅದೆಲ್ಲವೂ ಮಂಗಳಮಯವಾಗಿದೆ. ಅವಳ ನಿಗ್ರಹದಿಂದ ಯಾವುದು ಸಂಹಾರವಾಗಿದೆ ಅದೆಲ್ಲವೂ ಅಶುಭವಾಗಿದೆ. ಎಂದು ಅಗಸ್ತ್ಯರು ಅವಳಿಗೆ ವಂದಿಸಿದರು. ನನ್ನ ಮನದಿಚ್ಛೆ ಪೂರ್ಣಗೊಂಡಿದೆ. ಸದಾ ನಿನ್ನ ಪಾದಕಮಲಗಳು ನನ್ನ ಹತ್ತಿರವಿರಲಿ. ಮತ್ತೆ ಯಾವ ವರದಾನದ ಅಪೇಕ್ಷೆಯೂ ಇಲ್ಲ ಎಂದು ದೇವಿಯಲ್ಲಿ ಪ್ರಾರ್ಥಿಸಿದರು. ದೇವಿಯ ಅಶೀರ್ವಾದ ಪಡೆದು ಅಗಸ್ತ್ಯರು ಬನಶಂಕರಿ ಕ್ಷೇತ್ರಕ್ಕೆ ಬಂದು ಅಲ್ಲಿ ಕರವೀರಪುರದಲ್ಲಿದ್ದ ಮಹಾಲಕ್ಷ್ಮಿ ಮತ್ತು ಬಾದಾಮಿಯ ಬನಶಂಕರಿಯ ಇವರಲ್ಲಿಯ ಏಕರೂಪತೆಯನ್ನು ಹೇಗೆ ಅನುಭವಿಸಿದರು ಎಂಬುದನ್ನು ಬನಶಂಕರಿ ಮಹಾತ್ಮ್ಯಕಾರನು ವರ್ಣಿಸಿದ್ದನ್ನು ಇಲ್ಲಿ ನೋಡಬಹುದಾಗಿದೆ. ಈ ಎಲ್ಲ ವಿವರಗಳಿಂದ ಕೊಲ್ಹಾಪುರದ ಮಹಾಲಕ್ಷ್ಮಿ ಮತ್ತು ಬಾದಾಮಿಯ ಬನಶಂಕರಿಯರಲ್ಲಿ ಏಕಾನ್ಮತೆಯನ್ನು ಕಾಣಬಹುದಾಗಿದೆ.

ಮಹಾಲಕ್ಷ್ಮಿ ಮತ್ತು ಜೈನರ ಪದ್ಮಾವತಿ :

ಕೊಲ್ಹಾಪುರದ ಲಕ್ಷ್ಮಿಯು ವೇದ ಧರ್ಮೀಯರ ದೇವತೆಯಾಗಿರದೆ ಜೈನ ಧರ್ಮೀಯರ ಪದ್ಮಾವತಿ ಎಂಬ ದೇವತೆಯಾಗಿದ್ದಾಳೆ ಎಂಬುದು ಜೈನ ಧರ್ಮೀಯರ ವಾದವಾಗಿದೆ. ಈ

ಆಕ್ಷೇಪಕ್ಕೆ ಸಮರ್ಥನೀಯವಾಗುವಂತೆ ಮಹಾಲಕ್ಷ್ಮಿ ದೇವಾಲಯದಲ್ಲಿರುವ ನೇಮೀನಾಥನ ಅಸ್ತಿತ್ವದ ಸಮಾಚಾರ ಮುಂದೆ ಮಾಡಿ ಹೀಗೆ ಹೇಳಲಾಗುತ್ತದೆ. ನೇಮೀನಾಥನ ದೇವಾಲಯದಂತೆ ಇಲ್ಲಿ ಪದ್ಮಾವತಿಯ ಮೂರ್ತಿ ಮತ್ತು ಮಂದಿರವೂ ಇರುವ ಶಕ್ಯತೆ ಇದೆ. ಈ ಅಕ್ಷೇಪವನ್ನು ಯಾರು ಲೇಖನ್ವಿತಗೊಳಿಸಿದ್ದಾರೋ ತಿಳಿಯದು. ಆದರೆ ಕುಂದಣಗಾರರು ತಮ್ಮ ಪುಸ್ತಕದಲ್ಲಿ ಅವತರಿಣಿಕೆ ಚಿಹ್ನದಲ್ಲಿ ಈ ಆಕ್ಷೇಪವನ್ನು ನಮೂದಿಸಿದ್ದಾರೆ (ಪು.೨೧) ಎಂದು ಖರೆಯವರು ಉಲ್ಲೇಖಿಸಿದ್ದಾರೆ. ಇದಕ್ಕೆ ಉತ್ತರವಾಗಿ ಖರೆಯವರು ಹೀಗೆ ತಿಳಿಸುತ್ತಾರೆ. ಜೈನರ ಆಗಮ ಗ್ರಂಥದಲ್ಲಿ ಯಕ್ಷ, ವಿದ್ಯಾ ಮತ್ತು ಶಾಸನ ಹೀಗೆ ಯಾವ ಮೂರು ಪ್ರಕಾರದ ಸ್ತ್ರೀ ದೇವತೆಗಳನ್ನು ಹೆಸರಿಸಿದ್ದಾರೊ ಈ ಮೂರೂ ಪ್ರಕಾರದಲ್ಲಿ ಮಹಾಲಕ್ಷ್ಮಿ ಹೆಸರಿನ ದೇವತೆ ಇಲ್ಲ. ಹಾಗೆಯೇ ಪದ್ಮಾವತಿ ಎಂದರೆ ಮಹಾಲಕ್ಷ್ಮಿ ಇರುವಳೋ ಹೇಗೆ ಎನ್ನುವುದಕ್ಕೆ ಖರೆ ಅವರು ಹೀಗೆ ಉತ್ತರಿಸುತ್ತಾರೆ. ಜೈನ ಧರ್ಮದ ದೇವತಾ ಕಾಂಡದಲ್ಲಿ ದೇವಿಯರಿಗೆ ತೀರ್ಥಂಕರರಷ್ಟು ಮಹತ್ವವಿಲ್ಲ ಎಂಬುದು ಸ್ಪಷ್ಟವಾಗಿದೆ. ಅವರಿಗೆ ಸ್ವತಂತ್ರ ಅಸ್ತಿತ್ವ ಇದೆಯೋ, ಇಲ್ಲವೋ ಸ್ಪಷ್ಟವಾಗಿ ತಿಳಿಯದಿದ್ದರೂ ಪಾರ್ಶ್ವನಾಥನೆಂಬ ೨೩ ನೆಯ ತೀರ್ಥಂಕರನ ಶಾಸನದೇವತೆ ಎಂದು ಒಬ್ಬ ಪದ್ಮಾವತಿ ದೇವತೆಯ ಹೆಸರು ಇದೆ. ವಿದ್ಯಾ ದೇವತೆಗಳಲ್ಲಿ ಇವಳ ಹೆಸರಿಲ್ಲ. ಇವಳ ಸ್ವರೂಪದ ಬಗೆಗೆ ಜೈನ ಗ್ರಂಥದಲ್ಲಿ ಉಲ್ಲೇಖವಿದ್ದು, ಅದರಲ್ಲಿಯ ಕೆಲವು ವರ್ಣನೆಗಳನ್ನು ಖರೆಯವರು ಹೆಸರಿಸಿದ್ದಾರೆ. ಅವು ಈ ರೀತಿಯಾಗಿವೆ.

> **"ಪದ್ಮಾವತಿ ದೇವಿ ಕನಕ ವರ್ಣಾ ಕುಕ್ಕುಟ ವಾಹನಾಂ ।**
> **ಚತುರ್ಭುಜಾಂ ಪದ್ಮಾಪಾಶಾನ್ವಿತ ದಕ್ಷಿಣ ಕರಾಂ ।**
> **ಫಲಾಂಕುಶಾಧಿಷ್ಠಿತ ವಾಮಕರಾ ಚೇತಿ ।"**
> ಹೇಮಚಂದ್ರನ ಪಾರ್ಶ್ವನಾಥ ಚರಿತ್ರೆಯಲ್ಲಿಯ ವರ್ಣನೆ,

> **"ತಥಾ ಪದ್ಮಾವತಿ ದೇವಿ ಕುಕ್ಕಟೋರಗವಾಹನಾ ।**
> **ಸ್ವರ್ಣವರ್ಣಾ ಪದ್ಮನಾಶಿಭೃದ್ದಕ್ಷಿಣ ಕರದ್ವಯಾ ।**
> **ಫಲಾಂಕುಶಾಧಾರಾಭ್ಯಾಂ ಚ ವಾಮದೋರ್ಭ್ಯಾ ವಿರಾಜಿತಾ ।"**
> ಪ್ರತಿಷ್ಠಾ ಸಾರ ಸಂಗ್ರಹದಲ್ಲಿಯ ವರ್ಣನೆ.

> **"ದೇವಿ ಪದ್ಮಾವತಿ ನಾಮ್ನಾ ರಕ್ತವರ್ಣಾ ಚತುರ್ಭುಜಾ ।**
> **ಪದ್ಮಾಸನಾಂಕುಶಂ ಧತ್ತೆ ಅಕ್ಷ ಸೂತ್ರಂ ಚ ಪಂಕಜಮ್**
> **ಅಥವಾ ಷಡ್ಭುಜಾ ದೇವಿ ಚತುರ್ವಿಂಶತಿ ಸದ್ಭುಜಾ ।**

ಪಾಶಾಸಿ ಕುಂತವಾಲೇಂದು ಗದಾ ಮುಶಲ ಸಂಯುತಮ್ ।

ಭುಜಾಷ್ಟಕ ಸಮಾಖ್ಯಾತಂ ಚತುರ್ವಿಂಶತಿರುಚ್ಯತೆ ।" (ಅದೇ ಪು. ೨೧)

ಇವುಗಳನ್ನು ಬಂದಿರುವ ಪದ್ಮಾವತಿಯ ವರ್ಣನೆಯ ಪ್ರಕಾರ ಅವಳ ವರ್ಣ ಹಳದಿ, ಅವಳ ವಾಹನ ಹಾವು- ಕೋಳಿ, ಅಥವಾ ಕೇವಲ ಕೋಳಿಯಾಗಿದೆ. ಅವಳಿಗೆ ನಾಲ್ಕು, ಆರು, ಎಂಟು, ಇಪ್ಪತ್ನಾಲ್ಕು ಕೈಗಳು. ಎಡಗೈಯಲ್ಲಿ ಬೇಲದ ಹಣ್ಣು, ಅಂಕುಶ ಇತ್ಯಾದಿಗಳಿವೆ. ಬಲಗೈಯಲ್ಲಿ ಕಮಲ, ಪಾಶ ಇತ್ಯಾದಿಗಳಿವೆ. ಕೈಯಲ್ಲಿಯ ವಸ್ತುಗಳಲ್ಲಿ ಬದಲು ಇರುವ ಶಕ್ಯತೆ ಇದೆ. ಆದರೆ ದೇವತೆಯ ವಾಹನದಲ್ಲಿ ಬದಲಾಗುವುದು ಅಶಕ್ಯ. ಮಹಾಲಕ್ಷ್ಮಿಯ ಸ್ವರೂಪ ನೋಡಿದರೆ ಅವಳ ಬಲಗೈಯಲ್ಲಿ ಮಾದಲ ಹಣ್ಣು, ಮತ್ತು ಗದಾ ಇದ್ದು ಎಡಗೈಯಲ್ಲಿ ಢಾಲು ಮತ್ತು ಪಾನಪಾತ್ರೆಗಳಿವೆ. ಅವಳ ಹಿಂದೆ ಸಿಂಹವಿದೆ.

ಮೇಲೆ ವರ್ಣಿಸಿದ ಪದ್ಮಾವತಿಯ ವರ್ಣನೆಯಲ್ಲಿ ಆಯುಧ ಮತ್ತು ವಾಹನ ಎರಡೂ ವಿಷಯಗಳಲ್ಲಿ ಸಂಪೂರ್ಣ ವ್ಯತ್ಯಾಸವಿದೆ. ಮಹಾಲಕ್ಷ್ಮಿಯೇ ಜೈನರ ಪದ್ಮಾವತಿಯಾಗಿದ್ದಳು ಎಂದು ಹೇಳುವುದರಲ್ಲಿ ಅರ್ಥವಿಲ್ಲ, ಎಂಬ ವಿವರಗಳನ್ನು ಕೊಟ್ಟು ಖರೆಯವರು, ಜೈನರ ಪದ್ಮಾವತಿ ಮತ್ತು ಮಹಾಲಕ್ಷ್ಮಿಯರಲ್ಲಿಯ ವ್ಯತ್ಯಾಸಗಳನ್ನು ಎತ್ತಿ ತೋರಿಸಿದ್ದಾರೆ.

ಕುಂದಣಗಾರರು ಜಿನರ ಪರವಾಗಿ ಹೇಳಿದ ಇನ್ನೊಂದು ನಮೂದು ಎಂದರೆ, ಪಾರ್ಶ್ವನಾಥನ ಲಾಂಛನ. ಕುಂದಣ ಗಾರರ ಪ್ರಕಾರ ಪಾರ್ಶ್ವನಾಥನ ಲಾಂಛನ ಹಾವು ಆಗಿದೆ. ಅದು ಮೂರ್ತಿಯ ತಲೆಯ ಮೇಲಿರುವುದರಿಂದ ಮೂರ್ತಿಯು ಯಕ್ಷಿಯದಾಗಿದೆ (ಪು.೪೩) ಕುಂದಣಗಾರರ ಹೇಳಿಕೆಗೆ ಖರೆಯವರು ಉತ್ತರಿಸುತ್ತಾರೆ. ಹಾವು ಕೇವಲ ಜೈನ ತೀರ್ಥಂಕರ ಪಾರ್ಶ್ವನಾಥನ ತಲೆಯ ಮೇಲೆಯೇ ಇರಬೇಕೆಂಬ ನಿಯಮವಿಲ್ಲ. ವೈದಿಕ ಧರ್ಮದ ದೇವತೆಗಳ ತಲೆಯ ಮೇಲೂ ಹಾವಿನ ಲಾಂಛನವಿದೆ ಉದಾ :- ವಿಷ್ಣು, ಶೇಷಶಾಯಿ, ಶಿವ, ಇತ್ಯಾದಿ ಹಾವು ಇದು ಸೌಭಾಗ್ಯದರ್ಶಕ ಎಂಬ ಶ್ರದ್ಧೆಯಿದೆ. ಕೇವಲ ತಲೆಯ ಮೇಲೆ ಹಾವು ಇದೆಯೆಂಬ ಆಕ್ಷೇಪಕ್ಕೆ ಮಹತ್ವ ಬರುವುದಿಲ್ಲ. ಮಹಾಲಕ್ಷ್ಮಿಯ ಹಿಂದೆ ಇರುವ ಹಾವು ತಲೆಯ ಮೇಲಿರದೆ ಅದು ಪ್ರಭಾವಳಿಯದಾಗಿದೆ, ಎಂಬುದನ್ನು ಗಮನಿಸಿದರೆ ಹಾವು ಮತ್ತು ಮೂರ್ತಿ ಇವುಗಳದು ಏನೂ ಸಂಬಂಧವಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಇದೇ ನಮೂದಿನಲ್ಲಿ ಮಹಾಲಕ್ಷ್ಮಿಯ ಕೈಯಲ್ಲಿರುವ ಪಾನಪಾತ್ರೆಯೂ ಪಾರ್ಶ್ವನಾಥನ ಯಕ್ಷಿಯ ಮಹತ್ವದ ಗುರುತಾಗಿದೆ. ಆದುದರಿಂದ ಮಹಾಲಕ್ಷ್ಮಿಯು ಪಾರ್ಶ್ವನಾಥನ ಯಕ್ಷಿಯೆಂದು ನಿಶ್ಚಿತವಾಗುತ್ತದೆ, ಎಂದು ಸೂಚಿಸಿದ್ದಾರೆ. ಆದರೆ ಶ್ವೇತಾಂಬರರ ಮತಾನುಸಾರ ಪಾರ್ಶ್ವನಾಥನ ಯಕ್ಷಿ ಪದ್ಮಾವತಿಯ ಜೊತೆಗೆ ಮಹಾಲಕ್ಷ್ಮಿಯ ವರ್ಣನೆ ಹೊಂದುವುದಿಲ್ಲ ಎಂಬುದು ಮೇಲಿನ ವಿವರಗಳಿಂದ ಸ್ಪಷ್ಟವಾಗುತ್ತದೆ. ಆದರೆ

ದಿಗಂಬರರ ಮತಾನುಸಾರವಾಗಿ ಪಾರ್ಶ್ವನಾಥನ ಯಕ್ಷಿಯಾದ ವೈರೋಟಿಯ ಜೊತೆಗೆ ಮಹಾಲಕ್ಷ್ಮಿಯ ವರ್ಣನೆಯನ್ನು ಈ ಕೆಳಗಿನಂತೆ ಹೋಲಿಸಿ ನೋಡಲಾಗಿದೆ. ನಿರ್ವಾಣ ಕಾಲಿಕೆಯಲ್ಲಿರುವ ವೈರೋಟಿಯ ಎರಡು ವರ್ಣನೆಗಳು ಮಹಾಲಕ್ಷ್ಮಿಯ ಜೊತೆಗೆ ಹೊಂದುತ್ತವೆ.

ಮಹಾಲಕ್ಷ್ಮಿಗೆ ಒಂದು ಫಾರ್ಸಿ ದಾಖಲೆಯಲ್ಲಿ ಭವಾನಿ ಎಂದು ಸಂಬೋಧಿಸಲಾಗಿದೆ. ಭವಾನಿ ಇದು ಪಾರ್ವತಿಯ ಹೆಸರಾಗಿದ್ದು ಅವಳ ಇನ್ನೊಂದು ಹೆಸರು ಅಂಬಾ ಎಂದಿದೆ. ತುಳಜಾಪುರದ ಭವಾನಿಗೂ ಅಂಬಾ ಎಂದು ಕರೆಯುತ್ತಾರೆ. ಆದ್ದರಿಂದ ಕೇವಲ ಹೆಸರು ಒಂದೇ ಇದೆಯೆಂಬ ಕಾರಣಕ್ಕಾಗಿ ಮಹಾಲಕ್ಷ್ಮಿಯು ಜೈನರ ಅಂಬೆ ಎಂದು ಹೇಳಲಾಗುವುದಿಲ್ಲ. ಜೈನರ ಅಂಬೆ ಮತ್ತು ವೈದಿಕ ಧರ್ಮದ ಅಂಬೆಯ ಕೈಯಲ್ಲಿಯ ಆಯುಧಯಲ್ಲಿಯೂ ಮಹತ್ವದ ವ್ಯತ್ಯಾಸವಿದೆ. ಜೈನರ ಅಂಬೆಯ ಹತ್ತಿರ ಇಬ್ಬರು ಮಕ್ಕಳಿದ್ದಾರೆ. ವೈದಿಕ ಅಂಬೆಯ ಹತ್ತಿರ ಮಕ್ಕಳಿಲ್ಲ. ಸಿಂಹಾರೂಢಾ –ಸಿಂಹೇಮಾರೂಢಾ ಈ ಪದಗಳಿಂದ ದೇವಿಯು ಸಿಂಹದ ಮೇಲೆ ಕುಳಿತಿದ್ದಾಳೆ ಎಂದು ಅರ್ಥವಾಗುತ್ತದೆ. ಆದರೆ ಈಗಿನ ಅಂಬಾ ನಿಂತ ಮೂರ್ತಿಯಾಗಿದ್ದು ಪಕ್ಕದಲ್ಲಿ ಸಿಂಹವಿದೆ. ಈ ಸಿಂಹ ವಾಹನವು ಹೇಗೆ ಜೈನ ಅಂಬೆಯದಾಗಿದೆಯೋ ಹಾಗೆ ವೈದಿಕ ಧರ್ಮದ ಅಂಬೆಯದೂ ಆಗಿದೆ. ಆದರೆ ಕೇವಲ ವಾಹನ ಒಂದೇ ಆಗಿದೆ ಎಂಬ ಕಾರಣದಿಂದ ಈಗಿನ ಅಂಬೆಯು ಜೈನರ ದೇವತೆಯೆಂದು ಹೇಳಲಾಗುವುದಿಲ್ಲ. ಆದರೆ ಇದಕ್ಕಿಂತ ಮಹತ್ವದ ಪ್ರಮಾಣವೆಂದರೆ ಈಗಿನ ಅಂಬೆಯ ತಲೆಯಮೇಲೆ ಸಂಯೋನಿ ಲಿಂಗವಿದೆ. ಇಂತಹ ಲಿಂಗವು ವೈದಿಕ ಧರ್ಮದ ಅಂಬೆಯದೂ ಆಗಿದೆ. ಆದರೆ ಕೇವಲ ವಾಹನ ಒಂದೇ ಆಗಿದೆ ಎಂಬ ಕಾರಣದಿಂದ ಈಗಿನ ಅಂಬೆಯು ಜೈನರ ದೇವತೆಯೆಂದು ಹೇಳಲಾಗುವುದಿಲ್ಲ. ಆದರೆ ಇದಕ್ಕಿಂತ ಮಹತ್ವದ ಪ್ರಮಾಣವೆಂದರೆ ಈಗಿನ ಅಂಬೆಯ ತಂದೆಯ ಮೇಲೆ ಸಯೋನಿ ಲಿಂಗವಿದೆ. ಇಂತಹ ಲಿಂಗವು ವೈದಿಕ ಧರ್ಮದ ದೇವತೆಗಳ ತಲೆಯ ಮೇಲೆ ಇರುವುದು ಕ್ವಚಿತ್ತಾಗಿ ನೋಡಲು ಸಿಗುತ್ತದೆ. ಆದರೆ ಜೈನಧರ್ಮದ ಮೂರ್ತಿಗಳ ತಲೆಯ ಮೇಲೆ ಎಂದಿಗೂ ಇರುವುದಿಲ್ಲ. ಇದರ ತಾತ್ಪರ್ಯವಿಷ್ಟೇ, ಇಂದಿನ ಮಹಾಲಕ್ಷ್ಮಿಯ ಮೂರ್ತಿ ಜೈನರದಾಗಿರದೆ ವೈದಿಕರದೇ ಆಗಿದೆ ಎಂದು ಖರೆಯವರು ಸ್ಪಷ್ಟೀಕರಿಸಿದ್ದಾರೆ.

ವೈದಿಕ ದೇವತೆಯ ಪ್ರಾಕಾರದಲ್ಲಿ ಜೈನ ತೀರ್ಥಂಕರರ ಮಂದಿರ, ಹಾಗೂ ನವಗ್ರಹ ಮಂಟಪದಲ್ಲಿಯ ಜೈನ ಶಿಲಾ ಶಾಸನ ಹೇಗೆ ಬಂದಿತು ? ಎಂಬ ಪ್ರಶ್ನೆಯನ್ನು ಕೇಳಬಹುದಾಗಿದೆ. ಆದರೆ ಅದಕ್ಕೆ ಉತ್ತರ ಹೀಗಿದೆ. ಆ ಕಾಲದಲ್ಲಿ ಸಾಮಾನ್ಯ ಜನರಲ್ಲಿ ಧರ್ಮ ಕಲಹವು ತೀವ್ರ ಸ್ವರೂಪದಲ್ಲಿರಲಿಲ್ಲ. ಅನೇಕ ರಾಜರು ವಿಧರ್ಮಿಯರಿಗೆ ದಾನವನ್ನು

ಮಾಡಿರುವುದು ಕಂಡು ಬರುತ್ತದೆ. ಅಲ್ಲದೆ ಒಬ್ಬನೇ ರಾಜನಿಗೆ ವೈದಿಕ ಮತ್ತು ಜೈನ ಎರಡೂ ಧರ್ಮದ ಪರಿಪಾಲನೆ ಮಾಡುವ ಪತ್ನಿಯರಿರುವ ಉದಾಹರಣೆಗಳೂ ದೊರಯುತ್ತವೆ. ಮುಸಲ್ಮಾನರ ಕಾಲದಲ್ಲಿ ಮುಸಲ್ಮಾನ ರಾಜಕರ್ತ್ಯರಿಂದ ತೊಂದರೆಯಾಗಬಾರದೆಂಬ ಉದ್ದೇಶದಿಂದ ದೇವಾಲಯದ ಪ್ರಾಕಾರದಲ್ಲಿ ಮಸೀದಿಗಳನ್ನು ಕಟ್ಟಿರುವುದೂ ಇದೆ. ಬಾದಾಮಿಯ ನಾಲ್ಕು ಗುಹೆಗಳು ವೈದಿಕ ಧರ್ಮೀಯರದಾಗಿದ್ದರೆ ಒಂದು ಜೈನರದೂ ಇದೆ. ವೇರೂಳದಲ್ಲಿ ಬೌದ್ಧ, ವೈದಿಕ ಮತ್ತು ಜೈನ ಮೂರೂ ಧರ್ಮಗಳ ಗುಹೆಗಳು ಹತ್ತಿರದಲ್ಲಿವೆ. ಆದ್ದರಿಂದ ಮಹಾಲಕ್ಷ್ಮಿಯ ಪ್ರಾಕಾರದಲ್ಲಿ ಜೈನ ಮಂದಿರವಿರುವುದರಿಂದ ಮಹಾಕ್ಷ್ಮಿಯ ಮೂರ್ತಿ ಜೈನರದು ಎಂದು ಎಂದಿಗೂ ಸಿದ್ಧವಾಗಲಾರದು. ಖರೆಯವರು ಮಹಾಲಕ್ಷ್ಮಿಯು ಜೈನರ ದೇವತೆ ಎಂಬ ವಾದವನ್ನು ಖಂಡಿಸಿ, ಅವಳು ಪಾರ್ವತಿಯಾಗಿದ್ದಾಳೆ ಎಂಬುದನ್ನು ಉದಾಹರಣೆಗಳ ಮೂಲಕ ಸ್ಪಷ್ಟೀಕರಿಸಿದ್ದಾರೆ.

ವೈದಿಕ ಧರ್ಮ ಮತ್ತು ಜೈನ ಧರ್ಮಗಳಲ್ಲಿರುವ ೧೬ ಸಂಸ್ಕಾರಗಳು ಒಂದೇ ಆಗಿವೆ. ಜೈನ ಧರ್ಮದಲ್ಲಿ ತೀರ್ಥಂಕರರನ್ನು ಶ್ರೇಷ್ಠರೆಂದು ಭಾವಿಸುತ್ತಾರೆ. ಅವರ ಹೆಸರಿನ ಬಸದಿಗಳಿರುತ್ತವೆ. ಬಸದಿಗಳಲ್ಲಿ ದೇವಿಯ ಮೂರ್ತಿ ಸ್ಥಾಪಿಸಿರುತ್ತಾರೆ. ಆದರೆ ಜೈನರಲ್ಲಿ ದೇವತೆಗಳಿಗಾಗಿ ಸ್ವತಂತ್ರ ಮಂದಿರಗಳಿರುವುದಿಲ್ಲ.ಶಿಲಾಹಾರರು ಜೈನ ಧರ್ಮದವರಿದ್ದರೂ ಧರ್ಮ ಸಹಿಷ್ಣುಗಳಾಗಿದ್ದರು. ಉದಾರ ವೃತ್ತಿಯವರಾಗಿದ್ದರು. ಧರ್ಮಪ್ರಿಯರಾಗಿದ್ದವರು ಎಂಬುದು ಅವರು ಕೊಟ್ಟ ದಾನಗಳ ಶಿಲಾಲೇಖ ಮತ್ತು ತಾಮ್ರಪಟಗಳಿಂದ ತಿಳಿದು ಬರುತ್ತದೆ. ಬಾದಾಮಿಯ ಚಾಲುಕ್ಯ ರಾಜರಿಗೆ ಜೈನ ಧರ್ಮದ ಬಗ್ಗೆ ಆದರವಿತ್ತು. ಎರಡನೆಯ ಪುಲಕೇಶಿಯು ಜೈನ ಕವಿ ರವಿಕೀರ್ತಿಗೆ ರಾಜಾಶ್ರಯ ಕೊಟ್ಟಿದ್ದ. ಅಮೋಘವರ್ಷನು ಜಿನಸೇನನಿಗೆ ಗುರುವೆಂಬ ಮಾನ ಕೊಟ್ಟಿದ್ದ. ಗುಂಡರಾದಿತ್ಯನು ಶಿವ, ಜೈನ ಮತ್ತು ಬೌದ್ಧ ಮಂದಿರಗಳನ್ನು ಕಟ್ಟಿಸಿದ್ದ. ಈ ಎಲ್ಲ ಉದಾಹರಣೆಗಳಿಂದ ಮಹಾಲಕ್ಷ್ಮಿಯ ದೇವಾಲಯದಲ್ಲಿ ಜೈನ ಬಸದಿ ಇತ್ತು. ಆದರೆ ಕೊಲ್ಹಾಪುರವು ಶಿವ ಕ್ಷೇತ್ರವಾಗಿದು ಮಹಾಲಕ್ಷ್ಮಿಯು ಪಾರ್ವತಿಯ ಶಕ್ತಿರೂಪವಾಗಿದ್ದಾಳೆ ಎಂಬುದು ಸ್ಪಷ್ಟವಾಗುತ್ತದೆ.

ಐತಿಹಾಸಿಕ ಹಿನ್ನೆಲೆ :

ಇಂದು ಕೊಲ್ಹಾಪುರವೆಂದ ಗುರುತಿಸಲ್ಪಡುವ ಕ್ಷೇತ್ರ ಮತ್ತು ಅದರ ಪರಿಸರವು ಪ್ರಾಚೀನ ಕಾಲದಲ್ಲಿ ಬ್ರಹ್ಮಪುರಿ, ಉತ್ತರೇಶ್ವರ, ಖೋಲಖಂಡೋಬಾ, ರಂಕಾಳಾ, ಪದ್ಮಳಾ ಮತ್ತು ರಾವಣೇಶ್ವರ ಎಂಬ ಆರು ಹಳ್ಳಿಗಳಿಂದ ಕೂಡಿತ್ತು. ಬ್ರಹ್ಮಪುರಿ ಹಳ್ಳಿಯಿಂದ ಕೊಲ್ಹಾಪುರ ಶಹರವು

ನಿರ್ಮಾಣವಾಯಿತು. ಕೊಲ್ಹಾಪುರದ ಶಿಲಾಹಾರ ದೊರೆ ಗುಂಡರಾದಿತ್ಯನ ಕಾಲದಲ್ಲಿ (ಕ್ರಿ.ಶ. ೧೧೨೬–೨೭). ಶಕೆ ೧೦೪೮ ರ ಶಿಲಾಲೇಖನದಿಂದ ಕೊಲ್ಹಾಪುರಕ್ಕೆ ಮಹಾತೀರ್ಥವೆಂಬ ಉಲ್ಲೇಖವಿದ್ದು, ಬ್ರಹ್ಮಪುರಿಯಲ್ಲಿ 'ಖೇಡಾದಿತ್ಯ'ನ (ಸೂರ್ಯನ) ದೇವಾಲಯವೂ ಇದ್ದಿರುವ ಉಲ್ಲೇಖವಿದೆ. ಕೊಲ್ಹಾಪುರ ಅಥವಾ ಬ್ರಹ್ಮಪುರಿಯು ಬ್ರಹ್ಮನಿಂದ ನಿರ್ಮಾಣವಾಗಿದೆ, ಅಂದರೆ ಅಷ್ಟು ಪ್ರಾಚೀನವಾಗಿದೆ ಎಂದೂ ಹೇಳಲಾಗಿದೆ.

ಕ್ರಿ.ಶ. ೧೯೪೫ –೪೬ ರಲ್ಲಿ ಬ್ರಹ್ಮಪುರಿಯ ಸ್ಥಳದಲ್ಲಿ ಉತ್ಖನನವಾಯಿತು. ಅದರ ಬಗ್ಗೆ ವಿವರ ಹೇಳುವಾಗ ಡಾ. ಸಾಂಕಾಲಿಯಾ ಅವರು ತಮ್ಮ ಮತವನ್ನು ಹೀಗೆ ವ್ಯಕ್ತಪಡಿಸಿದ್ದಾರೆ. 'ಕ್ರಿ.ಶ. ೧೦೬ –೧೩೦ ರ ಸುಮಾರಿನಲ್ಲಿ ಗೌತಮಿಪುತ್ರ ಸಾತಕರ್ಣಿಯು (ಶಾಲಿವಾಹನ) ದಕ್ಷಿಣದಲ್ಲಿ ರಾಜ್ಯವಾಳುತ್ತಿದ್ದಾಗ ಪಂಚಗಂಗಾ ನದಿಯ ತೀರದಲ್ಲಿ ಒಂದು ಸುಂದರ ನಗರವಿತ್ತು. ಈ ಶಹರದ ನಿರ್ಮಾಣವು ಸುಮಾರು ೧–೨ ನೆಯ ಶತಕದಲ್ಲಿ ಆಗಿರಬಹುದು. ಈ ಕಾಲದಲ್ಲಿ ಶಾತವಾಹನ, ಕುಟು, ಮಹಾರಥಿಗಳು ಈ ಪ್ರದೇಶದಲ್ಲಿ ಆಳುತ್ತಿದ್ದರು. ಇದೊಂದು ಉತ್ತಮ ವ್ಯಾಪಾರ ಕೇಂದ್ರವಾಗಿತ್ತು. ರೋಮದ ಜೊತೆಗೆ ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಬಂಧ ಹೊಂದಿತ್ತು. ಬಹುಶಃ ಈ ನಗರವು ಯಜ್ಞ ಶಾತಕರ್ಣಿಯ ಕಾಲದಲ್ಲಿ ಉರಿಯಿಂದ ಉಧ್ವಸ್ಥಗೊಂಡಿತು.'

ಕೊಲ್ಹಾಪುರದ ಸುತ್ತಲಿನ ಆರು ವಸಾಹತುಗಳು ೯ ನೆಯ ಶತಮಾನದವರೆಗೆ ಸ್ವತಂತ್ರವಾಗಿದ್ದವು. ೮ನೆಯ ಶತಮಾನದಲ್ಲಿ ಭೂಕಂಪವಾಯಿತು. ಆಗ ಬ್ರಹ್ಮಪುರಿ, ರಾವಣೇಶ್ವರಗಳು ನಾಶವಾದವು. ಆಗ ಜನರು ಮಹಾಲಕ್ಷ್ಮಿ ಮಂದಿರದ ಪರಿಸರದಲ್ಲಿ ವಸತಿಸ್ಥಾನ ಮಾಡಿದರು. ನಂತರ ಎಲ್ಲ ವಸಾಹುತಗಳನ್ನು ದೇವಾಲಯದ ವಸತಿಗೆ ಜೋಡಿಸಲಾಯಿತು. ಮಹಾಲಕ್ಷ್ಮಿ ದೇವಾಲಯವು ೭–೮ ನೆಯ ಶತಮಾನದಲ್ಲಿ ಕಟ್ಟಿಲ್ಪಟ್ಟಿದೆ. ಆದರೆ ಮಂದಿರವನ್ನು ಒಂದೇ ವೇಳೆ, ಒಬ್ಬನೇ ರಾಜನ ಆಡಳಿತದಲ್ಲಿ ಕಟ್ಟಿಸಲಾಗಿಲ್ಲ. ಮೊದಲು 'ಮಹಾಲಕ್ಷ್ಮಿ', ನಂತರ 'ಮಹಾಕಾಲಿ,''ಮಹಾಸರಸ್ವತಿ'ಯರ ದೇವಾಲಯಗಳನ್ನು ಕಟ್ಟಲಾಗಿದ್ದು ಮೂಲ ದೇವಾಲಯದೊಂದಿಗೆ ಜೋಡಿಸಲಾಗಿದೆ. ದೇವಾಲಯವು ಹೇಮಾಡಪಂಥೀಯವಾಗಿದ್ದು, ಶಂಕರಾಚಾರ್ಯರು ಶಿಖರವನ್ನು ಕಟ್ಟಿಸಿದ್ದಾರೆ ಎಂಬುದು ಮೇಜರ ಗ್ರಾಹಂ ಅವರ ಅಭಿಪ್ರಾಯವಾಗಿದೆ. ದೇವಾಲಯದ ಒಳಗಿನ ಮತ್ತು ಹೊರಗಿನ ಮಗ್ಗಲು ಸುಂದರವಾಗಿದು, ಹೊರಗಿನ ಮಗ್ಗಲಲ್ಲಿ ನಾಟ್ಯ ಶಾಸ್ತ್ರದಲ್ಲಿ ವರ್ಣಿಸಿರುವಂತೆ ವಿವಿಧ ನರ್ತನ ಪ್ರಕಾರಗಳನ್ನು ಕೆತ್ತಲಾಗಿದೆ. ಮಹಾಲಕ್ಷ್ಮಿಯ ದೇವಾಲಯದಿಂದ ಈ ಕ್ಷೇತ್ರವು ಹಿಂದೂಗಳ ಧಾರ್ಮಿಕ

ಕ್ಷೇತ್ರವಾಯಿತು. ನಂತರ ಈ ಕ್ಷೇತ್ರವು ಅರಸೊತ್ತಿಗೆಯಿಂದ ಶೋಭಾಯಮಾನವಾಯಿತು. ಕೊಲ್ಹಾಪುರವು ಕೇವಲ ಧಾರ್ಮಿಕ ಕೇಂದ್ರವಾಗಿ ಉಳಿಯದೆ ಧಾರ್ಮಿಕ ಮತ್ತು ರಾಜಕೀಯ ಕ್ಷೇತ್ರವಾಗಿ ಪ್ರಸಿದ್ಧಿ ಪಡೆಯಿತು. ರಾಷ್ಟ್ರಕೂಟರು, ಕದಂಬ, ಶಿಲಾಹಾರ,ಸಿಂದ, ಚಾಲುಕ್ಯ, ಮತ್ತು ಸೇವುಣ ಮೊದಲಾದ ಚಕ್ರವರ್ತಿಗಲು, ಅನೇಕ ರಾಜರು, ಮತ್ತು ಅಧಿಕಾರಿಗಳು ಮಹಾಲಕ್ಷ್ಮಿಗೆ ಶ್ರದ್ಧೆಯಿಂದ ಸೇವೆ ಸಲ್ಲಿಸಿದ್ದಾರೆ. ಈ ಎಲ್ಲ ಅರಸರಿಗೆ ದೇವಸತ್ತೆಯ ಶ್ರೇಷ್ಠವಾಗಿತ್ತು. ಜನಸತ್ತೆಯ ದೇವಸತೆಯ ಪ್ರತಿನಿಧಿ ಎಂದು ತಿಳಿದಿದ್ದರಿಂದ ದೇವಸತ್ತೆಯೇ ಶ್ರೇಷ್ಠ ಎಂಬ ಭಾವನಯಿತ್ತು. ಅರಸರು ತಮ್ಮ ರಾಜ್ಯವನ್ನು ಆರಾಧಿಸುತ್ತಿದ್ದರು. ದೇವರೇ ನಿಜವಾದ ಸಾರ್ವಭೌಮ ಎಂಬ ನಂಬಿಕೆಯಿತ್ತು. ಇಂದಿಗೂ ಕೆಲವು ದೇವಸ್ಥಾನಗಳಲ್ಲಿ ಅರಸು ಮನೆತನಗಳಿಗೆ ವಿಶೇಷ ಗೌರವಗಳಿವೆ. ದೇವರ ಪೂಜೆಯಲ್ಲಿಯೂ ಅವರಿಗೆ ವಿಶೇಷ ಅಧಿಕಾರವಿದೆ.

ರಾಷ್ಟ್ರಕೂಟ ಮನೆತನದ ದೊರೆ ಅಮೋಘವರ್ಷನು ಧರ್ಮ ಪರಾಯಣನಾಗಿದ್ದನು. ತನ್ನ ಎಡಗೈಯ ಕಿರುಬೆರಳನ್ನು ಕತ್ತರಿಸಿ ಭಕ್ತಿಯಿಂದ ಮಹಾಲಕ್ಷ್ಮಿಗೆ ಅರ್ಪಿಸಿದನು. ಇದರ ಬಗೆಗಿನ ಸ್ಪಷ್ಟ ಆಧಾರವು ಅಮೋಘವರ್ಷನ ಸಂಜಾನ ತಾಮ್ರಪಟದಲ್ಲಿದೆ.

ಈ ತಾಮ್ರಪಟವು ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಸಂಜಾನ ಗ್ರಾಮದಲ್ಲಿ ದೊರೆತಿದೆ. (ಕ್ರಿ.ಶ. ೮೭೧) ಹಿರಿಯ ಪುರಾತತ್ವಜ್ಞರಾದ ಭಂಡಾರಕರರು ಇದನ್ನು ಸಂಪಾದಿಸಿದ್ದಾರೆ. ಈ ತಾಮ್ರಪಟದ ಶ್ಲೋಕವು ಹೀಗಿದೆ:

"ಸರ್ಪಂ ಪಾತುಮಸಾ ದದೌ ನಿಜತನುಂ ಜೀಮೂತಕೇತೋಃ ಸುತಃ।
ಶಯೇ ನಾಯಾಥ ಶಿಬಿಃ ಕಪೋತ ಪರಿ ರಕ್ಷಾರ್ಥ ದಧೀಚೋರ್ಥಿನೆ।
ತೇತೈಕೈಕಮತರ್ಪಯನ್ ಕಿಲ ಮಹಾಲಕ್ಷ್ಮ್ಯೈ ಸ್ವವಾಮಾಂಗುಲಿಮ್।
ಲೋಕೊಪದ್ರವ ಶಾಂತಯೆ ಸ್ಮ ದಿಶತಿ ಶ್ರೀ ವೀರನಾರಯಣಃ। (ಅದೇ ಪು. ೪೯)

ಈ ಶ್ಲೋಕವನ್ನು ರಚಿಸಿದ ಕವಿಯ ಆಶಯ ಹೀಗಿದೆ. " ಸರ್ಪವನ್ನು ರಕ್ಷಿಸುವುದಕ್ಕಾಗಿ ತನ್ನ ದೇಹವನ್ನು ಗರುಡನಿಗೆ ಅರ್ಪಿಸುವ ಜಿಮೂತಕೇತುವಿನ ಪುತ್ರನಾದ ಜಿಮೂತವಾಹನನ ತ್ಯಾಗ, ಪಾರಿವಾಳದ ರಕ್ಷಣೆಗಾಗಿ ತನ್ನ ತೊಡೆಯ ಮಾಂಸವನ್ನು ದಾನ ಮಾಡಿದ ಶಿಬಿಯ ತ್ಯಾಗ, ಇಂದ್ರನಿಗೆ ತನ್ನ ಎಲುಬನ್ನು ದಾನ ಮಾಡಿದ ದಧೀಚಿಯ ತ್ಯಾಗ ಇವೆಲ್ಲವೂ ಒಂದು ಜೀವಿಯ ರಕ್ಷಣೆಗಾಗಿ ಕೈಕೊಂಡ ಕಾರ್ಯಗಳಾಗಿವೆ. ಅದೇ ರೀತಿ ವೀರ ನಾರಾಯಣನು (ಅಮೋಘವರ್ಷ) ತನ್ನ ಆಡಳಿತದಲ್ಲಿ ಪ್ರಜೆಗಳಿಗೆ ಬಂದ ವಿಪತ್ತನ್ನು ಶಾಂತಗೊಳಿಸುವುದಕ್ಕಾಗಿ ತನ್ನ ಎಡಗೈಯ ಕಿರುಬೆರಳನ್ನು ಕತ್ತರಿಸಿ ಮಹಾಲಕ್ಷ್ಮಿಯ ಚರಣಕ್ಕೆ ಅರ್ಪಿಸಿದನು." ಪ್ರಸಿದ್ಧ ರಾಜಮನೆತನದ ಪ್ರಸಿದ್ಧ ಅರಸನು ಮಾಡಿದ ತ್ಯಾಗವು ಗಮನಾರ್ಹವಾಗಿದೆ. ರಾಜನು ಜೈನ

ಧರ್ಮೀಯನಾಗಿದ್ದರೂ ಪ್ರಜೆಗಳ ಹಿತಕ್ಕಾಗಿ ಸ್ವತಃ ಹಿಂಸೆಯನ್ನು ಮಾಡಿಕೊಂಡನು. ಇದರ ಬಗ್ಗೆ ಇತಿಹಾಸ ತಜ್ಞ ಅಳತೇಕರರು ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ. "ರಾಜ್ಯ ವಿಸ್ತಾರ ಅಥವಾ ಸೈನ್ಯ ಬಲವನ್ನು ಬೆಳೆಸುವುದರಲ್ಲಿ ಅಮೋಘವರ್ಷನಿಗೆ ಆಸಕ್ತಿಯಿರಲಿಲ್ಲ. ಶಾಂತಿ, ಸಾಹಿತ್ಯ ಮತ್ತು ಧರ್ಮಾಚರಣೆಗಳು ಅವನ ವಿಷಯಗಳಾಗಿದ್ದವು. ಕವಿರಾಜಮಾರ್ಗ ದಂತಹ ಗ್ರಂಥಕ್ಕೆ ಅಮೋಘವರ್ಷನು ಪ್ರೇರಕನಾಗಿದ್ದನು. ಸಂಜಾನ ತಾಮ್ರಪಟದಲ್ಲಿ ವರ್ಣಿಸಲಾದ ಅವನ ಔದಾರ್ಯವಂತೂ ವಿಕ್ರಮಾದಿತ್ಯನ ಔದಾರ್ಯ ಕ್ಕಿಂತಲೂ ಹಿರಿದಾಗಿದೆ ಎಂದಿದ್ದಾರೆ. ಅಮೋಘವರ್ಷನು ಪ್ರಜೆಗಳ ಸಂಕಟ ನಿವಾರಣೆಗಾಗಿ ಭಕ್ತಿಯಿಂದ ತನ್ನ ಕಿರುಬೆರಳನ್ನು ದೇವಿಗೆ ಅರ್ಪಿಸಿದ್ದಾನೆ. ಅವನ ಧರ್ಮ –ತತ್ವವನ್ನು ಆಚರಣೆಯಲ್ಲಿ ತರುವ ಕ್ರಿಯಾಶೀಲ ರಾಜಪುರುಷನಾಗಿದ್ದ ಎಂಬುದಕ್ಕೆ ಇದು ನಿದರ್ಶನವಾಗಿದೆ. ಆದರೆ ಆಮೋಘವರ್ಷನು ದೇವಿಗೆ ಎಡಗೈ ಬೆರಳನ್ನು ಏಕೆ ಅರ್ಪಿಸಿದನು ಎಂಬುದಕ್ಕೆ ಉತ್ತರ ಪಡೆಯಲು ದಕ್ಷಿಣಭಾರತದ ಧರ್ಮಾಚರಣೆಯನ್ನು ಪರಿಶೀಲಿಸುವುದು ಅಗತ್ಯವಾಗಿದೆ. 'ಶಿಖರ ಶಿಂಗಣಾಪುರಚಾ ಮಹಾದೇವ' ಈ ಗ್ರಂಥದಲ್ಲಿ 'ಶಿರಕಮಲ ಸಮರ್ಪಣೆ' ಯ ವಿಷಯವನ್ನು ರಾ.ಚಿ. ಢೇರೆಯವರು ಸಾಧಾರವಾಗಿ ವಿವರಿಸಿದ್ದಾರೆ. ಶ್ರೀ ಶೈಲ ಮಂಟಪದಲ್ಲಿ ಈ ಆಚರಣೆ ಜಾರಿಯಲ್ಲಿತ್ತು. ಸಹ್ಯಾದ್ರಿಯ ಪಶ್ಚಿಮ ಭಾಗದಲ್ಲಿರುವ 'ಖೋಪಿ ಶಿರಗಾಂವ' ದಲ್ಲಿಯ ಭೋಸಲೆ ಮನೆತನದಲ್ಲಿ ಈ ಪದ್ಧತಿ ರೂಢಿಯಲ್ಲಿತ್ತು ಎಂಬುದನ್ನು ಢೇರೆಯವರು ಸಂದರ್ಭಸಹಿತ ಸ್ಪಷ್ಟೀಕರಿಸುತ್ತಾರೆ. ದಕ್ಷಿಣ ದಿಗ್ವಿಜಯದ ಸಂದರ್ಭದಲ್ಲಿ, ಶಿವಾಜಿ ಮಹಾರಾಜನು ಶ್ರೀಶೈಲಕ್ಕೆ ಬಂದಿದ್ದನು. ಆಗ ಅವನಿಗೂ ಶಿರ ಕಮಲವನ್ನು ಅರ್ಪಿಸುವ ಇಚ್ಛೆಯಾಯಿತು. ಆದರೆ, ಶ್ರೀ ಶೈಲದ ಭ್ರಮದಾಂಬೆಯು ಅವನನ್ನು ಈ ಸಂಕಲ್ಪದಿಂದ ಪರಾವೃತ್ತಗೊಳಿಸಿದಳು. ಇಷ್ಟದೇವರ ತೃಪ್ತಿಗಾಗಿ ಇಂತಹ ಹಿಂಸಾತ್ಮಕ ವ್ರತಗಳು ಪ್ರಾಚೀನ ಕಾಲದಲ್ಲಿ ಅಸ್ತಿತ್ವದಲ್ಲಿದ್ದವು. ಅಮೋಘವರ್ಷನ ಸಮರ್ಪಣೆಯ ಹಿನ್ನೆಲೆ ಗುರುತಿಸಲು ಶ್ರೇಷ್ಠ ಪುರಾತತ್ವಜ್ಞ ಆರ್. ನರಸಿಂಹಾಚಾರ್ಯರ ಸಂಶೋಧನಾ ಕೃತಿಯು ಪುರಾವೆಯನ್ನು ಒದಗಿಸುತ್ತದೆ. ಬೆರಳಿನ ಸಮರ್ಪಣೆಯ ಬಗೆಗೆ ನರಸಿಂಹಾಚಾರ್ಯರಿಗೆ ಕೋಲಾರಮ್ಮನ ಕ್ಷೇತ್ರದಲ್ಲಿ ಮಹತ್ವ ದಾಖಲೆ ದೊರೆತಿದೆ. ಕೋಲಾರದ ಪೂರ್ವಕ್ಕೆ ಎತ್ತರದ ಪ್ರದೇಶದಲ್ಲಿ 'ಸಿತಿ' ಎಂಬ ಊರು ಇದೆ. ಅಲ್ಲಿ ಎರಡು ದೇವಾಲಯಗಳಿವೆ. ಒಂದು ಶ್ರೀಪತಿ ಮತ್ತೊಂದು ಕಾಲಭೈರವನದು. ಶ್ರೀಪತಿಯ ಗುಡಿಯಲ್ಲಿ ವೀರಭದ್ರ ಮತ್ತು ಮಹಿಷ ಮರ್ದಿನಿಯ ಮೂರ್ತಿಗಳಿವೆ. ಇಲ್ಲಿ ರಾಜೇಂದ್ರ ಚೋಳನ ಕ್ರಿ.ಶ. ೧೦೨೪ ರ ಶಾಸನವಿದೆ. ಈ ಶಿಲಾಶಾಸನದ ಸಾಕಷ್ಟು ಭಾಗವು ಲುಪ್ತವಾಗಿರುವುದರಿಂದ ಸಂಪೂರ್ಣ ಓದುವುದು ಶಕ್ಯವಾಗಿಲ್ಲ. ಅಲ್ಲಿಯೇ ಇದ್ದ ಕಾಲಭೈರವನ

ಗುಡಿಯಲ್ಲಿ ಸಹಿತ ಸಾಕಷ್ಟು ಶಾಸನಗಳಿವೆ. ಅದರಲ್ಲಿ ಹೊಯ್ಸಳ ವಿಷ್ಣುವರ್ಧನ, ಗಂಗ ಮತ್ತು ವಿಜಯನಗರದ ಅರಸರ ಅನೇಕ ಶಾಸನಗಳಿವೆ. ಇಲ್ಲಿ ದೊರೆತ ೧೪ನೆಯ ಶತಮಾನದ ಶಾಸನದಲ್ಲಿ ಬೆರಳನ್ನರ್ಪಿಸುವ ವೃತದ ವಿಸ್ತಾರ ವಿವರಣೆಯಿದೆ. ಇಲ್ಲಿಯ ಪ್ರಮುಖ ದೇವರು ಕಾಲಭೈರವನಾಗಿದ್ದಾನೆ. ಈ ಗುಡ್ಡಕ್ಕೆ ಭಸ್ಮಾಸುರ ಬೆಟ್ಟ ಎಂದು ಕರೆಯಲಾಗಿದೆ. ಸ್ಥಳ ಪುರಾಣ ಹಾಗೂ ಶಾಸನವನ್ನು ಆಧರಿಸಿ ನರಸಿಂಹಾಚಾರ್ಯರು ಬೆರಳನ್ನರ್ಪಿಸುವ ವೃತವನ್ನು ಪರಿಚಯಿಸಿದ್ದಾರೆ. ಕಾಲಭೈರವನು ಇಲ್ಲಿಯ ಒಕ್ಕಲಿಗ ಮತ್ತು ರೆಡ್ಡಿ ಸಮಾಜದ ಕುಲದೇವತೆಯಾಗಿದ್ದಾನೆ. ಈ ದೇವರ ಪ್ರೀತ್ಯರ್ಥವಾಗಿ ಸಮಾಜದ ಪುರುಷರು ಬೆರಳನ್ನು ಅರ್ಪಿಸುತ್ತಿದ್ದರು. ಕರ್ನಾಟಕದಲ್ಲಿ ಕುಲದೇವರಿಗೆ ಬೆರಳನ್ನರ್ಪಿಸುವ ವಿಶಿಷ್ಟ ಸಮುದಾಯಕ್ಕೆ 'ಕಿರುಬೆರಳನ್ನರ್ಪಿಸುವ ವರ್ಗ' ಎಂದು ಗುರುತಿಸಲಾಗುತ್ತದೆ. ಅಮೋಘವರ್ಷನು ಮಹಾಲಕ್ಷ್ಮಿಗೆ ಕಿರುಬೆರಳನ್ನರ್ಪಿಸಲು ಅವನಿಗೆ ಎಲ್ಲಿಂದ ಪ್ರೇರಣೆ ಒದಗಿತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ಜನರು ಸ್ವತಃ 'ಕುಟುಂಬಿನ್' ಎಂಬ ಕೃಷಿಕ ವಾಚಕ ಸಂಜ್ಞೆಯಿಂದ ಗುರುತಿಸಲ್ಪಡುತ್ತಾರೆ. ಈ ಮನೆತನವು ಕಿರುಬೆರಳನ್ನರ್ಪಿಸುವ ಒಂದು ವರ್ಗದಿಂದಲೇ (ರೆಡ್ಡಿಯವರಿಂದ) ಅಭಿವೃದ್ಧಿ ಹೊಂದಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

ಈ ಬೆಟ್ಟದಲ್ಲಿ ಭಸ್ಮಾಸುರನು ಭಸ್ಮವಾಗಿ ಬಿದ್ದಿದ್ದರಿಂದ 'ಭಸ್ಮಾಸುರ ಬೆಟ್ಟ' ವೆಂಬ ಹೆಸರು ಬಂದಿದೆ. ಭಸ್ಮಾಸರನು ಯಾರ ತಲೆಯ ಮೇಲೆ ಕೈಯಿಡುವನೋ ಅವನು ಭಸ್ಮವಾಗಿ ಹೋಗುವನೆಂಬ ವರವನ್ನು ಶಿವನಿಂದ ಪಡೆದಿದ್ದ. ಹಾಗೂ ಅದನ್ನು ಶಿವನ ಮೇಲೆಯೇ ಪ್ರಯೋಗಿಸಲು ಹೊರಟಾಗ ಶಿವನು ಸಿತಿ ಗುಡ್ಡದಲ್ಲಿ ವಾಸವಾಗಿದ್ದ ಗೌತಮ ಋಷಿಯ ಆಶ್ರಯದಲ್ಲಿ ಆಶ್ರಯ ಪಡೆದನು. ಶಿವನನ್ನು ಬೆನ್ನಟ್ಟಿದ್ದ ಭಸ್ಮಾಸುರನು ಒಬ್ಬ ರೈತನಿಗೆ ಶಿವನ ಬಗ್ಗೆ ವಿಚಾರಿಸಿದಾಗ ಅವನು ಋಷಿಯ ಆಶ್ರಮದತ್ತ ಬೆರಳು ತೋರಿಸಿದ. ಶಿವನ ಸಹಾಯಕ್ಕೆಂದು ವಿಷ್ಣುವು ಮೋಹಿನಿ ರೂಪ ತಳೆದು ಬಂದ. ಭಸ್ಮಾಸುರನನ್ನು ಮೋಹಗೊಳಿಸಿ ಅವನು ತನ್ನ ಮಸ್ತಕದ ಮೇಲೆಯೇ ಕೈ ಇಡುವಂತೆ ಮಾಡಿದ್ದರಿಂದ ಶಿವನು ಸಂಕಟದಿಂದ ಪಾರಾದನು. ಶಿವನು ಮೋಹಿನಿಯೊಡನೆ ಸಮಾಗಮಿಸಿದ್ದುದರಿಂದ ಹರಿ – ಹರ ಪುತ್ರನಾಗಿ ಕಾಲಭೈರವನು ಹುಟ್ಟಿದ. ಹೀಗಾಗಿ ಸೀತಿಗುಡ್ಡದ ಮೇಲೆ ಕಾಲಭೈರವ ನೆಲೆಸಿದ್ದಾನೆ. ರೈತನು ತೋರು ಬೆರಳಿನಿಂದ ಶಿವನು ಠಾವನ್ನು ತೋರಿಸಿದ್ದರಿಂದ, ಶಿವನು ರೈತರ ವಂಶಜರು ಬೆರಳನ್ನು ಕತ್ತರಿಸಿ ನನ್ನ ಪುತ್ರನಿಗೆ ಅರ್ಪಿಸಬೇಕೆಂದು ಶಿಕ್ಷೆ ವಿಧಿಸಿದನು. ಹೀಗಾಗಿ ಕೃಷಿಕ ಸಮುದಾಯವು ಈ ದೇವರಿಗೆ ಬೆರಳನ್ನು ಅರ್ಪಿಸತೊಡಗಿದರು. ಈ ಕಥೆಯು ದೇವರಿಗೆ

ಬೆರಳನ್ನರ್ಪಿಸುವ ಪರಂಪರೆ ಹೇಗೆ ರೂಢಿಗೆ ಬಂದಿತೆಂಬುದನ್ನು ಸೂಚಿಸುವುದಕ್ಕೆ ಆಧಾರವಾಗಿದೆ.

ಗೋವೆಯ ಕದಂಬ ಕುಲದ ಮೊದಲ ಷಷ್ಠರಾಜನು ಕೊಲ್ಹಾಪುರದ ಮಹಾಲಕ್ಷ್ಮಿಯ ಆರಾಧಕನಾಗಿದ್ದ ಎಂಬುದು ತಾಮ್ರಪಟದಿಂದ ತಿಳಿದು ಬರುತ್ತದೆ. ಈ ತಾಮ್ರಪಟವು ಇಂಡಿಯನ್ ರಿಸರ್ಚ್ ಇನ್ಸಿಟ್ಯೂಟ್ (ಸೆಂಟ ಕ್ಸೇವಿಯರ್ ಕಾಲೇಜು, ಮುಂಬಯಿ) ಸಂಗ್ರಹಾಲಯದಲ್ಲಿದೆ. ಇದರ ಕಾಲ ಕ್ರಿ.ಶ. ೧೦೩೮. ಮೊದಲನೆಯ ಷಷ್ಠರಾಜನ ಮಹಾಲಕ್ಷ್ಮಿಯ ಭಕ್ತಿಯನ್ನು ಕುರಿತು ಹೀಗೆ ಹೇಳಲಾಗಿದೆ. 'ಶ್ರೀ ಕೊಲ್ಹಾಪುರಮೇತ್ಯ ಯೇನ ಚ ಮಹಾಲಕ್ಷ್ಮೀಃ ಸದಾರಾಧಿತಾ' ಇದರ ಅರ್ಥವೆಂದರೆ ಮಹಾಲಕ್ಷ್ಮಿಯ ಆರಾಧನೆಗಾಗಿ ಅವನು ಕೊಲ್ಹಾಪುರಕ್ಕೆ ಸದಾ ಹೋಗುತ್ತಿದ್ದ. ಇವನ ನಂತರ ಸುಮಾರು ನೂರು ವರ್ಷಗಳ ನಂತರ ಎರಡನೆಯ ಜಯಕೇಶಿಯು (ಶಕೆ. ೧೦೪೧ – ೧೦೫೫) ಮಹಾಲಕ್ಷ್ಮಿಯ ಚೈತ್ರೋತ್ಸವಕ್ಕಾಗಿ ದಾನ ಮಾಡಿದ್ದನು. ಆದರೆ ಈ ದಾನವು ಕೊಲ್ಹಾಪುರದ ಮಹಾಲಕ್ಷ್ಮಿಯದಾಗಿರದೆ ಧಾರವಾಡದಲ್ಲಿಯ ಮಹಾಲಕ್ಷ್ಮಿದೇವಿಗೆ ಸಂಬಂಧಿಸಿದ್ದಾಗಿದೆ. ಈ ಶಾಸನವು ಧಾರವಾಡದ ಕರ್ನಾಟಕ ಕಾಲೇಜಿನ ಸಂಗ್ರಹಾಲಯದಲ್ಲಿಡಲಾಗಿದೆ. ಆದ್ದರಿಂದ ಇದಕ್ಕೆ ಧಾರವಾಡದಶಾಸನ ಎಂದು ಗುರುತಿಸಲಾಗುತ್ತದೆ.

ಶಿಲಾಹಾರ ಅರಸರು ಮಹಾಲಕ್ಷ್ಮಿಯ ಪರಮ ಭಕ್ತರು. ಮಹಾಲಕ್ಷ್ಮಿ ಇವರ ಕುಲದೇವತೆಯಾಗಿದ್ದಳು. ಮಹಾಲಕ್ಷ್ಮಿಯಲ್ಲಿ ಅನನ್ಯ ಭಕ್ತಿ ತೋರಿದ ಮೊದಲ ಶಿಲಾಹಾರ ನೃಪತಿಯೆಂದರೆ ಮಾರಸಿಂಹ. ಕ್ರಿ.ಶ. ೧೦೫೮ ರ ಮಿರಜ ತಾಮ್ರಪಟದಲ್ಲಿ ಈ ದೊರೆಯು ತನ್ನನ್ನು 'ಶ್ರೀ ಮಾರಸಿಂಹ ದೇವಃ' ಎಂದು ಕರೆದುಕೊಂಡಿದ್ದಾನೆ. ಈತನು ಮಹಾಮಾಂಡಲೀಕನಾಗಿದ್ದು ಕೊಲ್ಹಾಪುರ ಶಿಲಾಹಾರದ ಪನ್ಹಾಳ ರಾಜಧಾನಿಯಲ್ಲಿ ಅಧಿಕಾರ ನಡೆಸುತ್ತಿದ್ದನು. ತನ್ನ ಮನೆತನದ ಮೂಲ ಕೇಂದ್ರವಾಗಿದ್ದ ತಗರಪುರದ ನೆನಪನ್ನು 'ತಗರಪುರಾಧೀಶ್ವರ,' 'ತಗರೇಶ್ವರ' ಎಂಬ ಬಿರುದುಗಳ ಮೂಲಕ ಕಾಯ್ದುಕೊಂಡಿದ್ದನು. 'ಜಿಮೂತವಾಹನಾನ್ವಯ ಸಂಭೂತ' ಎಂಬ ವಂಶ ಸಂಬಂಧಿ ವಿಶೇಷಣಗಳು ಅವರ ವಂಶದ ಉದಯವನ್ನು ತಿಳಿಸುತ್ತವೆ. ಸುಮಾರು ಇನ್ನೂರು ವರ್ಷಗಳ ಕಾಲ ಶಿಲಾಹಾರರು ಮಹಾಲಕ್ಷ್ಮಿಗೆ ಭಕ್ತಿಯಿಂದ ನಡೆದುಕೊಂಡಿದ್ದರು. ಮಾರಸಿಂಗ, ಬಲ್ಲಾಳ, ಗಂಡರಾದಿತ್ಯ, ವಿಕ್ರಮಾದಿತ್ಯ, ದ್ವಿತೀಯ ಭೋಜರಾಜನ ತನಕ ೧೮ ಶಿಲಾ ಶಾಸನಗಳನ್ನು ಮಿರಾಶಿಯವರು ತಮ್ಮ ಗ್ರಂಥದಲ್ಲಿ ಅಳವಡಿಸಿದ್ದಾರೆ.

ಮಹಾಮಹೋಪಾಧ್ಯಾಯ ಮಿರಾಶಿಯವರ ಪ್ರಕಾರ ಕೊಲ್ಹಾಪುರದ ಶಿಲಾಹಾರದ ಪೂರ್ವದಲ್ಲಿದ್ದ ಸಿಂದವಂಶದ ಅರಸರು ಮಹಾಲಕ್ಷ್ಮಿಯ ಗುಡಿಯನ್ನು ಕಟ್ಟಿಸಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಸೇಂದ್ರ, ಸಿಂದ, ಮತ್ತು ಗ್ವಾಲ್ಹೇರದ ಶಿಂದೆ ರಾಜಮನೆತನಗಳು ಒಂದೇ ಕಾಲಕ್ಕೆ ಸಂಬಂಧಿಸಿದ್ದಾಗಿದ್ದು, ಕಾಲಾಂತರದಲ್ಲಿ ಸ್ಥಿತ್ಯಂತರಗಳಾಗಿವೆ. ಶೇಷನಾಗನು ಈ ಮೂರೂ ರಾಜಮನೆತನಗಳ ಪುರಾಣದ ಮೂಲ ಪುರುಷ. ಜ್ಯೋತಿಬಾ ಗ್ವಾಲ್ಹೇರದ ಶಿಂದೆ ಮನೆತನದ ಕುಲದೇವರು. ಜ್ಯೋತಿಬಾ ಗುಡ್ಡವು ಮಹಾಲಕ್ಷ್ಮಿಯಿಂದ ಪ್ರಭಾವಿತವಾದ ಅವಳ ಅವತಾರ ಚರಿತ್ರೆಯೊಂದಿಗೆ ಸಂಬಂಧಿಸಿದ ಒಂದು ಅವಿಭಾಜ್ಯ ಘಟಕವಾಗಿದೆ. ಜೋತಿಬಾ ರಾಕ್ಷಸರ ಸಂಹಾರದಲ್ಲಿ ಮಹಾಲಕ್ಷ್ಮಿಗೆ ಸಹಕರಿಸಿದ ಮಹಾಪುರುಷನಾಗಿದ್ದಾನೆ. ಇವನು ಶೇಷರೂಪನಾಗಿದ್ದರಿಂದ ಶಿಂದೆ ಮನೆತನದ ಕುಲದೇವನಾಗಿದ್ದಾನೆ. ಈ ದೇವಸ್ಥಾನದ ವಾಸ್ತು ವಿನ್ಯಾಸದಲ್ಲಿ ಶಿಂದೆ ಅರಸರ ಕರ್ತೃತ್ವದ ಮುದ್ರೆಯಿದೆ. ಜೋತಿಬಾ ದೇವತೆಯು ಹಿಮ್ಮತ ಬಹಾದ್ದೂರ ಚವ್ಹಾಣ ಮತ್ತು ರಾಜಾಜ್ಞೆ ಇವರಿಗೂ ಕುಲದೇವತೆಯಾಗಿದ್ದಾನೆ. ಚವ್ಹಾಣರು ನೂರಾರು ಎಕರೆ ಭೂಮಿಯನ್ನು ದಾನ ಮಾಡಿದರು. ಶಿಂಥೆ ಅವರು ಇಂದಿನ ದೇವಾಲಯವನ್ನು ಕಟ್ಟಿಸಿದರು.

ಸಿಂದ ಕುಲದ ಈಶ್ವರ ಹೆಸರಿನ ಸಾಮಂತನು ಕರ್ನಾಟಕದ ಬನವಾಸಿ – ಸಂತಲಿಗೆ ಪ್ರದೇಶವನ್ನು ಆಳುತ್ತಿದ್ದರು. (೧೧೬೫ ಮತ್ತು ೧೧೭೨) ಇವನು 'ಕರಹಾಟ ಪುರಾಧೀಶ್ವರ' ಎಂದು ತನ್ನ ವರ್ಣನೆ ಮಾಡಿಕೊಳ್ಳುತ್ತಾನೆ. ಇದರಿಂದ ಅವನ ಪೂರ್ವಜರು ಒಂದು ಕಾಲದಲ್ಲಿ ಕರ್ಹಾಡದಲ್ಲಿ ರಾಜ್ಯವಾಳುತ್ತಿದ್ದರು ಎಂದು ಅರ್ಥವಾಗುತ್ತದೆ. ಇನ್ನೊಂದು ಅಪೂರ್ಣ ತಾಮ್ರಪಟದಲ್ಲಿ ಭೀಮನ ಮೊಮ್ಮಗನಾದ ಆದಿತ್ಯವರ್ಮ ಎಂಬ ಹೆಸರಿನ ಸಿಂದ ಅರಸನು ಜುನ್ನರದಲ್ಲಿ ವಾಸ್ತವ್ಯ ಹೂಡಿದಾಗ ಒಬ್ಬ ಬ್ರಾಹ್ಮಣನಿಗೆ ಕ್ರಿ.ಶ. ೯೬೫ ಮಾರ್ಚ ೬ ರಂದು ಪುಣೆ ಜಿಲ್ಲೆಯ ಕಿನ್ಹಯಿ ಎಂಬ ಗ್ರಾಮವನ್ನು ದಾನವಾಗಿ ಕೊಟ್ಟ ದಾಖಲೆಯಿದೆ. ಇದನ್ನು ಡಾ. ಮಿರಾಶಿಯವರು ತೋರಿಸಿಕೊಟ್ಟಿದ್ದಾರೆ. ಆದಿತ್ಯವರ್ಮನು ತನ್ನ ಇಬ್ಬರು ಪೂರ್ವಜರ ಉಲ್ಲೇಖ ಮಾಡಿರುವುದರಿಂದ ಈ ಮನೆತನವು ೮–೯ ನೆಯ ಶತಮಾನದಲ್ಲಿ ಕರ್ಹಾಡ, ಕೊಲ್ಹಾಪುರ ಭಾಗದಲ್ಲಿ ರಾಜ್ಯವಾಳುತ್ತಿದ್ದರೆಂಬ ಅನುಮಾನವನ್ನು ಮಿರಾಶಿಯವರು ವ್ಯಕ್ತಪಡಿಸಿದ್ದಾರೆ. ಮಹಾಲಕ್ಷ್ಮಿಯ ಗುಡಿಯನ್ನು ಸಿಂದ ವಂಶದ ರಾಜರಲ್ಲಿ ಯಾರಾದರೊಬ್ಬರು ಕಟ್ಟಿಸಿರಬಹುದಾಗಿದೆ. ಆದರೆ ಯಾವ ದೊರೆ ಕಟ್ಟಿಸಿದ್ದಾನೆ ಎಂದು ಖಚಿತವಾಗಿ ಹೇಳುವಷ್ಟು ದಾಖಲೆಗಳು ಲಭ್ಯವಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಕದಂಬರ ಬಗ್ಗೆ ಅಧ್ಯಯನ ಮಾಡಿದ ಜಿ.ಎಸ್. ಗಾಯಿಯವರು 'ಶ್ರೀಕಂಠ ಶಾಸ್ತ್ರಿ' ಯವರ ಗೌರವ ಗ್ರಂಥದಲ್ಲಿ ಕರ್ನಾಟಕ

ಸೇಂದ್ರರ ಬಗ್ಗೆ ಟಿಪ್ಪಣಿ ಬರೆದಿದ್ದಾರೆ. ಸೇಂದ್ರರು ಬನವಾಸಿ ಕದಂಬರ ಸಮಕಾಲೀನರು ಮತ್ತು ಸಾಮಂತರಾಗಿದ್ದರು. ಬಾದಾಮಿ ಚಾಲುಕ್ಯರ ಸ್ವಾಮಿತ್ವವನ್ನು ಸ್ವೀಕರಿಸಿ ನಾಗರಖಂಡದಲ್ಲಿ ಆಡಳಿತ ಮಾಡುತ್ತಿದ್ದರು. ಸೇಂದ್ರರ ಪ್ರಾಚೀನತೆಯ ಆಧಾರವು ಕದಂಬ ಕುಲದ ಸ್ಥಾಪಕನಾದ ಮಯೂರಶರ್ಮನ ಶಾಸನದಲ್ಲಿ ದೊರೆಯುತ್ತದೆ. ಕದಂಬರು ಮತ್ತು ಬಾದಾಮಿ ಚಾಲುಕ್ಯರಲ್ಲಿ ನಿಕಟ ಸಂಬಂಧವಿತ್ತು. ಎರಡನೆಯ ಪುಲಕೇಶಿಯ ತಂದೆಯಾದ ಮೊದಲನೆಯ ಕೀರ್ತಿವರ್ಮನ ಪತ್ನಿಯು ಸೇಂದ್ರರ ಮನೆತನದವಳು. ಚಂದ್ರವಳ್ಳಿಯ ಶಾಸನದಲ್ಲಿ ಬರುವ ಸೇಂದ್ರಕದ ಪ್ರಾಕೃತ ರೂಪವು ಸಿಯಾಂದಕ – ಸಿಂದಕ – ಸಿಂದ ಎಂದಿದೆ. ಸೇಂದ್ರಕ – ಸಿಂದ ಕುಲಗಳೆರಡೂ ಫಣೀಂದ್ರನನ್ನು ತಮ್ಮ ಮೂಲ ಪುರುಷನೆಂದು ಸ್ವೀಕರಿಸುವುದರಿಂದ ಎರಡೂ ಕುಲಗಳು ಒಂದೇ ಎಂಬುದು ಸ್ಪಷ್ಟವಾಗುತ್ತದೆ. ಗಾಯಿಯವರ ನಂತರ ಡಾ. ಬಿ.ಆರ್. ಗೋಪಾಲರು ಹೊಸ ಶಾಸನಗಳನ್ನು ಶೋಧಿಸಿ ಸಿಂದ ಅರಸರ ಮೇಲೆ ಹೊಸ ಬೆಳಕು ಚೆಲ್ಲಿದ್ದಾರೆ. ಸಿಂಧರಲ್ಲಿ ಮುಂಜ (ಆದಿತ್ಯವರ್ಮನ ತಂದೆ) ಹೆಸರಿನ ಸಾಮಂತನು ಕಲ್ಯಾಣದ ೬ನೆಯ ವಿಕ್ರಮಾದಿತ್ಯನ ಮಹಾಮಂಡಳೇಶ್ವರನಾಗಿದ್ದು, ಮಹಾರಾಷ್ಟ್ರದಲ್ಲಿ ಆಳಿಕೆ ನಡೆಸುತ್ತಿದ್ದ ಕರ್ಹಾಡ ಕೊಲ್ಹಾಪುರದ ಪ್ರದೇಶವು ಅವನ ಆಡಳಿತ ವ್ಯಾಪ್ತಿಯಲ್ಲಿತ್ತು. ಮಿರಾಶಿಯವರಿಗೆ ದೊರೆತ ಆದಿತ್ಯವರ್ಮನ ಹೆಸರಿನ ಸಿಂದರಾಜನ ತೃಟಿತ ಶಾಸನದಲ್ಲಿ ಬರುವ ಭೀಮ ಮತ್ತು ಮುಂಜ ಈ ಪೂರ್ವಜರು ಸಿಂದರೇ ಆಗಿದ್ದಾರೆ ಎಂಬುದು ಡಾ. ಗೋಪಾಲರ ಶಾಸನಗಳಿಂದ ತಿಳಿದು ಬರುತ್ತದೆ. ಈ ಎಲ್ಲ ಸಂಶೋಧನೆಗಳಿಂದ ಕರವೀರ ನಿವಾಸಿನಿಯ ದೇವಾಲಯವು ಸಿಂಧ ಮನೆತನದ ರಾಜರಿಂದಲೇ ಕಟ್ಟಿಸಲ್ಪಟ್ಟಿತು ಎಂಬುದು ಸ್ಪಷ್ಟವಾಗುತ್ತದೆ. ಸಿಂದ ರಾಜಕುಲದ ವಿಷಯವಾಗಿ ಉಪಲಬ್ಧವಿದ್ದ ಅಸಂಖ್ಯ ಶಿಲಾಲೇಖಗಳ ಆಧಾರದಿಂದ ಸಿಂದರ ಇತಿಹಾಸವನ್ನು ಮಂಡಿಸುವ ಬಿ.ಆರ್. ಗೋಪಾಲರು ಸಿಂದ ರಾಜರ ಆರಾಧ್ಯದೇವತೆ 'ಮಾಲತಿ' ಎಂದು ನೊಂದಾಯಿಸಿದ್ದಾರೆ. 'ಮಾಲತಿ ದೇವಿ ಲಬ್ಧವರಪ್ರಸಾದ' ಎಂಬ ಬಿರುದಿನಲ್ಲಿ ಉಲ್ಲೇಖಿಸಿರುವ ದೇವಿಯು ಮಾಲತಿದೇವಿಯೇ ಆಗಿದ್ದಾಳೆ. ಈ ಮಾಲತಿದೇವಿ ಮಹಾಲಕ್ಷ್ಮಿಯೇ ಆಗಿದ್ದಾಳೆ ಎಂಬುದು ದಿನಕರ ದೇಸಾಯಿಯವರ ಅಭಿಪ್ರಾಯವಾಗಿದೆ. ಕೊಲ್ಹಾಪುರದ ಶಿಲಾಹಾರದ ಮೊದಲನೆಯ ಅರಸನಾದ ಮಾರಸಿಂಹನ ಮಗಳು ಚಂದ್ರಲೇಖಾ ಆರನೆಯ ವಿಕ್ರಮಾದಿತ್ಯನ ಪತ್ನಿಯಾಗಿದ್ದಳು. ಅವಳ ಸೌಂದರ್ಯದ ಕೀರ್ತಿ ಕೊಲ್ಹಾಪುರದಿಂದ ಕಾಶ್ಮೀರದವರೆಗೆ ಹಬ್ಬಿತ್ತು. ಇದರಿಂದ ವಿಕ್ರಮಾದಿತ್ಯನಿಗೆ ಕೊಲ್ಹಾಪುರದ ಬಗ್ಗೆ ಆಕರ್ಷಣೆ ಇದ್ದಿರುವ ಹಿನ್ನೆಲೆಯು ಸ್ಪಷ್ಟವಾಗುತ್ತದೆ. ವಿಕ್ರಮಾದಿತ್ಯನ ಅಧಿಕಾರಿ ಸೋಭನಯ್ಯ, ಅವನ ಪತ್ನಿ, ಮಗ, ಮಗಳು ಎಲ್ಲರೂ ಮಹಾಲಕ್ಷ್ಮಿ ದೇವಿಗೆ ಭೂಮಿಯನ್ನು ದಾನ ಮಾಡಿದ

ಉಲ್ಲೇಖನವಿದೆ. (ಕ್ರಿ.ಶ.೧೧೧೭, ಜನವರಿ ೧೧) ದೇವಗಿರಿ ಯಾದವರ ಪರಾಕ್ರಮಿ ರಾಜನಾದ ಎರಡನೆಯ ಸಿಂಘಣನು ಶಿಲಾಹಾರರ ರಾಜಧಾನಿಯನ್ನು ಗೆದ್ದು ಕೊಲ್ಹಾಪುರವನ್ನು ತನ್ನ ಅಧಿಕಾರ ವ್ಯಾಪ್ತಿಗೆ ಸೇರಿಸಿಕೊಂಡನು. ಕೊಲ್ಹಾಪುರ ಕ್ಷೇತ್ರದಲ್ಲಿ ಸಿಂಘಣರ ಆರು ಶಿಲಾಲೇಖಗಳು ಉಪಲಬ್ಧವಾಗಿವೆ. ಈ ಶಾಸನಗಳಿಂದ ಸಿಂಘಣನಿಗೆ ಮಹಾಲಕ್ಷ್ಮಿಯ ಬಗೆಗಿದ್ದ ಉತ್ಕಟ ಭಕ್ತಿಯು ಪ್ರಕಟವಾಗುತ್ತದೆ. ಈ ಶಾಸನಗಳ ಕಾಲಾವಧಿ ಕ್ರಿ.ಶ. ೧೨೧೮ – ೧೨೪೦ ಆಗಿದೆ. ಮಹಾಲಕ್ಷ್ಮಿ ಮಂದಿರದ ಪ್ರಾಕಾರದಲ್ಲಿರುವ ಗಣೇಶ ಮಂದಿರದ ಕಂಬದ ಮೇಲಿರುವ 'ಓಂ ನಮಃ ಶಿವಾಯ' ಎಂದು ಕೆತ್ತಲಾಗಿದೆ. ಈ ಶಿವ ಸ್ತುತಿಯ ನಂತರ ಮಹಾಲಕ್ಷ್ಮಿಯ ಸ್ತವನವಿದೆ. ಅದು ಹೀಗಿದೆ :

> **"ಶುಭಾಯಾಸ್ತು ಮಹಾಲಕ್ಷ್ಮೀರ್ಭವತುಂ ಭವತಾರಿಣಿ ।**
> **ಬಿಭರ್ತಿ ಶಿರಸಾ ಲಿಂಗಮಶೇಷಾಘೌದ್ಯಹಾರಿಣಿ ।" (ಅದೇ ಪು.೧೪)**

ಸಕಲರಿಗೆ ಕಲ್ಯಾಣ ಮಾಡುವ ಮತ್ತು ಭಕ್ತರ ಪಾಪಗಳನ್ನು ದೂರ ಮಾಡುವ ಭವತಾರಿಣಿ ಮಹಾಲಕ್ಷ್ಮಿಯು ಶಿರದಲ್ಲಿ ಲಿಂಗ ಧರಿಸಿ ಎಲ್ಲರಿಗೂ ದರ್ಶನ ನೀಡುತ್ತಿರುವಳು. ಕ್ರಿ.ಶ. ೧೨೧೮ – ೧೯ ರ ಶಿಲಾಶಾಸನದಲ್ಲಿ ಇನ್ನೊಂದು ಮಹತ್ವದ ನೋಂದಣಿ ಇದೆ. ಸಿಂಘಣನ ಸೇವಕ ತೈಲಣನು ರಾಜಾಜ್ಞೆಯಿಂದ ದೇವಿಯ ಎದುರು ತೋರಣ ಕಟ್ಟಿಸಿದನು. ಸಿಂಘಣನಿಗೆ ಪ್ರಿಯಳಾದ ಈ 'ಹಿಮಾಲಯ ಸಂಭವಾ' ಇಲ್ಲಿ ಶಿವನ ಜೊತೆಗೆ ನೆಲೆಸಿರುವಳು. ಕ್ರಿ.ಶ. ೧೨೩೫ ರ ಶಾಸನವು ಕೊಲ್ಹಾಪುರದ ಲಕ್ಷ್ಮಿವಿಲಾಸ ಅರಮನೆಯ ಸಂಗ್ರಹಾಲಯದಲ್ಲಿದೆ. ಅದರ ಪ್ರಕಾರ ಕೊಲ್ಹಾಪುರವು ಮಹಾಲಕ್ಷ್ಮಿಯ ಮುಖ್ಯಸ್ಥಳವಾಗಿದ್ದು ಅದನ್ನು 'ಶಿವಕ್ಷೇತ್ರ' ವೆಂದು ಕರೆಯಲಾಗಿದೆ. ಎರಡನೆಯ ಸಿಂಘಣನ ನಂತರ ಯಾದವ ನೃಪತಿ ಕನ್ನರದೇವ, ಮಹಾದೇವ ಮತ್ತು ರಾಮಚಂದ್ರದೇವರ ಒಟ್ಟು ೫ ಶಾಸನಗಳಿವೆ. ಅದಗಲ್ಲಿ ಕನ್ನರನ ಎರಡನೆಯ ಶಾಸನವನ್ನು ಕೊಲ್ಹಾಪುರ ಜಿಲ್ಲೆಯ ಶಿರೋಳ ತಾಲೂಕಿನ ಕಲ್ಲೇಶ್ವರ ಗುಡಿಯಲ್ಲಿ ಇಡಲಾಗಿದೆ. ಕನ್ನರ ದೇವನ ಅಧಿಕಾರಿ ಬೊಮ್ಮೆಯ ನಾಯಕನು ಕೊಟ್ಟ ದಾನವನ್ನು ಈ ಶಾಸನದಲ್ಲಿ ಕೆತ್ತಲಾಗಿದೆ. ಇದರಲ್ಲಿ 'ದಕ್ಷಿಣ ವಾರಣಾಶಿ ಶಿವಕ್ಷೇತ್ರ, ಚತುಃಷಷ್ಠಿ ಯೋಗಪೀಠ' ಎಂದು ಕ್ಷೇತ್ರದ ಮಹಿಮೆಯನ್ನು ಹೇಳಲಾಗಿದೆ. (ಕ್ರಿ.ಶ.೧೨೫೭) ಈ ಎಲ್ಲ ನೋಂದಣಿಗಳಿಂದ ದೇವಗಿರಿಯ ಯಾದವ ವಂಶದ ರಾಜಪುರುಷರು ಕರವೀರ ಕ್ಷೇತ್ರ ಮತ್ತು ಅಲ್ಲಿಯ ಮಹಾಲಕ್ಷ್ಮಿಯ ವೈಭವವನ್ನು ವೃದ್ಧಿಸುವುದಕ್ಕಾಗಿ, ಅವಳ ಕೃಪೆಗೆ ಪಾತ್ರಳಾಗುವುದಕ್ಕಾಗಿ ಉದಾರ ಹಸ್ತದಿಂದ ದಾನ ಮಾಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

ಯಾದವರ ನಂತರ ಕೆಲವು ಶತಕಗಳವರೆಗೆ, ಸುಮಾರು ೧೩-೧೬ ನೆಯ ಶತಕದವರೆಗೆ ಈ ಪ್ರದೇಶದಲ್ಲಿ ಮುಸಲ್ಮಾನರ ಪ್ರಭಾವವಿತ್ತು. ೧೬ ನೆಯ ಶತಕದ ನಂತರ ಕೊಲ್ಹಾಪುರವು ಮರಾಠಿ ರಾಜರ ಆಡಳಿತಕ್ಕೆ ಸೇರಿತು. ಮುಸಲ್ಮಾನರ ಭೀತಿಯಿಂದ ಭೀತಿಯಿಂದ ಮಹಾಲಕ್ಷ್ಮಿಯ ಮೂರ್ತಿಯನ್ನು ಅರ್ಚಕರ ಮನೆಯಲ್ಲಿ ಬಚ್ಚಿಡಲಾಗಿತ್ತು. ಆದರೆ ಅಲ್ಲಿ ಎಷ್ಟು ವರ್ಷಗಳ ಕಾಲ ಮೂರ್ತಿಯನ್ನು ಇಡಲಾಗಿತ್ತು ಎಂಬ ಕಾಲಮಾನದ ಮಾಹಿತಿ ಮಾತ್ರ ಸ್ಪಷ್ಟವಾಗಿ ದೊರಕುವುದಿಲ್ಲ. ಕ್ರಿ.ಶ. ೧೭೧೨ – ೧೭೬೦ ರ ಕಾಲದಲ್ಲಿ ಸಂಭಾಜಿ ಮಹಾರಾಜರ ಕಾಲದಲ್ಲಿ ಸಿದ್ಧೋಜಿರಾವ ಘೋರ್ಪಡೆ ಎಂಬ ಸರದಾರನನ್ನು ಕಳಿಸಿ ಅರ್ಚಕರ ಮನೆಯಿಂದ ಮೂರ್ತಿಯನ್ನು ತರಿಸಿ ದೇವಾಲಯದಲ್ಲಿ ಮರುಸ್ಥಾಪನೆ ಮಾಡಿದರು. ಈ ಸಂಬಂಧವಾಗಿ ಮುಂಬಯಿಯ ಗೆಜೆಟಿಯರ್‌ನಲ್ಲಿ ಉಲ್ಲೇಖನವಿದೆ. ಕ್ರಿ.ಶ. ೧೭೧೫ ರಲ್ಲಿ ವಿಜಯಾದಶಮಿಯ ದಿನದಂದು ಕೊಲ್ಹಾಪುರದ ಸಂಭಾಜಿಯ ಆಜ್ಞೆಯ ಮೇರೆಗೆ ಸಿದ್ಧೋಜಿ ಘೋರ್ಪಡೆಯು ಮಹಾಲಕ್ಷ್ಮಿ ದೇವಾಲಯದಲ್ಲಿ, ಮಹಾಲಕ್ಷ್ಮಿಯ ಮೂರ್ತಿಯನ್ನು ಶಾಸ್ತ್ರೋಕ್ತ ರೀತಿಯಲ್ಲಿ ಪುನಃ ಪ್ರತಿಷ್ಠಾಪಿಸಿದರು ಎಂದು ವಾ.ರಾ.ಧರ್ಮಾಧಿಕಾರಿಯವರು ಉಲ್ಲೇಖಿಸಿದ್ದಾರೆ. ಕೊಲ್ಹಾಪುರವನ್ನಾಳಿದ ಎಲ್ಲ ಅರಸುಮನೆತನಗಳು ರಾಜಸತ್ತೆಗಿಂತ ದೇವಸತ್ತೆ ದೊಡ್ಡದು ಎಂದು ನಂಬಿದ್ದರಿಂದ ಮಹಾಲಕ್ಷ್ಮಿಯ ಆರಾಧಕರಾಗಿದ್ದರು. ದೇವಸ್ಥಾನಕ್ಕೆ ದಾನ, ದೇವಣಿಗೆಗಳನ್ನು ನೀಡಿದರು. ರಾಜ್ಯವನ್ನು ವಿಸ್ತರಿಸುವಾಗ, ಶತ್ರುಗಳ ಮೇಲೆ ದಂಡೆತ್ತಿ ಹೋಗುವಾಗ, ಪ್ರಜೆಗಳ ರಕ್ಷಣೆಗಾಗಿ, ದೇವಿಗೆ ಶರಣು ಹೋಗುತ್ತಿದ್ದರು. ಮಹಾಲಕ್ಷ್ಮಿಯ ಪರಮ ಭಕ್ತರಾಗಿದ್ದರಿಂದ ದೇವಿಯ ಆರಾಧನೆಯನ್ನು ವೈಭವೋಪೇತಗೊಳಿಸಿದರು.

ಪೌರಾಣಿಕ ಹಿನ್ನೆಲೆ :

'ಕರವೀರ ಮಹಾತ್ಮ್ಯಮ್' ಎಂಬುದು ಮೂಲ ಸಂಸ್ಕೃತ ಗ್ರಂಥವಾಗಿದ್ದು, ಇದು ಪದ್ಮ ಪುರಾಣದಲ್ಲಿಯ ಒಂದು ಭಾಗವಾಗಿದೆ. ಇದು ಸಂಸ್ಕೃತ ಗ್ರಂಥವಾಗಿದ್ದುದರಿಂದ ಸಾಮಾನ್ಯರಿಗೆ ತಿಳಿಯಲು ಕಷ್ಟವಾಗುತ್ತಿತ್ತು. ಇದು ಸಂಸ್ಕೃತ ಗ್ರಂಥವಾಗಿದ್ದುದರಿಂದ ಸಾಮಾನ್ಯರಿಗೆ ತಿಳಿಯಲು ಕಷ್ಟವಾಗುತ್ತಿತ್ತು. ಆದ್ದರಿಂದ ಕೊಲ್ಹಾಪುರದ ದಾಜಿಬಾ ಜೋಶಿರಾವ ಅವರು ಈ ಸಂಸ್ಕೃತ ಗ್ರಂಥವನ್ನು ಮರಾಠಿ ಓವಿ ಛಂದದಲ್ಲಿ, ಅತ್ಯಂತ ಸುಲಭ ಭಾಷೆಯಲ್ಲಿ ರೂಪಾಂತರಗೊಳಿಸಿದ್ದಾರೆ. (ಕ್ರಿ.ಶ. ೧೮೫೦) ಈ ಗ್ರಂಥವನ್ನು ಬಾಳಾಚಾರ್ಯ ಖುಪರೀಕರ ಶಾಸ್ತ್ರಿಯವರು ಪ್ರಕಟಿಸಿದ್ದಾರೆ. ಈ ಮರಾಠಿಯ ಗ್ರಂಥದ ಆಧಾರದಿಂದ ಕರವೀರ ಮಹಾತ್ಮ್ಯೆಯ ಸಾರವನ್ನು ಈ ರೀತಿ ಕಥೆಯ ರೂಪದಲ್ಲಿ ವಿವರಿಸಬಹುದಾಗಿದೆ.

ಒಂದು ಸಲ ಶಿವ ಪಾರ್ವತಿಯರಲ್ಲಿ ವಾದ ವಿವಾದ ನಡೆಯಿತು. ಶಿವನು 'ಕಾಶಿ ಕ್ಷೇತ್ರವು ನನ್ನದಾಗಿದೆ. ಅದುವೇ ಎಲ್ಲ ಕ್ಷೇತ್ರಕ್ಕಿಂತ ಶ್ರೇಷ್ಠವಾದುದು' ಎಂದನು. ಅದಕ್ಕೆ ಪ್ರತ್ಯುತ್ತರವಾಗಿ ಪಾರ್ವತಿಯು 'ಕೊಲ್ಹಾಪುರವು ನನ್ನ ಕ್ಷೇತ್ರವಾಗಿದೆ. ಅದುವೇ ಎಲ್ಲಕ್ಕಿಂತ ಶ್ರೇಷ್ಠವಾದ ಕ್ಷೇತ್ರವಾಗಿದೆ' ಎಂದಳು. ಹೀಗೆಯೇ ವಾದ ಮುಂದುವರಿಯಿತು. ಅಲ್ಲಿಗೆ ವಿಷ್ಣು ಬಂದನು. ಕೈಯಲ್ಲಿ ತಕ್ಕಡಿ ಹಿಡಿದು ಎರಡು ಪರಡಿಗಳಲ್ಲಿ ಎರಡು ಕ್ಷೇತ್ರಗಳನ್ನಿಟ್ಟ. ಶಿವನ ಕಾಶಿ ಕ್ಷೇತ್ರದ ಪರಡಿಯ ಮೇಲೆಯೇ ಉಳಿದು ಪಾರ್ವತಿಯ ಕೊಲ್ಹಾಪುರ ಕ್ಷೇತ್ರದ ಪರಡಿಯ ಕೆಳಕ್ಕೆ ಇಳಿಯಿತು. ನಂತರ ಕೊಲ್ಹಾಪುರ ಕ್ಷೇತ್ರವು ಕಾಶಿ ಕ್ಷೇತ್ರಕ್ಕಿಂತ ಶ್ರೇಷ್ಠವಾಗಿದೆ. ಇದು 'ದಕ್ಷಿಣದ ಕಾಶಿ ಕ್ಷೇತ್ರ' ಎಂದು ನಿರ್ಣಯಿಸಲಾಯಿತು. ಈ ಆಧಾರದ ಮೇರೆಗೆ ಕೊಲ್ಹಾಪುರವು ಕಾಶಿಗಿಂತ ಹೆಚ್ಚು ಪವಿತ್ರವಾದ ಕ್ಷೇತ್ರವೆಂದು ಪರಿಗಣಿಸಲಾಗಿದೆ.

ಕರವೀರಮಹಾತ್ಮ್ಯೆಯಲ್ಲಿ ಈ ಕ್ಷೇತ್ರಕ್ಕೆ ಕರವೀರಪುರ, ಕೊಲ್ಹಾಪುರವೆಂಬ ಹೆಸರುಗಳು ಹೇಗೆ ಪ್ರಾಪ್ತವಾದವು ಎಂಬುದನ್ನು ವಿವರಿಸಲಾಗಿದೆ. ಬ್ರಹ್ಮನು ಪ್ರಜೆಗಳನ್ನು ನಿರ್ಮಿಸತೊಡಗಿದಾಗ ತಮೋಗುಣಯುಕ್ತರಾದ ಗಯ, ಲವಣ ಮತ್ತು ಕೊಲ್ಲ ಹೀಗೆ ಮೂವರು ಮಾನಸಪುತ್ರರನ್ನು ಸೃಷ್ಟಿಸಿದ. ದೊಡ್ಡವನಾದ ಗಯನು ಬ್ರಹ್ಮನನ್ನು ಆರಾಧಿಸಿ ಹೀಗೆ ವರವನ್ನು ಪಡೆದು ಕೊಂಡಿದ್ದ. 'ತನ್ನ ದೇಹಕ್ಕೆ ದೇವರು, ಪಿತೃರು ಮತ್ತು ತೀರ್ಥಕ್ಷೇತ್ರಗಳಿಗಿಂತ ಹೆಚ್ಚು ಪಾವಿತ್ರ್ಯತೆ, ಶುದ್ಧತೆ ದೊರಕಬೇಕು.' ಬ್ರಹ್ಮನಿಂದ ಹೀಗೆ ವರ ಪಡೆದ ಗಯನು ತನ್ನ ಸ್ಪರ್ಶದಿಂದ ಎಲ್ಲ ಪಾಪಿಗಳನ್ನು ಉದ್ಧರಿಸತೊಡಗಿದನು. ಹೀಗಾಗಿ ಯಾರಿಗೂ ದಂಡವಿಲ್ಲ. ಮೃತ್ಯುವಿನ ಭಯವಿಲ್ಲದಂತಾಯಿತು. ಯಮನು ಬ್ರಹ್ಮನಿಗೆ ತನ್ನ ದಂಡವನ್ನು, ಅಧಿಕಾರವನ್ನು ಹಿಂತಿರುಗಿಸಿದ. ನಂತರ ಬ್ರಹ್ಮ, ವಿಷ್ಣು, ಮಹೇಶ್ವರರು ಯೋಚಿಸಿ ಒಂದು ಯುಕ್ತಿ ಮಾಡಿ, 'ಗಯ' ನ ಬಳಿಗೆ ಬಂದರು. 'ನೀನು ಧನ್ಯನಾಗಿರುವಿ. ನಿಮ್ಮಲ್ಲಿ ನಮ್ಮದೊಂದು ಬೇಡಿಕೆಯಿದೆ. ಅದನ್ನು ಪೂರೈಸಬೇಕು' ಎಂದರು. ಗಯನು ಆಗಲಿ ಎಂದ. ಬ್ರಹ್ಮ, ವಿಷ್ಣು, ಮಹೇಶರು ಈ ಭೂಮಿಯ ಮೇಲೆ ಯಜ್ಞ ಮಾಡಲು ಒಂದು ಪವಿತ್ರ ಸ್ಥಳ ಸಿಗುತ್ತಿಲ್ಲ ಅದ್ದರಿಂದ ನಿನ್ನ ದೇಹದ ಮೇಲೆಯೇ ಯಜ್ಞ ಮಾಡಲು ಸ್ಥಳ ಕೊಡಬೇಕೆಂದು ಬೇಡಿದರು. ಆಗ ಗಯನು ಯಜ್ಞ ಕರ್ಮಕ್ಕಾಗಿ ದೇವತೆಗಳಿಗೆ ತನ್ನ ದೇಹವನ್ನು ಅರ್ಪಿಸಿದನು. ದೇವತೆಗಳು ಯಜ್ಞವನ್ನು ಆರಂಭಿಸಿದರು. ಗಯನ ಮೇಲೆ ಸಂತುಷ್ಟರಾಗಿ ಬೇಕಾದ ವರ ಬೇಡಿಕೊ ಎಂದರು. ಅದಕ್ಕೆ ಗಯನು, ಸೂರ್ಯ ಚಂದ್ರರಿರುವವರೆಗೆ ನೀವೆಲ್ಲ ದೇವರು ಹೀಗೆಯೇ ನನ್ನ ದೇಹದ ಮೇಲೆ ಮೇಲೆ ಸ್ಥಿರವಾಗಿ ನೆಲೆಸಬೇಕು ಮತ್ತು ಈ ಕ್ಷೇತ್ರವು ನನ್ನ ಹೆಸರಿನಿಂದ ಗುರುತಿಸುವಂತಾಗಬೇಕು. ಇಲ್ಲಿ ಮಾಡುವ ಪಿಂಡದಾನದಿಂದ ಪಿತೃರಿಗೆ ಮುಕ್ತಿ ದೊರಕಬೇಕು.

ದೇವರು 'ತಥಾಸ್ತು' ಹೇಳಿದರು. ಅಂದಿನಿಂದ ಈ ಕ್ಷೇತ್ರದಲ್ಲಿ ಸ್ನಾನ ಮಾಡುವ ಭಕ್ತರ ಪಿತೃರು ಇಲ್ಲಿ ಸತ್ಯ ಲೋಕವನ್ನು ಕಾಣತೊಡಗಿದರು.

ಗಯನ ಮರಣದ ವೃತ್ತಾಂತ ಕೇಳಿ ಆತನ ಸೋದರನಾದ ಲವಣ ಮತ್ತು ಕೋಲರು ಕೋಪಿಷ್ಠರಾಗಿ ದೇವತೆಗಳ ಮೇಲೆ ಯುದ್ಧಕ್ಕೆ ಬಂದರು. ಆಗ ಗಯನು ' ಹೇ ಬಂಧುಗಳೇ ನೀವು ಬಂಧು ಪ್ರೇಮದಿಂದ ಸಂತಪ್ತರಾಗಿದ್ದೀರಿ. ಆದರೆ ದೇವತೆಗಳು ಯಾಜಕರಾಗಿ ನನ್ನಲ್ಲಿ ಬಂದು ಬೇಡಿದ್ದರಿಂದ ನಾನು ಒಪ್ಪಿದೆ. ಅದು ಪರಾಕ್ರಮವೆಂದಲ್ಲ. ಬೇಡುವವರಿಗೆ ನೀಡುವಲ್ಲಿ ನಾನು ಹಿಂಜರಿಯುವುದಿಲ್ಲ. ಅಲ್ಲದೆ ಯಾರ ಪಾದದಿಂದ ಗಂಗೆ ಅವತರಿಸಿದ್ದಾಳೆಯೋ, ಅಂತಹ ವಿಷ್ಣುವಿನ ಪಾದಗಳು ನನ್ನ ಶರೀರದ ಮೇಲೆ ಇರುವುದರಿಂದ ನಾನು ನಶ್ವರನಾಗಿದ್ದೇನೆ. ನೀವೂ ವೈರ ಭಾವವನ್ನು ತ್ಯಜಿಸಿ ಹರಿಯ ಸೇವೆ ಮಾಡಿರಿ' ಎಂದು ಹೇಳಲು ಲವಣ ಮತ್ತು ಕೋಲಾಸುರರು ಹಿಂದಿರುಗಿದರು. ಆದರೆ ಲವಣನಿಗೆ ಮಾತ್ರ ಇದು ಸಹ್ಯವಾಗಲಿಲ್ಲ. ಅವನು ದ್ವಿಜರನ್ನು, ದೇವರನ್ನು ದ್ವೇಷಿಸತೊಡಗಿದ. ದೇವರನ್ನು ತ್ರೈಲೋಕ್ಯದಲ್ಲಿ ರಾಜ್ಯ ಮಾಡತೊಡಗಿದ. ಆಗ ಎಲ್ಲ ದೇವರು ವಿಷ್ಣುವಿನ ಮೊರೆ ಹೊಕ್ಕರು. ವಿಷ್ಣು ಲವಣನೊಡನೆ ಯುದ್ಧ ಮಾಡಿ ಅವನನ್ನು ಸಂಹರಿಸಿದನು. ಆಗ ಲವಣನು 'ಹೇ ವಿಷ್ಣುವೇ ನಿನ್ನ ಪಾದಸ್ಪರ್ಶದಿಂದ ನಾನು ಪಾವನನಾಗಿರುವೆ. ಆದರೆ ನನ್ನದೊಂದು ಇಚ್ಛೆ ಇದೆ. ನನ್ನ ಪಾದಾಘಾತದಿಂದ ಎಲ್ಲಿ ನನಗೆ ಮರಣ ಪ್ರಾಪ್ತವಾಗುತ್ತದೆಯೋ ಅಲ್ಲಿ ನಿನ್ನ ಮತ್ತು ನನ್ನ ಸೋದರನಾದ ಗಯನ ನಾಮದಿಂದ ಅದು ಪವಿತ್ರ ಕ್ಷೇತ್ರವಾಗಿ ಪ್ರಸಿದ್ಧಿ ಪಡೆಯಬೇಕು. ಅದು ಮುಕ್ತಿಯ ಸ್ಥಳವಾಗಬೇಕು.' ಈ ಕಾರಣದಿಂದ ಆ ಸ್ಥಳಕ್ಕೆ 'ವಿಷ್ಣುಗಯಾ' ಎಂದು ಹೆಸರು ಬಂದಿತು.

ಲವಣನ ವಧೆಯಾದ ಬಳಿಕ ಕೊಲ್ಹಾಸುರನು ಸಂತಪ್ತಗೊಂಡನು. ಅವನು ಎಲ್ಲ ದೇವರನ್ನು ಸಂಹರಿಸಿ ರಾಜಹರಣ ಮಾಡುವ ಪ್ರತಿಜ್ಞೆ ಮಾಡಿದನು. ಅದಕ್ಕಾಗಿ ಕೊಲ್ಲಗಿರಿಯಲ್ಲಿ ತಪಶ್ಚರ್ಯೆ ಮಾಡತೊಡಗಿದನು. ಕೊಲ್ಹಾಸುರನು ತಪಶ್ಚರ್ಯಕ್ಕಾಗಿ ಹೋದ ಸಂಧಿಯನ್ನು ಸಾಧಿಸಿ ಸುಕೇಶಿ ಹೆಸರಿನ ರಾಕ್ಷಸನು ಆ ಕ್ಷೇತ್ರವನ್ನು ಹಸ್ತಗತ ಮಾಡಿಕೊಂಡು ತನ್ನ ಪುತ್ರರಾದ ಏತಿ ಮತ್ತು ಪ್ರೇತಿಯರೊಡಗೂಡಿ ರಾಜ್ಯವಾಳ ತೊಡಗಿದನು. ಅನೇಕ ರಾಜರುಗಳನ್ನು ಪರಾಜಯಗೊಳಿಸಿ, ದೇವಾಲಯಗಳನ್ನು, ತೀರ್ಥಕ್ಷೇತ್ರಗಳನ್ನು ನಾಶಗೊಳಿಸಿ ದ್ವಿಜರನ್ನು ಪೀಡಿಸತೊಡಗಿದ. ಆಗ ಬ್ರಹ್ಮದೇವನು ಸುಕೇಶಿಯನ್ನು ಸಂಹರಿಸುವುದಕ್ಕಾಗಿ ಕೊಲ್ಹಾಸುರನ ಸಹಾಯವನ್ನು ಬೇಡಿ ದೈತ್ಯ ದೈತ್ಯರಲ್ಲಿ ಪರಸ್ಪರ ಯುದ್ಧ ಮಾಡಲು ಪ್ರವರ್ತಗೊಳಿಸಿದ.

ಕೊಲ್ಹಾಸುರನು ಯುದ್ಧದಲ್ಲಿ ಸಹಕರಿಸಿದರೆ ಅವನು ಪೃಥ್ವಿಯ ಮೇಲೆ ರಾಜ್ಯ ಮಾಡಲು ಅಶ್ವಾಸನೆ ಕೊಡುವುದಾಗಿ ಹೇಳಿದ್ದರಿಂದ, ಬ್ರಹ್ಮದೇವ ಯುಕ್ತಿ ಸಫಲವಾಯಿತು. ಕೊಲ್ಹಾಸುರ ಮತ್ತು ಸುಕೇಶಿಯರ ನಡುವೆ ಭೀಕರ ಯುದ್ಧ ನಡೆಯಿತು. ಕೊಲ್ಹಾಸುರನ ನೂರು ಮಕ್ಕಳು ಯುದ್ಧದಲ್ಲಿ ಮಡಿದರು. ನಂತರ ಸ್ವತಃ ಕೊಲ್ಹಾಸುರನು ಸುಕೇಶಿಯ ಮಕ್ಕಳನ್ನು ಮತ್ತು ಸುಕೇಶಿಯನ್ನೂ ಸಂಹರಿಸಿದ ಸುಕೇಶಿಯ ಸಂಹಾರದಿಂದ ದೇವ ಮತ್ತು ಋಷಿ ಗುಣಗಳು ಆನಂದಿತರಾದರು. ಕೊಲ್ಹಾಸುರನಿಗೆ ರಾಜ್ಯಾಭಿಷೇಕ ಮಾಡಿದರು. ನಂತರ ಕೊಲ್ಹಾಸುರನಿಗೆ ಮಹಾಲಕ್ಷ್ಮಿಯ ಆಶೀರ್ವಾದದಿಂದ ಅವನಿಗೆ ಮತ್ತೆ ನಾಲ್ಕು ಜನ ಪುತ್ರರು ಜನಿಸಿದರು. ಅವರೇ ಕರವೀರ, ವಿಶಾಲಾಖ್ಯ, ಲಜ್ಞಾಸುರ ಮತ್ತು ಕುಲಾಂದಕೇತು, ಕಾಲಾಂತರದಲ್ಲಿ ದೊಡ್ಡವನಾದ ಕರವೀರನಿಗೆ ಪಟ್ಟಗಟ್ಟಿ ಅವನಿಗೇ ರಾಜ್ಯಭಾರವನ್ನು ಒಪ್ಪಿಸಿ, ಕೊಲ್ಹಾಸುರನು ತಪಶ್ಚರ್ಯೆಗೆ ಹೋದನು.

ಇತ್ತ ಕರವೀರನು ರಾಜಸತ್ತೆ ಮತ್ತು ಸಂಪತ್ತಿನ ಮದದಿಂದ ವ್ಯಸನಿಯಾದನು. ದೇವತೆಗಳಿಗೆ, ಬ್ರಾಹ್ಮಣರಿಗೆ ಅವನು ಪೀಡಿಸತೊಡಗಿದ. ಅವನ ಹಿಂಸೆ ತಾಳಲಾರದೆ ದೇವತೆಗಳು ಬ್ರಹ್ಮನಿಗೆ, ಶಿವನಿಗೆ ಶರಣು ಹೋದರು. ಶಿವ, ಬ್ರಹ್ಮ, ವಿಷ್ಣು ಎಲ್ಲರೂ ಸೇರಿ ಕರವೀರನ ಮೇಲೆ ಯುದ್ಧ ಮಾಡಿದರು. ಬ್ರಹ್ಮನು ಲಜ್ಜಾಸುರನನ್ನು, ಹರಿಯ ವಿಶಾಲಾಖ್ಯನನ್ನು, ಇಂದ್ರನು ಕುಲಾಂಧಕೇತುವನ್ನು, ಶಿವನು ಕರವೀರನನ್ನು ಸಂಹರಿಸಿದರು. ಕರವೀರನ ಯುದ್ಧ ಕೌಶಲ್ಯವನ್ನು ಮೆಚ್ಚಿದ ಶಿವನು, 'ನಿನಗೆ ಬೇಕಾದ ವರವನ್ನು ಬೇಡು' ಎನ್ನಲು ಕರವೀರನು ನನ್ನ ಕೆಲಸ ಪೂರ್ಣವಾಗಿದೆ. ನನಗೇನೂ ಬೇಡ. ನಿನ್ನ ಕೈಯಿಂದಲೇ ನನ್ನ ದೇಹವನ್ನು ತುಂಡರಿಸಿ ಚೆಲ್ಲು. ಎಲ್ಲಿ ನನ್ನ ದೇಹ ಬೀಳುವುದೋ ಆ ಸ್ಥಳವು ನನ್ನ ಹೆಸರಿನ ಕ್ಷೇತ್ರವಾಗಬೇಕು. ಶಿವನ 'ತಥಾಸ್ತು' ಎಂದ. ಅವನ ದೇಹದ ಭಾಗವು ಬಿದ್ದ ಸ್ಥಳವು ಕರವೀರ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆಯಿತು.

ತನ್ನ ಪುತ್ರರನ್ನು ದೇವತೆಗಳು ಸಂಹರಿಸಿದ ವಾರ್ತೆಯನ್ನು ಕೇಳಿ ಕೊಲ್ಹಾಸುರನು ರೊಚ್ಚಿಗೆದ್ದನು. ದೇವತೆಗಳು ನನ್ನ ಬಂಧುಗಳನ್ನು, ನನ್ನ ಎಲ್ಲ ಪುತ್ರರನ್ನೂ ಕೊಂದರು. ಇವರಿಗೆ ಲಕ್ಷ್ಮಿಯ ಬೆಂಬಲ ಇರುವುದರಿಂದಲೇ ಅಷ್ಟು ಧೈರ್ಯ ಬಂದಿದೆ. ಈ ಲಕ್ಷ್ಮಿಯನ್ನೇ ತಪಶ್ಚರ್ಯೆ ಮಾಡಿ ಗೆಲ್ಲುತ್ತೇನೆ ಎಂದು ನಿಶ್ಚಯಿಸಿ ತಪಶ್ಚರ್ಯೆ ಮಾಡತೊಡಗಿದ. ಅವನ ತಪಶ್ಚರ್ಯ ಮಾಡತೊಡಗಿದ. ಅವನ ತಪಸ್ಚರ್ಯಕ್ಕೆ ಪ್ರಸನ್ನಳಾಗಿ ಲಕ್ಷ್ಮಿಯು 'ನಿನಗೆ ಬೇಕಾದ ವರ ಕೇಳಿಕೊ' ಎಂದಳು. ಆಗ ಕೊಲ್ಹಾಸುರನು ಮಹಾಲಕ್ಷ್ಮಿಗೆ ನೀನು ನೂರ ವರ್ಷ ಈ ಕ್ಷೇತ್ರ

ಬಿಟ್ಟು ಹೋಗಬೇಕು, ಮತ್ತು ನಾನು ಎಲ್ಲ ದೇವರನ್ನು ಗೆದಿಯಬೇಕು ಎಂದು ದೇವಿಯಲ್ಲಿ ಕೇಳಿಕೊಂಡ. ದೇವಿಯು 'ತಥಾಸ್ತು' ಎಂದು ಹೇಳಿ ಕೊಲ್ಹಾಪುರ ಕ್ಷೇತ್ರವನ್ನು ತ್ಯಜಿಸಿ, ಹಿಮಾಲಯಕ್ಕೆ ಹೊರಟು ಹೋದಳು. ಕೊಲ್ಹಾಸುರನು ಚಕ್ರವರ್ತಿಯಾದನು. ಆದರೆ ದೇವಿಯು ಕ್ಷೇತ್ರ ವಿಯೋಗದಿಂದ ಕೃಶಲಾದಳು. ದೇವಿಯು ಆ ಕ್ಷೇತ್ರದಿಂದ ಹೊರಟು ಹೋಗಿದ್ದರಿಂದ ದೇವತೆಗಳೆಲ್ಲ ದುರ್ಬಲರಾಗಿದ್ದಾರೆ ಎಂದು ಕೊಲ್ಹಾಸುರನು ತಿಳಿದುಕೊಂಡ. ಎಲ್ಲ ದೈತ್ಯರನ್ನು ಒಟ್ಟುಗೂಡಿಸಿ ಬಲವಾದ ಸೈನ್ಯವನ್ನು ಸಜ್ಜುಗೊಳಿಸಿದ. ಎಲ್ಲ ದೇವರನ್ನು ವಿಧ್ವಂಸಗೊಳಿಸತೊಡಗಿದ. ಹೀಗಾಗಿ ಬ್ರಹ್ಮ, ವಿಷ್ಣು, ಮಹೇಶರು ಈ ಅನರ್ಥವನ್ನು ನೋಡಿ ಚಿಂತತರಾದರು. ಹಿಮಾಲಯಕ್ಕೆ ಹೋಗಿ ದೇವಿಯನ್ನು ಪ್ರಾರ್ಥಿಸಿದರು. ಮಹಾಲಕ್ಷ್ಮಿಯು ಕೋಪಾವಿಷ್ಟಳಾಗಿ ಉಗ್ರ ರೂಪ ತಾಳಿದಳು. ಕೊಲ್ಹಾಸುರನ ಸಂಹಾರಕ್ಕಾಗಿ ನವಕೋಟಿ ಸಖಿಯುಕ್ತಳಾಗಿ, ಚಾಮುಂಡಗಣ, ಸಿದ್ಧಬಟುಕ, ಕೇದರಾ, ಕಾಳ, ವೇತಾಳ ಸಹಿತವಾಗಿ ಕೊಲ್ಹಾಪುರಕ್ಕೆ ಹೊರಟಳು. ಮೊದಲು ಕರ್ಹಾಡದಲ್ಲಿ ದುರಿತನನ್ನು ಸಂಹರಿಸಿದಳು. ಕೊಲ್ಹಾಸುರನಿಗೆ ನೀಡಿದ ಶತವರ್ಷದ ಅವಧಿ ಮುಗಿಯುವ ತನಕ ಸಿರಿಯಾಲದಲ್ಲಿದ್ದಳು. ಅಲ್ಲಿ ಕೊಲ್ಹಾಸುರನ ಪುತ್ರಿಯ ಮಗ ದೇವಿಲನನ್ನು ಕೊಂದಳು. ನಂತರ ಕ್ಷೇತ್ರರಕ್ಷಣೆಗಾಗಿ ನಿಯಮಿಸಿದ ನಾಲ್ವರೂ ಭಯಂಕರ ರಾಕ್ಷಸರಾದ ರಕ್ತಾಕ್ಷನನ್ನು ಸಿದ್ಧಬಟುಕರು, ರಕ್ತಭೋಜನನ್ನು ಕೇದಾರನಾಥ, ರತ್ನಾಸುರನನ್ನು ಚರ್ಪಟಾಂಬೆ, ರಕ್ತಬೀಜನನ್ನು ಭೈರವ ಮತ್ತು ಕಾತ್ಯಾಯನಿಯರು ಸಂಹರಿಸಿದರು. ನಂತರ ಕೊಲ್ಹಾಸುರನೊಡನೆ ಯುದ್ಧ ಆರಂಭವಾಯಿತು. ದೇವಿಯ ಎಲ್ಲ ಅಸ್ತ್ರಗಳನ್ನು ಕೊಲ್ಹಾಸುರನು ನುಂಗತೊಡಗಿದ. ಆಗ ರುದ್ರನು ತನ್ನ ಅಸ್ತ್ರದಿಂದ ಅವನನ್ನು ಗಾಯಗೊಳಿಸಿದ ಬ್ರಹ್ಮ, ವಿಷ್ಣು ಇವರೂ ಅಸ್ತ್ರಗಳನ್ನು ಪ್ರಯೋಗಿಸಿದರು. ಆದರೂ ಕೊಲ್ಹಾಸುರನು ಮರಣಹೊಂದಲಿಲ್ಲ. ಆಗ ದೇವಿಯು ಭಯಂಕರ ರೂಪ ತಾಳಿದಳು. ಅಷ್ಟಭುಜಗಳನ್ನು ಧರಿಸಿ, ವಿವಿಧ ಅಸ್ತ್ರಗಳನ್ನು ಹಿಡಿದು, ಸಿಂಹಾರೂಢಳಾಗಿ ಬಂದು ಕೊಲ್ಹಾಸುರನನ್ನು ವಧೆ ಮಾಡಿದಳು. 'ಕೊಲ್ಹಾಸುರನ ಮೃತ್ಯು ಅವನ ತಲೆಯಲ್ಲಿದೆ' ಎಂಬ ಮಾಹಿತಿಯನ್ನು ಜಗದಂಬೆ ಕೊಲ್ಹಾಸುರನ ತಂಗಿಯಿಂದ ಕೇಳಿ ತಿಳಿದಿದ್ದಳು. ಆದ್ದರಿಂದ ಕೊಲ್ಹಾಸುರನು ವಧೆ ಯಶಸ್ವಿಯಾಯಿತು. ಅವನ ಶೌರ್ಯಕ್ಕೆ ಮೆಚ್ಚಿ ರುದ್ರನು ಬೇಕಾದ ವರ ಬೇಡಲು ಕೇಳಿದ. ಆಗ ಕೊಲ್ಹಾಸುರನು 'ದೇವಿ, ಇದೇ ರೂಪದಿಂದ ನೀನು ಸದಾ ನನ್ನ ಹತ್ತಿರ ಇರಬೇಕು. ಈ ಕ್ಷೇತ್ರ ಕೊಲ್ಹಾಪುರ ಹೆಸರಿನಿಂದ ಪ್ರಖ್ಯಾತವಾಗಬೇಕು. ನನ್ನ ಸ್ಮರಣಾರ್ಥ ಇಲ್ಲಿ ಕೂಷ್ಮಾಂಡ ಭೇದನ ಮಾಡಬೇಕು.' ದೇವಿ 'ತಥಾಸ್ತು' ಎಂದು ಖಡ್ಗದಿಂದ ಶಿರಚ್ಛೇದನ ಮಾಡಿದಳು. ಕೊಲ್ಹಾಸುರನ ವಧೆ ಮಾಡಿ ಅಷ್ಟಭುಜಾ ದೇವಿಯು ಲಕ್ಷ್ಮೀತೀರ್ಥದಲ್ಲಿ

ನೆಲೆಸಿದಳು. ಕೃತಯುಗದಲ್ಲಿ ಹರಿದ್ವಾರ, ತ್ರೇತಾಯುಗದಲ್ಲಿ ನೈಮಿಷ ಕ್ಷೇತ್ರ, ದ್ವಾಪರದಲ್ಲಿ ಕುರುಕ್ಷೇತ್ರ, ಕಲಿಯುಗದಲ್ಲಿ ವಾರಾಣಾಸಿ ಕ್ಷೇತ್ರಗಳು ಆ ಯುಗದ ಜನರಿಗೆ ಪುಣ್ಯ ಕೊಡುತ್ತವೆ. ಆದರೆ ಕರವೀರ ಕ್ಷೇತ್ರವು ಈ ನಾಲ್ಕೂ ಯುಗಗಳಲ್ಲಿ ಪುಣ್ಯ ಕೊಡುತ್ತಿರುತ್ತದೆ ಎಂದು ಕೊಲ್ಹಾಪುರ ಕ್ಷೇತ್ರದ ಮಹಿಮೆಯನ್ನು ವರ್ಣಿಸಲಾಗಿದೆ.

ಕೊಲ್ಹಾಪುರ ಶಕ್ತಿಪೀಠ :

'ತಂತ್ರ ಚೂಡಾಮಣಿ' ಗ್ರಂಥದಲ್ಲಿ ಶಕ್ತಿಪೀಠಗಳ ಉತ್ಪತ್ತಿಯ ಬಗೆಗಿನ ಕಥೆಯನ್ನು ಹೀಗೆ ಹೇಳಲಾಗಿದೆ : ಪ್ರಜಾಪತಿ ದಕ್ಷನು ಬೃಹಸ್ಪತಿ ಹೆಸರಿನ ಒಂದು ದೊಡ್ಡ ಯಜ್ಞವನ್ನು ಮಾಡಿದನು. ಆ ಯಜ್ಞಕ್ಕೆ ಸ್ವತಃ ತನ್ನ ಅಳಿಯನಾದ ಶಿವನಿಗೆ ಅಮಂತ್ರಿಸಲಿಲ್ಲ. ಎಲ್ಲ ದೇವತೆಗಳಿಗೆ ಆಮಂತ್ರಣವಿದ್ದರೂ ತನಗೆ ಆಹ್ವಾನಿಸದಿದ್ದುರಿಂದ ಶಿವನಿಗೆ ಕೋಪ ಬಂದಿತು. ಶಿವನಗೆ ಇಚ್ಛೆ ಇರದಿದ್ದರೂ ಪಾರ್ವತಿಯು ತನ್ನ ತಂದೆ ದಕ್ಷನ ಯಜ್ಞ ಸಮಾರಂಭಕ್ಕೆ ಹೋದಳು. ಆದರೂ ದಕ್ಷನು ಶಿವನಿಗೆ ಯಜ್ಞದಲ್ಲಿ ಹವಿರ್ಭಾವ ನೀಡಲಿಲ್ಲ. ಬದಲಾಗಿ ಶಿವನ ನಿಂದೆ ಮಾಡಿದ. ಆಗ ಪಾರ್ವತಿಯು ಕೋಪವನ್ನು ಸಹಿಸಲಾದಳು. ಕೋಪದ ಭರದಲ್ಲಿ ತನ್ನ ದೇಹವನ್ನೇ ಯಜ್ಞಕುಂಡಕ್ಕೆ ಸಮರ್ಪಿಸಿದಳು. ಇದು ತಿಳಿದ ತಕ್ಷಣ ಶಿವನು ಕ್ರೋಧಿತನಾಗಿ ತನ್ನ ಗಣಸಹಿತ ಅಲ್ಲಿಗೆ ಬಂದು ಯಜ್ಞವನ್ನು ವಿಧ್ವಂಸಗೊಳಿಸಿದ. ಯಜ್ಞಕುಂಡದಿಂದ ಪಾರ್ವತಿಯ ಕಳೇಬರವನ್ನು ಎತ್ತಿ ತನ್ನ ಹೆಗಲ ಮೇಲೆ ಹೊತ್ತುಕೊಂಡು ಭ್ರಮಿಸತೊಡಗಿದನು. ಅದರೆ ವಿಷ್ಣುವು ಶಿವನ ಭ್ರಮಣದಿಂದ ಏನಾದರೂ ಅನರ್ಥವಾಗಬಹುದೆಂದು ಹೆದರಿ ತನ್ನ ಸುದರ್ಶನ ಚಕ್ರದಿಂದ ಆ ಕಳೇಬರವನ್ನು ತುಂಡರಿಸಿದನು. ಆಗ ದೇವಿಯ ದೇಹದ ಅಂಗಗಳು ಐವತ್ತೊಂದು ತುಂಡುಗಳಾಗಿ ಪೃಥ್ವಿಯ ಮೇಲೆ ಬಿದ್ದವು. ಯಾವ ಯಾವ ಸ್ಥಳದಲ್ಲಿ ಅವು ಬಿದ್ದವೋ, ಅವು ದೇವಿಯ ಐವತ್ತೊಂದು ಶಕ್ತಿಪೀಠಗಳಾದವು. ತಂತ್ರ ಚೂಡಾಮಣಿಯಲ್ಲಿ ಆ ಶಕ್ತಿಪೀಠಗಳ ಹೆಸರುಗಳನ್ನೂ ಉಲ್ಲೇಖಿಸಲಾಗಿದೆ. ಆದರೆ ದೇವಿಭಾಗವತದಲ್ಲಿ ನೂರಾಎಂಟು ಶಕ್ತಿಪೀಠಗಳೆಂದು ಹೇಳಲಾಗಿದೆ. ಆದರೆ ೫೧ ಶಕ್ತಿಪೀಠಗಳ ಗಣನೆಯು ಸರ್ವ ಮಾನ್ಯವಾಗಿದೆ. ಮಹಾರಾಷ್ಟ್ರದಲ್ಲಿ ಆದಿಶಕ್ತಿಯ ಪೀಠಗಳನ್ನು ಅಧಿಕ ಮಹತ್ವದ್ದೆಂದು ಪರಿಗಣಿಸುತ್ತಾರೆ. ಇದರಲ್ಲಿಯ ಕರವೀರ ಪೀಠವು ೫೧ ಮತ್ತು ೧೦೮ ಶಕ್ತಿಪೀಠಗಳ ಗಣನೆಯಲ್ಲಿಯೂ ಸಮಾವಿಷ್ಟವಾಗಿದೆ. ಆದ್ದರಿಂದಲೇ ಕರವೀರ ಪೀಠಕ್ಕೆ ಹೆಚ್ಚು ಮಹತ್ವವಿದೆ. ಇಲ್ಲಿ ದೇವಿಯು ತ್ರಿರೂಪಾತ್ಮಕಳಾಗಿ, ತ್ರಿಗುಣಾತ್ಮಕಳಾಗಿ ನೆಲೆಸಿದ್ದಾಳೆ. ಅದ್ದರಿಂದ ಇಲ್ಲಿ ಮಹಾಲಕ್ಷ್ಮಿ, ಮಹಾಸರಸ್ವತಿ ಮತ್ತು ಮಹಾಕಾಳಿ ಈ ಮೂರೂ ರೂಪಗಳು ಮಹತ್ವ ಪಡೆದುಕೊಂಡಿದೆ.

ದೇವಿ ಭಾಗವತದ ೭ನೆಯ ಸ್ಕಂದದಲ್ಲಿಯ ೩೮ ನೆಯ ಅಧ್ಯಾಯದಲ್ಲಿ ಶಕ್ತಿಪೀಠಗಳ ಉಲ್ಲೇಖವಿದೆ.

ಭವಿಷ್ಯೋತ್ತರ ಪುರಾಣದ ವಿವರಣೆ :

ಭವಿಷ್ಯೋತ್ತರ ಪುರಾಣವು ವಿಷ್ಣು ಪ್ರಧಾನವಾಗಿರುವುದರಿಂದ ಕೊಲ್ಹಾಪುರದ ದೇವಿಯನ್ನು ವಿಷ್ಣುವಿನ ಪತ್ನಿ ಲಕ್ಷ್ಮಿ ಎಂದು ಪರಿಗಣಿಸಲಾಗಿದೆ. ಈ ಪುರಾಣದಲ್ಲಿ ವರ್ಣಿತವಾದ ಕಥೆ ಹೀಗಿದೆ :

ಋಷಿ ಮುನಿಗಳು ಸೇರಿ ಗಂಗಾ ತೀರದಲ್ಲಿ ಒಂದು ದೊಡ್ಡ ಯಜ್ಞವನ್ನು ನಡೆಸುತ್ತಿದ್ದರು. ಆಗ ಅಲ್ಲಿ ನಾರದನು ಬಂದನು. ಅವರೆಲ್ಲ ನಾರದನಿಗೆ ಸತ್ಕರಿಸಿದರು. ನಾರದನು ಋಷಿಗಳು ನಡೆಸುತ್ತಿದ್ದ ಯಜ್ಞೆ ಬಗ್ಗೆ ವಿಚಾರಿಸಿದನು. ನೀವು ಇಂತಹ ಮಹಾಯಜ್ಞವನ್ನು ಏತಕ್ಕಾಗಿ ಮಾಡುತ್ತಿದ್ದೀರಿ? ಈ ಯಜ್ಞಕ್ಕೆ ಮುಖ್ಯ ದೇವತೆ ಯಾರು? ಇದರ ಅಧ್ವರ್ಯು ಯಾರು? ಈ ಯಜ್ಞಕ್ಕೆ ಫಲ ಕೊಡುವ ದೇವತೆ ಯಾರು? ಎಂದೆಲ್ಲ ವಿಚಾರಿಸಿದಾಗ ಋಷಿ ಮುನಿಗಳಲ್ಲಿ ಗೊಂದಲ ಉಂಟಾಯಿತು. ನಂತರ ಬ್ರಹ್ಮ, ವಿಷ್ಣು, ಮಹೇಶರಲ್ಲಿ ಯಾರನ್ನು ಸರ್ವೋತ್ತಮನೆಂದು ತಿಳಿಯುವುದು? ಈ ಮೂವರನ್ನು ಪ್ರತ್ಯಕ್ಷವಾಗಿ ಕಂಡು ತಿಳಿಯಬೇಕೆಂದು ನಿಶ್ಚಯಿಸಿದರು. ಈ ಕೆಲಸವನ್ನು ಭೃಗು ಋಷಿಗಳಿಗೆ ಒಪ್ಪಿಸಿದರು.

ಭೃಗುವು ಯಜ್ಞಕಾರ್ಯಕ್ಕಾಗಿ ಸರ್ವೋತ್ತಮನ ಶೋಧ ಮಾಡಲು ಮೊದಲು ಬ್ರಹ್ಮನ ಬಳಿಗೆ ಹೋದನು. ಬ್ರಹ್ಮನಲ್ಲಿ ಹೋದಾಗ ಬ್ರಹ್ಮದೇವನು ಸರಸ್ವತಿ ಸಹಿತವಾಗಿ ಸಿಂಹಾಸನದ ಮೇಲೆ ಕುಳಿತು ದೇವ ಋಷಿ, ಬ್ರಹ್ಮ ಋಷಿ, ರಾಜ ಋಷಿಗಳೊಡನೆ ಸಭೆ ನಡೆಸುತ್ತಿದ್ದ. ಭೃಗು ಋಷಿಯು ಸಭೆಗೆ ಪ್ರವೇಶಿಸಿದನು. ಭೃಗುವಿನ ನಿರ್ಲಕ್ಷತನದ ಪ್ರವೃತ್ತಿಯು ಬ್ರಹ್ಮನಿಗೆ ಅವಮಾನವಾಗಿ ತೋರಿತು. ಸಭಾ ಮರ್ಯಾದೆಯನ್ನು ತಿಳಿಯದ ಮೂರ್ಖನೆಂದು ಭೃಗುವಿಗೆ ಬ್ರಹ್ಮನು ಬೈದು ಕಳಿಸಿದನು. ಅದಕ್ಕೆ ಭೃಗುವು ಬ್ರಹ್ಮನು ರಾಜಸ ಗುಣದವನಾಗಿದ್ದಾನೆ. ಇವನು ಯಜ್ಞಫಲ ಸ್ವೀಕರಿಸಲು ಅಯೋಗ್ಯನಾಗಿ ದ್ದಾನೆಂದು ತಿಳಿದನು. ಬ್ರಹ್ಮನನ್ನು ಕುರಿತು 'ನಿನಗೆ ಪೂಜೆಯಿಲ್ಲದಂತಾಗಲಿ' ಎಂದು ಶಪಿಸಿ ಭೃಗು ಕೈಲಾಸಕ್ಕೆ ಹೊರಟನು.

ಕೈಲಾಸದಲ್ಲಿ ಶಿವನು ಪಾರ್ವತಿಯೊಡನೆ ಏಕಾಂತದಲ್ಲಿದ್ದನು. ಭೃಗುವು ದ್ವಾರಪಾಲಕನನ್ನು ಅಲಕ್ಷಿಸಿ ಒಳಗೆ ಬಂದನು. ಭೃಗುವನ್ನು ನೋಡಿ ಶಂಕರನು ರೌದ್ರವತಾರ ತಾಳಿದನು. ಧರ್ಮ – ಅಧರ್ಮಗಳನ್ನು ತಿಳಿದುಕೊಂಡವನಾಗಿಯೂ ಮರ್ಯಾದೆ ತಿಳಿಯದೆ ಹೋದುದು ನಾಚಿಕೆಯಲ್ಲವೆ? ಎಂದು ತ್ರಿಶೂಲವನ್ನೇ ಎತ್ತಿದ. ಆದರೆ ಪಾರ್ವತಿ ತಡೆದಳು.

ಭೃಗುವು ಕೋಪಗೊಂಡು ನಿನಗೆ ಭೂಲೋಕದ ದೇವಾಲಯಗಳಲ್ಲಿ ರೂಪ ಇಲ್ಲದೆ ಕೇವಲ ಲಿಂಗರೂಪಿಯಾಗಿರು ಎಂದು ಶಪಿಸಿ ಕೈಲಾಸದಿಂದ ವೈಕುಂಠಕ್ಕೆ ಬಂದನು.

ರಜೋಗುಣ, ತಮೋಗುಣ ಪರೀಕ್ಷಿಸಿ ಆಯಿತು. ವೈಕುಂಠದಲ್ಲಿ ವಿಷ್ಣು ಶೇಷತಲ್ಪದ ಮೇಲೆ ಮಲಗಿದ್ದ. ಲಕ್ಷ್ಮಿ ತನ್ನ ಹಸ್ತಗಳಿಂದ ವಿಷ್ಣುವಿನ ಪಾದಗಳನ್ನು ಒತ್ತುತ್ತಿದ್ದಳು. ಭೃಗು ಋಷಿಯ ಆಗಮನವನ್ನು ತಿಳಿದೂ ತಿಳಿಯದಂತೆ ವಿಷ್ಣು ನಟಿಸಿದ. ಭೃಗು ಮುನಿಯು ರಭಸದಿಂದ ಬಂದು ತನ್ನ ಬಲಗಾಲಿನಿಂದ ವಿಷ್ಣುವಿನ ಎದೆಗೆ ಒದ್ದನು. ಲಕ್ಷ್ಮಿ ಬೆರಗಾಗಿ ನೋಡಿದಳು. ಆದರೆ ವಿಷ್ಣುವು ಮಾತ್ರ ಶಾಂತ ಚಿತ್ತದಿಂದ, 'ನಿಮ್ಮ ಆಗಮನದಿಂದ ವೈಕುಂಠವು ಪಾವನಗೊಂಡಿತು. ಮುನೀಶ್ವರಾ, ನಾನು ಧರಿಸಿದ ಆಭರಣಗಳು ನಿಮ್ಮ ಪಾದುಕ್ಕೆ ತಗಲಿದ ಪಾದಗಳಿಗೆ ನೋವಾಯಿತೇ?' ಎಂದು ಮುನಿಯ ಪಾದಗಳನ್ನು ಒತ್ತಿ 'ನೀವು ಬಂದ ಕಾರಣ ವಿವರಿಸಿರಿ' ಎಂದು ಕೇಳಿದ. ಆಗ ಭೃಗುವು 'ನಮ್ಮ ಯಜ್ಞ ಫಲವನ್ನು ಸ್ವೀಕರಿಸಲು ತಾವು ಅರ್ಹರು. ನೀವು ಯಜ್ಞಕಾರ್ಯಕ್ಕೆ ಬರಬೇಕು' ಎಂದು ಆಹ್ವಾನಿಸಿ ಭೃಗು ಹೊರಟು ಹೋದನು.

ಆದರೆ ಲಕ್ಷ್ಮಿಯು ನಾರಾಯಣನ ಮೇಲೆ ಕೋಪಿಸಿಕೊಂಡಳು. 'ಸ್ವಾಮಿ, ನಿಮ್ಮ ಎದೆಯು ನನ್ನ ವಾಸಸ್ಥಾನವೆಂದು ತಿಳಿದಿರುವಿರಿ. ನನ್ನ ನಿವಾಸದಮೇಲೆ ಒದ್ದರೂ ಸಹ ನೀವು ಅವನನ್ನು ಪ್ರೀತಿಸಿದಿರಿ. ನನ್ನನ್ನು ಅವಮಾನಗೊಳಿಸಿದಿರಿ. ಎಲ್ಲ ಲೋಕದ ಒಡೆಯನಾದ ನೀವು ಒಬ್ಬ ಮುನಿಯು ಕಾಲಿನಿಂದ ಒದ್ದುದನ್ನು ಸಹಿಸದಿರಿ. ನಾನು ಈ ಅವಮಾನ ಸಹಿಸಲಾರೆ. ಆ ಮುನಿಯನ್ನು ಶಿಕ್ಷಿಸದೆ ಬಿಡುವುದಿಲ್ಲ ಎಂದು ಹೇಳಿ ಪತಿಯ ಮೇಲೆ ಕೋಪಿಸಿಕೊಂಡು ಭೂಲೋಕಕ್ಕೆ ಬಂದು ಕೊಲ್ಹಾಪುರದಲ್ಲಿ ನೆಲೆಸಿ ತಪಸ್ಸು ಆಚರಿಸತೊಡಗಿದಳು. ವಿಷ್ಣುವು ವಿರಹವನ್ನು ತಾಳಲಾರದೆ ಲಕ್ಷ್ಮಿಯನ್ನು ಅರಸುತ್ತ ಭೂಲೋಕಕ್ಕೆ ಬಂದನು. ನಂತರ ತಿರುಮಲೈ ಬೆಟ್ಟದಲ್ಲಿ ಬಂದು ನೆಲೆಸಿದನು. ಇದು ಭವಿಷ್ಯೋತ್ತರ ಪುರಾಣದ ಕಥೆಯಾಗಿದೆ. ನಂತರ ತಿರುಪತಿಯಲ್ಲಿ ಪದ್ಮಾವತಿಯೊಡನೆ ವಿಷ್ಣುವಿನ ಮದುವೆಯಾಯಿತು. ಲಕ್ಷ್ಮಿ ಮತ್ತು ವೆಂಕಟೇಶರ ಭೇಟಿಯಾಗಿ ಮತ್ತೆ 'ವೆಂಕಟೇಶ ಪಾರಿಜಾತ' ಗಳಲ್ಲಿ ವರ್ಣಿಸಲಾಗಿದೆ. ಇಲ್ಲಿ ಲಕ್ಷ್ಮಿ ಎಂದರೆ ವಿಷ್ಣುವಿನ ಪತ್ನಿಯಾಗಿದ್ದಾಳೆ. ವೈಷ್ಣವರ ಲಕ್ಷ್ಮಿಯೆಂದು ಭಾವಿಸಿದ್ದರಿಂದ ಈ ಕಥೆಯನ್ನು ನಂಬುತ್ತಾರೆ. ಈ ರೀತಿಯಾಗಿ ಕೊಲ್ಹಾಪುರದ ಮಹಾಲಕ್ಷ್ಮಿಯು ಪಾರ್ವತಿಯಾಗಿ, ವಿಷ್ಣುವಿನ ಪತ್ನಿಯಾಗಿ, ಶಕ್ತಿದೇವತೆಯಾಗಿ ಪೌರಾಣಿಕ ಕಥೆಗಳಲ್ಲಿ ವರ್ಣಿಸಲ್ಪಟ್ಟಿದ್ದಾಳೆ.

ಮಹಾಲಕ್ಷ್ಮಿಯ ನಿತ್ಯ – ನೈಮಿತ್ತಿಕ ಆಚರಣೆಗಳು :

ಕೊಲ್ಹಾಪುರದ ಶ್ರೀಮಹಾಲಕ್ಷ್ಮಿ ದೇವಿಗೆ ಪ್ರತಿನಿತ್ಯವೂ ಐದು ಸಲ ಪೂಜಾ ಕಾರ್ಯಗಳು ನೆರವೇರುತ್ತವೆ. ಅವು ಈ ರೀತಿಯಾಗಿವೆ :

೧. ಕಾಕಡಾರತಿ (ಕಕ್ಕಡಾರತಿ) ಅಥವಾ ಸುಪ್ರಭಾತ ಆರತಿ.

೨. ಮಹಾಪೂಜೆ

೩. ಅಲಂಕಾರ ಪೂಜೆ

೪. ಪಂಚೋಪಚಾರ ಪೂಜೆ

೫. ಶಯನಾರತಿ

ಕಾಕಡಾರತಿ :

ಮಹಾಲಕ್ಷ್ಮಿಯ ದಿನನಿತ್ಯದ ಪೂಜೋಪಚಾರಗಳು ಬೆಳಿಗ್ಗೆ ೪ ಗಂಟೆಗೆ ಘಂಟಾನಾದದೊಂದಿಗೆ ಪ್ರಾರಂಭವಾಗುತ್ತವೆ. ಘಂಟಾನಾದವಾಗುತ್ತಿದ್ದಂತೆಯೇ ದೇವಸ್ಥಾನದ ಕಾವಲುಗಾರನು ದೇವಾಲಯದ ಮಹಾ ದ್ವಾರವನ್ನು ತೆರೆಯುತ್ತಾನೆ. ನಂತರ ಅರ್ಚಕರು ದೇವಾಲಯದಲ್ಲಿ ಪ್ರವೇಶ ಮಾಡಿ ಗರ್ಭಗೃಹದ ಬಾಗಿಲನ್ನು ತೆರೆಯುತ್ತಾರೆ. ಅರ್ಚಕರು ದೇವಿಯ ನಿರ್ಮಾಲ್ಯವನ್ನು ತೆಗೆಯುತ್ತಾರೆ. ದೇವಿಯ ಪಾದುಕೆಗಳಿಗೆ ದುಗ್ಧಾಭಿಷೇಕ ಮಾಡುತ್ತಾರೆ. ಗಂಧ, ಪುಷ್ಪಾದಿಗಳಿಂದ ಪಂಚೋಪಚಾರ ಪೂಜೆಯಾಗುತ್ತದೆ. ದೇವಿಗೆ ಬೆಣ್ಣೆ ಸಕ್ಕರೆ ನೈವೇದ್ಯ ತೋರಿಸಿ ಕಕ್ಕಡಾರತಿ ಮಾಡಲಾಗುತ್ತದೆ. ಇದೇ ವೇಳೆಗೆ ಮಹಾಕಾಳಿ, ಮಹಾಸರಸ್ವತಿಯರಿಗೂ ಇದೇ ರೀತಿ ಪೂಜೆಯಾಗುತ್ತದೆ ಭಕ್ತ ಮಂಡಳಿಯು ದೇವಿಯ ಸುಪ್ರಭಾತವನ್ನು ಹಾಡುತ್ತಾರೆ.

"ಉಠಿ ಉಠಿ ಹೋ ಮಾಯ ಭವಾನಿ ಅಂಬೆ ಕೊಲ್ಲಾಸುರ ಮರ್ದಿನಿ ।
ಉಠಿ ಆದಿಮಾತೆ ದೇಯಿ ದರ್ಶನ ಭಕ್ತಾಂತೆ । ದೇಯಿ ದರ್ಶನ ದಾಸಾಂತೆ ।
ಝೂಲಾ ಅರುಣೋದಯ ಆತಾ ಸೋಡಿ ನಿದ್ರೇತೆ । (ಅದೇ ಪು.೨೨)

ಮಹಾಪೂಜೆ : ಎರಡನೆಯ ಪೂಜೆ ೮.೩೦ ಕ್ಕೆ ಘಂಟಾನಾದದೊಂದಿಗೆ ಪ್ರಾರಂಭವಾಗುತ್ತದೆ. ಅರ್ಚಕರು ದೇವಿಯ ಮೇಲಿನ ವಸ್ತ್ರ, ನಿರ್ಮಾಲ್ಯಗಳನ್ನು ತೆಗೆದು ತೈಲದಿಂದ ಮರ್ಜನ ಮಾಡಿ ಬಿಸಿ ನೀರಿನ ಸ್ನಾನ ಮಾಡಿಸುತ್ತಾರೆ. ನಂತರ ಪಂಚಾಮೃತ ಅಭಿಷೇಕ. ಆದರೆ ದೇವಿಯ ಮೂರ್ತಿ ಸವೆದಿರುವುದಿಂದ ಮೂರ್ತಿಗೆ ಅಭಿಷೇಕ ಮಾಡುವುದನ್ನು ಈಗ ನಿಲ್ಲಿಸಿದ್ದಾರೆ. ಕೇವಲ ಪಾದುಕೆಗಳಿಗೆ ಅಭಿಷೇಕ ಹಾಕಿ ಸಂಪೂರ್ಣ

ಮೂರ್ತಿಯನ್ನು ವಸ್ತ್ರದಿಂದ ಒರೆಸುತ್ತಾರೆ. ಹಣೆಗೆ ಅಗಲವಾದ ಕುಂಕುಮ ಹಚ್ಚಿ, ಹೊಸ ಸೀರೆ ಉಡಿಸುತ್ತಾರೆ. ಪುಷ್ಪ, ಹಾರಗಳಿಂದ ಷೋಡಶೋಪಚಾರದಿಂದ ಮಹಾಪೂಜೆಯಾಗುತ್ತದೆ. ಖೀರಿನ ನೈವೇದ್ಯ ತೋರಿಸಿದ ನಂತರ ಪಂಚಾರತಿ ಮಾಡುತ್ತಾರೆ. ಶಂಖ ತೀರ್ಥದ ಪ್ರೋಕ್ಷಾಳಣೆಯ ನಂತರ ಮಹಾಪೂಜೆಯ ಕಾರ್ಯಕ್ರಮ ಮುಗಿಯುತ್ತದೆ.

ಬೆಳಿಗ್ಗೆ ೧೧.೩೦ ಗಂಟೆಗೆ ಮತ್ತೆ ಘಂಟಾನಾದ, ನಂತರ ಮಹಾಲಕ್ಷ್ಮಿಯ ಮಧ್ಯಾಹ್ನದ ಮಹಾಪೂಜೆಯು ಪ್ರಾರಂಭವಾಗುತ್ತದೆ. ಈ ವೇಳೆಗೆ ಅಭಿಷೇಕ ಕೇವಲ ಪಾದುಕೆಗಳಿಗೆ ನಡೆಯುವುದರಿಂದ ಇದಕ್ಕೆ ಪಾದ್ಯಪೂಜಾ ಎಂಬ ಹೆಸರಿದೆ. ಬೆಳಗಿನದು ಉಪಹಾರ ನೈವೇದ್ಯವಾಗಿದ್ದರೆ, ಈ ವೇಳೆಗೆ ಊಟದ ನೈವೇದ್ಯವಿರುವುದರಿಂದ ಇದಕ್ಕೆ ಮಹಾ ನೈವೇದ್ಯವೆನ್ನುತ್ತಾರೆ. ನೈವೇದ್ಯದಲ್ಲಿ ಹೂರಣದ ಹೋಳಿಗೆಯ ಪಕ್ವಾನ್ನವಿರುತ್ತದೆ. ಬೆಳಗಿನಂತೆಯೇ ಪಂಚಾರತಿ, ಕರ್ಪೂರದಾರತಿಯಾಗಿ ಶಂಖ ತೀರ್ಥದ ಪ್ರೋಕ್ಷಣೆಯಾದ ಮೇಲೆ ಈ ಪೂಜೆ ಮುಕ್ತಾಯಗೊಳ್ಳುತ್ತದೆ.

ಅಲಂಕಾರ ಪೂಜೆ :

ಮಧ್ಯಾಹ್ನದ ಮಹಾಪೂಜೆಯ ನಂತರ ಮಧ್ಯಾಹ್ನ ೨ ಗಂಟೆಗೆ ಅಲಂಕಾರ ಪೂಜೆ ಪ್ರಾರಂಭವಾಗುತ್ತದೆ. ಈಗಲೂ ಘಂಟಾನಾದವಾಗುತ್ತದೆ. ಈ ಅಲಂಕಾರ ಪೂಜೆಯು ಕೆಲವೊಂದು ಅರ್ಚಕರ ಮನೆತನಗಳಿಗೆ ಪರಂಪರಾನುಗತವಾಗಿ ದೊರೆತ ಹಕ್ಕಿನ ಕಾರ್ಯವಾಗಿವೆ. ಪ್ರತಿಯೊಂದು ವಾರ ಒಂದೊಂದು ಮನೆತನದ ಅರ್ಚಕರಿಗೆ ದೇವಿಯ ಅಲಂಕಾರ ಮಾಡುವ ಹಕ್ಕು ಇರುತ್ತದೆ. ಅಲಂಕಾರ ಮಾಡುವ ಹಕ್ಕು ಇರುವ ಅರ್ಚಕರು ತಮ್ಮ ಪಾಳಿಯ ಪ್ರಕಾರ ಆಡಳಿತ ಮಂಡಳಿಯಿಂದ ದೇವಿಯ ಆಭರಣಗಳನ್ನು ಪಡೆದು ದೇವಿಗೆ ಅಲಂಕರಿಸುತ್ತಾರೆ. ಮತ್ತೆ ರಾತ್ರಿ ಪೂಜೆ ಮುಗಿದ ನಂತರ ಎಲ್ಲ ಆಭರಣಗಳನ್ನು ಆಡಳಿತ ಮಂಡಳಿಗೆ ಒಪ್ಪಿಸಬೇಕಾಗುತ್ತದೆ. ದೇವಿಯ ಖಜಾನೆಯಿಂದ ಆಭರಣಗಳನ್ನು ಪಡೆಯುವುದಕ್ಕೆ 'ಜಾಪ್ತಾ ಘೇಣೆ' ಮತ್ತು ಆಭರಣಗಳನ್ನು ಹಿಂತಿರುಗಿಸುವುದಕ್ಕೆ 'ಜಾಪ್ತಾ ದೇಣೆ' ಎಂದು ಹೆಸರಿದೆ. ದಿನನಿತ್ಯದ ೬ ಗಜ ಅಥವಾ ೯ ಗಜ ಸೀರೆ ಉಡಿಸುತ್ತಾರೆ. ರತ್ನಜಡಿತ ಮುಕುಟ, ಕರ್ಣ ಕುಂಡಲಗಳು, ನತ್ತು, ಸರಗಳು, ಬಂಗಾರದ ಬಳೆಗಳು, ಇವು ದಿನನಿತ್ಯದ ಅಲಂಕಾರದ ಆಭರಣಗಳು. 'ಮುನೇಶ್ವರ', 'ಠಾಣೆಕರ', 'ಚೌಧುರಿ', ಈ ಮನೆತನದವರು ಅಲಂಕಾರ ಕಾರ್ಯದಲ್ಲಿ ಪಾರಂಗತರಾಗಿದ್ದಾರೆ. ಅಲಂಕಾರ ಪೂಜೆಯ ನಂತರ ಗರ್ಭ ಗುಡಿಯಲ್ಲಿ ಯಾರಿಗೂ ಪ್ರವೇಶವಿರುವುದಿಲ್ಲ. ಈ ಪೂಜೆಯಲ್ಲಿ ದೇವಿಯ ಮುಖ ಒರೆಸಿ,

ಕುಂಕುಮವನ್ನು ತಿದ್ದಿ, ಜರಿಯ ಸೀರೆ ಉಡಿಸಿ, ಬಂಗಾರದ ಒಡವೆಗಳನ್ನು ಹಾಕುತ್ತಾರೆ. ದಿನನಿತ್ಯ ಕೇವಲ ಬಂಗಾರದ ಒಡವೆ ಹಾಕುತ್ತಾರೆ. ನವರಾತ್ರಿ ಮೊದಲಾದ ಹಬ್ಬಗಳಲ್ಲಿ ರತ್ನಜಡಿತ ಆಭರಣಗಳನ್ನು ತೊಡಿಸುತ್ತಾರೆ. ಹಾಗೂ ಕವಡಿಯ ಸರವೂ ದೇವಿಯ ಒಂದು ಮಹತ್ವದ ಆಭರಣವಾಗಿದೆ. ಮಹಾಲಕ್ಷ್ಮಿಯು ಶಿವಶಕ್ತಿಯಾಗಿದ್ದರೂ ಸೌಮ್ಯವಾಗಿದ್ದಾಳೆ. ಅವಳು ಬೆಳಿಗ್ಗೆ ಬಾಲೆಯಾಗಿ, ಮಧ್ಯಾಹ್ನ ತರುಣಿಯಾಗಿ, ಸಾಯಂಕಾಲ ಪ್ರೌಢೆಯಾಗಿ, ರಾತ್ರಿ ಮಾತೆಯಂತೆ ರೂಪ ಧಾರಣೆಮಾಡುತ್ತಾಳೆ ಎಂಬುದು ಭಕ್ತರ ಶ್ರದ್ಧೆಯಾಗಿದೆ.

ಪಂಚೋಪಚಾರ ಪೂಜೆ :

ಸಾಯಂಕಾಲ ಸೂರ್ಯಾಸ್ತದ ನಂತರ ಪಂಚೋಪಚಾರ ಪೂಜೆ ಇರುತ್ತದೆ. ಮತ್ತೆ ಘಂಟಾನಾದವಾಗುತ್ತದೆ. ಏಕಾರತಿ, ಪಂಚಾರತಿ, ನೈವೇದ್ಯ, ಧೂಪಾರತಿಯಾಗುತ್ತದೆ. ರಾತ್ರಿ ಮೊಸರವಲಕ್ಕಿ, ಕರುಚಿಕಾಯಿ, ಉಂಡಿಗಳ ನೈವೇದ್ಯವಿರುತ್ತದೆ. ನಂತರ ಪುನಃ ಶಂಖ ತೀರ್ಥದ ಪ್ರೋಕ್ಷಣೆಯ ವಿಧಿ ಇರುತ್ತದೆ. ಸಾಮೂಹಿಕವಾಗಿ ಮಂತ್ರ ಪುಷ್ಪ, ಶ್ರೀ ಸೂಕ್ತ, ಹೇಳುತ್ತಾರೆ. ಯಾರಾದರೂ ಹರಕೆಯ ಗೊಂದಲ ಹಾಕುವವರಿದ್ದರೆ ಇದೇ ವೇಳೆಯಲ್ಲಿ ಹಾಕುತ್ತಾರೆ. ಆರತಿ ಆರಂಭಿಸಿದಾಗ ಗೊಂದಲದ ವಿಧಿಯನ್ನು ಪ್ರಾರಂಭಿಸುತ್ತಾರೆ. ಶಂಖ ತೀರ್ಥದ ಪ್ರೋಕ್ಷಣೆಯ ತನಕ ಗೊಂದಲ ಪೂಜೆಯ ವಿಧಿಯು ಮುಕ್ತಾಯಗೊಳ್ಳುತ್ತದೆ. ಆರತಿಯ ನಂತರ ಅಲಂಕಾರದ ಮಹಾವಸ್ತ್ರ ತೆಗೆದು, ಎಲ್ಲ ಆಭರಣಗಳನ್ನು ತೆಗೆದು ಖಜಾನೆದಾರರಿಗೆ ಎಲ್ಲವನ್ನೂ ಒಪ್ಪಿಸುತ್ತಾರೆ.

ಶಯನಾರತಿ :

ರಾತ್ರಿ ಸುಮಾರು ೧೦ ಗಂಟೆಗೆ ಶಯನಾರತಿ, ಮತ್ತೆ ಘಂಟಾನಾದವಾಗುತ್ತದೆ. ದೇವಿಗೆ ಶಯನಾರತಿ ಮಾಡಿ ನಂತರ ಹಾಲು ಸಕ್ಕರೆ ನೈವೇದ್ಯ ತೋರಿಸುತ್ತಾರೆ. ಆರತಿಯ ನಂತರ ಜೋಗುಳ ಹೇಳಿದ ಮೇಲೆ, ಸಕ್ಕರೆ ಬೆರೆಸಿದ ಹಾಲನ್ನು ಪ್ರಸಾದವೆಂದು ಕರೆಯುತ್ತಾರೆ. ನಂತರ ಗರ್ಭಗುಡಿಯ ಬಾಗಿಲನ್ನು ಮುಚ್ಚಿ ಬೀಗ ಹಾಕಲಾಗುತ್ತದೆ. ಶಯನಾರತಿಯೊಂದಿಗೆ ದಿನನಿತ್ಯದ ಕಾರ್ಯಕ್ರಮ ಸಮಾಪ್ತಿಯಾಗುತ್ತದೆ. ಹೀಗೆ ದಿವಸಕ್ಕೆ ಐದು ಸಲ ಘಂಟಾನಾದ. ಆರತಿ, ಪೂಜೆ, ನೈವೇದ್ಯಗಳು ಆಗುತ್ತವೆ. ಇವು ದಿನನಿತ್ಯದ ಪೂಜೆ ಆಚರಣೆಯಾಗಿದ್ದು ಇವು ನಿತ್ಯವೂ ಆಚರಿಸಲ್ಪಡುತ್ತವೆ. ಹಬ್ಬದ ನಿಮಿತ್ತವಾಗಿ ಅಥವಾ ಯಾವುದೇ ನಿಮಿತ್ತಕ್ಕಾಗಿ ಆಚರಿಸುವ ಆಚರಣೆಗಳನ್ನು ನೈಮಿತ್ತಿಕ ಆಚರಣೆಗಳೆಂದು ಕರೆಯುತ್ತಾರೆ. ನೈಮಿತ್ತಿಕ ಆಚರಣೆಗಳು ಹೀಗಿವೆ:

ಶುಕ್ರವಾರದ ನೈಮಿತ್ತಿಕ ಆಚರಣೆಗಳು :

ಶುಕ್ರವಾರದ ಮಹಾಲಕ್ಷ್ಮಿಯ ಉಪಾಸನೆಯಲ್ಲಿ ಮಹತ್ವದ ದಿನ. ಅಂದು ದೇವಿಯ ಉಪಾಸಕರು ಉಪವಾಸದ ವೃತ ಆಚರಿಸುತ್ತಾರೆ. ಅಂದು ಬೆಳಿಗ್ಗೆ ಕಾಕಡಾರತಿ, ಬೆಳಗಿನ ಆರತಿ, ಮಧ್ಯಾಹ್ನದ ಆರತಿ ಎಲ್ಲವೂ ಎಂದಿನಂತೆಯೇ ಇರುತ್ತವೆ. ಆದರೆ ಅಂದು ಮಹಾಪೂಜೆಯಲ್ಲಿ ದೇವಿಯ ನೈವೇದ್ಯಕ್ಕೆ ಹೂರಣದ ಹೋಳಿಗೆ ಇಂದೇ ಖೀರಿನ ನೈವೇದ್ಯ ಇರುತ್ತದೆ. ಇಂದು ೧೦ ಗಂಟೆಯ ಪೂಜೆಯಲ್ಲಿ ಹೋಳಿಗೆ ನೈವೇದ್ಯವಿರುತ್ತದೆ. ಶುಕ್ರವಾರ ಪಲ್ಲಕ್ಕಿಯ ಉತ್ಸವಿರುತ್ತದೆ. ಪಲ್ಲಕ್ಕಿಯಲ್ಲಿ ದೇವಿಯ ಉತ್ಸವ ಮೂರ್ತಿಯಿಟ್ಟು ಮಂದಿರದ ಸುತ್ತ ಪ್ರದಕ್ಷಿಣೆ ಹಾಕುತ್ತಾರೆ. ಚೋಪದಾರರು ಶ್ರೀ'ಮಹಾಲಕ್ಷ್ಮಿ'ಎಂದು ಜಯಘೋಷ ಕೊಟ್ಟ ನಂತರ ಪಲ್ಲಕ್ಕಿ ಹೊರಡುತ್ತದೆ. ತೋಫು ಹಾರಿಸಿದ ನಂತರ ಮೊದಲ ಪಂಚಾರತಿ ಆಗುತ್ತದೆ. ನಂತರ ಉತ್ಸವಮೂರ್ತಿಯನ್ನು ಒಳಗೆ ಒಯ್ಯುತ್ತಾರೆ. ಮಂತ್ರಪುಷ್ಪ ಹೇಳಿ ಶಂಖತೀರ್ಥ ಸಿಂಪಡಿಸಿದ ನಂತರ ಕಾರ್ಯಕ್ರಮ ಮುಗಿಯುತ್ತದೆ. ಶುಕ್ರವಾರದ ದೇವಿಯ ಪ್ರಸಾದವೆಂದರೆ, ಹುರಿಗಡಲೆ ಮತ್ತು ಪೇಢ ಹಂಚುವ ಪದ್ಧತಿಯಿದೆ. ದೇವಿಗೆ ಉಡಿ ತುಂಬಲು ಪೇಢೆ, ಹುರಿಗಡಲಿ, ತೆಂಗಿನಖಐಈ, ಹಸಿರುಖಣ, ಹಸಿರುಸೀರೆ, ಹಸಿರುಬಳೆ, ಅರಿಶಿಣ ಮತ್ತು ಕುಂಕುಮ ಇರುತ್ತವೆ. ಇವು ಸೌಭಾಗ್ಯದ ವಸ್ತುಗಳೆಂದು ಮಹತ್ವ ಪಡೆದಿವೆ. ಶುಕ್ರವಾರ ಉಡಿ ತುಂಬುವುದು ಅಧಿಕ ಪುಣ್ಯವೆಂದು ಭಕ್ತರು ಭಾವಿಸುತ್ತಾರೆ. ಅದೇ ರೀತಿ ದೇವಿಗೆ ಅಭಿಷೇಕ, ಕುಂಕುಮಾರ್ಚನೆ ಮೊದಲಾದ ವಿಧಿಗಳನ್ನು ವಿಶೇಷವಾಗಿ ಶುಕ್ರವಾರ ಮಾಡುವುದು ಹೆಚ್ಚು ಫಲದಾಯಕವಾಗಿದೆ ಎಂಬುದು ಭಕ್ತರ ಶ್ರದ್ಧೆಯಾಗಿದೆ. ಅದೇ ಪ್ರಕಾರ ಶುಕ್ರವಾರ ನಂದಾದೀಪ ಇಡುವುದು, ಎಣ್ಣೆ ಕೊಡುವುದು ಪುಣ್ಯಕರವಾಗಿವೆ. ಹರಕೆಯನ್ನು ಒಪ್ಪಿಸುವುದು, ದೇವಿಯ ಎದುರಿಗೆ ಗೊಂದಲ ಹಾಕಿಸುವುದು ಮೊದಲಾದವುಗಳಿಗೆ ಶುಕ್ರವಾರ ಶುಭವೆಂದು ಹೇಳಲಾಗಿದೆ. ೧೦೦

ಕುಲಾಚಾರಗಳು :

ಅಶ್ವೀನ ಶುದ್ಧ ಪ್ರತಿಪದೆಯಿಂದ ದಶಮಿಯವರೆಗೆ ನವರಾತ್ರಿ ಉತ್ಸವವಿರುತ್ತದೆ. ಮಹಾಲಕ್ಷ್ಮಿ ಕುಲದೇವತೆಯಾಗಿರುವವರ ಮನೆಯಲ್ಲಿ ನವರಾತ್ರಿಯನ್ನು ಆಚರಿಸುವ ಸಂಪ್ರದಾಯವಿರುತ್ತದೆ. ಮೊದಲ ದಿನ ಘಟಸ್ಥಾಪನೆ ಮಾಡುತ್ತಾರೆ. ಹತ್ತು ದಿನಗಳವರೆಗೆ ಅಹೋ ರಾತ್ರಿ ತುಪ್ಪ ಮತ್ತು ಎಣ್ಣೆಯ ನಂದಾದೀಪ ಇಡುತ್ತಾರೆ. ದಿನವೂ ಪೂಜೆ, ಅಭಿಷೇಕ, ನೈವೇದ್ಯ ಹಾಗೂ ಆರತಿ ಮಾಡುತ್ತಾರೆ. ದಸರೆಯ ದಿನ ಕುಲಧರ್ಮ ಆಚರಿಸುವ ಪದ್ಧತಿಯೂ ಇರುತ್ತದೆ. ಮಹಾರಾಷ್ಟ್ರದವರು ಹತ್ತು ದಿನಗಳವೆರೆಗೆ ಪ್ರತಿನಿತ್ಯವೂ ದುರ್ಗಾ ಸಪ್ತಶತಿಯ

ಪಾರಾಯಣ ಮಾಡುತ್ತಾರೆ. ಆದರೆ ಕರ್ನಾಟಕದಲ್ಲಿ ಮತ್ತು ದಿನ ವೆಂಕಟೇಶ್ ಪಾರಿಜಾತವನ್ನು ಓದುವ ರೂಢಿಯಿದೆ. ಹತ್ತನೆಯ ದಿನ ವೆಂಕಟೇಶ್ ಮತ್ತು ಲಕ್ಷ್ಮಿಯ ಮದುವೆಯ ಕಥೆ ಓದಿ ಉತ್ಸವವನ್ನು ಮುಗಿಸುತ್ತಾರೆ. ಅಂದು ವೆಂಕಟೇಶ ಲಕ್ಷ್ಮಿಯರ ಮದುವೆಯಾದ ದಿನವೆಂಬ ಶ್ರದ್ಧೆಯಿದೆ. ಕೆಲವರ ಮನೆಯಲ್ಲಿ ಒಂಬತ್ತು ದಿನಗಳವರೆಗೆ ಉಪವಾಸ ಆಚರಿಸಿ ದಸರೆಯ ದಿನ ಸಿಹಿ ಭೋಜನ ಮಾಡುವ ರೂಢಿಯೂ ಇದೆ. ಒಟ್ಟಿನಲ್ಲಿ ಲಲಿತಾಪಂಚಮಿ, ದುರ್ಗಾಷ್ಟಮಿ, ಖಂಡೇನವಮಿ, ವಿಜಯದಶಮಿ ಮುಖ್ಯ ಹಬ್ಬಗಳಾಗಿವೆ. ಕುಮಾರಿಯರನ್ನು ಕರೆದು ಪೂಜಿಸಿ, ಊಟ ದಕ್ಷಿಣೆ, ವಸ್ತ್ರ ದಾನ ಮಾಡುವ ಪದ್ಧತಿಯೂ ಇವೆ.

ಮಹಾಲಕ್ಷ್ಮಿ ಕುಲದೇವತೆಯಾಗಿರುವ ಮನೆತನದವರು ಮದುವೆಯಲ್ಲಿ ಮದುವೆ, ಉಲಪನಯನ ಮೊದಲಾದ ಶುಭಕಾರ್ಯಗಳ ನಂತರ ಕೊಲ್ಹಾಪುರಕ್ಕೆ ಕುಟುಂಬ ಸಹಿತ ಹೋಗಿ ಪೂಜೆ, ಅಭಿಷೇಕ ಮಾಡಿಸುತ್ತಾರೆ. ಕೆಲವರ ಮನೆಯಲ್ಲಿ ಗೊಂದಲ ಹಾಕುವ ಪದ್ಧತಿಯೂ ಇರುತ್ತದೆ. ಅಂಥವರು ಮನೆಯಲ್ಲಿ ಇಲ್ಲವೆ ಕೊಲ್ಹಾಪುರದ ದೇವಿಯ ಸ್ಥಾನದಲ್ಲಿ ಗೊಂದಲದ ವಿಧಿಯನ್ನು ಆಚರಿಸುತ್ತಾರೆ. ಮಹಾಲಕ್ಷ್ಮಿ ಒಕ್ಕಲಿನವರು ವರ್ಷದಲ್ಲಿ ಒಂದು ಸಲವಾದರೂ ಕೊಲ್ಹಾಪುರಕ್ಕೆ ಹೋಗಿ ದೇವಿಗೆ ಪೂಜೆ, ಅಭಿಷೇಕ ಮಾಡಿ ಬರುವುದು ರೂಢಿಯಾಗಿದೆ.

ವಾರ್ಷಿಕ ಉತ್ಸವಗಳು :

ಚೈತ್ರ ಪ್ರತಿಪದೆ (ಉಗಾದಿ) :

ಚೈತ್ರ ಶುದ್ಧ ಪ್ರತಿಪದೆಂಯಂದು ಹೊಸ ಸಂವತ್ಸರ ಪ್ರಾರಂಭವಾಗುವುದರಿಂದ ಪಂಚಾಂಗ ಪೂಜೆಯಾಗುವುದು. ಬೆಳಿಗ್ಗೆ ಸೂರ್ಯೋದಯದ ಹೊತ್ತಿಗೆ ದೇವಸ್ಥಾನದ ಮೇಲೆ ಗುಡಿ ಏರಿಸುತ್ತಾರೆ.

ಮಹಾಲಕ್ಷ್ಮಿ ರಥೋತ್ಸವ :

ಚೈತ್ರ ಪದ್ಯ ಪ್ರತಿಪೆಗೆ ಮಹಾಲಕ್ಷ್ಮಿ ರಥೋತ್ಸವ ಆಚರಿಸುತ್ತಾರೆ. ಮಹಾಲಕ್ಷ್ಮಿಯು ಪ್ರಮುಖ ಗ್ರಾಮ ದೇವತೆಯಾಗಿರುವುದರಿಂದ ಈ ದೇವಿಯ ರಥೋತ್ಸವಕ್ಕೆ ಅತ್ಯಂತ ಮಹತ್ವವಿದೆ. ಹಿಂದಿನ ಕಾಲದಲ್ಲಿ ಅಶ್ವಿಸ ಶುದ್ಧ ಅಷ್ಟಮಿಗೆ ಅಥವಾ ಅಶ್ವಿನ ಪೌರ್ಣಿಮೆಯೆಂದು ದೇವಿಯ ರಥೋತ್ಸವವನ್ನು ಆಚರಿಸುತ್ತಿದ್ದರು. ಆದರೆ ಛತ್ರಪತಿ ಶಾಹು ಮಹಾರಾಜರು ಈ ರಥೋತ್ಸವವನ್ನು ಚೈತ್ರ ವದ್ಯ ಪ್ರತಿಪದೆಗೆ ಆಚರಿಸಲು ಪ್ರಾರಂಭಿಸಿದರು. ಇದಕ್ಕೆ ಕಾರಣವೆಂದರೆ ಚೈತ್ರ ಶುದ್ಧ ಪ್ರತಿಪದೆಯಿಂದ ೧೫ ದಿನಗಳವರೆಗೆ ಜೋತಿಬಾನ

ಜಾತ್ರೆಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಆಚರಿಸಲಾಗುತ್ತದೆ. ಆ ಯಾತ್ರಾರ್ಥಿಗಳಿಗೂ ದೇವಿಯ ರಥೋತ್ಸವ ದರ್ಶನದ ಲಾಭವಾಗಬೇಕೆಂದು ಈ ಬದಲಾವಣೆ ಮಾಡಿದ್ದಾರೆ. ಪ್ರತಿಪದೆಯ ದಿವಸ ಸಾಯಂಕಾಲ ಮಹಾಲಕ್ಷ್ಮಿಯ ಉತ್ಸವಮೂರ್ತಿಯನ್ನು ಅಲಂಕರಿಸಿ ಅರ್ಚಕರು ರಥದಲ್ಲಿ ತಂದಿರಿಸುತ್ತಾರೆ. ಸುಲಾಮಿ ತೋಪು ಹಾರಿಸುತ್ತಾರೆ. ನಂತರ ದೇವಿಯ ರಕ್ಷಣಾಸೇವಕರಿಂದ ದೇವಿಯ ಜಯಘೋಷವಾದ ಮೇಲೆ ರಥಯಾತ್ರೆ ಆರಂಭವಾಗುತ್ತದೆ. ದೇವಿಯ ರಥವು ಊರ ಪ್ರದಕ್ಷಿಣೆ ಹಾಕಿ ಭವಾನಿ ಮಂಟಪಕ್ಕೆ ಬರುತ್ತದೆ. ಅಲ್ಲಿ ಛತ್ರಪತಿ ಶಾಹು ರಾಜುಮನೆತನದವರಿಂದ ಆರತಿಯಾದ ಮೇಲೆ ಮುಂದೆ ರಂಕಭೈರವ, ಗಣೇಶ ಮಂದಿರಗಳಲ್ಲಿ ಆರತಿಯಾಗತ್ತವೆ. ನಂತರ ದೇವಿಯ ರಥವು ಹಿರತಿರುಗಿ ಮಹಾದ್ವಾರಕ್ಕೆ ಬಂದ ಮೇಲೆ ರಥೋತ್ಸವದ ಕಾರ್ಯಕ್ರಮ ಮುಗಿಯುತ್ತದೆ.

ವಸಂತ ಪಂಚಮಿ :

ಚೈತ್ರ ಮಾಸದ ವಸಂತ ಪಂಚಮಿಯಂದು ಮಹಾಲಕ್ಷ್ಮಿಗೆ ಗಂಧಲೇಪನದ ಪೂಜೆಯಾಗುತ್ತದೆ. ಈ ಗಂಧದಲ್ಲಿ ಕೇಸರ, ಚಂದನ, ಕಸ್ತೂರಿ, ಅಷ್ಟಗಂಧ, ಸೋನೇರಿ ಮತ್ತು ಚಂದೇರಿ ಚಮಕಿಪುಡಿಗಳನ್ನು ಉಪಯೋಗಿಸಿ ಈ ಮಿಶ್ರಣವನ್ನು ತಯಾರಿಸುತ್ತಾರೆ. ಮೂರ್ತಿಯ ಸರ್ವಾಂಗಕ್ಕೆ ಗಂಧದ ಲೇಪ ಹಚ್ಚುತ್ತಾರೆ. ಸುಮಾರು ೪ –೫ ಕಿಲೋ ಗಂಧವನ್ನು ತಯಾರಿಸುತ್ತಾರೆ. ಈ ಗಂಧದಿಂದಲೇ ಮಹಾಲಕ್ಷ್ಮಿಯ ಸೀರೆ, ಕುಬುಸದ ಅಲಂಕಾರ ಮಾಡುತ್ತಾರೆ. ಇದು ಅತಿಶಯ ಕಲಾಕುಸುರಿನ, ಮನೋಹರ ಅಲಂಕಾರವಾಗಿರುತ್ತದೆ. ಈ ಅಲಂಕಾರ ಪೂಜೆಯನ್ನು ವರ್ಷಕ್ಕೆ ಒಂದು ಸಲ ಚೈತ್ರ ತಿಂಗಳಲ್ಲಿ ಮಾಡುತ್ತಾರೆ.

ವೈಶಾಖ ಶುದ್ಧ ತೃತೀಯಾ :

ಅಕ್ಷಯ ತೃತೀಯಾ (ವಸಂತಗೌರಿ ಉತ್ಸವ) ವೈಶಾಖ ಶುದ್ಧ ತೃತೀಯಾ ಇದು 'ಸಾಡೀತೀನ' (ಮೂರುವರೆ) ಮುಹೂರ್ತಗಳಲ್ಲಿ ಒಂದು. ಅಂದು ಸಿಂಹಾಸನ ಸಹಿತವಾದ ಜೋಕಾಲಿ ಕಟ್ಟಿ ಹೂವಿನಿಂದ ಅಲಂಕರಿಸುತ್ತಾರೆ. ಜೋಕಾಲಿಯ ಮೇಲೆ ರತ್ನಜಡಿತ ಆಭರಣಗಳಿಂದ ಅಲಂಕರಿಸಿದ ದೇವಿಯ ಉತ್ಸವ ಮೂರ್ತಿಯನ್ನು ಇಟ್ಟು ತೂಗುತ್ತಾರೆ. ಈ ಉತ್ಸವವು ಸಾಯಂಕಾಲ ೪.೩೦ ರಿಂದ ೮.೩೦ ರವರೆಗೆ ನಡೆಯುತ್ತದೆ. ಮಹಿಳೆಯರು ದೇವಿಗೆ ಅರಿಶಿನ –ಕುಂಕುಮ ಏರಿಸಿ ಉಡಿ ತುಂಬುತ್ತಾರೆ. ನಂತರ ದೇವಿಯ ಜೋಕಾಲಿಯನ್ನು ತೂಗುತ್ತಾರೆ. ಈ ಉತ್ಸವಕ್ಕೆ 'ದೇವಿಯ ಅಂದೋಲನೋತ್ಸವ' ಎನ್ನುತ್ತಾರೆ.

ಎಂದು ಧರ್ಮಾಧಿಕಾರಿಯವರು ವಿವರಿಸಿದ್ದಾರೆ.೧೦೧ ಆಗ ಪುರುಷರಿಗೆ ದೇವಾಲಯದಲ್ಲಿ ಪ್ರವೇಶವಿರುವುದಿಲ್ಲ.

ಶ್ರಾವಣ ಮಾಸ :

ಶ್ರಾವಣ ಮಾಸದ ಎರಡನೆಯ ಶುಕ್ರವಾರದ ದಿನ 'ವರಮಹಾಲಕ್ಷ್ಮಿ' ಪೂಜೆ ಇರುತ್ತದೆ. ಮಹಾಲಕ್ಷ್ಮಿಯ ದಿನನಿತ್ಯದ ಬೆಳಗಿನ ಪೂಜೆ ಮುಗಿದ ನಂತರ ಮಧ್ಯಾಹ್ನ ಅಲಂಕಾದ ಪೂಜೆ ಇರುವುದಿಲ್ಲ. ಇದು ಸರಳ ಪೂಜೆ ಆಗಿರುತ್ತದೆ. ವರಮಹಾಲಕ್ಷ್ಮಿ ಪೂಜೆಯು ಸೂರ್ಯಾಸ್ತದ ನಂತರ ಪ್ರಾರಂಭವಾಗುತ್ತದೆ. ಮಹಾಲಕ್ಷ್ಮಿಯ ಷೋಡಶೋಪ ಚಾರ ಪೂಜೆ ಮಾಡಲಾಗುತ್ತದೆ. ಈ ಪೂಜೆಗೆ ತುಲಸಿಪತ್ರ, ಬಿಲ್ವಪತ್ರ ಅರ್ಪಿಸುತ್ತಾರೆ. ನಿತ್ಯದಂತೆ ಧೂಪಾರತಿ, ಪಂಚಾರತಿ, ಮಹಾನೈವೇದ್ಯ, ಶಂಖತೀರ್ಥ ಪ್ರೋಕ್ಷಣೆಯಾಗುತ್ತದೆ. ದೇವಿಯ ಗೆಜ್ಜೆ ವಸ್ತ್ರ ಹಾಕಿ ಸರಳ ಪೂಜೆಯ ಆಚರಣೆ ಅಚರಿಸಲಾಗುತ್ತದೆ. ಮುನೀಶ್ವರ ಮನೆತನದವರಿಗೆ ಈ ಪೂಜೆ ಮಾಡುವ ಅಧಿಕಾರವಿದೆ.

ಆಶ್ವೀನಮಾಸ – ಶರದೀಯ ನವರಾತ್ರಿ ಮಹೋತ್ಸವ :

ಅಶ್ವೀನ ಮಾಸವು ಕರವೀರನಿವಾಸಿನಿಯ ಉತ್ಸವಗಳಲ್ಲಿಯ ಮಹತ್ವದ ತಿಂಗಳು. ಅಶ್ವೀನ ಶುದ್ಧ ಪ್ರತಿಪದೆಯಿಂದ ನವಮಿಯ ತನಕ ಮಹಾಲಕ್ಷ್ಮಿಯ ನವರಾತ್ರಿಯ ಉತ್ಸವ ವಿಜೃಂಭಣೆಯಿಂದ ನೆರವೇರುತ್ತದೆ. ನವರಾತ್ರಿಯ ಮೊದಲನೆಯ ದಿವಸ ಬೆಳಿಗ್ಗೆ ದೇವಸ್ಥಾನದಲ್ಲಿ ಘಟಸ್ಥಾಪನೆ, ಕಲಶ ಪೂಜನ ಮಾಡಿ, ದೇವತಾ ಪ್ರತಿಷ್ಠಾಪನೆ ಮಾಡುತ್ತಾರೆ. ನಂದಾದೀಪದ ಪ್ರತಿಷ್ಠಾಪನೆ, ನಿತ್ಯದಂತೆ ಅಭಿಷೇಕ, ಪೂಜೆ, ನೈವೇದ್ಯ ಮೊದಲಾದ ಷೋಡಶೋಪಚಾರದಿಂದ ಮಹಾಪೂಜೆಯಾಗುತ್ತದೆ. ಘಟಸ್ಥಾಪನೆ ಮಾಡಿದ ಮೇಲೆ ಸಲಾಮಿ ತೋಫಿನಿಂದ ವಂದಿಸುತ್ತಾರೆ. ಇದರ ಮೂಲಕ 'ನವರಾತ್ರ ಬಸಲೆ', 'ದೇವಿ ಬಸಲಿ' ದೇವಿ ಕುಳಿತಳು ಎಂದು ತಿಳಿಸುತ್ತಾರೆ. ಮಧ್ಯಾಹ್ನದ ಆರತಿ, ದೇವಿಗೆ ರತ್ನಭರಿತ ಆಭರಣಗಳಿಂದ ಅಲಂಕಾರವಿರುತ್ತದೆ. ಒಂಬತ್ತು ದಿವಸದವರೆಗೆ ದಿನವೂ ವಿವಿಧ ಪ್ರಕಾರದ ಅಲಂಕಾರಗಳಿರುತ್ತವೆ. ದೇವಿಯು ನಿಂತಿರುವ, ಕುಳಿತಿರುವ , ಅಶ್ವಾರೂಢ, ಮಯೂರಾರೂಢ, ಮಹಿಷಮರ್ದಿನಿ, ಮಣ್ಣಿನಕೊಡ ಉದುತ್ತ ಮಾಡುವ ನೃತ್ಯ, ಸಿಂಹವಾಹಿನಿ ಹೀಗೆ ವಿವಿಧ ರೀತಿಯಿಂದ ದೇವಿಯನ್ನು ಅಲಂಕರಿಸುತ್ತಾರೆ. ಪ್ರತಿಯೊಂದು ದಿನದ ಅಲಂಕಾರವನ್ನು ನಿಶ್ಚಿತ ಪಡಿಸುತ್ತಾರೆ. ಮೊದಲನೆಯ ದಿನ ಕುಳಿತಿರುವ, ಎರಡನೆಯ ದಿನ ನಿಂತಿರುವ, ಪಂಚಮಿಯ ದಿನ ಆನೆತ ಮೇಲಿನ ಅಂಬಾರಿಯಲ್ಲಿಯ ಸವಾರಿ, ಅಷ್ಟಮಿಗೆ ಮಹಿಷಾಸುರ ಮರ್ದಿನಿ ಮತ್ತು

ದಸರೆಯ ದಿನ ದೇವಿಯು ರಥಾರೂಢಳಾಗಿರುವ, ಇತ್ಯಾದಿ ಅಲಂಕಾರಗಳಿರುತ್ತವೆ. ನಿತ್ಯವೂ ಪಾಲಕಿ ಸೇವೆ ನಡೆಯುತ್ತದೆ. ಪಾಲಕಿಯ ಜೊತೆಗೆ ಭಾಲದಾರ, ಚೋಪದಾರ, ಹವಾಲದಾರ ಮತ್ತು ದೇವಸ್ಥಾನದ ಎಲ್ಲ ಸೇವಾ ಹಕ್ಕುದಾರರು ಇರುತ್ತದೆ. ೧೧ ತೋಫಿನ ಸಲಾಮಿನ ಜೊತೆಗೆ ದೇವಿಕ ಪಲ್ಲಕ್ಕಿಯ ಮಂದಿರದಲ್ಲಿ ಪ್ರವೇಶ ಮಾಡುತ್ತದೆ. ನಂತರ ಆರತಿ, ಮಂತ್ರಪುಷ್ಪ, ಶಂಖತೀರ್ಥ ಪ್ರೋಕ್ಷಾಲನ ಮಾಡಿದ ನಂತರ ಪೂಜೆ ಮುಗಿಯುತ್ತದೆ.

ಅಶ್ವಿನ ಶುದ್ಧ ಪಂಚಮಿಯಂದು ತ್ರ್ಯಂಬುಲಿ ಯಾತ್ರೆ ಇರುತ್ತದೆ. ಇದಕ್ಕೆ 'ಟೆಂಬಲಾಯಿ ಪಂಚಮಿ,''ಲಲಿತಾ ಪಂಚಮಿ' ಎಂದು ಕರೆಯುತ್ತಾರೆ. ಕರವೀರಪುರದ ಮೂರು ಮೈಲಿ ಅಂತರದಲ್ಲಿರುವ ಗುಡ್ಡದ ಮೇಲೆ ಟೆಂಬಲಾಯಿ ಮಂದಿರವಿದೆ. ಟೆಂಬಲಾಯಿ ದೇವಿಯ ಕೋಪಶಮನಕ್ಕಾಗಿ ಮಹಾಲಕ್ಷ್ಮಿಯು ಪಾಲಕಿಯಲ್ಲಿ ಕುಳಿತು ಅವಳ ಭೇಟಿಗಾಗಿ ಪ್ರತಿ ವರುಷ ಟೆಂಬಲಾಯಿ ಗುಡ್ಡಕ್ಕೆ ಹೋಗುತ್ತಾಳೆ. ಬೆಳಿಗ್ಗೆ ೧೦ ಘಂಟೆಗೆ ದೇವಿಯ ಸಾಲಂಕೃತ ಪಾಲಕಿಯು ಮಂದಿರದಿಂದ ಹೊರಟು ರಾಜವೈಭವದಿಂದ ಟೆಂಬಲಾಯಿ ಗುಡ್ಡಕ್ಕ ಹೋಗುತ್ತದೆ. ಸಲಾಮಿ ತೋಫು ಹಾರಿಸುತ್ತಾರೆ. ೧೨ ಗಂಟೆಗೆ ಪಾಲಕಿಯ ತ್ರ್ಯಂಬುಲಿಯ ದೇವಸ್ಥಾನ ತಲುಪುತ್ತದೆ, ಅಲ್ಲಿ ತ್ರ್ಯಂಬುಲಿ ದೇವಿಗೆ ಆರತಿ ಮಾಡಿ, ತಂಗಿನ ಕಾಯಿ, ಖಣ ಉಡಿ ತುಂಬುತ್ತಾರೆ. ೧೨ ಗಂಟೆಗೆ ತ್ರ್ಯಂಬುಲಿಯ ದೇವಸ್ಥಾನದ ಹೊರಗಿನ ಮಂಟಪದಲ್ಲಿ ಖಡ್ಗದಿಂದ ಕುಂಬಳಕಾಯಿ ಒಡೆಯುವ ಉತ್ಸವ, (ಕುಷ್ಮಾಂಡ ಭೇ ಉತ್ಸವ) ಆಚರಿಸಲಾಗುತ್ತದೆ. ಕಸಬಾ ಬಾವಡದಲ್ಲಿಯ ಒಬ್ಬ ಪಾಟೀಲ ಮನೆತನದ ಕುಮಾರಿಯಿಂದ ಕುಂಬಳಕಾಯಿ ಒಡೆಸಲಾಗುತ್ತದೆ. ಈ ಮನೆತನದವರಿಗೆ ಪರಂಪರಾನುಗತವಾಗಿ ಛತ್ರಪತಿ ಶಾಹು ಮನೆತನದವರಿಂದ ಈ ಮಾನ ದೊರೆತಿದೆ. ಈ ಕಾರ್ಯಕ್ಕಾಗಿಯೇ ಅವರಿಗೆ ಜಮೀನು ನೀಡಲಾಗಿದೆ. ಆ ಕುಮಾರಿಯು ಹಸಿರುವಸ್ತ್ರ ಉಟ್ಟು, ಹಸಿರು ಬಳೆ ಧರಿಸಿ, ಹಣೆಯಲ್ಲಿ ಕೆಂಪು ಕುಂಕುಮ ಹಚ್ಚಿಕೊಂಡು ಕೈಯಲ್ಲಿ ಖಡ್ಗ ಹಿಡಿದಿರುತ್ತಾಳೆ. ಅವಳನ್ನು ಮಂಟಪಕ್ಕೆ ಕರೆತಂದು, ಅವಳ ಕೈಯ ಖಡ್ಗದಿಂದ ಕುಂಬಳಕಾಯಿ ಒಡೆಸುತ್ತಾರೆ. ಈ ಕಾರ್ಯಕ್ರಮ ಮುಗಿದ ಮೇಲೆ ತ್ರ್ಯಂಬುಲಿ ದೇವಿಯಿಂದ ನಿರೋಪ ಪಡೆದು ಮಹಾಲಕ್ಷ್ಮಿಯ ಪಾಲಕಿಯು ವಾಪಸ್ಸಾಗುತ್ತದೆ. ಮಹಾಲಕ್ಷ್ಮಿ ದೇವಸ್ಥಾನದ ಪೂರ್ವದ ಮಹಾದ್ವಾರದಿಂದ ಮಂದಿರವನ್ನು ಪ್ರವೇಶಿಸುತ್ತದೆ. ಅಂದು ದೇವಿಗೆ ಆನೆಯ ಅಂಬಾರಿಯ ಮೇಲೆ ಆಸೀನಳಾಗಿರುವ ಅಲಂಕಾರವಿರುತ್ತದೆ. ಆರತಿ, ಶಂಖತೀರ್ಥ ಪ್ರೋಕ್ಷಾಲನವಾಗಿ ಮಧ್ಯಾಹ್ನ ಮೂರು ಗಂಟೆಗೆ ದೇವಿಯ ಭೇಟಿಯ ಕಾರ್ಯಕ್ರಮ ಕೊನೆಗೊಳ್ಳುತ್ತದೆ.

ಅಶ್ವೀನ ಶುದ್ಧ ಅಷ್ಟಮಿ ದೇವಿಯ ಜಾಗರಣೆಯ ದಿನ. ಅಂದು ದೇವಿಯು ನಿದ್ರಿಸುವುದಿಲ್ಲವೆಂದು ಭಕ್ತರ ಶ್ರದ್ಧೆ ಇದೆ. ಅಂದು ದಿನನಿತ್ಯದ ಪೂಜೆಯ ವಿಧಿಯ ನಂತರ ಮಧ್ಯಾಹ್ನ ಎರಡು ಗಂಟೆಗೆ ದೇವಿಗೆ ಮಹಿಷಾಸುರ ಮರ್ದಿನಿಯ ಅಲಂಕಾರ ಪೂಜೆ ಮಾಡುತ್ತಾರೆ. ರಾತ್ರಿ ೮.೦೦ ಗಂಟೆಗೆ ದೇವಿಯು ಸಿಂಹಾಸನಾರೂಢಳಾಗಿ, ರತ್ನ ಜಡಿತ ಆಭರಣಗಳಿಂದ ದೇವಿಯು ಅಲಂಕೃತಳಾಗುತ್ತಾಳೆ. ರಾತ್ರಿ ೯.೩೦ ಕ್ಕೆ ತೋಫಿನಿಂದ ಗುಂಡು ಹಾರಿಸಿ ವಂದನೆ ಅರ್ಪಿಸಿತ್ತಾರೆ. ಭಾಲದಾರ ಚೋಪದಾರರ ಜಯಘೋಷದೊಂದಿಗೆ ವಾಹನ ಹೊರಡುತ್ತದೆ. ನಗರ ಪ್ರದಕ್ಷಿಣೆ ಮಾಡಿ ವಾಪಸ್ಸಾಗುತ್ತದೆ. ದೇವಿಯ ಬಗೆಗಿನ ಭಕಿಯ ಆವೇಶದಿಂದ ಸ್ತ್ರೀಯರು ಕೊಡ ಹಾರಿಸುತ್ತ ಕುಣಿಯುತ್ತಾರೆ. ಅವರು ದೇವಿಯ ಜೊತೆಗೆ ತಾದಾತ್ಮ್ಯ ಹೊಂದಿರುತ್ತಾರೆ. ಇವರಿಗೆ ಹೊರ ಜಗತ್ತಿನ ಅರಿವು ಇರುವುದಿಲ್ಲ. ಅಷ್ಟಮಿಯ ದಿನ ಶಯನಾರತಿ ಇರುವುದಿಲ್ಲ. ಅಂದು ದೇವಿಯ ಜಾಗರಣೆ ಇರುವುದರಿಂದ ರಾತ್ರಿ ೧೨.೦೦ ರ ನಂತರ ದೇವಿಯ ಪೂಜೆ ಯಥಾಸಾಂಗವಾಗಿ ನಡೆಯುತ್ತದೆ.

ಆಶ್ವೀನ ಶುದ್ಧ ನವಮಿಯು ನವರಾತ್ರಿಯ ಕೊನೆಯ ದಿನವಾಗಿರುತ್ತದೆ. ಅಂದಿನ ಧಾರ್ಮಿಕ ವಿಧಿಗಳು ಭಿನ್ನವಾಗಿರುತ್ತವೆ, ಬೆಳಿಗ್ಗೆ ಮಹಾಕಾಳಿ ಮಂದಿರದ ಎದುರಿಗೆ ಯಜ್ಞಕುಂಡ ತಯಾರಿಸುತ್ತಾರೆ. ಬೆಳಿಗ್ಗೆ ಮೂರು ಗಂಟೆಗೆ ಯಜ್ಞವಿಧಿ ಆರಂಭವಾಗುತ್ತದೆ. ಯಜ್ಞದ ವೇಳೆಯಲ್ಲಿ ಕುಂಬಳಕಾಯಿಯನ್ನು (ಕುಷ್ಮಾಂಡಕ) ಯಜ್ಞ ಬಲಿಯೆಂದು ಅರ್ಪಿಸಲಾಗುತ್ತದೆ. ಹೋಮದ ಕೊನೆಯಲ್ಲಿ, ಪೂರ್ಣಾಹುತಿಯಲ್ಲಿ ತೆಂಗಿನಕಾಯಿ, ಸೀರೆ, ಖಣ, ಬಳೆ ಮೊದಲಾದ ಸೌಭಾಗ್ಯ ಅಲಂಕಾರದ ವಸ್ತುಗಳನ್ನು ಅರ್ಪಿಸಿ ಆಹುತಿ ಕೊಡಲಾಗುತ್ತದೆ. ನಂತರ ದೇವಿಯ ಗರ್ಭಗೃಹದ ಬಾಗಿಲ ತೆರೆಯುತ್ತಾರೆ. ನಿತ್ಯದ ಪೂಜೆ ಕಾರ್ಯಗಳು ನೆರವೇರುತ್ತವೆ. ಅದರ ನಂತರ ನವರಾತ್ರ ಉಠಲೆ ಎಂದು ಹೇಳುವ ರೂಢಿ ಇದೆ. ನವಮಿಯ ದಿನ ದೇವಿಯ ಸರ್ವಶಸ್ತ್ರಗಳ ಪೂಜೆ ಮಾಡುತ್ತಾರೆ. ಅದಕ್ಕೆ ಖಂಡೇನವಮಿ ಎಂದು ಕರೆಯುತ್ತಾರೆ.

ದಸರಾ :

ವರ್ಷದಲ್ಲಿಯ ಸಾಡೇತೀನ ಮುಹೂರ್ತ (ಮೂರುವರೆ ಮುಹೂರ್ತ) ಗಳಲ್ಲಿ ಇದು ಒಂದು ಮಹತ್ವದ ಶುಭ ಮುಹೂರ್ತವಾಗಿದೆ. ದೇವಿಗೆ ರತ್ನಜಡಿತ ಆಭರಣಗಳನ್ನು ತೊಡಿಸುತ್ತಾರೆ. ಆನೆಯ ಅಂಬಾರಿಯ ಮೇಲೆ ದೇವಿಯ ಆಸೀನಳಾಗಿರುವಂತೆ ಅಲಂಕರಿಸುತ್ತಾರೆ. ಪ್ರತಿವರ್ಷ ದಸರೆಯ ದಿನ ತಿರುಪತಿಯ ದೇವಸ್ಥಾನದಿಂದಮಹಾಲಕ್ಷ್ಮೀಗೆ

ರೇಶ್ಮೆಯ ಸೀರೆ ಮತ್ತು ಖಣದ ಉಡುಗೊರೆ ಬರುತ್ತದೆ. ಅಂದು ದೇವಿಗೆ ಅದೇ ಸೀರೆ ಉಡಿಸುವ ಪದ್ಧತಿ ಇದೆ. ಸಾಯಂಕಾಲ ೫.೦೦ ಗಂಟೆಗೆ ಗರುಡ ಮಂಟಪಕ್ಕೆ ಪಾಲಕಿ ಬರುತ್ತದೆ. ಸಲಾಮಿ ತೋಫಿನ ಸ್ವಾಗತ , ಜೋಪದಾರರ ಜಯಘೋಷದೊಂದಿಗೆ ಪಲ್ಲಕ್ಕಿಯು ಸೀಮೋಲ್ಲಂಘನಕ್ಕಾಗಿ ಮಂದಿರದಿಂದ ಮೆರವಣಿಗೆಯಲ್ಲಿ ಹೊರಡುತ್ತದೆ. ದಸರಾ ಚೌಕಕ್ಕೆ ಬಂದು, ಅಲ್ಲಿ ಬನ್ನಿ ಪೂಜೆ ಮಾಡಿ ನಂತರ ಹರಿಜನ ಕೇರಿಗೆ ಹೋಗುತ್ತದೆ. ಅವರಿಂದ ಆರತಿ ಸ್ವೀಕರಿಸಿ ನಂತರ ಪಂಚಗಂಗಾ ನದಿಯ ತಟದಲ್ಲಿರುವ ಸಿದ್ದೇಶ್ವರ ಸ್ವಾಮಿ ಮಠಕ್ಕೆ ಹೋಗುತ್ತದೆ. ನಂತರ ರಾತ್ರಿ ೯.೦೦ ಗಂಟೆಗೆ ಮಹಾಲಕ್ಷ್ಮಿಯ ದೇವಸ್ಥಾನದ ಪೂರ್ವದ ಮಹಾದ್ವಾರದಿಂದ ಮಂದಿರದೊಳಗೆ ಪ್ರವೇಶಿಸುತ್ತದೆ. ಮಂದಿರದಲ್ಲಿ ಒಂದು ಪೂರ್ಣ ಪ್ರದಕ್ಷಿಣೆ ಹಾಕಿ, ಗರುಡ ಮಂಟಪಕ್ಕೆ ಬರುತ್ತದೆ. ಅಲ್ಲಿ ಆರತಿ, ಶಂಖತೀರ್ಥ ಪ್ರೋಕ್ಷಾಲನಗಳ ನಂತರ ಕಾರ್ಯಕ್ರಮವು ಮುಕ್ತಾಯವಾಗುತ್ತದೆ.

ಆಶ್ವೀನ ಪೌರ್ಣಿಮೆ :

ನವರಾತ್ರಿ ಮುಗಿದ ನಂತರ ಪೌರ್ಣಿಮೆಯ ದಿವಸ ಮಹಾಪ್ರಸಾದದ ಸಮಾರಂಭವಿರುತ್ತದೆ. ಎಲ್ಲ ಭಕ್ತರಿಗೂ ಅಂದು ಭೋಜನ ಹಾಕುತ್ತಾರೆ. ಮಹಾಭಿಷೇಕ, ಮಹಾಪೂಜೆ ಮುಗಿದ ನಂತರ ೧೨.೩೦ಕ್ಕೆ ಆರತಿ, ಪಂಚಪಕ್ವಾನ್ನದ ನೈವೇದ್ಯದ ನಂತರ ಘಂಟಾನಾದವಾಗುತ್ತದೆ. ನಂತರ ಸರ್ವ ಭಕ್ತಿರಿಗೆ ಭೋಜನದ ವ್ಯವಸ್ಥೆ. ರಾತ್ರಿ ಪಾಲಕಿಯ ಉತ್ಸವವಾಗುತ್ತದೆ. ಅಂದು ದೇವಸ್ಥಾನದ ೫ ಶಿಖರಗಳೂ (ಗೋಪುರಗಳು) ದೀಪಗಳಿಂದ ಪ್ರಜ್ವಲಿಸುತ್ತವೆ. ರಾತ್ರಿ ಪಾಲಕಿ ಉತ್ಸವವಾಗುತ್ತದೆ. ಈ ಪೌರ್ಣಿಮೆಗೆ 'ಕೋಜಾಗಿರಿ ಪೌರ್ಣಿಮೆ' ಎನ್ನುತ್ತಾರೆ.

ಕಾರ್ತಿಕ ಮಾಸ :

ಕಾರ್ತಿಕ ಎಂದರೆ ದೀಪೋತ್ಸವದ ಹಬ್ಬ. ಇದು ದೀಪಾವಳಿಯಿಂದ ಕಾರ್ತಿಕ ಹುಣ್ಣಿಮೆಯ ತನಕ ಇರುತ್ತದೆ. ಈ ತಿಂಗಳಲ್ಲಿ ದೇವಿಗೆ ಪ್ರತಿದಿನ ಬೆಳಗಿನ ಜಾವದಲ್ಲಿಯೇ ಸ್ನಾನವಿರುತ್ತದೆ. ಆಗ ಬೆಳಿಗ್ಗೆ ಮೂರು ಗಂಟೆಗೇ ಘಂಟಾನಾದವಾಗುತ್ತದೆ. ಬೆಳಿಗ್ಗೆ ೬.೦೦ ಗಂಟೆಗೆ ದೇವಿಗೆ ಕ್ಷೀರಾಭಿಷೇಕವಿರುತ್ತದೆ. ಆದರೆ ಈಗ ಕೇವಲ ದೇವಿಯ ಪಾದಗಳಿಗೆ ಮಾತ್ರ ಹಾಲಿನ ಅಭಿಷೇಕ ಮಾಡಲಾಗುತ್ತದೆ. ೧೧.೩೦ ಕ್ಕೆ ಮಹಾಪೂಜೆ, ೨.೦೦ ಗಂಟೆಗೆ ಅಲಂಕಾರ ಪೂಜೆ , ೮.೦೦ ಗಂಟೆಗೆ ಆರತಿ, ರಾತ್ರಿ ೯.೩೦ ಕ್ಕೆ ಶಯನಾರತಿ ಆಗುತ್ತದೆ.

ಕಿರಣೋತ್ಸವ :

ಕಿರಣೋತ್ಸವವು ದಕ್ಷಿಣಾಯನ ಮತ್ತು ಉತ್ತರಾಯಣ ಹೀಗೆ ವರ್ಷದಲ್ಲಿ ಎರಡು ಸಲ ಈ ಉತ್ಸವವಾಗುತ್ತದೆ. ಮಹಾಲಕ್ಷ್ಮಿಯ ಕಿರಣೋತ್ಸವವು ನೈಸರ್ಗಿಕ ಉತ್ಸವವಾಗಿರುವಂತೆ ಧಾರ್ಮಿಕ ಉತ್ಸವವೂ ಆಗಿದೆ ಎಂದು ಹೇಳಲು ಅಭ್ಯಂತರವಿಲ್ಲ. ಇದಕ್ಕೆ ಕಾರಣ ಸೂರ್ಯನ ಭ್ರಮಣವು ದಕ್ಷಿಣಾಯಣ ಮತ್ತು ಉತ್ತರಾಯಣ ಹೀಗೆ ಎರಡು ಆಯನದಲ್ಲಿ ಆಗುತ್ತದೆ. ಸೂರ್ಯನ ದಕ್ಷಿಣ ಕ್ರಾಂತಿ ೧೭ ಅಂಶ ಇರುವಾಗ, ಅಂದರೆ ನವೆಂಬರ ೯, ೧೦,೧೧ ಹೀಗೆ ಮೂರು ದಿವಸ (ಕಾರ್ತಿಕ ಮಾಸದಲ್ಲಿ), ಮತ್ತು ಸೂರ್ಯ ಉತ್ತರ ಕ್ರಾಂತಿಯಲ್ಲಿರುವಾಗ, ಜನೆವರಿ ೩೧, ಫೆಬ್ರುವರಿ ೧ ಮತ್ತು ೨ ಹಿಗೆ ಮೂರು ದಿವಸ (ಮಾಘ ಮಾಸದಲ್ಲಿ) ಸೂರ್ಯನ ಕಿರನಗಳು ದೇವಿಯ ಮೂರ್ತಿಯ ಮೇಲೆ ಬೀಳುತ್ತದೆ. ಮೊದಲನೆಯ ದಿವಸ ದೇವಿಯ ಪಾದದ ಮೇಲೆ, ಎರಡನೆಯ ದಿವಸ ದೇವಿಯ ವಕ್ಷ ಸ್ಥಳದ ಮೇಲೆ ಮತ್ತು ಮೂರನೆಯ ದಿವಸ ಸಂಪೂರ್ಣ ಮೂರ್ತಿಯ ಮೇಲೆ ಕಿರಣಗಳು ಬೀಳುತ್ತವೆ. ದೇವಿಗೆ ಕಿರಣ ಸ್ಪರ್ಶವಾಗುತ್ತಿದ್ದಂತೆಯೇ ದೇವಿಗೆ ಆರತಿ ಮಾಡುತ್ತಾರೆ.

ಹಳದಿ ಕುಂಕುಮದ ಸಿಂಚನೆ (ಹಳದಿ ಕುಂಕವಾಚಾ ಸಡಾ) : ಮಹಿಳೆಯರು ತಮ್ಮ ಸೌಭಾಗ್ಯ ಸ್ಥಿರವಾಗಿರಬೇಕೆಂದು ದೇವಿಗೆ ಆರಿಷಿಣ ಕುಂಕುಮದ ವೃಷ್ಟಿ ಮಾಡುತ್ತಾರೆ. ಒಂದು ಪಾತ್ರೆಯಲ್ಲಿ ಅರಿಷಿಣ, ಮತ್ತೊಂದರಲ್ಲಿ ಕುಂಕುಮವನ್ನು ನೀರು ಹಾಕಿ ಕಲಿಸುತ್ತಾರೆ. ಗರ್ಭಗುಡಿಯ ಹೊಸ್ತಿಲಿನಿಂದ, ಪ್ರಾರಂಭಿಸಿ, ಪ್ರದಕ್ಷಿಣಾ ಪಥದ ಮೇಲಿಂದ ದೇವಿಯ ಮುಖ್ಯ ಬಾಗಿಲಿನ ತನಕ ಅರಿಷಿಣ ಕುಂಕುಮ ದ್ರವದ ಸಿಂಚನೆ ಮಾಡುತ್ತಾರೆ.

ಕುಂಕುಮಾರ್ಚನೆ :

ಈ ವೃತವನ್ನು ಸೌಭಾಗ್ಯಕ್ಕಾಗಿ ಆಚರಿಸುತ್ತಾರೆ. ಭಕ್ತರು ೧ ಕೆ.ಜಿ. ಕುಂಕುಮ ಒಯ್ದು ಅರ್ಚಕರಿಗೆ ಕೊಡುತ್ತಾರೆ. ಅರ್ಚಕರು ದೇವಿಯ ಅಷ್ಟಕ ಹೇಳುತ್ತ ಪ್ರತಿಯೊಂದು ಹೆಸರಿನ ಜೊತೆಗೆ ಕುಂಕುಮವನ್ನು ದೇವಿಯ ಪಾದದ ಮೇಲೆ ಏರಿಸುತ್ತಿರುತ್ತಾರೆ. ಅರ್ಚನೆ ಮುಗಿದ ನಂತರ ದೇವಿಯ ಪ್ರಸಾದವೆಂದು ಅದೇ ಕುಂಕುಮವನ್ನು ಅವರಿಗೆ ಕೊಡುತ್ತಾರೆ.

ಗಂಧ ಪೂಜೆ :

"ನನ್ನ ಮನೆಯಲ್ಲಿ ಶಾಂತಿ ನೆಲೆಸುವಂತೆ ಮಾಡು, ನಾನು ನಿನಗೆ ಶಾಂತಗೊಳಿಸುತ್ತೇನೆ" ಎಂಬುದೂ ಒಂದು ಹರಕೆಯಾಗಿದೆ. ದೇವಿಯನ್ನು ಶಾಂತಗೊಳಿಸುವುದೆಂದರೆ, ಬೇಸಿಗೆಯಲ್ಲಿ ಅವಳಿಗೆ ಗಂಧದ ಪೂಜೆ ಮಾಡಿಸುವುದು. ಈ ಪೂಜೆಗೆ ಸುಮಾರು ೫ ಕೆ.ಜಿ ಗಂಧ

ಬೇಕಾಗುತ್ತದೆ. ಈ ಗಂಧ ತೇಯುವಾಗ ಅದಕ್ಕೆ ಅತ್ತರ ಹಾಕುತ್ತಾರೆ. ಅದರಿಂದ ಗಂಧ ಒಣಗುವುದಿಲ್ಲ. ಮತ್ತು ಅಲಂಕಾರ ಮಾಡಿದಾಗ ಬಿರುಕು ಬಿಡುವುದಿಲ್ಲ. ಈ ಗಂಧದಿಂದಲೇ ದೇವಿಗೆ ವಸ್ತ್ರ ಉಡಿಸುತ್ತಾರೆ. ಮೂರ್ತಿಗೆ ಪೂರ್ತಿ ಗಂಧಲೇಪನ ಮಾಡಿದ ಮೇಲೆ ಅದರಲ್ಲಿ ಸೀರೆ, ಅಂಚು, ಸೆರಗು ಕೊರೆಯುತ್ತಾರೆ. ಕೇಶರ, ಬುಕ್ಕಾ ಮತ್ತು ಅಷ್ಟ ಗಂಧಗಳಿಂದ ಕುಬುಸದ ಅಂಚು ತೋರಿಸುತ್ತಾರೆ. ಇದಕ್ಕೆ ಸುಮಾರು ಒಂದು ವಾರದ ಸಮಯ ಬೇಕಾಗುತ್ತದೆ. ಈ ಪೂಜೆ ಬಹಳ ಕಡಿಮೆ ಪ್ರಮಾಣದಲ್ಲಿ ಮಾಡುತ್ತಾರೆ. ಈ ಪೂಜೆ ಮಾಡುವ ಅರ್ಚಕರು ಅತ್ಯಲ್ಪ ಪ್ರಮಾಣದಲ್ಲಿದ್ದಾರೆ.

ಅಭಿಷೇಕ :

ದೇವಿಗೆ ನಿತ್ಯವೂ ಅಭಿಷೇಕವಿರುತ್ತದೆ. ಮಹಾಲಕ್ಷ್ಮಿ ಕುಲದೇವತೆಯಾಗಿರುವ ಕುಟುಂಬದವರಿಂದ ವರುಷಕ್ಕೆ ಒಂದು ಸಲವಾದರೂ ಅಭಿಷೇಕದ ಸೇವೆ ಇದ್ದೇ ಇರುತ್ತದೆ. ಮತ್ತೆ ಕೆಲವರು ಹರಕೆಯ ನಿಮಿತ್ತ ಅಭಿಷೇಕ ಮಾಡಿಸುತ್ತಾರೆ. ಹರಕೆ ಹೊರುವವರು ಎಲ್ಲ ಜಾತಿ ಮತದವರಿರುತ್ತಾರೆ. ಅವರವರ ಅನುಕೂಲಕ್ಕೆ ತಕ್ಕಂತೆ ಅಭಿಷೇಕ ಮಾಡಿಸಬಹುದಾಗಿದೆ. ಈ ಪೂಜೆಯನ್ನು ಅರ್ಚಕರ ಮುಖಾಂತರವೇ ಮಾಡಿಸಬೇಕಾಗುತ್ತದೆ. ಉಳಿದವರು ದೇವಿಯನ್ನು ಮುಟ್ಟುವಂತಿಲ್ಲ. ಯಾವುದೇ ಅಭಿಷೇಕಕ್ಕೂ ಪಂಚಾಮೃತ, ಉಡಿತುಂಬುವುದಕ್ಕೆ ತೆಂಗಿನಕಾಯಿ, ಖಣ ಮತ್ತು ನೈವೇದ್ಯ ಇಷ್ಟು ಸಾಮಗ್ರಿಗಳ ಅವಶ್ಯಕತೆಯಿದೆ. ನೈವೇದ್ಯವು ಕಲ್ಲುಸಕ್ಕರೆ, ಪೇಢೆ ಅಥವಾ ಹೂರಣದ ಹೋಳಿಗೆಯ ತನಕ ಅನುಕೂಲಕ್ಕೆ ತಕ್ಕಂತೆ ಮಾಡಿಸಬಹುದಾಗಿದೆ. ಹಾಗೆಯೇ ಉಡಿಯ ಸಲುವಾಗಿ ಸಾದಾ ಖಣದಿಂದ ರೇಶಿಮೆ ಸೀರೆಯವರೆಗೆ ಸಾಹಿತ್ಯ ದೊರೆಯುತ್ತದೆ. ಉಡಿಯ ತೆಂಗಿನಕಾಯಿಯನ್ನು ಒಡೆಯದೇ ಹಾಗೆಯೇ ಪ್ರಸಾದವೆಂದು ಹಿಂತಿರುಗಿಸುತ್ತಾರೆ. ನಮ್ಮ ಇಚ್ಛೆ, ಉದ್ದೇಶವು ಪೂರ್ಣವಾಗಿ ಈಡೇರುವಂತಾಗಲಿ ಎಂಬುದು ಇದರ ಉದ್ದೇಶವಾಗಿದೆ.

ಪ್ರಸಾದ :

ದೇವಿಯ ಪ್ರಸಾದವೆಂದು ಶುಕ್ರವಾರ ಹುರಿಗಡಲೆ ಒಯ್ಯುವ ಪದ್ಧತಿಯಿದೆ. ಎರಡನೆಯದು ದೇವಿಯ ಹಣೆಗೆ ಹಾಕುವ ಕುಂಕುಮ. ದೇವಿಯ ಹಣೆಗೆ ಮೊದಲು ಗಂಧ ತುಂಬುತ್ತಾರೆ. ನಂತರ ಅದರ ಮೇಲೆ ಕುಂಕುಮ ಹಚ್ಚುತ್ತಾರೆ. ಹಣೆಗೆ ತುಂಬಿದ ಕುಂಕುಮವನ್ನು ಪಾದಗಳ ಮೇಲೆ ಬಿಳಿಸುತ್ತಾರೆ. ಈ ಪದ್ಧತಿ ಮೊದಲಿನಿಂದಲೂ ನಡೆದಿದೆ. ಯಾರಿಗೆ ಕುಂಕುಮದಿಂದ ಹಣೆಗೆ ಗಾಯವಾಗುವ ತೊಂದರೆಯಿದೆಯೋ ಅವರು ದೇವಿಯ

ಪ್ರಸಾದದ ಕುಂಕುಮ ಹಚ್ಚುತ್ತಾರೆ. ಅದರಿಂದ ಅವರ ತೊಂದರೆ ನಿವಾರಣೆಯಾಗುತ್ತದೆ. ಎಂಬ ಶ್ರದ್ಧೆಯಿದೆ.

ವರಲಕ್ಷ್ಮಿ :

ಇದೊಂದು ವ್ರತವಾಗಿದೆ. ಇದು ಶ್ರಾವಣ ಮಾಸದ ಎರಡನೆಯ ಶುಕ್ರವಾರವಿರುತ್ತದೆ. ಈ ತಿಂಗಳಲ್ಲಿ ಶುಕ್ರವಾರ ಪೌರ್ಣಿಮೆ ಇದ್ದರೆ ಅಥವಾ ಪೌರ್ಣಿಮೆಯ ಮೊದಲಿನ ಶುಕ್ರವಾರದ ದಿನ ಈ ವ್ರತ ಆಚರಿಸುತ್ತಾರೆ. ಅಂದು ಎಂದಿನಂತೆಯೇ ಪೂಜೆ ಇರುತ್ತದೆ. ಅದರ ಹೊರತಾಗಿ ಸಾಯಂಕಾಲ ೪.೩೦ ಕ್ಕೆ ಸ್ನಾನ ಪೂಜೆಯಿರುತ್ತದೆ. ನಂತರ ಪಂಚಾಮೃತ. ಈ ವೇಳೆಯಲ್ಲಿ ಸಹಸ್ರನಾಮ ಆವರ್ತನೆ ಮಾಡಿ ತುಳಸಿ ಏರಿಸುತ್ತಾರೆ. ಅವಳ ಪಾದಗಳಿಗೆ ೧೦೮ ಅಕ್ಷತೆ ಏರಿಸುತ್ತಾರೆ. ಈ ದಿನ ಮಾತ್ರ ದೇವಿಗೆ ಕರಿಕೆ ಏರಿಸುತ್ತಾರೆ. ಅಂದು ಅಲಂಕಾರ ಪೂಜೆ ಇರುವುದಿಲ್ಲ.

ಶ್ರೀ ಯಂತ್ರ :

"ಮಾತೃ ಚಕ್ರ ವಿವೇಕ" ಹೆಸರಿನ ಒಂದು ಗ್ರಂಥವು ಕಾಶಿಯಲ್ಲಿಯ 'ಸಂಸ್ಕೃತ ಸರಸ್ವತಿ ಭವನ ಗ್ರಂಥಮಾಲೆಯಲ್ಲಿ ಪ್ರಕಟವಾಗಿದೆ. ಅದರಲ್ಲಿ ಶ್ರೀ ಚಕ್ರದ ಬಗ್ಗೆ ವಿಸ್ತೃತ ಮಾಹಿತಿ ಕೊಡಲಾಗಿದೆ. ಸಾಮಾನ್ಯವಾಗಿ ಶ್ರೀಯಂತ್ರವು ದೇವಿಯ ನಿರ್ಗುಣ ಸ್ವರೂಪವೆಂದು ತಿಳಿಯುತ್ತಾರೆ. ಎಲ್ಲಿ ದೇವಿಯ ಸಗುಣ ಮೂರ್ತಿ ಇರುವುದಿಲ್ಲವೋ ಅಲ್ಲಿ ಶ್ರೀಯಂತ್ರ ಬರೆದು ಅದರ ಪೂಜೆ ಮಾಡುತ್ತಾರೆ. ಕೊಲ್ಹಾಪುರದಲ್ಲಿ ೧೯೫೪ರಲ್ಲಿ ದೇವಿಯ ವಜ್ರಲೇಪ ಮಾಡಿಸಿದಾಗ ಮೂರ್ತಿಪೂಜೆ ಮಾಡುವುದು ಅಶಕ್ಯವಾಗಿತ್ತು. ಆಗ ಈ ಶ್ರೀಯಂತ್ರವನ್ನು ದೇವಿಯ ನಿರ್ಗುಣ ಸ್ವರೂಪವೆಂದು ತಿಳಿದು ಪೂಜೆ ಮಾಡಲಾಗುತ್ತಿತ್ತು. ಶ್ರೀಯಂತ್ರದಲ್ಲಿ ೯ ಚಕ್ರಗಳಿವೆ. ಸಮಬಿಂದು, ತ್ರಿಕೋಣ, ಅಷ್ಟತ್ರಿಕೋಣ, ಚೌದಾತ್ರಿಕೋಣ, ಅಷ್ಟದಲಕಮಲ, ಷೋಡಶದಲಕಮಲ, ಭೂಪುರ ಹೀಗೆ ಹೆಸರುಗಳಿವೆ. ದಶಮಹಾವಿದ್ಯೆಗಳಲ್ಲಿ ಮೂರನೆಯ ವಿದ್ಯೆ ಎಂದರೆ ಷೋಡಶ ವಿದ್ಯೆ. ಶ್ರೀಯಂತ್ರವು ಈ ಷೋಡಶ ವಿದ್ಯೆಯ ಸ್ವರೂಪವಾಗಿದೆ. ಐದು ಶಕ್ತಿಚಕ್ರರೂಪ, ಅಧೋಮುಖ ತ್ರಿಕೋಣಗಳು, ಮತ್ತು ೪ ಶಿವಚಕ್ರಮಯ ಊರ್ಧ್ವಮುಖ ತ್ರಿಕೋಣಗಳ ಸಮನ್ವಯ ಸಾಧಿಸಿ ಶ್ರೀಯಂತ್ರ ನಿರ್ಮಿಸಲಾಗುತ್ತದೆ. ಇದರ ಉಪಾಸನೆಯಿಂದ, ಕಾಮ, ಕ್ರೋಧ, ಲೋಭ, ಮದ, ಮತ್ಸರ, ಪಾಪ ಪುಣ್ಯಗಳ ವಿಜಯ ಲಭಿಸುತ್ತದೆ ಎಂಬ ಶ್ರದ್ಧೆಯಿದೆ.

ಮಹಾಲಕ್ಷ್ಮೀಯ ಕ್ಷೇತ್ರಗಳು :

ಮಹಾಲಕ್ಷ್ಮಿ ದೇವಾಲಯವು ಕೊಲ್ಹಾಪುರದ ಮಧ್ಯಭಾಗದಲ್ಲಿದೆ. ದೇವಾಲಯದ ಸುತ್ತಲೂ ಭದ್ರವಾದ ಕಲ್ಲಿನ ಗೋಡೆಯಿದೆ. ದೇವಸ್ಥಾನವನ್ನು ಸುತ್ತುವರೆದಿರುವ ಈ ಭದ್ರ ಗೋಡೆಯಲ್ಲಿ ನಾಲ್ಕು ದ್ವಾರಗಳಿವೆ. ಪಶ್ಚಿಮ ದ್ವಾರವು 'ಮಹಾದ್ವಾರ' ವೆಂದೂ, ಉತ್ತರ ದ್ವಾರವು ಘಂಟಿ ದರವಾಜಾ ಎಂದೂ ಗುರುತಿಸಲ್ಪಡುತ್ತವೆ. ಪೂರ್ವದ ದ್ವಾರ ಮತ್ತು ದಕ್ಷಿಣದ್ವಾರ ಹೀಗೆ ಎಲ್ಲ ದ್ವಾರಗಳಿಂದಲೂ ಮಂದಿರವನ್ನು ಪ್ರವೇಶಿಸಬಹುದಾಗಿದೆ. ಗೋಡೆಯ ಒಳಭಾಗದಲ್ಲಿ ಮತ್ತು ದೇವಸ್ಥಾನದ ಹೊರಭಾಗಕ್ಕೆ ದೊಡ್ಡ ಪ್ರಾಕಾರವಿದೆ.

ಮಹಾದ್ವಾರದಿಂದ ದೇವಸ್ಥಾನದ ಪ್ರಾಕಾರವನ್ನು ದಾಟಿದ ಮೇಲೆ ಒಳಗೆ ಹಾಸುಗಲ್ಲು ಹಾಕಿದ 'ಗರುಡ ಮಂಟಪ'ವಿದೆ. ಈ ಮಂಟಪದಲ್ಲಿ ಚೌಕೋನಿ ಕಟ್ಟೆಗಳ ಮೇಲೆ ಹದಿನಾರು ಕಂಬಗಳಿವೆ. ಗರುಡ ಮಂಟಪ ದಾಟಿದ ಮೇಲೆ ಸಾಕಷ್ಟು ಎತ್ತರದಲ್ಲಿ 'ಗಣೇಶ ಮಂಟಪ'ವಿದೆ. ಮಂಟಪದ ಮಧ್ಯದಲ್ಲಿ ಗಣಪತಿ ಇರುವುದರಿಂದ ಇದಕ್ಕೆ ಗಣೇಶ ಮಂಟಪ ಎಂದು ಕರೆಯುತ್ತಾರೆ. ಈ ಮಂಟಪಕ್ಕೆ ಬರಲು ದಕ್ಷಿಣ ಮತ್ತು ಉತ್ತರದ ಕಡೆಯಿಂದ ಮೆಟ್ಟಲುಗಳ ದಾರಿಯಿದೆ. ಮಂಟಪದ ಉತ್ತರಕ್ಕೆ ಚಾಮುಂಡಾ, ಹಯಗ್ರೀವ, ಮೊದಲಾದ ದೇವತೆಗಳಿದ್ದಾರೆ. ಗಣೇಶ ಮಂಟಪ ದಾಟಿದ ಮೇಲೆ ಪ್ರಾಚೀನ ಮಂಟಪವಿದೆ. ಈ ಮಂಟಪವು ಎರಡು ಅಂತಸ್ತಿನದಾಗಿದ್ದು ಅಲ್ಲಿಂದ ಮಹಾಲಕ್ಷ್ಮಿ, ಮಹಾಕಾಳಿ ಮತ್ತು ಮಹಾಸರಸ್ವತಿ ದೇವತೆಗಳ ಗರ್ಭಗೃಹಗಳಿಗೆ ಹೋಗಬಹುದಾಗಿದೆ. ಇದಕ್ಕೆ 'ಜೋಡು ಮಂಟಪ' ವೆಂದು ಹೇಳುತ್ತಾರೆ. ಈ ಮಂಟಪದ ಎದುರಿಗೆ ಮಹಾಲಕ್ಷ್ಮಿಯ ಗರ್ಭಗೃಹವಿದೆ. ಒಳಗೆ ಹೋಗಲು ಹೊಸ್ತಿಲು ಇರುವ ಭವ್ಯ ಬಾಗಿಲು ಇದೆ. ಈ ದ್ವಾರದ ಉತ್ತರ ಮತ್ತು ದಕ್ಷಿಣ ಗೋಡೆಯ ಮೇಲೆ 'ಜಯ-ವಿಜಯ'ರ ಭವ್ಯ ಮೂರ್ತಿಗಳಿವೆ. ಮಂಟಪದ ಎರಡೂ ಕಡೆಗೆ ಕೋಣೆಗಳಿದ್ದು ಅಲ್ಲಿ ಮಹಾಲಕ್ಷ್ಮಿಯ ಭಂಡಾರಗೃಹ ಮತ್ತು ವಸ್ತು ಗೃಹಗಳಿವೆ. ಅದರ ಆಚೆಗೆ ಪ್ರದಕ್ಷಿಣೆ ಮಾರ್ಗವಿದೆ. ಗರ್ಭಗೃಹದಲ್ಲಿ ಒಂದು ಎತ್ತರದ ಕಟ್ಟೆಯ ಮೇಲೆ ಹತ್ತು ಕಂಬಗಳುಳ್ಳ ಕಟ್ಟೆಗೆಯ ಒಂದು ಅರ್ಧಗೋಲಾಕಾರದ ಗುಮ್ಮಟವಿದ್ದು ಅದರಲ್ಲಿ ಮಹಾಲಕ್ಷ್ಮಿಯ ಪಶ್ಚಿಮಾಭಿಮುಖಿಯಾಗಿ ನಿಂತಿರುವ ಮೂರ್ತಿಯಿದೆ.

ಮಹಾಲಕ್ಷ್ಮಿಯ ಮೂರ್ತಿಯು ೩ ಅಡಿ ಎತ್ತರವಿದ್ದು ಕರಿಯ ಕಲ್ಲಿನ ಚತುರ್ಭುಜ ಮೂರ್ತಿಯಾಗಿದೆ. ಮೂರ್ತಿಯ ಎಡಬದಿಯ ಮೇಲಿನ ಕೈಯಲ್ಲಿ ಗದೆ ಮತ್ತು ಬಲಗಡೆಯ ಮೇಲಿನ ಕೈಯಲ್ಲಿ ಪಾನಪಾತ್ರವಿದೆ. ಕೆಳಗಡೆಯ ಎಡಬದಿಯ ಕೈಯಲ್ಲಿ ಖಡ್ಗ ಮತ್ತು

ಬಲಬದಿಯ ಕೆಳಗಿನ ಕೈಯಲ್ಲಿ ಶ್ರೀಫಳ ಅಥವಾ ಬೇಲದ ಹಣ್ಣು ಇದೆ. ಮೂರ್ತಿಯ ಹೊಟ್ಟೆ ಮತ್ತು ಸೊಂಟ ಇವುಗಳ ಮಧ್ಯೆ ಮತ್ತು ಪಾನಪಾತ್ರ ಹಿಡಿದ ಕೈಯ ಕೊನೆ ಮತ್ತು ಮಣಿಬಂಧ ಇವುಗಳ ಮಧ್ಯೆ ಬೆಳ್ಳಿಯ ಪಟ್ಟಿಯನ್ನು ಕೂಡಿಸಿದೆ. ಮೂರ್ತಿಗೆ ಅಭಿಷೇಕ ಮಾಡುವಾಗ ಅರ್ಚಕರ ಕೈಯಿಂದ ಅಭಿಷೇಕದ ತಂಬಿಗೆಯು ಮೂರ್ತಿಯ ಮೇಲೆ ಬಿದ್ದುದರಿಂದ ಇಲ್ಲಿಯ ಭಾಗವು ಭಗ್ನಗೊಂಡಿತು. ಆದುದರಿಂದ ಆಧಾರಕ್ಕಾಗಿ ಬೆಳ್ಳಿಯ ಪಟ್ಟಿಯನ್ನು ಕಟ್ಟಲಾಗಿದೆ. ದೇವಿಯ ಮುಕುಟದ ಮೇಲೆ ಲಿಂಗ ಮತ್ತು ಯೋನಿ ಕೊರೆಯಾಗಿದೆ. ದೇವಿಯ ಹಿಂದೆ ಸಿಂಹವಿದೆ, ಮೂರ್ತಿಯ ತಲೆಯ ಮೇಲೆ ಹಾವಿನ ಹೆಡೆ ತೋರಿಸಲಾಗಿದೆ.

ಪ್ರಾಚೀನ ಮಂಟಪದ ಉತ್ತರಕ್ಕೆ ಮಹಾಕಾಳಿಯ ಮಂಟಪವಿದೆ. ಇದು ಚೌರಸಾಕೃತಿಯಲ್ಲಿದ್ದು, ಪೂರ್ವ ಮತ್ತು ಪಶ್ಚಿಮಕ್ಕೆ ಬಾಗಿಲುಗಳಿವೆ. ಇಲ್ಲಿಂದ ದೇವಿಯ ಎರಡನೆಯ ಅಂತಸ್ತಿಗೆ ಹೋಗಲು ಕಲ್ಲಿನ ಮೆಟ್ಟಲುಗಳ ಹಾದಿಯಿದೆ. ಗರ್ಭಗೃಹದಲ್ಲಿ ಮಹಾಕಾಳಿಯ ಮೂರ್ತಿಯಿದೆ. ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾ ಮಾರ್ಗವಿದೆ. ಮೆಟ್ಟಲುಗಳಿಂದ ಮೇಲೆ ಹೋದರೆ ಮಹಾಲಕ್ಷ್ಮಿ ಮಂಟಪದ ಎರಡನೆಯ ಅಂತಸ್ತಿನಲ್ಲಿ ಪೂರ್ವಾಭಿಮುಖ ನಂದಿಯಿದೆ. ಮತ್ತು ಅದರ ಎದುರಿಗಿನ ಪಶ್ಚಿಮಾಭಿಮುಖ, ಅಂದರೆ ಮಹಾಲಕ್ಷ್ಮಿಯ ಮಂಟಪವು ವಸ್ತುತಃ ಒಂದೇ ಅಂತಸ್ತಿನದಾಗಿದ್ದರೂ ಅದರ ಆಧಾರಭೂತ ಕಂಬಗಳು ಬಹಳ ಎತ್ತರವಗಿದ್ದು ಎರಡನೆಯ ಅಂತಸ್ತಿನ ಛಾವಣಿಯವರೆಗೆ ತಲುಪಿರುವುದರಿಂದ ಎರಡು ಅಂತಸ್ತುಗಳಾಗಿವೆ. ಈ ಅಂತಸ್ತಿನ ಎಲ್ಲ ಕಡೆಗೆ ಅಗಲವಾದ ಎತ್ತರ ಕಟ್ಟೆಯು ಇರುವುದರಿಂದ ಮೆಟ್ಟಲುಗಳ ಮುಖಾಂತರ ದೇವಸ್ಥಾನದ ಶಿಖರದವರೆಗೂ ಹೋಗಬಹುದಾಗಿದೆ. ಜೋಡು ಮಂಟಪ ಮತ್ತು ಮಹಾಕಾಳಿಯ ಮಂಟಪಗಳ ಹಾದಿಯಲ್ಲಿ ಸ್ವಲ್ಪ ಎತ್ತರದ ಸ್ಥಳದಲ್ಲಿ ಶ್ರೀಚಕ್ರವಿದೆ. ಈ ಚಕ್ರವನ್ನು ಶಂಕರಾಚಾರ್ಯರು ಇಲ್ಲಿ ಪ್ರತಿಷ್ಠಾಪಿಸಿದ್ದಾರೆ. ಮಹಾಲಕ್ಷ್ಮಿಯ ಮೂರ್ತಿಗೆ ವಜ್ರಲೇಪದ ಕೆಲಸ ನಡೆದಾಗ (ಕ್ರಿ.ಶ.೧೯೫೫) ಮಹಾಲಕ್ಷ್ಮಿಯ ಮೂರ್ತಿಗೆ ಪೂಜೆ ಮಾಡುವಂತಿರಲಿಲ್ಲ. ಆಗ ಶ್ರೀಯಂತ್ರಕ್ಕೆ ಎಲ್ಲ ಪೂಜೆಗಳನ್ನು ಮಾಡಲಾಗುತ್ತಿತ್ತು. ಮಹಾಲಕ್ಷ್ಮಿ ಮತ್ತು ಮಹಾಕಾಳಿ ಮಂದಿರಗಳ ಶಿಲ್ಪಗಳು ತೀರ ಭಿನ್ನವಾಗಿದೆ. ಮಹಾಲಕ್ಷ್ಮಿ ದೇವಾಲಯಕ್ಕೆ ಮಹಾಕಾಳಿ ಮಂದಿರವನ್ನು ನಂತರ ಜೋಡಿಸಲಾಗಿದೆ ಎಂಬುದು ಸಹಜವಾಗಿ ಕಂಡುಬರುತ್ತದೆ. ಜೋಡು ಮಂಟಪದ ದಕ್ಷಿಣದಲ್ಲಿ ಸರಸ್ವತಿಯ ಮಂದಿರವಿದೆ. ಮಹಾಸರಸ್ವತಿಯ ಮಂದಿರದ ಕಟ್ಟಡವು ತೀರಾ ಸಾಮಾನ್ಯವಾಗಿದೆ. ಎಲ್ಲಿಯೂ ಕಲೆ-ಕೆತ್ತನೆಗಳು ಕಂಡುಬರುವುದಿಲ್ಲ. ಈ ಮಂದಿರವನ್ನೂ ಮಹಾಲಕ್ಷ್ಮಿಯ ಮಂದಿರಕ್ಕೆ ಜೋಡಿಸಲಾಗಿದೆ. ಸರಸ್ವತಿಯ ಮೂಲ ಮಂದಿರವು ಪೇಶ್ವೆಕಾಲದವರೆಗೆ ಇತ್ತು.

ನಂತರ ಮುಸಲ್ಮಾನರ ಕಾಲದಲ್ಲಿ ಭಗ್ನಗೊಂಡು , ಅದರ ಜೀರ್ಣೋದ್ಧಾರ ಮಾಡಿಸಿರಬೇಕು. ಎಂದು ಖರೆಯವರು ಉಲ್ಲೇಖಿಸಿದ್ದಾರೆ.

ಮಹಾಲಕ್ಷ್ಮಿ ದೇವಾಲಯದ ರಚನೆಯು ತ್ರಿಕೂಟಾತ್ಮಕ ಮಾದರಿಯಾಗಿದೆ. ದೇವಾಲಯದ ಕಂಬಗಳು ಎತ್ತರ ಹಾಗೂ ಭವ್ಯವಾಗಿದ್ದು, ಅವು ಚೌಕೋನಾಕೃತಿಯಲ್ಲಿವೆ. ಅವುಗಳ ಮೇಲೆ ಕಲಾ ಕೆತ್ತನೆಗಳಿವೆ. ಆದರೆ ದೇವಾಲಯದ ಹೊರಗಿನ ಭಾಗವು ನಕ್ಷತ್ರಾಕಾರದಲ್ಲಿದ್ದು ಸುಂದರ ಕಲಾಕುಸುರಿಯ ಕೆತ್ತನೆಗಳಿಂದ , ಸುಂದರ ಮದನಿಕೆಯರ ಶಿಲ್ಪಗಳಿಂದ ಶೃಂಗಾರಗೊಂಡಿದೆ. ಈ ಮೂರ್ತಿಗಳನ್ನು ಕರಿಯ ಕಲ್ಲಿನಲ್ಲಿ ಕೊರೆಯಲಾಗಿದ್ದು ಅವು ದೇವಾಲಯದಷ್ಟೇ ಪ್ರಾಚೀನವಾಗಿವೆ. ಇವು ಅರವತ್ನಾಲ್ಕು ಯೋಗಿನಿಗಳ ಮೂರ್ತಿಗಳಾಗಿವೆ.

ಮಹಾದ್ವಾರದ ದಕ್ಷಿಣಕ್ಕೆ ಗಣಪತಿಯ ಮಂದಿರವಿದ್ದು ಅಲ್ಲಿನ ಒಂದು ಕಂಬದ ಮೇಲೆ ಕ್ರಿ.ಶ.೧೨೧೮ರ ಶಿಲಾಲೇಖವಿದೆ. ಗಣಪತಿಯ ಮಂದಿರದ ಎದುರಿಗೆ ಎತ್ತರವಾದ ಕಟ್ಟೆಯ ಮೇಲೆ ನಾಲ್ಕು ಮೂಲೆಗೂ ನಾಲ್ಕುದೀಪಸ್ತಂಭಗಳಿದ್ದು, ಮಧ್ಯದಲ್ಲಿ ಒಂದು ಎತ್ತರವಾದ ದೀಪಸ್ತಂಭವಿದೆ. ಈ ಕಟ್ಟೆಯ ನಾಲ್ಕೂ ಬದಿಗೆ ನಾಗ, ಶಿವಲಿಂಗ, ಭೈರವ ಮೂರ್ತಿಗಳನ್ನು ಕೆತ್ತಲಾಗಿದೆ. ದೀಪಸ್ತಂಭದ ಹತ್ತಿರ ನಾಥಪಂಥೀಯರ ಎರಡು ಸಮಾಧಿಗಳಿವೆ. ದೇವಾಲಯದ ಪ್ರಾಕಾರದಲ್ಲಿ ಸಾಕಷ್ಟು ಸಣ್ಣ ಸಣ್ಣ ಮಂದಿರಗಳಿವೆ.

ಪೂರ್ವಭಾಗ :

ಶ್ರೀರಾಮ ಮಂದಿರ, ಶೇಷಶಾಯಿ, ವಿಷ್ಣು, ಲಕ್ಷ್ಮಿನಾರಾಯಣ, ಖಂಡೋಬಾ, ಅತಿಬಲೇಶ್ವರ ಮಂದಿರಗಳಿವೆ. ಶೇಷಶಾಯಿ ಮಂದಿರದಲ್ಲಿಯ ಕಂಬಗಳ ಮೇಲೆ ಅರವತ್ತು ತೀರ್ಥಂಕರರ ಮೂರ್ತಿಗಳಿದ್ದು ಅದರ ಕೆಳಗೆ ಕನ್ನಡ ಶಿಲಾಲೇಖವಿದೆ. ಪೂರ್ವದ್ವಾರದ ಹೊರಗೆ ಎರಡು ಪಶ್ಚಿಮಾಭಿಮುಖ ಮತ್ತು ಒಂದು ಉತ್ತರಾಭಿಮುಖ ಹೀಗೆ ಮೂರು ಶಂಕರ ದೇವಾಲಯಗಳಿವೆ.

ದಕ್ಷಿಣ ಭಾಗ :

ರಾಧಾಕೃಷ್ಣ ಮಂದಿರ, ಕಾಲಭೈರವ, ತುಳಜಾಭವಾನಿ, ಲಕ್ಷ್ಮಿನಾರಾಯಣ ಮತ್ತು ಶಿವಮಂದಿರಗಳಿವೆ.

ಉತ್ತರ ಭಾಗ :

ದೇವಾಲಯದ ಉತ್ತರ ದ್ವಾರದ ಮೇಲೆ ಒಂದು ದೊಡ್ಡ ಘಂಟೆಯಿದೆ. ಆದ್ದರಿಂದ ಈ ದ್ವಾರಕ್ಕೆ 'ಘಂಟಿ ದರವಾಜಾ' (ಘಂಟೆಯ ಬಾಗಿಲು) ಎಂದು ಕರೆಯುತ್ತಾರೆ. ದೇವಸ್ಥಾನದ ಪೂಜಾಕಾರ್ಯಗಳನ್ನು ಸೂಚಿಸುವುದಕ್ಕೆ ಈ ಘಂಟಾನಾದವು ಮಹತ್ವದ್ದಾಗಿದೆ. ಈ ದ್ವಾರದ ಹೊರಗೆ ಒಂದು ದೀಪಸ್ತಂಭವಿದ್ದು ಅದರ ಮೇಲೆ ಅಗಸ್ತ್ಯ, ಲೋಪಾಮುದ್ರಾ ಅವರ ಮೂರ್ತಿಗಳಿವೆ. ಬಾಗಿಲಿನ ಪೂರ್ವದ ಕಡೆಗೆ ನವಗ್ರಹ, ಸೂರ್ಯಮಂದಿರ, ಮಹಿಷಾಸುರಮರ್ದಿನಿ, ವಿಠ್ಠಲ ರಖುಮಾಯಿ, ಮಂದಿರಗಳಿವೆ. ಕಾಶಿತೀರ್ಥವೆಂಬ ಸಣ್ಣ ಕುಂಡದ ಹತ್ತಿರ ಕಾಶಿವಿಶ್ವೇಶ್ವರ ಮಂದಿರವಿದೆ.

ಪಶ್ಚಿಮ ಭಾಗ :

ಪಶ್ಚಿಮಾಭಿಮುಖಿ ಗಣೇಶಮಂದಿರ, ಹರಿಹರೇಶ್ವರ, ಹನುಮಾನ ಮಂದಿರಗಳಿವೆ. ದಕ್ಷಿಣಾಭಿಮುಖಿ ದತ್ತಮಂದಿರ, ಮುಕ್ತೇಶ್ವರ ಮಂದಿರ, ಮಣಿಕರ್ಣಿಕಾ ತೀರ್ಥವಿದೆ. ಈ ತೀರ್ಥದ ದಕ್ಷಿಣ ಗೋಡೆಯ ಹತ್ತಿರ ೫೦ ವೀರಗಲ್ಲುಗಳಿವೆ. ಮೂರು ಧ್ಯಾನಸ್ಥ ಋಷಿಗಳ ಮತ್ತು ಶಿವ ಪಾರ್ವತಿಯರ ಮೂರ್ತಿಗಳಿವೆ. ಇದರ ಹತ್ತಿರವೇ ಬನಶಂಕರಿಯ ದೇವಾಲಯವಿದೆ. ಕೇದಾರಲಿಂಗ, ಕುಂಡಲೇಶ್ವರ ದೇವಸ್ಥಾನಗಳೂ ಇವೆ. ಒಟ್ಟಿನಲ್ಲಿ ಕೊಲ್ಹಾಪುರವು ದೇವಾಲಯಗಳ ನಗರವಾಗಿದೆ.

ದೊಡ್ಡಗದ್ದವಳ್ಳಿ (ಅಭಿನವ ಕೊಲ್ಹಾಪುರ) :

ಕರ್ನಾಟಕದ ಹಾಸನ ಜಿಲ್ಲೆಯಲ್ಲಿಯ ಹಾಸನ ಊರಿನಿಂದ ೨೦ಕಿ.ಮೀ ಅಂತರದಲ್ಲಿ 'ದೊಡ್ಡಗದ್ದವಳ್ಳಿ' ಎಂಬ ಊರು ಶ್ರೀಮಹಾಲಕ್ಷ್ಮಿಯ ಮಂದಿರದಿಂದ ಪ್ರಸಿದ್ಧಿ ಪಡೆದಿದೆ. ಕ್ರಿ.ಶ.೧೧೧೩ರ ಶಿಲಾಲೇಖನದಲ್ಲಿ ಈ ಊರಿನ ಹೆಸರು 'ಅಭಿನವ ಕೊಲ್ಹಾಪುರ' ಎಂದು ಉಲ್ಲೇಖಿಸಲಾಗಿದೆ. ಆದರೆ ಲೋಕಾರೂಢಿಯಲ್ಲಿ ಮಾತ್ರ ಇದು ಇಂದಿಗೂ 'ದೊಡ್ಡಗದ್ದವಳ್ಳಿ'ಯಾಗಿಯೇ ಉಳಿದಿದೆ. ದೊಡ್ಡ ಅಂದರೆ ಹಿರಿಯದು. 'ಗದ್ದವಳ್ಳಿ' ಎಂಬ ಹೆಸರಿನ ಇನ್ನೊಂದು ಊರು ಇರುವುದರಿಂದ ಬೇರೆಯಾಗಿ ಗುರುತಿಸಲು 'ದೊಡ್ಡ' ಎಂಬ ವಿಶೇಷಣ ಬಳಸಲಾಗಿದೆ. ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮಿಯ ದೇವಸ್ಥಾನವು ಕರ್ನಾಟಕದಲ್ಲಿಯ ಏಕಮೇವ ಚತುಷ್ಕೋನ ಮಂದಿರವಾಗಿದೆ, ಎಂದು ಪುರಾತತ್ವಜ್ಞ ಆರ್. ನರಸಿಂಹಾಚಾರ್ಯರು ಹೇಳಿದ್ದಾರೆ. ದ್ವಾರಸಮುದ್ರದ ನೃಪತಿ ಹೊಯ್ಸಳನ ಕಾಲದಲ್ಲಿ ಅತ್ಯಂತ ಶ್ರೇಷ್ಠ ವ್ಯಾಪಾರಿ (ಮಹಾವಡ್ಡ ವ್ಯಾಪಾರಿ)ಯಾದ ಕಲ್ಹಣ ರಾವುತ ಮತ್ತು ಆತನ ಪತ್ನಿ

ಸಹಜಾದೇವಿಯವರು 'ಅಭಿನವ ಕೊಲ್ಹಾಪುರಮ್' ವೆಂಬಲ್ಲಿ ಮಹಾಲಕ್ಷ್ಮಿ ಮಂದಿರವನ್ನು ನಿರ್ಮಿಸಿದರು ಎಂದು ನರಸಿಂಹಾಚಾರ್ಯರು ಉಲ್ಲೇಖಿಸಿದ್ದಾರೆ. ಮಂದಿರದ ಅಂತರ್ಗತ ರಚನೆಯಿಂದ ಇದು ಚತುಷ್ಕೂಟ ಮಹಾಲಕ್ಷ್ಮಿಯ ಮಂದಿರವಿದ್ದರೂ ಇಲ್ಲಿ ಮಹಾಕಾಳಿಗೆ ಅಧಿಕ ಮಹತ್ವ ದೊರೆತಿದೆ. ಅವಳ ಎದುರಿಗೆ ಇರುವ ಭೂತನಾಥನು ಭೂತಸೃಷ್ಟಿಯ ಅಧಿನಾಯಕನಾಗಿದ್ದಾನೆ. ಕಾಳಿಯ ಸಹಚರನಾಗಿದ್ದಾನೆ. ಅವಳ ಪರಿವಾರದಲ್ಲಿಯ ಪ್ರಮುಖನಾಗಿದ್ದಾನೆ. ಅವನು ಇಲ್ಲಿ ಶಿವಲಿಂಗ ರೂಪದಲ್ಲಿದ್ದಾನೆ. ಮಹಾಕಾಳಿಯ ಅಂಗರಕ್ಷಕರೆಂದು ಎರಡು ಕಂಕಾಲ ಶಿಲ್ಪಗಳಿವೆ. ಅವರಿಗೆ ನರಸಿಂಹಾಚಾರ್ಯರು 'ವೇತಾಳ' ಎಂಬ ಸಂಜ್ಞೆ ಕೊಟ್ಟಿದ್ದಾರೆ. ಕಂಕಾಲನ ಕೈಯಲ್ಲಿ ಖಡ್ಗವಿದೆ. ಹೊರಗೆ ಜೋತು ಬಿದ್ದ ನಾಲಿಗೆ, ಭಯ ಹುಟ್ಟಿಸುವ ಈ ಭಯಾನಕ ಶಿಲ್ಪವನ್ನು ಕಲಾಕಾರನು ಕುಶಲತೆಯಿಂದ ಕೆತ್ತಿದ್ದಾನೆ. ಎದುರಿಗೆ ಅದೇ ರೀತಿಯ ಸ್ತ್ರೀ ಶಿಲ್ಪವಿದ್ದು ಅದು 'ಕಂಕಾಲಿ'ಯದಾಗಿದೆ. ಕಾಳಿಯ ಮೂರ್ತಿಯ ೩ ಅಡಿ ಎತ್ತರವಿದ್ದು. ಎಂಟು ಭುಜಗಳುಳ್ಳದ್ದಾಗಿದೆ. ಅವಳು ದೈತ್ಯನ ಮೇಲೆ ಆಸೀನಳಾಗಿದ್ದಾಳೆ. ಅವಳ ಎಡಗಾಲು ಮಡಿಸಿದ್ದು, ಬಲಗಾಲು ದೈತ್ಯನ ಕಳೇಬರದ ಮೇಲೆ ಇದೆ. ಬಲಗೈಯಲ್ಲಿ ತ್ರಿಶೂಲ, ಖಡ್ಗ, ಬಾಣ ಮತ್ತು ಪರಶುಗಳಿವೆ. ಎಡಗೈಯಲ್ಲಿ ಡಮರು, ಧನುಷ್ಯ ಮತ್ತು ರಕ್ತಘಟಗಳಿವೆ.

ಕಾಳಿಯ ಮಂದಿರದ ಎದುರಿಗಿನ ಗರ್ಭಗೃಹದಲ್ಲಿ ಗರುಡ ಶಿಲ್ಪದ ಮೇಲೆ ವಿಷ್ಣುವಿಗೆ ಬದಲಾಗಿ ಭೈರವನನ್ನು ತಂದಿಡಲಾಗಿದೆ. ಮೊದಲು ಇದು ನಿಶ್ಚಿತವಾಗಿ ವಿಷ್ಣುವಿನದಾಗಿತ್ತು. ನಂತರ ಆ ಸ್ಥಳವನ್ನು ಭೈರವನು ಸ್ವೀಕರಿಸಿದ್ದಾನೆ. ಪೂರ್ವದ್ವಾರದ ಒಳಗಿನ ಗರ್ಭಗೃಹದಲ್ಲಿ ಅಧಿದೇವತೆಯಾದ ಲಕ್ಷ್ಮಿಯು ತನ್ನ ಅಲೌಕಿಕ ಸೌಂದರ್ಯದಿಂದ ವಿರಾಜಮಾನಳಾಗಿದ್ದಾಳೆ. ಲಕ್ಷ್ಮಿಯದು ಚತುರ್ಭುಜ ಮೂರ್ತಿಯಾಗಿದ್ದು, ಅವಳ ಮೇಲಿನ ಬಲಗೈಯಲ್ಲಿ ಶಂಖ, ಎಡಗೈಯಲ್ಲಿ ಚಕ್ರವಿದೆ. ಕೆಳಗಿನ ಬಲಗೈಯು ಅಭಯ ಮುದ್ರೆಯಾಗಿದ್ದು, ಎಡಗೈಯಲ್ಲಿ ಗದೆ ಇದೆ. ಎರಡು ಕಡೆಗೆ ಇಬ್ಬರು ಸಹಚರರಿದ್ದಾರೆ. ಮೂರುವರೆ ಅಡಿ ಎತ್ತರದ ಮೂರ್ತಿಯು ಮುಕುಟ, ಕರ್ಣ, ಕುಂಡಲಗಳಿಂದ ಅಲಂಕೃತಗೊಂಡಿದೆ. ಪ್ರಾಕಾರದ ಮಧ್ಯಭಾಗದಲ್ಲಿ ಮುಖ್ಯ ಮಂದಿರವಿದ್ದು, ನಾಲ್ಕು ಮೂಲೆಗಳಲ್ಲಿ ನಾಲ್ಕು, ಮತ್ತು ಹಿಂದೆ ಒಂದು ಸಣ್ಣ ಮಂದಿರಗಳಿದ್ದು ೫೫ ಶಿಖರಗಳಿವೆ. ಮುಖ್ಯ ಮಂದಿರದಲ್ಲಿ ೪ ಶಿಖರಗಳಿವೆ. ಮಹಾಲಕ್ಷ್ಮಿಯ ಗರ್ಭಗುಡಿಯ ಬಾಗಿಲು ಪಟ್ಟಿಕೆಯ ಮೇಲೆ ಶಿವ ಮತ್ತು ಮುಂಭಾಗದ ಛತ್ತಿನ ಮೇಲೆ ಅಷ್ಟದಿಕ್ಪಾಲಕರ ಕೆತ್ತನೆಗಳಿವೆ. ಒಳಾಂಗಣದ ಕಂಬಗಳ ಕೆತ್ತನೆಗಳು ಸುಂದರವಾಗಿವೆ.

ಕೊಲ್ಹಾಪುರದ ಲಕ್ಷ್ಮಿಯು ತಲೆಯ ಮೇಲೆ ಶಿವಲಿಂಗ ಧರಿಸಿ ಸರ್ವತಂತ್ರ ಸ್ವತಂತ್ರ ದೇವತೆಯೆನಿಸಿದ್ದಾಳೆ. ದೊಡ್ಡಗದ್ದವಳ್ಳಿಯ ಲಕ್ಷ್ಮಿಯು ವಿಷ್ಣುಪ್ರಿಯಳಾಗಿದ್ದಾಳೆ. ದೊಡ್ಡಗದ್ದವಳ್ಳಿಯಲ್ಲಿ, ಮಹಾಲಕ್ಷ್ಮಿ, ಮಹಾಕಾಳಿಯರಿದ್ದು, ಮಹಾಸರಸ್ವತಿಯು ಗೌಣವಾಗಿದ್ದಾಳೆ. ಅವಳ ಬದಲಿಗೆ ವಿಷ್ಣು ಮತ್ತು ಭೂತನಾಥರಿದ್ದಾರೆ. ಕೊಲ್ಹಾಪುರ ಬಿಟ್ಟು ಉಳಿದ ಕ್ಷೇತ್ರಗಳಲ್ಲಿ ಲಕ್ಷ್ಮಿಯ ಮೂರ್ತಿಯನ್ನು ಪ್ರತಿಷ್ಠಾಪಿಸುವುದಿದ್ದರೆ ಅದು ಲಕ್ಷ್ಮಿ (ವಿಷ್ಣು ಪತ್ನಿ) ಯದಾಗಿರಬೇಕೆಂದು ಮೂರ್ತಿ ಶಾಸ್ತ್ರಜ್ಞರ ಆಜ್ಞೆ ಇದ್ದುದರಿಂದ ಇಲ್ಲಿಯ ಮೂರ್ತಿ ವಿಷ್ಣುಪ್ರಿಯಾ ಲಕ್ಷ್ಮಿಯದಾಗಿದೆ.

ಸೊರಟೂರಿನ ಮಹಾಲಕ್ಷ್ಮಿ :

ಕರ್ನಾಟಕದ ಗದಗ ಜಿಲ್ಲೆಯ 'ಸೊರಟೂರು' ಎಂಬ ಗ್ರಾಮವು ಒಂದು ಕಾಲದಲ್ಲಿ ಮಹಾಲಕ್ಷ್ಮಿಯ ಕ್ಷೇತ್ರವೆಂದು ಪ್ರಸಿದ್ಧಿ ಪಡೆದಿತ್ತು. ಇಲ್ಲಿ ಕೊಲ್ಹಾಪುರ ಮಹಾಲಕ್ಷ್ಮಿಯ ದೇವಸ್ಥಾನವಿತ್ತು ಎಂಬ ಉಲ್ಲೇಖವು ಶಿಲಾಲೇಖದಲ್ಲಿದೆ. (ಬಾಂಬೆ ಕರ್ನಾಟಕ ಇನ್‌ಸ್ಕ್ರಿಪ್ಶನ್ಸ್, ಖಂಡ ಭಾಗ ೨, ಪು. ೧೩೭) ಸೊರಟೂರಿನಲ್ಲಿ ಚಾಲುಕ್ಯರ ಕ್ರಿ.ಶ. ೧೦೯೧ರ ಒಂದು ಕನ್ನಡ ಶಿಲಾಲೇಖವಿದೆ. ಅದರಲ್ಲಿ ಮಹಾಲಕ್ಷ್ಮಿಯ ವರ್ಣನೆಯಿದೆ. ಅದರ ಪ್ರಕಾರ ಅವಳು ಸೊರಟೂರು ಗ್ರಾಮವನ್ನು ರಕ್ಷಿಸುವ ದೇವತೆಯಾಗಿದ್ದು, ಕೊಲ್ಹಾಪುರದ ಲಕ್ಷ್ಮಿಯ ಪ್ರತೀಕವೇ ಆಗಿದ್ದಳು ಎಂಬುದು ಸ್ಪಷ್ಟವಾಗುತ್ತದೆ. ಪೂರ್ವಸೂರಿಯ ಶಿಲಾಲೇಖನದ ಆಧಾರದಿಂದ ಸೊರಟೂರು ಸಾಂಸ್ಕೃತಿಕ ಸಮೃದ್ಧಿಯ ಪುರಾತನ ನಗರವಾಗಿತ್ತು. ಇಂದು ಇಲ್ಲಿಯ ಒಂದು ಮಂದಿರವೂ ಧೃಢಾವಸ್ಥೆಯಲಿಲ್ಲ. ಇಲ್ಲಿ ಅಸಂಖ್ಯ ಪ್ರಾಚೀನ ಅವಶೇಷಗಳು ದೊರೆಯುತ್ತವೆ. ಸೊರಟೂರಿನ ಪ್ರಾಚೀನತೆ ಮತ್ತು ಪಾವಿತ್ರ್ಯತೆಯನ್ನು ನಿರ್ಮಿಸಿದ ದೇವರುಗಳು ಶೈವ, ವೈಷ್ಣವ ಮತ್ತು ಜೈನ ಈ ಮೂರೂ ಪರಂಪರೆಗೆ ಸಂಬಂಧಿಸಿದವರಾಗಿದ್ದಾರೆ. ಇಲ್ಲಿಯ ವೀರಗಲ್ಲುಗಳ ಬಾಹುಳ್ಯವು ಯಾದವ ವೀರರದಾಗಿವೆ. ಹೊಯ್ಸಳರು ಮತ್ತು ಸೇವುಣರ ಸತ್ತೆಗಾಗಿ ಸಂಘರ್ಷವೂ ಇಲ್ಲಿಯೇ ನಡೆದಿದೆ. ಒಂದು ಮಹತ್ವದ ಸಂಗತಿಯೆಂದರೆ ಇಂದು ಇಲ್ಲಿ ಮಹಾಲಕ್ಷ್ಮಿಯ ಮಂದಿರವಾಗಲಿ, ಅವಳ ಮೂರ್ತಿಯಾಗಲಿ ಇಲ್ಲಿ ನೋಡಲು ಸಿಗುವುದಿಲ್ಲ. ಕೇವಲ ಒಂದು ಶಿಲಾಲೇಖನದ ಅಕ್ಷರಗಳಲ್ಲಿ ಪ್ರಕಟಳಾದ ಸೊರಟೂರಿನ ಮಹಾಲಕ್ಷ್ಮಿಯು ಒಂದು ಕಾಲದಲ್ಲಿ ಲುಪ್ತಳಾಗಿ ಹೋಗಿದ್ದಾಳೆ.

ಇದೇ ರೀತಿ ಸೊರಟೂರಿನ ಹತ್ತಿರ ಇರುವ ಪುಲಿಗೆರೆಯು ಶೈವ ಸಂಪ್ರದಾಯಕ್ಕೂ ಮತ್ತು ಮಹಾಲಕ್ಷ್ಮಿಗೂ ಸಂಬಂಧಿಸಿದ್ದಾಗಿದೆ. ಇದು 'ದಕ್ಷಿಣ ಸೋಮನಾಥ'ನೆಂದು ಪ್ರಸಿದ್ಧನಾದ

ಶಿವನು ವಿರಾಜಮಾನನಾದ ಸ್ಥಳವಾಗಿದೆ. ಇದು ಜೈನ ಸಂಸ್ಕೃತಿಯ ಮಹತ್ವಪೂರ್ಣ ಕೇಂದ್ರವೂ ಆಗಿದೆ. ಈ ಪುಲಿಗೆರೆಯ ಇಂದಿನ ಲೋಕಾರೂಢಿಯ ಹೆಸರು 'ಲಕ್ಷ್ಮೇಶ್ವರ'. ದಕ್ಷಿಣ ಮಹಾರಾಷ್ಟ್ರದ ಸಂಸ್ಥಾನಿಕರ ಕಡತಪತ್ರಗಳಲ್ಲಿ ಈ ಹೆಸರಿನ ನೋಂದಣಿ ಸಿಗುತ್ತದೆ. 'ಲಕ್ಷ್ಮೇಶ್ವರ' ಇದು 'ಲಕ್ಷ್ಮೀಶ್ವರ'ದ ಅಪಭ್ರಂಶವಾಗಿದೆ. ಲಕ್ಷ್ಮೀಶ್ವರ ಎಂದರೆ ಲಕ್ಷ್ಮಿಯನ್ನು ಸ್ಥಾಪಿಸಿದ ಈಶ್ವರ. ಈ ಲಕ್ಷ್ಮೀಶ್ವರ ಉಲ್ಲೇಖವು 'ಕೃತುಪುರ ಮಹಾತ್ಮ್ಯೆ'ದಲ್ಲಿ ಇದೆ. ಕೃತಪುರ ಎಂದರೆ ಗದಗ. 'ಲಕ್ಷ್ಮೇಶ್ವರ' ಹೆಸರಿನ ಸಾರ್ಥಕತೆಯನ್ನು ಹೇಳುವ ಲಕ್ಷ್ಮಿ ಸ್ಥಾಪಿತ ಶಿವಲಿಂಗವೂ ಇಲ್ಲಿ ಸಿಗುವುದಿಲ್ಲ. ಮಹಾಲಕ್ಷ್ಮಿಯ ದರ್ಶನವೂ ಆಗುವುದಿಲ್ಲ. ಲಕ್ಷ್ಮೇಶ್ವರದಿಂದ ಲಕ್ಷ್ಮಿ ಹೇಗೆ ಕಳೆದು ಹೋದಳು ಎಂಬುದರ ರಹಸ್ಯ ತಿಳಿಯುವುದಿಲ್ಲ.

ಸೊರಟೂರಿನ ಮಹಾಲಕ್ಷ್ಮಿ ಸ್ಥಾನದ ನಿರ್ದೇಶ ಮಾಡುವ ಲೇಖನದಲ್ಲಿ ಕೊಲ್ಹಾಪುರದ ಮಹಾಲಕ್ಷ್ಮಿಯ ವರ್ಣನೆ ಸಿಗುತ್ತದೆ. ಆದರೆ ಅದು ಮೂರ್ತಿವರ್ಣನೆಯಾಗಿರದೆ ಗುಣವರ್ಣನೆಯಾಗಿದೆ. "ವಿಶಾಳಿ ಆದಿ ಸಪ್ತಶತ ತೀರ್ಥದಿಂದ ಯಾವಳ ಕ್ಷೇತ್ರ ಪವಿತ್ರವಾಗಿರುವುದೋ ಅವಳು ಮಹಾಶಕ್ತಿಸ್ವರೂಪದಲ್ಲಿ ಪ್ರಕಟಗೊಂಡಿದ್ದಾಳೆ. ಅವಳು ಜಗದ್ವ್ಯಾಪಿನಿಯಾಗಿದ್ದಾಳೆ. ಪರಮ ಔದಾರ್ಯದ ಮೂರ್ತಿಯಾಗಿದ್ದಾಳೆ. ದುಷ್ಟರ ನಿಗ್ರಹ, ಶಿಷ್ಟರನ್ನು ರಕ್ಷಿಸುವವಳಾಗಿದ್ದಾಳೆ. ಅವಳೇ ಅನಂತ ಅಜ್ಞಾನವನ್ನು ನಾಶ ಮಾಡುವ ತೇಜೋಮಯಿ ಮಹಾಲಕ್ಷ್ಮಿ ಸೊರಟೂರಿನ ರಕ್ಷಣೆಗಾಗಿ ಇಲ್ಲಿ ಬಂದಿದ್ದಾಳೆ" (ಅದೇ ಪು.೨೧) ಆದರೆ ಕಾಲಗರ್ಭದಲ್ಲಿ ಅನೇಕ ತಥ್ಯಗಳು, ಸತ್ಯಗಳು ಮುಚ್ಚಿ ಹೋಗುವಂತೆ ಸೊರಟೂರಿನ ಮಹಾಲಕ್ಷ್ಮಿಯೂ ಲುಪ್ತವಾಗಿರುವುದು ಒಂದು ತಥ್ಯವಾಗಿದೆ. ಒಂದು ಕಾಲದಲ್ಲಿ ಮಹಾಲಕ್ಷ್ಮಿಯ ಕ್ಷೇತ್ರವೆಂದು ಪ್ರಸಿದ್ಧಿ ಪಡೆದ ಸೊರಟೂರಿನಲ್ಲಿ ಇಂದು ಅವಳ ಮೂರ್ತಿಯಿಲ್ಲ. ದೇವಸ್ಥಾನವಿಲ್ಲ. ಕೇವಲ ಶಿಲಾಲೇಖದ ಆಧಾರದಿಂದ ಅದು ಮಹಾಲಕ್ಷ್ಮಿಯ ಕ್ಷೇತ್ರವಾಗಿತ್ತು ಎಂಬುದನ್ನು ಊಹಿಸುವಂತಾಗಿದೆ. ಒಂದು ಪ್ರಸಿದ್ಧ ಕ್ಷೇತ್ರವು ಕಾಲಾಂತರದಲ್ಲಿ ಮರೆಯಾಗಿ ಹೋದುದನ್ನು ಗುರುತಿಸಬಹುದಾಗಿದೆ.

ದೇವಿಹೊಸೂರಿನ ಮಾಲಚಿ ದೇವಿ ಮಹಾಲಕ್ಷ್ಮಿ :

ಕರ್ನಾಟಕದ ಹಾವೇರಿ ಜಿಲ್ಲೆಯಲ್ಲಿರುವ ದೇವಿಹೊಸೂರಿನಲ್ಲಿ ಮಹಾಲಕ್ಷ್ಮಿಯ ಒಂದು ಪ್ರಾಚೀನ ಮಂದಿರವಿದೆ. ಕರ್ನಾಟಕದಲ್ಲಿ 'ಹೊಸೂರು' ಹೆಸರಿನ ಅನೇಕ ಊರುಗಳಿರುವುದರಿಂದ ಈ ಊರಿನ ಗುರುತು ಸಿಗುವುದಕ್ಕಾಗಿ 'ದೇವಿಹೊಸೂರ' ಎಂದು ನಾಮ ನಿರ್ದೇಶನ ಮಾಡಲಾಗಿದೆ. ಶ್ರೀನಿವಾಸ ರಿತ್ತಿಯವರು ದೇವಿಹೊಸೂರಿನ ದೇವಿಯ

ವಿಷಯವಾಗಿ ಹೀಗೆ ಬರೆಯುತ್ತಾರೆ. "ಕೊಲ್ಹಾಪುರದ ಮಹಾಲಕ್ಷ್ಮಿಯ ಜೊತೆಗೆ ಸಂಬಂಧ ಹೇಳುವ ಮತ್ತು ಸಮಕಾಲೀನವಾಗಿರುವ ಒಂದು ಶಕ್ತಿಸ್ಥಾನವು ಕರ್ನಾಟಕದ ಹಾವೇರಿ ಜಿಲ್ಲೆಯ ದೇವಿಹೊಸೂರಿನಲ್ಲಿದೆ. ಇಲ್ಲಿಯ ಒಂದು ಸ್ಥಾನಿಕ ಸತ್ತಾಧೀಶರಾದ ಇಂದರ ಅವರು ದೇವಿ ಮಂದಿರದೆದುರು ಮಕರ ತೋರಣ ಕಟ್ಟಿದ್ದಾರೆ ಎಂಬ ನಮೂನೆಯು. ಕ್ರಿ.ಶ. ೧೧೬೩ ರ ಕಾಲದ ಶಿಲಾಲೇಖನದಲ್ಲಿದೆ. ಇಂದರ ಅವರು ಸ್ವಂತಕ್ಕೆ 'ಮಹಾಲಕ್ಷ್ಮಿದೇವಿ ಪಾದಪಂಕಜ ಭ್ರಮರ' ಎಂದು ಕೊಂಡಿದ್ದಾರೆ. ಮಹಾಲಕ್ಷ್ಮಿಯ ಮೇಲಿನ ಭಕ್ತಿಯಿಂದ ಮಕರ ತೋರಣ ಕಟ್ಟುವ ಪುಣ್ಯದ ಕೆಲಸ ಮಾಡಿದ್ದಾರೆ. ದೇವಿಹೊಸೂರಿನ ದೇವಿಯ ಹೆಸರು 'ಮಾಳಜಾದೇವಿ' ಎಂದು ನಮೂದಿಸಲಾಗಿದೆ" (ಅದೇ ಪು.೨೭೮) ಇಲ್ಲಿ ಉಪಲಬ್ಧವಿರುವ ಇನ್ನೆರಡು ಶಿಲಾಲೇಖಗಳಲ್ಲಿ ದೇವಿಯ ಹೆಸರು ಕ್ರಮವಾಗಿ 'ಮಾಲಚಿದೇವಿ' ಮತ್ತು 'ಮಾಲಜಾದೇವಿ' ಎಂದು ಸಿಗುತ್ತವೆ. 'ಮಾಳಚಿ, 'ಮಾಳಜಾ' ಇವು ಮಹಾಲಕ್ಷ್ಮಿದೇವಿಯ ಹೆಸರಿನ ಭಿನ್ನ ಸ್ಥಾನಿಕ ರೂಪಗಳಾಗಿವೆ. ಮಾಳಚಿದೇವಿಗೆ ಈ ಶಿಲಾಲೇಖನದಲ್ಲಿ ಕಾಲಿ, ಕಾದ್ರಿ, ಭೈರವಿ, ಮಹಾಕಾಳಿ ಎಂಬ ವಿಶೇಷಣಗಳಿಂದ ಗೌರವಿಸಲಾಗಿದೆ.

ಇಲ್ಲಿಯ ಗ್ರಾಮಸ್ಥರು ಇದಕ್ಕೆ ಬನಶಂಕರಿಯೆಂದು ಗುರುತಿಸುತ್ತಾರೆ,. ಮಂದಿರವು ಸುಸ್ಥಿತಿಯಲ್ಲಿ ಇಲ್ಲದಿದ್ದರೂ ಸ್ಥಾನಿಕ ಸತ್ತಾಧೀಶನಾದ ಇಂದರನು ಕಟ್ಟಿಸಿದ ಮಕರ ತೋರಣ ಮಾತ್ರ ಇಂದಿಗೂ ಹಾಗೆಯೆ ಇದೆ. ಗರ್ಭಗೃಹದಲ್ಲಿ ಶಿರೋವಿಹಿನ ಮೂರ್ತಿಯಿದೆ. ತಲೆಯ ಸ್ಥಾನದಲ್ಲಿ ಪಕಳೆಗಳಿಂದ ಕಮಲವನ್ನು ಕೊರೆಯಲಾಗಿದೆ. ಹೊಕ್ಕಳವರೆಗಿನ ಭಾಗವನ್ನು ಉದ್ದೇಶಪೂರ್ವಕವಾಗಿ ಮುಚ್ಚಲಾಗಿದೆ. ಸ್ವಾಭಾವಿಕ ಅಂತರದಲ್ಲಿ ಹರಡಿದಂತಿರುವ ದೇವಿಯ ಕಾಲುಗಳು ವಸ್ತ್ರದ ಹೊರಗೆ ಕಾಣಿಸುತ್ತವೆ. ವಕ್ಷಸ್ಥಳದ ಮೇಲೆ ಕೃತ್ರಿಮ ಕಣ್ಣುಗಳನ್ನು ಹಚ್ಚಲಾಗಿದೆ.

ವಕ್ಷಸ್ಥಲವನ್ನು ಮುಚ್ಚುವ ರೀತಿಯಲ್ಲಿ ವಸ್ತ್ರದ ಎರಡೂ ತುದಿಗಳನ್ನು ಒಟ್ಟಿಗೆ ಸೇರಿಸಿ ಕಟ್ಟಲಾಗಿದೆ. ಮಂದಿರದ ಹೊರಗೆ ನಾಗಶಿಲೆಯಿದೆ. ಇವೆಲ್ಲ ಲಕ್ಷಣಗಳಿಂದ ದೇವಿಹೊಸೂರಿನ ಅಧಿದೇವತೆಯು ನವ ಸೃಷ್ಟಿಯ ದೇವತೆಯಾಗಿದ್ದಾಳೆ. ನಾಗನು ನವಸೃಷ್ಟಿಯ ಶಕ್ತಿಯ ಪುರುಷ, ಅವನು ಅವಳ ಸಹಚರನಾಗಿದ್ದಾನೆ. ಮಕರ ತೋರಣ ಕಟ್ಟಿಸಿದ ರಾಜ ಮತ್ತು ಅವನ ಕಾಲದ ಅನ್ಯ ಭಕ್ತರ ದೃಷ್ಟಿಯಲ್ಲಿ ಅಲ್ಲಿಯ ದೇವಿಯು ಮಹಾಲಕ್ಷ್ಮಿಯಾಗಿದ್ದಾಳೆ. ಆದರೆ ಪ್ರತ್ಯಕ್ಷದಲ್ಲಿರುವ ಮೂರ್ತಿಯು ಮಹಾಲಕ್ಷ್ಮಿಯ ಮೂರ್ತಿಯ ರೂಪದಂತಿಲ್ಲ. ಇವಳು ಶಿರೊವಿಹೀನ, ಕಮಲಶೀರ್ಷಾ ಉಳ್ಳವಳಾಗಿದ್ದಾಳೆ. ಶಕ್ತಿತ್ವದ ಆವಿಷ್ಕಾರವೆಂದು ಅವಳಿಗೆ ಮಹಾಲಕ್ಷ್ಮಿ ಎಂದು

ಕರೆಯುತ್ತಾರೆ. ಈ ಸಂತಾನದಾತ್ರಿ ದೇವಿಯು ಈ ಕ್ಷೇತ್ರದಲ್ಲಿ ಅನೇಕ ಶತಕಗಳಿಂದ ಪೂಜಿಸಲ್ಪಡುತ್ತಿದ್ದಾಳೆ. ಬಾದಾಮಿಯ ಬನಶಂಕರಿಯ ಸ್ಥಳಪುರಾಣದಲ್ಲಿ ದೇವಿಯ ಶಿರೋಹೀನತೆಯ ಸ್ಪಷ್ಟೀಕರಣ ಕಥೆಯು ಗ್ರಥಿತವಾಗಿದೆ. ಆದ್ದರಿಂದ ದೇವಿಹೊಸೂರಿನ ಗ್ರಾಮಸ್ಥರು ಅವಳಿಗೆ ಬನಶಂಕರಿಯೆಂದು ಗುರುತಿಸುತ್ತಾರೆ. ಆರಾಧಿಸುತ್ತಾರೆ. ಮಹಾಲಕ್ಷ್ಮಿಯ ಬದಲು ಬನಶಂಕರಿ ಎನ್ನುತ್ತಾರೆ. ದೇವಿಹೊಸೂರಿನ ದೇವಿಯು ಒಂದು ರೀತಿಯಲ್ಲಿ ಮಹಾಲಕ್ಷ್ಮಿಯಾದರೆ ಮತ್ತೊಂದು ರೀತಿಯಲ್ಲಿ ಬನಶಂಕರಿಯಾಗಿದ್ದಾಳೆ.

ಕಡಕೋಳದ ಕರವೀರಮ್ಮ :

ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಕಡಕೋಳ ಗ್ರಾಮದಲ್ಲಿ 'ಕರವೀರಮ್ಮ' ಹೆಸರಿನ ದೇವಸ್ಥಾನವಿದೆ. ಇದು ಕೊಲ್ಹಾಪುರದ ಮಹಾಲಕ್ಷ್ಮಿಯ ಒಂದು ಸ್ಥಳ ಎಂಬ ಕಲ್ಪನೆಯಾಗುತ್ತದೆ. ಆದರೆ ಇಲ್ಲಿಯ ಮೂರ್ತಿಯು ಕೊಲ್ಹಾಪುರದ ಲಕ್ಷ್ಮಿಯೊಂದಿಗೆ ಹೋಲುವುದಿಲ್ಲ. ಆದರೂ ಜನರು ಕೊಲ್ಹಾಪುರದ ಜೊತೆಗಿನ ಸಂಬಂಧ ಹೇಳುತ್ತಾರೆ. ಶ್ರೀನಿವಾಸ ರಿತ್ತಿಯವರು ಕಡಕೋಳದ ಗುಡಿಯು ಶಾಹೂ ಮನೆತನದವರಿಂದ ನಿರ್ಮಾಣವಾಗಿದೆಯೆಂದು ಹೇಳಿದ್ದಾರೆ. ಮಂದಿರದೊಳಗೆ ಶಾಹೂ ಮಹಾರಾಜರ ಚಿತ್ರವಿದೆಯೆಂದು ಉಲ್ಲೇಖಿಸಿದ್ದಾರೆ. ಸ್ಥಾನಿಕ ಜನರ ಪ್ರಕಾರ ಈ ದೇವಸ್ಥಾನವು ಕೊಲ್ಹಾಪುರಕ್ಕಿಂತ ಪ್ರಾಚೀನವಾಗಿದೆ. ಇಲ್ಲಿ ೧೧ ವರುಷಕ್ಕೊಮ್ಮೆ ಜಾತ್ರೆಯಾಗುತ್ತದೆ. ಜಾತ್ರೆ ಸಮಯದಲ್ಲಿ ಜಾತ್ರೆಯ ಸಂಕಲ್ಪನೆಯೆಂದು ತೆಂಗಿನಕಾಯಿ ಇಟ್ಟ ನಂತರ ಕೊಲ್ಹಾಪುರದ ದೇವಿಯ ಎದುರು ತೆಂಗಿನಕಾಯಿ ಇಡುವಂತಿಲ್ಲ. ಈ ಸಂಕೇತವನ್ನು ಕೊಲ್ಹಾಪುರದಲ್ಲಿ ತಪ್ಪದೇ ಪಾಲಿಸುತ್ತಾರೆ. ಕಡಕೋಳದ ಕರವೀರಮ್ಮ ತೋರಗಲ್ಲಿನ ಸಿಂಧೆ ಮನೆತನದ ಆರಾಧ್ಯ ದೇವತೆಯಾಗಿದೆ.

ದೇವಿಯ ಮೂರ್ತಿಯು ಕಪ್ಪು ಶಿಲೆಯದಾಗಿದೆ. ದೇವಿಹೊಸೂರಿನಂತೆ ಇಲ್ಲಿಯೂ ನಾಗಶಿಲೆಯಿದೆ. ಇಲ್ಲಿಯ ದೇವಿಯ ಸೋದರನ ಹೆಸರು ಸಿದ್ಧರಾಯ. ಖಂಡೋಬನಂತೆ ಇವನೂ ಕ್ಷೇತ್ರಪಾಲನಾಗಿದ್ದಾನೆ. ದೇವಿಗೆ ಒಬ್ಬ ಸೋದರಿಯೂ ಇದ್ದಾಳೆ. ಅವಳ ಹೆಸರು 'ದ್ಯಾಮವ್ವ'. ಇವಳು ಕರ್ನಾಟಕದ ಪ್ರಸಿದ್ಧ ಜಾನಪದ ದೇವತೆಯಾಗಿದ್ದಾಳೆ. ಆದರೆ ರಾ.ಚಿ.ಢೇರೆಯವರು ಈಗಿನ ತೊರಗಲ್ ಸಿಂಧೆ ಮನೆತನದ ವಂಶಸ್ಥನಾದ ಸಂಜಯಸಿಂಗ ಶಿಂದೆಯವರನ್ನು ಸಂದರ್ಶಿಸಿ ಕೆಳಗಿನ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಅವರ ಪ್ರಕಾರ ತೋರಗಲ್ಲಿನ ದೇವಿ ಅವರ ಕುಲದೇವತೆಯಲ್ಲ. ಆ ದೇವಿಗೂ ಕೊಲ್ಹಾಪುರದ ಲಕ್ಷ್ಮಿಗೂ

ಸಂಬಂಧ ಜೋಡಿಸುವ ಯಾವುದೇ ಆಚರಣೆಗಳು ಶಿಂದೆ ಮನೆತನದಲ್ಲಿ ಇಲ್ಲ. ದೇವಿಯ ಮಂದಿರದಲ್ಲಿ ಹಾಕಿರುವ ಚಿತ್ರ ಶಾಹು ಛತ್ರಪತಿ ಅಥವಾ ರಾಜಾರಾಮ ಛತ್ರಪತಿಯರದಾಗಿರಬೇಕು. ದೇವಿಯ ಹೆಸರು 'ಕರವೀರಮ್ಮ ಆಗಿರದೆ ಕಾರಮ್ಮ' ಆಗಿದೆ. ಕಡಕೋಳದ ದೇವಿಯ ಮುಂದೆ ಇಡುವ ತೆಂಗಿನಕಾಯಿಯ ವಿಷಯ ತಮಗೆ ತಿಳಿದಿಲ್ಲ. ಆದರೆ ಕರವೀರದ ಮಹಾರಾಣಿ ಜೀಜಾಬಾಯಿಯ ತವರುಮನೆ ತೊರಗಲ್ಲದ ಶಿಂದೆ ಮನೆತನವಾಗಿದೆ. ಈ ಸಂಗತಿಗಳಿಗೆ ಕಾಗದ ಪಾತ್ರಗಳ ಆಧಾರವಿದೆ. ಈ ಆಧಾರದ ಮೇಲಿಂದ ಇಲ್ಲಿಯ ದೇವಿಯು 'ಕಾರಮ್ಮ' ಆಗಿದ್ದಾಳೆ. 'ಕಾರಮ್ಮ' ಎಂದರೆ 'ಕಾರಿ ಅಮ್ಮ' ಕಡಕ–ಉಗ್ರ–ಕಠೋರ ದೇವಿಯಾಗಿದ್ದಾಳೆ. ಕಡಕೋಳದ ದೇವಿಯು ಕರವೀರಮ್ಮನಾಗಿರದೇ ಕಾರಮ್ಮಳಾಗಿದ್ದಾಳೆ. ಆದರೂ ಜನರಲ್ಲಿ ಅವಳು ಮಹಾಲಕ್ಷ್ಮಿಯೆಂದೇ ಗೃಹೀತವಾಗಿದ್ದಾಳೆ. ಎಂಬುದನ್ನು ಢೇರೆಯವರು ಪ್ರತ್ಯಕ್ಷ ಆಧಾರಗಳಿಂದ ಬೆಳಕಿಗೆ ತಂದಿದ್ದಾರೆ.

ಶಿರೂರು :

ಬಾಗಲಕೋಟೆ ಜಿಲ್ಲೆಯಲ್ಲಿ ಶಿರೂರ ಎಂಬ ಊರು ಇದೆ. ಇಲ್ಲಿಯ ಸಿದ್ಧೇಶ್ವರ ಮಂದಿರದ ಗೋಡೆಯ ಮೇಲೆ ಒಂದು ಸಂಸ್ಕೃತ ಮತ್ತು ಒಂದು ಕನ್ನಡ ಹೀಗೆ ಎರಡು ಶಾಸನಗಳಿದ್ದು ಎರಡೂ ಶಾಸನಗಳ ಲಿಪಿ ಕನ್ನಡದಲ್ಲಿದೆ. ಈ ಎರಡು ಶಾಸನಗಳಲ್ಲಿ ಮೊದಲನೆಯದು (ಕ್ರ.೮೫) ಮತ್ತು ಎರಡನೆಯದು(ಕ್ರ.೯೯) ಆಗಿವೆ. ಈ ಎರಡೂ ಶಾಸನಗಳು 'ಬಾಂಬೆ ಕರ್ನಾಟಕಇನ್‌ಸ್ಕ್ರಿಪ್ಷನ್ಸ್, ಖಂಡ ೧, ಭಾಗ ೧ರಲ್ಲಿ ಪ್ರಕಟವಾಗಿವೆ. ಎರಡೂ ಲೇಖನಗಳ ಆಶಯ ಒಂದೇ ಆಗಿದೆ. ಪ್ರಭು ರಾಜವರ್ಮನೆಂಬವನು ಕೊಲ್ಹಾಪುರ ಲಕ್ಷ್ಮಿಯ ಭಕ್ತನಾಗಿದ್ದ. ಅವನ ವಂಶಜ ಮಾರಸಿಂಘ ಪ್ರಭು ಕೂಡ ಮಹಾಲಕ್ಷ್ಮಿಯ ಪರಮ ಭಕ್ತನಾಗಿದ್ದ.

ಶಿರೂರಿನ ದೇವತೆಗಳ ಪೂಜೆಗಾಗಿ, ಜೀರ್ಣೋದ್ಧಾರಕ್ಕಾಗಿ, ಮಂದಿರದ ಕಾರ್ಯ–ಕಲಾಪಗಳಿಗಾಗಿ ಮಾಡಿರುವ ದಾನಗಳನ್ನು ಈ ಲೇಖನದಲ್ಲಿ ನಮೂದಿಸಲಾಗಿದೆ. ಶಿರೂರಿನ ಪ್ರಾಚೀನ ಹೆಸರು 'ಶ್ರೀಪುರ' ಎಂದಿತ್ತು. ಈ ಇಬ್ಬರೂ ಭಕ್ತರು ಸ್ವಂತಕ್ಕೆ 'ಶ್ರೀಮನ್ ಮಹಾಲಕ್ಷ್ಮಿ ಪಾದ ಪದ್ಮೋಪಜೀವಿ' ಎಂದು ಘೋಷಿಸಿದ್ದರು. ಈ ಪಂಕ್ತಿಗಳಿಂದ ಮಹಾಲಕ್ಷ್ಮಿಯ ಸ್ವರೂಪವು ಭಕ್ತರ ಚಿಂತನೆಗೆ ಮಾರ್ಗದರ್ಶಕವಾಗಿದೆ. ಸಿದ್ಧೇಶ್ವರ ಮಂದಿರದಲ್ಲಿಯ ಎರಡು ಶಾಸನಗಳ ಪ್ರಕಾರ ಕೊಲ್ಹಾಪುರ ಮಹಾಲಕ್ಷ್ಮಿ ಪೀಠವು ಭಾರತದಲ್ಲಿಯ ಒಂದು ಶೈವ ಕ್ಷೇತ್ರವಾಗಿದೆ. ೬೪ ಯೋಗಿನಿಯರಿಂದ ಮತ್ತು ಸಿದ್ಧಗಣದಿಂದ ಕೂಡಿದೆ. ಅವಳ ಕ್ಷೇತ್ರ ಪವಿತ್ರವಾಗಿದೆ. ಅವಳು ಮಹಾಪಾತಕ ವಿನಾಶಿನಿಯಾಗಿದ್ದಾಳೆ. ಅವಳು ಮಹಾಶಕ್ತಿಯಾಗಿದ್ದು

ರುದ್ರನ ಅರ್ಧಾಂಗಿಯಾಗಿದ್ದಾಳೆ. ಅವಳು ಸಿಂಹವಾಹಿನಿ, ಸಕಲ ದೇವಗಣಗಳಲ್ಲಿ ಪ್ರಮುಖಳು. ಈ ವಿಶಿಷ್ಟ ಸಂಗತಿಯು ಇಲ್ಲಿಯ ಶಾಸನಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವುದರಿಂದ ಇವು ಮಹತ್ವದ ಶಾಸನವೆನಿಸಿವೆ.

ವಿಜಯಪುರ :

ಪಾಂಡುರಂಗ ದೇಸಾಯಿ ಎಂಬುವವರು ತಾಯಿಯ ಇಚ್ಛೆ ಪೂರೈಸುವುದಕ್ಕಾಗಿ ಈ ಮಹಾಲಕ್ಷ್ಮಿಯ ಗುಡಿ ಕಟ್ಟಿಸಿದ್ದಾರೆ. ಕ್ರಿ.ಶ. ೧೯೮೯-೧೯೧೫ರಲ್ಲಿ ಈ ದೇವಸ್ಥಾನ ಕಟ್ಟಲಾಯಿತು. ಗರ್ಭಗುಡಿಯ ಮೇಲೆ ಶಿಖರವಿದೆ. ಪ್ರಾಕರದಲ್ಲಿ ಗಣೇಶ, ಶಿವ, ಪಾರ್ವತಿ, ವಿಷ್ಣು, ಸೂರ್ಯನಾರಾಯಣ ಮೂರ್ತಿಗಳಿವೆ. ಮಹಾಲಕ್ಷ್ಮಿಯ ಮೂರ್ತಿಯು ಜಯಪುರ ಕಲ್ಲಿನಲ್ಲಿ ನಿರ್ಮಾಣವಾಗಿದೆ. ಆವರಣದಲ್ಲಿಯ ಎಲ್ಲ ಮೂರ್ತಿಗಳು ಸಂಗಮರವರಿ ಕಲ್ಲಿನಸ್ಥಾನವು ವೈಯಕ್ತಿಕ ಆಸ್ತಿಯಾಗಿದ್ದರೂ ಎಲ್ಲ ಜನರಿಗೆ ಮುಕ್ತವಾಗಿದೆ.

ಕುಂಭಕೋಣಮ್ :

ದಕ್ಷಿಣ ಭಾರತದಲ್ಲಿ ಆದಿಶಕ್ತಿಯ ಅನೇಕ ಕ್ಷೇತ್ರಗಳು ಪ್ರಸಿದ್ಧಿ ಪಡೆದಿವೆ. ತಂಜಾವೂರಿನ ಬ್ರಹ್ಮನ್ನಾಯಕಿ, ಕಂಚಿಯ ಕಾಮಾಕ್ಷಿ, ಮಧುರೆಯ ಮೀನಾಕ್ಷಿ , ಕನ್ಯಾಕುಮಾರಿ, ರಾಮೇಶ್ವರದ ರಾಜೇಶ್ವರಿ ಹೀಗೆ ನಾನಾ ಹೆಸರುಗಳಿಂದ ಮಹಾಶಕ್ತಿ ದೇವತೆಯು ಹೆಸರು ಪಡೆದಿದ್ದಾಳೆ. ಕೆಲವು ಕಡೆ ಕಾಳಿ, ಕೆಲವು ಕಡೆ ದ್ರೌಪದಿ ಮತ್ತು ಮಾರಿಯಮ್ಮ ಹೆಸರಿನಿಂದ ದರ್ಶನ ಕೊಡುತ್ತಾಳೆ. ತಮಿಳುನಾಡಿನಲ್ಲಿ ಶಕ್ತಿಯ ಭವ್ಯ ಗುಡಿಗಳಿವೆ. ಸುಂದರ ವಾಸ್ತುಶಿಲ್ಪದಿಂದ ಆಕರ್ಷಣೀಯವಾಗಿವೆ. ಆದರೆ ಇಂತಹ ವಿಸ್ತಾರವಾದ ಗುಡಿಗಳಲ್ಲಿ ಸಹ ಮಹಾಲಕ್ಷ್ಮಿಯ ದರ್ಶನವಾಗುವುದಿಲ್ಲ. ತಮಿಳುನಾಡಿನಲ್ಲಿ ಅನುಭವಕ್ಕೆ ಬರುವ ಕರವಿರನಿವಾಸಿನಿ ದೇವಿಯ ಬಗ್ಗೆ ಇರುವ ಒಂದು ಅದ್ಭುತ ಲೌಕಿಕ ಕಥೆಯಿದೆ. ನೂರಾರು ಯೋಜನ ದೂರವಿರುವ ಎರಡು ಕ್ಷೇತ್ರಗಳ ಮಧ್ಯೆ ಹೇಗೆ ಆತ್ಮೀಯತೆ ನಿರ್ಮಾಣವಾಗುತ್ತದೆಂಬುದು ಈ ಕಥೆಯಿಂದ ಸ್ಪಷ್ಟವಾಗುತ್ತದೆ.

ವೆಂಕಟೇಶ ಮತ್ತು ಮಹಾಲಕ್ಷ್ಮಿಗೆ ಸಂಬಂಧಿಸಿದ ಕಥೆಯು ಇಲ್ಲಿ ವಿಸ್ತೃತ ರೂಪ ಪಡೆದಿರುವುದನ್ನು ಕಾಣಬಹುದಾಗಿದೆ. ಭೃಗು ಮಹರ್ಷಿಯು ವಿಷ್ಣುವಿನ ವಕ್ಷಸ್ಥಲಕ್ಕೆ ಒದ್ದ ಮೇಲೆ, ವಿಷ್ಣುವು ಋಷಿಗೆ ದಂಡಿಸದೆ, ಋಷಿಯ ಒದ್ದ ಪಾದಗಳ ಚಿನ್ಹೆಯನ್ನು 'ಶ್ರೀಲಾಂಛನ'ವೆಂದು ತನ್ನ ಎದೆಯ ಮೇಲೆ ಧರಿಸಿದ. ಇದರಿಂದ ಸಂತಾಪಗೊಂಡ ಮಹಾಲಕ್ಷ್ಮಿಯು ವೈಕುಂಠವನ್ನು ತ್ಯಜಿಸಿ ಕೊಲ್ಹಾಪುರಕ್ಕೆ ಬಂದು ನೆಲೆಸಿದಳು. ಈ ಕಥೆಯನ್ನು

ಎಲ್ಲರೂ ತಿಳಿದಿದ್ದೇವೆ. ಇದರ ನಂತರ ವಿಷ್ಣುವು ವಿರಹ ಸಹಿಸದೆ ಭೂಲೋಕಕ್ಕೆ ಬಂದು, ತಿರುಮಲೈನಲ್ಲಿ ಭೇಟಿಯಾದ ಪದ್ಮಾವತಿಯ ಜೊತೆಗೆ ವಾಸ್ತವ್ಯ ಮಾಡಿದ. ಸುದ್ದಿ ತಿಳಿದ ಮೇಲೆ ಮಹಾಲಕ್ಷ್ಮಿಯು ಉದ್ರೇಕಗೊಂಡಳು. ಇದು ನಮಗೆ ತಿಳಿದಿರುವ ಸಂಗತಿಯಾಗಿದೆ. ಶ್ರೀ ಮಹಾಲಕ್ಷ್ಮಿ ಚರಿತ್ರೆಯಲ್ಲಿರುವ ಈ ಸಂಸಾರದ ಲೀಲೆ ದಕ್ಷಿಣದ ಜನರಿಗೆ ಅಪೂರ್ಣವೆನಿಸಿತು. ಅವರು ಮಹಾಲಕ್ಷ್ಮಿಯ ರಹಸ್ಯದ ಕಥೆಯನ್ನು ವೈಕುಂಠದಿಂದ ಕೊಲ್ಹಾಪುರಕ್ಕೆ , ಅಲ್ಲಿಂದ ತಿರುಮಲೈಗೆ ಮತ್ತು ತಿರುಮಲೈದಿಂದ ಕುಂಭಕೋಣಕ್ಕೆ ಬೆಳೆಸಿದರು. ನಾರದನು ಕೊಲ್ಹಾಪುರಕ್ಕೆ ಬಂದು ಮಹಾಲಕ್ಷ್ಮಿಗೆ ಹೇಳುತ್ತಾನೆ. "ನಿನ್ನ ಪತಿ ವಿರಹದ ನಾಟಕವಾಡಿ ತಿರುಮಲೈನಲ್ಲಿ ನಿಂತು ಪದ್ಮಾವತಿಯ ಜೊತೆಗೆ ಸಂಬಂಧ ಪ್ರಸ್ತಾಪಿಸಿದ್ದಾನೆ". ಇದನ್ನು ಕೇಳಿದ ಲಕ್ಷ್ಮಿಯು ತಕ್ಷಣ ತಿರುಮಲೈಗೆ ಹೊರಟಳು. ಆದರೆ ಅವಳು ತಿರುಮಲೈ ತಲುಪುವುದರೊಳಗಾಗಿ ನಾರದನು ವೆಂಕಟೇಶನಲ್ಲಿಗೆ ಬಂದು "ಲಕ್ಷ್ಮಿಯು ನಿನ್ನನ್ನು ಅರಸಿಕೊಂಡು ಬರುತ್ತಿದ್ದಾಳೆ". ಎಂದು ವೆಂಕಟೇಶನಿಗೆ ಎಚ್ಚರಿಸಿದ. " ಮಹಾಲಕ್ಷ್ಮಿಗೆ ನಿನ್ನ ಮತ್ತು ಪದ್ಮಾವತಿಯ ವಿಷಯ ತಿಳಿದಿದೆ. ಅವಳು ಇಲ್ಲಿಗೆ ಬಂದು ನಿನ್ನನ್ನು ಪ್ರಶ್ನಿಸುವುದರೊಳಗಾಗಿ ನೀನು ಇಲ್ಲಿಂದ ಹೊರಡು ಮತ್ತು ಕುಂಭಕೋಣದಲ್ಲಿ ಆಶ್ರಯ ಪಡೆ" ಎಂದು ಉಪದೇಶಿಸಿದ. ನಾರದನ ಸೂಚನೆಯಂತೆ ವೆಂಕಟೇಶನು ತಿರುಮಲೈನಿಂದ ವೇಗವಾಗಿ ಹೊರಟ. ಲಕ್ಷ್ಮಿಯೂ ಅಷ್ಟೇ ವೇಗದಿಂದ ಅವನನ್ನು ಹಿಂಬಾಲಿಸಿದಳು.ಆದರೆ ಕುಂಭಕೋಣಕ್ಕೆ ಬಂದ ಮೇಲೆ ಲಕ್ಷ್ಮಿ ಶಾಂತಳಾದಳು. ಅಲ್ಲಿಯ ವಿಶಾಲ ತೀರ್ಥದಲ್ಲಿ ಸುವರ್ಣದ ಸಹಸ್ರದಲ ಕಮಲ ನಿರ್ಮಿಸಿ ಅದರಲ್ಲಿ ತಾನು ನವಜಾತ ಶಿಶುವಿನ ರೂಪ ಧಾರಣ ಮಾಡಿದಳು. ಅ ತೀರ್ಥದ ದಡದಲ್ಲಿ ಹೇಮ ಋಷಿಯು ತಪವನ್ನಾಚರಿಸುತ್ತಿದ್ದ. ಅವನು ನವಜಾತ ಶಿಶುವನ್ನು ನೋಡಿ, ಎತ್ತಿ ಸಾಕಿ ಬೆಳೆಸಿದ. ಅವಳು ತಾರುಣ್ಯವಸ್ಥೆ ಪಡೆದ ಮೇಲೆ 'ಸಾರಂಗಪಾಣಿ' ಎಂಬ ಹೆಸರಿನಿಂದ ಗುರುತಿಸಲ್ಪಡುವ ವಿಷ್ಣುವಿನೊಂದಿಗೆ ಅವಳ ವಿವಾಹ ಏರ್ಪಡಿಸಿದ. ಸ್ಥಾನಿಕ ಕಥೆಗನುಗುಣವಾಗಿ, 'ಸಾರಂಗಪಾಣಿ'ಯೆಂದರೆ ತಿರುಮಲೈನಿಂದ ಬಂದ ಶ್ರೀನಿವಾಸ. ಸುವರ್ಣ ಕಮಲದಲ್ಲಿ ಪ್ರಕಟಗೊಂಡ ಮಹಾಲಕ್ಷ್ಮಿಯ ಕುಂಭಕೋಣದಲ್ಲಿಯ ಹೆಸರು 'ಕಮಲವಲ್ಲಿ'. ಅವಳ ಪ್ರಕಟೀಕರಣದ ಸ್ಥಾನ 'ಲಕ್ಷ್ಮಿತೀರ್ಥ'ವೆಂದು ಗುರುತಿಸಲ್ಪಡುತ್ತದೆ. ಈ ತೀರ್ಥಕ್ಷೇತ್ರದ ಪರಿಸರದಲ್ಲಿ ಪಾರಿಜಾತ ವೃಕ್ಷಗಳಿವೆ. ಇಲ್ಲಿಯ ದೇವಿಗೆ ಬೆಳ್ಳಿ, ಬಂಗಾರದ ರಥಗಳಿವೆ. ಇಲ್ಲಿ ದೇವ ದಂಪತಿಗಳ ನೌಕಾವಿಹಾರ ಜರಗುತ್ತದೆ. ಅನೇಕ ಉತ್ಸವಗಳು ನೆರವೇರುತ್ತವೆ. ಕುಂಭಕೋಣ ಕ್ಷೇತ್ರದ ದೇವತಾ ಪರಿವಾರದಲ್ಲಿ ವೈಷ್ಣವ ಪರಂಪರೆಯ ಲೋಕಕಥೆಯು ಹೀಗೆ

ಬಣ್ಣ ಪಡೆದು ರಂಜಿಸುತ್ತಿದೆ ಎಂದು ಕುಂಭ ಕೋಣದಲ್ಲಿಯ ಲಕ್ಷ್ಮಿಯ ವೈಷ್ಣವೀಕರಣವನ್ನು ಢೇರೇಯವರು ವಿವರಿಸಿದ್ದಾರೆ.

ಗುಜರಾತ : ಅನಹಿಲವಾಡ :

ಗುಜರಾತದ ಅನಹಿಲವಾಡದಲ್ಲಿ ಅಲ್ಲಿಯ ಪ್ರಸಿದ್ಧರಾಜನಾದ ಸಿದ್ದರಾಜ ಸೋಳಂಕಿಯು 'ಸಿದ್ದರಾಜ' ಸರೋವರ ನಿರ್ಮಿಸಿದ. ಅದರ ತೀರದಲ್ಲಿ ಕೊಲ್ಹಾಪುರದಂತೆ ಮಹಾಲಕ್ಷ್ಮಿ ಸ್ಥಾನವನ್ನು ನಿರ್ಮಿಸಿದ ಎಂದು 'ಸರಸ್ವತಿ ಪುರಾಣ' ಗ್ರಂಥದಲ್ಲಿ ವಿವರಿಸಲಾಗಿದೆ. ಗ.ಹ. ಖರೆಯವರು ಪುರಾಣದ ಹಸ್ತ ಪ್ರತಿಯನ್ನು ಆಧರಿಸಿ ಪ್ರಸ್ತುತ ಕ್ಷೇತ್ರವನ್ನು ಕುರಿತು ಹೀಗೆ ಉಲ್ಲೇಖಿಸಿದ್ದಾರೆ.

ಅನಹಿಲವಾಡದಲ್ಲಿ ರಾಜನು ಕೊಲ್ಹಾಪುರದಂತೆಯೇ ಮಹಾಪೀಠ ಸ್ಥಾಪಿಸಿದ ನಂತರ ಪೂರ್ವದಲ್ಲಿ ಮಹಾಲಕ್ಷ್ಮಿ, ದಕ್ಷಿಣದಲ್ಲಿ ಕೊಲ್ಲಾ, ಪಶ್ಚಿಮದಲ್ಲಿ ಕಂಕಾಳ ಭೈರವ ಮತ್ತು ಉತ್ತರದಲ್ಲಿ ಹಲವಾರು ದೇವತೆಗಳಿಗೆ ಮಂದಿರ ಕಟ್ಟಿಸಿದ. ಸರಸ್ವತಿ ಪುರಾಣದ ಪ್ರಕಾರ ಪೂರ್ವಕ್ಕೆ ಮಹಾಲಕ್ಷ್ಮಿ, ದಕ್ಷಿಣಕ್ಕೆ ಕೊಲ್ಲ, ಪಶ್ಚಿಮದಲ್ಲಿ ಕಂಕಾಳ ಭೈರವ ಇರುವನೆಂದು ತಿಳಿಯುತ್ತದೆ. ಆದರೆ ಮಹಾಲಕ್ಷ್ಮಿಯ ದಕ್ಷಿಣದಲ್ಲಿ ಮಹಾಸರಸ್ವತಿ ಮತ್ತು ಉತ್ತರದಲ್ಲಿ ಮಹಾಕಾಳಿ ಇದ್ದರೆ, ಮಹಾ ಸರಸ್ವತಿಯೆಂದರೆ ಕೊಲ್ಲನೊ? ಅಥವಾ ಮಹಾ ಸರಸ್ವತಿಯ ಸ್ಥಾನದಲ್ಲಿ ಕೊಲ್ಲನೊ ತಿಳಿಯುವದಿಲ್ಲ. ಈಗಿನ ಕೊಲ್ಹಾಪುರದಲ್ಲಿ ಕಂಕಾಳ ಭೈರವನ ಪತ್ತೆಯೇ ಇಲ್ಲ. ದೇವಿಗೆ ಪ್ರಿಯವಾಗಿರುವ ಪ್ರಸ್ತುತ ಪೀಠವು 'ಕೊಲ್ಹಾಪುರ ಪೀಠ'ವೆಂದೇ ಪ್ರಸಿದ್ಧವಾಗಿದೆ. ಭೈರವನು ಕ್ಷೇತ್ರಪಾಲಕನಾಗಿರುವನು. ಪರಿವಾರ ದೇವತೆಗಳಲ್ಲಿ ಸರಸ್ವತಿಯ ಉಲ್ಲೇಖವಿಲ್ಲ. ಕೊಲ್ಹಾಪುರದಲ್ಲಿ ಮಹಾಲಕ್ಷ್ಮಿಯ ಜೊತೆಗೆ ಮಹಾಕಾಳಿ, ಮಹಾ ಸರಸ್ವತಿಯರಿದ್ದಾರೆ. ಮಹಾಸರಸ್ವತಿಯ ಮೂರ್ತಿಯು ಆನಂತರದಲ್ಲಿ ಪ್ರತಿಷ್ಠಾಪಿಸಲಾಗಿದೆ ಎಂಬ ಅಭಿಪ್ರಾಯವೂ ಇದೆ. ಆದರೆ ಇಂದು ಅನಹಿಲವಾಡದಲ್ಲಿ ಸಿದ್ದರಾಜ ಸರೋವರವಿಲ್ಲ. ಶಕ್ತಿ ಪೀಠವಿಲ್ಲ. ಮಹಾಲಕ್ಷ್ಮಿಯ ಮಂದಿರವಿಲ್ಲ. ಕೇವಲ ಪುರಾತತ್ವಜ್ಞನಿಗಳ ಕುತೂಹಲದ ವಿಷಯವಾಗಿರುವ ಈ ದೇವ ಭೂಮಿಯು ಒಂದು ಕಾಲದಲ್ಲಿ ಪರಮ ವೈಭವದಿಂಧ ಶೋಭಾಯಮಾನವಾಗಿತ್ತು ಎಂದು ತಿಳಿದು ಬರುತ್ತದೆ. ಸರಸ್ವತಿ ಪುರಾಣದಂತೆ ಮಹಾಲಕ್ಷ್ಮಿಯ ಮೂಲ ಪೀಠ ಅಂದರೆ ಕೊಲ್ಹಾಪುರದಲ್ಲಿ ಒಂದು ಕಾಲದಲ್ಲಿ ಕಪಾಲೇಶ್ವರನಿದ್ದ. ಕಂಕಾಳ ಭೈರವನಂತೂ ಇಂದಿಗೂ ಮಹಾಲಕ್ಷ್ಮಿಯ ದೇವಸ್ಥಾನದ ಸಮೀಪದ ರಂಕಭೈರವನ ಗುಡಿಯಲ್ಲಿರುವನು. ಸರಸ್ವತಿ ಪುರಾಣವು ೧೨ನೆಯ ಶತಮಾನದಲ್ಲಿ ರಚನೆಯಾದ ಕೃತಿ. ಅದರಲ್ಲಿ ಪಾಠ ದೋಷಗಳಿವೆ.

ಇದರ ಶುದ್ಧ ಪ್ರತಿ ಸಂಪಾದಿಸಿದರೆ ಮಹಾಲಕ್ಷ್ಮಿಯ ಬಗ್ಗೆ ಅನೇಕ ಹೊಸ ವಿವರಗಳು ಲಭ್ಯವಾಗಬಹುದಾಗಿದೆ.

ತಗರ :

ತಗರ ಹೆಸರಿನಿಂದ ಮಹಾರಾಷ್ಟ್ರದ ಪ್ರಾಚೀನ ಇತಿಹಾಸದಲ್ಲಿ ಪ್ರಸಿದ್ಧಿ ಪಡೆದ ನಗರವು ಇಂದು 'ತೇರ' ಹೆಸರಿನಿಂದ ಗುರುತಿಸಲ್ಪಡುತ್ತದೆ. 'ತೇರ' ಇದು ಉಸ್ಮಾನಾಬಾದ ಜಿಲ್ಲೆಯ ತೇರಣಾ ನದಿಯ ತೀರದ ಮೇಲಿದೆ. ಈ ಪ್ರಾಚೀನ ನಗರದಲ್ಲಿ ಶಾತವಾಹನರ ಅನೇಕ ಅವಶೇಷಗಳು ದೊರೆಯುತ್ತವೆ. ಇಂದಿಗೂ ತ್ರಿವಿಕ್ರಮ, ಉತ್ತರೇಶ್ವರ ಮೊದಲಾದ ಪ್ರಾಚೀನ ದೇವಾಲಯಗಳಿವೆ. ಬುದ್ಧ, ಶಿವ, ವಿಷ್ಣು, ಜಿನ ಕಾರ್ತಿಕೇಯ, ಗಣೇಶ, ಲಜ್ಜಾಗೌರಿ ಮತ್ತು ಮಹಾಲಕ್ಷ್ಮಿಯ ಉಪಾಸನೆಯಿಂದ ಈ ನಗರವು ಧರ್ಮ ಸಮನ್ವಯದ ನೆಲವೀಡಾಗಿತ್ತು ಎಂದು ತಿಳಿದುಬರುತ್ತದೆ. ತೇರ, ಕರ್ಹಾಡ, ಮನ್ಹಾಳ, ಕೊಲ್ಹಾಪುರಗಳಲ್ಲಿ ರಾಜ್ಯಾಡಳಿತ ನಡೆಸಿ ಪ್ರಸಿದ್ಧಿ ಪಡೆದ ಶಿಲಾಹಾರರ ಅರಸರು 'ತಗರಪುರ ಪರಮೇಶ್ವರ' 'ತಗರಪುರವರಾಧೀಶ್ವರ', 'ತಗರೇಶ್ವರ' ಎಂಬ ಬಿರುದುಗಳನ್ನು ಅಭಿಮಾನದಿಂದ ಹಚ್ಚಿಕೊಳ್ಳುತ್ತಿದ್ದರು. ಕೊಲ್ಹಾಪುರದ ಶಕೆ ೧೦೪೮ರ ತಾಮ್ರಪಟವು ಶಿಲಾಹಾರ ಮನೆತನದ ರಾಜಪುರುಷನಾದ ಗಂಡರಾದಿತ್ಯನ ತಗರಪುರದ ಸಂಬಂಧವನ್ನು ಸ್ಪಷ್ಟವಾಗಿ ಘೋಷಿಸುತ್ತದೆ. 'ಶ್ರೀ ಮಹಾಲಕ್ಷ್ಮಿ ಲಬ್ಧವರ ಪ್ರಸಾದಾದಿ ಸಮಸ್ತ ರಾಜಾವಲಿ ವಿರಾಜಿತ ಶ್ರೀ ಮಹಾಮಂಡಲೇಶ್ವರನಾದ ಗಂಡರಾದಿತ್ಯ' ಎಂದು ತನ್ನ ಕುಲ ಪರಿಚಯವನ್ನು ಹೇಳುತ್ತಾನೆ. ಪೂರ್ವದಲ್ಲಿ 'ಜಿಮೂತವಾಹನ' ಎಂಬ ಹೆಸರಿನ ವಿದ್ಯಾಧರನಿದ್ದ. ಅವನು ಹಾವಿನ ಪ್ರಾಣ ಉಳಿಸುವುದಕ್ಕಾಗಿ ತನ್ನ ಪ್ರಾಣವನ್ನೇ ಗರುಡನಿಗೆ ಅರ್ಪಿಸಿದ. ಅವನ ವಂಶವೇ 'ಶಿಲಾಹಾರ'ವಂಶ. ಅವರು ಮಹಾಲಕ್ಷ್ಮಿಯ ಪರಮ ಭಕ್ತರು. ಅವಲ ವರ ಪ್ರಸಾದವನ್ನು ಅಭಿಮಾನದಿಂದ ಹೇಳಿಕೊಳ್ಳುತ್ತಿದ್ದರು. (ಶಿಲಾಹಾರ ರಾಜವಂಶೀಯ ಇತಿಹಾಸ ಆಣಿ ಕೋರೀವ ಲೇಖ. ವಾ.ವಿ. ಮಿರಾಶಿ) ಖರೆಯವರು ತೇರದಲ್ಲಿ ಉಪಲಬ್ಧವಿರುವ ನಾಲ್ಕು ಶಾಸನಗಳನ್ನು ಸಂಪಾದಿಸಿದ್ದಾರೆ. ಬೌದ್ಧ, ಜೈನ, ಶೈವ, ವೈಷ್ಣವರ ಭಗ್ನಾವಶೇಷಗಳನ್ನು ದಾಖಲಿಸಿದ್ದಾರೆ. ಒಂದನೆಯದು ಭಗ್ನವಾಗಿದೆ. ಎರಡನೆಯದು ತ್ರುಟಿತವಾಗಿದೆ. ಮೂರನೆಯದರಲ್ಲಿ ದಾನವ ವಿವರವಿದೆ. ನಾಲ್ಕನೆಯದರಲ್ಲಿ ಊರ ಹೆಸರು 'ತ್ಯೆರ' ಎಂಬ ಉಲ್ಲೇಖವಿದೆ. ನಾಲ್ಕೂ ಶಾಸನಗಳಲ್ಲಿ ಅರಸರ ಬಗೆಗೆ, ಮಹಾಲಕ್ಷ್ಮಿಯ ಭಕ್ತಿಯ ಬಗೆಗೆ ಪ್ರಸ್ತಾಪ ಮಾಡಿರುವುದಿಲ್ಲ. 'ಸತ್ಯಪುರಿ ಮಹಾತ್ಮ್ಯೆ' ಮತ್ತು 'ತೇರ ಮಹಾತ್ಮ್ಯೆ' ಕೃತಿಗಳು'ತೇರ' ಊರಿನ ಪೌರಾಣಿಕ ಮಹತ್ವವನ್ನು ಸಾರುತ್ತವೆ. ಈ ಮಹಾತ್ಮ್ಯೆಗಳು

ಪದ್ಮಪುರಾಣದ ಭಾಗವಾಗಿದ್ದು 'ಕೇಶವವಾಸ' ಎಂಬುವರು ಈ ಕೃತಿಯನ್ನು ಕ್ರಿ.ಶ. ೧೬೭೯ರಲ್ಲಿ ರಚಿಸಿದ್ದಾರೆ. ಈ ಸ್ಥಳ ಪುರಾಣಕ್ಕೆ ಐತಿಹಾಸಿಕ ಮಹತ್ವವಿದೆ. ತೇರದಲ್ಲಿಯ ದೇವಾಲಯ, ತೀರ್ಥಕುಂಡಗಳ ಆಖ್ಯಾಯಿಕೆಗಳು ಈ ಗ್ರಂಥದಲ್ಲಿವೆ. ರಾಘವನೆಂಬ ಕವಿಯು ಈ ಮಹಾತ್ಮ್ಯೆಗಳನ್ನು ಮರಾಠಿಗೆ ಅನುವಾದಿಸಿದ್ದಾನೆ. ತೇರದಲ್ಲಿಯ ತ್ರಿವಿಕ್ರಮ ದೇವಾಲಯವು ಅದ್ವಿತೀಯ ಎಂಬುದು ಅವನ ಅಭಿಪ್ರಾಯವಾಗಿದೆ. ಮುಖ್ಯವಾಗಿ ಅಲ್ಲಿ ಮಹಾಲಕ್ಷ್ಮಿಯು ವಾಸವಾಗಿದ್ದಾಳೆ ಎಂಬುದನ್ನು ಭಕ್ತಿಪೂರ್ವಕವಾಗಿ ಹೇಳಿದ್ದಾನೆ. ವಿಪಶ್ಚಿತ ಎಂಬ ಹೆಸರಿನ ಭಕ್ತನು ಅವಳ ಕೃಪೆಗೆ ಪಾತ್ರನಾಗಿರುವುದನ್ನು ಸ್ಮರಿಸಿದ್ದಾನೆ.

ಒಟ್ಟಿನಲ್ಲಿ 'ತೇರ'ನಲ್ಲಿ ಮಹಾಲಕ್ಷ್ಮಿ ನೆಲೆಸಿದ್ದಳು. ವಿಪಶ್ಚಿತನೆಂಬ ಭಕ್ತನಿದ್ದ ಎಂಬುದು ಸ್ಪಷ್ಟವಾಗುತ್ತದೆ. ಆದರೆ ವಿಪಶ್ಚಿತನು ಯಾರು? ಎಂಬುದರ ವಿವರ ಸಿಗುವುದಿಲ್ಲ. 'ಸತ್ಯಪುರಿ ಮಹಾತ್ಮ್ಯೆ' ವಿವರಿಸಿರುವ ಲಕ್ಷ್ಮಿ ಗುಡಿಯು ಮತ್ತು ತುಂಗಾವಾಪಿ ತೀರ್ಥಸ್ಥಾನವು ತೇರನಿಂದ ೧೨ ಕಿ.ಮಿ. ಅಂತರದಲ್ಲಿರುವ 'ಜಾಗಜಿ' ಎಂಬ ವಸತಿಯಲ್ಲಿದೆ. ಇಂದಿಗೂ ಮಹಾಲಕ್ಷ್ಮಿ ಗುಡಿ ಮತ್ತು ತೀರ್ಥಸ್ಥಾನಗಳು ಸುಂದರವಾಗಿವೆ. ಜಾಗಜಿಯಲ್ಲಿ ಲಕ್ಷ್ಮಿಯ ಸ್ವತಂತ್ರ ದೇವಸ್ಥಾನವಿದೆ. ಇದು ಕೂಡ ೧೧ನೆಯ ಶತಮಾನದಷ್ಟು ಪ್ರಾಚೀನವಾಗಿದೆ. ನಿತ್ಯ ಪೂಜಾ, ಆಚರಣೆಗಳು ಆಗುತ್ತವೆ. ಈ ದೇವಿಯ ಆರತಿ ಪದ್ಯದಲ್ಲಿ 'ಜಾರಾಸುರ ಮರ್ದಿನಿ ಗ್ರಾಮಜಾಯಿ ಝಾಲಾ' ಎಂದು ಹಾಡು ಇದೆ. ಜಾರಾಸುರ ಮರ್ದನಕ್ಕೂ 'ಜಾಗಜಿ' ಸ್ಥಳ ನಾಮಕ್ಕೂ ಸಂಬಂಧ ಕಲ್ಪಿಸಲಾಗಿದೆ. ಜಾರಾಸುರನನ್ನು ಸಂಹರಿಸಿದ್ದರಿಂದ ದೇವಿಯ ಹೆಸರು 'ಜಾಗಜಾಯಿ' ಆಗಿದೆ ಎಂಬುದು ಜನರ ಮತವಾಗಿದೆ. ಇಲ್ಲಿಯ ವಾಸ್ತು ಶಿಲ್ಪಿ ಗಮನಾರ್ಹವಾಗಿದೆ. ದೇವಾಲಯವು ಪಶ್ಚಿಮಾಭಿಮುಖಿಯಾಗಿದ್ದು ಮುಖ್ಯ ಮಂಟಪ ಹಾಗೂ ಗರ್ಭಗುಡಿಗಳಿವೆ. ಗರ್ಭಗುಡಿಯ ಮೇಲೆ ಚೌಕಾಕಾರದ ಕಟ್ಟೆಯ ಮೇಲೆ ಮುಖ್ಯ ಮೂರ್ತಿಯು ಪ್ರತಿಷ್ಠಾಪನೆಯಾಗಿದೆ.

ಶಿಖರದ ವಿನ್ಯಾಸವು ತ್ರಿಕೋನಾಕಾರವಾಗಿದ್ದು ನಾಗರ ಶೈಲಿಯಲ್ಲಿದೆ. ಮೊದಲಿನ ದೇವಸ್ಥಾನವು ಕಾಲಾಂತರದಲ್ಲಿ ಶಿಥಿಲಗೊಂಡು ನಂತರ ಜೀರ್ಣೋದ್ಧಾರವಾಗಿದೆ. ಮೊದಲಿನ ಕಟ್ಟಡದ ಶಿಲ್ಪದಲ್ಲಿ ಶೈವ ದ್ವಾರಪಾಲಕರಿದ್ದು ಅನಂತರದಲ್ಲಿ ವಿಷ್ಣುವಿನ ಶಿಲ್ಪ ಸೇರಿಕೊಂಡಿದೆ. 'ಶೈವ ವೈಷ್ಣವ ಸಂಕರವು ಈ ಮಹಾಲಕ್ಷ್ಮಿಯ ಭಕ್ತಿ ಪರಂಪರೆಯಲ್ಲಿ ಕಂಡು ಬರುತ್ತದೆ. ಪದ್ಮಾಸನದಲ್ಲಿ ಆಸೀನಳಾಗಿರುವ ದೇವಿಯ ನಾಲ್ಕು ಕೈಗಳಲ್ಲಿ ಖಡ್ಗ, ಡಮರು, ತ್ರಿಶೂಲ, ಮತ್ತು ಪಾನಪಾತ್ರೆಗಳಿವೆ. ಪಾನ ಪಾತ್ರೆಯ ಕೈಯಲ್ಲಿ ನರ ರುಂಡಮಾಲೆಯು ಇದೆ. ದೇವಿಯ ಬಲಗಾಲಿನ ಕೆಳಗೆ ರಾಕ್ಷಸನ ತಲೆಯಿದೆ. ಎಡಗಾಲಿನ ಕೆಳಗೆ ಟಗರಿನ ತಲೆ ತೋರಿಸಲಾಗಿದೆ.

ಮೂರ್ತಿಯ ಲಕ್ಷಣಗಳನ್ನು ಗಮನಿಸಿದರೆ ಇವಳು ಮಹಾಕಾಳಿ ಅಥವಾ ಚಾಮುಂಡಿಯಾಗಿದ್ದಾಳೆ. ಆದರೆ ಭಕ್ತರು ಮಹಾಲಕ್ಷ್ಮಿ ಎಂದು ಸಂಬೋಧಿಸುತ್ತಾರೆ. ಅವರ ಸಂಬೋಧನೆಗೆ ಪುಷ್ಟಿ ನೀಡಲು 'ಸತ್ಯಪುರಿ ಮಹಾತ್ಮ್ಯೆ'ಯ ವಿವರಗಳಿವೆ. ಲಕ್ಷ್ಮಿತೀರ್ಥವೂ ಇದೆ.

ಕರಹಟ (ಕರ್‍ಹಾಡ) :

ತಗರದ ನಂತರ ಶಿಲಾಹಾರರ ಮತ್ತೊಂದು ಮುಖ್ಯ ಕೇಂದ್ರವೆಂದರೆ ಕರ್‍ಹಾಡ. ಶಿಲಾಹಾರ ಅರಸರ ಬಿರುದು 'ಕರಹಾಟಕಪುರಾಧಿಶ್ವರ' ಎಂದಿದೆ. ಶಿಲಾಹಾರರು ತಮ್ಮ ಕುಲಪರಂಪರೆಯಿಂದ ಬಂದ ಮಹಾಲಕ್ಷ್ಮಿ ದೇವತೆಯನ್ನು ಪ್ರಾಂಜಲ ಮನಸ್ಸಿನಿಂದ ಆರಾಧಿಸುತ್ತಿದ್ದರು. ಅವರು ಮಹಾಲಕ್ಷ್ಮಿಯ ಪರಮ ಭಕ್ತರಾಗಿದ್ದುದರಿಂದ ಕರ್‍ಹಾಡವು ಮಹಾಲಕ್ಷ್ಮಿಯ ಕ್ಷೇತ್ರವಾಯಿತು. ಪ್ರಾಚೀನ ಕರ್‍ಹಾಡವು ಶ್ರೀ ಮಹಾಲಕ್ಷ್ಮಿಯ ಶಕ್ತಿಪೀಠವೆಂದು ಪ್ರಸಿದ್ಧಿ ಪಡೆದಿದೆ. ಕರ್‍ಹಾಡದ ಉತ್ತರಾಲಕ್ಷ್ಮಿಯು ಜನರ ಮನೋಕಾಮನೆಗಳನ್ನು ಪೂರ್ಣಗೊಳಿಸುವ ಶಕ್ತಿಯೆನಿಸಿದ್ದಾಳೆ. ಈ ಪವಿತ್ರ ನಗರದಲ್ಲಿ ರಾಜರು ಉದಾರಿಗಳಾಗಿದ್ದರು. ಜ್ಞಾನೋಪಾಸನೆಗೆ ಉತ್ತೇಜನ ನೀಡುತ್ತಿದ್ದರು. ಮಹಾಲಕ್ಷ್ಮಿಯ ವೈಭವವನ್ನು ಬೆಳೆಸಿದರು.

'ಕರಹಾಟಕ ಮಹಾತ್ಮ್ಯೆ'ಯ ಪ್ರಕಾರ ದೇವಾಲಯವು ವೈಭವಯುಕ್ತವಾಗಿತ್ತು. ದೇವಿಯು ಕಮಲದ ಮೇಲೆ ವಿರಾಜಮಾನಳಾಗಿದ್ದಳು. ಷೋಡಶ ಭುಜಗಳುಳ್ಳ ದಿವ್ಯ ಮೂರ್ತಿಯಾಗಿತ್ತು. ಆದರೆ ಈಗ ಈ ದೇವಾಲಯವು ಅವಶೇಷ ರೂಪದಲ್ಲಿದೆ. ಅದರ ಸಮೀಪದಲ್ಲಿಯೇ ಮುಸ್ಲಿಮ ಪ್ರಾರ್ಥನಾ ಮಂದಿರವಿದ್ದು ಗುಡಿಯ ಅವಶೇಷಗಳನ್ನು ಅದಕ್ಕೆ ಬಳಸಲಾಗಿದೆ. ಪರಧರ್ಮೀಯರ ಆಕ್ರಮಣದಿಂದ ಮಹಾಲಕ್ಷ್ಮಿ ದೇವಾಲಯವು ನಶಿಸಿ ಹೋಗಿದೆ. ಆದರೆ ಒಂದು ಮೂರ್ತಿಯನ್ನು ಕೆರೆಯಲ್ಲಿ ಬಚ್ಚಿಡಲಾಗಿತ್ತೆಂದು ಹೇಳಲಾಗುತ್ತದೆ. ಶಿವಾಜಿರಾವ ಡುಬಲ ಎಂಬುವರು ಹೊಸದೊಂದು ದೇವಾಲಯ ಕಟ್ಟಿಸಿ ಅಲ್ಲಿ ಈ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಆದರೆ ಕರ್‍ಹಾಡದಲ್ಲಿರುವ ಸಂಶೋಧಕ ಕಾಶಿನಾಥ ಧೋಂಡೊ ದೇಶಪಂಡೆಯವರು ಮೂರ್ತಿಯ ವಿಶೇಷತೆಯನ್ನು ಅಭ್ಯಸಿಸಿ "ಇದು ಹೊಯ್ಸಳ ಶೈಲಿಯಲ್ಲಿ ಕೆತ್ತಿರುವ ಮೂರ್ತಿಯಾಗಿದೆ. ಆದರೆ ಇದು ದೇವಸ್ಥಾನದ ಒಳಗಿದ್ದ ಮೂಲ ಮೂರ್ತಿಯಲ್ಲ. ಮೂಲ ದೇವಸ್ಥಾನದ ಪ್ರಾಕಾರದಲ್ಲಿದ್ದ ಪರಿವಾರ ದೇವತೆಗಳಲ್ಲಿ ಇದು ಒಂದಾಗಿದೆ" ಎಂದು ಹೇಳಿದ್ದಾರೆ. ಈಗಿನ ಮೂರ್ತಿಯು ಸ್ವರೂಪದಲ್ಲಿ ಮಹಿಷಾಸುರಮರ್ದಿನಿಯದಾಗಿದೆ. ಮೂರ್ತಿಗೆ ಹತ್ತು ಕೈಗಳಿವೆ. ಬಲಗಾಲಿನಿಂದ ಕೋಣವನ್ನು ತುಳಿಯುತ್ತಿದ್ದಾಳೆ. ಹತ್ತೂ ಕೈಗಳಲ್ಲಿ ಆಯುಧಗಳನ್ನು ಹಿಡಿದಿದ್ದಾಳೆ. ಮೂರ್ತಿಯು ಕಪ್ಪು, ಮೃದು ಕಲ್ಲಿನದಾಗಿದೆ. ಸುಂದರ

ಮುಕುಟವಿದ್ದು ಅದರ ಮೇಲೆ ಯೋನಿ ಮತ್ತು ಲಿಂಗದ ಪ್ರತೀಕಗಳಿವೆ. ಕಿವಿಗಳಲ್ಲಿ ಕುಂಡಲಗಳಿವೆ. ತೇರದಲ್ಲಿ ನರರುಂಡಮಾಲೆ ಧರಿಸಿದ ಉಗ್ರ ದೇವಿಯು ಮಹಾಲಕ್ಷ್ಮಿ ಹೆಸರಿನಿಂದ ಪೂಜಿಸಲ್ಪಡುತ್ತಿದ್ದಾಳೆ. ಕರ್ಹಾಡದಲ್ಲಿಯ ದಶಭುಜಗಳ ಮಹಿಷಮರ್ದಿನಿಯು ಉತ್ತರಾಲಕ್ಷ್ಮಿಯೆಂದು ಕ್ರಿ. ಶ. ೧೭೨೭ ರಿಂದ ಹೊಸ ಗುಡಿಯಲ್ಲಿ ನೆಲೆಸಿದ್ದಾಳೆ. ಇಂದು ಕರ್ಹಾಡದ ಜನರು ಅವಳ ಕೃಪಾ ಛತ್ರದಲ್ಲಿ ಸುರಕ್ಷಿತರಾಗಿದ್ದಾರೆ.

ಅಧ್ಯಾಯ ೫

ಜನಪದ ಸಾಹಿತ್ಯ ಮತ್ತು ಕರ್ನಾಟಕದ ಸಾಂಸ್ಕೃತಿಕ ನಕ್ಷೆ

ಅಧ್ಯಾಯ – ೫

ಜಾನಪದ ಸಾಹಿತ್ಯ ಮತ್ತು ಕರ್ನಾಟಕದ ಸಾಂಸ್ಕೃತಿಕ ನಕ್ಷೆ

ನೆಲದ ಮೇಲೆ ಮಾನವ ವಾಸಿಸಲು ಮೊದಲ ದಿನದಿಂದ ಬೆಳೆದು ಬಂದ ಪಾರಂಪರಿಕ ಸಂಸ್ಕೃತಿ ಸಮಷ್ಟಿಯೇ ಜಾನಪದ. ಇದರಲ್ಲಿ ತಲೆಮಾರಿನಿಂದ ತಲೆಮಾರಿಗೆ ಪರಂಪರೆಗೆ ಹಸ್ತಾಂತರಗೊಂಡು ಬಂದ ಸಾಮಗ್ರಿ ಇರುತ್ತದೆ. ಹೀಗೆ ಹಸ್ತಾಂತರಗೊಂಡ ಸಾಮಗ್ರಿಗಳನ್ನು ನಾಲ್ಕು ಗುಂಪುಗಳಲ್ಲಿ ವಿಂಗಡಿಸಬಹುದು: ೧) ಮೌಖಿಕ ಸಾಹಿತ್ಯ, ೨) ವಸ್ತು ಸಂಸ್ಕೃತಿ, ೩) ಸಾಮುದಾಯಿಕ ನಡಾವಳಿಗಳು ಮತ್ತು ೪) ಪ್ರದರ್ಶಕ ಕಲೆಗಳು.

ಚಾರಿತ್ರಿಕ ಹಿನ್ನೆಲೆ ಮತ್ತು ಜಾನಪದೀಯ ನೆಲೆ :

ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ೧೫೦ ವರ್ಷಗಳಿಗೂ ಮಿಕ್ಕಿದ ಚರಿತ್ರೆ ಇದೆ. ಮೊದಮೊದಲು ವಿದ್ವಾಂಸರು ಜಾನಪದದಲ್ಲಿ ಹಾಡು, ಲಾವಣಿಗಳಿಗೆ ತಮ್ಮ ಆಸಕ್ತಿಯನ್ನು ಮಿತಗೊಳಿಸಿಕೊಂಡರು. ಈ ದಿಸೆಯಲ್ಲಿ ಯೂರೋಪಿನ ವಿದ್ವಾಂಸರು ನಡೆಸಿದ ಯತ್ನಗಳು ಶ್ಲಾಘ್ಯವೆನಿಸಿವೆ. ತಮ್ಮ ಹಲವಾರು ಚಟುವಟಿಕೆಗಳ ನಡುವೆಯೂ ಪಾಶ್ಚಾತ್ಯ ವಿದ್ವಾಂಸರು ಕರ್ನಾಟಕದ ಜಾನಪದ ಸಂಗ್ರಹ ಕಾರ್ಯದಲ್ಲಿ ತೊಡಗಿ, ಹೀಗೆ ಸಂಗ್ರಹಿಸಿದ್ದನ್ನು ಸರಿಯಾಗಿ ಸಂಪಾದಿಸಿ, ಯುಕ್ತ ಟಿಪ್ಪಣಿಗಳ ಜೊತೆಗೆ ಪ್ರಕಟಿಸಿದರು. ಅಬೆ ದುಬುವಾ, ಜಾನ್ ಲೇಡನ್, ಮೇರಿ ಫ್ರೇರ, ಜಾನ್ ಎಫ್. ಫ್ಲೀಟ್, ರೆವರೆಂಡ್ ಎಫ್. ಕಿಟೆಲ್, ಚಾರ್ಲ್ಸ್ ಇ. ಗೋವರ್ ಮತ್ತು ಮೊಗ್ಲಿಂಗ್–ಇವು ಇಲ್ಲಿ ಉಲ್ಲೇಖಿಸಬಹುದಾದ ಖ್ಯಾತರ ಹೆಸರುಗಳು. ಕರ್ನಾಟಕದ ವಿವಿಧ ಪ್ರದೇಶಗಳ ಜನಪದ ಕತೆಗಳು, ಹಾಡುಗಳು, ಲಾವಣಿಗಳು ಹಾಗೂ ಗಾದೆಮಾತುಗಳನ್ನು ಸಂಗ್ರಹಿಸಿ ಅವುಗಳ ಇಂಗ್ಲಿಷ್ ಅನುವಾದದೊಡನೆ ಪ್ರಕಟಿಸಿದರು. ಅನೇಕ ಸ್ಥಳೀಯ ವಿದ್ವಾಂಸರು ೨೦ನೇಯ ಶತಮಾನದಲ್ಲಿ ಈ ಕ್ಷೇತ್ರಕ್ಕೆ ಪ್ರವೇಶಿಸಿದರು ಮತ್ತು ಹೆಚ್ಚು ಸಾಹಿತ್ಯವನ್ನು ಬೆಳಕಿಗೆ ತಂದರು. ಕೊಡಗಿನ ವಿದ್ವಾಂಸರಾದ ನಡಿಕೇರಿಯಂಡ ಚಿನ್ನಪ್ಪನವರನ್ನು ಇಲ್ಲಿ ಉಲ್ಲೇಖಿಸಬೇಕು. ಇವರು ಕೊಡವ ಭಾಷೆಯಲ್ಲಿ ಲಭ್ಯವಿದ್ದ ಮೂಲ ಜಾನಪದ ಸಾಮಗ್ರಿಯನ್ನು ಸಂಗ್ರಹಿಸಿ ಅಧ್ಯಯನ ಮಾಡಿ ಕನ್ನಡ ವ್ಯಾಖ್ಯಾನದೊಡನೆ ಪ್ರಕಟಿಸಿದರು. ೧೯೨೪ರಲ್ಲಿ ಪ್ರಕಟವಾದ ಇವರ ಈ ಪುಸ್ತಕ 'ಪಟ್ಟೋಲೆ ಪಳಮೆ'ಗೆ ಜಾನಪದ ಅಧ್ಯಯನದಲ್ಲಿ ಅತ್ಯಂತ ಮಹತ್ವದ ಸ್ಥಾನವಿದೆ. ದಕ್ಷಿಣ ಕರ್ನಾಟಕದ ಈ ಮುಂಚೂಣಿಯ ಸಾಧನೆಗಳ ಅನಂತರ ಉತ್ತರ ಕರ್ನಾಟಕದ ವಿದ್ಯಾಂಸರೂ ಕ್ಷೇತ್ರ ಕಾರ್ಯಕ್ಕೆ ಮೊದಲಿಟ್ಟರು. ಹಲಸಂಗಿಯ ಸೋದರರು 'ಗರತಿಯ ಹಾಡು', 'ಮಲ್ಲಿಗೆ ದಂಡೆ' ಹಾಗೂ 'ಜೀವನ ಸಂಗೀತ' ಎಂಬ ಮೂರು ಜನಪದ ಹಾಡು ಹಾಗೂ

ಲಾವಣಿಗಳ ಸಂಗ್ರಹಗಳನ್ನು ಪ್ರಕಟಿಸಿದರು. ಈ ವಲಯದಲ್ಲಿ ಈ ಪ್ರಕಟಣೆಗಳಿಂದ ಒಂದು ಚಳುವಳಿಯೇ ಮೊದಲಾಯಿತು. ಅದೇ ವೇಳೆಗೆ ದಕ್ಷಿಣ ಕರ್ನಾಟಕದ ವಿದ್ವಾಂಸರು ಹಲಸಂಗಿ ಸೋದರರ ಹೆಜ್ಜೆಗಳನ್ನು ಅನುಸರಿಸತೊಡಗಿದರು. ಮತಿಘಟ್ಟ ಸೋದರರು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ದೇವುಡು ನರಸಿಂಹ ಶಾಸ್ತ್ರಿ, ಹಾಗೂ ಬಿ.ಎಸ್. ರಂಗಸ್ವಾಮಿ ಇವರು ಜನಪದಗೀತೆಗಳ ಉತ್ತಮ ಸಂಗ್ರಹವನ್ನು ಹೊರತಂದರು. ಅರ್ಚಕ್ ರಂಗಸ್ವಾಮಿಯವರ 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು' ಕನ್ನಡ ಜಾನಪದದಲ್ಲೇ ಮಹತ್ವದ ಕೃತಿ. ಏಕೆಂದರೆ ಅದು ಇಡೀ ಒಂದು ಹಳ್ಳಿಯ ಜನಪದ ಸಂಸ್ಕೃತಿಯನ್ನು ವಿವರಿಸುತ್ತದೆ.

ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ಸಾಹಿತ್ಯ ವಲಯದ ವಿದ್ವಾಂಸರು ಜಾನಪದ ಅಧ್ಯಯನದಲ್ಲಿ ತೊಡಗಿದ್ದರು. ಹಾಗಾಗಿ ಸಹಜವಾಗಿಯೇ ಅವರು ಉತ್ತಮ ಸಾಹಿತ್ಯಿಕ ಮೌಲ್ಯಗಳಿದ್ದ ಹಾಡುಗಳನ್ನು ಆಯ್ಕೆ ಮಾಡಿಕೊಂಡರು. ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ಪೂರ್ಣಾವಧಿ ಜಾನಪದ ವಿದ್ವಾಂಸರು ಕಾಣಿಸಿಕೊಂಡರು. ಬಿ.ಎಸ್. ಗದಗೀಮಠರಂಥ ವಿದ್ವಾಂಸರು ಜಾನಪದದ ತೀವ್ರ ಅಧ್ಯಯನದಲ್ಲಿ ತೊಡಗಿ, ತಮ್ಮ ಅಧ್ಯಯನಕ್ಕಾಗಿ ಡಾಕ್ಟರೇಟ್ ಪದವಿಯನ್ನು ಪಡೆದರು. ಕೆ.ಆರ್. ಕೃಷ್ಣಸ್ವಾಮಿ, ಮುದೇನೂರ ಸಂಗಣ್ಣ, ಜೀ.ಶಂ. ಪರಮಶಿವಯ್ಯ, ಎಲ್.ಆರ್. ಹೆಗಡೆ, ಎಚ್.ಎಲ್. ನಾಗೇಗೌಡ, ಇವರೇ ಮೊದಲಾದ ಹಲವು ಜಾನಪದ ಪ್ರೇಮಿಗಳು ವಿವರವಾದ ಕ್ಷೇತ್ರ ಕಾರ್ಯ ನಡೆಸಿ, ಸಂಗ್ರಹಿಸಿ ಹಲವಾರು ಹಾಡುಗಳ ಸಂಕಲಗಳನ್ನು ಹೊರತಂದರು.

ಸಂಸ್ಥೆಗಳು :

ಹಾಡುಗಳು, ಕಥನ ಗೀತೆಗಳ ಮಟ್ಟಿಗೆ ಸೀಮಿತವಾಗಿದ್ದ ಕರ್ನಾಟಕದ ಜಾನಪದ ಅಧ್ಯಯನವು ತನ್ನ ವಲಯವನ್ನು ವಿಸ್ತರಿಸಿಕೊಂಡು, ಜಾನಪದದ ಉಳಿದ ಅಂಗಗಳನ್ನು ಒಳಗೊಳ್ಳ ತೊಡಗಿತು. ಕರ್ನಾಟಕದ ವಿವಿಧ ಪತ್ರಿಕೆಗಳಲ್ಲಿ ಜಿ.ಶಂ. ಪರಮಶಿವಯ್ಯನವರು ಪ್ರಕಟಿಸಿದ ಲೇಖನಗಳು ಯುವ ಕಾರ್ಯಕರ್ತರನ್ನು ಗಾಢವಾಗಿ ಪ್ರಭಾವಿಸಿದವು. ಹಾ.ಮಾ. ನಾಯಕರು ತಮ್ಮ ವಿದ್ವತ್ ಪ್ರಬಂಧಗಳನ್ನು ಪ್ರಕಟಿಸುವ ಮೂಲಕ ಜಾನಪದ ಅಧ್ಯಯನಕ್ಕೆ ವೈಜ್ಞಾನಿಕ ಮಾದರಿಯನ್ನು ಹಾಕಿ ಕೊಟ್ಟರು. ಜಾನಪದದ ಬಗೆಗೆ ಪ್ರೀತಿಯಿದ್ದ ದೇ. ಜವರೇಗೌಡರು ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದಾಗ, ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಯ ಹಂತದಲ್ಲಿ ಜಾನಪದವನ್ನು ಒಂದು ಐಚ್ಛಿಕ ವಿಷಯವನ್ನಾಗಿಸಿದರು. ಮೇಲೆ ಹೇಳಲಾದ ವಿದ್ವಾಂಸರು ಹಾಗೂ ಇನ್ನೂ ಹಲವು ಜಾನಪದ

ಪ್ರೇಮಿಗಳ ಪ್ರಯತ್ನದಿಂದಾಗಿ ಒಂದು ಜಾನಪದ ವಸ್ತು ಸಂಗ್ರಹಾಲಯವನ್ನು (ಭಾರತದಲ್ಲೇ ಇದು ಮೊದಲನೇಯದು) ಸ್ಥಾಪಿಸಿ, ಅದರ ಜೊತೆಯಲ್ಲೇ ಜಾನಪದ ಸಂಶೋಧನಾ ವಿಭಾಗವನ್ನೂ ಬೆಳೆಸಲಾಯಿತು. ಜಾನಪದದಲ್ಲಿ ಎಂ.ಎ. ಹಾಗೂ ಡಿಪ್ಲೋಮಾ ತರಗತಿಗಳನ್ನು ಮೊದಲು ಮಾಡಿದ ಸಾಧನೆ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಗೆ ಸಲ್ಲುತ್ತದೆ. ವೃತ್ತಿ ಚಿತ್ರಕಾರರಾದ ಪಿ.ಆರ್. ತಿಪ್ಪೇಸ್ವಾಮಿಯವರನ್ನು ಈ ವಸ್ತು ಸಂಗ್ರಹಾಲಯದ ಕ್ಯುರೇಟರ್ ಆಗಿ ನೇಮಿಸಲಾಯಿತು. ಇತರರ ನೆರವು, ಸಲಹೆಗಳೊಂದಿಗೆ ಇವರು ಅಗಾಧ ಪ್ರಮಾಣದಲ್ಲಿ ಜನಪದ ವಸ್ತುಗಳನ್ನು ಸಂಗ್ರಹಿಸಿ, ಅವುಗಳನ್ನು ವೈಜ್ಞಾನಿಕವಾದ ವಿಧಾನದಲ್ಲಿ ಜೋಡಿಸಿದ್ದಾರೆ. ಸಂಶೋಧನೆಯ ದೃಷ್ಟಿಯಿಂದ ಈ ಸಂಗ್ರಹಾಲಯಕ್ಕೆ ಅತ್ಯಂತ ಹೆಚ್ಚಿನ ಮಹತ್ವವಿದೆ. ಅಲ್ಲದೆ ಇದೊಂದು ಪ್ರವಾಸೀ ಆಕರ್ಷಣೆಯ ಕೇಂದ್ರ ಕೂಡ ಹೌದು.

ಜಾನಪದ ಮಹತ್ವವನ್ನು ಗಮನಿಸಿ ಕರ್ನಾಟಕದ ಇತರ ವಿಶ್ವವಿದ್ಯಾಲಯಗಳೂ ಜಾನಪದವನ್ನು ಸ್ನಾತಕೋತ್ತರ ಪದವಿ ತರಗತಿಗಳಲ್ಲಿ ಅಧ್ಯಯನ ವಿಷಯವನ್ನಾಗಿಸಲು ಮುಂದಾದವು. ಕರ್ನಾಟಕ ವಿಶ್ವವಿದ್ಯಾಲಯವು ಜನಪದ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ತರಗತಿಯನ್ನು ಪ್ರಾರಂಭಿಸಿತು. ಬೆಂಗಳೂರು ವಿಶ್ವವಿದ್ಯಾಲಯವು ಕನ್ನಡ ಎಂ.ಎ. ತರಗತಿಗೆ ಜಾನಪದವನ್ನು ಒಂದು ಐಚ್ಛಿಕ ವಿಷಯವನ್ನಾಗಿ ಆಯ್ದುಕೊಳ್ಳುವ ಅವಕಾಶವನ್ನು ಒದಗಿಸಿತು. ಇನ್ನೂ ಹಲವಾರು ಸಂಸ್ಥೆಗಳು ಈ ಕೈಂಕರ್ಯದಲ್ಲಿ ತೊಡಗಿ ಕರ್ನಾಟಕದುದ್ದಕ್ಕೂ ಜಾನಪದದ ಪುನರುತ್ಥಾನಕ್ಕೆ ನೆರವಾದವು. ಜನಪದ ಕಲೆಗಳ ಉತ್ಸವಗಳನ್ನು ಏರ್ಪಡಿಸುವುದು ಅಲ್ಲದೆ, ಜನಪದ ಹಾಡುಗಳನ್ನು ಸಂಗ್ರಹಿಸುವುದು ಕೂಡ ತನ್ನ ಚಟುವಟಿಕೆಯ ವ್ಯಾಪ್ತಿಯಲ್ಲಿ ಬರುವುದೆಂದು ತಿಳಿದಿರುವ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಂಸ್ಥೆಯ ಯತ್ನಗಳು ಅಭಿನಂದನಾರ್ಹವಾಗಿವೆ. ಮೈಸೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಜಾನಪದ ಪರಿಷತ್ತು, ಜಾನಪದ ಕಲಾ ಕೂಟ, ನೆಹರೂ ಯುವಕ ಕೇಂದ್ರಗಳು, ಆಕಾಶವಾಣಿ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆಗಳು ಪ್ರತೀ ವರ್ಷವೂ ನಡೆಸುವ ಜನಪದ ಕಲೆಗಳ ಉತ್ಸವಗಳಲ್ಲಿ ಎಷ್ಟೋ ಅಪರಿಚಿತ ಜನಪದ ಕಲೆಗಳು ಬೆಳಕು ಕಂಡಿವೆ. ಜಾನಪದ ಸಂಶೋಧನೆಗಾಗಿಯೇ ಮೀಸಲಾದ ಪತ್ರಿಕೆಯಾದ 'ಜನಪದ'ವನ್ನು ಕೆಲವು ವರ್ಷಗಳಿಂದ ಜಾನಪದ ಪರಿಷತ್ತು ಪ್ರಕಟಿಸುತ್ತಾ ಬರುತ್ತಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ರೂಪು ತಳೆದ ಕರ್ನಾಟಕ ಜನಪದ ಟ್ರಸ್ಟ್ ಮತ್ತು ಕರ್ನಾಟಕ ಜನಪದ ಹಾಗೂ ಯಕ್ಷಗಾನ ಅಕ್ಯಾಡೆಮಿ ಎಂಬ ಸಂಸ್ಥೆಗಳಿಂದಾಗಿ ಜಾನಪದ

ಅಧ್ಯಯನಕ್ಕೆ ಹೊಸ ಆಯಾಮ ಒದಗಿದಂತಾಗಿದೆ. ಇವುಗಳಲ್ಲಿ ಮೊದಲನೆಯದು ಒಂದು ಸಾರ್ವಜನಿಕ ಪುದುವಟ್ಟು, ಎರಡನೆಯದು ಕರ್ನಾಟಕ ಸರಕಾರವು ಇತರ ಅಕ್ಯಾಡೆಮಿಗಳ ಮಾದರಿಯಲ್ಲೇ ರಚಿಸಿರುವ ಒಂದು ಸಂಸ್ಥೆ. ಟ್ರಸ್ಟು ಜನಪದ ಗೀತೆಗಳನ್ನು ದಾಖಲು ಮಾಡುವ ಅಪೂರ್ವ ಕಾರ್ಯದಲ್ಲಿ ತೊಡಗಿದೆ. ಈಗಾಗಲೇ ೧,೦೦೦ ಗಂಟೆಗಳಷ್ಟು ಅವಧಿಯ ಧ್ವನಿಮುದ್ರಿತ ಸಂಗೀತ ಟ್ರಸ್ಟಿನ ಬಳಿ ಇದ್ದು ಈ ಹಾಡುಗಳನ್ನು ಕರ್ನಾಟಕದ ಎಲ್ಲ ವಲಯಗಳಿಂದಲೂ ಸಂಗ್ರಹಿಸಲಾಗಿದೆ. ಇದರ ಜೊತೆಗೇ ಜಾನಪದ ಜಗತ್ತು ಎಂಬ ಜಾನಪದಕ್ಕಾಗಿಯೇ ಮೀಸಲಾದ ಪತ್ರಿಕೆಯನ್ನೂ ಪ್ರಕಟಿಸಲಾಗುತ್ತಿದೆ. ಕರ್ನಾಟಕದ ಜಾನಪದವನ್ನು ಪುನರುಜ್ಜೀವನಗೊಳಿಸಲು ಟ್ರಸ್ಟಿನ ಬಳಿ ಹಲವು ಯೋಜನೆಗಳಿವೆ. ಸದ್ಯಕ್ಕೆ ಅದು ಜನಪದ ಗೀತದ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಿದೆ[೧].

ಕಳೆದ ಮೂರು ವರ್ಷಗಳಿಂದ ಕೆಲಸ ಮಾಡುತ್ತಿರುವ ಅಕ್ಯಾಡೆಮಿಯು ಈವರೆಗೆ ಜನಪದ ಕಲಾವಿದರಿಗೆ ದೊರಕದಿದ್ದ ಸ್ಥಾನಮಾನಗಳನ್ನು ಒದಗಿಸಿಕೊಡಲು ಯತ್ನಿಸುತ್ತಿದೆ. ಗ್ರಾಮಗಳ ಹಂತದಿಂದ ರಾಜ್ಯಮಟ್ಟದವರೆಗೆ ಜನಪದ ಕಲೆಗಳ ಪ್ರದರ್ಶನವನ್ನು ಅಕ್ಯಾಡೆಮಿಯು ಏರ್ಪಡಿಸುವುದು; ಇಪ್ಪತ್ತು ಮಂದಿ (ಒಬ್ಬ ಜಾನಪದ ತಜ್ಞರೂ ಸೇರಿದಂತೆ) ಜನಪದ ಕಲಾವಿದರಿಗೆ ಸನ್ಮಾನ ಮಾಡುವುದು. ಜಾನಪದ ಅಧ್ಯಯನದಲ್ಲಿನ ಉತ್ತಮ ಪುಸ್ತಕಗಳಿಗೆ ನಗದು ಬಹುಮಾನಗಳನ್ನು ನೀಡುವುದು. ಪ್ರತೀ ವರ್ಷವೂ ಜಾನಪದದ ವಿವಿಧ ಸಾಮಗ್ರಿಯನ್ನು ನೂರು ಪುಟಗಳಷ್ಟು ಸಂಗ್ರಹಿಸಿ ಜನಪ್ರಿಯ ಆವೃತ್ತಿಯಲ್ಲಿ ಮುದ್ರಿಸಿ ಒಂದು ರೂಪಾಯಿಗೆ ಒಂದು ಪ್ರತಿಯಂತೆ ಅತೀ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ. ಅಕ್ಯಾಡೆಮಿಯು ಮಾಡುತ್ತಿರುವ ಇನ್ನೊಂದು ಮುಖ್ಯ ಕೆಲಸವೆಂದರೆ ಜೀವನ ನಿರ್ವಹಣೆ ಅತೀ ಕಷ್ಟವಾಗಿರುವ ಜನಪದ ಕಲಾವಿದರನ್ನು ಗುರುತಿಸಿ ಅವರಿಗೆ ಮಾಸಿಕ ಸಹಾಯಧನ ದೊರಕುವಂತೆ ಮಾಡುತ್ತಿದೆ. ರಾಜ್ಯ ಸರ್ಕಾರವು ಈವರೆಗೆ ಇಂಥ ೧೭೦ ಜನರಿಗೆ ಸಹಾಯ ಧನವನ್ನು ನೀಡಿದೆ (೧೯೮೦ರಲ್ಲಿ).

ತರಬೇತು ಪಡೆದ ಜಾನಪದ ತಜ್ಞರು ಮತ್ತಿತರರ ಅವಿರತ ಪ್ರಯತ್ನಿದಿಂದಾಗಿ ಕನ್ನಡ ಜಾನಪದವನ್ನು ಕುರಿತು ಹೆಚ್ಚು ಹೆಚ್ಚು ಪುಸ್ತಕಗಳು ಪ್ರತೀ ವರ್ಷವೂ ಪ್ರಕಟವಾಗುತ್ತಿವೆ. ೧೯೭೩ರವರೆಗೆ ಈ ಕ್ಷೇತ್ರದಲ್ಲಿ ಸುಮಾರು ೫೦೦ ಪುಸ್ತಕಗಳು ಪ್ರಕಟವಾಗಿದ್ದುವೆಂದು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪ್ರಕಟಿಸಿರುವ ಪುಸ್ತಕಸೂಚಿ ತಿಳಿಸುತ್ತವೆ. ಕಳೆದ ಏಳು ವರ್ಷಗಳಲ್ಲಿ ಪ್ರಕಟವಾಗಿರುವ ಪುಸ್ತಕಗಳ ಸಂಖ್ಯೆ ೮೦೦ಕ್ಕೂ ಮಿಕ್ಕಿದೆ.

ಕಳೆದ ಒಂದು ದಶಕದಲ್ಲಿ ಜಾನಪದ ವಿವಿಧ ವಲಯಗಳಾದ ಗದ್ಯ, ಕಥಾನಕ, ಹಾಡು, ಲಾವಣಿ, ಮಹಾಕಾವ್ಯ, ಶಿಶುಪ್ರಾಸಗಳು, ಜಾನಪದ ವೈದ್ಯ, ಮತ್ತಿತರ ಪ್ರಕಾರದಲ್ಲಿ ಪುಸ್ತಕಗಳು, ಪ್ರಕಟವಾಗಿವೆ. ಸಂಗ್ರಹಕಾರ್ಯ ಹಾಗೂ ಅಧ್ಯಯನಗಳೆರಡೂ ಸವೇಗವಾಗಿ ಒಟ್ಟೊಟ್ಟಿಗೆ ಸಾಗುತ್ತಿವೆ. ಈಗ ಅಧ್ಯಯನ ಮಾಡುವವರಿಗೆ ಕನ್ನಡದಲ್ಲಿ ಸಾಕಷ್ಟು ಸಾಮಗ್ರಿ ಲಭ್ಯವಿದೆ. ಹಲವಾರು ವಿದ್ವಾಂಸರು ತಮ್ಮ ಡಾಕ್ಟರಲ್ ಅಧ್ಯಯನಕ್ಕೆ ಮಿಕ್ಕಿ ವಿದ್ವಾಂಸರು ಈಗಾಗಲೇ ಈ ವಲಯದಲ್ಲಿ ತಮ್ಮ ಪಿಎಚ್.ಡಿ. ಪದವಿಗಳನ್ನು ಪಡೆದುಕೊಂಡಿದ್ದಾರೆ.

ವರ್ಗೀಕರಣ :

ಈಗ ಪ್ರಕಟವಾಗಿರುವ ಸಾಮಗ್ರಿಗಳನ್ನು ಗಮನಿಸಿದರೆ ಕರ್ನಾಟಕದಲ್ಲಿ ಜಾನಪದಕ್ಕೆ ಸಮೃದ್ಧ ಪರಂಪರೆಯಿರುವುದು ಸ್ಪಷ್ಟವಾಗುತ್ತದೆ. ಮೌಖಿಕ ಸಾಹಿತ್ಯವನ್ನು ಗದ್ಯ–ಪುರಾಣಗಳು, ಐತಿಹ್ಯಗಳು ಹಾಗೂ ಕತೆಗಳು, ಹಾಡುಗಳು, ಲಾವಣಿಗಳು, ಮಹಾಕಾವ್ಯಗಳು, ಶಿಶುಪ್ರಾಸ, ಇತ್ಯಾದಿಯಾಗಿ ವಿಭಾಗಿಸಬಹುದು. ಹಾಗೆಯೇ ಗಾದೆ, ಒಗಟು, ಒಡಪು, ಜಾಣ ಮಾತು ಮತ್ತು ಜನಪದ ನಾಟಕಗಳು ಎಂಬ ವಿಭಾಗಗಳನ್ನು ಗುರುತಿಸಲು ಸಾಧ್ಯವಿದೆ. ೧೯ನೇಯ ಶತಮಾನದಿಂದಲೇ ಕರ್ನಾಟಕ ಗದ್ಯ ಕಥಾನಕಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ. ಅಬೆದುಬುವಾರ ಕೃತಿ 'ಹಿಂದೂ ಕಸ್ಟಂಸ್, ಮ್ಯಾನರ್ಸ್ ಅಂಡ್ ಸೆರಮನೀಸ್'ನಲ್ಲಿ ಜನಪದ ಕತೆಗಳಿವೆ. ಮೆರಿ ಫ್ರೇರಿಯವರ 'ಓಲ್ಡ್ ಡೆಕ್ಕನ್ ಡೇ' ಕೃತಿಯು ಜನಪದ ಕತೆಗಳ ಒಂದು ಸ್ವತಂತ್ರ ಸಂಕಲನ. ಈಚಿನ ದಿನಗಳಲ್ಲಿ ಯುಕ್ತವಾಗಿ ಸಂಪಾದಿಸಿ, ವೈಜ್ಞಾನಿಕ ವಿಧಾನದಲ್ಲಿ ಕತೆಗಳನ್ನು ವರ್ಗೀಕರಿಸಿರುವ ಹಲವಾರು ಕಥಾಸಂಗ್ರಹಗಳು ಪ್ರಕಟವಾಗಿವೆ. ಹಲವು ಕಥಾ ಮಾದರಿಗಳು ದೇಶೀಯ ಹಾಗೂ ಅಂತರ್‌ರಾಷ್ಟ್ರೀಯ ಸ್ವರೂಪದವು ಈಗ ಈ ಕತೆಗಳಲ್ಲಿ ಕಂಡುಬಂದಿದ್ದು ಅವುಗಳನ್ನು ಈ ಸಂಗ್ರಹಗಳು ಬೆಳಕಿಗೆ ತಂದಿವೆ.

ಜನಪದ ಕತೆಗಳಲ್ಲಿ, ಪುರಾಣಗಳು ಭೂಮಿಯ ಸೃಷ್ಟಿ, ದೇವರುಗಳು, ದೇವತೆಗಳು, ಸಾಂಸ್ಕೃತಿಕ ವೀರರು ಇತ್ಯಾದಿ ವಸ್ತುಗಳನ್ನು ಹೊಂದಿರುತ್ತವೆ. ಕರ್ನಾಟಕದ ಹಳ್ಳಿಗಾಡುಗಳಲ್ಲಿ ಹಾಗೂ ಗುಡ್ಡಗಾಡುಗಳಲ್ಲಿ ಹೇಳಲಾಗುವ ಪುರಾಣಗಳಲ್ಲಿ ಹಲವಾರು ಬಗೆಯ ವೈವಿಧ್ಯವಿದೆ. ಕರ್ನಾಟಕದಲ್ಲಿ ಗ್ರಾಮ ದೇವತೆಯನ್ನು ಕುರಿತು ಪುರಾಣಗಳು ಜನಪ್ರಿಯವಾಗಿವೆ. ಈ ಪುರಾಣದಲ್ಲಿ ಹರಿಜನ ಯುವಕನೊಬ್ಬ ಬ್ರಾಹ್ಮಣ ಯುವಕನಂತೆ ವೇಷ ಧರಿಸಿ, ಬ್ರಾಹ್ಮಣ ಹುಡುಗಿಯೊಬ್ಬಳನ್ನು ಮದುವೆಯಾಗುತ್ತಾನೆ. ತಾನು ಕೀಳುಜಾತಿಯವನನ್ನು ಮದುವೆಯಾಗಿ ಮೋಸ ಹೋದುದನ್ನು ಅರಿತ ಆ ಹುಡುಗಿ ಚಿತೆಯಲ್ಲಿ ಬಿದ್ದು ದೇವತೆಯಾಗಿಬಿಡುತ್ತಾಳೆ.

ದೇವರು ಇಲ್ಲವೇ ದೇವತೆ ಹೇಗೆ ಪೊದೆಯಲ್ಲಿ ಅಥವಾ ಹುತ್ತದಲ್ಲಿ ಕಾಣಿಸಿಕೊಂಡರು, ಎಂಬುದನ್ನು ಹೇಳುವ ಪುರಾಣಗಳೂ ವಿವಿಧ ಮಾದರಿಗಳಲ್ಲಿ ಲಭಿಸುತ್ತವೆ. ಕರ್ನಾಟಕದುದ್ದಕ್ಕೂ ಹಲವು ಐತಿಹ್ಯಗಳನ್ನು ನಾವು ಕೇಳ ಬಹುದಾಗಿದೆ. ಈ ಐತಿಹ್ಯಗಳೆಲ್ಲ ನಿರ್ದಿಷ್ಟ ಸ್ಥಳ, ವ್ಯಕ್ತಿ ಅಥವಾ ವಸ್ತುವನ್ನು ಕುರಿತು ಇರುತ್ತದೆ. ನಿಜವಾಗಿ ನಡೆದ ಘಟನೆಗಳೊಡನೆ ಸಾಂಪ್ರಾದಾಯಿಕ ಸಂಗತಿಗಳನ್ನು ಬೆರೆಸಿ ನಿರೂಪಿಸಲಾಗುವ ಕಥಾನಕಗಳಿವು. ಕೆಲವು ನಿರ್ದಿಷ್ಟ ಪ್ರದೇಶಗಳಿಗೆ ಸಂಬಂಧಿಸಿದ ಪ್ರಾದೇಶಿಕ ಐತಿಹ್ಯಗಳೂ ಇವೆ. ಚನ್ನಪಟ್ಟಣ ತಾಲೂಕಿನಲ್ಲಿ ಪ್ರಚಲಿತವಿರುವ ಒಂದು ಪ್ರಾದೇಶಿಕ ಐತಿಹ್ಯವು, ದೊಂಬನೊಬ್ಬ ತನ್ನ ಶೌರ್ಯಕ್ಕಾಗಿ ಭೂಮಿಯನ್ನು ಕಾಣಿಕೆಯನ್ನಾಗಿ ಪಡೆದುದನ್ನು ಹೇಳುತ್ತದೆ. ಈ ಐತಿಹ್ಯವನ್ನು ದೊಂಬನ ಕೊಡಿಗೆ ಎಂದು ಗುರುತಿಸಲಾಗಿದೆ. ಬೆಟ್ಟಗಳು, ಬಾವಿಗಳು, ಕೆರೆಗಳು, ಕಲ್ಲುಬಂಡೆಗಳು, ಮರಗಳು ಹಾಗೂ ಮನೆಗಳ ಬಗೆಗೆ ಐತಿಹ್ಯಗಳು ಪ್ರಚಲಿತವಿದೆ. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋದ ಐತಿಹ್ಯಗಳೂ ಸಾಕಷ್ಟಿವೆ. ಕನ್ನಡದಲ್ಲಿ ಈ ಬಗೆಯ ಐತಿಹ್ಯಗಳೂ ದೊರಕುತ್ತವೆ. ಪತಿವ್ರತೆಯೊಬ್ಬಳನ್ನು ಹೊಸದಾಗಿ ಕಟ್ಟಿಸಿದ ಕೆರೆಗೆ ಬಲಿಯಾಗಿ ನೀಡುವ ಐತಿಹ್ಯವು ಇದಕ್ಕೆ ಒಂದು ಒಳ್ಳೆಯ ಉದಾಹರಣೆ. ಚಿಕ್ಕಮಗಳೂರು ಜಿಲ್ಲೆಯ ಅಯ್ಯನಕೆರೆಗೆ ಹೊನ್ನಬಿಲ್ಲನು ಬಲಿಯಾದುದು ಹಾಗೂ ಚಿತ್ರದುರ್ಗ ಜಿಲ್ಲೆಯ ಧರ್ಮಪುರಿ ಕೆರೆಗೆ ಧರ್ಮನು ಬಲಿಯಾದುದು ಗಂಡಸರು ಬಲಿಯಾಗಿರುವುದಕ್ಕೆ ನಿದರ್ಶನಗಳಾಗಿವೆ.

ಮರ್ಚೆನ್ ಮಾದರಿಯ ಕತೆಗಳು ಸಾಮಾನ್ಯವಾದ ಜನಪದ ಕತೆಗಳಾಗಿರುತ್ತವೆ. ಅಲೆಕ್ಸಾಂಡರ್ ಎಚ್. ಕ್ರಾಫ್ ಅವರು ಜನಪದ ಕತೆಯೆಂದರೆ ಒಬ್ಬ ನಾಯಕ ಇಲ್ಲವೇ ನಾಯಕಿಯ ಸುತ್ತ ಹಣೆದುಕೊಂಡ ಗದ್ಯ ಕಥಾನಕವನ್ನು ನಿರ್ದಿಷ್ಟ ಕಾಲಾವಧಿಯಲ್ಲಿ ನಿರೂಪಿಸುವುದು ಎಂದು ವ್ಯಾಖ್ಯಾನಿಸಿದ್ದಾರೆ. ನಾಯಕನು ಕತೆಯ ಮೊದಲಲ್ಲಿ ಬಡವನೂ ನಿರ್ಗತಿಕನೂ ಆಗಿದ್ದು ಮುಂದೆ ಸಾಕಷ್ಟು ಸಾಹಸಗಳನ್ನು ತೋರಿ ಅತಿಮಾನುಷ ಶಕ್ತಿಗಳ ನೆರವನ್ನು ಪಡೆದು ಅವನು ತನ್ನ ಗುರಿಯನ್ನು ತಲುಪಿ ಕೊನೆಯಲ್ಲಿ ಸುಖವಾಗಿ ಬಾಳುತ್ತಾನೆ. ಮರ್ಚೆನ್ ಮಾದರಿಗಳಲ್ಲಿ ಇದೇ ಸಾಮಾನ್ಯವಾದ ಬಗೆಯಾದರೂ ಪ್ರಾಣಿಗಳು ಮತ್ತು ಜಾಣರು ಮುಖ್ಯ ಪಾತ್ರವಹಿಸುವ ಕತೆಗಳಿವೆ. ಇಂಥ ಕತೆಗಳನ್ನು ಅತಿ ಮಾನುಷ ಕತೆಗಳು, ಮಾಂತ್ರಿಕ ಕತೆಗಳು, ವಾಸ್ತವ ಕತೆಗಳು, ದಡ್ಡರ ಕತೆಗಳು ಮತ್ತು ಬುದ್ಧಿವಂತರ ಕತೆಗಳು, ಹಾಸ್ಯ ಕತೆಗಳು, ಸರಪಳಿ ಕತೆಗಳು, ಸೂತ್ರ ಕತೆಗಳು, ದೆವ್ವದ ಕತೆಗಳು ಎಂದೆಲ್ಲ ವರ್ಗೀಕರಿಸಲಾಗಿದೆ. ಅಂತರ್‌ರಾಷ್ಟ್ರೀಯ ವರ್ಗೀಕರಣವನ್ನು ಗಮನದಲ್ಲಿರಿಸಿಕೊಂಡು ಕನ್ನಡ ಮರ್ಚೆನ್ ಕತೆಗಳನ್ನು ಕೂಡ ಪ್ರಪಂಚದ ಮರ್ಚೆನ್ ಕತೆಗಳ ಮಾದರಿಯಲ್ಲೇ ವರ್ಗೀಕರಿಸಬಹುದಾಗಿದೆ. ಈ ದಶಕದಲ್ಲಿ

ಪ್ರಕಟಗೊಂಡಿರುವ ಕಥಾಸಂಕಲನಗಳಲ್ಲಿ ಈ ಎಲ್ಲ ಮಾದರಿಯ ಕತೆಗಳಿಗೂ ಸಾಕಷ್ಟು ಉದಾಹರಣೆಗಳು ಕನ್ನಡದಲ್ಲಿ ದೊರಕುತ್ತವೆ. ಕನ್ನಡದ ಅತಿ ಮಾನುಷ ಜನಪದ ಕತೆಗಳಲ್ಲಿ ರಕ್ಕಸರು ಹಾಗೂ ರಕ್ಕಸಿಯರು ಮುಖ್ಯ ಪಾತ್ರವಹಿಸುತ್ತಾರೆ. ಮಾಂತ್ರಿಕ ಕತೆಗಳಲ್ಲಿ ಮಾಂತ್ರಿಕ ವಸ್ತುಗಳ ಜೊತೆಗೆ ಮಾಂತ್ರಿಕರೂ ಪಾತ್ರಧಾರಿಗಳಾಗಿ ಬರುತ್ತಾರೆ. ಈ ಮಾದರಿಯಲ್ಲಿ ಸಾಕಷ್ಟು ಸಂಕೀರ್ಣ ಕತೆಗಳು ದೊರಕುತ್ತವೆ. ಎಷ್ಟೋ ಅಂತರ್‌ರಾಷ್ಟ್ರೀಯ ಮಾದರಿಯ ಕತೆಗಳು ಕನ್ನಡದಲ್ಲಿ ದೊರಕುತ್ತಿದ್ದು, ಅರ್ನೆ ಅಂಟಿ ಮತ್ತು ಸ್ಮಿತ್ ಥಾಂಪ್ಸನ್ ಅವರ 'ಟೇಲ್ ಟೈಪ್'ಗಳನ್ನು ಈ ಕತೆಗಳಿಗೆ ನೇರವಾಗಿ ಅನ್ವಯಿಸಬಹುದಾಗಿದೆ. ಪ್ರಾದೇಶಿಕ ಮರ್ಚೆನ್ ಮಾದರಿಗಳೂ ಸಾಕಷ್ಟು ಪ್ರಮಾಣದಲ್ಲಿ ದೊರಕುತ್ತವೆ.

ಕನ್ನಡದ ಪ್ರಾಣಿ ಕತೆಗಳಲ್ಲಿ ನರಿ ಕಿಲಾಡಿತನವನ್ನು ಪ್ರದರ್ಶಿಸುತ್ತದೆ. ದೆವ್ವದ, ಸರಪಳಿ ಮಾದರಿಯ, ಸೂತ್ರದ ಕತೆಗಳಿಗೂ ಸಾಕಷ್ಟು ಒಳ್ಳೆಯ ಉದಾಹರಣೆಗಳು ಕನ್ನಡದಲ್ಲಿ ಕೊರಕುತ್ತವೆ. ಮರ್ಚೆನ್‌ನಲ್ಲಿ ಇನ್ನೊಂದು ಬಗೆ ಎಂದರೆ ಕೊನೆಯಿಲ್ಲದ ಕತೆಗಳು. ಕನ್ನಡದಲ್ಲಿ ಇದಕ್ಕೂ ಉತ್ತಮ ಉದಾಹರಣೆಗಳು ದೊರಕುತ್ತವೆ. ಕಾರಣ ಹೇಳುವ ಕತೆಗಳಿಗೂ ಕನ್ನಡದಲ್ಲಿ ಸಾಕಷ್ಟು ವೈವಿಧ್ಯವಿದೆ. ಕೋಗಿಲೆಯು ಏಕೆ ಯಾವಾಗಲೂ 'ಚಿಕ್ಕವ್ವೋ ಚಿಕ್ಕವ್ವೋ' ಎಂದು ಕೂಗುತ್ತದೆ, ಅಳಿಲಿಗೆ ಬೆನ್ನ ಮೇಲೆ ಮೂರು ಗೆರೆಗಳು ಇರುವುದೇಕೆ, ಎಂದೆಲ್ಲ ವಿವರಿಸುವ ಕತೆಗಳು ಸಿಗುತ್ತವೆ.

ಗದ್ಯ ಕಥಾನಕಗಳ ನಿಧಿಯ ಅನಂತರದಲ್ಲಿ ಮಹತ್ವವನ್ನು ಪಡೆಯುವ ಪ್ರಕಾರವೆಂದರೆ ಹಾಡುಗಳು. ಜನಪದ ಗೀತೆಗಳು ಕರ್ನಾಟಕದಲ್ಲಿ ಹಲವಾರು ಸಂಪ್ರದಾಯಗಳನ್ನು ಪಡೆದುಕೊಂಡಿವೆ. ಭಕ್ತಿಗೀತೆಗಳು, ರಾಗಿ ಬೀಸುವ ಪದಗಳು, ಭತ್ತ ಕುಟ್ಟುವ ಪದಗಳು, ಜೋಗುಳಗಳು, ಶಿಶುಪ್ರಾಸಗಳು, ಕುಣಿತದ ಹಾಡುಗಳು, ಕೆಲಸದ ಹಾಡುಗಳು, ಮದುವೆಯ ಹಾಡುಗಳು, ಮೈ ನೆರೆದಾಗ ಹಾಡುವ ಹಾಡುಗಳು, ಹೊಗಳಿಕೆಯ ಹಾಡುಗಳು, ಮತ್ತಿತರ ಬಗೆಯ ಹಾಡುಗಳನ್ನು ಸಂಶೋಧಕರು ಅಧ್ಯಯನ ಮಾಡಿದ್ದಾರೆ. ಜನಪ್ರಿಯ ಹಾಡುಗಾರಿಕೆಯ ಸಂಪ್ರದಾಯಗಳೆಂದರೆ ಕಲ್ಗಿತುರಾ, ಗೀಗೀ, ಕೊಂತಿಪೂಜೆ, ತಿಂಗಳ ಮಾನವ ಪೂಜೆ, ಅಂಟಗೆ ಪಂಟಗೆ, ಭಾಗವಂತಿಕೆ, ಇತ್ಯಾದಿ. ಇವುಗಳಿಗೆ ತಮ್ಮದೇ ಆದ ಹಾಡುಗಳ ಸಂಗ್ರಹವಿದೆ. ಬ್ರಾಹ್ಮಣ ಹೆಂಗಸರು ತಮ್ಮವೇ ಆದ ಸಂಪ್ರದಾಯದ ಹಾಡುಗಳನ್ನು ಹೊಂದಿದ್ದಾರೆ. ಈ ಹಾಡುಗಳ ಮೇಲೆ ಶಿಷ್ಟ ಸಂಪ್ರದಾಯದ ಪ್ರಭಾವವನ್ನು ನೋಡಬಹುದಾದರೂ ಇವು ಕೂಡ ನಿಜವಾಗಿ ಜನಪದ ಹಾಡುಗಳೇ ಆಗಿವೆ. ಕೊರವಂಜಿಗಳು ಹಚ್ಚೆ ಹುಯ್ಯುವುದರಲ್ಲಿ ಪ್ರವೀಣರು. ಯಾವ ಪ್ರಧಾನ ಪ್ರಕಾರದಿಂದಲೂ ಪ್ರಭಾವಕ್ಕೆ ಒಳಗಾದ, ತಮ್ಮವೇ ಆದ ಹಾಡುಗಳನ್ನು ಅವರು ಹೇಳುವರು.

ಇವರು ಅಲೆಮಾರಿಗಳಾಗಿದ್ದು ತಮ್ಮದೇ ಆದ ಭಾಷೆಯನ್ನು ಮಾತನಾಡುವವರು; ಈ ಭಾಷೆಯಲ್ಲಿ ಎಲ್ಲ ದ್ರಾವಿಡ ಭಾಷೆಗಳೂ ಮಿಶ್ರಗೊಂಡಂತೆ ತೋರುವುದು. ಹಳ್ಳಿಯ ಜನರಿಗೆ ಹಚ್ಚೆ ಹುಯ್ಯುವಾಗ ಅವರು ನೋವು ಮರೆಯುವಂತಾಗಲು ಮನರಂಜನೆಗಾಗಿ ಹಾಡುಗಳನ್ನು ಹೇಳುತ್ತಾರೆ.

ಕನ್ನಡದ ಬೀಸುವ ಪದಗಳು ಹೆಂಗಸರ ಭಾವನೆಗಳು ಹಾಗೂ ಆಶೋತ್ತರಗಳನ್ನು ಹೊರಹಾಕುತ್ತವೆ. ಜೋಗುಳದ ಹಾಡುಗಳು ತಾಯಿ–ಮಗುವಿನ ಸಂಬಂಧವನ್ನು ಸುಂದರವಾಗಿ ಅಭಿವ್ಯಕ್ತಿಸುತ್ತವೆ. ಮದುವೆ ಹಾಡುಗಳು ಸಮಾರಂಭದ ಎಲ್ಲ ಹಂತಗಳನ್ನು ನಿರೂಪಿಸುತ್ತವೆ. ಈ ಎಲ್ಲ ಹಾಡುಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿವರಗಳ ಜೊತೆಗೆ ಭಾವಗೀತೆಗಳ ಸೊಗಸು ಕೂಡ ಸೇರಿದೆ. ಗ್ರಾಮದೇವತೆಗಳನ್ನು, ಹಳ್ಳಿಯ ದೇವಾನುದೇವತೆಗಳನ್ನು ಕುರಿತು ಹಾಡುವ ಹಾಡುಗಳ ಸಂಖ್ಯೆಯಂತೂ ಅಸಂಖ್ಯ. ಈ ಹಾಡುಗಳನ್ನು ಮೋಹಕವಾದ ರಾಗಗಳಲ್ಲಿ ಪಲ್ಲವಿಗಳೊಡನೆ ಹಾಡಲಾಗುವುದು. ಹೆಂಗಸರು ಹಾಡುವ ಹಾಡುಗಳಿಗೆ ಜೊತೆಯ ಸಂಗೀತ ವಾದ್ಯಗಳಿರುವುದಿಲ್ಲ. ಗಂಡಸರು ಹಾಡುವ ಹಾಡುಗಳಿಗೆ ವಾದ್ಯಗಳ ಜೊತೆಗೆ ಕುಣಿತವೂ ಇರುವುದುಂಟು. ಎಲ್ಲ ಪ್ರದರ್ಶಕ ಕಲೆಗಳೂ ಗಂಡಸರ ಕೈವಶವಾಗಿವೆ. ಅಲ್ಲೆಲ್ಲ ಅವರದೇ ಮೇಲುಗೈ. ಕೋಲಾಟದಂಥ ಕುಣಿತಗಳಲ್ಲಿ ಸುಂದರವಾದ ಹಾಡುಗಳಿರುತ್ತವೆ. ಈ ಲಯಬದ್ಧ ಹಾಡುಗಳನ್ನು ವಿವಿಧ ರಾಗಗಳಲ್ಲಿ ಹಾಡಲಾಗುವುದು. ಪಲ್ಲವಿಗಳು ಜನರ ಹರ್ಷವನ್ನು, ಅವರ ಭಾವನೆಗಳನ್ನು ಸೂಚಿಸುವಂತಿರುತ್ತವೆ.

ವೃತ್ತಿ ಗಾಯಕರು ಮತ್ತು ಲಾವಣಿ ಬಗೆಗಳು :

ಲಾವಣಿಗಳು ಕಥೆಯುಳ್ಳ ಜನಪದ ಗೀತೆಗಳು. ಈ ಹಾಡುಗಳನ್ನು ವಾದ್ಯಗಳೊಡನೆ ಹಾಡಲೆಂದೇ ರಚಿಸಲಾಗಿರುತ್ತದೆ. ಲಾವಣಿಗಳನ್ನು ವಿವಿಧ ರಾಗಗಳಲ್ಲಿ ಹಾಡಬಹುದಾಗಿದ್ದು ಈ ರಾಗಗಳು ಪರಂಪರೆಯಿಂದ ಬಂದವುಗಳಾಗಿವೆ. ಕರ್ನಾಟಕದಲ್ಲಿ ಹಲವು ಲಾವಣಿ ಸಂಪ್ರದಾಯಗಳಿವೆ. ಲಾವಣಿ ಹಾಗೂ ಮಹಾ ಕಾವ್ಯಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಗಂಡಸರು ಹಾಗೂ ಹೆಂಗಸರು ಹಾಡುವರು. ಲಾವಣಿಗಳ ಗಾಯಕರನ್ನು ಮೂರು ಮುಖ್ಯ ಗುಂಪುಗಳಲ್ಲಿ ಅಳವಡಿಸಬಹುದು: ವೃತ್ತಿಗಾಯಕರು, ಅರೆವೃತ್ತಿ ಗಾಯಕರು ಹಾಗೂ ಸಾಮಾನ್ಯ ಗಾಯಕರು. ಜನಪದ ಮಹಾಕಾವ್ಯಗಳನ್ನು ಹಾಗೂ ಲಾವಣಿಗಳನ್ನು ಹಾಡುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿರುವವರೇ ವೃತ್ತಿಗಾಯಕರು. ಇವರಿಗೆ ಇವರದ್ದೇ ಆದ ಪಾರಂಪರಿಕ ವೇಷಭೂಷಣಗಳಿರುತ್ತವೆ ಹಾಗೂ ವಿಶಿಷ್ಟವಾದ ಹಾಡುಗಳನ್ನು ಅವರು ಹಾಡುತ್ತಾರೆ. ಜನರು

ಅವರನ್ನು ಆಗಾಗ ತಮ್ಮ ಮನೆಗೆ ಇಲ್ಲವೇ ಹಳ್ಳಿಗೆ ಆಹ್ವಾನಿಸಿ ಇಡೀ ರಾತ್ರಿ ಅವರಿಂದ ದೇವರು ಇಲ್ಲವೇ ಜನಪದ ನಾಯಕ ನಾಯಕಿಯರ ಮಹಾಕಾವ್ಯಗಳನ್ನು ಹಾಡಿಸಿ ಕೇಳುತ್ತಾರೆ. ಈ ಗಾಯಕರು ಮೂರು ಇಲ್ಲವೇ ಅದಕ್ಕೂ ಹೆಚ್ಚಿನ ಜನರ ಗುಂಪುಗಳಲ್ಲಿದ್ದು ಆಗಾಗ ಕತೆ ಹೇಳುತ್ತಲೇ ಹಾಡುತ್ತಾ ನರ್ತಿಸುತ್ತಾರೆ.

ಮುಖ್ಯ ಮಹಾಕಾವ್ಯದ ಜೊತೆಗೆ ಏಕತಾನತೆಯನ್ನು ಮರಿಯಲು ನಡುನಡುವೆ ಹಾಸ್ಯ ಪ್ರಸಂಗಗಳನ್ನು ಕುರಿತ ಹಾಡುಗಳನ್ನು ಹಾಡುವುದುಂಟು. ಜೀ.ಶಂ. ಪರಮಶಿವಯ್ಯನವರ ಅಧ್ಯಯನವು ಕರ್ನಾಟಕದ ವೃತ್ತಿಗಾಯಕರ ಪರಂಪರೆಯನ್ನು ಬೆಳಕಿಗೆ ತಂದಿದೆ. ಅವರು ಪಟ್ಟಿ ಮಾಡಿರುವ ವೃತ್ತಿ ಗಾಯಕರ ಬಗೆಗಳು ಹನ್ನೆರಡಕ್ಕೂ ಮಿಕ್ಕಿವೆ. ಅವರಲ್ಲಿ ಮಲೆಯ ಮಾದೇಶ್ವರ ಪರಂಪರೆಯ ದೇವರಗುಡ್ಡರು, ಮಂಟೇಸ್ವಾಮಿ ಸಂಪ್ರದಾಯದ ನೀಲಗಾರರು, ಜುಂಜಪ್ಪ ಸಂಪ್ರದಾಯದ ಗಣೆಯವರು, ಮೈಲಾರ ಲಿಂಗನ ಪರಂಪರೆಯ ಗೊರವರು, ಸವದತ್ತಿಯ ಎಲ್ಲಮ್ಮನ ಪರಂಪರೆಯ ಚೌಡಿಕೆಯವರು, ಅಂತರ ಘಟ್ಟಮ್ಮನ ಪರಂಪರೆಯ ಅಸಾದಿಗಳು ಮುಂತಾದ ಧಾರ್ಮಿಕ ಗಾಯಕರು ಬರುತ್ತಾರೆ. ಕರಪಾಲದವರು, ತಂಬೂರಿಯವರು, ಕಿನ್ನರಿ ಜೋಗಿಗಳು, ದೊಂಬಿದಾಸರು, ಹೆಳವರು, ತೆಲುಗು ಜಂಗಮರು ಮತ್ತು ಹೆಣ್ಣು ಗಾಯಕರು ಮುಂತಾದ ಲೌಕಿಕ ಗಾಯಕ ವರ್ಗವೂ ಇದೆ. ಈ ಜನಪದ ಗಾಯಕರನ್ನು ಅವರವರ ಸಂಪ್ರದಾಯಗಳಿಗೆ ಅನುಗುಣವಾಗಿ ಧಾರ್ಮಿಕ ಹಾಗೂ ಲೌಕಿಕ ಗಾಯಕರೆಂದು ವರ್ಗೀಕರಣ ಸಾಧ್ಯ. ಧಾರ್ಮಿಕ ಗಾಯಕರು ನಿರ್ದಿಷ್ಟ ದೇವತೆಯ ಭಕ್ತ ಪರಂಪರೆಗೆ ಸೇರಿದ್ದು ಆ ದೇವರನ್ನು ಕುರಿತ ಮಹಾಕಾವ್ಯಗಳನ್ನು ಹಾಡುತ್ತಾರೆ. ಹಾಗೂ ಆ ದೇವತೆಗೆ ಸಂಬಂಧಿಸಿದ ಸಮಾರಂಭಗಳಲ್ಲಿ ಭಾಗವಹಿಸುತ್ತಾರೆ. ಲೌಕಿಕ ಗಾಯಕರಿಗೆ ಈ ಕಟ್ಟುಪಾಡುಗಳಿಲ್ಲ. ಅವರು ತಮಗೆ ಬೇಕಾದ ಮಹಾಕಾವ್ಯವನ್ನು ಹಾಡಬಹುದು. ಅದು ಯಾವ ದೇವತೆಯನ್ನು ಇಲ್ಲವೇ ನಾಯಕನನ್ನು ಕುರಿತು ಬೇಕಾದರೂ ಇರಬಹುದು. ಅವರು ಯಾವುದೇ ಧಾರ್ಮಿಕ ಸಮಾರಂಭಗಳಲ್ಲಿ ಭಾಗವಹಿಸುವುದಿಲ್ಲ.

ವೃತ್ತಿ ಗಾಯಕರಲ್ಲಿ ಮಾದೇಶ್ವರ ಪರಂಪರೆಗೆ ಸೇರಿದ ದೇವರ ಗುಡ್ಡರು ಕಂಸಾಳೆಯನ್ನು ಬಳಸುತ್ತಾರೆ. ಅವರು ಮಾದೇಶ್ವರನ ಕಾವ್ಯ ಮತ್ತಿತರ ದೀರ್ಘ ಕಥಾನಕಗಳನ್ನು ಹಾಡುತ್ತಾರೆ. ಜನಪದ ತಂಬೂರಿ (ಚಿಕ್ಕದು)ಯನ್ನು ಬಳಸುವ ನೀಲಗಾರರು ಮಂಟೇಸ್ವಾಮಿಯ ಭಕ್ತರು. ಹಾಗೂ ೧೩ನೇಯ ಶತಮಾನದ ಮಹಾನ್ ಸಂತರಾದ ಸಿದ್ಧಪ್ಪಾಜಿ ಹಾಗೂ ರಾಚಪ್ಪಾಜಿಯ ಭಕ್ತರು. ಕಾಡುಗೊಲ್ಲರ ದೇವತೆಯಾದ ಜುಂಜಪ್ಪನ ಭಕ್ತರು ಗಣೆಯವರು. ಅವರು ಒಂದು

ಮೀಟರು ಉದ್ದದ ಬೊಂಬಿನ ಕೊಳಲು (ಗಣೆ)ಯನ್ನು ಬಳಸುತ್ತಾರೆ. ಗೊರವರು ಮೈಲಾರಲಿಂಗನ ಭಕ್ತರು. ಅವರ ಉಡುಪು ವಿಶಿಷ್ಟ ಹಾಗೂ ವಿಚಿತ್ರ. ಕಪ್ಪು ಕಂಬಳಿಯನ್ನು ಹೊದ್ದು ಕರಡಿಯ ತುಪ್ಪಳದ ಟೋಪಿಯನ್ನು ಹಾಕಿಕೊಳ್ಳುತ್ತಾರೆ. ಅವರ ವಾದನಗಳೆಂದರೆ ಡಮರುಗ ಮತ್ತು ಕೊಳಲು. ಚೌಡಿಕೆಯವರು ಸವದತ್ತಿಯ ಎಲ್ಲಮ್ಮನ ಸಂಪ್ರದಾಯದವರು. ಅವರು ಎರಡು ಬಗೆಯ ಚೌಡಿಕೆಗಳನ್ನು ಬಳಸುತ್ತಾರೆ. ಅವುಗಳಲ್ಲಿ ಒಂದು ಮುಖ್ಯವಾದ್ಯವಾದ ಕರಿಕೆ ವಾದ್ಯ. ಇನ್ನೊಂದು ಶೃತಿ. ಅಸಾದಿಗಳು ಗುಂಪುಗಳಲ್ಲಿ ಅಂತರಘಟ್ಟಮ್ಮನ ಮಹಾಕಾವ್ಯವನ್ನು ಕೊಳವೆಯಂಥ ಚರ್ಮವಾದ್ಯಗಳನ್ನು ಬಾರಿಸಿಕೊಂಡು ಹಾಕುತ್ತಾರೆ. ಎಲ್ಲ ಧಾರ್ಮಿಕ ಗಾಯಕರು ಒಂದು ನಿರ್ದಿಷ್ಟ ಸಂಪ್ರದಾಯದ ಪ್ರಚಾರಕರಾಗಿದ್ದು, ಧಾರ್ಮಿಕ ಸಮಾರಂಭಗಳಲ್ಲಿ ತಮ್ಮ ದೇವರ ಮಹಾಕಾವ್ಯಗಳನ್ನು ಹಾಡುತ್ತಾರೆ.

ಜನಪದ ಮಹಾಕಾವ್ಯಗಳ ಪರಂಪರೆಯನ್ನು ಮುಂದುವರೆಸುತ್ತಿರುವ ಲೌಕಿಕ ಗಾಯಕರು ಕರ್ನಾಟಕದ ಉದ್ದಕ್ಕೂ ಕಾಣಿಸಿಕೊಳ್ಳುತ್ತಾರೆ. ಮಧ್ಯ ಕರ್ನಾಟಕದಲ್ಲಿ ಕಾಣಿಸಿಕೊಳ್ಳುವ ಕರಪಾಲದವರು ಗುಮ್ಮಟಿಯನ್ನು ತಮ್ಮ ವಾದ್ಯವನ್ನಾಗಿ ಬಳಸುತ್ತಾರೆ. ಇದು ಮಣ್ಣಿನಿಂದ ಮಾಡಿದ ಮಡಿಕೆಯಂಥ ವಾದ್ಯವಾಗಿದ್ದು ಅದರ ಒಂದು ಭಾಗವನ್ನು ಚರ್ಮದಿಂದ ಬಿಗಿದು ಮುಚ್ಚಿ ಕಟ್ಟಿರುತ್ತಾರೆ. ಇವರು ತಾಳಗಳನ್ನು ಬಳಸುವುದೂ ಉಂಟು. ಅವರಲ್ಲಿ ಮೂವರು ಒಂದು ಸಾಲಿನಲ್ಲಿ ನಿಂತು, ತಮ್ಮ ವೇಷಗಳನ್ನು ತೊಟ್ಟು ಜನರ ಎದುರು ವಾದ್ಯಗಳನ್ನು ಬಾರಿಸುತ್ತಾ ಹಾಡುತ್ತಾರೆ. ಅವರಲ್ಲಿ ಒಬ್ಬ ಹಾಡುತ್ತಾ, ಕತೆ ಹೇಳುತ್ತಾ ಕುಣಿಯುತ್ತಾನೆ. ಉಳಿದಿಬ್ಬರು ಹಿಮ್ಮೇಳದವರು. ತಂಬೂರಿ ಸಂಪ್ರದಾಯ ಮಧ್ಯ ಕರ್ನಾಟದಲ್ಲಿ ಮಾತ್ರ ಕಾಣ ಸಿಗುವಂತದ್ದು. ಅದರಲ್ಲೂ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಾತ್ರ ಅವರು ಇದ್ದಾರೆ. ಅವರು ಹರಿಜನರಾಗಿದ್ದು ಚಿಕ್ಕದಾದ, ಸುಂದರವಾದ ತಂಬೂರಿ ಹಾಗೂ ಗುಮ್ಮಟೆಗಳನ್ನು ತಮ್ಮ ವಾದ್ಯಗಳನ್ನಾಗಿ ಬಳಸುತ್ತಾ, ತಮ್ಮದೇ ಆದ ಸಂಪ್ರದಾಯದ ಹಾಡುಗಳನ್ನು ಹಾಡುತ್ತಾರೆ. ಕಿನ್ನರಿ ಜೋಗಿಗಳಿಗೆ ಅವರು ಬಳಸುವ ಕಿನ್ನರಿಯಿಂದಾಗಿ ಆ ಹೆಸರು ಬಂದಿದೆ. ಅದರ ನಾದ ಬಲು ಮಧುರ. ಈ ಜೋಗಿಗಳು ಸುಂದರವಾದ ವೇಷವನ್ನು ತೊಡುತ್ತಾರೆ. ಉಳಿದ ಗಾಯಕರಿಗೆ ಹೋಲಿಸಿದರಂತೂ ಇವರ ವೇಷ ಆಕರ್ಷಕ. ತನ್ನ ಹಳೆಯ ಪ್ರೇಯಸಿಯನ್ನು ಭೇಟಿಯಾಗಲು ಅರ್ಜುನನು ಕಿನ್ನರಿ ಹಿಡಿದು ಜೋಗಿಯ ವೇಷ ತೊಟ್ಟು ಪರ್ಯಟನೆ ಹೊರಟು ತನ್ನ ಕೆಲಸ ಮುಗಿದ ಮೇಲೆ ಕಿನ್ನರಿ ಹಾಗೂ ಅವನ ವೇಷವನ್ನು ಇಂದಿನ ಜೋಗಿಗಳ ಪೂರ್ವಿಕರಿಗೆ ದಾನವಾಗಿ ಕೊಟ್ಟನಂತೆ. ಅವರ ಮಹಾಕಾವ್ಯಗಳು ಮುಖ್ಯವಾಗಿ ಮಹಾಭಾರತಕ್ಕೆ ಸೇರಿರುತ್ತವೆ. ಅದರಲ್ಲೂ ಅವರು ಹಾಡುವ ಮುಖ್ಯ ಕಥಾನಕವೆಂದರೆ ಅರ್ಜುನ ಜೋಗಿ ಹಾಡು.

ದೊಂಬಿದಾಸರು, ಹೆಳವರು ಹಾಗೂ ತೆಲುಗು ಜಂಗಮರು ಕನ್ನಡಿಗರಲ್ಲ. ಅವರ ಮಾತೃಭಾಷೆ ತೆಲುಗು. ಹಲವಾರು ಶತಮಾನಗಳಿಂದ ಕರ್ನಾಟಕದಲ್ಲೇ ವಾಸ ಮಾಡಿರುವುದರಿಂದ ಜೀವನ ನಿರ್ವಹಣೆಗಾಗಿ ಕನ್ನಡ ಕಥಾನಕಗಳನ್ನು ಹಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ. ದೊಂಬಿದಾಸರೂ, ತೆಲುಗು ಜಂಗಮರೂ ಒಂದು ತಂತಿಯುಳ್ಳ ಏಕತಾರಿಯನ್ನು ವಾದ್ಯವನ್ನಾಗಿ ಬಳಸುತ್ತಾರೆ. ಜೊತೆಗೆ ದಮ್ಮಡಿಯನ್ನು ಕೂಡ ಬಾರಿಸುತ್ತಾರೆ. ಹೆಳವರು ದೊಡ್ಡ ಗಂಟೆಗಳನ್ನು ತಮ್ಮ ವಾದ್ಯವನ್ನಾಗಿ ಬಳಸುವರು. ಉತ್ತರ ಕರ್ನಾಟದಲ್ಲಿ ಕನ್ನಡ ಮಾತನಾಡುವ ಹೆಳವರೂ ಇದ್ದಾರೆ. ಹೆಳವರು ವರ್ಷ ವರ್ಷವೂ ತಮ್ಮ ಕುಲದವರ ಮನೆ ಮನೆಗಳಿಗೆ ಹೋಗಿ, ಅವರ ತಲೆಮಾರುಗಳ ಕತೆಯನ್ನು ಹಾಡಿ ಧಾನ್ಯ, ಬಟ್ಟೆಬರೆ, ಕರುಗಳು ಮತ್ತಿತರ ಕೊಡುಗೆಗಳನ್ನು ಕುಲದವರಿಂದ ಪಡೆಯುತ್ತಾರೆ.

ಈ ವೃತ್ತಿಗಾಯಕರ ಜೊತೆಗೆ ಅರೆ ವೃತ್ತಿಗಾಯಕರೂ ಕಾಣಸಿಗುತ್ತಾರೆ. ಕಲ್ಗಿತುರಾ ಕಲೆಗಾರರು, ಅಂಟಗೆ ಪಂಟಗೆಯವರು, ಭಾಗವಂತಿಕೆಯವರು ಇಂಥವರು. ಇವರ ಮುಖ್ಯ ವೃತ್ತಿ ಹಾಡುವುದಿಲ್ಲವಾದ್ದರಿಂದ ಅವಕಾಶ ಸಿಕ್ಕಿದಾಗ ಅವರು ಹಾಡುತ್ತಾರೆ. ಅಂಟಗೆ ಪಂಟಗೆ ಗಾಯಕರು ಹಾಗೂ ಭಾಗವಂತಿಕೆಯವರು ತಮ್ಮ ಹಾಡುಗಾರಿಕೆಯನ್ನು ದೀಪಾವಳಿ ಹಬ್ಬದ ಸಂದರ್ಭಕ್ಕೆ ಮಾತ್ರ ಮೀಸಲಾಗಿರಿಸಿಕೊಂಡಿರುತ್ತಾರೆ.

ಜನಪದ ಹಾಡುಗಳು ಹಾಗೂ ಲಾವಣಿಗಳನ್ನು ಹಾಡುವ ಸಾಮಾನ್ಯ ಗಾಯಕರು ಕೃಷಿಕರಲ್ಲಿ ಸಾಮಾನ್ಯವಾಗಿ ಕಾಣಸಿಗುತ್ತಾರೆ. ಇವರಲ್ಲದೆ ಬೆಸ್ತರು, ನೇಯ್ಗೆಯವರು ಮತ್ತಿತರ ವೃತ್ತಿಯವರಲ್ಲೂ ಇಂಥವರು ಇರುವುದುಂಟು. ಇವರು ಎಲ್ಲೆಲ್ಲೂ ಹರಡಿಕೊಂಡಿದ್ದು ಹಾಡುಗಾರಿಕೆಯಲ್ಲಿ ಪರಿಣಿತರಾಗಿರುತ್ತಾರೆ. ಗಂಡಸರಿಗೆ ಅವರದೇ ಆದ ಹಾಡುಗಳಿರುವಂತೆ ಹೆಂಗಸರಿಗೂ ವಿಶಿಷ್ಟ ವರ್ಗದ ಹಾಡುಗಳಿರುತ್ತವೆ. ಈ ಹಾಡು ಲಾವಣಿಗಳನ್ನು ಹಬ್ಬ ಹರಿದಿನಗಳಲ್ಲಿ, ಹೊಲ ಗದ್ದೆಗಳಲ್ಲಿ ಕೆಲಸದಲ್ಲಿ ತೊಡಗಿರುವಾಗ ಇಲ್ಲವೇ ಹಾಡಬೇಕೆಂದು ಮನಸ್ಸಿನ ಲಹರಿ ಬಂದಾಗ ಹಾಡುವುದುಂಟು.

ಲಾವಣಿಯ ಬಗೆಗಳು :

ಕನ್ನಡದ ಮಹಾಕಾವ್ಯ ಹಾಗೂ ಲಾವಣಿಗಳನ್ನು ಹಲವಾರು ಸಂಗ್ರಾಹಕರು ನೂರಾರು ಸಂಖ್ಯೆಯಲ್ಲಿ ಸಂಗ್ರಹಿಸಿದ್ದಾರೆ. ವಿದ್ವಾಂಸರು ಅವುಗಳನ್ನು ಕುರಿತು ಅಧ್ಯಯನ ನಡೆಸಿದ್ದಾರೆ. ಈ ಸಂಗ್ರಹಗಳು ಕರ್ನಾಟಕದ ಎಲ್ಲ ಪ್ರದೇಶಗಳನ್ನೂ ಪ್ರತಿನಿಧಿಸುವಂತಿದೆ. ಉತ್ತರದೇವಿ, ಕೆರೆ ಹೊನ್ನಮ್ಮ, ಗುಣಸಾಗರಿ ಹಾಗೂ ಕಾಳಿಂಗರಾಯ ಮುಂತಾದ ಜನಪ್ರಿಯ ಕತೆಗಳಿವೆ.

ಇವುಗಳನ್ನು ಕರ್ನಾಟಕದ ಉದ್ದಕ್ಕೂ ಹಾಡುತ್ತಿದ್ದು ಇವುಗಳಿಗೆ ಹಲವಾರು ಪಾಠಾಂತರಗಳಿವೆ. ಸರ್ಜಪ್ಪನಾಯಕನ ಕತೆ, ಸಿರ್ಸಪ್ಪನಾಯಕನ ಕತೆ, ಮದಕರಿನಾಯಕ, ಕಿತ್ತೂರು ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಮತ್ತಿತರ ಐತಿಹಾಸಿಕ ಕಥಾನಕಗಳನ್ನು ಹೇಳುವ ಲಾವಣಿಗಳೂ ಸಾಕಷ್ಟಿವೆ. ಬಾಲನಾಗಮ್ಮ, ಗಜವಂತಿ, ಎರಿದಿಮ್ಮಿ, ಕಾಡುಸಿದ್ದಮ್ಮ, ಲೋಹಿಕುಮಾರ–ಬಸವಕುಮಾರ, ಮುಂತಾದ ರೋಚಕ ಕತೆಯ ಲಾವಣಿಗಳಿವೆ. ವಾಸ್ತವ ಘಟನೆಗಳನ್ನು ಆಧರಿಸಿದ ಕಲಿಯುಗದ ಬಲೆ, ಸಂಗ್ಯಾನ ಅಪರಾಧ, ಹಲಗಲಿಯ ಬೇಡರು, ಮುಂತಾದ ಲಾವಣಿಗಳಿವೆ. ಪುರಾಣದ ಕತೆಯನ್ನೊಳಗೊಂಡ ಅರ್ಜುನ ಜೋಗಿಯ ಹಾಡು ಸೀತಾ ವನವಾಸ, ಗಂಗೆ ಗೌರಿ ಜಗಳ, ಕೃಷ್ಣ ಕೊರವಂಜಿ ಲಾವಣಿಗಳಿವೆ. ಕೊಣವೇಗೌಡ ಒಂದು ಹಾಸ್ಯ ಕಥಾನಕ; 'ನುಚ್ಚಾಯ್ತು ನೀರ ಹೊಳೆಯಾಗೆ' ಒಂದು ಪ್ರೇಮಕತೆ. ಶಿವಶರಣರನ್ನು ಕುರಿತು ಹಾಡುವ ದೀರ್ಘ ಕಥಾನಕಗಳೂ ಇವೆ. ಪಿರಿಯಾಪಟ್ಟಣದ ಕಾಳಗವನ್ನು ಕುರಿತ ಒಂದು ಐತಿಹಾಸಿಕ ಲಾವಣಿ ಇದ್ದು ಅದು ಅತ್ಯಂತ ಸುಂದರವಾಗಿದೆ. ಒಂದು ನಿರ್ದಿಷ್ಟ ಸಂಪ್ರದಾಯಕ್ಕೆ ಸೇರಿದ ವೃತ್ತಿ ಗಾಯಕರು ಹಾಡುವ ಮುಖ್ಯ ಮಹಾಕಾವ್ಯಗಳೂ ಇವೆ. ಇಲ್ಲಿ ಮಲೆಯ ಮಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ, ಜುಂಜಪ್ಪನ ಕಾವ್ಯ, ಯಲ್ಲಮ್ಮನ ಕಾವ್ಯ ಹಾಗೂ ಮೈಲಾರ ಲಿಂಗನ ಕಾವ್ಯಗಳನ್ನು ಹೆಸರಿಸಬಹುದಾಗಿದೆ. ಇವು ಸಾಕಷ್ಟು ದೀರ್ಘವಾಗಿದ್ದು ಹಲವಾರು ಅಧ್ಯಾಯಗಳನ್ನು ಹೊಂದಿವೆ. ಇವುಗಳನ್ನು ಹಾಡಿ ಮುಗಿಸಲು ಹಲವು ರಾತ್ರಿಗಳೇ ಬೇಕಾಗಬಹುದು.

ಗಾದೆ ಮತ್ತು ಒಡಪುಗಳ ಕ್ಷೇತ್ರದಲ್ಲೂ ವಿದ್ವಾಂಸರು ಹಲವಾರು ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಮೊಗ್ಲಿಂಗ್ ಮತ್ತು ಕಿಟೆಲ್ ಅವರು ೧೯ನೇಯ ಶತಮಾನದಲ್ಲಿಯೇ ಸಾವಿರಾರು ಗಾದೆಗಳನ್ನು ಸಂಗ್ರಹಿಸಿದರು. ಕಳೆದ ೧೫ ವರ್ಷಗಳಲ್ಲಿ ಇನ್ನಷ್ಟು ಸಂಗ್ರಹ ಕಾರ್ಯ ನಡೆದಿದೆ. ಒಗಟುಗಳ ಮಾದರಿಯಲ್ಲೇ ಇರುವ ಒಡಪುಗಳನ್ನು ಗುರುತಿಸಲಾಗಿದ್ದು, ಉತ್ತರ ಕರ್ನಾಟಕದ ಪ್ರದೇಶದಿಂದಲೇ ಇಂಥ ಒಡಪುಗಳ ನಾಲ್ಕು ಸಂಗ್ರಹಗಳು ಪ್ರಕಟವಾಗಿವೆ. ಹೊಸದಾಗಿ ಮದುವೆಯಾದ ಗಂಡು ಹೆಣ್ಣುಗಳು ಹೆಂಡತಿ ಹಾಗೂ ಗಂಡನ ಹೆಸರನ್ನು ಹೇಳಲು ಚಿಕ್ಕ ಚಿಕ್ಕ ಹಾಡುಗಳನ್ನು ಕಟ್ಟುವರು. ಇವೇ ಒಡಪುಗಳು. ಈ ಒಡಪುಗಳು ಗದ್ಯ ರೂಪದಲ್ಲೂ ಇರಬಹುದು.

ಜನಪದ ರಂಗಭೂಮಿ :

ಕರ್ನಾಟಕ ಜನಪದ ರಂಗಭೂಮಿಗೆ ಉಜ್ವಲ ಪರಂಪರೆಯಿದ್ದು, ಇದು ಕರ್ನಾಟಕದ ಉದ್ದಗಲಕ್ಕೂ ಹರಡಿಕೊಂಡಿದೆ. ಎರಡು ಬಗೆಯ ಜನಪದ ರಂಗಭೂಮಿಗಳನ್ನು ಕಾಣುತ್ತೇವೆ.

ಯಕ್ಷಗಾನ ಒಂದು ಬಗೆಯಾದರೆ ಇನ್ನೊಂದು ಗೊಂಬೆಯಾಟ. ಕರ್ನಾಟಕದ ಯಕ್ಷಗಾನದಲ್ಲೂ ಎರಡು ಮುಖ್ಯ ಶೈಲಿಗಳಿವೆ. ಅದರಲ್ಲಿ ಪಡುವಲಪಾಯವು ಕರ್ನಾಟಕದ ಎರಡು ಕರಾವಳಿ ಜಿಲ್ಲೆಗಳಲ್ಲಿ, ಅಂದರೆ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರಚಲಿತವಿದೆ. ಮೂಡಲಪಾಯ ಉಳಿದ ಹದಿನೇಳು ಜಿಲ್ಲೆಗಳಲ್ಲಿ ಹರಡಿಕೊಂಡಿದೆ. ಯಕ್ಷಗಾನವು ಕರಾವಳಿ ಜಿಲ್ಲೆಗಳಲ್ಲಿ ಮತ್ರ ಇದೆ ಎನ್ನುವುದು ಅಜ್ಞಾನದ ಮಾತಾಗುತ್ತದೆ. ಇದು ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ ಹರಡಿಕೊಂಡು ಜೀವಂತವಾಗಿವೆ. ಬೇರೆ ಬೇರೆ ಕಡೆ ಇದಕ್ಕೆ ಬೇರೆ ಬೇರೆ ಹೆಸರುಗಳನ್ನಿಟ್ಟು ಕರೆಯಲಾಗಿದೆ: ಬಯಲಾಟ, ದೊಡ್ಡಾಟ, ಬಯಲಾಟ ಯಕ್ಷಗಾನ, ಪಡುವಲಪಾಯ ಯಕ್ಷಗಾನ ಇವೇ ಮುಂತಾದ ಹೆಸರುಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದನ್ನು ಬಯಲಾಟ ಇಲ್ಲವೇ ಯಕ್ಷಗಾನ ಬಯಲಾಟವೆಂದು ಕರೆಯಲಾಗುತ್ತದೆ. ಇತ್ತೀಚಿನ ಪರಿವೀಕ್ಷಣೆಯ ಪ್ರಕಾರ ಮೂಡಲಪಾಯ ಯಕ್ಷಗಾನ ಆಟದಲ್ಲಿ ನಿರತವಾಗಿರುವ ೨೦೦ ತಂಡಗಳಾದರೂ ಕಂಡುಬಂದಿದ್ದು, ಕರ್ತೃ ಯಾರೆಂಬುದು ಗೊತ್ತಿಲ್ಲದ ಬಯಲಾಟಗಳ ಹಸ್ತಪ್ರತಿಗಳು ಈ ತಂಡಗಳ ಬಳಿ ಇವೆ. ಈ ಕೃತಿಗಳ ಕಾಲ ಕೂಡ ಗೊತ್ತಾಗುವಂತಿಲ್ಲ. ತಂಡಗಳಲ್ಲಿ ಆಟ ಕಲಿಸುವ ಗುರು ಇದ್ದು ಆತನನ್ನು ಭಾಗವತನೆಂದು ಕರೆಯಲಾಗುತ್ತದೆ. ಮೂಡಲಪಾಯದಲ್ಲಿ ಹಾಡುಗಳನ್ನು ಹಾಡುವಾತ ಭಾಗವತ. ಅವನೊಡನೆ ಹಿಮ್ಮೇಳದ ಗಾಯಕರ ತಂಡ ಇರುತ್ತದೆ. ಮಾತು, ಸಂವಾದಗಳನ್ನು ಬರೆಯಲಾಗಿದ್ದು ನಟರು ಆ ಮಾತುಗಳನ್ನು ಕಲಿತು ಆಡುತ್ತಾರೆ. ವಾದ್ಯಗಳೆಂದರೆ ಮದ್ದಳೆ ಇಲ್ಲವೇ ಮೃದಂಗ ಹಾಗೂ ತಾಳಗಳು. ಪಡುವಲ ಪಾಯದಲ್ಲಿ ಬಳಸಲಾಗುವ ಚಂಡೆಯ ಬದಲು ಒಂದು ಅಡಿ ಉದ್ದದ ಕೊಳವೆಯಾಕಾರದ ಮುಖವೀಣೆಯನ್ನು ಇಲ್ಲಿ ಬಳಸಲಾಗುವುದು.

ಈ ವಾದ್ಯವು ಆಟಕ್ಕೆ ಕಳೆಕಟ್ಟುವ ವಾತಾವರಣವನ್ನು ನಿರ್ಮಿಸುವುದು. ಮೂಡಲಪಾಯದ ವೇಷ ಭೂಷಣಗಳೂ ಪಡವಲಪಾಯದಲ್ಲಿರುವುದಕ್ಕಿಂತ ಭಿನ್ನವಾಗಿವೆ. ಕಿರೀಟ, ಭುಜಕೀರ್ತಿ, ಎಡೆಹಾರ, ನಡುಪಟ್ಟಿ ಮತ್ತು ವೀರಗಾಸೆಗಳನ್ನು ಮರದಿಂದ ಮಾಡಿದ್ದು ಹೊಳೆಯುತ್ತಿರುತ್ತವೆ. ಸಾಕಷ್ಟು ಭಾರದ ಆಭರಣಗಳಿವು. ಕೆಲವು ದೃಷ್ಟಿಯಲ್ಲಿ ಮೂಡಲಪಾಯದ ನೃತ್ಯ ಹಾಗೂ ಸಂಗೀತವು ಪಡುವಲಪಾಯಕ್ಕಿಂತ ಬೇರೆಯಾಗಿದೆ. ನೃತ್ಯವು ವೀರ್ಯವತ್ತಾದುದು. ಸಂಗೀತ ಹೆಚ್ಚು ಮಧುರವಾದುದು. ಮೂಡಲಪಾಯದ ಇನ್ನೊಂದು ವಿಶಿಷ್ಟ ಲಕ್ಷಣವೆಂದರೆ ರಾಕ್ಷಸ ಪಾತ್ರಗಳು ಪ್ರೇಕ್ಷಕರ ಮಧ್ಯದಿಂದ ದೀವಟಗೆಗಳನ್ನು ಹಿಡಿದುಕೊಂಡು, ಹಳ್ಳಿಯ ತಮಟೆಗಳ ಸದ್ದಿಗೆ ಕುಣಿಯುತ್ತಾ ರಂಗ ಪ್ರವೇಶ ಮಾಡುತ್ತವೆ.

ಅತ್ಯಂತ ಆಕರ್ಷಕವಾದ ಜನಪದೀಯ ಆಚರಣೆ 'ಜಾತ್ರೆ', ಜಾತಿ–ವರ್ಗಗಳ ಮೇಲು ಕೀಳು,ಮಡಿ ಮೈಲಿಗೆಯನ್ನು ಮೀರಿ, ಜನ ಸಮುದಾಯ ಮತೀಯ ವಿಧಿಯಾಚರಣೆಯ ನೆಪದಲ್ಲಿ ದೈವವೊಂದರ ಸುತ್ತ ನಿರ್ಧಿಷ್ಟ ದಿನಗಳಂದು ನೆರೆಯುವುದನ್ನು ಜಾತ್ರೆ ಎನ್ನಬಹುದು. ಬಹುತೇಕ ವಾರ್ಷಿಕ ಆವರ್ತನೆಯಲ್ಲಿರುವ ಜಾತ್ರೆಗಳು ಸಾರ್ವಜನಿಕ ಸ್ವರೂಪದವು.

ಯಾತ್ರೆ ಎಂಬ ಸಂಸ್ಕೃತ ಪದ ತದ್ಭವವಾಗಿ ಜಾತ್ರೆ ಹುಟ್ಟಿದೆ ಎಂಬ ವಾದವಿದ್ದರೂ ಜಾತ್ರೆಯ ದ್ರಾವೀಡ ಸಂಸ್ಕೃತಿ ಸ್ವರೂಪಕ್ಕೆ ಬಾಧೆಯಿಲ್ಲ.

ಕರ್ನಾಟಕದ ಹಬ್ಬ ಮತ್ತು ಜಾತ್ರೆಗಳು :

ಜಾತ್ರೆ ಜೊತೆ ಗೂಡಿ ಬಳಕೆಯಾಗಿರುವ ಪದ 'ಹಬ್ಬ' ಅವೆರಡಕ್ಕೂ ಸಾಕಷ್ಟು ಅಂತರವಿದೆ. ಉತ್ತರ ಕರ್ನಾಟಕದ ಸೀಗೆ ಹುಣ್ಣಿಮೆ, ಪಾಂಡೋರಹಬ್ಬ, ನಾಗರಪಂಚಮಿ, ಗೌರಿಹಬ್ಬ ಮುಂತಾದುವನ್ನು ಕೌಟುಂಬಿಕ ನೆಲೆಯಲ್ಲಿ ನಿರ್ಧಿಷ್ಟ ಪ್ರದೇಶ ಗ್ರಾಮಗಳ ಎಲ್ಲಾ ಜಾತಿ ಜನರು ಆಚರಿಸುತ್ತಾರೆ. ಕರ್ನಾಟಕದ ಬೇರೆ ಬೇರೆ ಸಾಂಸ್ಕೃತಿಕ ವಿಭಾಗಗಳಲ್ಲಿ ಈ ಬಗೆಯ ನಾನಾ ವಿಧದ ಹಬ್ಬಗಳಿವೆ. ಮನೆಗಳಲ್ಲಿ ತಾತ್ಕಾಲಿಕ ದೈವಗಳನ್ನು ರಚಿಸಿಕೊಂಡು ನಿಗದಿತ ದಿನಗಳಲ್ಲಿ ವಿಧಿಯಾಚರಣೆಯನ್ನು ಪೂರೈಸಿ ಅಂದರೆ ಹಬ್ಬವನ್ನು ಮಾಡಿ ದೈವವನ್ನು ವಿಸರ್ಜಿಸಲಾಗುತ್ತದೆ. ಗಣಪತಿ ಹಬ್ಬ ಮೊದಲು ಈ ರೀತಿ ಕೌಟುಂಬಿಕ ನೆಲೆಯಲ್ಲಿಯೇ ಇದ್ದುದು. ತಿಲಕರ ಸ್ವಾತಂತ್ರ್ಯ ಹೋರಾಟದ ಒಂದು ತಂತ್ರವಾಗಿ ಅದು ಸಾರ್ವಜನಿಕ ಸ್ವರೂಪ ಪಡೆದ ನಂತರ ಈವತ್ತಿಗೂ ಅದು ಕೌಟುಂಬಿಕ ಮತ್ತು ಸಾರ್ವಜನಿಕವೆಂಬ ಎರಡೂ ನೆಲೆಗಳಲ್ಲಿ ಆಚರಿಸಲ್ಪಡುತ್ತಿದೆ. ಆದರೆ, ಅದು ಜಾತ್ರೆಯ ಸ್ವರೂಪ ಪಡೆಯಲಿಲ್ಲ. ಮಹಾರಾಷ್ಟ್ರದ ಪ್ರಭಾವದಿಂದ ಕರ್ನಾಟಕದ ಬೆಳಗಾವಿ, ಹುಬ್ಬಳ್ಳಿ ಮೊದಲಾದ ಕಡೆ ಪ್ರತಿ ಓಣಿಯಲ್ಲೂ ಸಾರ್ವಜನಿಕ ಗಣಪತಿಗಳನ್ನು ಅದಕ್ಕಾಗಿ ತಯಾರಿಸಿದ ತಾತ್ಕಾಲಿಕ ಬೀದಿ ಮಂಟಪಗಳಲ್ಲಿ ಆರು ಇಲ್ಲವೇ ೧೧ ದಿನ ಸ್ಥಾಪಿಸಲಾಗುತ್ತದೆ. ಗೃಹಗಳಿಂದ ಓಣಿಯ ವ್ಯಾಪ್ತಿಗೆಹಿಗ್ಗಿರುವ ಹಬ್ಬ ಇದು.

ಬೆಳಗಾವಿಯಲ್ಲಿ ೧೧ನೇ ದಿನ ಈ ಎಲ್ಲಾ ಗಣಪತಿಗಳನ್ನು ಮೆರವಣಿಗೆಯಲ್ಲಿ ಒಯ್ದು ಕೆರೆಯಲ್ಲಿ ವಿಸರ್ಜಿಸುತ್ತಾರೆ. ಈ ಸಂದರ್ಭದಲ್ಲಿ ಕನ್ನಡ, ಮರಾಠಿ ಭಾಷಿಕ ಜನಪದ ಕಲೆಗಳ ಪ್ರದರ್ಶನಗಳು ತುಂಬಾ ಮೋಹಕವಾಗಿರುತ್ತದೆ. ಜಾತ್ರೆಗೂ ಹಬ್ಬಕ್ಕೂ ಇರುವ ವ್ಯತ್ಯಾಸವನ್ನು ಈನ್ ನಿದರ್ಶನ ಸೂಚಿಸುತ್ತದೆ. ನಿರ್ಧಿಷ್ಟ ದೈವವೊಂದರ ದೇಗುಲವನ್ನು ಕೇಂದ್ರ ಮಾಡಿಕೊಂಡು ಜಾತ್ರೆ ನಡೆಯುತ್ತದೆ. ಕೆಲವು ಕಡೆ ದೇಗುಲವೂ ಇರುವುದಿಲ. ಕಟ್ಟೆ, ಹುತ್ತ, ಮರ, ಗೋರಿ, ಕಾಡುಕಲ್ಲುಗಳು ದೈವ ಕೇಂದ್ರವಾಗಿರುತ್ತವೆ. ಒಂದರಿಂದ ಹಲವಾರು ದಿನಗಳವರೆಗೆ ಜಾತ್ರೆಯ

ವ್ಯಾಪ್ತಿಯಿರುತ್ತದೆ. ದೊಡ್ಡ ಸಂಖ್ಯೆಯಲ್ಲಿ ಜನಸಮೂಹ ಒಂದೆಡೆ ಸೇರುವುದರಿಂದ ನಾನಾ ರೀತಿಯ ಸಾಂಸ್ಕೃತಿಕ ವಿದ್ಯಮಾನಗಳು ನಡೆಯುವುದಕ್ಕೆ ಅವಕಾಶವಾಗುತ್ತದೆ. ದೈವಕ್ಕೆ ಸಂಬಂಧಪಟ್ಟ ನಿರ್ದಿಷ್ಟ ವಿಧಿಯಾಚರಣೆಗಳು ಸಂಪ್ರದಾಯಕ್ಕೆ ಅನುಗುಣವಾಗಿ ಪ್ರತಿ ಜಾತ್ರೆಯಲ್ಲಿ ಪುನರಾವೃತ್ತಿಯಾಗುತ್ತವೆಂಬುದು ನಿಜ. ಈ ವಿಧಿ ಕ್ರಿಯೆಗಳಲ್ಲಿ ಬದಲಾವಣೆಗಳುಂಟಾಗುವುದು ಕಡಿಮೆ. ಆದರೆ ಇತರೆ ಸಾಂಸ್ಕೃತಿಕ ಮತ್ತು ವ್ಯವಹಾರಿಕ ಚಟುವಟಿಕೆಗಳಲ್ಲಿ ಪರಿವರ್ತನೆಗಳು ತೀವ್ರ, ಇಷ್ಟಾಗಿಯೂ ಹಳೆಯ ಲಕ್ಷಣಗಳು ಹೊಸದರ ಜೊತೆ ಬೆರೆತುಕೊಂಡೇ ಇರುತ್ತವೆ. ಹಾಗಾಗಿ ಜಾತ್ರೆಗಳು ಜನಸಮುದಾಯಗಳ ಹಿಂದಿನ ಜೀವನ ಲಕ್ಷಣಗಳನ್ನು ಅರಿಯಲು ದಾರಿ ಮಾಡಿಕೊಡುತ್ತವೆಂದು ಭಾವಿಸಲಾಗಿದೆ. ಸಾಮಾನ್ಯವಾಗಿ ಸಂಪ್ರದಾಯಶೀಲತೆ ಲಕ್ಷಣವೇ ಪರಿವರ್ತನೆಯಾದ್ದರಿಂದ, ಸೂಕ್ಷ್ಮವಾಗಿಯಾದರೂ ಸಂಪ್ರದಾಯಗಳಲ್ಲಿ ಬದಲಾವಣೆಗಳು ಕಾಲು ಹಾಕುತ್ತವೆ.

ಕರ್ನಾಟಕದಾದ್ಯಂತ ನಡೆಯುತ್ತಿರುವ ಹಬ್ಬ ಮತ್ತು ಜಾತ್ರೆಗಳ ಪಟ್ಟಿ ಕೆಲವು ಪಿಹೆಚ್‌ಡಿ ಪ್ರಬಂಧಗಳಲ್ಲಿ ಆಕಸ್ಮಿಕವಾಗಿ ಹಬ್ಬ ಜಾತ್ರೆಗಳ ವಿವರ ಅಲ್ಪ ಮಟ್ಟಿಗೆ ಸಿಕ್ಕಬಹುದು. ಆದರೆ, ಹಬ್ಬ ಜಾತ್ರೆಗಳಿಗೆ ಸಂಬಂಧಪಟ್ಟು ಕ್ಷೇತ್ರ ಕಾರ್ಯ ನಡೆಯಬೇಕಾದ ಅಗತ್ಯವಿದೆ. ವಿಶ್ವವಿದ್ಯಾಲಯಗಳಲ್ಲಿ ಜಾನಪದ ಒಂದು ಅಧ್ಯಯನ ಶಿಸ್ತಾಗಿ ಪ್ರವೇಶ ಪಡೆದ ನಂತರ ಕ್ಷೇತ್ರ ಕಾರ್ಯವೂ ಹೆಚ್ಚಿ ಹಬ್ಬ, ಜಾತ್ರೆಗಳಂತಹ ಸಾಂಸ್ಕೃತಿಕ ಅಂಶಗಳ ಕುರಿತು ಹಲವಾರು ವಿದ್ವಾಂಸರು ಲೇಖನಗಳನ್ನು, ಗ್ರಂಥಗಳನ್ನು ಬರೆಯುತ್ತಾ ಬಂದಿದ್ದಾರೆ. ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಮತ್ತು ಖಾಸಗಿ ಸಂಘ ಸಂಸ್ಥೆಗಳು ಮಾಡುತ್ತಾ ಬಂದಿರುವ ಹಲವು ಮುಖದ ಚಟುವಟಿಕೆಗಳಲ್ಲಿ ಈ ಸಾಂಸ್ಕೃತಿಕಾಂಶಗಳ ಬಗೆಗೂ ಮಾಹಿತಿ ಪ್ರಕಟಗೊಂಡಿವೆ, ದಾಖಲಾಗಿವೆ. ಇಷ್ಟಾದರೂ ನಾಡಿನ ಸಮಗ್ರ ಶೋಧನೆಯ ಕೆಲಸ ಹಾಗೆ ಇದೆ.

ಈ ಸಂದರ್ಭದಲ್ಲಿ ಹೇಳಲೇಬೇಕಾದ ಒಂದು ಸಂಗತಿ ದಾಖಲೀಕರಣದ ವಿಧಾನಕ್ಕೆ ಸಂಬಂಧಿಸಿದೆ. ನಮ್ಮ ಸಮಾಜ ಮತ್ತು ಸಂಸ್ಕೃತಿಗಳನ್ನು ಅಧ್ಯಯನ ಮಾಡುವುದಕ್ಕೆ ಬೇರೆಯದೇ ಆದ ವಿಧಾನ ಅಗತ್ಯವಿದೆ. ಹಳೆ ಶಿಲಾಯುಗದಿಂದ ಈವರೆಗೂ ಕನ್ನಡಿಗರು ಬೆಳವಣಿಗೆಯ ಯಾವ ಯಾವ ಹಂತಗಳನ್ನು ದಾಟಿ ಬಂದಿದ್ದಾರೆಂಬ ಸೂಕ್ಷ್ಮವಾದ ಮತ್ತು ವೈಜ್ಞಾನಿಕವಾದ ತಿಳುವಳಿಕೆ ಪೂರ್ವಭಾವಿ ಅಗತ್ಯವಾಗುತ್ತದೆ. ಈ ವಿಷಯದ ಬಗ್ಗೆ ಗೊಂದಲಗಳಿರುವವರು, ತಿಳಿಯದವರು, ದಾಖಲೀಕರಣಕ್ಕೆ ಕೈ ಹಾಕಿದಾಗ ಅನೇಕ ತಪ್ಪುಗಳನ್ನು ಮಾಡುತ್ತಾರೆ. ಯಾವ ಸಂಗತಿ ಮುಖ್ಯ, ಯಾವುದು ಅಮುಖ್ಯ, ಯಾವುದು ದಾಖಲಾಗಬೇಕು ಮತ್ತು ಅದು ಯಾಕೆ

ಹೇಗೆ ದಾಖಲಾಗಬೇಕು, ವಕ್ತೃಗಳಿಗೆ ಎಂತಹ ಪ್ರಶ್ನೆ ಕೇಳಬೇಕು. ಇಂತಹ ಹಲವಾರು ವಿಷಯಗಳ ಬಗ್ಗೆ ಕ್ಷೇತ್ರ ಕಾರ್ಯಕರ್ತರಿಗೆ ತರಬೇತಿ ಬೇಕಾಗುತ್ತವೆ. ಹಲವಾರು ಜ್ಞಾನ ಶಿಸ್ತುಗಳಿಂದ ಪರಿಣತಿ ಪಡೆದು ಕೆಲಸಕ್ಕಿಳಿಯಬೇಕಾಗುತ್ತದೆ. ಈವರೆಗೆ ಪ್ರಕಟಗೊಂಡಿರುವ ಲೇಖನ ಅಥವಾ ಗ್ರಂಥಗಳನ್ನು ಈ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ತೃಪ್ತಿಗಿಂತ ನಿರಾಶೆ ಹೆಚ್ಚಾಗುತ್ತದೆ. ಹೀಗಾಗಿ ಹೆಚ್ಚಿನ ಸಂದರ್ಭಗಳಲ್ಲಿ ಇವುಗಳಿಂದ ನಮಗಾಗುವ ಲಾಭವೆಂದರೆ 'ಮಾಹಿತಿ'ಗಳ ಲಭ್ಯತೆ. ಅವನ್ನು ಬಳಸಿಕೊಂಡು ಒಂದು ಸಿದ್ಧಾಂತ ಕಟ್ಟುವುದಕ್ಕೆ ಪ್ರಯತ್ನಿಸಬೇಕಾಗುತ್ತದೆ.

ಉಪಸಂಸ್ಕೃತಿಗಳ ಅಧ್ಯಯನವು ಪ್ರಾರಂಭವಾದ ನಂತರ ಈ ಬಗೆಯ ಶೋಧನೆ ಮತ್ತು ಬರಹಗಳಿಗೆ ಸ್ಪಷ್ಟವಾದ ಗುರಿಯ ಕಲ್ಪನೆ ಮೂಡುವಂತಾಯಿತು. ಅದೇನೆಂದರೆ ಲಿಖಿತ ಮತ್ತು ಶಿಷ್ಟ ಪರಂಪರೆಗೆ ಪ್ರತಿಯಾಗಿ ಸಾಮಾನ್ಯ ಜನತೆಯ ಚರಿತ್ರೆ ಮತ್ತು ಸಂಸ್ಕೃತಿ ಪರಂಪರೆಗಳನ್ನು ನಿಖರವಾಗಿ ತಿಳಿದುಕೊಳ್ಳಲು ಈ ಮಾಹಿತಿಗಳು ಮೂಲ ಆಕರವಾಗುತ್ತವೆ. ಶೋಷಿತ ಮತ್ತು ಶ್ರಮಿಕ ಜಾತಿಗಳ ಜನಕೋಟಿಯ ಚರಿತ್ರೆಗೆ ಲಿಖಿತ ದಾಖಲೆಗಳ ಆಧಾರಗಳಿಲ್ಲ. ಅವರು ಬದುಕಿ ಬಂದ ಕ್ರಮಗಳನ್ನೇ ಆಕರ ಮಾಡಿಕೊಂಡು ಅವರ ವಿಸ್ಮೃತಿಗೀಡಾದ ಚರಿತ್ರೆಯನ್ನು ಬರೆಯಬೇಕಾಗಿದೆ. ಈ ಹಂತದಲ್ಲಿ ನಮಗೆ ಹಬ್ಬ-ಜಾತ್ರೆಗಳು ಕೂಡ ತುಂಬ ನೆರವಾಗುತ್ತದೆ. ದೇವಿ ಪ್ರಸಾದ ಚಟ್ಟೋಪಾಧ್ಯಾಯ ಡಿ.ಡಿ.ಕೋಸಂಬಿಯವರಂಥ ಚರಿತ್ರಾಕಾರರು ಈ ಬಗೆಯ ಅಸಂಪ್ರದಾಯಕ ವಿಧಾನಗಳನ್ನು ಅನುಸರಿಸಿ ಭಾರತದ ಜನತೆಯ ಚರಿತ್ರೆಯನ್ನು ರಚಿಸಲು ಯತ್ನಿಸಿದ್ದಾರೆ. ಅಲ್ಲಿ ಅವರವರ ಪ್ರಾದೇಶಿಕ ಅನುಭವಗಳು ಅವರಿಗೆ ಆಕರವಾಗಿರುವುದು ಸಹಜ. ಈ ಬಗೆಯ ಯತ್ನ ಕರ್ನಾಟಕದ ಸಂದರ್ಭದಲ್ಲಿ ನಡೆಯಲಿಲ್ಲ. ಕೋಸಾಂಬಿಯವರಂಥವರ ಬರಹಗಳಲ್ಲಿ ಕಾಣುವ ಕೊರತೆಗಳನ್ನು ತುಂಬಲು ಕರ್ನಾಟಕದ ದೇಸೀ ಅನುಭವಗಳು ನೆರವಾಗುತ್ತವೆಂಬುದನ್ನು ಈ ಸಂದರ್ಭದಲ್ಲಿ ಗಮನಿಸಬೇಕಾಗಿದೆ. ಇದೇ ರೀತಿ ತೆಲುಗು, ತಮಿಳು, ಮಲೆಯಾಳ, ಅನುಭವಗಳೂ ಬೇರೆ ಬೇರೆ ರೀತಿಯ ಪುಟಗಳನ್ನು ಸೇರಿಸುವ ಸಾಧ್ಯತೆ ಇರುತ್ತದೆ. ಭಾರತದ ಜನತೆಯ ಸಮಗ್ರ ಚಿತ್ರಣಕ್ಕೆ ಈ ಬಗೆಯ ಯತ್ನಗಳು ಉಪಯುಕ್ತವಾಗುತ್ತದೆ.

ಇಂದಿಗೂ ಉಳಿದಿರುವ ಪರಂಪರೆ :

ಹಬ್ಬ, ಜಾತ್ರೆಯಂತಹ ಜನಪದೀಯ ಸಾಂಸ್ಕೃತಿಕಾಂಶಗಳು ಫ್ಯೂಡಲ್ ಕಾಲದ ಪಳೆಯುಳಿಕೆಗಳು ಅವುಗಳಲ್ಲಿ ಕೆಲವಾದರೂ ನಾಡಿನ ಜನತೆ ಬುಡಕಟ್ಟು ಹಂತದಲ್ಲಿದ್ದಾಗ ಹುಟ್ಟಿರಬಹುದು. ಇನ್ನೂ ಕೆಲವು ಊಳಿಗಮಾನ್ಯ ಕಾಲದ ಸೃಷ್ಟಿಗಳು, ಆಶ್ಚರ್ಯವೆಂದರೆ, ಈಚೆಗೆ ಆಗಿ ಹೋದ ಸಂತರ ಜಾತ್ರೆಗಳು ನಡೆಯುತ್ತಿರುವುದು. ಅಂದರೆ ಜಾತ್ರೆಯ ವಿಧಿವಿಧಾನಗಳು

ತುಂಬಾ ಹಿಂದಿನವೇ. ಅವನ್ನು ಜನ ತಮಗೆ ಪೂಜ್ಯರೆಂದು ತೋರುವ ಈಚೆಗೆ ಆಗಿ ಹೋದ ವ್ಯಕ್ತಿಗಳಿಗೂ ಅನ್ವಯಿಸಿ 'ಜಾತ್ರೆ'ಯ ಒಟ್ಟು ಪರಂಪರೆಯನ್ನು ಉಳಿಸಿಕೊಂಡು ಹೋಗುತ್ತಿದ್ದಾರೆ. ಆದರೆ ಹೊಸದಾಗಿ ಹುಟ್ಟುತ್ತಿರುವ ಜಾತ್ರೆಗಳಂತೆ ಹೊಸ ಹಬ್ಬಗಳು ಹುಟ್ಟುತ್ತಿಲ್ಲ. ಆಧುನಿಕ ಜೀವನ ಪದ್ಧತಿಯ ಸ್ವಭಾವ ಹಬ್ಬಕ್ಕಿಂತ ಜಾತ್ರೆಗೆ ಹೆಚ್ಚು ಹೊಂದುತ್ತಿರುವಂತೆ ತೋರುತ್ತಿದೆ. ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಚನ್ನಬಸವ ತಾತ ೧೯೪೫ರಲ್ಲಿ ತೀರಿದರು. ಅವರ ಭವ್ಯವಾದ ದೇಗುಲ ರಚನೆಗೊಂಡಿದೆ. ಈ ಪ್ರದೇಶ ಸತತವಾಗಿ ತುಂಗಭದ್ರೆಯ ನೀರುಣ್ಣುತ್ತಿರುವುದಲ್ಲವೇ? ಪ್ರತಿ ವರ್ಷ ತಾತನ ಜಾತ್ರೆ ವಿಜೃಂಭಣೆಯಿಂದ ನಡೆಯುತ್ತಿದೆ. ಸಂಪ್ರದಾಯಿಕ ಜಾತ್ರೆಗಳಲ್ಲಿರುವಂತೆ ಈ ಜಾತ್ರೆಯಲ್ಲಿ ಉಚ್ಚಯ್ಯ, ಪಾಲಕಿ, ಮಹಾರಥ, ಕಡುಬಿನ ಕಾಳಗ ಇವೆಲ್ಲ ಇವೆ. ಕುಷ್ಟಗಿ ತಾಲ್ಲೂಕಿನ ಮುದೇನೂರಿನಲ್ಲಿ ಮಹಿಳೆಯರು ಮಾತ್ರ ಎಳೆಯುವ ತೇರು ಜಾತ್ರೆ ಇದೆ. ಇದು ೧೯೨೭ ರಲ್ಲಿ ಮರಣ ಹೊಂದಿದ ಜನಪ್ರಿಯ ವೈದ್ಯ ಚಂದ್ರಶೇಖರ ಸ್ವಾಮಿಗಳು ಪ್ರಾರಂಭಿಸಿದ್ದು. ಮೂಲತಃ ರಾಮಲಿಂಗೇಶ್ವರ ಗುಡಿಯಾಗಿದ್ದ ಸ್ಥಳದಲ್ಲೇ (ಗರ್ಭ ಗುಡಿಯನ್ನು ಬಂದ್ ಮಾಡಲಾಗಿದೆ) ಉಮಾ ಚಂದ್ರಮೌಳೇಶ್ವರ ಮಂದಿರವನ್ನು ಸ್ಥಾಪಿಸಿ ಸ್ವಾಮಿಗಳು ವಾರ್ಷಿಕ ಜಾತ್ರೆ ಆರಂಭಿಸಿದರು. ಎಲ್ಲಾ ಕಡೆ ಪುರುಷರು ಮಾತ್ರ ತೇರೆಳೆಯುವುದನ್ನು ಕಂಡಿದ್ದ ಸ್ವಾಮಿಗಳು ಮಹಿಳೆಯರ ಬಗ್ಗೆ ವಿಶೇಷ ಕಾಳಜಿಯುಳ್ಳವರಾಗಿದ್ದರಿಂದ ಮಹಿಳೆಯರು ಮಾತ್ರ ತೇರೆಳೆಯುವ ಹೊಸ ಸಂಪ್ರದಾಯವನ್ನು ಪ್ರಾರಂಭಿಸಿದರು. ಅದು ಈಗಲೂ ನಡೆದುಕೊಂಡು ಬಂದಿದೆ. ಅಂದು ಜಾತ್ರೆಯ ಪ್ರತಿಯೊಂದು ಕೆಲಸವನ್ನು ಗ್ರಾಮದ ಮಹಿಳೆಯರೇ ಮಾಡುತ್ತಾರೆ. ಇದು ಒಂದು ವಿಧಿಯಾಚರಣೆಯಂತೆ ನಡೆದು ಬರುತ್ತಿದೆ. ಕುಷ್ಟಗಿ ತಾಲ್ಲೂಕಿನ ದೋಟಿಹಾಳ ಎಂಬ ಗ್ರಾಮದಲ್ಲಿ ಸುಕಮುನಿ ಎಂಬ ಯತಿಯ ಗುಡಿ ಇದೆ. ಅಲ್ಲಿ ವಾರ್ಷಿಕ ಜಾತ್ರೆಯಾಗುತ್ತದೆ. ಈ ಯತಿಯನ್ನು ಕಂಡ ಹಿರಿಯರು ಊರಲ್ಲಿದ್ದಾರೆ. ಗುಡಿಯನ್ನು ಕಟ್ಟಿದ್ದೇ ೧೮ ವರ್ಷಗಳ ಹಿಂದೆ, ಆಗಿನಿಂದ ಪ್ರತಿ ವರ್ಷ ತೇರೆಳೆದು ಜಾತ್ರೆ ಮಾಡುತ್ತಾರೆ. ಇಂತಹ ಅಸಂಖ್ಯ ನಿದರ್ಶನಗಳು ನಮ್ಮ ನಾಡಿನ ತುಂಬ ಇವೆ. ಇವು ಜಾತ್ರೆಯ ಸಂಪ್ರದಾಯ ಅನೂಚಾನವಾಗಿ ನಡೆದು ಬಂದಿರುವುದನ್ನು ಸೂಚಿಸುತ್ತದೆ.

ಹುಟ್ಟು ಯಾವುದೇ ಜನಪದ ಆಚರಣೆಯಂತೆ ಜಾತ್ರೆಯ ಹುಟ್ಟು ನಿಗೂಢ. ಜಾತ್ರೆಯಂತಹ ಸಾಂಸ್ಕೃತಿಕ ರಚನೆಯೊಂದು ರೂಪುಗೊಳ್ಳುವುದರ ಸಾಮಜಿಕಾರ್ಥಿಕ ಹಿನ್ನೆಲೆಯನ್ನು ನೋಡಬೇಕಾಗುತ್ತದೆ. ಜಾತಿ ಜನಸಮುದಾಯವೊಂದು ಪ್ರಾಚೀನವಾಗಿದ್ದಷ್ಟೂ ಬುಡಕಟ್ಟು ಹಂತವನ್ನು ದಾಟಿಯೇ ಬಂದಿರುತ್ತದೆ. ಬುಡಕಟ್ಟು ಸಮಾಜಗಳಲ್ಲಿ ಬೇಟೆಗಾರರು, ಪಶುಪಾಲಕರು, ಕೃಷಿಕರು ಎಂಬ ವೃತ್ತಿಯಾಧಾರಿತ ವಿಭಜನೆಗಳಿವೆ. ಕರ್ನಾಟಕದ ಬುಡಕಟ್ಟು ಪಶುಪಾಲಕರು ಹಟ್ಟಿ ಸಂಸ್ಕೃತಿಯ ನಿರ್ಮಾಪಕರು. ಎತ್ತು, ಆಕಳು, ಎಮ್ಮೆ, ಕೋಣ, ಕುರಿ

ಆಡುಗಳನ್ನು ಹಿಂಡುಗಳಲ್ಲಿ ಸಾಕಿಕೊಂಡು ನಿರಂತರ ವಲಸೆಯಲ್ಲಿರುತ್ತಿದ್ದ ಬೇಡರು, ಕೊರಚರು, ಗೊಲ್ಲರು, ಕುರುಬರು, ಗೌಡರು ನಮ್ಮ ನಾಡಿನ ಪ್ರಧಾನ ಪಶುಪಾಲಕ ಕುಲಗಳು. ಇವರಲ್ಲಿ, ಕಾಡು, ಊರು ಎಂಬ ಜಾತಿ ಭೇದಗಳಿದ್ದು, ಕಾಡು ಬೇಡ (ಮ್ಯಾಸ ನಾಯಕರು), ಕಾಡುಗೊಲ್ಲ, ಕಾಡುಕುರುಬರು ಬುಡಕಟ್ಟು ಲಕ್ಷಣಗಳನ್ನು ಹೆಚ್ಚು ಉಳಿಸಿಕೊಂಡಿದ್ದಾರೆ. ಇವರ ಕೆಲವು ಗುಂಪುಗಳು ಗ್ರಾಮಗಳನ್ನು ಸೇರಿ ನೆಲೆನಿಂತು ನೆಲಸುಗರರಾದಾಗ ಊರ ಕುರುಬ, ಊರಗೊಲ್ಲ, ಊರ ಬೇಡರಾದರು. ಜಾತಿ ಶ್ರೇಣೀಕರಣದಲ್ಲಿ ಮಧ್ಯದಲ್ಲೆಲ್ಲೋ ಸ್ಥಾಪಿತರಾದರು. ಈಚಿನ ಶೋಧನೆಯಂತೆ ಮೂಲ ಬೇಸಾಯಗಾರರು ಹೊಲೆಯರು ಮತ್ತು ಮಾದಿಗುರ ಎನ್ನುವುದು ನಿಜವಾದರೆ ಅವರೇ ಹಬ್ಬಗಳ ಸೃಷ್ಟಿಗೆ ಕಾರಣರು. ನೆಲಸುಗಾರ ಹಳ್ಳಿ ಸಂಸ್ಕೃತಿಯ ಸ್ವಭಾವಕ್ಕೆ ಹಬ್ಬಗಳು ಹೊಂದುವಂತೆ ಜಾತ್ರೆಗಳು ಹೊಂದುವುದಿಲ್ಲ. ಅಂತೆಯೇ ಜಾತ್ರೆಗಳನ್ನು ವಲಸೆಗಾರ ಪಶುಪಾಲಕ ಹಟ್ಟಿ ಸಂಸ್ಕೃತಿಯ ಜನತೆ ಕಂಡುಕೊಂಡಿರುವುದೆಂದು ಹೇಳುವುದು ಇಂದಿಗೂ ಉಳಿದುಬಂದಿರುವ ಮ್ಯಾಸ ನಾಯಕರು (ಕಾಡು ಬೇಡರು) ಮತ್ತು ಕಾಡುಗೊಲ್ಲರಲ್ಲಿ ಹಬ್ಬಗಳಲ್ಲಿ, ಜಾತ್ರೆಗಳು ಪ್ರಧಾನ ರಿಚ್ಯುವಲ್‌ಗಳಾಗಿವೆ ಎಂಬುದನ್ನು ಸಾಂಸ್ಕೃತಿಕ ಶೋಧಕರು ಕಂಡುಕೊಂಡಿದ್ದಾರೆ. ಪ್ರಖ್ಯಾತ ಚರಿತ್ರಾಕಾರ ಡಿ.ಡಿ.ಕೋಸಾಂಬಿ ಬರೆಯುತ್ತಾರೆ. ಕಾಡಿನಲ್ಲಿರುವ ಸಮುದಾಯಗಳು ಗಣಗಳಾಗಿದ್ದಾಗ ಒಂದೊಂದು ಗಣ ಸಂಗ್ರಹಿಸುತ್ತಿದ್ದ ಆಹಾರವನ್ನು ಇನ್ನೊಂದು ಗಣದ ಬೇರೆವಸ್ತುಗಳ ಜೊತೆ ವಿನಿಮಯ ಮಾಡಿಕೊಳ್ಳುತ್ತಿತ್ತು. ಈ ಹಂತದಲ್ಲಿ ಗಣಗಳ ನಡುವೆ ರಕ್ತ ಸಂಬಂಧ ಬೆಳೆಸುವ ಪದ್ಧತಿಯೂ ರೂಢಿಯಾಯಿತು (ಪ್ರಾಚೀನ ಭಾರತದ ಚರಿತ್ರೆ ಅನು: ಎಚ್.ಎಸ್.ಶ್ರೀಮತಿ ೧೯೯೮ ಪು.೩೧) ಗಣಗಳು ಆಹಾರ ವಿನಿಮ್ಯಕ್ಕಾಗಿ ಸೇರುತ್ತಿದ್ದ ಕೂಡಲ ಸ್ಥಳಗಳಲ್ಲಿ ಮಾತೃ ದೈವಗಳ ಪ್ರತಿಷ್ಠಾಪನೆಯಾಯಿತು (ಅದೇ ಪು. ೩೪) ಈ ಸ್ಥಳದಲ್ಲಿ ನಡೆಯುತ್ತಿದ್ದ ವಿನಿಮಯ ಸಾಂಪ್ರದಾಯಿಕ ಆಚರಣೆಯಂತೆ ನಡೆಯುತ್ತಿತ್ತು (ಅದೇ ಪು. ೩೫).

ಜಾತ್ರೆಗಳಲ್ಲಿ ವ್ಯಾಪಾರ ವಿನಿಮಯಕ್ಕೆ ಪ್ರಾಮುಖ್ಯತೆ ಎಷ್ಟೊಂದಿರುತ್ತದೆ ಎಂಬುದನ್ನು ನೋಡಿದರೆ ಡಿ.ಡಿ.ಕೆ. ಅವರು ಹೇಳುವ ಈ ಕಾಲಘಟ್ಟ ಮತ್ತು ಪರಿಸ್ಥಿತಿಯೇ ಆದಿಮ ಜಾತ್ರೆಯ ಉಗಮ ಸ್ಥಿತಿಯೆಂದು ಭಾವಿಸಬಹುದಾಗಿದೆ.

ಬುಡಕಟ್ಟಿನ ಒಳಗೆ ನಡೆಯುತ್ತಿದ್ದ ಈ ವಿಧಿಯಾಚರಣೆ ಕಾಲಾಂತರದಲ್ಲಿ ಬುಡಕಟ್ಟುಗಳ ನಡುವೆ ನಡೆಯುವಂತಾಯಿತು. ಇಲ್ಲಿ ಬುಡಕಟ್ಟುಗಳ ದೈವಗಳು ಒಂದೆಡೆ ಕಲೆಯುತ್ತಿದ್ದುದು ಸಹಜ. ಈ ದೈವಗಳ ಬೇರೆ ಬೇರೆ ಆಚರಣೆಗಳು ಪರಸ್ಪರ ಕೊಡುಗೆ ಕೊಳಗಳಾಗುತ್ತವೆ. ಇಂಥಲ್ಲಿ ಒಂದು ಸಂಕ್ರ ಸಂಸ್ಕೃತಿ ಹುಟ್ಟುತ್ತದೆ. ಇದು ಉಾಳಿಗಮಾನ್ಯ ಕಾಲದ ಜಾತ್ರೆಗಳಲ್ಲಿ ವಿಸ್ತೃತ ರೂಪ

ತಾಳುತ್ತದೆ. ಇದಕ್ಕೆ ಸಾಕ್ಷಿಯಾಗಿ ಕೆಲವು ಜಾತ್ರೆಗಳಲ್ಲಿ ಆರಾಧನೆಗೊಳ್ಳುವ ಪ್ರಮುಖ ದೈವ ಆ ಊರಿನ ಇತರ ದೈವಗಳನ್ನು ಭೇಟಿ ಮಾಡಿ ಬರುವ ಕಾರ್ಯಕ್ರಮವಿರುವುದನ್ನು ನೋಡಬಹುದು. ಇದು ಜಾತ್ರೆಯ ಮುಖ್ಯ ಆಚರಣೆಗಳಲ್ಲಿ ಒಂದಾಗಿರುತ್ತದೆ.

ಬುಡಕಟ್ಟಿನ ಜಾತ್ರೆ :

ಮೇಲೆ ಹೇಳಿದ ವಿಚಾರಗಳಿಗೆ ಕೆಲವು ನಿದರ್ಶನಗಳನ್ನು ಇಲ್ಲಿ ಗಮನಿಸಬೇಕು. ಬುಡಕಟ್ಟಿನ ಕನಿಷ್ಠ ಘಟಕವಾದ ಕುಲ (ಕ್ಲಾನ್)ವೊಂದರಲ್ಲಿ ಹುಟ್ಟುವ ಜಾತ್ರೆಯ ಆದಿಯ ರೂಪ, ಆ ಕುಲವೂ ಪ್ರಧಾನ ನೆಲೆಗೆ ಬಂದಂತೆ ಅದರ ಜಾತ್ರೆಯೂ ಪ್ರಸಿದ್ಧಿಗೆ ಬರುತ್ತದೆ. ಅದು ಬುಡಕಟ್ಟಿಗೂ ವಿಸ್ತರಿಸುತ್ತದೆ. ಈ ಪ್ರಕ್ರಿಯೆಗೆ ಕಾಡುಗೊಲ್ಲರ ಅನುಭವಗಳನ್ನು ಅವಲೋಕಿಸಬಹುದು. ತೀ.ನಂ. ಶಂಕರನಾರಾಯಣರು ತಮ್ಮ ಮಹಾಪ್ರಬಂಧದಲ್ಲಿ (ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು ೧೯೮೨ ಪ್ರಸಾರಂಗ ಮೈ.ವಿ.ವಿ.) ಕಾಡುಗೊಲ್ಲರಲ್ಲಿರುವ ವಿಶೇಷ ಜಾತ್ರೆಗಳ ವಿವರಗಳನ್ನು ನೀಡಿದ್ದಾರೆ. ಅವರು ಹೇಳುತ್ತಾರೆ 'ಕಾಡುಗೊಲ್ಲರಿಗೆ ವಿಶಿಷ್ಟವಾಗಿರುವ ಯಾವ ಹಬ್ಬವೂ ಇಲ್ಲ' (ಅದೇ ಪು.೧೨೮) ಆದರೆ ಜಾತ್ರೆಗಳಲ್ಲಿ ಕಾಡುಗೊಲ್ಲರಿಗೆ ವಿಶಿಷ್ಟವಾದ ಅಂಶಗಳಿವೆ. ಜುಂಜಪ್ಪ, ಎತ್ತಪ್ಪ, ಚಿತ್ರದೇವರು, ಕಾಟಮ್ಮ ದೇವರು, ಪಾತೇ ದೇವರು, ಕೇತೇ ದೇವರು, ಗೌರಸಂದ್ರದ ಮಾರಕ್ಕ, ಬೇವಿನಹಳ್ಳಿ ಕರಿಯಮ್ಮ, ಪುರಲಹಳ್ಳಿ ಭೂತಪ್ಪ – ಈ ದೇವತೆಗಳ ಜಾತ್ರೆಗಳು ಮುಖ್ಯವಾದವು. (ಅದೇ ಪು. ೧೨೯).

ಜುಂಜಪ್ಪ, ಎತ್ತಪ್ಪ ಚಿತ್ರ ದೇವರ ಜಾತ್ರೆಗಳು :

ದೀಪಾವಳಿಯಲ್ಲಿ ನಡೆಯುತ್ತವೆ. ದೀಪಾವಳಿ ಪಶುಪಾಲಕರ ಪ್ರಮುಖ ಜಾತ್ರೆ ಹಬ್ಬ. ಜಾಂಡೇವು ಹಾರಿಸುವುದು, ಹಾಲು ಮೀಸಲು ಕರೆಯುವುದು, ದೇವರಿಗೆ ಗಂಗಾಸ್ನಾನ ಮಾಡಿಸುವುದು, ಹರಕೆ ತೀರಿಸುವುದು, ದೀಪ ಏರಿಸುವುದು ಇವು ಮುಖ್ಯ ಕಾರ್ಯಕ್ರಮಗಳು.

ಈ ಆಚರಣೆಗಳಲ್ಲಿ ಹೆಚ್ಚಿನವು ಇತರ ಜಾತಿ ದೈವಗಳ ಜಾತ್ರೆಗಳಲ್ಲೂ ಕಂಡು ಬರುತ್ತವೆ. ಅಂದರೆ, ಇವು ಕಾಡುಗೊಲ್ಲರಿಗೆ ಸೀಮಿತವಾದವು ಎಂದಲ್ಲ. ಇವನ್ನು ದ್ರಾವಿಡ ಜಾತ್ರೆಗಳ ಸಾಮಾನ್ಯಾಂಶಗಳೆಂದು ಹೇಳುವುದೇ ಹೆಚ್ಚು ಸೂಕ್ತ. ಇವು ಕಾಡುಗೊಲ್ಲರಿಂದ ಇತರರಿಗೆ ಹೋದುವೋ, ಇತರರಿಂದ ಕಾಡುಗೊಲ್ಲರಿಗೆ ಬಂದವೋ ನೋಡಬೇಕು. ಜುಂಜಪ್ಪ ಮೊದಲಾದ ದೈವರುಗಳು ಪೆಟ್ಟಿಗೆಯಲ್ಲಿರುತ್ತವೆ. ಇವನ್ನು ಅವರು ತಾವು ಹೋದೆಡೆ ಹೊತ್ತೊಯ್ಯುತ್ತಾರೆ. ಒಂದೆಡೆ ಸ್ಥಿರವಾಗಿ ನೆಲೆಗೊಳ್ಳದ ಪಶುಪಾಲಕರ ಸ್ವಭಾವಕ್ಕೆ ದೈವಗಳು ಹೊಂದಿಕೊಳ್ಳಬೇಕು

ಅದಕ್ಕಾಗಿ ಹಟ್ಟಿಗಳ ಗುಬ್ಬಗಳಲ್ಲಿ ದೈವಗಳನ್ನು ಸ್ಥಾಪಿಸುತ್ತಾರೆ. ಜಾತ್ರೆಗೆ ತಾತ್ಕಾಲಿಕವಾಗಿ ನಿರ್ಮಿಸಿದ ಹಂದರವನ್ನು ಜಾತ್ರೆ ಮುಗಿದ ಮೇಲೆ ಸುಟ್ಟು ಹಾಕುತ್ತಾರೆ. ಇಲ್ಲವೇ ಕಿತ್ತು ಹಾಕುತ್ತಾರೆ. ಇವೆಲ್ಲ ಪಶುಪಾಲಕರ ವಲಸೆಗಾರಿಕೆಗೆ ಸಹಜವಾದ ಕ್ರಿಯೆಗಳೇ.

ತಮ್ಮ ಜಾತಿಯ ಜನರ ಜಗಳಗಳನ್ನು ಬಗೆಹರಿಸಲು ಜಾತ್ರೆಯ ಸಂದರ್ಭವನ್ನು ಬಳಸಿಕೊಳ್ಳುತ್ತಾರೆಂದು ಎಲ್.ಕೆ.ಅನಂತಕೃಷ್ಣ ಐಯ್ಯರ್ ಹೇಳುವುದು (ಅದೇ ಪು. ೧೩೦) ಬುಡಕಟ್ಟಿನಲ್ಲಿ ನಡೆಯುತ್ತಿದ್ದ ಜಾತ್ರೆಯ ಬೇರೆ ಬೇರೆ ಆಯಾಮಗಳನ್ನು ನಿರೂಪಿಸುತ್ತದೆ. ನಾವಾಗಲೇ ಗಮನಿಸಿದಂತೆ ವ್ಯಾಪಾರ –ವ್ಯವಹಾರದಂತೆ ಜಾತಿ ನ್ಯಾಯಾಲಯದ ಕೆಲಸವೂ ಜಾತ್ರೆಯ ಒಂದು ಅಂಗ.

ಯಲಬುರ್ಗಾ ತಾಲ್ಲೂಕಿನ ಕುದುರಿಮೋತಿ ಗ್ರಾಮದ ಮೊಹರಂನ ಸಂದರ್ಭದಲ್ಲಿ ವೇಷಗಾರರು (ಜಾತಿಗಾರರು) ರಾಮಕೊಂಡಿಯರು ಸಿದ್ಧರು, ದುರುಗಮುರುಗೇರು ಪ್ರತಿ ಮೂರು ವರ್ಷಕ್ಕೊಮ್ಮೆ ಕಡ್ಡಾಯವಾಗಿ ಬಂದು ಸೇರುವರು. ೫–೬ ಸಾವಿರದಷ್ಟಿರುವ ಈ ಜನಕ್ಕೆ ಇದೇ ಮೆಟ್ಟು ತಮ್ಮ ತಮ್ಮಲ್ಲಿ ನ್ಯಾಯ ನಿಗದಿಯಿದ್ದರೆ ಮದುವೆ ಮುಂತಾದ ಕಾರ್ಯಗಳಿದ್ದರೆ ಇಲ್ಲೇ ತೀರಿಸಿಕೊಳ್ಳುತ್ತಾರೆ. ನಾಡಿನ ಒಳ, ಹೊರಭಾಗದಲ್ಲಿ (ಮುಂಬೈವರೆಗೆ) ಮೂರು ವರ್ಷ ಸದಾ ಸಂಚಾರದಲ್ಲಿರುವ ಈ ಜನ ಇಲ್ಲಿ ಸೇರಿ ಕೂಡಿಟ್ಟ ಹಣ ಕರಗುವಂತೆ ಮಜಾ ಉಡಾಯಿಸುತ್ತಾರೆ. ಬೇಟೆಯಾಡಿ, ಕುಡಿದು, ತಿಂದು ಮೋಜು ಮಾಡುತ್ತಾರೆ. ಇನ್ನೂ ವಿಶೇಷವೆಂದರೆ, ಈ ಸಂದರ್ಭದಲ್ಲಿ ಅವರು ತಮ್ಮ ಕಲೆಗಳನ್ನು ಪ್ರದರ್ಶಿಸುವುದಿಲ್ಲ. 'ಡೊಮ್ಬುಲಿ ಆಯಮೋದಿನ್' ಎಂದು 'ಅಜ್ಜ' ಮೈಮೇಲೆ ಬಂದಂತೆ ಕುಣಿಯುತ್ತಾರೆ: (ಕೊಪ್ಪಳ ಜಿಲ್ಲೆಯ ಜಾತ್ರೆಗಳು' – ಎಸ್.ಎಸ್.ಹಿರೇಮಠ ಕ.ಪು. ಪ್ರಾಧಿಕಾರ ೨೦೦೦ ಪು.೭೨, ೭೩) ಬುಡಕಟ್ಟು ಕಾಲದ ಪದ್ಧತಿಗಳೇ ಇಂದಿಗೂ ಪರಿಷ್ಕೃತ ರೂಪದಲ್ಲಿ ಉಳಿದು ಬಂದಿರುವುದಕ್ಕೆ ಈ ಉದಾಹರಣೆ ಸಾಕ್ಷಿ.

ಹಾಡು, ವಾದ್ಯ, ನೃತ್ಯ ಕೋಲಾಟದಂತಹ ಕಲಾಪ್ರಕ್ರಿಯೆಗಳು ಜಾತ್ರೆಯ ಇನ್ನೊಂದು ಮುಖ್ಯ ಆಚರಣೆ. ಸಮುದಾಯಗಳ ಕಲಾಭಿವ್ಯಕ್ತಿಗೆ ಜಾತ್ರೆಗಿಂತ ಬೇರೆ ಉತ್ತಮ ಆಚರಣೆ. ಸಮುದಾಗಳ ಕಲಾಭಿವ್ಯಕ್ತಿಗೆ ಜಾತ್ರೆಗಿಂತ ಉತ್ತಮ ಅವಕಾಶವಿದ್ದಿರಲಾರದು. ಅದು ಪ್ರಾರಂಭದಲ್ಲಿ ವಿಧಿಯಾಚರಣೆಯ ಕಡ್ಡಾಯ ಭಾಗವಾಗೇ ಇರುತ್ತಿತ್ತು. ಈಗಲೂ ಹೆಚ್ಚಿನ ಕಡೆ ಅದು ಹಾಗೆಯೇ ಇದೆ. ಜಾತ್ರೆಯಂತಹ ಸಂದರ್ಭ ಬಿಟ್ಟರೆ ಬೇರೆ ಯಾವ ಸಮಯದಲ್ಲಿ ಹಾಡು–ಕುಣಿತ ಮಾಡಬಾರದೆಂಬ ಕಟ್ಟಳೆ ಹಲವಾರು ಸ್ಥಳಗಳಲ್ಲಿದೆ. ಆಫ್ರಿಕಾ, ಆಸ್ಟ್ರೇಲಿಯಾದಂತಹ ದೇಶಗಳ

ಬುಡಕಟ್ಟುಗಳ ಅಧ್ಯಯನದಿಂದ ಈ ಅಂಶ ಸಾಬೀತಾಗಿದ್ದು, ಜಾತ್ರೆಯ ಜಾಗತಿಕ ಲಕ್ಷಣದತ್ತ ಇವು ನಮ್ಮ ಗಮನ ಸೆಳೆಯುತ್ತವೆ.

ಹಿರಿಯೂರು ತಾಲ್ಲೂಕು ಯರಬಳ್ಳಿಯ ಕಾಟಮ್ಮದೇವರ ಜಾತ್ರೆಯ ವೈಶಿಷ್ಟ್ಯವೆಂದರೆ ೨೦-೨೫ ಅಡಿ ಎತ್ತರದ ಮುಳ್ಳು ಬೇಲಿಯನ್ನು ಪೇರಿಸುವುದು. ಈ ದೇವರನ್ನು ಕಾಡುಗೊಲ್ಲರಲ್ಲಿಯ ಸೋಮನವರ, ಬೊಮ್ಮನವರ, ಕೋಣನವರ, ಪೋಲನವರ ಬೆಡಗಿನವರು ಪೂಜಿಸುವಂತಿಲ್ಲ (ತೀ.ನಂ.ಶಂ. ಅದೇ ಪು. ೩೨) ಇವರೆಲ್ಲ ಕೇತೇದೇವರ ಆರಾಧಕರು. ಇವರನ್ನು ಬಿಟ್ಟುಳಿದ ಬೆಡಗಿನ ಗೊಲ್ಲರು ಮಾತ್ರ ಪೂಜಿಸುತ್ತಾರೆ. ಇವರು ಜಾತ್ರೆಯಲ್ಲಿ ಮಾತ್ರ ನವಣೆ, ಹುರುಳಿ, ಅಡಿಗೆ ಮಾಡಿ, ಎಡೆ ಹಾಕಿ ಊಟ ಮಾಡುತ್ತಾರೆ. ಇಡೀ ವರ್ಷ ಮತ್ತೆ ಅವನ್ನು ಮುಟ್ಟುವಂತಿಲ್ಲ. ಈ ದೇವರ ಜಾತ್ರೆಯಲ್ಲಿ ಹಾಲುಕುಡಿದಪ್ಪ, ನಾಗಪ್ಪ ದೇವರುಗಳೂ ಕಾಟಮದೇವರ ಜೊತೆಗಿರುತ್ತವೆ. ಈ ಮೂರೂ ದೈವಗಳಿಗೆ ಮೂರು ಗುಡಿಸಲು ಕಾಟಮದೇವರ ಜೊತೆಗಿರುತ್ತವೆ. ಈ ಮೂರೂ ದೈವಗಳಿಗೆ ಮೂರು ಗುಡಿಸಲು ಹಾಕುತ್ತಾರೆ. ಇವುಗಳಲ್ಲಿ ದನಗಳನ್ನು ಕೊಡುತ್ತಾರೆ. ಕುರಿ ಬಲಿ ನೀಡಿ ನಾಲ್ಕೂ ಗುಡಿಸಲ ಸುತ್ತ ಚೆಲ್ಲುತ್ತಾರೆ.

ಹರಕೆ ಮಾಡಿಕೊಂಡವರು ಮಾತ್ರ ಪಾತೇದೇವರ ಜಾತ್ರೆಯನ್ನು ೫-೧೦ ವರ್ಷಕ್ಕೊಮ್ಮೆ ಮಾಡುತ್ತಾರೆ. ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ಕೂಡಲಹಳ್ಳಿಯಲ್ಲಿ ಈ ಜಾತ್ರೆ ನಡೆಯುತ್ತದೆ. ಈ ಸಂದರ್ಭದಲ್ಲಿ ನಂದಿಹಳ್ಳಿ ರಂಗಪ್ಪ, ಬೇಡರಹಳ್ಳಿ ಶಿವಪ್ಪ, ಮೂಡಲಗೊಲ್ಲಹಳ್ಳಿ ಅಮ್ಮ ಎಂಬ ಮೂರು ದೈವಗಳು ಸೇರುತ್ತವೆ. ಪಾತೇದೇವರು ಗೊಲ್ಲಹಳ್ಳಿ ತೋಪಿಗೆ ಹೋಗುವಾಗ ಮತ್ತು ಬರುವಾಗ ಹೆಂಗಸರು ಮಕ್ಕಳು ನೋಡಬಾರದೆಂದಿರುವುದರಿಂದ ಮನೆಗಳಲ್ಲಿ ಅವಿತುಕೊಳ್ಳುತ್ತಾರೆ. ಸಾವಿರಾರು ಲಿಂಬೆಹಣ್ಣು, ತೆಂಗಿನಕಾಯಿ, ಬಾಳೆಹಣ್ಣು ಎರಚುವ, ಅಡಿಗೆ ಮಾಡುವ, ಗಾವು ಸಿಗಿಯುವ ಆಚರಣೆಗಳಿವೆ.

ಕೇತೇದೇವ ಜಾತ್ರೆ ೨೮ ದಿನ ನಡೆಯುತ್ತದೆ. ಈ ಜಾತ್ರೆ ಮುಗಿಯುವವರೆಗೆ ಕಾಡುಗೊಲ್ಲರು ನವಣೆ ಮತ್ತು ಹುರುಳಿಗಳನ್ನು ಮುಟ್ಟುವುದಿಲ್ಲ. ಮನೆಯೊಳಗೂ ಇಟ್ಟುಕೊಳ್ಳುವುದಿಲ್ಲ (ಅದೇ ಪು. ೧೩೪) ಆದರೆ ಜಾತ್ರೆಯ ಒಂದು ದಿನ ಗುಡಿಯ ಮುಂಭಾಗದಲ್ಲಿ ೫ ಗುಂಟೆ ಮಾಡಿ ನವಣೆ ತುಂಬಿ ಬೊಮ್ಮನವರ ಮತ್ತು ಕೋಣನವರ ಐದೈದು ಗೊಲ್ಲತಿಯರು ಕುಟ್ಟುತ್ತಾರೆ. ಹಸಿಟ್ಟನ್ನು ಜನ್ನಿಗೆ ಕುರಿ ಹಾಲಲ್ಲಿ ಮಿದ್ದಿ ಕೇತೇದೇವರಿಗೆ ಎಡೆ ಮಾಡಿ ಪ್ರಸಾದವಾಗಿ ಹಂಚುತ್ತಾರೆ. ಇಲ್ಲಿಗೆ ಅವರ ನವಣೆ ಭತ್ತ (ವ್ರತ) ಮುಗಿಯುತ್ತದೆ (ಅದೇ ಪು. ೧೩೫) ಈ ದೇವರ ಜಾತ್ರೆಯಲ್ಲೂ ಬಂಜಗೆರೆ ವೀರಣ್ಣ, ಐಗಾರ್ಲಹಳ್ಳಿ ತಾಳಿ ದೇವರು

ಬಂದು ಸೇರುತ್ತವೆ. ಕಾಡುಗೊಲ್ಲರ ಎಲ್ಲಾ ಜಾತ್ರೆಗಳಲ್ಲಿ ಕಾಣುವ ಸಾಮಾನ್ಯಾಂಶಗಳೆಂದರೆ, ಬೇಲಿ ಹಾಕುವುದು, ಕಳಶ ಇಡುವುದು, ಗಂಗಾಪೂಜೆಗೆ ಹೋಗುವುದು, ದಿಬ್ಬ ಅಥವಾ ಕಾಡಿಗೆ ಹೋಗಿ ಆಚರಣೆಗಳನ್ನು ಮಾಡಿಕೊಂಡು ಹಿಂದಿರುಗುವುದು, ಹುತ್ತಕ್ಕೆ ಪೂಜೆ ಮಾಡುವುದು ಮೀಸಲು ತುಪ್ಪದ ದೀಪ ಉರಿಸುವುದು ಇತ್ಯಾದಿ.

ಕಾಡುಗೊಲ್ಲರಲ್ಲಿ ಮೂರು ಕುಲಗಳಿವೆ. ಅವು ೧. ಎರಡು ಬೆಡಗುಗಳಿರುವ ಚಿತ್ತಮುತ್ತ ಕುಲ, ಬೆಡಗುಗಳಿರುವ ಚಂದಮುತ್ತಿ ಕುಲ, ಬೆಡಗಿನವರು ಇರುವ ರಾಮೇಗೌಡನ ಕುಲ ಇವರಲ್ಲಿ ಚಂದಮುತ್ತಿ ಕುಲದವರು ಮಾತ್ರ ಹುರುಳಿ ನವಣೆಗಳನ್ನು ವ್ರತದ ಸಂದರ್ಭ ಬಿಟ್ಟು ಉಳಿದ ಯಾವ ಕಾಲದಲ್ಲೂ ಕೈಯಿಂದ ಕೂಡ ಮುಟ್ಟುವುದಿಲ್ಲ (ಅದೇ ಪು. ೨೫) ತಾಳವಟ್ಟೆ ಕಟ್ಟೆ ಮನೆಯವರ ಹೊರತಾಗಿ ಉಳಿದೆಲ್ಲ ಬೆಡಗುಗಳ ಗೊಲ್ಲರಿಗೆ ಹುರುಳಿ ಪ್ರಿಯವಾದ ಆಕಾರ, ಹುರುಳಿ ಹೆಸರು, ಹುರಿದ ಹುರುಳಿ ಕಾಳನ್ನು ಬಳಸುತ್ತಾರೆ (ಅದೇ ಪು.೩೫). ಈ ವಿವರಗಳನ್ನು ನೋಡಿದರೆ ಹುರುಳಿ ನವಣೆಗಳು ಚಂದಮುತ್ತಿ ಕುಲದವರು ಟೋಟೆಂ (ಕುಲ ಲಾಂಛನ) ಗಳಾಗಿರುವ ಸಾಧ್ಯತೆಯಿದೆ. ಪಶುಪಾಲಕ ವಲಸೆಗರ ಸಂಸ್ಕೃತಿಯ ಸೂಕ್ಷ್ಮಗಳನ್ನು ಮೇಲಿನ ಸಂಗತಿಗಳು ಸ್ಪಷ್ಟಪಡಿಸುತ್ತವೆ. ಇಂತಹ ಯಾವ ಅಚರಣೆಗಸ್ಳು ನೆಲಸುಗಾರ ಹಳ್ಳಿ ಸಂಸ್ಕೃತಿಯಲ್ಲಿ ಕಂಡು ಬರುವುದಿಲ್ಲ. ಬೇಲಿ ಹಾಕುವುದು ದೈವಕ್ಕೆ ಭದ್ರ ರಕ್ಷಣೆ ನೀಡುವುದನ್ನು ಸೂಚಿಸುತ್ತದೆ. ತುಪ್ಪದ ದೀಪ ಹೈನುಗಾರಿಕೆಯ ಪ್ರತಿಫಲದ ಸಮರ್ಪಣೆ, ಗುಬ್ಬ ಬಿಟ್ಟು ದೂರದ ಸ್ಥಳಕ್ಕೆ ದೈವಗಳನ್ನು ಕೊಂಡೊಯ್ದು ಪೂಜಿಸಿ ಮತ್ತೆ ತಿರುಗಿ ಬರುವುದು ವಲಸೆಗಾರಿಕೆ (ದನಗಳನ್ನು ಮೇಯಿಸಿಕೊಂಡು ಮರಳಿ ಬರುವುದನ್ನು) ಯನ್ನು ಸೂಚಿಸುತ್ತದೆ. ಬಹುಶಃ ಗೊಲ್ಲ ಪಸುಪಾಲಕರ ಮೊದಲ ಆಹಾರವಾಗಿದ್ದ ನವಣೆ ಹುರುಳಿಗಳೂ ಮೊದಲು ಅವರ ಪಶುಗಳ ಮೇವಾಗಿದ್ದಿರಬೇಕು. ಆಹಾರ ಧಾನ್ಯವಾಗಿ ಅದನ್ನು ಬಳಸತೊಡಗಿದಾಗಿನ ಸಾಂಸ್ಕೃತಿಕ ಇಕ್ಕಟ್ಟನ್ನು ಜಾತ್ರೆಗಳಲ್ಲಿರುವ ವ್ರತ ಪದ್ಧತಿಗಳು ಧ್ವನಿಸುತ್ತವೆ. ಪಶುಪಾಲಕರಿಗೆ ಬೇಸಾಯ ಕ್ರಿಯೆ ನಿಷಿದ್ಧ ಎಂಬ ನಂಬಿಕೆ ಇದರ ಹಿನ್ನೆಲೆ ಕಾಲಾಂತರದಲ್ಲಷ್ಟೇ ಕೆಲವುಗೊಲ್ಲ ಕುಲಗಳು ಇವನ್ನು ಆಹಾರವಾಗಿ ಸ್ವೀಕರಿಸಿದವು.

ಚಿತ್ತಮುತ್ತಿ ಮಾರನವರ ಬೆಡಗಿನ ತೆಂಗುರಿ ಮಲ್ಲೇಗೌಡ, ರಾಮೇಗೌಡನ ಕುಲದ ಕಂಬಿಯವರ ಬೆಡಗಿನ ಚಿನ್ನಮ್ಮನನ್ನು ಮದುವೆಯಾಗಿ ಪಡೆದ ಮಕ್ಕಳಲ್ಲಿ ಜುಂಜಪ್ಪ ಒಬ್ಬ. ಈತ ಕಾಡುಗೊಲ್ಲರ ಮುಖ್ಯ ದೈವವಾಗಿ ಬೆಳೆಯುತ್ತಾರೆ. ಅಂದರೆ ಮಾರನವರ ಬೆಡಗಿನ ಗೊಲ್ಲರು ಪ್ರಮುಖ ನೆಲೆಗೆ ಸಲ್ಲುತ್ತಾರೆಂದರ್ಥ. ಇವರು ಮದುವೆಯಲ್ಲಿ ಹೆಣ್ಣಿಗೆ ತಾಳಿ ಕಟ್ಟಿದರೆ, ಚಿತ್ತಮುತ್ತಿ

ಕುಲದ ಇನ್ನೊಂದೇ ಬೆಡಗಿನವರಾದ ಕರಡಿಗೊಲ್ಲರ ತಾಳಿ ಕಟ್ಟುವುದಿಲ್ಲ. ಅಂದರೆ ಕರಡಿಗೊಲ್ಲರೇ ಮೂಲದಲ್ಲಿದ್ದವರು ಬೆಡಗುಗಳು ಹುಟ್ಟಿದ ಕತೆಯೂ ಕೂಡ ಇದನ್ನು ಸಮರ್ಥಿಸುವುದು. ಇವರಿಂದ ಒಡೆದು ಸ್ವಲ್ಪ ನಾಗರೀಕರಾದವರೇ ಮಾರನವರ ಕವಲು ಇವರಿಗೆ ತಾಳಿ ಕಟ್ಟುವ ಕರಡಿಗೊಲ್ಲರು ಎಂಬ ಹೆಸರಿರುವುದನ್ನು ಗಮನಿಸಿ.

ಬೆಡಗುಗಳ ಆಧಾರದಲ್ಲಿ ಗೊಲ್ಲರ ಜನಸಂಖ್ಯೆಯನ್ನು ಗುರುತಿಸುವಂತಾದರೆ ಮಾರನವರ ಗೊಲ್ಲರ ಪ್ರಾಮುಖ್ಯತೆ (ಜುಂಜಪ್ಪನ ಖ್ಯಾತಿ) ಗೊತ್ತಾಗುವ ಸಾಧ್ಯತೆಯಿದೆ. 'ಕರೇ ಓಬನಹಳ್ಳಿ' ಚಿತ್ತಮುತ್ತಿ ಕುಲದವರ ಕಟ್ಟೆ ಮನೆ (ಅದೆ ಪು.೨೭).

ಶೈವರಾದ ಮಾರನವರ ಗೊಲ್ಲದೇವರು ಜುಂಜಪ್ಪ, ಚಿತ್ರದೇವರು, ಎತ್ತಪ್ಪ ಇವರು ಇದೇ ಕುಲದ ಕರಡಿ ಬೆಡಗಿನವರು ಮಾತ್ರ ಪೂಜಿಸುವ ಕದಿರಿ ನರಸಿಂಹಸ್ವಾಮಿ ತಿರುಪತಿ ತಿಮ್ಮಪ್ಪ, ರಂಗಪ್ಪ ದೇವರನ್ನು ಪೂಜಿಸುವುದಿಲ್ಲ.

ಕಾಡುಗೊಲ್ಲರು ಮೂಲತಃ ಶೈವರು, ಅವರ ಪುರಾಣಗಳು, ಕತೆಗಳು, ಆಚರಣೆ ನಂಬಿಕೆಗಳು ಈ ಸಂಗತಿಯನ್ನು ಸಮರ್ಥಿಸುತ್ತವೆ. ಆದರೆ, ಚಿತ್ತಮುತ್ತಿ ಕುಲದ ಕರಡಿಗೊಲ್ಲರು ಮಾತ್ರ ವೈಷ್ಣವ ಪರಂಪರೆಗೇಕೆ ಸೇರಿದರು ಒಂದೇ ಕುಲದ ಈ ಎರಡು ಬೆಡಗಿನವರು (ಗೋತ್ರ) ಸೋದರರಾಗಿರುವುದರಿಂದ ದಾಯಾದಿ ಮತ್ಸರದಿಂದಾಗಿ ಅಥವಾ ಮತ್ತಿನ್ನೇನೋ ಕಾರಣಗಳುಂಟಾಗಿ ಆರಾಧನಾ ವ್ಯತ್ಯಾಸಗಳಾಗಿರುವ ಸಾಧ್ಯತೆ ಇದೆ.

ಕಾಡುಗೊಲ್ಲ ಹೆಂಗಸರು ಗೋಪಿಯರೆಂದು ಭಾವಿಸುತ್ತಾರೆ. ತಮ್ಮ ನಿಜವಾದ ಗಂಡ ಕೃಷ್ಣನೆನ್ನುತ್ತಾರೆ. ಅವನ ಆಜ್ಞೆಯಂತೆ ರವಿಕೆ ಧರಿಸುವುದಿಲ್ಲ. ವಿಧವೆಯಾದಾಗಲೂ ಸುಮಂಗಲಿಯಂತೆ ಇರುತ್ತಾರೆ ಎನ್ನಲಾಗುತ್ತದೆ ಆದರೆ ಆಚರಣೆಗಳೆಲ್ಲಾ ಪ್ರಾಚೀನ ಕಾಲವಾಗಿದ್ದು, ಬೇರೆ ದ್ರಾವಿಡ ಬುಡಕಟ್ಟುಗಳಲ್ಲೂ ಕಂಡು ಬರುತ್ತವೆ. ಹಾಗಾಗಿ ಕೃಷ್ಣನ ಕತೆ ನಂತರದ ಸೇರ್ಪಡೆಯೆಂದು ಹೇಳಬೇಕಾಗುತ್ತದೆ.

ಜಾತ್ರೆಗಳನ್ನು ಬುಡಕಟ್ಟು ಜನಾಂಗವೊಂದರ ಮಧ್ಯೆ ಇಟ್ಟು ಅಧ್ಯಯನ ಮಾಡುವುದರಿಂದ ಆಗುವ ಅನೇಕ ಪ್ರಯೋಜನಗಳಿಗೆ ಮೇಲಿನ ವಿವೇಚನೇ ಸಾಕ್ಷಿ. ಒಟ್ಟಾರೆ ಜಾತ್ರೆಗಳ ಹುಟ್ಟು ಬೆಳವಣಿಗೆ ಅಧ್ಯಯನಕ್ಕೆ ಸಂಸ್ಕೃತಿ ಪರಂಪರೆಯಲ್ಲಿ ಅದರ ಮಹತ್ವವನ್ನು ತಿಳಿಯಲಿಕ್ಕೆ ಬುಡಕಟ್ಟಿನಲ್ಲಿರುವ ಕಾಡುಗೊಲ್ಲರ ಶೋಧನೆಯಿಂದ ಸಾಕಷ್ಟು ಉಪಯುಕ್ತ ಮಾಹಿತಿಗಳು ಲಭಿಸುತ್ತವೆ. ತಮ್ಮ ಕುಲಕ್ಕೆ ಇಲ್ಲವೇ ಬುಡಕಟ್ಟಿಗೆ ನಾನಾ ವಿಧದ ಸಹಾಯ ಮಾಡಿದ

ಪೂರ್ವಜರನ್ನೇ ದೈವವೆಂದು ಭಾವಿಸಿ ಜಾತ್ರೆಗಳನ್ನು ಮಾಡುತ್ತಾ ಬಂದಿರುವುದಕ್ಕೂ ಇಂದಿನ ಸಂತರನ್ನು ಜಾತ್ರೆಯ ದೈವವನ್ನಾಗಿ ಮಾಡುತ್ತಿರುವುದಕ್ಕೂ ಸಂಬಂಧವಿದೆ.

ತೇರಿನ ಮೂಲವನ್ನು ಶೋಧಿಸುವಾಗ ನೀಲಗಿರಿ ಬೆಟ್ಟದ ಬಡಗ ಬುಡಕಟ್ಟಿನ ಅನುಭವಗಳು ನೆರವಾಗುತ್ತವೆ. ಬಡಗರು ರಥವನ್ನು ಸ್ಮಶಾನ ಯಾತ್ರೆಯ ಸಂದರ್ಭದಲ್ಲಿ ವಿಶೇಷವಾಗಿ ಸಿಂಗರಿಸಿ ಬಳಸುತ್ತಾರೆ. ಇದೂ ಇಲ್ಲದೆ ಇಂತಹ ಇನ್ನೂ ಹಲವು ವಿವರಗಳು ರಥ ಪಶುಪಾಲಕರ ಮರಣ ವಿಧಿಗೆ ಸಂಬಂಧಿಸಿ ಹುಟ್ಟಿದ್ದೆಂದು ಸ್ಪಷ್ಟವಾಗುತ್ತದೆ.

ಮ್ಯಾಸ ನಾಯಕರ ಅನುಭವಗಳು :

ಕಾಡುಗೊಲ್ಲರ ಪಕ್ಕದಲ್ಲಿಯೇ ಇವರಂತೆಯೇ ಬುಡಕಟ್ಟು ಜೀವನ ನಡೆಸುತ್ತಿರುವ ಮ್ಯಾಸ ನಾಯಕರಲ್ಲೂ ಇಂಥದ್ದೇ ಅನುಭವಗಳಿವೆ. ಕೃಷ್ಣಮೂರ್ತಿ ಹನೂರರು 'ಮ್ಯಾಸ ಬೇಡರ ಸಂಸ್ಕೃತಿ' ಕ.ಸಾ.ಅ. ಇವರ ಎರಡು ಜಾತ್ರೆಗಳನ್ನು ದಾಖಲಿಸಿದ್ದಾರೆ.

ಮೊಳಕಾಲ್ಮೂರು ತಾಲ್ಲೂಕು, ಕಂಪಳದೇವರ ಹಟ್ಟಿಯ ಬಳಿ ನಡೆಯುವ ಕಂಪಳದೇವರ ಜಾತ್ರೆಯಲ್ಲಿ ಪೆಟ್ಟಿಗೆ ದೇವರನ್ನು ಪೂಜಾರಿಗೆ ಹೊರಿಸಿಕೊಂಡು ಕಾಡಿಗೆ ಬರುತ್ತಾರೆ. ಲಕ್ಕಿಬರಲಿನ ತಾತ್ಕಾಲಿಕ ಗುಡಿಸಲಲ್ಲಿ ಕಂಪಳ ರಂಗನನ್ನು ಸ್ಥಾಪಿಸಿ ಹಾಲು ತುಪ್ಪ ಹುರುಳಿ ಜೋಳ ಬೆಲ್ಲ ಬಾಳೆ ಹಣ್ಣುಗಳ ಎಡೆ ಮಾಡುತ್ತಾರೆ. ಜಗಳೂರಿನಿಂದ ಪಾಪ ನಾಯಕ ದೇವರನ್ನು ಹೊರಡಿಸಿ ಈ ಕಂಪದೇವರೆದುರು ಫರ್ಲಾಂಗು ದೂರದಲ್ಲಿ ಸ್ಥಾಪಿಸುತ್ತಾರೆ. ದೇವರೆತ್ತುಗಳನ್ನು ಪಾಪ ನಾಯಕನ ಗುಡಿಯಿಂದ ಕಂಪಳರಂಗನ ಗುಡಿಗೆ ಮೆರವಣಿಗೆ ಹೊರಡುವುದೇ ಜಾತ್ರೆಯ ವಿಶೇಷ. ಇಷ್ಟಾದರೆ ಜಾತ್ರೆಯೇ ಮುಗಿದಂತೆ. ಜಾತ್ರೆಯ ದಿನವೂ ದೇವರ ಮುಂದೆ ಬೆಂಕಿ ಉರಿಸುತ್ತಿರುತ್ತಾರೆ. ದಾಸರು ಪಂಜಿನ ಕವಾಯತು ಮಾಡುತ್ತಾರೆ. ಇಲ್ಲಿಯೂ ಪಶುಪಾಲಕರಿಗೆ ಸಹಜವಾದ ವಲಸೆಗಾರಿಕೆಯ ಆಶಯಗಳೇ ಇವೆ.

ಇದಕ್ಕಿಂತ ಗಮನಾರ್ಹವಾದದ್ದು ಮಿಂಚೇರಿ ಅರಣ್ಯ (ಹೊಳಲ್ಕೆರೆ ತಾಲ್ಲೂಕು) ಗಾದ್ರಿ ಪಾಲನಾಯಕನ ಜಾತ್ರೆ. ನಾಯಕರು ಈತನ ಕತೆಯನ್ನು ಹೇಳುತ್ತಾರೆ. ಕತೆಯಲ್ಲಿ ಬರುವ ವಿವರಗಳನ್ನು ಜಾತ್ರೆಯಲ್ಲಿ ಪುನರಭಿನಯಿಸಲಾಗುತ್ತದೆ. ಈ ಅಂಶ ಏಕೆ ಮುಖ್ಯವೆಂದರೆ ನಾಡಿನ ಹೆಚ್ಚಿನ ಜಾತ್ರೆಗಳಲ್ಲಿ ಇದೇ ಬಗೆಯ ಆಚರಣೆಗಳಿವೆ. ದೈವದ ಚರಿತ್ರೆಗೂ ಜಾತ್ರೆಯ ಆಚರಣೆಗಳಿಗೂ ಸಂಬಂಧ ಕಲ್ಪಿಸಲಾಗುತ್ತದೆ. ದೈವದ ಚರಿತ್ರೆ ಹೆಚ್ಚಾಗಿ ಪುರಾಣವಾಗಿ ಬಿಟ್ಟಿರುತ್ತದೆ. ಆದರೆ ಅದರಲ್ಲೂ ಜನಾ ಸಮುದಾಯದ ಸಂಸ್ಕೃತಿಯ ಪಳೆಯುಳಿಗಳಿದ್ದೇ ಇರುತ್ತವೆ.

ಮೈಲಾರ ಜಾತ್ರೆ ;

ಮಧ್ಯ ಕರ್ನಾಟಕದ ತುಂಗಭದ್ರೆಯ ಈಚೆ, ಆಚೆ ದಡಗಳಲ್ಲಿರುವ ಮಣ್ಣು ಮೈಲಾರ ಮತ್ತು ದೇವರಗುಡ್ಡಗಳಲ್ಲಿ ನಡೆಯುವ ಮೈಲಾರಲಿಂಗನ ಜಾತ್ರೆಗೆ ಲಕ್ಷಾಂತರ ಜನ ನೆರೆಯುತ್ತಾರೆ. ಕರ್ನಾಟಕ ಪ್ರಬಲ ಜನ ಸಮುದಾಯದ ಕುರುಬರು ಮುಖ್ಯವಾಗಿ ಪೂಜಿಸುವ ಮೈಲಾರ ಪಂಥ ಸ್ಥಳೀಯ ನೆಲಸುಗಾರ ದಲಿತ ಕೃಷಿಕರನ್ನು ಸೋಲಿಸಿ ಪಶುಪಾಲಕರು ಸ್ಥಾಪನೆಗೊಳ್ಳುತ್ತ ಹೋದುದನ್ನು ನಿರೂಪಿಸುತ್ತದೆ. ಜಾತ್ರೆಗಳಲ್ಲಿ ಈ ಆಶಯಗಳನ್ನು ಒಳಗೊಂಡ ಆಚರಣೆಗಳಿವೆ. ಮೈಲಾರ ಡೆಂಕಣ ಮರಡಿಗೆ ಬರುವುದು, ಮಣಿಮಲ್ಲಾಸುರರನ್ನು ಕೊಲ್ಲುವುದು, ಕಾರಣಿಕ ನುಡಿಯುವುದು, ಕುರುಬತೆವ್ವನ ಹತ್ತಿರ ಬರುವುದು, ತಿರುಗಿ ಗುಡಿಗೆ ಬಂದಾಗ ಹೆಂಡತಿ ಗಂಗಿಮಾಳಮ್ಮನಿಂದ ತೆಗಳಿಕೆಗೆ ಗುರಿಯಾಗುವುದು ಇವು ವಲಸೆಗಾರ ಕುರುಬರ ಪ್ರಾಚ್ಯ ಕೌಟುಂಬಿಕ ಸ್ಥಿತಿಗತಿಗಳನ್ನು ಸೂಚಿಸುತ್ತದೆ.

ಕುರುಬರು ಮಹಾರಾಷ್ಟ್ರ, ಆಂಧ್ರ, ಕರ್ನಾಟಕದ ತುಂಬ ಎಲ್ಲೆಲ್ಲಿ ಹರಡಿದರೋ ಆ ಮಾಳ ಮೊರಡಿಗಳಲ್ಲ ಮೈಲಾರ ಪಂಥವೂ ಹರದಿದೆ. ಮಹಾರಾಷ್ಟ್ರದಲ್ಲಿ ಈತನಿಗೆ ಖಂಡೋಬ ಎನ್ನಲಾಗುತ್ತದೆ. ಕುರುಬರು ಇಲ್ಲಿ ಧನಿಕರಾಗಿದ್ದಾರೆ. ಹತ್ತಿಪ್ಪತ್ತು ಬೃಹತ್ ಮೈಲಾರ ಕ್ಷೇತ್ರಗಳಿದ್ದರೂ ನೂರಾರು ಕಿರು ಮೈಲಾರ ಕ್ಷೇತ್ರಗಳು ನಾಡಿನಲ್ಲಿವೆ. ಮೈಲಾರ ಜಾತ್ರೆಗಳಲ್ಲಿಯೂ ಜಾತಿ ತಾರತಮ್ಯ ನಡೆಯುವುದಿಲ್ಲ. ಆದರೂ ಕಂಚಾವೀರರೆಂಬ ಒಡಪು ಸೇವೆ ಮಾಡುವವರು ಮಾದಿಗ ಜಾತಿಯ ಗೊರವಪ್ಪ, ಗೊರವಮ್ಮರಿಗೆ ದೀಕ್ಷೆ ನೀಡುತ್ತಾರೆ. ಬ್ರಾಹ್ಮಣರಾದಿಯಾಗಿ, ಲಿಂಗಾಯತರು, ಬೇಡರು, ಲಂಬಾಣಿಗಳು, ಕೊರಚರು, ಹೀಗೆ ಹೆಚ್ಚಿನ ಜಾತಿ ಜನರೆಲ್ಲ ಮೈಲಾರನ ಒಕ್ಕಲುಗಳಾಗಿದ್ದಾರೆ. ದೈವನ್ನು ಮುಟ್ಟಿ ಆರಾಧಿಸುವವರು ಬ್ರಾಹ್ಮಣರೋ, ಲಿಂಗಾಯತ ಪೂಜಾರಿಗಳೋ ಆದರೆ ಮಧ್ಯಮ ಕೆಳಜಾತಿಯವರು ದೇವರ ಹೊರೆ ಹೊತ್ತು ಶ್ವಾರಪ್ಪ, ಗ್ವಾರಮ್ಮಗಳಾಗುತ್ತಾರೆ. ಇರುವ ಮೈಲಾರ ಪಂಥದ ಆಶಯಗಳನ್ನು ಜನ ಸಮುದಾಯದಲ್ಲಿ ನಿರಂತರವಾಗಿ ಹರಡುವ ವೃತ್ತಿಯವರು, ಮೈಲಾರನ ಕಾವ್ಯ, ಕತೆ ಹೇಳುವುದು, ಡೋಣಿ ಸೇವೆ ಮಾಡುವುದು, ಒಕ್ಕಲುಗಳಿಗೆ ಗುರುಗಳಾಗಿ ವಿಧಿಯಾಚರಣೆಗಳ ನೇತೃತ್ವ ವಹಿಸುವುದು ಇವರ ಕಾರ್ಯ. ಜಾತಿ, ಲಿಂಗ ವರ್ಗ ತಾರತಮ್ಯಗಳನ್ನು ಮೀರಿದ ಜನಪದ ಗುರುವರ್ಗ, ಬರಿ ಮೈಲಾರ ಪಂಥಕ್ಕೆ ಮಾತ್ರ ಸೀಮಿತವಾಗಿಲ್ಲ.

ದಕ್ಷಿಣ ಕರ್ನಾಟಕದ ಮಲೆಯ ಮಾದೇಶ್ವರ, ಮಂಟೇಸ್ವಾಮಿ, ಉತ್ತರ ಕರ್ನಾಟಾಕದ ಎಲ್ಲಮ್ಮ ಮೊದಲಾದ ಪುರುಷ, ಸ್ತ್ರೀ ದೈವಗಳಿಗೂ ದೇವರ ಹೊರೆ ಹೊತ್ತ (ದೀಕ್ಷೆ ಪಡೆದ)

ಗುರುವರ್ಗವಿದೆ. ದೇವರಗುಡ್ಡರು, ನೀಲಗಾರರು, ದಾಸಪ್ಪ-ದಾಸಮ್ಮ, ಜೋಗಪ್ಪ-ಜೋಗಮ್ಮ, ಭೂತೇರು, ರಾಣಿಗರು, ಮಾತಂಗಿಯರು, ಚಿಂಗೇರು ಹೀಗೆ ಈ ಸಂಖ್ಯೆ ಮತ್ತು ಪರಂಪರೆ ತುಂಬ ವ್ಯಾಪಕವಾಗಿದೆ. ದಕ್ಷಿಣ ಭಾರತದ ತುಂಬ ಇಂತಹ ಜನಪದ ಗುರುಪರಂಪರೆ ಹಬ್ಬಿದೆ (ವಿವರಗಳಿಗೆ ನನ್ನ 'ಕನ್ನಡ ಜನಪದ ಗುರು ಪರಂಪರೆ' - ಪ್ರಸಾರಾಂಗ ಗು.ವಿ.ವಿ. ೧೯೯೯ ನೋಡಿ) ಜಾತಿ ಪದ್ಧತಿಯ ಮೇಲು ಕೀಳನ್ನು ನಿರಾಕರಿಸುವ ಇಂಥ ದೈವ ಪಂಥಗಳ ಅಸ್ತಿತ್ವವು ಮತ್ತು ಇವುಗಳ ಜಾತ್ರೆಯ ಸಂದರ್ಭವು ನಮ್ಮ ಸಮಾಜ ರಚನೆಯನ್ನು ಬೇರೆ ವಿಧದಿಂದ ಶೋಧನೆ ಮಾಡಲು ಪ್ರೇರೇಪಿಸುವಂತಿದೆ.

ವರ್ಗ-ಜಾತಿಗಳು ಹುಟ್ಟುವ ಮೊದಲೇ ಅಸ್ತಿತ್ವಕ್ಕೆ ಬಂದಿರುವ ಜಾತ್ರೆಗಳು ಆವೊತ್ತಿನ ಒಂದು ವಿಧದ ಜಾತ್ಯಾತೀತೆಯ ಲಕ್ಷಣವನ್ನು ಉಳಿಸಿಕೊಂಡು ಬಂದಿವೆ. ಜನ ಸಮುದಾಯದ ಸೇರುವಿಕೆ ಹೆಚ್ಚುತ್ತ ಹೋದಂತೆ ಜಾತ್ರೆಗಳ ಜಾತ್ಯಾತೀತ ಹೆಚ್ಚು ನಿಜಗೊಳ್ಳೂತ್ತದೆ. ಮಧ್ಯ ಕರ್ನಾಟಕದ ಸ್ಮಾರ್ತ ಮತ್ತು ವೈಷ್ಣವ ಬ್ರಾಹ್ಮಣರ ಎಷ್ಟೋ ಮನೆತನಗಳ ದೈವಗಳು ಬ್ರಾಹ್ಮಣೀಯವಲ್ಲ, ಮೈಲಾರ ಎಲ್ಲಮ್ಮ, ವೀರಣ್ಣ ಇಂಥ ಸ್ಥಳೀಯ, ಅವೈದಿಕ ದೈವಗಳಾಗಿವೆ. ಈ ಬ್ರಾಹ್ಮಣರು ತಮ್ಮ ಮದುವೆ ಮುಂಜಿಯಂತಹ ಕೌಟುಂಬಿಕ ನೆಲೆಯ ಆಚರಣೆಗಳನ್ನು ಪ್ರಾರಂಭಿಸುವ ಮೊದಲು ತಮ್ಮ ಈ ಮನೆ ದೈವಗಳನ್ನು ಸಂತೃಪ್ತಿ ಪಡಿಸಲು ಹಡ್ಡಲಿಗೆ ತುಂಬಿಸುವ ಬೇವುಡೆ ಉಡುವ, ಗ್ವಾರಪ್ಪ, ಗ್ವಾರಮ್ಮಗಳನ್ನು ಆಹ್ವಾನಿಸಿ ಡೋಣಿ ಸೇವೆ ಮಾಡುವ ಶಸ್ತ್ರ ಹಾಯುವ ವಿಧಿಯಾಚರಣೆಗಳನ್ನು ಕಡ್ಡಾಯವಾಗಿ ಪೂರೈಸಬೇಕಾಗುತ್ತದೆ. ಬ್ರಾಹ್ಮಣ ಸಂಸ್ಕೃತಿಯ ಅಧ್ಯಯನ ಲೆಕ್ಕವಿಲ್ಲದಷ್ಟು ಪ್ರಮಾಣದಲ್ಲಿ ನಡೆದಿದ್ದರೂ ಈ ಬಗೆ ಯ ದೇಸೀ ಸಂಬಂಧಿತ ನೆಲೆಯ ಸಂಗತಿಗಳನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುತ್ತ ಬರಲಾಗಿದೆ ಎನ್ನಿಸುತ್ತದೆ. ಮೈಲಾರ, ಎಲ್ಲಮ್ಮನಂಥ ಪುರುಷ, ಸ್ತ್ರೀ ದೈವಗಳ ಜಾತ್ರೆಗಳಲ್ಲಿ ಎಲ್ಲಾ ಜಾತಿ-ಜನಗಳು ದೈವದ ಸುತ್ತ ನೆರೆಯುವುದೇ ಒಂದು ವಿಶಿಷ್ಟ. ಸಂಪ್ರದಾಯಿಕ ಶಿಕ್ಷಣ ಪದ್ಧತಿ ಬೆಳೆಸಿರುವ ವೈಚಾರಿಕತೆಯನ್ನು ಇಂತಹ ಘಟನೆಗಳು ಪ್ರಶ್ನಿಸುತ್ತವೆ.

ಮೈಲಾರ ಪಂಥದಲ್ಲಿ ಬರುವ ಮಣಿಮಲ್ಲಾಸುರರು ರಾಕ್ಷಸರು, ಇದು ಶಿಷ್ಟ ಪರಂಪರೆರ್ಯ ಸಂಬಂಧದಿಂದ ಹುಟ್ಟಿರುವ ಕಲ್ಪನೆ. ಆದರೆ ನಿಜವಾಗಿ ಇವರು ಕೃಷಿಕ ದಲಿತರ ಪ್ರತಿನಿಧಿಗಳೆಂದು ತೋರುತ್ತಾರೆ. ಇವರನ್ನು ಮೈಲಾರ ಸಂಹಾರ ಮಾಡಿದಾಗ ಮಾದಿಗ ಕುಲದ ಕಂಚಾವೀರ ಮಹಿಳೆಯರು ಅಳುವ ನಟನೆ ಮಾಡುತ್ತಾರೆ. ೧೧ ದಿನ ಹಣ್ಣು ಹಾಲಿನ ಮೇಲಿರುವ ಪ್ರಧಾನ ಗ್ವಾರಪ್ಪ ಬಿಲ್ಲೇರಿ ಕಾರಣಿಕೆ ಹೇಳಿದ ನಂತರ ಚದುರುವ ಲಕ್ಷಾಂತರ ಜನ

ಕಡ್ಡಿ ಕಲ್ಲುಗಳಿಂದ ಮನೆಗಳಂಥ ರಚನೆಗಳನ್ನು ಮಾಡುವ ವಿಧಿಯಿದೆ. ಇವೆರಡೂ ಅಂಶಗಳೂ ಪಶುಪಾಲಕ ಕುರುಬರು ನೆಲಸುಗಾರ ಕೃಷಿಕರನ್ನು ಸೋಲಿಸಿ ತಾವು ತಳವೂರಿದರೆಂಬುದನ್ನು ಸೂಚಿಸುತ್ತದೆ.

ಶಿಷ್ಟ–ಪರಿಶಿಷ್ಟ ವ್ಯತ್ಯಾಸ :

ಜಾತ್ರೆಗಳು ಅಲಿಖಿತ ಪರಂಪರೆಯ ಬಹುಸಂಖ್ಯಾತ ಶ್ರಮಿತ ಕುಳಗಳ ಕಳೆದು ಹೋಗಿರುವ ಚರಿತ್ರೆಯನ್ನು ವಿಧಿಯಾಚರಣೆಯ ರೂಪದಲ್ಲಿ ಸ್ವಲ್ಪ ಮಟ್ಟಿಗಾದರೂ ಹಿಡಿದಿಟ್ಟುಕೊಂಡಿವೆ. ಶಿಷ್ಟ ಪರಂಪರೆ ಯಾರನ್ನು ಹೀನ, ಕೀಳು, ಅಪಾಯಕಾರಿಗಳು ಎಂದು ಕರೆಯಿತೋ ಆ ಜನತೆಯ ನಿಜವಾದ ಸಂಸ್ಕೃತಿಯನ್ನು ಆ ಜನತೆಯ ಜಾತ್ರೆಗಳ ಮೂಲಕ ತಿಳಿಯಲು ಸಾಧ್ಯವಾಗಿದೆ.

ಇದಕ್ಕೆ ನಿದರ್ಶನವನ್ನು ಇಲ್ಲಿ ಕೊಡಬಹುದು. ದುರ್ಗ ಸಿಂಹನ (ಕ್ರಿ.ಶ. ೧೧ನೇ ಶತಮಾನ) ಪಂಚತಂತ್ರದಲ್ಲಿ ಬೇಡರಿಗೆ ಸಂಬಂಧಿಸಿ ಎರಡು ಕಥೆಗಳಿವೆ. ಶಿವಭೂತಿಯ ಕಥೆಯಲ್ಲಿ ಬೇಡರವ ಬ್ರಾಹ್ಮಣದಲ್ಲಿ ನಿಷ್ಠೆ ತೋರದೆ, ಅರಸನಲ್ಲಿ ತೋರಿದ್ದರಿಂದ ಬ್ರಾಹ್ಮಣ ಲೇಖಕನಿಂದ ನೀಚ ಅಪಾಯಕಾರಿ ಎಂಬ ತೆಗಳಿಕೆಗೆ ಗುರಿಯಾಗುತ್ತಾನೆ. ಎರಡು ಗಿಳಿಗಳ ಕತೆಯಲ್ಲಿ ಋಷಿಗಳ ಜತೆ ಹೋಲಿಸಿ ಬೇಡರನ್ನು ಅನಾಗರಿಕರು, ಕ್ರೂರಿಗಳು, ದುಷ್ಟರೆಂದು ನಿರೂಪಿಸಲಾಗಿದೆ. ಈ ಎರಡೂ ಕಥೆಗಳಲ್ಲಿ ಚಿತ್ರಿತವಾದ ಬೇಡ ಸಂಸ್ಕೃತಿ ವಾಸ್ತವವಲ್ಲ, ಸತ್ಯವಲ್ಲ. ಮ್ಯಾಸನಾಯಕರ ಅಧ್ಯಯನಗಳು ತದ್ವಿರುದ್ಧವಾದ ಚಿತ್ರವನ್ನು ಕಟ್ಟಿಕೊಡುತ್ತವೆ. ಶಿವಭೂತಿಯ ಕತೆಯ ಹುಲಿ ಬೇಡನನ್ನು ಅಟ್ಟಿಸಿಕೊಂಡು ಬಂದು ಹಾಳು ಬಾವಿಗೆ ಬೀಳುತ್ತದೆ. ತನ್ನನ್ನು ಹೊರ ತೆಗೆದ ಶಿವಭೂತಿಗೆ ಅದು ಬೇಡನನ್ನು ಹೊರತೆಗೆಯ ಬೇಡ ಎನ್ನುತ್ತದೆ. ಆದರೆ, ಮ್ಯಾಸನಾಯಕರು ಹೇಳುವ ಮತ್ತು ಜಾತ್ರೆಯಾಗಿ ಆಚರಿಸುವ ಗಾದ್ರಿ ಪಾಲಯ್ಯನ ಕಥೆಯಲ್ಲಿ ಆತ ಹುಲಿಯೊಡನೆ ಪ್ರೀತಿಯ ಸಹಬಾಳ್ವೆ ಮಾಡುವ ಚಿತ್ರ ಬರುತ್ತದೆ. ಅವನ ಸಂಬಂಧಿಗಳು ಪೂರ್ವಾಪರವನ್ನು ತಿಳಿಯದೆ ಹುಲಿಮರಿಗಳನ್ನು ಕೊಂದುಹಾಕುತ್ತಾರೆ. ಈ ತಪ್ಪು ಪಾಲಯ್ಯನ ಪಾಲಿಗೆ ಶಾಪವಾಗುತ್ತದೆ. ಮ್ಯಾಸರು ಹೇಳುವ ಕನ್ನಯ್ಯನ ಕಥೆಯಲ್ಲೂ, ಕನ್ನಯ್ಯನ ಬೇಟೆ ಈ ರೀತಿಯ ಮಾನವೀಯತೆ ಸುವ್ಯಕ್ತವಾಗಿದೆ. ತನ್ನ ಕುಟುಂಬ ಉಪವಾಸದಿಂದ ಸಾಯುವ ಸ್ಥಿತಿ ಉಂಟಾದಾಗಲೂ ಗರ್ಭಿಣಿ ಚಿಗರೆ ಬಿಡುತ್ತಾರೆ. ಮ್ಯಾಸರು ಮಾಡುವ ಗಾದ್ರಿ, ಪಾಲಯ್ಯನ ಜಾತ್ರೆಯ ವಿವರಗಳನ್ನು ಆಗಲೇ ಸೂಚಿಸಿದೆ. ತಪ್ಪು ಗ್ರಹಿಕೆಯ ಹುಲಿಗಳ ವಿರುದ್ಧ ಅನಿವಾರ್ಯವಾಗಿ ಗಾದ್ರಿ ಪಾಲಯ್ಯ ಹೋರಾಡಿ ಅವನನ್ನು ಕೊಂದು ತಾನೂ ಸಾಯುತ್ತಾನೆ

ಹುಲಿಮರಿಗಳ ಜೀವ ಪಡೆಯಲು ತಪಸ್ಸಿಗೆ ಹೊರಟ ಪಾಲಯ್ಯನನ್ನು ದಂಪತಿ ಹುಲಿಗಳು ನಿಲ್ಲಿಸಿ ಜಗಳಕ್ಕಿಳಿಯುತ್ತವೆ. ಪಾಲಯ್ಯನ ಇಬ್ಬರು ಹೆಂಡಿರು ಕೆಂಡಾಮಂಡಲವಾಗುತ್ತಾರೆ.

ಜನತೆಯ ಸಂಸ್ಕೃತಿಗಾಗಿ :

ಗ್ರಾಮವೊಂದಕ್ಕೆ ಮಾತ್ರ ಸೀಮಿತವಾಗಿ ನಡೆಯುವ ಜಾತ್ರೆ ಹಬ್ಬಗಳ ಸಂದರ್ಭದಲ್ಲಿ ಆ ಗ್ರಾಮದ ಜಾತಿ ಶ್ರೇಣಿ ಚುರುಕಾಗಿರುತ್ತದೆ. ಉತ್ತಮ ಜಾತಿಯವರಿಗೆ ಉತ್ತಮ ಕೆಲಸಗಳು, ಕೆಳ ಜಾತಿಯವರಿಗೆ ಕೀಳು ಕೆಲಸಗಳಿರುತ್ತವೆ. ಇದು ಜಾತಿ ಅಸಮಾನತೆ ಮತ್ತು ಶೋಷಣೆಯ ಸಂಕೇತಗಳೇ. ಈ ಹಿನ್ನೆಲೆಯಲ್ಲಿ ಪ್ರಗತಿಪರ ವಿಧ್ವಾಂಸರು ಮತ್ತು ಹೋರಾಟಗಾರರು ಜಾತ್ರೆ, ಹಬ್ಬಗಳನ್ನು ಪ್ರತಿಗಾಮಿ, ಸಂಪ್ರದಾಯ ಮೂಢವೆಂದು ವಿರೋಧಿಸುವುದು ಸಹಜವೇ. ಎಲ್ಲಮ್ಮ, ಹುಲಿಗೆಮ್ಮನಂಥ ದೈವಗಳಿಗೆ ಜೋಗತಿ, ದೇವದಾಸಿ ಬಿಡುವ ಪದ್ಧತಿಯನ್ನು ವಿರೋಧಿಸಲೇ ಬೇಕಾಗುತ್ತದೆ.ಜಾತಿಯಿಂದಾಗುವ ಇಂತಹ ಅನಾಹುತಗಳೆಲ್ಲವನ್ನೂ ವಿರೋಧಿಸಲೇ ಬೇಕು. ಆದರೆ, ಹಾವನ್ನು ಹೊಡೆಯುವಾಗ ಅದರ ಜೊತೆ ಕೋಲು ಮುರಿಯುವಂತೆ ಜನತೆಯ ಸಾಂಸ್ಕೃತಿಕಾಂಶಗಳೆಷ್ಟೋ, ಅಧ್ಯಯನದಿಂದ ದೂರ ಸರಿಯುತ್ತದೆ. ಜನತೆಯ ಸಂಸ್ಕೃತಿಯ ಮೂಲಕ ಸಾಂಸ್ಕೃತಿಕಾಂಶಗಳನ್ನು ಹೇಗೆ, ಎಷ್ಟು, ಎಲ್ಲಿ ಬಳಸಿಕೊಳ್ಳಬೇಕು ಎಂಬ ಎಚ್ಚರದ ಅಗತ್ಯವಿದೆ. ಈ ಎಚ್ಚರವಿಲ್ಲದಿದ್ದರೆ ತಮ್ಮ ಗುರಿಗಳನ್ನು ಆರೋಪಿಸಿಕೊಂಡು ಆತ್ಮರತಿಗೆ ಬಲಿಯಾಗಬೇಕಾಗುತ್ತದೆ. ಈಗಾಗಲೇ ಪ್ರಗತಿಪರ ಚಿಂತಕರು ಅನೇಕರಲ್ಲಿ ಇಂಥ ಅಪಾಯಕಾರಿ ಸೂಚನೆಗಳು ಕಾಣುತ್ತಿವೆ. ಇವರಿಗೆ ಅವಧೂತರು, ಅನುಭವಿಗಳು ಮಾದರಿಗಳಾಗುತ್ತಿದ್ದಾರೆ. ಜನತೆಯ ಸ್ದಂಸ್ಕೃತಿ ಜನರ ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ ರೂಪುಗೊಳ್ಳುವಂಥದ್ದು. ಕರ್ನಾಟಕದಲ್ಲಿ ಪ್ರಗತಿಶೀಲ ಪಂಥ ಮತ್ತು ದಲಿತ ಬಂಡಾಯ ಪಂಥದ ಲೇಖಕರು ಅಂಥ ಸಂಸ್ಕೃತಿಯ ಹರಿಕಾರರಾಗಿದ್ದಾರೆ.

ದಲಿತ ಮತ್ತು ಕೆಳಜಾತಿ ವರ್ಗಗಳ ಜನ ಸಮೂಹವನ್ನು ಸಂಘಟಿಸಿ ಹೋರಾಡುವ ಸಂದರ್ಭದಲ್ಲಿ ಜಾತ್ರೆಗಳಿಂದ ಆಗುವ ನೆರವು ಎಂಥದು ಎಂದು ಯೋಚಿಸುವುದು ಅಸಂಬದ್ಧವೆನಿಸಲಾರದು. ಇತಿಹಾಸದ ಸರಿಯಾದ ಕಲ್ಪನೆಯಿಲ್ಲದವರು ಹೊಸ ಇತಿಹಾಸವನ್ನುನಿರ್ಮಿಸಲಾರರು ಎಂಬ ಮಾತಿರುವುದರಿಂದ ದಲಿತರು, ಕೆಳ ಜಾತಿ ಜನರು ತಮ್ಮ ತಮ್ಮ ನಿಜವಾದ ಇತಿಹಾಸವನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳಬೇಕಿದೆ. ಆದರೆ ನೈತಿಕ ಆಧಾರದಲ್ಲಿ ಹೊಸ ಸಮಾಜ ಸೃಷ್ಟಿಗೆ ಪ್ರಯತ್ನಶೀಲರಾಗಬೇಕಿದೆ. ಎಲ್ಲ ಜಾತಿಗಳ ಬಡವರನ್ನು ಒಟ್ಟು ಮಾಡುವ ಪ್ರಸಂಗದಲ್ಲಿ ಜಾತ್ರೆಗಳಿಂದ ಕಲಿತ ಪಾಠಗಳು ನೆರವಿಗೇಕೆ ಬರಬಾರದು ಹೀಗೆ

ಯೋಚಿಸುವಾಗಲೇ ಜಾತ್ರೆಗಳಲ್ಲಿರುವ ಮೌಢ್ಯತೆಯನ್ನು ಆಧ್ಯಾತ್ಮವಾದಿ ತಾತ್ವಿಕತೆಯನ್ನು ಒಪ್ಪಿಕೊಳ್ಳುವುದು ಸರಿಯಲ್ಲ. ಇದನ್ನು ನಿರಾಕರಿಸಲೇಬೇಕು. ಪ್ರಗತಿಶೀಲತೆಗೂ, ವೈಜ್ಞಾನಿಕ ಮನೋಭಾವಕ್ಕೂ, ನಾಸ್ತಿಕವಾದಕ್ಕೂ ಒಳನಂಟಿರುವುದರಿಂದ ಜಾತ್ರೆಯಂಥ ಜನಪದೀಯ ಸಾಂಸ್ಕೃತಿಕಾಂಶಗಳು ನಮಗೆ ಅಧ್ಯಯನದ ವಸ್ತುಗಳಾಗಿರುವಂತೆ ಇತ್ಯಾತ್ಮಕ ನೇತ್ಯಾತ್ಮಕ ಅಂಶಗಳ ಪರಿಕ್ಷೆಗೆ ಒಳಪಡಬೇಕಾಗುತ್ತದೆ. ಜಾತ್ರೆಗಳ ಸಾಂಪ್ರದಾಯಿಕ ಮೌಢ್ಯತೆ, ಕಂದಾಚಾರದಂತಹ ನೇತ್ಯತ್ಮಕ ಅಂಶಗಳನ್ನು ವಿರೋಧಿಸುತ್ತಲೇ ಜಾತಿ–ವಿರೋಧ, ಲಿಂಗ ವಿರೋದದಂತಹ ಪ್ರಗತಿಪರ ಇತ್ಯಾತ್ಮಕ ಅಂಶಗಳನ್ನು ಗುರುತಿಸಬೇಕಾಗುತ್ತದೆ.

ಬದಲಾಗುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ಜಾತ್ರೆಗಳನ್ನು ಕನಿಷ್ಟಕ್ಕೆ ಒಡ್ಡಿದಾಗ ಹುಟ್ಟುವ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಬೇಕಿದೆ. ಹಳ್ಳಿಗಳ ಉತ್ಸವ ಜಾತ್ರೆಗಳಂಥ ಸಾರ್ವಜನಿಕ ಆಚರಣೆಗಳ ಸಂದರ್ಭದಲ್ಲಿ ಜಾತಿಯ ಆಂತರಿಕ ರಚನೆ ಮತ್ತು ಬಾಹ್ಯ ರಚನಾಂಶಗಳು ಕೆಲಸ ಮಾಡುತ್ತವೆ (ಈ ವಿಷಯಕ್ಕೆ ಇದೇ ಲೇಖನ ಲೇಖನ: ಕನ್ನಡ ಸಮಾಜದ ಹುಟ್ಟು ಬೆಳವಣಿಗೆ ಸಂಕ್ರಮಣ ೩೧೨ ೧೯೯೮) ದೈವದ ವಿಧಿಯಾಚರಣೆಯಲ್ಲಿ ಜಾತಿಯ ಆಂತರಿಕ ರಚನೆ ಪ್ರವೃತ್ತವಾದರೆ, ಜಾತ್ರೆಯ ಮೇಲ್ ಪದರದ ಕೆಲಸಗಳಲ್ಲಿ ಜಾತಿಗಳ ಬಾಹ್ಯ ರಚನೆ ಪ್ರವೃತ್ತವಾಗಿರುತ್ತದೆ.

ದಲಿತರು ಮತ್ತು ಜಾತ್ರೆ

ಊರಮ್ಮನ ಹಬ್ಬ ಅಥವಾ ಜಾತ್ರೆಯಲ್ಲಿ ಹೊಲೆಯ ಮತ್ತು ಮಾದಿಗರ ಪಾತ್ರ ತುಂಬಾ ಪ್ರಾಮುಖ್ಯತೆಯದು. ಹಲಗೆ ವಾದ್ಯ ನುಡಿಸುವುದಷ್ಟೇ ಅಲ್ಲ, ಕೋಣವನ್ನು ಬಲಿ ನೀಡಿ ಅನ್ನದ ಜೊತೆ ಕರಸ ಬೆರೆಸಿ ಊರ ಗುಡಿಗುಂಟ ಚರಗ ಚೆಲ್ಲುವ ಅತ್ಯಂತ ಮುಖ್ಯ ವಿಧಿಯನ್ನು ದಲಿತರು ಪೂರೈಸುತ್ತಾರೆ. ದಲಿತನೇ ಅಮ್ಮನ ಗಂಡನೆಂದು ಸಕಾರಣವಾಗಿಯೇ ಕಥೆ ಕಟ್ಟಲಾಗಿದೆ. ಆದರೆ ಕಥೆಯ ಅಮ್ಮ ಬ್ರಾಹ್ಮಣ ಅಥವಾ ಲಿಂಗಾಯತರ ಹುಡುಗಿ ಎಂದಿರುವುದು ಸರಿಯಲ್ಲ. ಕೋಣ, ಪೋತರಾಜ, ದಲಿತ ಇವೆಲ್ಲ ಒಂದೇ. ಹರಪನಹಳ್ಳಿ ತಾಲ್ಲೂಕು, ಅರಸಿಕೆರೆ ಮಾದಿಗ ಕೇರಿಯ ದುರಗಮ್ಮನ ಜಾತ್ರೆಯಲ್ಲಿ ಮಾದಿಗ ಪೂಜಾರಿ ಹೊಳೆಯಿಂದ ಕೋಲು ಹೊತ್ತು ಬರುವಾಗ ಲಿಂಗಾಯತರಾದಿಯಾಗಿ ಎಲ್ಲ ಜಾತಿ–ಜನ ಅವನ ಕಾಲ ಕೆಳಗೆ ಮಲಗುತ್ತಾರೆ. ಸಾಕ್ಷಾತ್ ಅಮ್ಮನೆಂದೇ ಭಾವಿಸಿ ಅವನಿಂದ ತುಳಿಸಿಕೊಂಡು ಪವಿತ್ರರಾಗುತ್ತಾರೆ. ಆಂಧ್ರದಲ್ಲಿ ಮಾತಂಗಿ ಬಾಯಲ್ಲಿ ಹೆಂಡ ಹಾಕಿಕೊಂಡು ಬ್ರಾಹ್ಮಣರ ಮೇಲೆ ಉಗುಳಿ ಅವರನ್ನು ಪವಿತ್ರೀಕರಿಸುತ್ತಾರೆ. ಹೊಸದಾಗಿ ಕಟ್ಟಿದ ಮನೆಗಳಲ್ಲಿ ದುಷ್ಟ ಶಕ್ತಿಗಳನ್ನು ಹೊಡೆದೋಡಿಸುವ ಬಲ ಹೊಲೆಯ,

ಮಾದಿಗರು ಚರ್ಮ ನೆನೆ ಹಾಕುವ ಕರಿಬಾನಿ ನೀರಿನಲ್ಲಿದೆ ಎಂಬ ನಂಬಿಕೆ ಗಾಢವಾಗಿದೆ. ಬ್ರಾಹ್ಮಣರಲ್ಲೂ ಈ ಭಾವನೆಯಿದೆ. ಹಾಗಾಗಿ ಈ ನೀರನ್ನು ಕೇಳಿ ಅಥವಾ ಕದ್ದು ಒಯ್ಯುತ್ತಾರೆ. ಇಂತಹ ಅಸಂಖ್ಯ ನಿದರ್ಶನಗಳು ದಲಿತರ ಬಗ್ಗೆ ಹೊಸ ಚರಿತ್ರೆಯನ್ನು ಬರೆಯುವುದಕ್ಕೆ ನೆರವಾಗುತ್ತದೆ (ವಿವರಗಳಿಗೆ ಈ ಲೇಖನ ಈ ಗ್ರಂಥಗಳನ್ನು ಗಮನಿಸಿ. ೧. ಕರ್ನಾಟಕ ಸಂಸ್ಕೃತಿ ಪರಂಪರೆ ಭಾಗ-೧ ಹಬ್ಬಗಳು, ೨. ಕರ್ನಾಟಕ ದಲಿತ ಸಂಸ್ಕೃತಿ-ಪರಂಪರೆ ಭಾಗ-೨ ಜಾತ್ರೆಗಳು, ೩. ದಲಿತ ಸಂಸ್ಕೃತಿ-ಹಂಪಿ ಕ.ವಿ.ವಿ.ಪ್ರಕಟಣೆ).

ದಲಿತರು ಚಾರಿತ್ರಿಕವಾಗಿ ಸವರ್ಣೀಯರಿಂದ ಎಷ್ಟೊಂದು ಅವಮಾನಕ್ಕೆ, ಹಿಂಸೆಗೆ ಶೋಷಣೆಗೆ ತುತ್ತಾಗಿದ್ದಾರೆ ಎಂಬುದನ್ನು ನಿರ್ಲಕ್ಷಿಸುವಂತಿಲ್ಲ. ಆದರೆ ದಲಿತರು ಅದಕ್ಕೆ ಪ್ರತಿಯಾಗಿ ಮಾನವೀಯ ಪ್ರೀತಿಯನ್ನು ಉಳಿಸಿಕೊಂಡು ತಮ್ಮ ಸಂಸ್ಕೃತಿಯ ಮೂಲಕ ಸಮಾಜೋಪಯೋಗಿ ಕೃತ್ಯಗಳಲ್ಲೇ ತೊಡಗಿಕೊಂಡು ಬಂದಿದ್ದಾರೆ. ವಿಷವನ್ನು ನುಂಗಿ ಅಮೃತವನ್ನು ನೀಡಿದ್ದಾರೆ. ಜಾತ್ರೆಗಳಲ್ಲಿ ದಲಿತರ ಪಾತ್ರವನ್ನು ಈ ಹಿನ್ನೆಲೆಯಲ್ಲೇ ಅವಲೋಕಿಸಬೇಕಿದೆ.

ಮೂಲ ಬೇಸಾಯಗಾರರಾದ ದಲಿತರು ಮಾತೃ ಪ್ರಧಾನ ಸಮಾಜದಲ್ಲಿ ಬಾಳಿದವರು. ಮಾತೃ ದೈವಗಳ ಸೃಷ್ಟಿಕರ್ತರು. ಹಬ್ಬಗಳು ಕೃಷಿ ಸಂಸ್ಕೃತಿಗೆ ಹೊಂದುವ ಸಂಪ್ರದಾಯ, ಕೃಷಿ ಜೀವನಕ್ಕೆ ಸಂಬಂಧಿಸಿದ ನಿರ್ಧಿಷ್ಟ ಘಟ್ಟಗಳಲ್ಲಿ ಬೆಳೆಯ ಅಭಿವೃದ್ಧಿಗೆ ಹೊಂದಿಕೊಂಡು ಹಬ್ಬಗಳು ಬರುತ್ತವೆ. ಇಡೀ ಊರಿಗೆ ಸಂಬಂಧಪಟ್ಟ ಅಮ್ಮನ ಹಬ್ಬ ಪ್ರತಿ ವರ್ಷವೂ ನಡೆಯುವುದಿಲ್ಲ. ಬಹಳಷ್ಟು ಕಡೆ ಹತ್ತಿಪ್ಪತ್ತು ವರ್ಷಕ್ಕೊಮ್ಮೆ ನಡೆಯುತ್ತದೆ.

ಇದು ಜಾತ್ರೆಯ ಲಕ್ಷಣವನ್ನೇ ಪಡೆಯುತ್ತದೆ. ಹೆನ್ರಿ ವೈಟ್‌ಹೆಡ್, ಈ ಥರ್‌ಸ್ಟನ್ ಮೊದಲಾದವರು ದಕ್ಷಿಣ ಭಾರತದ ಇಂಥ ಹಬ್ಬ ಜಾತ್ರೆಗಳನ್ನು ನೂರು ವರ್ಷದ ಹಿಂದೆಯೇ ದಾಖಲಿಸಿದ್ದಾರೆ. ಕರ್ನಾಟಕದಲ್ಲಿ ಅಷ್ಟೇ ಅಲ್ಲ ಪ್ರಾದೇಶಿಕವಾದ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಹೊರತುಪಡಿಸಿ ಆಂಧ್ರ, ತಮಿಳುನಾಡು, ಕೇರಳಗಳಲ್ಲೂ ಊರಮ್ಮನ ಹಬ್ಬ-ಜಾತ್ರೆ ಬಹುತೇಕ ಒಂದೇ ರೀತಿ ನಡೆಯುತ್ತದೆ. ಊರಮ್ಮಗಳ ಹೆಸರು ಬದಲಾಗುತ್ತವೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಐದು ಭಾಗಗಳಾಗಿ ವಿಂಗಡಿಸಬಹುದು. ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮಧ್ಯ ಕರ್ನಾಟಕ, ದಕ್ಷಿಣ ಕರ್ನಾಟಕ ಮತ್ತು ಬೆಟ್ಟ ಕರಾವಳಿ ಕರ್ನಾಟಕ. ಈ ಐದೂ ಭಾಗಗಳಲ್ಲಿ ಆಯಾ ಪ್ರದೇಶಕ್ಕೆ ವಿಶಿಷ್ಟವಾದ ಲಕ್ಷಣಗಳು ಜಾತ್ರೆಗಳಲ್ಲೂ ಕಾಣುತ್ತವೆ. ಭೌಗೋಳಿಕ ವ್ಯತ್ಯಾಸಗಳೂ ಇದಕ್ಕೆ ಕಾರಣ. ಕರಾವಳಿ ಕರ್ನಾಟಕದಲ್ಲಿ ದಲಿತರಿಗೆ ನಲ್ಕೆ, ಪಂಬದ, ಪರವ,

ಮನ್ಯ, ಮೇರ, ಕೊರಗ ಮೊದಲಾದ ಹೆಸರುಗಳಿವೆ. ಅಲ್ಲಿ ತುಂಬ ಪ್ರಚಲಿತವಿರುವ ಭೂತಾರಾಧನೆಯಲ್ಲಿ ಈ ದಲಿತರೇ ಭೂತ ದೈವಗಳಾಗುತ್ತಾರೆ. ಬೇಟೆ ಮತ್ತು ಕೃಷಿ ಆಶಯಗಳಿಂದ ತುಂಬಿರುವ ಉತ್ಸವ, ಹಬ್ಬಗಳಾಗಿವೆ ಭೂತಾರಾಧನೆಗಳು. ಹಿಂದೊಮ್ಮೆ ಭೂತಾರಾಧನೆ ನಾಡಿನಲ್ಲೆಲ್ಲ ಪ್ರಚಾರದಲ್ಲಿತ್ತು. ಅದರ ಅವಶೇಷಗಳು ಇತರ ಭಾಗಗಳಲ್ಲಿವೆ.

ಕಲೆಗಳು :

ಕನ್ನಡ ದೇಸಿ ನಾಟಕದ ಮೊದಲ ರೂಪಗಳು ಭೂತಾರಾಧನೆಯಿಂದ ಹುಟ್ಟಿರಬಹುದಾದ ಯಕ್ಷಗಾನದಂಥ ಪ್ರಕಾರಗಳಲ್ಲಿ ಉಳಿದುಬಂದಿದೆ. ಹಬ್ಬ, ಉತ್ಸವ, ಜಾತ್ರೆಗಳು, ಕಲೆಗಳನ್ನು ಪೋಷಿಸಿಕೊಂಡು ಬಂದಿರುವ ಸಾರ್ವಜನಿಕ ಪ್ರಾದೇಶಿಕ ಸಂದರ್ಭಗಳು, ಹಾಡು, ನೃತ್ಯ, ಆಟ, ವಿವಿಧ ಜನಪದ ಕಲಾ, ವಾದ್ಯ ಪ್ರಕಾರಗಳು ಜಾತ್ರೆಯ ಸಂದರ್ಭದ ಸೃಷ್ಟಿಗಳೂ ಹೌದು. ಹರಪನಹಳ್ಳಿ ತಾಲ್ಲೂಕು ಕೂಲಹಳ್ಳಿಯ ಗೋಣಿ ಬಸವೇಶ್ವರ ಜಾತ್ರೆಯಲ್ಲಿ ಆತನಿಗೆ ಸಂಬಂಧಪಟ್ಟ ನಾಟಕವನ್ನು ಪಕ್ಕದ ಬಾಗಳಿಯವರು ಪ್ರತಿವರ್ಷ ಆಡುತ್ತಾರೆ. ಅದೇ ರೀತಿ ಅರಸಿಕೆರೆ ದಂಡಿನ ದುರಗಮ್ಮನ ಜಾತ್ರೆಯಲ್ಲಿ ಆಕೆಯ ಕುರಿತ ನಾಟಕವನ್ನು ದಲಿತರು ತಂಡ ಕಟ್ಟಿ ಆಡುತ್ತಾರೆ. ಎಲ್ಲಮ್ಮನ ಸಂಪ್ರದಾಯದ ಜೋಗತಿಯರು ಇಡೀ ರಾತ್ರಿ ಎಲ್ಲಮ್ಮನ ಕಥೆಯನ್ನು ಅಭಿನಯಿಸುತ್ತಾರೆ. ಮಾದೇಶ್ವರ, ಮಂಟೇಸ್ವಾಮಿ ಮಹಾಕಾವ್ಯಗಳನ್ನು ಯಾಯಾ ದೇವರ ಹೊರೆ ಹೊತ್ತ ಜನಪದ ಗುರುವರ್ ಹಲವಾರು ರಾತ್ರಿಗಳವರೆಗೆ ಹಾಡುತ್ತದೆ. ಇಂಥದೇ ಹಾಡು ಕತೆ ಗೋಣೀ ಬಸವೇಶ್ವರರನ್ನು ಕುರಿತಿದ್ದು, ಭೈರೇದೇವರ ಗುಡ್ಡದ ಬಾಲಬಸವರೆಂಬ ದಲಿತ ತಂಡ ಇಡೀ ರಾತ್ರಿ ಹೇಳುತ್ತದೆ. ಬಳಲಿಕವ್ವನ ಜಾತ್ರೆಗಳನ್ನು ಪ್ರದರ್ಶಿಸುವ ಕುರಿತು ಎಂ.ಚಿದಾನಂದಮೂರ್ತಿಯವರು ದಾಖಲಿಸಿದ್ದಾರೆ ಪಗರಣದ ಉಲ್ಲೇಖ ಕವಿರಾಜ ಮಾರ್ಗದಷ್ಟು ಹಿಂದಿನಿಂದಲೂ ಕಂಡುಬರುತ್ತದೆ. ಚೆಂದು ಭಾಗವತರೆಂಬ ಸಿಂದ್ ಮಾದಿಗರು ತಂಡ ಕಟ್ಟಿಕೊಂಡು ಎಲ್ಲಮ್ಮ, ರಾಮಾಂಜನೇಯ ಯುದ್ಧ, ಬಾಲನಾಗಮ್ಮ, ಸಾರಂಗಧರ, ಮರಿಗ ಕುಲದ ಉಗಮ ಮೊದಲಾದ ಕೇಳಿಕೆಗಳನ್ನು (ಪೌರಾಣಿಕ, ಚಾರಿತ್ರಿಕ ಆಟಗಳು) ಆಡುತ್ತಾ ಬಂದಿರುವ ಕುರಿತು ಕೆ.ರಾಮಯ್ಯ ವಿವರಿಸಿದ್ದಾರೆ. ಲಕ್ಷ್ಮೀಪತಿ–ಕೋಲಾರ ಅವರೂ ಮಾಸ್ಪಿಕರಲ್ಲಿ ಇದೆಲ್ಲ ಇರುವುದನ್ನು ತಿಳಿಸಿದ್ದಾರೆ ತಂಗಡಿದ್ಯಾವು ಆಚರಣೆಯಲ್ಲಿ ಕುಣಿವ ಸಿಂದ್ ನೃತ್ಯದಲ್ಲಿ ಬುಡಕಟ್ಟು ಬದುಕಿನ ಬೇಟೆ ಮತ್ತು ಕಾಮಗಳ ಅಭಿವ್ಯಕ್ತಿ ಇದೆ ಎಂದು ಸಾಧಾರಣವಾಗಿ ರಾಮಯ್ಯ ವಿವೇಚಿಸಿದ್ದಾರೆ. ತೆಲುಗು ನಾಡಿನಲ್ಲಿ ಭಾಗವತ ಮತ್ತು ಯಕ್ಷಗಾನಗಳಿಗೆ ೨೫೦೦ ವರ್ಷಗಳ ಚರಿತ್ರೆಯಿದೆ ಎಂದು ತೆಲುಗು ವಿದ್ವಾಂಸರ ವಿಚಾರವಿದೆ ಪಕ್ಕದ ಕರ್ನಾಟಕದಲ್ಲೂ

ಅಂಥ ನಾಟಕ–ಆಟ ಪರಂಪರೆಯಿದ್ದಿದ್ದರೆ ಅದು ಸಹಜವೇ. ಕುರುಬರಲ್ಲಿ ಡೊಳ್ಳು, ದಲಿತರಲ್ಲಿ ಹಲಗೆ, ತುಂತುಣಿ, ದಮ್ಮಡಿ, ಕಾಡುಗೊಲ್ಲರಲ್ಲಿ ಕೊಳಲು, ಮ್ಯಾಸರಲ್ಲಿ ಕೋಲು ಇಂಥ ವಾದ್ಯ ಪರಿಕರಗಳು ಆಯಾಯ ಜನಕುಗಳ ಮೂಲದ ವಿಧಿಯಾಚರಣೆಗಳ ಸಂದರ್ಭದ ಸೃಷ್ಟಿ. ಜನಪದ ಕಲೆಗಳ ಹುಟ್ಟು ಮತ್ತು ಬೆಳವಣಿಗೆಯಲ್ಲಿ ಜಾತ್ರೆಗಳ ಪಾಲೂ ಬಹುಮುಖ್ಯವಾದುದು ಎಂಬುದು ಒಟ್ಟಾರೆ ಈ ಚರ್ಚೆಯ ಸಾರು.

ಪುರುಷ, ಸ್ತ್ರೀ ದೈವಗಳು :

ಜಾತ್ರೆ ದೈವವೊಂದರ ಕೇಂದ್ರದ ಸುತ್ತ ನೆರೆಯುತ್ತದೆ. ಈ ದೈವ ಹೆಣ್ಣಿರಬಹುದು, ಗಂಡಿರಬಹುದು, ಜನಪದರು ಅಂಶ ತಾರತಮ್ಯ ಮಾಡಿಲ್ಲ. ಸಾವಿರಾರು ವರ್ಷಗಳಿಂದ ಪುರುಷ ಪ್ರಧಾನ ಸಮಾಜ ಉಳಿದು ಬಂದಿದ್ದರೂ ಮಾತೃ ದೈವಗಳಿಗೆ ಸಿಕ್ಕಿರುವ ಸಾಮಾಜಿಕ ಪ್ರಾಶಸ್ತ್ಯವನ್ನು ನೋಡಿದರೆ ಮಾತೃ ಪ್ರಧಾನ ಸಮಾಜ ತುಂಬಾ ದೀರ್ಘಾವಧಿಯದ್ದು ಮತ್ತು ಪ್ರಭಾವಶಾಲಿಯಾಗಿದ್ದು ಆಗಿದ್ದಿರಲೇಬೇಕು. ಅದರ ಪಳೆಯುಳಿಕೆಗಳೇ ಇಂದಿಗೂ ಉಳಿದಿರುವುದು ಹೆಣ್ಣು ದೈವಗಳಿಗೆ ಹೆಚ್ಚಿನವಕ್ಕೆ ಹಬ್ಬಗಳ ಸಂಬಂಧವಿದ್ದರೂ ಎಲ್ಲಮ್ಮನಂಥ ಕೆಲವೇ ದೈವಗಳಿಗೆ ಜಾತ್ರೆಯ ಸಂಬಂಧವಿದೆ. ಬೆಳಗಾವಿ ಜಿಲ್ಲೆಯ ಸವದತ್ತಿ ಎಲ್ಲಮ್ಮ ತುಂಬಾ ಪ್ರಖ್ಯಾತಳು. ರಾಯಚೂರು ಜಿಲ್ಲೆ ಕೊಪ್ಪಳ ತಾಲ್ಲೂಕಿನ ಹುಲಿಗಿಯ ಹುಲಿಗೆಮ್ಮ ದಾವಣಗೆರೆ ಜಿಲ್ಲೆಯ ಉಚ್ಚಂಗಿದುರ್ಗದ ಉಚ್ಚಂಗೆಮ್ಮ ಇಂಥ ಹಲವಾರು ಸ್ಥಳೀಯ ದೈವಗಳು ಎಲ್ಲಮ್ಮನ ಅವತಾರಗಳೆಂದೇ ಭಾವಿಸಲಾಗುತ್ತದೆ. ಇದಲ್ಲದೇ ಇಡೀ ದಕ್ಷಿಣ ಭಾರತದಲ್ಲಿ ಬಹಳಷ್ಟು ಕಡೆ ಎಲ್ಲಮ್ಮನ ದೇಗುಲ ಮತ್ತು ಪಂಥಾಚರಣೆಗಳು ವ್ಯಾಪಕವಾಗಿದೆ. ಸಿಂದ್ ಮಾದಿಗರು ತಮ್ಮ ಶಕ್ತಿಯ ನಂಬಿಕೆ ಮತ್ತು ಆಚರಣೆಗಳಿಗೆ ಅನುಸಾರವಾಗಿ ಕಡ್ಡಾಯವಾಗಿ ಎಲ್ಲಮ್ಮನ ಆಟ ಆಡುತ್ತಾರೆ.

ಹೆಣ್ಣು ದೈವಗಳಿಗೆ ಹಬ್ಬ, ಗಂಡು ದೈವಗಳಿಗೆ ಜಾತ್ರೆಗಳ ಸಂಬಂಧ ಏಕೆ ಗಾಢ ಇದಕ್ಕೆ ಈಗಾಗಲೇ ಕಾರಣವನ್ನು ಸೂಚಿಸಲಾಗಿದೆ. ಪಶುಪಾಲಕರು ಪಿತೃ ಪ್ರಧಾನ ಸಮಾಜದಲ್ಲಿರುವುದರಿಂದ ಅವರಲ್ಲಿ ಗಂಡು ದೈವಗಳಿಗೆ ಪ್ರಾಶಸ್ತ್ಯ ಬೇಸಾಗಾರರಲ್ಲಿ ಹೆಣ್ಣೂ ದೈವಗಳಿಗೆ ಪ್ರಾಶಸ್ತ್ಯ. ಪಶುಪಾಲಕ ವೃತ್ತಿ, ಬೇಸಾಯಕ್ಕಿಂತ ಮೊದಲು ಹುಟ್ಟಿದ್ದು. ಆದರೆ ಪಶುಪಾಲನೆಗಿಂತ ಬೇಸಾಯವೇ ನಾಗರಿಕತೆ ಮುಂದುವರೆಯಲು ಕಾರಣವಾಗುತ್ತದೆ. ಪಸುಪಾಲಕರು, ಬೇಸಾಯಗಾರರು ಒಟ್ಟಾಗಿ ಬೇಸಾಯ ಪಾಸು ಸಂಗೋಪನೆಗಳೆರಡೂ ಪ್ರತ್ಯೇಕವಾಗಿ ಉಳಿಯಲಿಲ್ಲ. ಹಾಗಾಗಿ ಹಬ್ಬ, ಜಾತ್ರೆಗಳಲ್ಲಿ ಎಷ್ಟೋ ಸಲ ವ್ಯತ್ಯಾಸವೇ

ಕಾಣದಂತಾಯಿತು. ಇಷ್ಟಿದ್ದರೂ ಹಟದಿಂದ ಎಂಬಂತೆ ತಮ್ಮ ಮೂಲ ಸಂಸ್ಕೃತಿ ಪರಂಪರೆಯನ್ನು ಮತ್ತು ವೃತ್ತಿಯನ್ನು ಕಾಡು ಕುರುಬ, ಬೇಡ, ಗೊಲ್ಲ ಮೊದಲಾದ ಜನಾಂಗಗಳು ಉಳಿಸಿಕೊಂಡವು. ಸಂಕರ ಸಂಸ್ಕೃತಿಯೇ ಪ್ರಧಾನವಾಗಿದ್ದಾಗಲೂ ಮೂಲ ರೂಪಗಳನ್ನು ಕಂಡುಕೊಳ್ಳಲು ಇಂಥ ಜನಕುಲಗಳೇ ಆಧಾರ, ನಾಡಿನ ಕಾಡು–ಮೇಡುಗಳಲ್ಲಿ ಗಿರಿವಾಸಿಗಳಾಗಿರುವ ಜನಕುಲಗಳು ಆದಿಮ ಸಂಸ್ಕೃತಿಯನ್ನು ಅಲ್ಪಸ್ವಲ್ಪ ಉಳಿಸಿಕೊಂಡು ಬಂದಿದ್ದಾರೆ. ಅವರು ಪಶುಪಾಲಕರಾಗಿದ್ದಲ್ಲಿ ಜಾತ್ರೆಯ ಆದಿಮ ರೂಪಗಳನ್ನು ಹೆಚ್ಚು ಗಟ್ಟಿಯಾಗಿ ಉಳಿಸಿಕೊಂಡರು. ಈ ಮೊದಲು ಸೂಚಿಸಿರುವಂತೆ ಕರ್ನಾಟಕದ ಐದು ಸಾಂಸ್ಕೃತಿಕ ವಲಯಗಳಲ್ಲಿ ಸಮಾನವಾಗಿರುವ ಅಂಶಗಳಿವೆ. ಮಧ್ಯ ಕರ್ನಾಟಕದಲ್ಲಿ ಹೇಳುವ ಊರಮ್ಮನೇ ಉತ್ತರ ಕರ್ನಾಟಕದಲ್ಲಿ ದ್ಯಾಮವ್ವನಾಗಿದ್ದಾಳೆ. ದಕ್ಷಿಣ ಕರ್ನಾಟಕದಲ್ಲಿ ಮಾರೆಮ್ಮನಾಗಿದ್ದಾಳೆ, ಇಡೀ ಊರಿನ ಜನ, ದನ, ಬೆಳೆಗಳನ್ನು ರಕ್ಷಿಸುತ್ತಾಳೆಂದು ನಂಬಿರುವ ಈ ದೈವದ ಹಬ್ಬಗಳು, ಎಷ್ಟೋ ಕಡೆ ಜಾತ್ರೆಯ ಆಕಾರ ಪಡೆದಿದೆ. ರೋಗಗಳನ್ನು ತರುವ ಮತ್ತು ನಿವಾರಣೆ ಮಾಡುವ ಶಕ್ತಿಯನ್ನು ಈ ದೈವಕ್ಕೆ ಆರೋಪಿಸಲಾಗುತ್ತದೆ. ಇವಲ್ಲದೇ ಪ್ಲೇಗಮ್ಮ, ಧಡಾರಮ್ಮ, ಕಾಲರಾ ತರುವ ಅಮ್ಮಗಳು ಪ್ರತ್ಯೇಕವಾಗಿವೆ. ಆಧುನಿಕ ಯುಗಕ್ಕಿಂತ ಮೊದಲಿನ ಊಳಿಗಮಾನ್ಯ ಸಮಾಜದಲ್ಲಿ ವೈದ್ಯಕೀಯ ಸೌಲಭ್ಯಗಳಿಲ್ಲದಿದ್ದ ಸ್ಥಿತಿಯಲ್ಲಿ ಜನ ತಮ್ಮ ಅಸಹಾಯಕತೆಗೆ ದೈವದ ಕರುಣೆಯನ್ನು ಅಪೇಕ್ಷಿಸುತ್ತಿದ್ದರು. ಜಾತ್ರೆಗಳನ್ನು ದೈವದ ಸಂತೃಪ್ತಿಗಾಗಿ ಮಾಡುತ್ತಿದ್ದರು ಆಗ ಹುಟ್ಟಿದ ಆಚರಣೆಗಳು ಮುಂದುವರೆದುಕೊಂಡು ಬಂದವು. ಈಗ ವೈಜ್ಞಾನಿಕ ಸಾಧನೆಗಳಿಂದಾಗಿ ಸಾಂಕ್ರಾಮಿಕ ರೋಗಗಳು ಹತೋಟಿಯಲ್ಲಿದ್ದರೂ ಆ ಸಂದರ್ಭದಲ್ಲಿ ಹುಟ್ಟಿದ್ದ ಹಬ್ಬ ಜಾತ್ರೆಗಳು ನಿಲ್ಲಲಿಲ್ಲ. ಜನತೆ ಇಂದು ತಮ್ಮನ್ನು ಬಾಧಿಸುತ್ತಿರುವ ಸಮಸ್ಯೆಗಳಿಗೆ ಇದೇ ದೈವಗಳಿಗೆ ಮೊರೆ ಹೊಕ್ಕು ಪರಿಹಾರ ಕಾಣಲು ವ್ಯರ್ಥ ಪ್ರಯತ್ನ ಮಾಡುತ್ತಾರೆ. ಇದು ಅವರಿಗೆ ಮಾನಸಿಕ ನೆಮ್ಮದಿಯನ್ನು ಕೊಡಬಹುದಷ್ಟೆ. ದಕ್ಷಿಣ ಕನ್ನಡದ ಸಿರಿ ಜಾತ್ರೆಯನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು.

ಮಾತೃ ಮೂಲೀಯವಾದ ಹಲವಾರು ಜಾತಿಗಳಿರುವ ಈ ಪ್ರದೇಶದಲ್ಲಿ ಸಿರಿ ಜಾತ್ರೆ ದಬ್ಬಾಳಿಕೆಗೊಳಗಾದ ಮಹಿಳೆಯ ಸ್ವಾತಂತ್ರ್ಯದ ಬಯಕೆಗೆ ಹಾದಿ ಮಾಡಿಕೊಡುತ್ತದೆ. ಸಿರಿ ಪಾಡ್ದನವೆಂಬ ಮಹಾಕಾವ್ಯದಲ್ಲಿ ಸಿರಿ ತನ್ನ ದುಷ್ಟಗಂಡನ (ಕಾಂತು ಪೂಂಜ) ವಿರುದ್ಧ ಹೋರಾಡಿ, ವಿವಾಹ ವಿಚ್ಛೇದನ ಪಡೆದು ಆರು ಮದುವೆಯಾಗುವ ಚಿತ್ರಣವಿದೆ. ಸಿರಿ ಪಂಥವಾಗಿರುವುದು, ವಾರ್ಷಿಕ ಜಾತ್ರೆಯಲ್ಲಿ ಶೋಷಿತ್ ಮಹಿಳೆಯರು ಸಾಮೂಹಿಕವಾಗಿ ಆವೇಶಿತವಾಗಿ ಹತ್ತಿಕ್ಕಲ್ಪಟ್ಟ ಭಾವನೆಗಳನ್ನು ಹೊರಹಾಕುತ್ತಾರೆ. ಹೀಗೆ ಅವರು ತಾತ್ಕಾಲಿಕ

ನೆಮ್ಮದಿಯನ್ನು ಪಡೆಯುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಸುಮಾರು ೧೬ ದೇಗುಲಗಳಲ್ಲಿ ಮಾರ್ಚ್-ಏಪ್ರಿಲ್ ತಿಂಗಳ ಹುಣ್ಣಿಮೆಯಂದು ಸಿರಿ ಜಾತ್ರೆ ನಡೆಯುತ್ತದೆ.

ವ್ಯಾಪಾರ-ವ್ಯವಹಾರ :

ಊಳಿಗಮಾನ್ಯ ಕಾಲದುದ್ದಕ್ಕೂ ಜಾತ್ರೆಗಳು, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಚಟುವಟಿಕೆಗಳ ಪ್ರಧಾನ ನೆಲೆಯಾಗಿದ್ದವು. ವ್ಯಾಪಾರ-ವಹಿವಾಟು ನಿರಂತರವಾಗಿರದಿದ್ದ ಅಂದಿನ ದಿನಮಾನಗಳಲ್ಲಿ ವಾರ್ಷಿಕ ಜಾತ್ರೆಗಳ ಸಂತೆಗಳಲ್ಲಿ ರೈತರು, ಕೂಲಿಕಾರರು ತಮಗೆ ಬೇಕಾದ ಸಾಮಾನು ಕೊಂಡುಕೊಳ್ಳುತ್ತಿದ್ದರು. ಎಷ್ಟೋ ಜಾತ್ರೆಗಳು ದನಗಳ ವ್ಯಾಪಾರಕ್ಕೆ ಪ್ರಸಿದ್ಧವಾಗಿವೆ. ಉದಾ: ಬೆಳಗಾವಿ ಜಿಲ್ಲೆಯ ಅಂಕಲಗಿ ಮೊದಲಾದ ಕಡೆಯಿರುವ ಅಡವಿ ಸಿದ್ದೇಶ್ವರ ಜಾತ್ರೆಗಳಲ್ಲಿ ದನಗಳ ಮಾರಾಟವೇ ಮುಖ್ಯ ವ್ಯವಹಾರ, ಅಪರೂಪದ ವಸ್ತುಗಳ ವಿನಿಮಯ ಜಾತ್ರೆಗಳ ಸಂದರ್ಭದಲ್ಲಿ ಆಗುತ್ತಿತ್ತು. ಇಂದಿನ ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ವ್ಯಾಪಾರ ದೈನಂದಿನ ವ್ಯವಹಾರವಾಗಿದ್ದರೂ ಜಾತ್ರೆ, ಸಂತೆಗಳ ವಹಿವಾಟು ಕಡಿಮೆಯಾಗಿಲ್ಲ. ಜಾತ್ರೆಯ ಅವಿಭಾಜ್ಯ ಅಂಶವೆಂಬಂತೆ ವ್ಯಾಪಾರ ಮತ್ತು ಮನರಂಜನೆ ಕಾರ್ಯಕ್ರಮಗಳಿರುತ್ತವೆ. ಇವಿಲ್ಲದಿದ್ದರೆ ಜಾತ್ರೆಗೆ ನಿಜವಾದ ಕಳೆಯೇ ಬರಲಾರದು. ಅಲೆದಾಡಿಕೊಂಡು ವ್ಯಾಪಾರ ಮಾಡುತ್ತಿದ್ದ ಫ್ಯೂಡಲ್ ಕಾಲದ ವ್ಯಾಪಾರಸ್ಥರಿಗೆ ಅವರವರ ಜಾತಿಯ ದೇಗುಲ, ಬಸದಿ, ಚೈತನ್ಯಗಳೇ ತಾತ್ಕಾಲಿಕ ವಾಸಸ್ಥಾನ, ವ್ಯಾಪಾರ ಸ್ಥಾನಗಳಾಗುತ್ತಿದ್ದವು. ಅಲ್ಲಿ ನಡೆಯುವ ಜಾತ್ರೆಗಳಿಂದಲೂ ಅವರ ವಹಿವಾಟಿಗೆ ವಿಶೇಷ ಕುಮ್ಮಕ್ಕು ಸಿಗುತ್ತಿತ್ತು. ಒಂದು ಸಾಮಾನ್ಯ ಗ್ರಾಮವನ್ನು ಪುರವನ್ನಾಗಿ ಮಾಡುವುದು ಎಂದರೆ ದೇಗುಲ ಮಠ ನಿರ್ಮಾಣ, ಸಂತೆ ಜಾತ್ರೆಗಳ ವ್ಯವಸ್ಥೆ ಗ್ರಾಮಗಳನ್ನು ಪುರಗಳನ್ನಾಗಿ ಮಾಡುತ್ತಿದ್ದರೆಂಬ ವಿಷಯ ಪ್ರಸ್ತಾಪವಾಗುವುದರ ಅರ್ಥ ಇದು.

ಮಧ್ಯ ಯುಗದ ಅಂತ್ಯ ಮತ್ತು ಆಧುನಿಕ ಕಾಲದ ಆಗಮನದ ಸಂಕ್ರಮಣ ಘಟ್ಟದಲ್ಲಿ ಕಾಣಬರುವ ಅನೇಕ ಯತಿಗಳು, ಸ್ವಾಮಿಗಳು, ಅವಧೂತರು, ಸೂಫಿ ಸಂತರು, ತಮ್ಮ ತಮ್ಮ ಪೀಠಗಳನ್ನು ಮಠಗಳನ್ನು ಸ್ಥಾಪಿಸಿಕೊಂಡು, ವಾರ್ಷಿಕ ಜಾತ್ರೆಗಳು ನಡೆಯುವಂತೆ ವ್ಯವಸ್ಥೆ ಮಾಡುತ್ತಿದ್ದರು. ಇಲ್ಲದಿದ್ದರೆ ಇವರು ತೀರಿದ ನಂತರ ಇವರ ಭಕ್ತರಾದರೂ ಈ ಕೆಲಸ ಮಾಡುತ್ತಿದ್ದರು. ಸಿದ್ದೇಶ್ವರರು (ಹಾವೇರಿ ಭಾಗ) ಗೋಣಿ ಬಸವೇಶ್ವರ (ಹರಪನಹಳ್ಳಿ ಭಾಗ) ಕೊಟ್ಟೂರೇಶ್ವರರು (ಕೂಡ್ಲಿಗಿ ಭಾಗ), ತಿಪ್ಪೇರುದ್ರಸ್ವಾಮಿ (ಜಗಳೂರು ಭಾಗ) ಬಂದೇ ನವಾಬ ಶಿಶುನಾಳ ಷರೀಫ್ ಸಿದ್ಧಾರೂಡ, ಮಡಿವಾಳಪ್ಪ, ಒಕ್ಕಪ್ರಭು, ಕರಿಯಪ್ಪ ಶಿವಂತಿಗಿ, ಚನ್ನಬಸವಸ್ವಾಮಿ, ಶರಣಬಸವೇಶ್ವರ, ಚಂದಾಹುಸೇನ, ಗವಿಸಿದ್ದೇಶ್ವರ (ಕೊಪ್ಪಳ), ಮೌನೇಶ್ವರ

(ತಂತಿಣಿ), ತಿಮರೇಶ್ವರ, ಬಲವಂತ ಶರಣರು ಮಡಿವಾಳೇಶ್ವರ (ನರಗುಂದ, ಗದಗ) ಖಲಿಫತಲ್‌ರ ಹಮಾನ್, ಹುಸೇನ.ಸಾಅಲಿ, ಮಹದೇವತಾತ್, ರಾಜಾಬಾಗಸವಾರ್, ಮರಿಬಸವಲಿಂಗ ತಾತ, ಕರಿಬ್ವಸವೇಶ್ವರ, ವೀರಪ್ಪಜ್ಜ (ಕೋಡಿ ಕೊಪ್ಪ) ತಂಗಪ್ಪ (ಬೆಟಗೇರಿ) ಮಹಂತಸ್ವಾಮಿ (ಮುಳಗುಂದ), ಹಾಲಸ್ವಾಮಿ (ರಾಂಪುರ), ಚನ್ನವಸವೇಶ್ವರ (ಗುಬ್ಬಿ), ಸಿದ್ದಲಿಂಗೇಶ್ವರ (ಎಡೆಯೂರು) ಮುಂತಾದ ಸಂಖ್ಯ ಮಹಿಮರ ಜಾತ್ರೆ, ಉರುಪು ನಡೆಯುವುದು ಒಂದು ವಿಧವಾದರೆ, ಪೌರಾಣಿಕ ಮತ್ತು ಆದಿಯ ಸಂಸ್ಕೃತಿಗೆ ಸೇರಿದ ದೈವಗಳಾದ ಹನುಮಂತ (ಆಂಜನೇಯ) ವೀರಭದ್ರ ಬಸವ (ನಂದ) ವಿರೂಪಾಕ್ಷ, ತೀರ್ಥಂಕರ, ನರಸಿಂಹ, ಈಶ್ವರ, ಮಲ್ಲಿಕಾರ್ಜುನ, ಮೈಲಾರ ಬನಶಂಕರಿ, ಎಲ್ಲಮ್ಮ ದುರಗಮ್ಮ, ಜನಾರ್ಧನ, ಚನ್ನಕೇಶವ, ರಂಗಸ್ವಾಮಿ, ಗೋಪಾಲಕೃಷ್ಣ ಸೋಮೇಶ್ವರ, ಪಂಪಾವತಿ ಚೌಡಮ್ಮ, ಕಾಳಮ್ಮ ಗಂಗಾಧರ, ಹರಿಹರ, ವೆಂಕಟರಮಣ, ಮಹಾಬಲೇಶ್ವರ, ಅನ್ನಪೂರ್ಣೇಶ್ವರಿ, ರೇಣುಕ, ಚಾಮುಂಡಿ, ಮೂಕಾಂಬಿಕಾ, ಪದ್ಮಾವತಿ, ಶ್ರೀಕಂಠೇಶ್ವರ, ಬೇಟೆರಾಯ, ಭೀಮಲಿಂಗೇಶ್ವರ, ಮೊದಲಾದವುಗಳ ಜಾತ್ರೆಗಳು ಇನ್ನೊಂದು ಗುಂಪಿನವಾಗುತ್ತವೆ. ಇವಲ್ಲದೇ ಜಾತ್ರೆಗಳನ್ನೇ ಹೋಲುವ ಉತ್ಸುವ ಕೋಲ, ನೇಮ, ಅಗಲ್, ಮುಂತಾದವು ಆ ಭಾಗದಲ್ಲಿ ವಿಪುಲವಾಗಿವೆ.

ಒಂದು ನಿರ್ಧಿಷ್ಟವಾದ ಪ್ರದೇಶದಲ್ಲಿ ವಾಸ ಮಾಡುವ ಜನ ಸಮುದಾಯವನ್ನು ಜನಪದ ಎಂದು ವಿಧ್ವಾಂಸರು ಕರೆಯುತ್ತಾರೆ. ಜನಪದ ಎಂದರೆ ಗುಂಪು ಎಂದರ್ಥ, ಕವಿರಾಜ ಮಾರ್ಗ ಎಂಬ ಪ್ರಥಮ ಉಪಲಬ್ಧ ಕನ್ನಡ ಗ್ರಂಥದಲ್ಲಿ ಕರ್ನಾಟಕ ಪ್ರದೇಶದಲ್ಲಿ ವಾಸಿಸುವ ಜನವರ್ಗವನ್ನು ಜನಪದ ಎಂದು ಕರೆಯಲಾಗಿದೆ. ಇಂಥ ಜನಪದ ವಾಸ ಮಾಡುವ ಜಾಗ ಹಳ್ಳಿಯಾಗಿರಬಹುದು, ಇಲ್ಲವೆ ಪಟ್ಟಣವಾಗಿರಬಹುದು. ಅವರೆಲ್ಲ ಕಲಿತವರಾಗಿರಬಹುದು ಇಲ್ಲವೆ ಕಲಿಯದಿರಬಹುದು. ಆದರೆ ಅವರೆಲ್ಲಾ ಒಂದು ಭಾಷೆಯ ಮೂಲಕವೋ ಒಂದು ಧರ್ಮದ ಮೂಲಕವೊ ಒಂದು ಸಂಸ್ಕೃತಿಯ ಮೂಲಕವೊ ಪರಸ್ಪರ ಸಂಬಂಧಿತರಾಗಿರುತ್ತಾರೆ. ಹೀಗಾಗಿ ಅವರೆಲ್ಲಾ ಒಂದು ಭಾವನೆಯಲ್ಲಿ ಬದುಕುತ್ತಿದ್ದಾರೆ. ಬದುಕುತ್ತಾ, ತಮ್ಮದೆ ಆದ ವರ್ತನೆ, ಕ್ರಿಯೆಗಳನ್ನು ಅಳವಡಿಸಿಕೊಳ್ಳುತ್ತಾರೆ. ಹರ್ಸ್‌ಕೋವಿಟ್ಸ್ ಎಂಬ ವಿಧ್ವಾಂಸ ಇಂಥ ವರ್ತನಾ ಕ್ರಿಯೆಗಳನ್ನು ಸಂಸ್ಕೃತಿ ಎಂದು ಕರೆಯುತ್ತಾನೆ. ಅವನ ಪ್ರಕಾರ ಜನರ ಜೀವನ ವಿಧಾನವೇ ಸಂಸ್ಕೃತಿ ಇದು ಮೊದ ಮೊದಲು ಜನಪದ ಸಂಸ್ಕೃತಿ ಎಂಬ ಹೆಸರಿನಿಂದ ಗುರುತಿಸಲ್ಪಡುತ್ತದೆ. ಅನಂತರ ವಿಕಾಸವಾಗುತ್ತಾ ಹೊಸ ಹೊಸ ತಿರುವುಗಳನ್ನು ಪಡೆಯುತ್ತದೆ.

ಮನುಷ್ಯನ ವರ್ತನೆ ಎಂದಾಗ ಅದು ಅಂತರಂಗಕ್ಕೆ ಸಂಬಂಧಪಟ್ಟಿರುತ್ತದೆ. ಕ್ರಿಯೆ ಎಂದಾಗ ಅವನ ದೇಹಶಕ್ತಿಯನ್ನು ಉಪಯೋಗಿಸಿ ಮಾಡುವಂತಹ ಬಾಹ್ಯ ರೂಪದ ಶ್ರಮವಾಗುತ್ತದೆ. ಈ ಅಂತರಂಗ ಮತ್ತು ಬಹಿರಂಗದ ವರ್ತನೆ, ಕ್ರಿಯೆಗಳು ಸಂಸ್ಕೃತಿಯನ್ನು ರೂಪಿಸುತ್ತ, ಹಿಗ್ಗಿಸುತ್ತ ಬರುತ್ತವೆ. ಆದ್ದರಿಂದ ಮನುಷ್ಯ ಎಂಬುವವನು ಎಲ್ಲೆಲ್ಲಿ ಇದ್ದಾನೋ, ಅಲ್ಲೆಲ್ಲ ಸಂಸ್ಕೃತಿ ಇದ್ದೇ ಇರುತ್ತದೆ.

ಸಂಸ್ಕೃತಿ ಪದವನ್ನು ಇಂಗ್ಲಿಷಿನಲ್ಲಿ ಎಂಬ ಪದಕ್ಕೆ ಸಂವಾದಿಯಾಗಿ ಬಳಸುತ್ತಿದ್ದೇವೆ. ಈ ಕಲ್ಚರ್ ಶಬ್ದ ಲ್ಯಾಟಿನ ಮೂಲದ್ದು, ಕಲ್ಟುಸ್ ಎಂಬ ಶಬ್ಧಕ್ಕೆ ಲ್ಯಾಟಿನ್ ಭಾಷೆಯಲ್ಲಿ ವ್ಯವಸಾಯ ಮಾಡು, ಪರಿಷ್ಕರಿಸು, ಪೂಜೆ, ಇತ್ಯಾದಿ ಅರ್ಥಗಳಿವೆ. ಈ ಶಬ್ದದಿಂದ ಜರ್ಮನ್ ಭಾಷೆ ಎಂಬ ಶಬ್ದ ರೂಪಿಸಿಕೊಂಡ ಮೇಲೆ ಇಂಗ್ಲಿಷ್ ಭಾಷೆ ಕೂಡ ಕಲ್ಚರ್ ಎಂಬ ರೂಪವನ್ನು ಸಾಧಿಸಿ ಚಲಾವಣೆಗೆ ತಂದಿತು. ಪ್ರಸಿದ್ಧ ಮಾನವ ಶಾಸ್ತ್ರಜ್ಞ ಇ.ಬಿ.ಟೈಲರ್ ಮೊದಲಿಗೆ ಕಲ್ಚರ್ ಎಂಬ ಪದಕ್ಕೆ ಸಮಗ್ರವಾದ ವ್ಯಾಖ್ಯಾನವನ್ನು ನೀಡಿ ಜಗತ್ಪ್ರಸಿದ್ಧವಾಗುವಂತೆ ಮಾಡಿದ. ಮನುಷ್ಯನ ಜ್ಞಾನ, ನಂಬಿಕೆ, ಕಲೆ, ನೀತಿ, ಕಾನೂನು, ಸಂಪ್ರದಾಯಗಳಲ್ಲದೆ ಅವನು ಸಮಾಜದ ಸದಸ್ಯನಾಗಿ ರೂಪುಗೊಳ್ಳುತ್ತಿರುತ್ತವೆ ಎಂದು ಟೈಲರ್ ವ್ಯಾಖ್ಯಾನಿಸಿದ.

ಜಗತ್ತಿನಾದ್ಯಂತ ಒಂದೇ ಸಂಸ್ಕೃತಿ ಇಲ್ಲ. ಇರಲು ಸಾಧ್ಯವೂ ಇಲ್ಲ. ಅನೇಕ ಸಂಸ್ಕೃತಿಗಳಲ್ಲಿ ಕೆಲವು ಸಾಮ್ಯಗಳು ಕಂಡುಬಂದರೂ ಬಹಳಷ್ಟು ಸಂದರ್ಭಗಳಲ್ಲಿ ಅವುಗಳಲ್ಲಿ ವೈವಿಧ್ಯತೆಯೇ ಕಂಡುಬರುತ್ತದೆ. ಗೂಬೆ ಕೂಗಿದ್ದು ಭಾರತೀಯರಿಗೆ ಅಪಶಕುನವಾದರೆ, ಪಾಶ್ಚಾತ್ಯ ದೇಶಗಳಲ್ಲಿ ಗೂಬೆ ಬುದ್ಧಿವಂತಿಕೆಗೆ ಸಂಕೇತವಾಗಿ ಮೆಚ್ಚುಗೆಯ ಪಕ್ಷಿಯಾಗಿದೆ. ಹಚ್ಚೆ ಹಾಕಿಸಿಕೊಳ್ಳುವುದು ಭಾರತೀಯರಲ್ಲಿ ಒಂದು ತೆರನಾಗಿದ್ದರೆ, ಚೀನಿಯರಲ್ಲಿ, ಜಪಾನಿಯರಲ್ಲಿ ಬೇರೆ ತೆರನಾಗಿದೆ. ಜಪಾನಿಯರು, ಎಸ್ಕಿಮೋಗಳು ಹಸಿಯ ಮೀನನ್ನು ಹಾಗೆಯೇ ತಿನ್ನುತ್ತಾರೆ. ಆದ್ದರಿಂದ ಸಂಸ್ಕೃತಿಗಳಲ್ಲಿ ಒಂದು ಕನಿಷ್ಟ, ಒಂದು ಶ್ರೇಷ್ಟ ಎಂಬ ತಾರತಮ್ಯ ಮಾಡಬಾರದು. ಆರ್ಥಿಕವಾಗಿ ಸಾಮಾಜಿಕವಾಗಿ ಮುಂದುವರೆದ ದೇಶ ಅಥವಾ ಜನಾಂಗಗಳವರು ಸಾಮಾನ್ಯವಾಗಿ ತಮ್ಮ ಸಂಸ್ಕೃತಿಯೇ ಶ್ರೇಷ್ಟ ಎಂಬ ಮೇಲುರಿಮೆ ಉಳ್ಳವರಾಗಿರುತ್ತಾರೆ. ಅಂದರೆ ಸಂಸ್ಕೃತಿಯ ನಿರಂತರ ಮುಂದುವರಿಕೆಗೆ ಹಾಗೂ ಬದಲಾವಣೆಗೆ ಸಾಮಾಜಿಕ, ಆರ್ಥಿಕ ಅಂಶಗಳೂ ಕಾರಣವಾಗಿರುವುದರಿಂದ ಸಂಸ್ಕೃತಿ ಬರೀ ಅಂತರಂಗಕ್ಕೆ ಮಾತ್ರ ಮೀಸಲಾದದ್ದು ಎಂಬ ವಾದ ಅಷ್ಟೇನೂ ಸಮಂಜಸವಾಗಲಾರದು.

ಜಾನಪದಕ್ಕಿಂತ ಭಿನ್ನ ರೀತಿ ಇರುವುದನ್ನು ಶಿಷ್ಟ ಎಂದು ಕರೆಯುತ್ತಾರೆ. ಈ ಶಿಷ್ಟ ಸಂಸ್ಕೃತಿ ಎನ್ನುವುದು ಸಾಮಾಜಿಕ ಆರ್ಥಿಕವಾಗಿ ಮುಂದುರಿದವರ ನಗರ ಪ್ರದೇಶಗಳಲ್ಲಿರುವವರ ಪ್ರಮುಖವಾಗಿ ವಿದ್ಯಾವಂತರ ಸಾಂಸ್ಕೃತಿಕ ಸ್ವರೂಪ ಎಂದು ಕರೆಯಬಹುದು. ಇದಕ್ಕೆ ವಿರುದ್ಧವಾಗಿ ಸಮಾಜದ ಕೆಳಸ್ತರದ, ಅನಾಗರಿಕವಾದ ಕೊಳೆಗೇರಿ ಹಳ್ಳಿಗಳಲ್ಲಿ ಬದುಕುತ್ತಿರುವವರ ಸಂಸ್ಕೃತಿಯನ್ನು ಜನಪದ ಸಂಸ್ಕೃತಿ ಎಂದು ಕರೆಯಲಾಗುತ್ತಿದೆ. ಆದರೆ, ಭಾರತದಂತಹ ಬಹುಜಾತಿಗಳಿರುವ ದೇಶದಲ್ಲಿ ಹಳ್ಳಿಗಳಲ್ಲಿ ನಾಗರೀಕರು, ನಗರಗಳಲ್ಲಿ ಅನಾಗರಿಕರು ಇರುತ್ತಾರೆ. ಆದ್ದರಿಂದ ಹಳ್ಳಿಗಳಲ್ಲಿರಲಿ, ಪಟ್ಟಣಗಳಲ್ಲಿರಲಿ ಸಾಮಾಜಿಕವಾಗಿ ತುಂಬ ಮೇಲು ಸ್ತರದ ಆರ್ಥಿಕವಾಗಿ ಶ್ರೀಮಂತವಾದ ವಿದ್ಯಾವಂತ ವರ್ಗವನ್ನು ಶಿಷ್ಟ ಎಂದೂ ಅವರಿಗಿಂತ ಕೆಳಸ್ತರದಲ್ಲಿದ್ದು, ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದಿರುವವರನ್ನು ಜನಪದರೆಂದು ಅಧ್ಯಯನದ ದೃಷ್ಟಿಯಿಂದ ಕರೆಯಲಾಗಿದೆ.

ಈ ವ್ಯತ್ಯಾಸವನ್ನು ಮಾಡಿಕೊಂಡ ಉದ್ದೇಶವೆಂದರೆ, ನಮ್ಮ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭದಲ್ಲಿ ಕೆಲವು ಜಾತಿಗಳು ವಿದ್ಯೆ, ವಿಜ್ಞಾನ, ನಾಗರಿಕತೆಯ ಎಲ್ಲ ಸೌಲಭ್ಯ ಪಡೆದುಕೊಂಡು ಅವರದ್ದೇ ಆದ ಪ್ರಪಂಚದಲ್ಲಿದ್ದು ಅವರು ಬದುಕುತ್ತಿರುವುದನ್ನು ಮಾತ್ರ ಸಂಸ್ಕೃತಿ ಎಂದು ಕರೆಯುವ ವಾಡಿಕೆಯನ್ನು ಹೋಗಲಾಡಿಸಬೇಕಾಗಿರುವುದರಿಂದ, ಇವರಿಗಿಂತ ಭಿನ್ನವಾದ ಪರಿಸರ ಮತ್ತು ಪರಿಸ್ಥಿತಿಗಳಲ್ಲಿ ಬದುಕುತ್ತಿರುವವರ ಸಂಸ್ಕೃತಿಯನ್ನು ಮುಂದುವರೆದವರು ಸಂಸ್ಕೃತಿ ಎಂದು ಒಪ್ಪಲು ತಯಾರಿಲ್ಲ. ಆದರೆ ಹಿಂದೆ ನೋಡಿದಂತೆ ಸಂಸ್ಕೃತಿಯಲ್ಲಿ ಯಾವುದೂ ಮೇಲೂ ಅಲ್ಲ, ಕೀಳೂ ಅಲ್ಲ. ಆದರೆ ತಿಳಿದೋ ತಿಳಿಯದೆಯೋ, ಜಾತಿ ವ್ಯವಸ್ಥೆಯಲ್ಲಿ ಮೇಲು ಕೀಳು ಎಂಬ ತಾರತಮ್ಯವಿದೆ. ಜಾತಿ ಸಮಾಜಗಳ ಅಂಗವಾದ ಸಂಸ್ಕೃತಿಯಲ್ಲೂ ಮೇಲು ಕೀಳು ಎಂಬ ಭಾವನೆ ಕೆಲಸ ಮಾಡುತ್ತಲೇ ಇರುತ್ತದೆ. ಅಂದರೆ, ಸಾಹಿತ್ಯ ಕಲೆ ಸಂಪ್ರದಾಯಗಳಲ್ಲಿ ನಮ್ಮದು ಮಾತ್ರ ಶ್ರೇಷ್ಟ ಎಂಬ ವ್ಯಸನಗಳ ಪರಿಸರದಲ್ಲೇ ಸಾಂಸ್ಕೃತಿಕವಾಗಿ ಕನಿಷ್ಟರಾದವರ ಸಾಹಿತ್ಯ, ಸಂಗೀತ, ಕಲೆ, ಸಂಪ್ರದಾಯ ಎಲ್ಲವೂ ಜೀವಂತವಾಗಿವೆ. ಇಂಥ ಸಾಹಿತ್ಯ, ಸಂಗೀತ, ಕಲೆಗಳು ಜನಪದ ಸಂಸ್ಕೃತಿಯನ್ನು ರೂಪಿಸಿದೆ.

'ಕವಿರಾಜಮಾರ್ಗ' ಎಂಬ ಕೃತಿಯನ್ನು ಬರೆದ ಕವಿ ಕನ್ನಡ ಜನಪದರನ್ನು ಕುರಿತು "ಆ ನಾಡವರ್ಗಳ್ ಚದುರರ್, ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್" ಎಂದು ಹೇಳುತ್ತಾನೆ. ಇಲ್ಲಿನ ಜನಪದರು ಅಕ್ಷರಾಭ್ಯಾಸ ವಿದ್ಯೆ ಕಲಿಯದಿದ್ದರೂ ಬಾಯಿಂದ ಬಾಯಿಗೆ ತಲೆಮಾರಿನಿಂದ ತಲೆಮಾರಿಗೆ ಸಾಹಿತ್ಯ ಸಂಸ್ಕೃತಿಯನ್ನು ವರ್ಗಾಯಿಸುತ್ತಿದ್ದರು ಎಂದು

ಅರ್ಥ ಮಾಡಿಕೊಳ್ಳಬೇಕು. ಅಂದರೆ ಜನಪದ ಸಂಸ್ಕೃತಿಯ ಪ್ರಮುಖ ಲಕ್ಷಣವಾದ ಮೌಖಿಕ ಪರಂಪರೆಯನ್ನು ಕವಿರಾಜಮಾರ್ಗಕಾರ ಇಲ್ಲಿ ವಿಶ್ಲೇಷಿಸುತ್ತಿದ್ದಾನೆ. ಪರಂಪರೆ ಎಂಬುದು ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿಯೇ ಪ್ರಸಾರವಾಗುವಂಥದ್ದು. ಲಿಪಿಯಿಲ್ಲದ ಭಾಷೆಗಳು, ಅಂತಹ ಭಾಷೆಗಳಿರುವ ಸಮಾಜಗಳಿಗೆ ಸಂಸ್ಕೃತಿ ಮುಂದುವರಿಕೆಗೆ ಇರುವ ಸಾಧನವೆಂದರೆ ಮೌಖಿಕ ಪರಂಪರೆ ಮಾತ್ರ. ಲಿಖಿತ ಪರಂಪರೆ ಇರುವ ಸಮಾಜ, ದೇಶಗಳಲ್ಲಿಯೂ ಸಂಸ್ಕೃತಿಯ ಬಹಳಷ್ಟು ಅಂಶಗಳು ಮೌಖಿಕವಾಗಿಯೇ ಪ್ರಸಾರವಾಗುತ್ತಿರುತ್ತವೆ. ಸಾಹಿತ್ಯ, ಸಂಗೀತ ನಾಟ್ಯ, ಚಿತ್ರ ಮುಂತಾದ ಕೆಲವು ನಿರ್ಧಿಷ್ಟ ಕ್ಷೇತ್ರಗಳಲ್ಲಿ ಸಂಸ್ಕೃತಿ ಲಿಖಿತ ರೂಪದಲ್ಲಿ ಮುಂದುವರೆದರೂ ನಂಬಿಕೆಗಳ ಕ್ಷೇತ್ರದಲ್ಲಿ ಲಿಪಿಬದ್ಧ ಸಮಾಜಗಳಲ್ಲೂ ಸಂಸ್ಕೃತಿ ಮೌಖಿಕವಾಗಿಯೇ ಪ್ರಸಾರವಾಗುತ್ತಿರುತ್ತದೆ. ಮೌಖಿಕ ಪರಂಪರೆಯಲ್ಲಿರುವುದು ಮಾತ್ರ ಜನಪದ ಸಂಸ್ಕೃತಿ, ಉಳಿದದ್ದುಅಲ್ಲ ಎಂಬ ತೀರ್ಮಾನಕ್ಕಾಗಲಿ ಲಿಖಿತ ಪರಂಪರೆಯಲ್ಲಿರುವುದು ಮಾತ್ರ ಶ್ರೇಷ್ಠ ಸಂಸ್ಕೃತಿ ಎಂಬ ಅತಿರೇಖದ ಅಭಿಪ್ರಾಯಗಳಿಗಾಗಲೀ ನಾವು ಬರಬೇಕಾಗಿಲ್ಲ. ಜನಸಮುದಾಯಗಳಿಗೆ ಹುಟ್ಟಿದ ಕೂಡಲೇ ಭಾಷೆ ಎಂಬುದೇನೂ ಇರಲಿಲ್ಲ. ನಿಧಾನವಾಗಿ ಆ ಸಮುದಾಯಗಳು ಪ್ರಕೃತಿಯ ಬದಲಾವಣೆಯ ಜೊತೆ ಹೆಜ್ಜೆ ಹಾಕುತ್ತಾ ಬಂದ ಯಾವುದೋ ಕಾಲಘಟ್ಟದಲ್ಲಿ ಲಿಪಿ ಅವಿಷ್ಕಾರವಾಗಿದೆ. ಭಾಷೆ ರೂಪುಗೊಳ್ಳದ ಹಿಂದಿನ ಹಂತದಲ್ಲೂ ಸಂಸ್ಕೃತಿ ಇದ್ದು, ಭಾಷೆ ರೂಪುಗೊಂಡ ಮೇಲೆ ಸಣ್ಣಪುಟ್ಟ ಬದಲಾವಣೆಗಳೊಡನೆ ಮುಂದುವರೆದು ನಂತರ ಲಿಪಿ ದೊರಕೊಂಡ ಮೇಲೂ ಅದಕ್ಕನುಗುಣವಾಗಿ ಮುಂದುವರೆಯುತ್ತಿರುತ್ತದೆ. ಭಾಷೆ ಮತ್ತು ಲಿಪಿ ಇದ್ದರೆ ಮಾತ್ರ ಸಂಸ್ಕೃತಿ ಇರುತ್ತದೆ ಎಂಬ ಅಭಿಪ್ರಾಯ ಅಷ್ಟೇನೂ ಸಮಂಜಸವಲ್ಲ. ಈ ಹಿನ್ನೆಲೆಯಲಿ ಕನ್ನಡ ಜನಪದಕ್ಕೆ ಈ ಎರಡೂ ಪರಂಪರೆಗಳಿದ್ದು, ಅವುಗಳ ಮೂಲಕ ಜನಪದ ಸಂಸ್ಕೃತಿ ತಲೆಮಾರಿನಿಂದ ತಲೆಮಾರಿಗೆ ಮುಂದುವರೆಯುತ್ತಾ ಬಂದಿದೆ.

"In an oral tradition everything is Folklore" ಎಂಬ ಗಾದೆ ಮಾತಿನಂತೆ ಚರ್ಚಿಸಬಹುದು. ಲಿಪಿ ಇಲ್ಲದ ಭಾಷಾ ಸಮುದಾಯಗಳನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಇಂಥ ಅಭಿಪ್ರಾಯಗಳು ರೂಪುಗೊಳ್ಳುತ್ತವೆ. ಲಿಪಿ ಇರುವ ಭಾಷೆ ಹಾಗೂ ಸಮುದಾಯಗಳಲ್ಲೂ ಮೌಖಿಕ ಪರಂಪರೆಗಳು ಇರುತ್ತವೆ. ಅವು ಒಂದೇ ಪರಂಪರೆಯೂ ಆಗಿರುವುದಿಲ್ಲ. ಭಾಷೆಯೊಳಗೆ ಇರುವ ಉಪಭಾಷೆಗಳು, ಸಂಸ್ಕೃತಿಯೊಳಗೆ ಇರುವ ಉಪಸಂಸ್ಕೃತಿಗಳು ಲಿಪಿ ಹಾಗೂ ನಾಗರೀಕತೆಗಳಿಂದ ನಾಶಗೊಂಡಿರುವುದಿಲ್ಲ. ಲಿಪಿ ಹಾಗೂ ನಾಗರೀಕತೆಗಳಿಂದ ನಾಶಗೊಂಡಿರುವುದಿಲ್ಲ. ಭಾರತದಂತಹ ಬಹುಭಾಷೆ ಬಹುಧರ್ಮ ಬಹುಜಾತಿಗಳಿರುವ ದೇಶಗಳಲ್ಲಿ ಎಲ್ಲವೂ ಏಕಮಾದರಿಗಳಲ್ಲಿ ವಿಕಾಸವಾಗಿರುವುದಿಲ್ಲ. ಭಾರತಕ್ಕೆ ಹೋಲಿಸಿ

ನೋಡಿದಾಗ ಕರ್ನಾಟಕ, ಒರಿಸ್ಸಾ, ಕೇರಳ ಮುಂತಾದವು ಉಪಸಂಸ್ಕೃತಿಯ ರಾಜ್ಯಗಳಾಗುತ್ತವೆ. ಕರ್ನಾಟಕವನ್ನು ಪ್ರಧಾನವಾಗಿ ಪರಿಗಣಿಸಿದಾಗ ಅದರೊಳಗಿರುವ ಪ್ರಾದೇಶಿಕ ಭಿನ್ನತೆಗಳು ಕರ್ನಾಟಕದ ಉಪಸಂಸ್ಕೃತಿಗಳಾಗುತ್ತವೆ. ಜಿಲ್ಲೆಗೊಂದರಂತಿರುವ ವೈಶಿಷ್ಟ್ಯಗಳು ಉಪಸಂಸ್ಕೃತಿಯ ಉಪಧಾರೆಗಳಾಗುತ್ತವೆ. ಹಳ್ಳಿಗಳಲ್ಲಿ ಎಲ್ಲರೂ ಅಶಿಕ್ಷಿತರು, ಅನಾಗರಿಕರೇ ಇರುವುದಿಲ್ಲ. ಅಲ್ಲಿ ನಾಗರಿಕತೆ ಕಡೆ ಚಲಿಸುತ್ತಿರುವ ಮೇಲ್ವರ್ಗ ಮತ್ತು ಮೇಲ್ಮಧ್ಯಮ ವರ್ಗಗಳಿದ್ದು, ಅವರು ಅಶಿಕ್ಷಿತರ, ಕೆಳಸ್ತರದ ವ್ಯಕ್ತಿಗಳಿಗಿಂತ ಭಿನ್ನವಾದ ವರ್ತನೆ ಹೊಂದಿರುತ್ತಾರೆ. ಹಾಗೆಯೇ ನಗರಗಳಲ್ಲಿ ಎಲ್ಲರೂ ವಿದ್ಯಾವಂತರಾಗಿ ಎಲ್ಲಾ ವರ್ತನೆಗಳೂ ನಾಗರಿಕವಾಗೇನೂ ಇರುವುದಿಲ್ಲ, ಬೆಂಗಳೂರು, ಬೊಂಬಾಯಿ, ಕಲ್ಕತ್ತ, ದೆಹಲಿಗಳಂತಹ ನಗರಗಳ ಮಧ್ಯದಲ್ಲೇ ಕೊಳಗೇರಿಗಳಿರುತ್ತವೆ. ಆರ್ಥಿಕವಾಗಿ ಖಚಿತ ಆದಾಯವಿಲ್ಲದ ದಿನಗೂಲಿ ನೌಕರವರ್ಗ ಮೇಲ್ವರ್ಗ ಮತ್ತು ಕೆಳವರ್ಗಗಳ ಮಧ್ಯೆ ತನ್ನದೇ ಆದ ಜೀವನಾರ್ಥ ಹಾಗೂ ಸ್ವಭಾವಗಳನ್ನು ಪರಕಟಪಡಿಸಿರುತ್ತದೆ. ಹಳ್ಳಿಗಳಲ್ಲಿ ಜಾತಿ ವ್ಯವಸ್ಥೆಯಿಂದಾದ ಉಪಸಂಸ್ಕೃತಿಗಳು ನಗರಗಳಲ್ಲಿ ಉದ್ಯೋಗ ಸಂಬಂಧಿಯಾದ ವರ್ಗಗಳಿಂದ ರೂಪುಗೊಳ್ಳುತ್ತಾ ಹೋಗುವುದರಿಂದ ಜನಪದ ಸಂಸ್ಕೃತಿ ಕೇವಲ ಹಳ್ಳಿಗಳ ಆಶಿಕ್ಷಿತ, ಅವಿದ್ಯಾವಂತರಿಗೆ ಹೇಳುವಂಥದ್ದಾಗಿರುವುದಿಲ್ಲ. ನಗರಗಳಲ್ಲಿ ಹಳ್ಳಿಗಳು, ಹಳ್ಳಿಗಳ ಒಳಗೆ ನಗರ ವರ್ತನೆಗಳು ಪರಸ್ಪರ ಮಿಳಿತವಾಗಿರುತ್ತವೆ. ಬೆಂಗಳೂರಿನಲ್ಲಿ ಕಡ್ಲೆಕಾಯಿ ಪರಿಷೆ, ಅಣ್ಣಮ್ಮದೇವಿ ಉತ್ಸವ, ಕರಗ ಸಂಪ್ರದಾಯಗಳಿರುವಂತೆಯೇ ಹಳ್ಳಿಗಳಲ್ಲಿ ಅತ್ಯಂತ ಶಿಷ್ಟ ಸಂಪ್ರದಾಯಗಳಾದ ಸತ್ಯಾನಾರಾಯಣ ವ್ರತ, ವರಲಕ್ಷ್ಮಿ ವ್ರತಗಳು ಈಗ ಸಾಮಾನ್ಯವಾಗಿ ಕಂಡುಬರುತ್ತವೆ.

ಹಾಗೆಯೇ ಶಾಬ್ದಿಕ ಕಲೆಗಳಾದ ಸಾಹಿತ್ಯ, ಗೀತೆ, ಕತೆ, ಮುಂತಾದವು ಗಾದೆ, ಒಗಟು, ರಸಪ್ರಸಂಗ ಮುಂತಾದವು ಹಳ್ಳಿಯ ಆವರಣ ದಾಟಿ ನಾಗರಿಕವಾದ ಪೇಟೆ ಪಟ್ಟಣಗಳಲ್ಲೂ ಕಂಡು ಬರುತ್ತಿವೆ. ನಾಗರಿಕ ಸಾಧನಗಳಾದ ರೈಲು, ಬಸ್ಸು, ರೇಡಿಯೋ, ಟಿ.ವಿ. ಮತ್ತಿತರ ಗೃಹೋಪಯೋಗಿ ವಸ್ತುಗಳ ಬಗ್ಗೆ ಅದರದೇ ಐತಿಹ್ಯ, ನುಡಿಗಟ್ಟು, ಯಂತ್ರ ಭಾಷೆ ಮತ್ತು ಮಿಥ್‌ಗಳು ಸೃಷ್ಟಿಯಾಗುತ್ತವೆ. ವಿದ್ಯಾರ್ಥಿ ಸಮುದಾಯ, ವರ್ತಕ, ವಕೀಲ, ವೈದ್ಯರ ಸಮುದಾಯಗಳು ತಮ್ಮದೇ ಆದ ನಡವಳಿಕೆ, ಭಾಷೆ ಹಾಗೂ ವರ್ತನೆಗಳನ್ನು ಪ್ರಕಟಪಡಿಸುತ್ತವೆ. ಅಂದರೆ ಒಂದಕ್ಕಿಂತ ಹೆಚ್ಚು ಸಮಾನವಾದ ಅಂಶಗಳನ್ನು ಆ ಇಡೀ ಸಮುದಾಯ ಸ್ವೀಕರಿಸಿದ್ದರೆ ಅದು ಜನಪದ ವರ್ತನೆ ಎನಿಸಿಕೊಳ್ಳುತ್ತದೆ. ಅಂದರೆ, ಆ ಇಡೀ ಗುಂಪಿಗೆಲ್ಲ ಬೇಕಾಗುವಂತಹ ಒಂದು ಸಾಮುದಾಯಿಕ ವರ್ತನೆ ಆ ಗುಂಪಿನವರನ್ನೆಲ್ಲ ಒಂದು ಮಾಡುತ್ತದೆ. ಕಾರ್ಮಿಕ ವರ್ಗದ 'ಎಲ್ಲಿಯವರೆಗೆ ಹೋರಾಟ, ಗೆಲ್ಲುವವರೆಗೆ ಹೋರಾಟ' ಎಂಬ ಘೋಷಣೆ ಆ ವರ್ಗದಿಂದ

ಬಂದ ಸಾಹಿತ್ಯಿಕ ಬಗೆಯದ್ದಾಗಿರುತ್ತದೆ. ವಕೀಲರ ಹಾಗೂ ಪೋಲೀಸರ ಕಾನೂನು ನಡುವಳಿಕೆಗಳಿಗೆ ಸಂಬಂಧಿಸಿದ ವಾಕ್ಯಗಳು, ನುಡಿಗಟ್ಟುಗಳು ಆ ವರ್ಗದಿಂದ ಬಂದ ಭಾಷಿಕ ಬಗೆಯದ್ದಾಗಿರುತ್ತದೆ. ವಿದ್ಯಾರ್ಥಿಗಳ ಗೋಡೆ ಬರಹಗಳು, ಡೆಸ್ಕ್ ಬರಹಗಳು, ಮರೆಗುಳಿ ಪ್ರೊಫೆಸರ್‌ಗಳ ಬಗ್ಗೆ ರೂಪಿಸಿಕೊಳ್ಳುವ ಮಿಥ್‌ಗಳು ಈ ವರ್ಗದ ರಸ ಪ್ರಸಂಗಗಳಾಗಿ ಮುಂದಿನ ವಿದ್ಯಾರ್ಥಿ ತಲೆಮಾರಿಗೆ ವರ್ಗಾವಣೆಯಾಗುತ್ತವೆ. ಹಳ್ಳಿಯ ಒಬ್ಬ ರೈತ ತನ್ನ ಬಂಡಿ ಹತ್ತುವಾಗ ಮೂಕೀ ಹಾಗೂ ನೊಗ ಮತ್ತು ಎತ್ತುಗಳಿಗೆ ನಮಸ್ಕಾರ ಮಾಡಿ ಹತ್ತುವಂತೆ ನಗರದ ಒಬ್ಬ ಡ್ರೈವರ್ ತನ್ನ ಬಸ್ಸು ಅಥವಾ ಕಾರು ಏರಿದಾಗ ಸ್ಟೀರಿಂಗ್ ಚಕ್ರಕ್ಕೆ ನಮಸ್ಕಾರ ಮಾಡುತ್ತಾನೆ. ಇಲ್ಲಿ ವಸ್ತು ಮತ್ತು ಪ್ರದೇಶ ಬೇರೆ ಬೇರೆಯಾದರೂ ಗಾಡಿಯ ಚಾಲಕ ಮತ್ತು ಬಸ್ಸಿನ ಚಾಲಕರ ಮನೋಭಾವನೆ ಒಂದೇ ಆಗಿದೆ. ಇದನ್ನು ನಗರ ಜಾನಪದ ಎನ್ನುವ ಪರಿಕಲ್ಪನೆಯ ಒಳಗೆ ಅಧ್ಯಯನ ಮಾಡಲಾಗುತ್ತದೆ. ಹಾಗೆಯೇ ಲಿಖಿತ ರೂಪದ ಪ್ರಸಂಗಗಳನ್ನು (ಉದಾ: ಕೈಲಾಸಂ ಜೋಕುಗಳು, ಬೀಚಿ ನಗೆಹನಿಗಳು, ಖುಷ್‌ವಂತ್ ಸಿಂಗ್ ಜೋಕ್‌ಗಳು) ಲಿಖಿತ ಜಾನಪದ ಪರಿಕಲ್ಪನೆಯಲ್ಲಿ ಸೇರಿಸಲಾಗುತ್ತದೆ. ವಿದ್ಯಾರ್ಥಿಗಳ ಆಟೋಗ್ರಾಫ್ ಚಟುವಟಿಕೆಗಳು, ಸ್ಟ್ಯಾಂಪ್ ವೆಂಡರ್ ಮತ್ತು ಬರಹಗಾರರ ಪ್ರಾಮಿಸರಿ ನೋಟ್‌ಗಳು, ಕಛೇರಿ ಮಾದರಿ ಪತ್ರಗಳು, ನೋಂದಣಿ ಪತ್ರಗಳು, ಜೋಯಿಸರಲಗ್ನಪತ್ರಿಕೆ ಮಾದರಿಗಳು, ವಕೀಲರ ನ್ಯಾಯಾಲಯದ ಬರಹಗಳ ಹೊರ ರೂಪ ಒಂದೇ ಆಗಿದ್ದು, ವಿಷಯ ಬೇರೆ ಬೇರೆಯಾಗಿರುತ್ತದೆ. ಇಂಥವುಗಳೆಲ್ಲೆಲ್ಲಾ ಒಂದು ಸಿದ್ಧ ಮಾದರಿಯನ್ನೇ ಬಳಸಲಾಗುತ್ತದೆ. ಇದೊಂದು ರೀತಿ ಸಾಂಪ್ರದಾಯಿಕ ಬರವಣಿಗೆ ಮಾದರಿಯಾದ್ದರಿಂದ ಇಂಥದ್ದನ್ನೆಲ್ಲಾ 'ಲಿಖಿತ ಜಾನಪದ' ಎಂದು ಕರೆಯಲಾಗುತ್ತದೆ. ಇಂಗ್ಲಿಷ್‌ನವರು ಭಾರತಕ್ಕೆ ಬರುವ ಮೊದಲು ಮೌಖಿಕ ಪರಂಪರೆಯಲ್ಲಿದ್ದ ನಮ್ಮ ಜನಪದ ಸಂಸ್ಕೃತಿ, ಇಂಗ್ಲಿಷ್ ನವರು ಬಂದನಂತರ ಲಿಖಿತ ಪರಂಪರೆಯಲ್ಲೂ ಮುಂದುವರೆಯಿತು. ಇತಿಹಾಸ ಹೇಗೆ ಮೌಖಿಕ ಪರಂಪರೆಯಿಂದ ಇಂಗ್ಲಿಷರು ಬಂದ ಮೇಲೆ ಬರವಣಿಗೆಗೆ ಇಳಿಯಿತೋ ಹಾಗೆ ಆಧುನೀಕರಣ ಹಾಗೂ ನಗರೀಕರಣದಿಂದ ಜನಪದ ಸಂಸ್ಕೃತಿ ಲಿಖಿತ ಪರಂಪರೆಯಲ್ಲೂ ಅಭಿವ್ಯಕ್ತಿ ಪಡೆಯಿತು.

ಜನಪದ ಸಂಸ್ಕೃತಿ ವ್ಯಕ್ತಿ ವೈಶಿಷ್ಟ್ಯವನ್ನು ಪ್ರತಿಪಾದಿಸಿದ ಎಲ್ಲರಲ್ಲೂ ಕಂಡುಬರುತ್ತದೆ. ಪ್ರಯೋಗಶೀಲತೆ, ಅತಿಯಾದ ವೈಯಕ್ತಿಕ ಇರುವಾಗ ಅದು ವ್ಯಕ್ತಿಗತ ಸಂಸ್ಕೃತಿಯಾಗುತ್ತದೆಯೇ ಹೊರತು ಸಾಮುದಾಯಿಕ ಸ್ಪರ್ಶ ಪಡೆದಿರುವುದಿಲ್ಲ. ಒಂದು ಅಥವಾ ಅದಕ್ಕಿಂತ ಹೆಚ್ಚು ಸಮಾನ ಅಂಶಾಗಳನ್ನೆಲ್ಲಾ ಇಡೀ ಸಮುದಾಯ ಸ್ವೀಕರಿಸಿದಾಗ ಅದು ಸಾಮುದಾಯಿಕ ವರ್ತನೆಯಿಂದಾಗಿ ಒಂದು ಗುಂಪು ಸಂಸ್ಕೃತಿ ನಿರ್ಮಾಣವಾಗಿ ಅದು ಜನಪದ ಸಂಸ್ಕೃತಿ ಎನ್ನಿಸಿಕೊಳ್ಳುತ್ತದೆ. ಇಂಥ

ಸಂಸ್ಕೃತಿಯನ್ನು ಯಾರಾದರೂ ಅತಿಕ್ರಮಿಸಲು ಬಂದರೆ ತಡೆಯೊಡ್ಡುವ ಅಥವಾ ತನ್ನ ಸದಸ್ಯನೊಬ್ಬ ಅದನ್ನು ಮೀರಲು ಪ್ರಯತ್ನಿಸಿದಾಗ ಅದನ್ನು ಪ್ರತಿಬಂಧಿಸುವ ಗುಣ ಲಕ್ಷಣಗಳನ್ನು ಇದರೊಳಗೆ ಕಾಣಬಹುದು. ಇಡೀ ಸಮುದಾಯದವರೆಲ್ಲಾ ಒಂದು ದೇವರನ್ನು ಆರಾಧಿಸುವ ಗುಂಪೆಲ್ಲ, ಅದು ಅಂಗೀಕಾರ ಮುದ್ರೆ ನೀಡಿರುವಂಥ ಆಚರಣೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರವೃತ್ತಿ ಈ ಸಂಸ್ಕೃತಿಯ ಸದಸ್ಯರಲ್ಲಿ ಕಂಡುಬರುತ್ತದೆ. ಧಾರ್ಮಿಕ ನಡುವಳಿಕೆಗಳಲ್ಲಿ, ಕಟ್ಟುಪಾಡುಗಳಿದ್ದರೂ, ಜೀವವಿರೋಧಿ ಅಂಶಗಳು ಕಡಿಮೆ ಇರುತ್ತವೆ. ಆ ಸಂಸ್ಕೃತಿಯನ್ನು ಒಪ್ಪಿಕೊಂಡಿರುವ ಸಮಾಜದಲ್ಲಿ ಒಂದು ಬಗೆಯ ಆಂತರಿಕ ಶಿಸ್ತನ್ನು ಜನಪದ ಸಂಸ್ಕೃತಿ ಕಾಪಾಡಿಕೊಂಡು ಅದನ್ನು ಮುಂದಿನ ತಲೆಮಾರಿಗೂ ವರ್ಗಾಯಿಸಿಕೊಂಡು ಬಂದಿರುತ್ತದೆ. ಆರ್ಥಿಕವಾಗಿ ಸ್ವಾವಲಂಬಿಯಾಗಿರುವಂಥ ಪ್ರತಿಷ್ಠಿತ ವ್ಯಕ್ತಿಯೂ ಜನಪದ ಸಂಸ್ಕೃತಿಯ ಈ ಆಂತರಿಕ ಶಿಸ್ತನ್ನು ಉಲ್ಲಂಘಿಸುವಂತಹ ಸಾಹಸಕ್ಕೆ ಕೈ ಹಾಕುವುದಿಲ್ಲ. ಒಂದು ಸಮುದಾಯದ ಜನರಲ್ಲಿ ಒಂದು ಒಗ್ಗಟ್ಟನ್ನು, ಶಿಸ್ತನ್ನು ಜೊತೆಗೆ ಪರಸ್ಪರ ಸಹಕಾರವನ್ನು ಬೆಸೆಯುವಂತಹ ಕೆಲಸವನ್ನು ಜನಪದ ಪದ್ಧತಿ ಗುಪ್ತಗಾಮಿನಿಯಾಗಿ ಮಾಡುತ್ತಿರುತ್ತದೆ. ಸಂಸ್ಕೃತಿಯ ಬಗ್ಗೆ ಅಧಿಕಾರ ವಾಣಿಯಿಂದ ನುಡಿಯಬಲ್ಲ ಎ.ಎಲ್.ಕ್ರೋಬರ್ ಅವರು ಜನಪದ ಸಂಸ್ಕೃತಿಯ ಬಗ್ಗೆ ಹೀಗೆ ಅಭಿಪ್ರಾಯ ಪಡುತ್ತಾರೆ.

ಜನಪದ ಸಂಸ್ಕೃತಿಯಲ್ಲಿ ಸರಳತೆ ಮತ್ತು ಮುಗ್ಧತೆ ಪ್ರಮುಖ ಲಕ್ಷಣಗಳಾಗಿ ಕಂಡುಬರುತ್ತವೆ. ಯಾವುದೇ ರೀತಿಯ ಮೋಸ, ಕಪಟ ಸುಳ್ಳು ಮುಂತಾದ ಆಧುನೀಕರಣದ ಫಲಗಳು ಇಲ್ಲಿರುವುದಿಲ್ಲ. ಹಣದ ದಾಹ ಕಾಣಿಸುವುದಿಲ್ಲ. ಆಡಿದ ಮಾತು ಉಳಿಸಿಕೊಳ್ಳುವ ನೈತಿಕತೆ ಇಲ್ಲಿ ಪ್ರಧಾನವಾಗಿ ಕಂಡುಬರುತ್ತದೆ. ಮಾತು ಆಡಿದರೆ ಮುಗಿಯಿತು. ಮುತ್ತು ಒಡೆದರೆ ಹೋಯಿತು ಎಂಬ ಗಾದೆ ಮತಿನಂತೆ ನಡವಳಿಕೆಯಲ್ಲಿ ನೈತಿಕತೆ ಉಳಿಸಿಕೊಳ್ಳಲು ಸೆಣಸಾಡುತ್ತಾರೆ. ಪ್ರಾಣ ಬೇಕಾದರೆ ಬಿಡುತ್ತಾರೆ. ಆಡಿದ ಮಾತನ್ನು ತಪ್ಪಿಸುವುದಿಲ್ಲ. ಇಂಥ ಜೀವನ ಶುದ್ಧತೆ ಜನಪದ ಸಂಸ್ಕೃತಿಯ ಭಾಗವಾಗಿರುತ್ತದೆ.

ಜನಪದ ಸಂಸ್ಕೃತಿಯಲ್ಲಿ ಸಂಪ್ರದಾಯ ನಿಷ್ಠೆ, ದೈವಭಕ್ತಿ ನೆಲದ ಮೋಹ ಪ್ರಧಾನ ಲಕ್ಷಣಗಳಾಗಿ ಕಂಡುಬರುತ್ತವೆ. ವೇದ, ಉಪನಿಷತ್, ಪುರಾಣ ಮುಂತಾದ ಲಿಖಿತ ಪರಿಕರಗಳಿಲ್ಲದೆ ಆಚರಣೆಯಲ್ಲಿ ಉಳಿಸಿಕೊಂಡು ಬಂದಂತಹ ನಂಬಿಕೆ ಸಂಪ್ರದಾಯಗಳು ಜನಪದ ಸಂಸ್ಕೃತಿಯ ಬೇರುಗಳಾಗಿರುತ್ತವೆ. ಇದರಿಂದ ವ್ಯಕ್ತಿಗತವಾದ ನೈತಿಕತೆ ಎಲ್ಲರಲ್ಲೂ ಕಡ್ಡಾಯವಾಗಿ ಕಂಡುಬರುವ ಅಂಶವಾಗಿರುತ್ತದೆ. ನೈತಿಕತೆ ಎಂಬುದು ಶಿಷ್ಟ

ಸಂಸ್ಕೃತಿಗಳಲ್ಲಿರುವಂತೆ ಯಾಂತ್ರಿಕವಾದ ಮಡಿವಂತಿಕೆಯಾಗಿರುವುದಿಲ್ಲ. ತೋರಿಕೆಯ ದೈವಾರಾಧನೆಯೂ ಆಗಿರುವುದಿಲ್ಲ. ತನ್ನಿಂದ ಇನ್ನೊಬ್ಬರಿಗೆ ತೊಂದರೆಯಾಗಬಾರದೆಂಬ ಜೀವನಶ್ರದ್ಧೆ ಅಂತಹ ನೈತಿಕತೆಯಲ್ಲಿರುತ್ತದೆ. ದುಡಿದು ತಿನ್ನುವ, ಹಂಚಿ ಉಣ್ಣುವ ಸಮಾನತಾ ತತ್ವದಿಂದ ಇಂತಹ ನೈತಿಕತೆ ರೂಪುಗೊಂಡಿರುತ್ತದೆ. ಕೆಲವು ಸಮಯದಲ್ಲಿ ಸಂಪ್ರದಾಯಗಳು ಯಾಂತ್ರಿಕವಾಗಿದ್ದರೂ ನೈತಿಕತೆಯ ಅಂಶಗಳು ಸಮಾಜಮುಖಿಯಾಗಿ ಚಲನಶೀಲ ಗುಣ ಪಡೆದಿರುತ್ತವೆ. ಕೆಲವು ಸಮಯ ಸಂಪ್ರದಾಯ, ಆಚರಣೆ, ನಂಬಿಕೆ, ನೈತಿಕತೆಗಳಿಗೆ ವ್ಯತ್ಯಾಸವೇ ಗೊತ್ತಾಗುತ್ತದೆ. ಒಂದರೊಳಗೊಂದು ಅಂತರ್ಗತವಾಗಿರುತ್ತವೆ. ಪ್ರತಿಯೊಂದು ಕ್ರಿಯಾ ಚಟುವಟಿಕೆ ಆರಂಭಿಸುವಾಗಲೂ ಆ ಕ್ರಿಯೆ ಅಥವಾ ಕೆಲಸದ ಮೇಲಿನ ವಿಶ್ವಾಸ ಅವರನ್ನು ಸಂಪೂರ್ಣ ಮಾಡುತ್ತದೆ. ಆ ಕೆಲಸವನ್ನು ಯಾಂತ್ರಿಕ ಮನಸ್ಸಿನಿಂದ ಒತ್ತಾಯಪೂರ್ವಕವಾಗಿ ಮಾಡುವುದಿಲ್ಲ. ಶ್ರದ್ಧೆ ಮತ್ತು ತನ್ಮಯತೆಯಿಂದ ಆ ಕೆಲಸದಲ್ಲಿ ತೊಡಾಗಿಸಿಕೊಂಡು ಪ್ರೀತಿಯಿಂದ ಮಾಡುವುದರಿಂದಲೇ ಕೆಲಸವೇ ದೇವರಾಗಿ ಕಾಣುತ್ತದೆ. ಸಂಪ್ರದಾಯ ನಿಷ್ಟೆ, ಮತ್ತು ಕಾಯಕ ನಿಷ್ಠೆಗಳ ಮೂಲಕ ಅವರ ದೈವಭಕ್ತಿ ಪ್ರಕಟವಾಗುತ್ತಿರುತ್ತದೆ. ಎದ್ದಾಗ, ಕುಳಿತಾಗ, ಕೆಲಸಕ್ಕೆ ಕೈ ಹಚ್ಚಿದಾಗ, ಕೆಲಸ ಬಿಟ್ಟಾಗ, ಮಲಗುವಾಗ, ತನ್ನ ನಂಬಿಕೆಯ ದೇವರನ್ನು ಅರೆಗಳಿಗೆ ಧ್ಯಾನಿಸುವುದು ಒಂದು ಮುಖ್ಯ ಚಟುವಟಿಕೆಯಾಗಿ ಕಂಡುಬರುತ್ತದೆ.

ಭಾಗಾದಿ ಬಲಕಿರಲಿ ವೈರಿ ತಾ ಎಡಕಿರಲಿ
ಭಾಡಿ ನಿನಮನಿಯ ಇದಿರಿರಲಿ–ಬಲಭೀಮ
ದೇವ ನನಮ್ಯಾಲ ದಯವಿರಲಿ
(ಕನ್ನಡದ ಜಾನಪದ ಕೋಶ, ೧೯೯೮, ನಾಗೇಗೌಡ ಹೆಚ್.ಎ., ಕರ್ನಾಟಕ ಜಾನಪದ ಪರಿಷತ್, ಬೆಂಗಳೂರು)

ಎಂದು ಭಾವಿಸಿ ಎಲ್ಲರಲ್ಲೂ ಸಮಾನತಾ ಭಾವ ತೋರಿಸುವಂತಹ ವಿಶಾಲ ಮನಸ್ಸು ಜನಪದ ಸಂಸ್ಕೃತಿಯಲ್ಲಿದೆ.

ಮಂದ್ಯೇನ ಕೊಟ್ಟೀತು ಮನವೇನ ತಣಿದೀತು
ಮುಂಜಾನದಾನ ಗಿರಿಮಲ್ಲಕೊಟ್ಟರೆ
ಮನಿತುಂಬಿ ನಮ್ಮ ಮನ ತುಂಬಿ. (ಅದೇ ಪು.೪೭)

ಎಂಬ ನಿರ್ಲಿಪ್ತ ಮನೋಭಾವದಿಂದ ಕಾಯಕನಿಷ್ಟೆ ತೋರಿಸಲಾಗುತ್ತದೆ. ಒಂದು ಬಗೆಯ ಸಮತೋಲನ ದೃಷ್ಟಿ ಸುಖ ಬಂದಾಗ ಉಬ್ಬದೇ, ದುಃಖ ಬಂದಾಗ ಕುಗ್ಗದೆ ಬದುಕನ್ನು ಎದುರಿಸುವ ಛಲವನ್ನು ಇಂತಹ ದೃಷ್ಟಿಕೋನದಿಂದ ಪಡೆದುಕೊಳ್ಳಲಾಗುತ್ತದೆ.

ಜನಪದ ಸಂಸ್ಕೃತಿಯ ಕಾಯಕನಿಷ್ಠೆಗೂ ನೆಲದ ಮೋಹಕ್ಕೂ ಸಂಬಂಧವಿದೆ. ನೆಲದ ಮೋಹ ಎಂಬುದು ಭೂಮಿ ಸಂಪಾದಿಸುವ ದುರಾಸೆಯದಲ್ಲ. ನೆಲದ ಬಗ್ಗೆ ಪ್ರೀತಿ, ಗೌರವ, ಮಣ್ಣಿನ ಸಂಬಂಧವನ್ನು ಕಾಯಕದ ಮೂಲಕ ಏರ್ಪಡಿಸಿಕೊಳ್ಳುವ ಅರ್ಹತಾ ಮನೋಭಾವ ನೆಲದ ಮೋಹದಲ್ಲಿದೆ. ಹುಟ್ಟಿನಿಂದ ಸಾವಿನವರೆಗೂ ಜನಪದ ಸಂಸ್ಕೃತಿಯಲ್ಲಿ ಮಣ್ಣು ಪ್ರಧಾನ ಪಾತ್ರ ವಹಿಸುತ್ತದೆ. ಮಣ್ಣಿನಿಂದ ಅನ್ನ ಬೆಳೆಯಲಾಗುತ್ತದೆ. ಕೆಮ್ಮಣ್ಣಿನಿಂದ ಮನೆಗಳ ನಿರ್ಮಾಣ ಮಾಡಿಕೊಳ್ಳುವುದಲ್ಲದೆ, ಮನೆಗಳ ಅಲಂಕಾರಕ್ಕೂ ಅದು ಬಳಕೆಯಾಗುತ್ತದೆ. ಬಸುರಿ ಹೆಂಗಸರು ಕೆಮ್ಮಣ್ಣು ತಿಂದು 'ಕೆಂಪನ್ನ' ಮಕ್ಕಳನ್ನು ಹಡೆಯುವ ಕನಸ್ಸು ಕಾಣುತ್ತಾರೆ. ಹೊಲಗದ್ದೆ ತೋಟ ಬಯಲುಗಳಲ್ಲಿ ದುಡಿವ ರೈತರು ಮುಖ ತೊಳೆದ ಮೇಲೆ ಮೃತ್ತಿಕೆ (ಮರ್ತಿಗೆ)ಯನ್ನು ವಿಭೂತಿಯಂತೆ ಹಣೆಗೆ ಹಚ್ಚಿಕೊಳ್ಳುತ್ತಾರೆ.

ಮಣ್ಣು ಮತ್ತು ದುಡಿಮೆ, ಜನಪದ ಸಂಸ್ಕೃತಿಯ ಜೀವಾಳ, ಇದರ ಜೊತೆಗೆ ಜಲ, ಗಾಳಿ, ಆಕಾಶ, ಗಿಡಬಳ್ಳಿ, ಬೆಟ್ಟಗುಡ್ಡಗಳ ಜೊತೆ ಉಸಿರಾಡುತ್ತಲೇ ಬೆಳೆದ ಜನಪದರ ವರ್ತನೆಗಳು ಈ ಎಲ್ಲವನ್ನೂ ಆತ್ಮೀಯವಾಗಿ ಕಂಡು ಗೌರವಿಸುತ್ತವೆ. ನೆಲ, ಜಲ, ಪ್ರಕೃತಿಯಿಂದ ಆಚೆಗಿರುವ ಸಂಗತಿಗಳ ಬಗ್ಗೆ ಜನಪದ ಸಂಸ್ಕೃತಿಯಲ್ಲಿ ಅಭಿವ್ಯಕ್ತಿಗಳಿರುವುದಿಲ್ಲ. ಕಣ್ಣಿಗೆ ಕಾಣುವ, ವಾಸ್ತವಿಕ ನೋಟದ ತರ್ಕಬದ್ಧ ಸಂಗತಿಗಳ ಬಗ್ಗೆ ಮಾತ್ರ ಇಲ್ಲಿ ಅಭಿವ್ಯಕ್ತಿ ಸಾಧ್ಯವಾಗಿರುತ್ತದೆ. ಎದ್ದಕೂಡಲೇ ಜನಪದರು ನೆನೆದುಕೊಳ್ಳೂವುದು ಕಣ್ಣಿಗೆ ಕಾಣದ ಯಾವುದೋ ಕಲ್ಪನೆಯ ದೇವರನ್ನಲ್ಲ, ಭೂಮಿತಾಯನ್ನು ಮಾತ್ರ.

ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ ಭೂಮಿ ತಾಯ
ಎದ್ದೊಂದು ಗಳಿಗೇ ನೆನೆದೇನ(ಅದೇ ಪು.೪೮)

ಪಂಡಿತ ಕವಿಗಳು ತಮ್ಮ ಕಾವ್ಯಗಳಲ್ಲಿ ಭೂರಮೆಯನ್ನಗಿಯೋ ವಿಷಯವನಿತೆ–ಯನ್ನಾಗಿಯೋ ಭೂಮಿಯನ್ನು ಕಂಡಿದ್ದರೆ ಜನಪದ ಸಂಸ್ಕೃತಿಯಲ್ಲಿ ಏಕೆ ಎಳ್ಳು ಜೀರಿಗೆ ಬೆಳೆಯುವ ಭೂಮಿ ತಾಯಿಯಾಗಿದ್ದಾಳೆ. ಭೂಮಿಯಲ್ಲಿ ಬೆಳೆ ತೆಗೆಯುವ ಕ್ರಿಯೆ, ಅದರಲ್ಲಿರುವ ಶ್ರಮ, ಆ ಶ್ರಮಕ್ಕೆ ತಕ್ಕ ಪ್ರತಿಫಲ ಕೊಡುವ ಭೂಮಿಯ ಬಗ್ಗೆ ಗೌರವ ಎಲ್ಲಾ ಮಿಳಿತವಾಗಿ ದುಡಿಮೆಯ ಸಂಸ್ಕೃತಿ ಇಲ್ಲಿ ಅಭಿವ್ಯಕ್ತಗೊಂಡಿದೆ. ಭೂಮಿ ಸಾಧಾರಣ ಮಣ್ಣು ಎಂದು ಭಾವಿಸಿಲ್ಲ. ಜೀವ ಪೋಷಕವಾದ, ಚೈತನ್ಯದಾಯಕ ಸಂಗಾತಿಯಾಗಿ ಮಾನವೀಕರಣಗೊಂಡಿದೆ.

ಹಳ್ಳಿಯ ಜೀವನದ ಸುಖ ದುಃಖಗಳು ಭೂಮಿ ಆಕಾಶಗಳನ್ನೇ ಅವಲಂಬಿಸಿವೆ. ಮಣ್ಣು ರೈತನ ದೃಷ್ಟಿಯಲ್ಲಿ ಕೀಳಾದ ವಸ್ತುವಲ್ಲ. ಅದು ಸಂಪತ್ತನ್ನು ಸೃಷ್ಟಿಸುವ ಶಕ್ತಿ ರೈತನಿಗೆ ಮಣ್ಣು ಮತ್ತು ಹೊನ್ನಿನಲ್ಲಿ ಬೇಧ ಕಾಣಿಸುವುದಿಲ್ಲ.

ಮಣ್ಣನ್ನು ನಂಬಿ ಮಣ್ಣಿಂದ ಬದುಕೇನು
ಮಣ್ಣಿನಗೆ ಮುಂದೆ ಹೊನ್ನು-ಅಣ್ಣಯ್ಯ
ಮಣ್ಣೆ ಲೋಕ್ದಲ್ಲಿ ಬೆಲೆಯಾದ್ದು. (ಅದೇ ಪು.೫೭)

ವಿಜ್ಞಾನ ತಂತ್ರಜ್ಞಾನಗಳಲ್ಲಿ ಏನೆಲ್ಲಾ ಸಾಧನೆಯಾಗಿದ್ದರೂ ಅನ್ನವನ್ನು ಮಣ್ಣು ಕೊಡಬೇಕೆ ಹೊರತು ಯಂತ್ರಗಳು ಕೊಡಲಾರವು. ಅನ್ನವಿಲ್ಲದಿದ್ದರೆ ಆ ಯಂತ್ರಗಳ ಸೃಷ್ಟಿಯೂ ಸಾಧ್ಯವಿಲ್ಲದ್ದರಿಂದ ಮಣ್ಣೇ ಲೋಕದಲ್ಲಿ ಬೆಲೆಯಾದ್ದು ಎಂಬ ತಾತ್ವಿಕ ಚಿಂತನೆ ಮೂಡಿ ಬಂದಿದೆ.

ಬೇಸಾಯಕ್ಕೆ ಅತಿ ಮುಖ್ಯವಾದದ್ದು ನೆಲ ಮತ್ತು ನೀರು, ಮಳೆ ಬರದಿದ್ದರೆ, ಬಿತ್ತನೆ ಇಲ್ಲ. ಬಿತ್ತಿದ ಮೇಲೆ ಮಳೆ ಬರದಿದ್ದರೆ ಪೈರು ಸೀದು ಹೋಗುತ್ತದೆ. ಕಾಲಕಾಲಕ್ಕೆ ಮಳೆ ಬಂದು ಬೆಳೆ ಕೈಗೆ ಬಂದಾಗ ದುಡಿಯುವಂತಹ ಶ್ರಮಜೀವಿಗಳಿಗೆ ಹಬ್ಬ ಹರಿದಿನಗಳು, ಮದುವೆ ಮುಂಜಿಗಳು, ಜಾತ್ರೆ ಸಡಗರಗಳು ಕಾಣಿಸಿಕೊಳ್ಳುತ್ತವೆ. ಸುತ್ತಮುತ್ತಲಿನ ಪ್ರಕೃತಿ ವ್ಯಾಪಾರದಿಂದ ಆತ ಮಳೆಯ ಭವಿಷ್ಯವನ್ನು ನುಡಿಯುತ್ತಾನೆ.

ಒಟ್ಟಾರೆಯಾಗಿ ಜನಪದ ಸಂಸ್ಕೃತಿ ಜನಗಳಿಗೆ ಭರವಸೆ ಮೂಡಿಸುವಂತಹ ಆತ್ಮ ವಿಶ್ವಾಸ ಹೆಚ್ಚು ಮಾಡುವಂತಹ ಅಂಶಗಳನ್ನು ತನ್ನಲ್ಲಿ ಹುದುಗಿಸಿಕೊಂಡಿದೆ. ಈ ಎರಡು ಸಂಸ್ಕೃತಿಗಳ ಆಚರಣೆಗಳ ವೈಶಿಷ್ಟ್ಯವೆಂದರೆ ಸಾಮೂಹಿಕ ಹಿತಾಸಕ್ತಿ ಕಾಪಾಡುವಂಥದ್ದು. ನಮ್ಮೂರಿಗೆ ಮಳೆ ಬರಲಿ ಎಂಬ ಆಶಾಯವಿರುತ್ತದೆಯೇ ಹೊರತು ನನ್ನ ಹೊಲಕ್ಕೆ ಮಳೆ ಸುರಿಯಲಿ ಎಂದು ಯಾರೂ ಕೇಳುವುದಿಲ್ಲ. ಒಂದು ಆಚರಣೆ ಎನ್ನಬೇಕಾದರೆ ಹತ್ತಾರು ಜನರು ಒಟ್ಟಾಗಿ ಸೇರಿ ಯಾವುದಾದರೂ ಒಂದು ಕ್ರಿಯೆಯನ್ನು ಒಂದು ಖಚಿತವಾದ ಉದ್ದೇಶಕ್ಕೆ ಮಾಡಿದರೆ ಅದು ಆಚರಣೆ ಎನ್ನಿಸಿಕೊಳ್ಳುತ್ತದೆ. ಆಚರಣೆಯ ಅರ್ಥವನ್ನು ಸಂಕ್ಷೇಪವಾಗಿ ಹೇಳಬೇಕೆಂದರೆ, ಒಬ್ಬನ ಇಷ್ಟಾರ್ಥವು ಹಲವಾರು ಜನರಲ್ಲಿ ಹರಡಿ, ಅದು ಸಾಮೂಹಿಕ ಬೇಡಿಕೆಯಾಗಿ ಒಂದು ಅನುಷ್ಠಾನ ರೂಪದಲ್ಲಿ ಪ್ರಕಟವಾದರೆ ಅದು ಆಚರಣೆ ಎನಿಸಿಕೊಳ್ಳುತ್ತದೆ. ಏಕೆಂದರೆ ಬುಡಕಟ್ಟು ಜನಾಂಗಗಳಿಗೆ, ಜನಪದರಿಗೆ ಜೀವನ ಸಾಮೂಹಿಕವಾದದ್ದು, ಅಖಂಡವಾದದ್ದು. ಅದನ್ನು ಬಿಡಿಬಿಡಿಯಾಗಿ ನೋಡುವ ಆಲೋಚನಾ ಕ್ರಮವನ್ನೇ ಅವರು ಕಲಿತಿಲ್ಲ. ಆದಿಮ ಪಂಗಡಗಳು ಜೊತೆಯಾಗಿಕೆಲಸ ಮಾಡುತ್ತಿದ್ದವು. ಜೊತೆಯಾಗಿ ಆಲೋಚನೆ, ಆರಾಧನೆ ಮಾಡುತ್ತಿದ್ದವು. ಆಕಾಶದಲ್ಲಿಮೋಡಗಳು ಖಂಡಿತಾ ಇಲ್ಲ. ಮೋಡದ ಮೇಲೆ ನಮಗೆ ಹಿಡಿತವಿಲ್ಲ ಎಂದು ಆದಿಮ

ಜನಾಂಗಗಳಿಗೆ ಅನ್ನಿಸಿದ್ದರೆ ಎದೆ ಒಡೆದು ಹೋಗುತ್ತಿತ್ತು. ಅದನ್ನು ಹೋಗಲಾಡಿಸಲು ಅವರು ಮನಸ್ಸಿನಲ್ಲಿ ಆಸೆ, ನಂಬಿಕೆಗಳನ್ನು ಜೀವಂತವಾಗಿ ಇರಿಸಬೇಕಾಗಿತ್ತು. ಎದೆಯಲ್ಲಿ ಸಾಹಸ ಛಲಗಳನ್ನು ಉಂಟು ಮಾಡಬೇಕಿತ್ತು. ಜನಪದ ಸಂಸ್ಕೃತಿಯ ನಂಬಿಕೆ, ಆಚರಣೆ ಸಾಮೂಹಿಕ ನೃತ್ಯಗಳು ಮಾತ್ರ ಈ ಕೆಲಸ ಮಾಡುತ್ತಿದ್ದವು. ಮಂತ್ರವಿದ್ಯೆ ಜನಪದ ಸಂಸ್ಕೃತಿಯ ಒಂದು ಭಾಗ. ಈ ಮಂತ್ರ ವಿದ್ಯೆ ಪ್ರಕೃತಿಯ ಜೊತೆ ಹೋರಾಟದ ಭಾವನೆಯನ್ನುಉದ್ದೀಪಿಸುತ್ತದೆ. ಪ್ರಕೃತಿಯನ್ನು ಕೈವಶ ಮಾಡಿಕೊಳ್ಳಲು ಅಗತ್ಯವಾದ ಆತ್ಮ ವಿಶ್ವಾಸವನ್ನು ತುಂಬುತ್ತದೆ. ಆದ್ದರಿಂದ ಜನಪದ ಸಂಸ್ಕೃತಿ ಮತ್ತು ಉಪ ಸಂಸ್ಕೃತಿ ಸಾಮೂಹಿಕವಾದ ಹಿತಾಸಕ್ತಿಗೋಸ್ಕರ ಪ್ರಕೃತಿಯ ಮೇಲೆ ನಡೆಸುವ ಹೋರಾಟವಾಗಿರುತ್ತದೆ. ದಯಾಮಯನಾದ ದೇವನ ಭಿಕ್ಷೆಗಾಗಿರದೆ ಸಮಸ್ಯೆಗಳನ್ನು ಹೋರಾಟದ ಮೂಲಕ, ಹೆಚ್ಚೆಚ್ಚು ಕೆಲಸ ಮಾಡುವುದರ ಮೂಲಕ ಪರಿಹರಿಸಿಕೊಳ್ಳುವ ಮಾರ್ಗೋಪಾಯದ ಜೀವನ ಪದ್ಧತಿಯಾಗಿದೆ.

ಅಧ್ಯಾಯ ೬
ಸಮಾರೋಪ

ಅಧ್ಯಾಯ – ೬

ಸಮಾರೋಪ

ನಕ್ಷೆಯ ಕಲ್ಪನೆಯನ್ನು ಸಂಸ್ಕೃತಿಯ ನೆಲೆಯಿಂದ ನೋಡಿದರೆ, ಪೂರ್ತಿ ಸರಿಯಾಗಿ ಅಲ್ಲದಿದ್ದರೂ, ಹೆಚ್ಚು ಸಮರ್ಪಕವಾಗಿ ನೋಡಲು ಸಾಧ್ಯವಾದೀತು ಎಂಬ ಭರವಸೆಯನ್ನಂತೂ ಈ ಪ್ರಬಂಧ ಹೊಂದಿದೆ. ಏಕೆಂದರೆ ಸಂಸ್ಕೃತಿ ಯಾವೊಂದು ವಿಷಯವನ್ನೂ, ಮನುಷ್ಯ ಬದುಕಿನ ಯಾವೊಂದು ಅಂಗವನ್ನೂ ಹೊರಗಿಟ್ಟು ನೋಡಲಾರದು. ಭಾಷಾವಾರು ವಿಂಗಡಣೆಯಲ್ಲಿ ಕನ್ನಡದ ಹೆಸರಿನಿಂದ ಕರ್ನಾಟಕದ ನಕ್ಷೆ ನಿರ್ಮಾಣವಾಯಿತು. ಆದರೆ ಈ ನಕ್ಷೆಯಾಚೆಗೂ ಕನ್ನಡವಿದೆ ಮತ್ತು ಈ ನಕ್ಷೆಯ ಒಳಗೂ ಕನ್ನಡವಲ್ಲದ ಬೇರೆಯ ಭಾಷೆಗಳಿವೆ. ಈ ಮಾತು ಕನ್ನಡಕ್ಕಷ್ಟೇ ಅಲ್ಲ, ಭಾರತದ ಎಲ್ಲ ಭಾಷೆಗಳಿಗೂ ಅನ್ವಯವಾಗುತ್ತದೆ. ಕನ್ನಡ ಹೆಚ್ಚು ಜನಸಂಖ್ಯೆ ಹೊಂದಿರುವ ಭಾಷೆ ಎಂಬ ಕಾರಣದಿಂದ ಕನ್ನಡದ ಹೆಸರಿನಲ್ಲಿ ಕರ್ನಾಟಕದ ನಕ್ಷೆ ನಿರ್ಮಾಣವಾಯಿತು. ಆದರೆ ಸಂಸ್ಕೃತಿನಿಷ್ಠ ಪರಿಶೀಲನೆಗೆ ಈ ಬಹುಸಂಖ್ಯೆ, ಅಲ್ಪಸಂಖ್ಯೆಗಳ ಹಂಗಿಲ್ಲ. ಅದಕ್ಕೆ ಈ ಭಾಷೆ ಮೇಲು, ಮತ್ತೊಂದು ಕೀಳು ಎಂಬ ತರತಮವಿಲ್ಲ, ಯಾವುದು ಪ್ರಭಾವಿ, ಯಾವುದು ಪ್ರಭಾವಹೀನ ಎಂಬ ರಾಜಕೀಯ ಲೆಕ್ಕಾಚಾರವಿಲ್ಲ. ಕರ್ನಾಟಕದಲ್ಲಿ ಮೂವತ್ತಕ್ಕೂ ಅಧಿಕ ಭಾಷೆ–ಉಪಭಾಷೆಗಳಿರಬಹುದು ಈ ಭಾಷೆಗಳು ಕಾರ್ನಾಟಕದ ಹೊರಗೂ, ದಕ್ಷಿಣ ಬಾರತದಾದ್ಯಂತ ಹರಡಿಕೊಂಡಿವೆ. ಇವನ್ನೆಲ್ಲ ಭಾಷಾವಿಜ್ಞಾನದ ತತ್ವಗಳ ಹಿನ್ನೆಲೆಯಲ್ಲಿ ತೌಲನಿಕವಾಗಿ ಪರಿಶೀಲಿಸಿ, ಕನ್ನಡ ಸಾಹಿತ್ಯಾಧ್ಯಯನದ ನೆರವಿನಿಂದ ಭಾಷಾವಾರು ಕರ್ನಾಟಕದ ಒಂದು ವಿಶಿಷ್ಟ ನಕ್ಷೆಯನ್ನು ಸಿದ್ಧಪಡಿಸಲಾಗುವುದು.

ಕನ್ನಡ ಸಾಹಿತ್ಯವನ್ನು ವಿವೇಚಿಸುವಾಗ ಹಲವು ಸಂಸ್ಕೃತಿಗಳನ್ನು ಪರಿಶೀಲಿಸಬೇಕಾಗುತ್ತದೆ. ಇದನ್ನು ಈ ಹಿಂದಿನ ಸಾಹಿತ್ಯ ಚರಿತ್ರಕಾರರು – ಸಾಹಿತ್ಯದ ವಿದ್ಯಾರ್ಥಿಗಳಿಗೆ ಈಗಾಗಲೇ ತಿಳಿದಿರುವಂತೆ–ಜೈನಯುಗ, ವೀರಶೈವಯುಗ, ವೈಷ್ಣವಯುಗ ಇತ್ಯಾದಿಯಾಗಿ ಪರಿಶೀಲಿಸಿದ್ದಾರೆ. ಸಾಹಿತ್ಯಾಧ್ಯಯನಕ್ಕೆ ಈ ವಿಂಗಡಣೆಗಳ ಭೂರಚನೆಗಳನ್ನು ಕಡೆಗಣಿಸಲಾಗುವುದಿಲ್ಲ. ಉದಾಹರಣೆಗೆ, ಪಂಪನ ಪೂರ್ವಿಕರು ಆಂಧ್ರದ ಈಶಾನ್ಯದಿಕ್ಕಿನಲ್ಲಿ ಕೃಷ್ಣ–ಗೋದಾವರಿ ನದಿಗಳ ನಡುವಿನ ಪೂರ್ವಸಮುದ್ರದ ತೀರಪ್ರದೇಶವಾದ ವೆಂಗಿ ಮಂಡಲದವರು ಎಂದು ಹೇಳುತ್ತಾರೆ. ಈಗ ನಾವು ಕರ್ನಾಟಕ ಆಂಧ್ರಪ್ರದೇಶ ಎಂದು ಪ್ರತ್ಯೇಕ ರಾಜ್ಯಗಳನ್ನಾಗಿ ವಿಂಗಡಿಸಿಕೊಂಡಿರುವಂತೆ ಪಂಪಯುಗವೇನೂ ಪ್ರತ್ಯೇಕಿಸಿಕೊಂಡಿರಲಿಲ್ಲ. ಈ ಐಕ್ಯತೆ ತಮಿಳುನಾಡು, ಮಹಾರಾಷ್ಟ್ರ ಕೇರಳ ಮೊದಲಾದ ಭಿನ್ನ ಸಂಸ್ಕೃತಿಗಳಿಗೂ ಅನ್ವಯಿಸುತ್ತದೆ.

ಕರ್ನಾಟಕ ಹಾಗೂ ಇತರ ಸಂಸ್ಕೃತಿಗಳ ಸಂಬಂಧವನ್ನು ಸಾಹಿತ್ಯ, ಸಾಂಸ್ಕೃತಿಕ ಹಾಗೂ ಧಾರ್ಮಿಕ ನೆಲೆಗಳಲ್ಲಿ ಚಾರಿತ್ರಿಕ ಆಧಾರಗಳ ನೆರವಿನಿಂದ ಗುರುತಿಸುವುದೂ ಈ ಪ್ರಬಂಧದ ಆಶಯವಾಗಿದೆ.

ಮನುಷ್ಯನ ಹುಟ್ಟು ಬೆಳವಣಿಗೆ, ವಿಶ್ವದ ಸೃಷ್ಟಿ, ಮಾನವನ ಜೀವನದ ಆಗುಹೋಗುಗಳು, ಜೀವನದ ಅಂತ್ಯ ಎಲ್ಲವನ್ನೂ ನಿಯಂತ್ರಿಸುವ, ನಿರ್ವಹಿಸುವ ಯಾವುದೋ ಒಂದು ಅದ್ಭುತ ಶಕ್ತಿಯಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಆ ದಿವ್ಯ ಅದ್ಭುತ ಶಕ್ತಿಯೇ ದೇವರೆಂದು ಗುರುತಿಸಲ್ಪಡುತ್ತಾನೆ. ದೇವರ ಇತಿಹಾಸವು ಮಾನವನ ಇತಿಹಾಸದಷ್ಟೇ ಪುರಾತನವಾದುದಾಗಿದೆ. ಮಾನವನ ವಿಕಾಸವಾದಂತೆ ದೇವತಾ ವಿಷಯಗಳಲ್ಲಿಯೂ ಮಾರ್ಪಾಡುಗಳಾಗಿವೆ. ದೇವರು ನಿರಾಕಾರ ನಿರ್ಗುಣನೆಂದು ತಿಳಿದಿದ್ದರೂ ಸಾಮಾನ್ಯವಾಗಿ ಉಪಾಸನೆಗೆ ಅನುಕೂಲವಾಗುವ ದೃಷ್ಟಿಯಿಂದ ಸಗುಣ ಉಪಾಸನೆ ರೂಢಿಗೆ ಬಂದಿದೆ.

ಭಾರತೀಯ ಸಂಸ್ಕೃತಿಯು ದ್ರಾವಿಡ ಮತ್ತು ದೇವತಾ ಪರಂಪರೆಯಾಗಿದೆ. ದ್ರಾವಿಡರದು ಮಾತೃಪ್ರಧಾನ ಕುಟುಂಬವಾಗಿದ್ದು ಸ್ತ್ರೀಗೆ ಪ್ರಧಾನ್ಯತೆಯಿತ್ತು. ಶಿವ ಇವರ ಆರಾದ್ಯ ದೈವವಾಗಿದ್ದ. ಹೀಗಾಗಿ ಶಿವ ಮತ್ತು ಆದಿಶಕ್ತಿ, ಆದಿ ಮಾತೆಯ ಆರಾಧನೆಗಳು ಭಾರತೀಯ ಪರಂಪರೆಯಲ್ಲಿ ಜಾರಿಗೆ ಬಂದವು. ಆರ್ಯರದು ಪುರುಷ ಪ್ರಧಾನ ಕುಟುಂಬ. ಅವರದು ಅಗ್ನಿ ತತ್ವ. ಆರ್ಯರು ಭಾರತದಲ್ಲಿ ತಳ ಊರಿದ ಮೇಲೆ ತಮ್ಮ ದೇವತೆಗಳ ಜೊತೆಗೆ ದ್ರಾವಿಡರ ದೇವತೆಗಳನ್ನೂ ಸ್ವೀಕರಿಸಲೇಬೇಕಾಯಿತು. ಆರ್ಯರು ಶಿವನನ್ನು ರುದ್ರನಲ್ಲಿ ಏಕರೂಪಗೊಳಿಸಿದರು. ನಂತರ ಆರ್ಯರಿಂದ ಅನೇಕ ದೇವತೆಗಳು ಅಸ್ತಿತ್ವಕ್ಕೆ ಬಂದರು. ವರುಣ, ಇಂದ್ರ, ಅಗ್ನಿ, ಸೂರ್ಯ, ಪ್ರಜಾಪತಿ, ವಿಷ್ಣು ಹೀಗೆ ದೇವತಾ ಪರಂಪರೆಯು ಬೆಳೆಯುತ್ತಾ ಹೋಯಿತು. ವೇದ ಕಾಲದಲ್ಲಿ ಸಮುದ್ರ ಮಂಥನದ ವೇಳೆಗೆ ವಿಷ್ಣುವಿನ ಮಹತ್ವ ಹೆಚ್ಚಿತು. ಅವನು ವಿಶ್ವವ್ಯಾಪಿಯಾದ ಅವನ ಆರಾಧನೆ ಹೆಚ್ಚಿ ಅವನು ಜನಪ್ರಿಯನಾದ. ಸ್ವಸ್ತಿಕವು ವಿಷ್ಣುವಿನ ಚಿಹ್ನೆಯಾಗಿದ್ದು ಸಮಸ್ತ ಭುವನದ ಪ್ರತೀಕವಾಗಿದೆ. ಸ್ವಸ್ತಿತ್ವಕ್ಕೆ ನಾಲ್ಕು ಭುಜಗಳಿವೆ. ಈ ಅರ್ಥ ಸೂಚಿಸುವುದಕ್ಕಾಗಿ ವಿಷ್ಣುವೂ ಚತುರ್ಭುಜ ದಾರಿಯಾದ.

ವಿಷ್ಣುವಿನ ಕೈಯಲ್ಲಿಯ ಗದೆ, ಶಂಖ, ಚಕ್ರ, ಕಮಂಗಳು ಒಂದೊಂದರ ಸಂಕೇತಗಳಾಗಿವೆ. ಚಕ್ರವು ಸಂವತ್ಸರ ಮತ್ತು ವಿಶ್ವದ ಗುರುತಾಗಿದ್ದರೆ, ಕಮಲವು ಸೃಷ್ಟಿಯ ಪ್ರತೀಕವಾಗಿದೆ. ಗದೆ ದುಷ್ಟರ ಸಂಹರದ ಮತ್ತು ಶಂಖವು ಜ್ಞಾನದ ಪ್ರತೀಕವಾಗಿದೆ. ಅವನ ಪತ್ನಿ ಲಕ್ಷ್ಮಿಯು ಸಮೃದ್ಧಿಯ ಪ್ರತೀಕವಾಗಿದ್ದಾಳೆ.

ಭಾರತೀಯ ದೇವತಾ ಪರಂಪರೆಯಲ್ಲಿ ಶಿವ, ವಿಷ್ಣು, ಬ್ರಹ್ಮ, ಆದಿಶಕ್ತಿಯರು ಹೆಚ್ಚು ಮಹತ್ವವನ್ನು ಪಡೆದರು. ಇವರಿಂದಲೇ ಉಳಿದ ದೇವತೆಗಳ ಪರಿವಾರ ಬೆಳೆದು ಬಂದಿದೆ. ಕರ್ನಾಟಕ, ಮಹಾರಾಷ್ಟ್ರದ ಪ್ರಧಾನ ದೇವತೆಗಳಾದ ವಿಠಲನೆಂದರೆ ವಿಷ್ಣುವಿನ ಅವತಾರಿ, ಖಂಡೋಬನೆಂದರೆ ಶಿವನ ಅವತಾರಿ, ಮಹಾಲಕ್ಷ್ಮಿಯೆಂದರೆ ಆದಿಮಾತೆ ಆದಿಶಕ್ತಿಯ ರೂಪದಿಂದ ಆವಿರ್ಭವಿಸಿದ್ದಾಳೆ. ಇಂದಿನ ಮಹಾರಾಷ್ಟ್ರದ ಆರಾಧ್ಯ ದೇವತೆಗಳ ಮೂಲದಲ್ಲಿ ಕರ್ನಾಟಕದ ದೇವತೆಗಳಾಗಿರುವುದರಿಂದ ಉಭಯ ಪ್ರದೇಶಗಳಲ್ಲಿ ದೇವತಾ ಸ್ವರೂಪ, ಆರಾಧನೆ, ಉತ್ಸವಗಳಲ್ಲಿ ಸಮಾನತೆ ಕಂಡು ಬರುತ್ತದೆ.

ಪಂಢರಪುರದಲ್ಲಿರುವ ಇಂದಿನ ಮೂರ್ತಿಗೂ ಸಂತರು, ದಾಸರು ವರ್ಣಿಸಿದ ಮೂರ್ತಿಯ ಸ್ವರೂಪಕ್ಕೂ ಸಾಮ್ಯತೆ ಕಂಡು ಬರುವುದಿಲ್ಲ. ಮುಸಲ್ಮಾನರ ಆಕ್ರಮಣದ ಕಾಲದಲ್ಲಿ ಹಲವಾರು ಸಲ ಮೂರ್ತಿಯನ್ನು ಸ್ಥಳಾಂತರಿಸಲಾಗಿದೆ ಎಂಬುದು ಐತಿಹಾಸಿಕ ನೆಲೆಗಳಿಂದ ತಿಳಿದು ಬರುತ್ತದೆ. ಆಕ್ರಮಣಕಾರರ ದಾಳಿಯಿಂದ ಮೂರ್ತಿ ಭಗ್ನಗೊಂಡಿರುವ ಸಾಧ್ಯತೆಗಳೂ ಇವೆ. ಮೂರ್ತಿ ಬದಲಾದ ಮಾತ್ರಕ್ಕೆ ಕ್ಷೇತ್ರದ ಬಗೆಗೆ, ದೇವರ ಬಗೆಗಿರುವ ಶ್ರದ್ಧೆ ಬದಲಾಗುವುದಿಲ್ಲ ಎಂಬುದಕ್ಕೆ ಇಂದಿಗೂ ಲಕ್ಷಗಟ್ಟಲೆ ಭಕ್ತರು ವಾರಿಯ ಜೊತೆಗೆ ಸೇರಿಕೊಂಡು ಪಂಡರಪುರದ ಯಾತ್ರೆ ಮಾಡಿ ಕೇವಲ ದೇವಸ್ಥಾನದ ಕಳಕ ದರ್ಶನ ಮಾಡಿ ಬರುತ್ತಿರುವುದು ಸಾಕ್ಷಿಯಾಗಿದೆ.

ಪ್ರಾಚೀನ ಕಾಲದ ಕನ್ನಡ ಅರಸು ಮನೆತನಗಳು ರಾಜಸತ್ತೆಗಿಂತ ದೇವಸತ್ತೆ ಮಿಗಿಲಾದುದು. ದೇವಸತ್ತೆಯ ಕೃಪೆಯಿದ್ದರೆ ಮಾತ್ರ ರಾಜ್ಯವು ಸಮೃದ್ಧವಾಗಲು ಸಾಧ್ಯ ಎಂದು ನಂಬಿದವರಾಗಿದ್ದರು. ರಾಷ್ಟ್ರಕೂಟರ ಅಮೋಘವರ್ಷನು ಜನರ ಸುಖಕ್ಕಾಗಿ ದೇವಿಗೆ ತನ್ನ ಕಿರು ಬೆರಳನ್ನೇ ಅರ್ಪಿಸಿದ ಎಂಬುದು ಶಾಸನಗಳಿಂದ ತಿಳಿದು ಬರುತ್ತದೆ. ಪ್ರಜೆಗಳ ರಕ್ಷಣೆಗಾಗಿ ತನ್ನ ದೇಹದ ಅವಯವವನ್ನೇ ಕತ್ತರಿಸಿ ದೇವರಿಗೆ ಅರ್ಪಿಸಿರುವ ಘಟನೆಯು ಅರಸನಿಗೆ ಪ್ರಜೆಗಳ ಬಗೆಗಿದ್ದ ಪ್ರೀತಿ, ಕಾಳಜಿಗಳನ್ನು ವ್ಯಕ್ತಗೊಳಿಸುತ್ತದೆ. ಅಂದಿನ ದೊರೆಗಳು ರಾಜ್ಯವನ್ನು ವಿಸ್ತರಿಸುವಾಗ, ವೈರಿಗಳ ಮೇಲೆ ಆಕ್ರಮಣ ಮಾಡುವಾಗ, ರಾಜ್ಯದ ಕಾರ್ಯವನ್ನು ನಿರ್ವಹಿಸುವಾಗ ದೇವಿಯನ್ನು ಪ್ರಾರ್ಥಿಸಿ ಅವಳ ಆಶಿರ್ವಾದ ಪಡೆದ ನಂತರ ಕಾರ್ಯಪ್ರವರ್ತಕರಾಗುತ್ತಿದ್ದರು. ಹೀಗಾಗಿ ದೇವತಾ ಆರಾಧನೆಯು ಅರಗುತ್ತಿಗೆಯಿಂದ ಮಾನ್ಯತೆ ಪಡೆದಿತ್ತು. ದೇವರ ಆರಾಧನೆಗಾಗಿ ಉತ್ಸವಗಳಿಗಾಗಿ ಅರಸರು ಸಾಕಷ್ಟು ದತ್ತಿ ದಾನಗಳನ್ನು ಮಾಡಿದ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುತ್ತವೆ.

ಅರಸರಿಗೆ ದೇವತೆಗಳ ಬಗೆಗಿದ್ದ ಶ್ರದ್ಧೆ ಭಕ್ತಿಯಿಂದ ದೇವತಾರಾಧನೆಗಾಗಿ ಸುಂದರ ಭವ್ಯ ದೇವಾಲಯಗಳು ನಿರ್ಮಾಣವಾದವು. ಶಿಲ್ಪಕಲೆಗೆ ಪ್ರೋತ್ಸಾಹ ದೊರಕಿತು. ಜನರಲ್ಲಿ ದೇವತಾರಾಧನೆಯ ಬಗೆಗೆ ಶ್ರದ್ಧೆ ಆದರಗಳು ವೃದ್ಧಿಸಿದವು. ಧಾರ್ಮಿಕ ಮನೋಭಾವ ಬೆಳೆಯಿತು. ತಮ್ಮ ಧರ್ಮರಕ್ಷಣೆಗಾಗಿ, ದೇಶ ರಕ್ಷಣೆಗಾಗಿ ಹೋರಾಡುವ ಸಾಮರ್ಥ್ಯ ಬೆಳೆಯಿತು. ದೇವತಾ ಸ್ತುತಿಗಾಗಿ, ಆಧ್ಯಾತ್ಮಿಕ ಪ್ರಚಾರಕ್ಕಾಗಿ ಉತ್ತಮ ಸಾಹಿತ್ಯ ರಚನೆಯಾಗತೊಡಗಿತು. ಆಧ್ಯಾತ್ಮಿಕ ತತ್ವಗಳ ಪ್ರಚಾರದಿಂದ ಜನರಲ್ಲಿ ವಿವೇಚನಾ ಶಕ್ತಿ ವೃದ್ಧಿಸಿತು. ವಾರಿಯಂತಹ ವೃತಗಳಿಂದ ಪರೋಪಕಾರ ಬುದ್ಧಿ, ಪರಸ್ಪರ ಸಹಕಾರ ಮನೋಭಾವ, ಪರಸ್ಪರರ ಬಗೆಗೆ ಅದರ ಪ್ರೀತಿ, ವಿಶ್ವಾಸಗಳು ವೃದ್ಧಿಸಿದವು. ದೇವತಾ ಆರಾಧನೆ ಎಂದರೆ ಜನರನ್ನು ಆಜ್ಞಾನದಿಂದ ಜ್ಞಾನದ ಕಡೆಗೆ, ವಿಕಾರದಿಂದ ವಿಚಾರದ ಕಡೆಗೆ, ಪ್ರಕೃತಿಯಿಂದ ಸಂಸ್ಕೃತಿಯಡೆಗೆ, ಅವಿವೇಕದಿಂದ ಅವಿವೇಕದೆಡೆಗೆ, ಚೈತನ್ಯದ ಊರಿಗೆ ಭಕ್ತರನ್ನು ಒಯ್ಯುವ ಆಧ್ಯಾತ್ಮದ ಭಕ್ತಿ ಮಾರ್ಗವಾಗಿದೆ.

ಐತಿಹಾಸಿಕ, ಪೌರಾಣಿಕ ಹಾಗೂ ಜಾನಪದ ಪ್ರಕ್ರಿಯೆಗಳಿಗನುಸಾರವಾಗಿ ಕಾಲಕ್ಕೆ ತಕ್ಕಂತೆ ದೇವತಾ ಸ್ವರೂಪಗಳಲ್ಲಿ ಬದಲಾವಣೆಗಳಾಗುತ್ತಾ ಬಂದಿವೆ. ಜನರ ವೈಚಾರಿಕ ಪಾತಳಿಗನುಸಾರವಾಗಿ, ಧರ್ಮಕ್ಕನುಸಾರವಾಗಿ, ದೇವತಾ ಸ್ವರೂಪಗಳಲ್ಲಿ ಬದಲಾವಣೆಗಳಾಗಿ–ರುವುದರಿಂದ ಜನರ ಆಚಾರ–ವಿಚಾರ, ಧರ್ಮ, ಶ್ರದ್ಧೆ, ಸಾಹಿತ್ಯ, ಶೌರ್ಯ, ಪರಾಕ್ರಮ, ಸಾಹಸ, ಸಂಪತ್ತು ಕರುಣೆ, ಔದಾರ್ಯ ಮೊದಲಾದ ಜೀವನ ಮೌಲ್ಯಗಳು ಬೆಳಕಿಗೆ ಬಂದಿರುವುದನ್ನು ಕಾಣಬಹುದಾಗಿದೆ.

ನಕ್ಷೆ ಎಂದರೆ ಬರೀ ಭೌಗೋಳಿಕ ವಿಂಗಡಣೆಯಲ್ಲ. ಏಕೆಂದರೆ ಸಂಸ್ಕೃತಿಯ ಪ್ರಶ್ನೆ ಭೌತಿಕ ವಿಷಯವಲ್ಲ. ಒಂದು ಭಾಷೆ, ಜನಜೀವನ, ಕಾಲದಿಂದ ಕಾಲಕ್ಕೆ ಜನರ ಬದುಕು ಭಾಷೆಗಳು ಪಡೆಯುವ ಪಲ್ಲಟಗಳನ್ನು, ಹೊಂದುವ ಅವಸ್ಥಾಂತರಗಳನ್ನು ಸಂಸ್ಕೃತಿ ಅಧ್ಯಯನಗಳು ಧಾಖಲಿಸುತ್ತವೆ. ಈ ಎಲ್ಲ ಬೆಳವಣಿಗೆಗಳಿಗೆ ಒಂದು ಸಮಗ್ರ ವಿನ್ಯಾಸವನ್ನು ನೀಡಲು ತೊಡಗುತ್ತವೆ. ಈ ವಿನ್ಯಾಸವನ್ನು ರೂಪಿಸವ ಪ್ರಕ್ರಿಯೆಯಲ್ಲಿ ಶಿಷ್ಟ–ಜಾನಪದಗಳು, ಧಾರ್ಮಿಕ ನೆಲೆಗಳಲ್ಲಿ ಒಂದಾಗುತ್ತವೆ, ಕಾಲಕಾಲಕ್ಕೆ ವಿಕಾಸಗೊಳ್ಳುವ ವಿಭಿನ್ನ ಚಿಂತನೆಗಳು ಪ್ರಧಾನ–ಅಧಿನ, ಅಧಿಕೃತ ಎಂಬ ತಮ್ಮ ವರ್ಗೀಕೃತ ಅಧಿಕಾರದ ನೆಲೆಗಳನ್ನು ಕಳೆದುಕೊಳ್ಳುತ್ತವೆ. ಯಾವುದೂ ಮುಖ್ಯವಾಗದೇ, ಯಾವುದೂ ಅಮುಖ್ಯವಾಗದೇ ನಾಡಿನ ಸಮಸ್ತ ಧಾರೆಗಳೂ ಕರ್ನಾಟಕತ್ವದ ಸ್ವರೂಪವನ್ನು ನಿರ್ಣಯಿಸುತ್ತಿರುತ್ತವೆ. ಸಾಂಸ್ಕೃತಿಕ ನಕಾಶೆಯನ್ನು ಪರಿಭಾವಿಸುವಾಗ ಈ ಎಲ್ಲ ಅಂಶಗಳನ್ನೂ ಪರಿಶೀಲಿಸುತ್ತ ಚಿಂತನೆ ನಡೆಸಲಾಗಿದೆ.

ಅಧ್ಯಾಯ ೭

ಫಲಿತಗಳು

ಅಧ್ಯಾಯ – ೭

ಫಲಿತಗಳು

"ಕನ್ನಡವು ಭಾರತವೂ ಜಗವೆಲ್ಲವು ಒಂದೇ" –ಬೇಂದ್ರೆ

೧. ಈ ಶತಮಾನದಲ್ಲಿ ನಾವು ಪರಿಭಾವಿಸುತ್ತಿರುವ ನಕಾಶೆ ಮೇಲ್ನೋಟಕ್ಕೆ ಬಹುಮುಖಿಯಂತೆ ಕಂಡರೂ ಆಂತರ್ಯದಲ್ಲಿ ಏಕಮುಖಿಯಾಗಿದೆ. ನಕಾಶೆ ಎಂಬ ಕಲ್ಪನೆ ನಮ್ಮ ಈ ಅಧ್ಯಯನದಲ್ಲಿ ಭಿನ್ನವಾದ ಕಲ್ಪನೆಯಾಗಿದೆ. ರಾಜಕೀಯ ನಕಾಶೆಗಳು ಮನುಷ್ಯ ಸಮಾಜ, ಸಂಸ್ಕೃತಿ, ಸಸ್ಯಸಂಸ್ಕೃತಿ ಜಲಸಂಸ್ಕೃತಿ ಮುಂತಾದವುಗಳನ್ನು ಪ್ರತ್ಯೇಕಗೊಳಿಸುವಂಥವು. ಇಂಥ ಪ್ರತ್ಯೇಕತೆಗಿಂತ ಭಿನ್ನವಾದ ಕರ್ನಾಟಕದ ಕಲ್ಪನೆಯನ್ನು ಪ್ರಾಚೀನ, ಮಧ್ಯಕಾಲಿನ ಹಾಗೂ ಆಧುನಿಕ ಸಾಹಿತ್ಯ ಸಂಸ್ಕೃತಿಗಳು ಅಭಿವ್ಯಕ್ತಿಸುತ್ತ ಬಂದಿವೆ. ಹೀಗಾಗಿ ನಕಾಶೆಯ ಕಲ್ಪನೆ ಹೆಚ್ಚು ಸೂಕ್ಷ್ಮರೂಪಿಯಾದದ್ದು. ಇದನ್ನು ಈ ಅಧ್ಯಯನದ ಮೂಲಕ ಗಂಭೀರವಾಗಿ ಅಧ್ಯಯನ ಮಾಡಲಾಗಿದೆ. ಇದನ್ನು ಖಚಿತವಾದ ಅಧ್ಯಯನದ ಮೂಲಕ ಸಮರ್ಥಿಸಲು ಸಾಧ್ಯವಿದೆ ಎಂದು ಈ ಅಧ್ಯಯನ ಭಾವಿಸುತ್ತದೆ.

೨. ಭಾಷೆ, ಸಂಸ್ಕೃತಿ ಮತ್ತು ಆ ಸಂಸ್ಕೃತಿಯ ಜೀವಂತಿಕೆಯ ವಿವಿಧ ವಿನ್ಯಾಸಗಳು ಪ್ರಾಚೀನ ಕಾಲಮಾನದಿಂದ ಇಂದಿನ ತನಕ ಅಸಂಖ್ಯ ಪಲ್ಲಟಗಳನ್ನು ಕಂಡಿವೆ. ಈ ಪಲ್ಲಟಗಳ ಸ್ವರೂಪಗಳನ್ನು, ಕಾಲದಿಂದ ಕಾಲಕ್ಕೆ ಆದ ಅವಸ್ಥಾಂತರಗಳನ್ನು ಈ ಅಧ್ಯಯನದಲ್ಲಿ ವಿವರಿಸಲಾಗಿದೆ. ಸಾಹಿತ್ಯ ಸಂಸ್ಕೃತಿಯು ವಿಭಿನ್ನ ವರ್ಗಗಳಿಂದ ಯಾವ ರೀತಿ ಅಂಗೀಕಾರಕ್ಕೆ ಇಲ್ಲವೇ ಉಪೇಕ್ಷೆಗೆ ಒಳಗಾಗುತ್ತಿವೆ ಎಂಬುದನ್ನು ಕೂಡ ಈ ಅಧ್ಯಯನದಲ್ಲಿ ಹೇಳಲಾಗಿದೆ. ಜನಪದ – ಶಿಷ್ಟ ಎಂಬ ಪ್ರತ್ಯೇಕತೆ ಇಡೀ ಸಮುದಾಯದ ಮೇಲೆ ಉಂಟು ಮಾಡುತ್ತಿರುವ ಪರಿಣಾಮಗಳನ್ನು ಕೂಡ ಅಭ್ಯಸಿಸುವುದು ಈ ಅಧ್ಯಯನದ ಮತ್ತೊಂದು ಪ್ರಮುಖ ಅಂಶವಾಗಿದೆ. ಇದಲ್ಲದೆ ಕನ್ನಡ ನಾಡು, ನುಡಿ, ಜನಪದ ಎಂಬ ಮೂರು ಕನ್ನಡವೆಂಬ ತತ್ವವು ಅಮೂರ್ತವಾದದ್ದು ಮತ್ತು ಅದರೊಳಗಿನ ನುಡಿ – ನಾಡು – ಜನಪದಗಳು ಏಕಕಾಲಕ್ಕೆ ಮೂರ್ತವೂ ಅಮೂರ್ತವೂ ಎರಡು ಆಗಿ ಇಲ್ಲಿ ಸೃಷ್ಟಿಗೊಂಡಿವೆ ಎಂಬುದನ್ನು ಗಮನಿಸಲಾಗಿದೆ.

೩. ಕನ್ನಡದ ಲೇಖಕರು ಹಾಗೂ ಕರ್ನಾಟಕತ್ವದ ಗಂಭೀರ ಚಿಂತಕರು ಅಭಿವ್ಯಕ್ತಿಸಿರುವ ನೆಲೆಗಳನ್ನು ವಿವರಿಸಿ ತೋರಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶ. ಯಾವುದೇ ಒತ್ತಡದ

ರಾಜಕೀಯಕೇಂದ್ರಿತ ನಾಡಿನ ಕಲ್ಪನೆಗೂ, ಸಾಂಸ್ಕೃತಿಕವಾದ ನಾಡಿನ ಕಲ್ಪನೆಗೂ ಬಹಳ ದೊಡ್ಡ ವ್ಯತ್ಯಾಸವಿದೆ. ಭಾಷಾವಾರು ಪ್ರಾಂತ್ಯಗಳ ನಿರ್ಮಾಣದಿಂದ ರೂಪುಗೊಂಡ ಕಲ್ಪನೆ, ಭಾಷಾ ಸಮುದಾಯವನ್ನು ಒಗ್ಗೂಡಿಸುವ ದೃಷ್ಟಿ ಧೋರಣೆಗಳಿಂದ ಕೂಡಿದ್ದರೂ, ಸ್ವಾತಂತ್ರ್ಯ ಬಂದು ೬೦ ವರ್ಷ ಕಳೆದರೂ, ದೇಶ ಇನ್ನೂ ಅನೇಕ ಮಹತ್ವದ ಸಮಸ್ಯೆಗಳ ಸರಮಾಲೆಯಲ್ಲಿ ನರಳುತ್ತಿದೆ. ನಿರಂತರವಾಗಿ ನಡೆಯುತ್ತಿರುವ ಭಾಷಾ ಚಳವಳಿಗಳು, ಅನನ್ಯತೆಯನ್ನು ಕಾಯ್ದುಕೊಳ್ಳಬೇಕೆಂದು ಒತ್ತಾಸೆಗಳು ಹೆಚ್ಚುತ್ತಿದ್ದು, ಭಾಷಾ ಬಾಂಧವ್ಯಗಳ ಬಿಕ್ಕಟ್ಟು ದಿನೇ ದಿನೇ ವೃದ್ಧಿಸುತ್ತಲೇ ಇದೆ. ಈ ಹಿನ್ನೆಲೆಯಲ್ಲಿ ಸಾಹಿತ್ಯ ಸಂಸ್ಕೃತಿ ತನ್ನದೇ ಆದ ವಿಶಿಷ್ಟತೆಯನ್ನು ಎಂದಿನಂತೆ ನಿರ್ಮಿಸುತ್ತಲೇ ಮುನ್ನಡೆದಿದೆ.

ಅಧ್ಯಯನದ ಸವಾಲುಗಳು ಮತ್ತು ಸಾಧ್ಯತೆಗಳು :

೧. ಈ ಶತಮಾನದಲ್ಲಿ ನಾವು ಪರಿಭಾವಿಸುತ್ತಿರುವ ನಕಾಶೆ ಮೇಲ್ನೋಟಕ್ಕೆ ಬಹುಮುಖಿಯಂತೆ ಕಂಡರೂ ಆಂತರ್ಯದಲ್ಲಿ ಏಕಮುಖಿಯಾಗಿದೆ. ರಾಜಕೀಯ ನಕಾಶೆಗಳು, ಮನುಷ್ಯ ಧಾರ್ಮಿಕ, ಸಸ್ಯಸಂಸ್ಕೃತಿ, ಜಲಸಂಸ್ಕೃತಿ, ಬುಡಕಟ್ಟು ಸಂಸ್ಕೃತಿ, ಜನಪದ ಸಂಸ್ಕೃತಿ ಇನ್ನೂ ಬೇರೆ ಬೇರೆ ರೀತಿಯಲ್ಲಿ ನಕಾಶೆ ಎಂಬ ಕಲ್ಪನೆಯನ್ನು ನೋಡಬಹುದಾಗಿದೆ.

೨. ಕೆಲವು ಇತಿಹಾಸ ಮತ್ತು ಪುರಾಣ ಸ್ಪರ್ಶವನ್ನು ಪಡೆದಿವೆ. ಒಂದೆರಡರಾದರೂ ವಲಸೆ ಬಂದ ಐತಿಹ್ಯಗಳು ಇಲ್ಲಿ ಪ್ರಚಲಿತವಾಗಿವೆ. ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಸಂಶೋಧನೆ ನಡೆಯಬೇಕಾದುದು ಅನಿವಾರ್ಯ. ವಿಶೇಷವಾಗಿ ದೇವದಾಸಿ ಪದ್ಧತಿ ಪರಶುರಾಮ ದೇವರು ಹಾಗೂ ಎಲ್ಲಮ್ಮನ ಇತರ ಕ್ಷೇತ್ರಗಳ ಕ್ಷೇತ್ರಾಧ್ಯಯನ ವಿವರವಾಗಿ ನಡೆಯಬೇಕು.

೩. ದೈವತ್ವವನ್ನು ಕುರಿತು ಇರುವ ಐತಿಹ್ಯಗಳಲ್ಲಿ ಹಲವಾರು ಜನಪದ ನಂಬಿಕೆಗಳು, ಪೌರಾಣಿಕ ಅಂಶಗಳು ಆಚರಣೆಗಳು ಅಡಕವಾಗಿರುವಂತೆ ಕಂಡು ಬರುತ್ತದೆ. ಹೆಚ್ಚಿನವುಗಳಿಗೆ ಜಾನಪದ ನಂಬಿಕೆಗಳೇ ಆಧಾರವಾಗಿವೆ.

೪. ನಕಾಶೆ ಎಂಬ ಕಲ್ಪನೆ ಹೆಚ್ಚು ಸೂಕ್ಷ್ಮರೂಪಿಯಾಗಿದ್ದು ಇದನ್ನು ಇನ್ನೂ ಹೆಚ್ಚು ಗಂಭೀರವಾಗಿ ಅಧ್ಯಯನ ಮಾಡಬಹುದು. ಇದನ್ನು ಖಚಿತವಾದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಭಾಷಿಕ, ಧಾರ್ಮಿಕ ವಿಸ್ತೃತ ಅಧ್ಯಯನದ ಮೂಲಕ ಸಮರ್ಥಿಸಲು ಸಾಧ್ಯವಿದೆ, ಹಾಗೂ ಈ ರೀತಿಯ ಅಧ್ಯಯನದ ಅಗತ್ಯತೆ ಎಂದಿಗಿಂತಲೂ ಇಂದು ಹೆಚ್ಚಾಗಿದೆ.


ಅನುಬಂಧ

೧. ನಕಾಶೆ

೨. ಪರಮಾರ್ಶನ ಗ್ರಂಥಗಳು

ಅನುಬಂಧ – ೧

ನಕಾಶೆ


ಮಹಾರಾಷ್ಟ್ರ
ಅಂಬಾ ಭವಾನಿ
ತುಳಜಾ ಭವಾನಿ
ಪಂಢರಪುರ ವಿಠೋಬ
ಕೊಲ್ಹಾಪುರ ಮಹಾಲಕ್ಷ್ಮಿ
ಕಲ್ಲೂರ ಮಹಾಲಕ್ಷ್ಮಿ
ಕೊಪ್ಪಳ ಹುಲಿಗೆಮ್ಮ
ಆಂಧ್ರಪ್ರದೇಶ
ಕೇರಳ
ತಮಿಳನಾಡು
ಬೀದರ್
ಗುಲ್ಬರ್ಗಾ
ರಾಯಚೂರು
ಬಾಗಲಕೋಟೆ
ಗದಗ
ಬಳ್ಳಾರಿ
ಚಿತ್ರದುರ್ಗ
ತುಮಕೂರು
ಹಾಸನ
ಮೈಸೂರು
ಮಡಿಕೇರಿ

**

ಪರಾಮರ್ಶನ ಗ್ರಂಥಗಳು

೧. ಅನಂತಮೂರ್ತಿ ಯು.ಆರ್., ಕನ್ನಡ ಕರ್ನಾಟಕ, ಕಸಾಪ, ಬೆಂಗಳೂರು, ೨೦೦೨.

೨. ಅನಂತಮೂರ್ತಿ ಯು.ಆರ್., ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ) ಕರ್ನಾಟಕ, ೧೯೯೨.

೩. ಅನಂತ ಸ್ವಾಮಿ. ಬಿ.ಕೆ., ಅ.ನ.ಕರ ಮತ್ತು ಕನ್ನಡ ಚಳುವಳಿ, ಕವಿವಿ, ಹಂಪಿ, ೨೦೦೦.

೪. ಅರ್ಜುನ್ ದೇವ್ (ಸಂ), (ಅನು. ಅನ್. ಬಾಲಸುಬ್ರಮಣ್ಯ, ೧೯೯೬), ಜವಹಾರ್‌ಲಾಲ್ ನೆಹರೂ ಹೋರಾಟದ ವರ್ಷಗಳು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ೧೯೮೯.

೫. ಅಮರೇಶ ನುಗಡೋಣಿ, ಕನ್ನಡ ಸಂಶೋಧನೆಯ ವೈಧಾನಿ ಕತೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೬. ಆಲೂರು ವೆಂಕಟರಾಯ, ಕರ್ನಾಟಕತ್ವದ ವಿಕಾಸ, ಕನ್ನಡ ಸಾಹಿತ್ಯ ಪರಿಷತ್ತು ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮, ಮೂರನೆಯ ಮುದ್ರಣ ೨೦೦೯.

೭. ಆಲೂರು ವೆಂಕಟರಾಯ, ಕರ್ನಾಟಕ ಗತವೈಭವ, ಕನ್ನಡ ಮತ್ತು ಸಂಸ್ಕೃತ ಇಲಾಖೆ ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು-೦೨, ೨೦೦೨.

೮. ಕೃಷ್ಣಪ್ಪ ಕೆ., ಸಂಸ್ಕೃತಿಯ ಅಂತರ್ ಶಿಸ್ತಿಯ ನೆಲೆಗಳು, ಸಂಯಮ ಪ್ರಕಾಶನ ಎಂ.ವಿ ಬಡಾವಣೆ, ಹೊಸಕೋಟೆ, ೨೦೦೮.

೯. ಕಲಬುರ್ಗಿ ಎಂ.ಎಂ., ಸಂಸ್ಕೃತಿ – ವಿಕೃತಿ, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು, ೨೦೦೬.

೧೦. ಕಲಬುರ್ಗಿ ಎಂ.ಎಂ., ಕವಿರಾಜಮಾರ್ಗ, ಪರಿಸರ ಕನ್ನಡದ ಕನ್ನಡ ಸಾಹಿತ್ಯ.

೧೧. ಕೃಷ್ಣಮೂರ್ತಿ ಕೆ., ಕವಿರಾಜಮಾರ್ಗ, ೧೯೯೯.

೧೨. ಕೆಂಪೇಗೌಡ. ಕೆ,. ಕನ್ನಡ ಉಪಭಾಷೆಗಳ ಅಧ್ಯಯನ, ಭಾರತಿ ಪ್ರಕಾಶನ ಮೈಸೂರು, ೨೦೦೩.

೧೩. ಕಾಳೇಗೌಡ ನಾಗವಾರ್ ಮತ್ತು ನಟರಾಜ ಹುಳಿಯಾರ್, (ಸಂ) ಭಾಷೆ ಮತ್ತು ಇತಿಹಾಸ, ರಾಮಮನೋಹರ ಲೋಹಿಯಾ ಅವರ ಬರಹಗಳು, ಸಂ.೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮.

೧೪. ಕೀರ್ತಿನಾಥ ಕುರ್ತಕೋಟಿ, ಭಾಷೆ ಮತ್ತು ಸಂಸ್ಕೃತಿ, ಮೆಮೋರಿಯಲ್ ಟ್ರಸ್ಟ್ ೧, ದೇಸಾಯಿ ಕಾಲೋನಿ, ಯೂನಿವರ್ಸಿಟಿ ಕ್ರಾಸ್, ಧಾರವಾಡ–೦೩, ಮೊದಲ ಮುದ್ರಣ ೨೦೦೬.

೧೫. ಎಚ್ಚೆಸ್ಕೆ, ಅವಲೋಕನ, ಕರ್ನಾಟಕದ ಪರಂಪರೆಯ ಸಮೀಕ್ಷೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ನೃಪತುಂಗ ರಸ್ತೆ, ಬೆಂಗಳೂರು–೦೨, ೧೯೮೫.

೧೬. ಗೋವಿಂದರಾಜು ಸಿ.ಆರ್., ಕನ್ನಡ ಚಳುವಳಿಗಳು, ಏಕೀಕರಣೋತ್ತರ ಕರ್ನಾಟಕ ಚಳುವಳಿ ಸಂಪುಟ–೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೧೭. ಗೋವಿಂದರಾಜು, ಸಿ.ಆರ್., ಕರ್ನಾಟಕದ ಏಕೀಕರಣ ಮತ್ತು ಕನ್ನಡ ಸಾಹಿತ್ಯ, ಎಸ್.ಬಿ.ಎಸ್ ಪಬ್ಲಿಷರ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, ೧೯೯೮.

೧೮. ಗೋವಿಂದರಾಜು, ಸಿ.ಆರ್., ಕನ್ನಡ ಚಳುವಳಿಗಳು : ಏಕೀಕರಣೋತ್ತರ ಕರ್ನಾಟಕ ಚಳುವಳಿ, ಸಂ–೪, ಪ್ರಸಾರಾಂಗ, ಕವಿವಿ, ಹಂಪಿ, ೨೦೦೦.

೧೯. ಗೋವಿಂದರಾಜು, ಸಿ.ಆರ್., ಕನ್ನಡ ಚಳುವಳಿಗಾರ ಮ. ರಾಮಮೂರ್ತಿ, ಪ್ರಸಾರಾಂಗ, ಕವಿವಿ. ಹಂಪಿ, ೨೦೦೦.

೨೦. ಗಣೇಶ್ ಮೊಗಳ್ಳಿ, ದಲಿತರು ಮತ್ತು ಜಾಗತೀಕರಣ, ಕವಿವಿ, ಹಂಪಿ, ೧೯೯೯.

೨೧. ಗುರುಲಿಂಗ ಕಾಪ್ಸೆ, (ಸಂ), ಕನ್ನಡ ಕಾವಲು, ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿದ್ದ ಪಾಟೀಲ ಪುಟ್ಟಪ್ಪನವರ ಆಯ್ದ ಪತ್ರಗಳು, ಪ್ರಸಾರಾಂಗ, ಕವಿವಿ, ಹಂಪಿ, ೧೯೯೫.

೨೨. ಚಂದ್ರಶೇಖರ್ ಎಸ್., ಆಧುನಿಕ ಕರ್ನಾಟಕದ ಆಂದೋಲನಗಳು, ನಮ್ಮ ಪ್ರಕಾಶನ, ಬಿಳಿಗೆರೆ, ತಿಪಟೂರು ತಾಲೂಕು, ೨೦೦೨.

೨೩. ಚಂದ್ರಶೇಖರ್, ಎಸ್., ಸಾಹಿತ್ಯ ಮತ್ತು ಚರಿತ್ರೆ, ನಮ್ಮ ಪ್ರಕಾಶನ, ಬಿಳಿಗೆರೆ, ತಿಪಟೂರು ತಾಲೂಕು, ೨೦೦೨.

೨೪. ಜವರೇ ಗೌಡ, ದೇ., ಕನ್ನಡ ಚಿಮತನೆ, ಕವಿವಿ, ಹಂಪಿ, ೨೦೦೭.

೨೫. ಶಂ.ಬಾ. ಜೋಷಿ, ಕಣ್ಮರೆಯಾದ ಕನ್ನಡ, ಪ್ರಕಾಶಕರು : ಶಂ. ಬಾ. ವಿಚಾರ ವೇದಿಕೆ ಶ್ರೇಯಸ್ಸ್ ೭೩೭, (೨೬೨), ಕೃಷ್ಣಾನದಿ ರಸ್ತೆ, ಪೈಪ್ ಲೈನ್, ಶ್ರೀನಗರ, ಬೆಂಗಳೂರು–೫೦ ಪ್ರಥಮ ಮುದ್ರಣ, ೧೯೩೩.

೨೬. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಸುವರ್ಣ ಕನಾಟಕ ಸಂದರ್ಭದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶೇಷ ಯೋಜನೆಯಡಿಯಲ್ಲಿ ಖರೀದಿಸಿದ ಪುಸ್ತಕ, ಡಿ.ವಿ.ಕೆ. ಮೂರ್ತಿ, ಪ್ರಕಾಶಕರು, ಮೈಸೂರು, ೨೦೦೭.

೨೭. ದೇವಿ ಪ್ರಸಾದ ಚಟ್ಟೋಪಾಧ್ಯಾಯ, ಭಾರತೀಯ ದರ್ಶನಗಳು, (ಅನು, ಬಿ.ವಿ ಕಕ್ಕಿಲ್ಲಾಯ) ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೪.

೨೮. ನಾಗಣ್ಣಗೌಡ, ನಿಜವಾದ ಕನ್ನಡ ಚಳುವಳಿ ಯಾವುದು? ಸಾಪ್ತಾಹಿಕ ಪುರವಣಿ (ಪ್ರಜಾವಾಣಿ), ೨೭-೧೦-೨೦೦೨.

೨೯. ನಾರಾಯಣ ಕೆ.ವಿ, (ಕನ್ನಡ ಜಗತ್ತು ಅರ್ಧಶತಮಾನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೭.

೩೦. ನಾಗರಾಜ್ ಡಿ.ಆರ್., ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, (ಸಾಗರ) ಕರ್ನಾಟಕ, ೧೯೯೬.

೩೧. ನಾಗರಾಜ್ ಡಿ.ಆರ್., ಸಂಸ್ಕೃತಿ ಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨.

೩೨. ನಾಯಕ್, ಎಂ.ಕೆ., (ಅನು. ಬಸವರಾಜ ನಾಯ್ಕರ), ಭಾರತೀಯ ಇಂಗ್ಲೀಷ್ ಸಾಹಿತ್ಯ ಚರಿತ್ರೆ, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೫.

೩೩. ಬಾಲಕೃಷ್ಣ ಪಾಂಡೇಶ್ವರ (ಸಂ), ಕನ್ನಡ ಸೇನಾನಿ ನೆನಪಿನ ಸಂಚಿಕೆ, ವೀರ ಸೇನಾನಿ ದಿ॥ ಮ. ರಾಮಮೂರ್ತಿ ಕನ್ನಡ ಬಳಗ, ಬೆಂಗಳೂರು, ೧೯೯೪.

೩೪. ಭಗವತ್ ಶರಣ ಉಪಾಧ್ಯಾಯ, ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, (ಅನು ಪ್ರಧಾನ ಗುರುದತ್ತ) ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೮೬.

೩೫. ಪುಟ್ಟಪ್ಪ ಕೆ.ವಿ.(ಕುವೆಂಪು), ಸಮಗ್ರ ಗದ್ಯ, ಕವಿವಿ. ಹಂಪಿ, ೨೦೦೪.

೩೬. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ವಿಮರ್ಶೆಯ ವಿಮರ್ಶೆ, ಪುಸ್ತಕ ಪ್ರಕಾಶನ ೯೧, ೯ನೇ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು-೦೯, ಮೊದಲನೆಯ ಮುದ್ರಣ, ೨೦೦೯.

೩೭. ಪುರುಷೋತ್ತಮ ಬಿಳಿಮಲೆ, ಹುಲಿಗೆಮ್ಮ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೩೮. ಮುಗಳಿ ರಂ.ಶ್ರೀ., ಕನ್ನಡ ನಾಡು-ನುಡಿ- ಸಂಸ್ಕೃತಿ, ಕಸಾಪ, ಬೆಂಗಳೂರು, ೨೦೦೬.

೩೯. ಶ್ರೀನಿವಾಸ ಹಾವನೂರು, ಮುಳಿಯ ತಿಮ್ಮಪ್ಪಯ್ಯ, ಸಾಹಿತ್ಯವಾಚಿಕೆ, ಮುಳಿಯ ತಿಮ್ಮಪ್ಪಯ್ಯ ಶತಮಾನೋತ್ಸವ ಸಮಿತಿ ಪರವಾಗಿ ಅಳಿಲು ಸೇವಾ ಸಂಸ್ಥೆ, ಬೆಂಗಳೂರು, ೨೦೦೬.

೪೦. ಮಹಾದೇವಯ್ಯ. ಪಿ., ದಲಿತರು ಭಾಷೆ ಮತ್ತು ಸಮಾಜ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೪೧. ಮಲ್ಲೇಪುರಂ ಜಿ. ವೆಂಕಟೇಶ, (ಸಂ), ಶಂಬಾ ಜೋಷಿಯವರ ಆಯ್ದ ಲೇಖನಗಳು, ಕನ್ನಡ ಪುಸ್ತಕ ಪ್ರಧಿಕಾರ, ಬೆಂಗಳೂರು, ೧೯೯೭.

೪೨. ಮೋಹನ ಕೃಷ್ಣ, ತುಳು ಸಂಸ್ಕೃತಿ ಚತುರ್ಮುಖಿ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೪೩. ರವಿಕುಮಾರ್ ನ. (ಸಂ) ಮೋಹನ್ ಚಾಮ್‌ಸ್ಕಿ ಮನುಕುಲದ ಮಾತುಗಾರ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೧.

೪೪. ಮೋಹನ್ ಕೃಷ್ಣ ಕೆ., ಪರಿಸರ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೪೫. ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬.

೪೬. ರಹಮತ್ ತರೀಕೆರೆ, (ಸಂ), ಕವಿರಾಜಮಾರ್ಗ ಸಾಂಸ್ಕೃತಿಕ ಮುಖಾಮುಖಿ, ಕವಿವಿ, ಹಂಪಿ, ೨೦೦೦.

೪೭. ರಹಮತ್ ತರೀಕೆರೆ, ಬಹುಭಾಷಿಕ ಸಂಸ್ಕೃತಿ, ಪ್ರಸಾರಾಂಗ, ಕವಿವಿ, ಹಂಪಿ, ೧೯೯೯.

೪೮. ರಹಮತ್ ತರೀಕೆರೆ, ಪ್ರತಿ–ಸಂಸ್ಕೃತಿ, (ಸಾಹಿತ್ಯ ಸಂಸ್ಕೃತಿ ಚಿಂತನೆಗಳು), ೧೭/೧೮–೨, ಮೊದಲನೆಯ ಮುಖ್ಯರಸ್ತೆ, ಮಾರೇನ ಹಳ್ಳಿ, ವಿಜಯನಗರ, ಬೆಂಗಳೂರು, ೧೯೯೩.

೪೯. ರಹಮತ್ ತರೀಕೆರೆ, ಕನ್ನಡ ಸಂಶೋಧನೆ, ತಾತ್ವಿಕ ವಿಚ್ಛರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೫೦. ರಹಮತ್ ತರೀಕೆರೆ, ಕವಿರಾಜ ಮಾರ್ಗ, ಸಾಂಸ್ಕೃತಿಕ ಮುಖಾಮುಖಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೫೧. ಬಸವರಾಜು ಎಲ್., ಪಂಪನ ಆದಿಪುರಾಣ, ಡಾ. ಎಂ. ಭೈರೇಗೌಡ, ಮುದ್ದುಶ್ರೀ ಗ್ರಂಥ ಮಾಲೆ, ಕೆ. ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರದೊಡ್ಡಿ, ನಂ ೧೧೯, ೩ನೇ ತಿರುವು, ೮ನೇ ಮುಖ್ಯರಸ್ತೆ, ಹಂಪನಗರ, ಬೆಂಗಳೂರು–೦೪, ೨೦೦೭.

೫೨. ರಾಜೇಂದ್ರ ಚೆನ್ನಿ, ಅಮೂರ್ತತೆ ಮತ್ತು ಪರಿಸರ, ಮೈಸೂರು, ೨೦೧೨.

೫೩. ಸಣ್ಣಯ್ಯ ಬಿ.ಎಸ್., ರಾಜಾವಳಿ ಕಥಾಸಾರ (ದೇವಚಂದ್ರ) ವಿರಚಿತ), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೮೮.

೫೪. ಲಕ್ಕಪ್ಪಗೌಡ ಎಚ್. ಜೆ., ದೇವಚಂದ್ರ ಸಂಪುಟ, ರಾಜಾವಳಿ ಕಥಾಸಾರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೫೫. ಲಂಕೇಶ್ ಪಿ., ಟೀಕೆ–ಟಿಪ್ಪಣಿ ಸಂಪುಟಗಳು, ಲಂಕೇಶ್ ಪ್ರಕಾಶನ, ನಂ. ೯, ಪೂರ್ವ ಆಂಜನೇಯ ಗುಡಿ ರಸ್ತೆ, ಬಸವನಗುಡಿ, ಬೆಂಗಳೂರು–೦೪, ಮೂರನೆ ಮುದ್ರಣ ೨೦೦೯.

೫೬. ವೆಂಕಟರಾಯ ಆಲೂರು, ಕರ್ನಾಟಕತ್ವದ ವಿಕಾಸ, ಭಾಷಾ ಪ್ರಕಾಶನ, ಕಸಾಪ, ಬೆಂಗಳೂರು–೪೫, ೧೯೯೯.

೫೭. ವೆಂಕಟರಾಯ ಆಲೂರು, ಕನ್ನಡ ಭಾಷೆಯ ಕಲ್ಪಿತ ಚರಿತ್ರೆ, ಪ್ರಸಾರಾಂಗ, ಕವಿವಿ, ಹಂಪಿ, ೧೯೯೫.

೫೮. ಶ್ರೀನಿವಾಸ ರಾಜು ಚಿ., ಮತ್ತು ಆಂದನೂರು ಶೋಭ (ಸಂ), ನನ್ನದು ಈ ಕನ್ನಡ ನಾಡು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ೨೦೦೫.

೫೯. ಶಿವಾರೆಡ್ಡಿ ಕೆ.ಸಿ., ಕುವೆಂಪು, ಸಮಗ್ರ ಗದ್ಯ, ಸಂಪುಟ–೧ ಸಂಪಾದಕರು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೬೦. ಶಿವಾರೆಡ್ಡಿ ಕೆ.ಸಿ., ಕುವೆಂಪು, ಸಮಗ್ರ ಗದ್ಯ, ಸಂಪುಟ–೨ ಸಂಪಾದಕರು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೬೧. ಸುಬ್ಬಣ್ಣ ಕೆ.ವಿ., ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು, ಅಕ್ಷರ ಪ್ರಕಾಶನ ಹೆಗ್ಗೋಡು (ಸಾಗರ), ಕರ್ನಾಟಕ ಎರಡನೆಯ ಮುದ್ರಣ, ೨೦೦೭.

೬೨. ಶೆಟ್ಟರ್ ಷ., ಶಂಗಂ ತಮಿಳಗಂ ಮತ್ತು ಕನ್ನಡ ನಾಡು–ನುಡಿ, ಅಭಿನವ ಪ್ರಕಾಶನ ೧೭/ ೮–೨, ಮೊದಲನೆಯ ಮುಖ್ಯರಸ್ತೆ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು–೪೦, ಎರಡನೆಯ ಮುದ್ರಣ, ೨೦೦೮.

೬೩. ಶೇಷಗಿರಿ ರಾವ್ ಎಲ್.ಎಸ್ ಮತ್ತು ಇತರರು (ಸಂ), ಕನ್ನಡ-ಕನ್ನಡಿಗ-ಕರ್ನಾಟಕ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೬.

೬೪. ಶೇಷಗಿರಿ ರಾವ್ ಎಲ್.ಎಸ್ (ಸಂ), ಕನ್ನಡದ ಅಳಿವು ಉಳಿವು, ಕನ್ನಡ ಭಾಷಾ ಅಭಿವೃದ್ಧಿಯ ಸಮೀಕ್ಷಾ ಪ್ರಕಾಶನ, ಬೆಂಗಳೂರು, ೧೯೮೫.

೬೫. ಶ್ರೀಕಂಠಯ್ಯ ಬಿ.ಎಂ., ಕನ್ನಡ ಬಾವುಟ, ಕಸಾಪ, ಬೆಂಗಳೂರು, ೨೦೦೨.

೬೬. ಶ್ರೀಧರ್ ಎಸ್.ಎನ್., ಇಂದಿನ ಕನ್ನಡ: ರಚನೆ ಮತ್ತು ಬಳಕೆ, ಕವಿವಿ. ಹಂಪಿ, ೧೯೯೫.

೬೭. ಷೇಲ್ಡನ್ ಪೊಲ್ಲಾಕ್, (ಅನು.ಕೆ.ವಿ. ಅಕ್ಷರ) ದೇಶಭಾಷಾ ನಿರ್ಮಾಣ, ಕವಿವಿ. ಹಂಪಿ, ೨೦೦೦.

೬೮. ಸುಬ್ಬಣ್ಣ ಕೆ.ವಿ., ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೨೦೦೦.

೬೯. ಸಿದ್ಧಲಿಂಗಯ್ಯ, ಗ್ರಾಮ ದೇವತೆಗಳು, ಅಂಕಿತ ಪ್ರಕಾಶನ, ಬೆಂಗಳೂರು, ೧೯೯೭.

೭೦. ಭೀಮಸೇನರಾವ್ ಚಿಟಗುಪ್ಪಿ, ಕವಿರಾಜಮಾರ್ಗ ಪ್ರಶಸ್ತಿ, ೨೦೦೨.

೭೧. ಭಾರತದ ಗ್ಯಾಸ್‌ಟಿಯರ್, ಭಾರತದ ದೇಶಕೋಶ ಸಂಪುಟ-೧, ೨, ೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು, ೧೯೯೭.

೭೨. ವೆಂಕಟಾಚಲ ಶಾಸ್ತ್ರೀ ಟಿ.ವಿ., ಪಂಪ ಸಂಪುಟ, ಆದಿಪುರಾಣಂ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೬.

೭೩. ಸಂಸ್ಕೃತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು, ೧೯೫೫.

೭೪. ಎಜುಕೇಷನ್ ಅಂಡ್ ನ್ಯಾಷನಲ್ ಡೆವೆಲಪ್‌ಮೆಂಟ್ ಶಿಕ್ಷಣ ಆಯೋಗದ ವರದಿ, ೬೪, ಎನ್.ಸಿ.ಆರ್.ಟಿ., ನವದೆಹಲಿ.

೭೫. ಗೋಕಾಕ್ ಸಮಿತಿ ವರದಿ (ಭಾಷಾ ಸಮಿತಿ ವರದಿ), ಕಸಾಪ, ಬೆಂಗಳೂರು.

೭೬. ಕರ್ನಾಟಕ ವಿಮೋಚನರಂಗ, ಕೊಡಗು ಪ್ರತ್ಯೇಕ ರಜ್ಯದ ಬೇಡಿಕೆ-ಕೊಡವ ರಾಷ್ಟ್ರೀಯತೆ ಪ್ರಶ್ನೆ, ಸ್ವತಂತ್ರ ಕರ್ನಾಟಕ-ದ್ವೈಮಾಸಿಕ, ಫೆಬ್ರವರಿ, ೧೯೯೮.

೭೭. ಹ್ಯಾನ್ಸ್ ಮ್ಯಾಗ್ನಸ್ ಎಂಜೆನ್ಸ ಬರ್ಗರ್, ಮೆದುಳಿನ ಕೈಗಾರಿಕೀಕರಣ, ಕನ್ನಡ ಅಧ್ಯಯನ, ಸಂ. ೧, ಸಂ.೨, ೧೯೯೪.

೭೮. ಕರ್ನಾಟಕದ ಪರಂಪರೆ ಸಂಪುಟ–೧, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಬೆಂಗಳೂರು, ೧೯೯೨.

೭೯. ಕರ್ನಾಟಕದ ಪರಂಪರೆ ಸಂಪುಟ–೨, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಬೆಂಗಳೂರು, ೧೯೯೨.

೮೦. ಕರ್ನಾಟಕ ದರ್ಶನ, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು, ೧೯೫೫.

೮೧. ಕರ್ನಾಟಕ ಗ್ರಾಮ ಸೂಚಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫.

* * *